ನ್ನುವರೆಂಬುದನ್ನೂ ಹೇಳಿದವರಲ್ಲಿ ದಂಡಿಯೆ ಮೊದಲಿಗ. ನೃಪತುಂಗ ಹೆಚ್ಚಾಗಿ ಮಹ ದಂಡಿಯರನ್ನು ಅನುಸರಿಸಿದ್ದರೂ, ನಾಟಕಾದಿ ದೃಶ್ಯಕಾವ್ಯಗಳನ್ನು ಉಲ್ಲೇಖಿ ಮಿಶ್ರಕ್ಕೆ ಮನ್ನಣೆ ಇತ್ತಿಲ್ಲ. ಅದರ ವ್ಯಾಪ್ತಿಯನ್ನು ಆನುಷಂಗಿಕವಾಗಿ ಕನ್ನಡದ ಗೆ ಗದ್ಯಕಥೆಗೆ ಮಿತಗೊಳಿಸಿದ್ದಾನೆ. ಹೀಗೆ ಮಾಡಿದವನು ಇವನೊಬ್ಬನೇ. ದ ಈತನ ಸಮಕಾಲೀನರೂ ನಿಕಟವರ್ತಿಗಳೂ ಆಗಿದ್ದ ಜಿನಸೇನ–ಗುಣಭದ್ರ ರು ರಮೇಷ್ಠಿಯ ಕೃತಿಯನ್ನು ಗದ್ಯಕಥೆಯೆಂದು ಉಲ್ಲೇಖಿಸಿರುವುದು ಅದು ಕನ್ನಡ ತಿಯೆನ್ನುವುದನ್ನು ಸೂಚಿಸುವದೆಂದು ದೃಢವಾಗಿ ಹೇಳಬಹುದು. ಚಾವುಂಡ ು ಪುರಾಣದಲ್ಲಿ ಕವಿಪರಮೇಷ್ಠಿಯವೆಂದು ಉಕ್ತವಾದ ಪದ್ಯಗಳು ಅದರಲ್ಲಿಯ ಹುದು, ಇರಲಿಕ್ಕಿಲ್ಲ. ಅದು ನಮಗೆ ಅಮುಖ್ಯ.

ಕವಿಪರಮೇಷ್ಠಿಯನ್ನು ಸ್ತುತಿಸಿದವರಲ್ಲಿ ಜಿನಸೇನ–ಗುಣಭದ್ರ ಇಬ್ಬರನ್ನು ಬಿಟ್ಟು ವರೆಲ್ಲ ಕನ್ನಡ ಕವಿಗಳಾಗಿರುವುದರಿಂದ ಆತನ ಈ ಕೃತಿ ಕನ್ನಡದಲ್ಲಿ ಇದ್ದಿರ ಬುದಕ್ಕೆ ಪೋಷಕವಿದೆನ್ನಬಹುದು. ಭಾರತೀಯ ಸಾಹಿತ್ಯದಲ್ಲಿ, ಆಗಮೋತ್ತರ ತ್ಯದ ಅಂಗವಾಗಿ ಕಥಾ ಮತ್ತು ಪುರಾಣ ಸಾಹಿತ್ಯಗಳು ತುಸು ಹೆಚ್ಚು ಕಡಿಮೆ –ಜೊತೆಯಾಗಿ ಬೆಳೆದು ಬಂದಿವೆ. ಜೈನ ಸಾಹಿತ್ಯವಾದರೂ ಹೀಗೆಯೆ ಬೆಳೆದಿದೆ. ಕಥೆಗಳಲ್ಲಿ ಪಾದಲಿಪ್ತಿಯ ತರಂಗವತಿ ಅಥವಾ ತರಂಗಲೋಲ ಕಥೆ ತೀರ ಪ್ರಾಚೀನ ಥೆ. ಇದು ದೊರೆತಿಲ್ಲ. ಪಾದಲಿಪ್ತಿ ಮಾನ್ಯಖೇಟದಲ್ಲಿ ಕೆಲಕಾಲ ರಾಷ್ಟ್ರಕೂಟ ಕೃಷ್ಣ ನೆಂಬುವನ ಆಸ್ಥಾನದಲ್ಲಿದ್ದು ಈ ಕಥೆಯನ್ನು ರಚಿಸಿದನೆಂಬ ಐತಿಹ್ಯವಿದೆ. ಮೂಲ ಕಥೆಯು ಗದ್ಯ–ಪದ್ಯದಲ್ಲಿ 'ಲೋಕಭಾಷೆ'ಯಲ್ಲಿ ರಚಿತವಾಗಿತ್ತಂತೆ. ಪಾದಲಿಪ್ತಿಯ ಕಾಲ ಕ್ರಿ. ೨–೩ ಶತಮಾನವೆಂದು ಊಹಿಸಲಾಗಿದೆ. ಮುಂದೆ ಸಾವಿರ ವರ್ಷಗಳ ನಂತರ ನೇಮಿಚಂದ್ರಗಣಿ ಎಂಬುವನು ಪ್ರಾಕೃತದಲ್ಲಿ ಅದನ್ನು ಪದ್ಯ ರೂಪದಲ್ಲಿ ರಚಿಸಿ ದನು. ಅದು ಜರ್ಮನ್ ಭಾಷೆಯಲ್ಲಿ ಭಾಷಾಂತರಿಸಲ್ಪಟ್ಟಿದೆ. ಆ ಭಾಷಾಂತರದ ಸಂಸ್ಕೃತ ಮತ್ತು ಗುಜರಾತಿ ಅನುವಾದಗಳು ಇಂದು ಲಭ್ಯವಿವೆ. ಈ ರಾಷ್ಟ್ರಕೂಟ ದೊರೆ ಕೃಷ್ಣನಾರು, ಲೋಕಭಾಷೆ ಎಂದರೆ ಯಾವ ಭಾಷೆ ಎನ್ನುವುದು ತಿಳಿಯದು.

ವೈದಿಕ ವಾಙ್ಮಯದಲ್ಲಿ ರಾಮಾಯಣ, ಮಹಾಭಾರತ ಮತ್ತು ಇತರ ಪುರಾಣ ಳು ಹುಟ್ಟಿಕೊಂಡಂತೆ ಜೈನ ವಾಙ್ಮಯದಲ್ಲೂ ಜೈನಪರ ರಾಮಾಯಣ, ಭಾರತ ರಿವಂಶ ಇತ್ಯಾದಿ) ಮತ್ತು ೬೩ ಶಲಾಕಾ ಪುರುಷರ (೨೪ ತೀರ್ಥಂಕರರು, ಅವರ ಮಕಾಲೀನರಾದ ೧೨ ಚಕ್ರವರ್ತಿಗಳು ಮತ್ತು ೨೭ ವೀರಪುರುಷರು ಅಂದರೆ ೯ ಬಲ ದೇವರು, ೯ ವಾಸುದೇವರು, ೯ ಪ್ರತಿವಾಸುದೇವರು) ಕಥೆ ಅಥವಾ ಚರಿತ್ರೆಗಳು ಟ್ಟಿಕೊಂಡವು. ಸಾಮಾನ್ಯವಾಗಿ ಇವು ದಿಗಂಬರರಲ್ಲಿ ಪುರಾಣಗಳೆಂದೂ ಮತ್ತು ್ವೇತಾಂಬರರಲ್ಲಿ ಚರಿತ್ರೆಗಳೆಂದೂ ಪ್ರಸಿದ್ಧವಾಗಿವೆ. ವಿಮಲಸೂರಿಯ (ಕ್ರಿ. ೬೦) ಉಮ ಚರಿಯ (ಜೈನ ರಾ … ತ ಹರಿವಂಶ ಚರಿತ್ರೆಯನ್ನೂ ಬರೆದಿದ್ದ. … ಆಧರಿಸಿ ಕ್ರಿ.

೬೭೮ರಲ್ಲಿ ರವಿಷೇಣನ ಪದ್ಮ ಪುರಾಣವು ರಚಿತವಾಯಿತು. ಅಪಭ್ರಂಶ ಸಾಹಿತ್ಯದ
ಸ್ವಯಂಭುವಿನ (ಕ್ರಿ. ೬೫೮-೭೮೩) ಪಉಮಚರಿಯು (ಜೈನ ರಾಮಾಯಣ) ಪ್ರಸಿ
ವಿದೆ. ಜಿನಸೇನನ ಹರಿವಂಶ ಪುರಾಣವು ಕ್ರಿ. ೭೮೩ರಲ್ಲಿ ರಚಿತವಾಯಿತು- ಜೈನ
ಪುರಾಣವೆಂದರೆ ಪ್ರಾಚೀನ ಧರ್ಮ-ಕಥೆ. ಒಬ್ಬೊಬ್ಬ ತೀರ್ಥಂಕರನ ಕಥೆ ಅ
ಚರಿತ್ರೆ, ಒಂದೊಂದು ಪುರಾಣವೆನಿಸಿಕೊಂಡಿದೆ. ೬೩-ಶಲಾಕಾಪುರುಷರ ಚರಿ
ರುವ ಬೃಹದ್ ಗ್ರಂಥವು ಮಹಾಪುರಾಣವೆನಿಸಿಕೊಂಡಿದೆ. ಮಹಾಪುರಾಣಕಾ
ನೃಪತುಂಗನಿಗೆ ಗುರುವಾದ ಜಿನಸೇನ (ಕ್ರಿ. ೯ ಶ.) ಪ್ರಾಚೀನತಮನಿದ್ದು ಪು
ಗಳ ಪಂಚ ಲಕ್ಷಣಗಳಿಗನುಸರಿಸಿ ಅಂದರೆ ಸರ್ಗ, ಪ್ರತಿಸರ್ಗ. ಮನ್ವಂತರ,
ವಂಶಾನುಚರಿತಗಳೊಂದಿಗೆ ತನ್ನ ಗ್ರಂಥವನ್ನು ರಚಿಸಿರುವುದರಿಂದ ಆದ್ಯಪುರಾಣ
ನೆಂದು ಪ್ರಸಿದ್ಧನಿರುವನು. ಮಿಕ್ಕವು ಪ್ರಾಮುಖ್ಯವಾಗಿ ಚರಿತ್ರ-ಪುರಾಣಗಳು.
ಸೇನನ ಮಹಾಪುರಾಣದೊಂದಿಗೆ ಅದರಿಂದ ವಿಂಗಡಿಸಿ ಹೇಳಲು ಇವುಗಳಿಗೆ ಚ
ಪುರಾಣ ಎಂಬ ಹೆಸರು ರೂಢವಾದಂತಿದೆ. ಕವಿಪರಮೇಷ್ಠಿಯ ವಾಗರ್ಥ ಸಂಗ್ರ
೬೩-ಶಲಾಕಾಪುರುಷರ ಚರಿತ್ರೆಯನ್ನು ಒಳಗೊಂಡಿದ್ದರೂ ಅದು ಚರಿತ್ರ-ಪು
ವಿರಲಿಕ್ಕೆ ಸಾಕು. ಅಂತೆಯೆ ಗುಣಭದ್ರ ಅದನ್ನು 'ಪುರಾಶ್ಚರಿತಂ' ಎಂದೂ ಚಾವು
ರಾಯ 'ಚರಿತ.ಪುರಾಣದೊಳೊಂದನೆ ಬರೆದರ್, ಬರೆದಿಕ್ಕಿದರ್ ತ್ರಿಷಷ್ಟಿಶಲಾ
ಪುರುಷರ ಪುರಾಣಮಂ' ಎಂದೂ ಹೇಳಿದ್ದಾರೆ. ಮಹಾಪುರಾಣಕಾರರಲ್ಲಿ ಪುಷ್ಪದಂತ
(ಕ್ರಿ ೧೦ ಶ.) ಇನ್ನೊಬ್ಬ. ಈತ ರಾಷ್ಟ್ರಕೂಟ ದೊರೆ ಮುಮ್ಮಡಿಕೃಷ್ಣನ ಮಂತ್ರಿ
ಭರತನ ಆಶ್ರಯದಲ್ಲಿ ತನ್ನ ಗ್ರಂಥಗಳನ್ನು ರಚಿಸಿದನು. ಶ್ವೇತಾಂಬರ ಪಂಥೀಯ ಕಲಿ
ಕಾಲ-ಸರ್ವಜ್ಞ ಹೇಮಚಂದ್ರನಾದರೂ (ಕಿ. ೧೦೮೯-೧೧೭೩) ೬೩-ಶಲಾಕಾಪುರು
ಷರ ಚರಿತ್ರೆಯನ್ನು ರಚಿಸಿರುವನು. ಇದು ಸಂಸ್ಕೃತದಲ್ಲಿದೆ. ಒಬ್ಬೊಬ್ಬ ತೀರ್ಥಂಕರನ
ಪುರಾಣ ಚರಿತ್ರೆಯನ್ನು ಅನೇಕರು ಕನ್ನಡ, ಸಂಸ್ಕೃತ, ಪ್ರಾಕೃತ, ಅಪಭ್ರಂಶ ಭಾಷೆ
ಗಳಲ್ಲಿ ರಚಿಸಿರುವರು.

ಜಿನಸೇನ-ಗುಣಭದ್ರರು ತಮ್ಮ ಕೃತಿಗೆ ಕವಿ ಪರಮೇಷ್ಠಿಯ ವಾಗರ್ಥ
ಸಂಗ್ರಹವನ್ನು ಮಾತೃಕೆಯೆಂದು ಬಳಸಿಕೊಂಡು, 'ಕವೀನಾಂ ಪರಮೇಶ್ವರಃ' ಎಂದು
ಸ್ತುತಿಸಿದ್ದರೂ ಸಂಸ್ಕೃತ, ಪ್ರಾಕೃತ, ಅಪಭ್ರಂಶ ಭಾಷೆಗಳಲ್ಲಿ ಪುರಾಣ / ಚರಿತ್ರೆಗಳನ್ನು
ರಚಿಸಿದ ಇವರ ಪೂರ್ವಿಕರಾಗಲಿ ನಂತರದವರಾಗಲಿ ಆತನನ್ನು ಸ್ಮರಿಸದಿರುವುದು ವಿಚಿ
ವೆನಿಸುವುದು. ಸ್ವಯಂಭು (ಇವನಾದರೂ ರಾಷ್ಟ್ರಕೂಟರ ಆಶ್ರಿತ) ಬಾಣ, ಹರ್ಷ
ರವಿಷೇಣ ಮತ್ತು ಇತರ ಕೆಲವರನ್ನು ಸ್ಮರಿಸಿರುವನು. ಹರಿವಂಶಕಾರ ಜಿನಸೇನನ
ಸಮಂತಭದ್ರ, ಪೂಜ್ಯಪಾದ, ರವಿಷೇಣಾದಿಗಳನ್ನು ಸ್ಮರಿಸಿರುವನು. ಮಹಾಪುರಾ
ಕಾರ ಪುಷ್ಪದಂತ ಅಕಲಂಕ ಮತ್ತು ಜಯಧವಲ ಧವಲಗಳ ಕರ್ತರೆಂದು ಪರ್ಯಾ
ದಿಂದ ಮಹಾಪುರಾಣಕಾರ ಜಿನಸೇನ ಮತ್ತು ಆತನ ಗುರು ವೀರಸೇನರನ್ನು ಸ್ಮರಿಸಿ
ವನು. ಇನ್ನೂ ಹಲವು ಉದಾಹರಣೆಗಳನ್ನು ಕೊಡಬಹುದು. ಇವರೆಲ್ಲರೂ ಅದರಲ್ಲ

ಜಿನಸೇನ-ಗುಣಭದ್ರರ ಪರಾವರ್ತಿಗಳು ಕವಿಪರಮೇಷ್ಠಿಯನ್ನು ಸ್ಮರಿಸದಿರಲು ಕಾರಣವೇನಿರಬಹುದು? ಒಂದೊ ಜಿನಸೇನನ ಮಹಾಪುರಾಣದೊಂದಿಗೆ ಕವಿ ಪರಮೇಷ್ಠಿಯ ಕೃತಿ ಹಿಂದೆ ಬಿದ್ದಿರಬೇಕು, ಇಲ್ಲವೆ ಅದು ಸಂಸ್ಕೃತ, ಪ್ರಾಕೃತ, ಅಪಭ್ರಂಶಗಳನ್ನು ಬಿಟ್ಟು ಬೇರೊಂದು ಭಾಷೆಯಲ್ಲಿರಬೇಕು. ಇವುಗಳಲ್ಲಿ ಮೊದಲಿನದು ಅಷ್ಟು ಸಮಂಜಸವೆನಿಸುವುದಿಲ್ಲ. ಏಕೆಂದರೆ ಜಿನಸೇನನ ಮಹಾಪುರಾಣದ ನಂತರ ೧೦ನೆಯ ಶತಮಾನದ ಆದಿಪಂಪನಿಂದ ೧೭ನೆಯ ಶತಮಾನದ ವರಾಂಗನೃಪ ಚರಿತೆಯನ್ನು ರಚಿಸಿದ ಧರಣಿಪಂಡಿತನವರೆಗೆ ಆಗಿಹೋದ ಅಧಿಕಾಂಶ ಕನ್ನಡ ಜೈನ ಕವಿಗಳು ಸಮಂತಭದ್ರ ಪೂಜ್ಯಪಾದರೊಂದಿಗೆ ಕವಿ ಪರಮೇಷ್ಠಿಯನ್ನೂ ಜೊತೆಗೆ ಜಿನಸೇನ-ಗುಣಭದ್ರರನ್ನೂ ಸ್ಮರಿಸಿರುವರು. ಈ ಅಂಶ ಮತ್ತು ಜಿನಸೇನ ಗುಣಭದ್ರರು ಕವಿ ಪರಮೇಷ್ಠಿಯ ವಾಗರ್ಥ ಸಂಗ್ರಹವನ್ನು ಗದ್ಯ ಕಥೆ ಎಂದಿರುವುದು ಅದು ಕನ್ನಡ ಮಿಶ್ರಕೃತಿ, ನೃಪತುಂಗ ಉಲ್ಲೇಖಿಸಿದ ಕನ್ನಡ ಗಬ್ಬ ಅಥವಾ 'ಚಿರಂತನಾಚಾರ್ಯರು ಪ್ರಗೀತಿಯಿಂ ನಿಗದಿಸಿದ ಗದ್ಯ ಕಥೆ' ಎಂಬುದನ್ನು ಸೂಚಿಸುವವೆಂದೇ ಹೇಳಬೇಕಾಗುವುದು.

ವಡ್ಡಾರಾಧನೆಯ ವಿಚಾರ*

ಉಪಲಬ್ಧ ಕನ್ನಡ ಸಾಹಿತ್ಯ ಕೃತಿಗಳಲ್ಲಿ ನೃಪತುಂಗನ ಕವಿರಾಜಮಾರ್ಗವು ಪ್ರಾಚೀನತಮ ಪದ್ಯಗ್ರಂಥವಿದ್ದರೆ ವಡ್ಡಾರಾಧನೆ ತುಸು ಹೆಚ್ಚು ಕಡಿಮೆ ಅದೇ ಕಾಲ ಖಂಡದಲ್ಲಿ (ಕ್ರಿ. ೯-೧೦ ಶ.) ಹುಟ್ಟಿರಬಹುದಾದ ಗದ್ಯ ಗ್ರಂಥ. ಅನೇಕ ಪ್ರಾಚೀನ ಕೃತಿಗಳಂತೆ ಇದಾದರೂ ಸ್ವರೂಪ, ಕರ್ತೃತ್ವ, ರಚನಾಕಾಲ ವಿಷಯಗಳಲ್ಲಿ ಸಂಶೋಧಕರ ಕುತೂಹಲವನ್ನು ಕೆರಳಿಸಿದೆ.

ವಡ್ಡಾರಾಧನೆಯೊಂದು ಜೈನ ಧಾರ್ಮಿಕ ಕಥಾಸಂಗ್ರಹವಿದ್ದು ಇದರಲ್ಲಿ ಒಟ್ಟು ೧೯ ಕಥೆಗಳಿವೆ. ಆರಾಧನೆಯೆಂದರೆ ಪೂಜೆ, ಸೇವೆ, ಶ್ರವಣ, ಮನನ, ಇತ್ಯಾದಿ, ರತ್ನತ್ರಯ (ಸಮ್ಯಕ್‌ದರ್ಶನ, ಸಮ್ಯಕ್‌ಜ್ಞಾನ, ಸಮ್ಯಕ್‌ಚಾರಿತ್ರ) ಮತ್ತು ಸಮ್ಯಕ್‌ತಪ—ಇವುಗಳ ತ್ರಿಕರಣಪೂರ್ವಕ ಆರಾಧನೆಯು ಕರ್ಮಕ್ಷಯ ಮತ್ತು ಮೋಕ್ಷ ಪ್ರಾಪ್ತಿಗಾಗಿ ಜೈನರಿಗಿರುವ ಪರಮಸಾಧನ. ಯಾವಜ್ಜೀವ ಈ ಚತುರ್ವಿಧ ಆರಾಧನೆ ಗಳನ್ನು ಆರಾಧಿಸಿ, ಮರಣಸಮಯದಲ್ಲಿ ಸಲ್ಲೇಖನ ವ್ರತದಿಂದ ಅಂದರೆ ಅನ್ನ ಪಾನಾ ದಿಗಳನ್ನು ತೊರೆದು, ಮರಣಕ್ಕೆ ನಿಮಿತ್ತವಾದ ದೈಹಿಕ ಮಾನಸಿಕ ಕ್ಲೇಶಗಳನ್ನು ಧೃತಿಗೆಡದೆ ಸಹಿಸಿ, ತದೇಕಚಿತ್ತದಿಂದ ದೇಹವನ್ನು ತ್ಯಜಿಸಿ, ಸದ್ಗತಿಯನ್ನು ಪಡೆಯ ಬೇಕೆಂದು ಪ್ರತಿಯೊಬ್ಬ ಜೈನ ಮುಮುಕ್ಷುವಿನ ಅಂತಿಮ ಧ್ಯೇಯವಿದ್ದು, ವಡ್ಡಾರಾಧ ನೆಯಲ್ಲಿ ಈ ರೀತಿ ಸದ್ಗತಿಯನ್ನು ಪಡೆದ ೧೯ ಪುರಾಣಪುರುಷರ ಕಥೆಗಳಿವೆ. ಇವರ ಲ್ಲೊಬ್ಬನಾದ ಸುಕುಮಾರಸ್ವಾಮಿಯು ಸಲ್ಲೇಖನವ್ರತವನ್ನು ಕೈಕೊಂಡು ಸಮಾಧಿಸ್ಥ ನಿರುವಾಗ, ನರಿಯಾಗಿ ಹುಟ್ಟಿಬಂದ ಪೂರ್ವಜನ್ಮದ ವೈರಿಯು ಮೂರು ದಿನ ಆತನ ದೇಹವನ್ನು ಬಗೆದು ತಿಂದರೂ ಧೃತಿಗೆಡದೆ ಸದ್ಗತಿಯನ್ನು ಪಡೆದನು. ೭೦೦ ವ್ಯಾಧಿ ಗಳಿಂದ ಪೀಡಿತನಾದ ಸನತ್ಕುಮಾರ ಚಕ್ರವರ್ತಿಯು ೧೦೦ ವರ್ಷಗಳವರೆಗೆ ತಪಸ್ಸು ಮಾಡಿ ಸಮಾಧಿಮರಣದಿಂದ ಇಂದ್ರಪದವಿಯನ್ನು ಪಡೆದನು. ಹೀಗೆಯೆ ಇತರರು ಉಪಸರ್ಗ ಅಂದರೆ—ದೇವ, ಮನುಷ್ಯ, ಪಶು, ಪಕ್ಷಿ, ಪ್ರಾಣಿ, ದುರ್ಭಿಕ್ಷೆ, ಮಹಾ ಪೂರಾದಿಗಳಿಂದ ಒದಗಿದ ವಿಪತ್ತುಗಳನ್ನು, ಪರೀಷಹ ಅಂದರೆ—ಹಸಿವೆ, ನೀರಡಿಕೆ, ರೋಗರುಜಿನಾದಿಗಳಿಂದ ಉಂಟಾಗುವ ಕ್ಲೇಶಗಳನ್ನು ಸಹಿಸಿ, ವ್ರತಚ್ಯುತರಾಗದೆ, ಪರಮಗತಿಯನ್ನು ಪಡೆದರು.

ಅನ್ಯ ಆರಾಧಕರಾದರೂ ಸಮಾಧಿಮರಣದ ಸಮಯದಲ್ಲಿ ತಮಗೊದಗುವ ಈ ಬಗೆಯ ವಿಪತ್ತುಗಳು ಸುಕುಮಾರಸ್ವಾಮಿ ಮೊದಲಾದವರು ಅನುಭವಿಸಿದ ವಿಪತ್ತು ಗಳ 'ಶತಸಹಸ್ರ' ಭಾಗ ಸಹ ಅಲ್ಲವೆಂದು ಬಗೆದು, ಸಮಾಧಾನದಿಂದ ಸಹಿಸಿ,

* ಕರ್ನಾಟಕ ಭಾರತಿ, ಸಂ. ೩, ಸಂ. ೧.

ರತ್ನತ್ರಯಗಳನ್ನು ಸಾಧಿಸಿ, ಸದ್ಗತಿಯನ್ನು ಪಡೆಯಬೇಕೆಂಬುದು ಈ ಕಥೆಗಳ ಉಪದೇಶಪರ ಪಲ್ಲವಿ ಇದ್ದು ಪ್ರತಿಯೊಂದು ಕಥೆಯ ಕೊನೆಗೆ ಬರುತ್ತದೆ.

ಹಿನ್ನೆಲೆ—ಪ್ರಾಕೃತದಲ್ಲಿ "ಭಗವತೀ ಆರಾಧನಾ" ಎಂಬುದೊಂದು ಪ್ರಾಚೀನ ಗ್ರಂಥವಿದೆ. ಅದರ ೬೫ನೆಯ "ಕವಚ" ಎಂಬ ಅಧಿಕಾರದಲ್ಲಿ ಮೇಲ್ಕಾಣಿಸಿದ ೧೯ ಕಥೆಗಳ ಸೂಚನಾರೂಪಿ ಗಾಥೆಗಳು ಕವಚದ ಅಂಗವಾಗಿ ಬಂದಿವೆ. ಭಗವತೀ ಆರಾಧನೆಯು ಯತಿಗಳಿಗಾಗಿ ರಚಿಸಿದ ಆಚಾರಗ್ರಂಥ. ೨,೧೭೦ ಗಾಥೆಗಳಿರುವ ಈ ಬೃಹತ್ ಗ್ರಂಥದಲ್ಲಿ ಪ್ರಾಮುಖ್ಯವಾಗಿ ಸಲ್ಲೇಖನ-ವ್ರತ ಅಥವಾ ಸಮಾಧಿಮರಣದ ವಿಧಿ-ವಿಧಾನಗಳ ಸವಿಸ್ತರ ನಿರೂಪಣೆ ಇದೆ. ಗ್ರಂಥದ ಮೂಲ ಹೆಸರು 'ಆರಾಧನಾ'. ಭಗವತೀ ಎಂಬುದು ಹಿಂದಿನಿಂದ ಬಂದ ಗೌರವಾತ್ಮಕ ವಿಶೇಷಣವೆಂದು ವಿದ್ವಾಂಸರ ಅಭಿಪ್ರಾಯವಿದೆ. ಸ್ವಯಂ ಗ್ರಂಥಕಾರನೇ ಒಂದೆಡೆ 'ಆರಾಧನಾಭಗವದೀ' ಎಂದು 'ಭಗವತೀ' ಪದವನ್ನು ವಿಶೇಷಣ ರೂಪದಲ್ಲಿ ಬಳಸಿರುವನು.[1] ಟೀಕಾಕಾರ ಆಶಾಧರ ಒಂದೆಡೆ ಗ್ರಂಥಕ್ಕೆ 'ಆರಾಧನಾ-ದೇವತಾ' ಎಂದಿರುವುದರಿಂದ ಭಾವುಕರು ಗ್ರಂಥಕ್ಕೆ ದೇವತಾಸ್ವರೂಪವನ್ನು ಕೊಟ್ಟು ಪೂಜಿಸುತ್ತಿರಬೇಕು. ಮತ್ತು ಆ ಕಾರಣ ಅದು 'ಭಗವತೀ ಆರಾಧನಾ' ಎಂದು ಪ್ರಸಿದ್ಧವಾಗಿರಬೇಕೆಂಬ ಊಹೆಯೂ ಇದೆ.[2] ವಡ್ಡಾರಾಧನೆಯಲ್ಲಿ ಸಹ ಈ ಊಹೆಗೆ—

> ಧ್ವಜಂಗಳುಮಂ ಕಟ್ಟಿಸಿ ದೇವತಾಪ್ರತಿಮೆಯಂ ನಿರಿಸಿ.......ಮಹಾಮಹಿಮೆಯಂ ಪೂಜೆಗಳುಮಂ ಪೊಡೆಮಡಿಸುತ್ತಿರೆ ಭಟಾರರುಮಾರಾಧನೆಯನರ್ಚಿಸಿ ಆರಾಧನೆಯಂ ವಕ್ಖಾಣಿಸಲ್ ತಗುಳ್ದರ್...(ಗುರುದತ್ತಭಟಾರರ ಕಥೆ, ಪು. ೧೪೨)

ಎಂಬ ಪೋಷಕವಿರುವ ಮಾತುಗಳಿವೆ.

ಸಮಾಧಿಮರಣದಿಂದ ಸದ್ಗತಿಯನ್ನು ಪಡೆಯಬೇಕೆಂಬುದು ಅಂತಿಮ ಧ್ಯೇಯವಿದ್ದರೂ ಅದಕ್ಕೆ ಅಗತ್ಯವಿರುವ ಶ್ರದ್ಧೆ, ಸಂಸ್ಕಾರ, ಸಹನಶಕ್ತಿ, ಮೊದಲಾದವು ಎಲ್ಲರಲ್ಲಿ ಒಂದೇ ಸಮನಾಗಿರುವದಿಲ್ಲ. ಇದು ಪ್ರಕೃತಿಧರ್ಮ. ಆದ್ದರಿಂದ ಸಮಾಧಿಮರಣಕ್ಕೆ ಅಣಿಯಾದ ಆರಾಧಕನು ಉಪಸರ್ಗ-ಪರೀಷಹಗಳ ಬಾಧೆಯನ್ನು ಸಹಿಸಲಾಗದೆ ಒಮ್ಮೊಮ್ಮೆ ತಾಳ್ಮೆಗೆಡಬಹುದು. ಸ್ವರ್ಗದಲ್ಲಿರುವದನ್ನು ಕಂಡವರಾರು, ಸದ್ಯ ಬದುಕಿದರೆ ಸಾಕು, ಎನ್ನುವ ಮಟ್ಟಕ್ಕೆ ಆತನ ನೈತಿಕ ಧೈರ್ಯ ಆತ್ಮವಿಶ್ವಾಸಗಳು ಕುಸಿಯಬಹುದು. ಇಂಥ ಸಮಯದಲ್ಲಿ ಬಳಿಯಲ್ಲಿರುವ ಸಹಬಂಧುಯತಿಗಳು ಸಹಾನುಭೂತಿಯಿಂದ ಅವನನ್ನು ಸಂತೈಸಬೇಕು. ಅವನಿಗಿಂತ ಎಷ್ಟೋ ಪಟ್ಟು ಹೆಚ್ಚು ಕಷ್ಟಗಳನ್ನು ಸಹಿಸಿ ಸದ್ಗತಿಯನ್ನು ಪಡೆದ ಉಪರೋಕ್ತ ೧೯ ಪುರಾಣಪುರುಷರ ಕಥಾರೂಪಿ

1. ಭ. ಅ. ಗಾಥಾ ೨೧೬೪.
2. ಬೃ. ಕೋ. ಮುನ್ನುಡಿ, ಪು. ೫೨.

ಕವಚವನ್ನು ತೊಡಿಸಬೇಕು. (ಸವ್ವಾಯರೇಣ ಕವಯಂ ಪರೀಷಹ ಣಿವಾರಣಂ ಕುಜ್ಜಾ), ಎಂದಿರುವನು ಭಗವತೀ ಆರಾಧನಾಕಾರ.[3]

ಭಗವತೀ ಆರಾಧನೆಯ ಕವಚಾಧಿಕಾರವು ಗಾಥೆ ೧೫೪೯ರಿಂದ ಪ್ರಾರಂಭವಾಗಿ ೧೫೩೮ ನೆಯ ಗಾಥೆಯವರೆಗೆ ಪೀಠಿಕಾರೂಪದಲ್ಲಿ ಮುಂದುವರಿಯುತ್ತದೆ. ಮುಂದಣ ಒಂದೊಂದು ಗಾಥೆಯಲ್ಲಿ ಒಬ್ಬೊಬ್ಬ ಪುರಾಣಪುರುಷನು ಅನುಭವಿಸಿದ ಉಪಸರ್ಗ-ಪರೀಷಹಗಳ ಸೂಚನೆ ಇದೆ. ಒಟ್ಟು ಇಂಥ ೧೯ ಗಾಥೆಗಳಿದ್ದು ಇವು ಇಲ್ಲಿರುವ ಕ್ರಮದಲ್ಲಿಯೆ ವಡ್ಡಾರಾಧನೆಯ ಕಥೆಗಳಿಗೆ ಸೂಚನಾ-ಪದ್ಯವಾಗಿ ಬಂದಿವೆ. ಆರಾಧಕನು ಈ ಗಾಥೆಗಳನ್ನು ಪಠಿಸಿ, ಅವುಗಳಲ್ಲಿ ಉಕ್ತರಾದ ಪುರಾಣಪುರುಷರು ಅನುಭವಿಸಿದ ಯಾತನೆಗಳನ್ನು ನೆನೆದು ಅವುಗಳೆದುರು ತಾನು ಪಡುತ್ತಿರುವ ಯಾತನೆಗಳು ಕ್ಷುಲ್ಲಕವೆಂದು ಬಗೆದು, ತನ್ನಷ್ಟಕ್ಕೆ ತಾನೆ ಸಮಾಧಾನ ತಾಳಬಹುದು ಅಥವಾ ಬಳಿಯಲ್ಲಿಯ ಸಹಬಂಧುಯತಿಗಳು ಅವುಗಳನ್ನು ಪೂರ್ಣ ಕಥೆಗಳ ರೂಪದಲ್ಲಿ ನಿರೂಪಿಸಿ ಅವನ ಸಹನಶಕ್ತಿ ವ್ರತನಿಷ್ಠೆಗಳನ್ನು ಹೆಚ್ಚಿಸಬಹುದು. ಯೋಧನಿಗೆ ಕವಚವು ಹೇಗೊ ಹಾಗೆ ಉಪಸರ್ಗ ಪರೀಷಹಗಳೊಂದಿಗೆ ಹೋರಾಡುತ್ತಿರುವ ಆರಾಧಕನಿಗೆ ಈ ಕಥಾರೂಪಿ ಕವಚವು ರಕ್ಷಣೆ ನೀಡುವದೆಂಬುದು ಈ ಅಧಿಕಾರದ ಮುಖ್ಯೋದ್ದೇಶವಾಗಿದೆ.

ಭಗವತೀ ಆರಾಧನಾದಲ್ಲಿಯ ಇನ್ನಿತರ ಕಥೆಗಳಾದರೂ ಅದರಲ್ಲಿಯ ಈ ಕವಚ ಕಥೆಗಳಂತೆಯೇ ಸೂಚನಾರೂಪದಲ್ಲಿವೆ. ಟೀಕಾಕಾರರು (ಅಪರಾಜಿತಸೂರಿ, ಕ್ರಿ.ಲ. ೧೦ ಶ. ಆಶಾಧರ ಕ್ರಿ. ೧೩ ಶ.) ಇವುಗಳನ್ನು ವಿಸ್ತರಿಸಿ ಹೇಳಿಲ್ಲ. ಬಹುಶಃ ಆ ಕಾಲದಲ್ಲಿ ಈ ಕಥೆಗಳು ಸುಪರಿಚಿತವಿರಬಹುದು ಅಥವಾ ಪೂರ್ಣರೂಪದಲ್ಲಿ ಇತರತ್ರ ಲಭ್ಯವಿರಬಹುದು. ಆರಾಧಕರ ಅನುಕೂಲತೆಗಾಗಿ ಎಲ್ಲ ಕಥೆಗಳನ್ನು ಒಂದೆಡೆ ಸಂಗ್ರಹಿಸಿ ನಿರೂಪಿಸಿರುವ ಪೂರಕ ಗ್ರಂಥಗಳೂ ಹುಟ್ಟಿಕೊಂಡಿರಬಹುದು. ಹರಿಷೇಣನ (ಕ್ರಿ. ೯೩೨) ಬೃಹತ್‌ಕಥಾಕೋಶ ಇಂಥದೊಂದು ಗ್ರಂಥ. ಸಂಸ್ಕೃತದಲ್ಲಿದೆ. ಭಗವತೀ ಆರಾಧನೆಗೆ ಸಂಬಂಧಿಸಿದ ಉಪಲಬ್ಧ ಕಥಾಕೋಶಗಳಲ್ಲಿ ಇದೇ ಪ್ರಾಚೀನತಮವಿದೆ. ಇದರಲ್ಲಿ ಒಟ್ಟು ೧೫೭ ಕಥೆಗಳಿವೆ. ೧೨೬-೧೪೪ ವರೆಗಿನ ಕಥೆಗಳೂ ವಡ್ಡಾರಾಧನೆಯ ಕಥೆಗಳೂ ಒಂದೇ ಆಗಿವೆ. ಕ್ರಮದಲ್ಲಿಯೂ ವ್ಯತ್ಯಾಸವಿಲ್ಲ. ಹರಿಷೇಣ ತನ್ನ ಕಥೆಗಳನ್ನು ಸಾಧ್ಯವಿದ್ದಷ್ಟು ಸಂಕ್ಷೇಪಿಸಿ ನಿರೂಪಿಸಿರುವನು.

ಶ್ರೀಚಂದ್ರನ (ಕ್ರಿ. ೧೧ ಶ. ಕೊನೆ) ಕಥಾಕೋಶ ಭಗವತೀ ಆರಾಧನಾಕಥೆಗಳಿರುವ ಇನ್ನೊಂದು ಗ್ರಂಥ. ಇದು ಅಚ್ಚಾಗಿಲ್ಲ. ಅಪಭ್ರಂಶದಲ್ಲಿದ್ದು ಕಥಾರಂಭದಲ್ಲಿ ವಡ್ಡಾರಾಧನೆಯ ಬಗೆಯಲ್ಲಿ ಇದರಲ್ಲಿಯೂ ಭಗವತೀ ಆರಾಧನಾ ಗಾಥೆಗಳು ಸೂಚನಾಪದ್ಯಗಳಾಗಿ ಬಂದಿವೆ. ಪೂರ್ವಾಚಾರ್ಯನೊಬ್ಬನ ಗ್ರಂಥವನ್ನಾಧರಿಸಿ

---

3. ಭ. ಆ. ಗಾಥಾ ೧೫೧೩.

ತನ್ನ ಗ್ರಂಥವನ್ನು ರಚಿಸಿರುವೆನೆಂದಿರುವದು ಮತ್ತು ೧೯ ಕವಚ-ಕಥೆಗಳನಂತರ—ಇದಿಷ್ಟು ಕವಚಾಧಿಕಾರ (ಕವಚಾಹಿಯಾರೋಯಂ), ಎಂದಿರುವದು ಈ ಗ್ರಂಥದ ವೈಶಿಷ್ಟ್ಯ.[4] ಪ್ರಭಾಚಂದ್ರ ನೇಮಿಚಂದ್ರರ ಕಥಾಕೋಶಗಳು ಆರಾಧನಾ ಕಥೆಗಳಿರುವ ಇನ್ನೆರಡು ಗ್ರಂಥಗಳು. ಎರಡೂ ಸಂಸ್ಕೃತದಲ್ಲಿದ್ದು ಒಂದು ಗದ್ಯದಲ್ಲಿ ಇನ್ನೊಂದು ಪದ್ಯದಲ್ಲಿದೆ. ಇವು ಈಚಿಯವು.

ವಡ್ಡಾರಾಧನೆಯ ಸಮಸ್ಯೆಗಳು

ವಡ್ಡಾರಾಧನೆಯ ಸಮಸ್ಯೆಗಳು ಅದರ ಸಮಾಪ್ತಿವಾಕ್ಯದಿಂದಲೆ ತೊಡಗುತ್ತವೆ. ಸಂಸ್ಕೃತದ 'ಬೃಹತ್‌ಕಥೆ' ಪ್ರಾಕೃತದಲ್ಲಿ 'ವಡ್ಡಕಹಾ' ಎಂದು ಪ್ರಸಿದ್ಧವಿದೆ. ಗಂಗರಾಜ ದುರ್ವಿನೀತನ (ಕ್ರಿ. ೬೦೦) ಬೃಹತ್‌ಕಥೆ ಕೆಲವು ಶಾಸನಗಳಲ್ಲಿ 'ವಡ್ಡಕಥೆ' ಎಂದು ಉಕ್ತವಾಗಿದೆ. ವಡ್ಡಾರಾಧನೆಯ ಸಂಪಾದನೆಗಾಗಿ ಇಟ್ಟುಕೊಂಡ ಹಸ್ತಪ್ರತಿಗಳಲ್ಲಿ ವಡ್ಡಾರಾಧನೆ, ವೊಡ್ಡಾರಾಧನೆ, ವೊಡ್ಡಾರಾಧಣ, ಒಡ್ಡಾರಾಧನೆ —ಹೀಗೆ ನಾಲ್ಕು ರೂಪಗಳಿವೆ. ಪ್ರಾಚೀನ ಮತ್ತು ಸಂಸ್ಕೃತಕ್ಕೆ ಸಮೀಪವಾದುದೆಂದು 'ವಡ್ಡಾರಾಧನೆ' ರೂಪವನ್ನು ಸ್ವೀಕರಿಸಲಾಗಿದೆ.[5] ಆದರೆ 'ಒಡ್ಡಾರಾಧನೆ' ಎಂಬುದೆ ಸರಿಯಾದ ರೂಪವೆನ್ನಬಹುದು—ಒಡ್ಡೋಲಗದಲ್ಲಿಯ 'ಒಡ್ಡ' ಇರುವಂತೆ ಈ 'ಒಡ್ಡ', ವಡ್ಡಾರಾಧನೆಯ 'ವಡ್ಡ'-ಸಂಸ್ಕೃತ 'ಬೃಹತ್'ಕ್ಕಿರುವ ಸಮಾನಾರ್ಥಕ ಶಬ್ದಗಳು. ಉಚ್ಚಾರವೈಶಿಷ್ಟ್ಯದಿಂದ ಪ್ರಾಕೃತ 'ವಡ್ಡ' ಕನ್ನಡದಲ್ಲಿ 'ಒಡ್ಡ' ಆಗಿದೆ. ವಡ್ಡಾರಾಧನೆಯ ಹಸ್ತಪ್ರತಿಗಳಲ್ಲಿಯ ವೊಡ್ಡಾರಾಧನೆ, ಒಡ್ಡಾರಾಧನೆ ರೂಪಗಳಾದರೂ ಇದನ್ನೇ ಸೂಚಿಸುವವು. ಉಚ್ಚಾರದಲ್ಲಿ 'ಒ' ಇದ್ದರೂ ಬರಹದಲ್ಲಿ 'ವ' ಎಂದು ಬರೆಯುವ ರೂಢಿ ನಮ್ಮಲ್ಲಿ ಎಂದಿನಿಂದಲೂ ಅಸ್ತಿತ್ವದಲ್ಲಿದೆ. ಕ್ರಿ.ಶ. ೧೧೫೮ರದೆಂದು ತಿಳಿಯಲಾದ 'ನಾಚಿರಾಜೀಯ' ಎಂಬ ಅಮರಕೋಶ ಟೀಕೆಯ ಹಸ್ತಪ್ರತಿಯಲ್ಲಿ 'ಒಗ್ಗರಿಸು' ಶಬ್ದವನ್ನು 'ವಗ್ಗರಿಸು' ಎಂದು ಬರೆಯಲಾಗಿದೆಂಬ ಕಿಟೆಲ್ ಕೋಶದಲ್ಲಿಯ ಉಲ್ಲೇಖವನ್ನು ಈ ಸಂದರ್ಭದಲ್ಲಿ ನೋಡಬಹುದು.[6] ಹೆಚ್ಚೇಕೆ, ವಡ್ಡಾರಾಧನೆಯಲ್ಲಿಯೇ ಭದ್ರಬಾಹು ಭಟ್ಟಾರರ ಕಥೆಯಲ್ಲಿ 'ಓದುಗಳುಮಂ' ಶಬ್ದ 'ವೋದುಗಳುಮಂ' ಎಂದು ಬಂದಿದೆ.

ವಡ್ಡಾರಾಧನೆ, ವೊಡ್ಡಾರಾಧನೆ, ಒಡ್ಡಾರಾಧನೆ,—ಯಾವುದೆ ಆಗಲಿ ಸಮಾಪ್ತಿವಾಕ್ಯದಲ್ಲಿ ಇದಿಷ್ಟನ್ನೆ ಇಟ್ಟುಕೊಂಡರೆ ಅತಿವ್ಯಾಪ್ತಿದೋಷ ತಗಲುವಂತಿದೆ. ಸಮಾಪ್ತಿವಾಕ್ಯದಲ್ಲಿ ವಡ್ಡಾರಾಧಣಸಂಪೂರ್ಣ್ಣಂ. ವೊಡ್ಡಾರಾಧನೆಯ

4. ಬೃ. ಕೋ. ಮುನ್ನುಡಿ, ಪು. ೫೯, ೬೦.
5. ಕ. ಸಾ. ಪ. ಸಂ. ೨೫/೨, ಪು. v.
6. ಕಿ. ಕೋ.-'ಒ' ಅಕ್ಷರ.

ಕವಚವು, ವಡ್ಡಾರಾಧನೆಯ ಕವಚವೆಂಬಧಿಕಾರವು—ಪಾಠಾಂತರಗಳಿವೆ. ಇವುಗಳಲ್ಲಿ ಎರಡನೆಯದು ಪ್ರಾಚೀನತಮ (ಕ್ರಿ. ೧೪೦೩) ಹಸ್ತಪ್ರತಿಯಲ್ಲಿಯದು.[7] 'ವಡ್ಡಾರಾಧನೆ' ಎಂಬುದು ಸಮಗ್ರ ಭಗವತೀ ಆರಾಧನೆಗೆ ಅನ್ವಯಿಸುವ ಹೆಸರು. ಮೂಲಾರಾಧನಾ ಎಂಬ ಹೆಸರಿನಿಂದ ಭಗವತೀ ಆರಾಧನಾದ ಇನ್ನೊಂದು ಸಂಸ್ಕರಣ ಪ್ರಸಿದ್ಧವಾಗಿದೆ. ಹರಿಷೇಣನ ಬೃಹತ್‌ಕಥಾಕೋಶಕ್ಕೆ ಅದರ ಒಂದು ಹಸ್ತಪ್ರತಿಯಲ್ಲಿ 'ಬೃಹದಾರಾಧನಾ ಕಥಾಕೋಶ' ಎಂದಿರುವದರಿಂದ[8], ಸಂಸ್ಕೃತದಲ್ಲಿ 'ಬೃಹದಾರಾಧನಾ', ಪ್ರಾಕೃತಾದಿಗಳಲ್ಲಿ 'ವಡ್ಡಾರಾಧನಾ' ಎಂದು ಸಹ ಅದು ಪ್ರಸಿದ್ಧವಿದ್ದು ಈ ಹೆಸರೇ ಕನ್ನಡದಲ್ಲಿ ಹರಿದುಬಂದಂತಿದೆ. ಕನ್ನಡ ವಡ್ಡಾರಾಧನೆಯು ಭಗವತೀ ಆರಾಧನಾದ ಅನುವಾದವೂ ಅಲ್ಲ, ಸಂಗ್ರಹವೂ ಅಲ್ಲ. ಅದರ ೩೫ನೆಯ ಕವಚಾಧಿಕಾರದಲ್ಲಿಯ ಕವಚ-ಗಾಥೆಗಳಿಗೆ ಸಂಬಂಧಿಸಿದ ೧೯ ಕಥೆಗಳಿಷ್ಟೇ ಇದರಲ್ಲಿವೆ. ಪ್ರಾರಂಭದಲ್ಲಿ ಮಂಗಲಾಚರಣ ಪೀಠಿಕೆ, ಕಥಾರಂಭದಲ್ಲಿ ಮೂಲ ಭಗವತೀ ಆರಾಧನಾದಲ್ಲಿಯ ಸೂಚನಾರೂಪಿ ಗಾಥೆ, ಕಥಾನಿರೂಪಣೆ, ಪ್ರತಿಯೊಂದು ಕಥೆಯ ಕೊನೆಗೆ ಉಪಸಂಹಾರಾತ್ಮಕ ಉಪದೇಶ – ಹೀಗೆ ಪೂರ್ಣಕೃತಿಯ ರೂಪದಲ್ಲಿದೆ, ಇದರ ರಚನೆ. ಭಗವತೀ ಆರಾಧನೆಯ ಕವಚಾಧಿಕಾರದ ರಚನೆ ಹೀಗಿಲ್ಲ. ಅತಏವ ಕನ್ನಡದ ಮಟ್ಟಿಗೆ ಅದರ ಪ್ರಾಚೀನತಮ (ಕ್ರಿ. ೧೪೦೩) ಹಸ್ತಪ್ರತಿಯಲ್ಲಿಯ 'ವೊಡ್ಡಾರಾಧನೆಯ ಕವಚವು' ಪಾಠವೆ ಸಾಧುವಿದ್ದು, ಇದನ್ನು ಕನ್ನಡ ವಿಶಿಷ್ಟ ಉಚ್ಚಾರಕ್ಕನುಸರಿಸಿ 'ಒಡ್ಡಾರಾಧನೆಯ ಕವಚವು' ಎಂದು ಸಮಾಪ್ತಿವಾಕ್ಯವನ್ನು ಮಾರ್ಪಡಿಸುವದು ಸೂಕ್ತವೆನಿಸುವದು. ಈ ಮಾರ್ಪಾಟಿಗೆ ಪೂರಕವಾಗಿ ಒಂದು ಹಸ್ತಪ್ರತಿಯಲ್ಲಿ 'ಒಡ್ಡಾರಾಧನೆ' ಪಾಠ ಸಹ ಇದೆ.

'ವಡ್ಡಾರಾಧನೆಯ ಕವಚವೆಂಬಧಿಕಾರವು' ಪಾಠದಿಂದ ಸಮಗ್ರಭಗವತೀ ಆರಾಧನಾ ಕನ್ನಡದಲ್ಲಿ ಅನುವಾದಿತವಾಗಿದ್ದು ಇದು ಅದರಲ್ಲಿಯ ಕವಚಾಧಿಕಾರ ಮಾತ್ರ ಎಂಬ ಸಂದೇಹ ಮೂಡುವಂತಿದೆ. ವಸ್ತುಸ್ಥಿತಿ ಹೀಗಿಲ್ಲ. ಭಗವತೀ ಆರಾಧನೆಯ ಕವಚಾಧಿಕಾರದಲ್ಲಿ ಒಟ್ಟು ೧೭೩ ಗಾಥೆಗಳಿವೆ. ಹರಿಷೇಣ ಕವಚಕ್ಕೆ ಸಂಬಂಧಿಸಿದ ೧೯ ಕಥೆಗಳನ್ನಲ್ಲದೆ ಇದರಲ್ಲಿಯ ಬೇರೆ ೭ ಕಥೆಗಳನ್ನು ನಿರೂಪಿಸಿರುವನು. ಶ್ರೀಚಂದ್ರ ಹೆಚ್ಚಿಗೆ ೫ ಕಥೆಗಳನ್ನು ಹೇಳಿರುವನು. ಒಂದೊಮ್ಮೆ ವಡ್ಡಾರಾಧನೆಯು ಭಗವತೀ ಆರಾಧನೆಯ ಕವಚಾಧಿಕಾರದ ಅನುವಾದವಿದ್ದರೆ ಮಿಕ್ಕುಳಿದ ಗಾಥೆ ಮತ್ತು ಕಥೆಗಳ ಸಂದರ್ಭಾನುಸಾರ ಅನುವಾದ ಇದರಲ್ಲಿಯೂ ಬರುತ್ತಿತ್ತು. ಈ ಅಂಶ ಮತ್ತು ವಡ್ಡಾರಾಧನೆಯ ರಚನಾಸ್ವರೂಪವನ್ನು ಮನದಂದಾಗ ಈ ಪಾಠ ಗಣನಾರ್ಹವಲ್ಲೆಂಬುದು ಸ್ಪಷ್ಟವಾಗದಿರದು.

---

7. ಕ.ಸಾ.ಪ. ಸಂ. ೨೪. ೪, ಪು. ii
8. ಬೃ. ಕೋ. ಮುನ್ನುಡಿ, ಪು. ೨, ಜ.ಪ್ರತಿ.

ಒಟ್ಟಿನಲ್ಲಿ ಸಮಾಪ್ತಿ ವಾಕ್ಯದಲ್ಲಿ 'ಒಡ್ಡಾರಾಧನೆಯ ಕವಚವು' ಎಂದಿರುವದು ಸೂಕ್ತ ಮತ್ತು ಕ್ರಮಪ್ರಾಪ್ತವಿದ್ದರೂ 'ಕವಚ' ಪದವನ್ನು ತ್ಯಜಿಸಿ, 'ವಡ್ಡಾರಾಧನೆ' ಪಾಠವನ್ನಷ್ಟೇ ಸ್ವೀಕರಿಸಿ ಗ್ರಂಥಕ್ಕೆ ಸಹ ಇದೇ ಹೆಸರನ್ನು ಕೊಡಲಾಗಿದೆ. ಜೈನಸಾಹಿತ್ಯದಲ್ಲಿ ಕವಚಗ್ರಂಥಗಳ ಅಸ್ತಿತ್ವ, ಸ್ವರೂಪಾದಿ ವಿವರಗಳು ದೊರೆಯದಿರುವುದು 'ಕವಚ' ಪದವನ್ನು ತ್ಯಜಿಸಲು ಕಾರಣವಿರಬೇಕೆಂದು ತೋರುತ್ತದೆ.[9] ಕವಚ, ಹೃದಯ, ವಜ್ರಪಂಜರ ಮೊದಲಾದವು ವೈದಿಕಧರ್ಮಪರ ತಂತ್ರಶಾಸ್ತ್ರದ ಅಂಗವಾಗಿ ಹುಟ್ಟಿಕೊಂಡ ಗ್ರಂಥಗಳು. ಇವುಗಳಲ್ಲಿ ಉಕ್ತವಾದ ಆರಾಧ್ಯ ದೇವತೆಯ ವಿಧಾನೋಕ್ತ ಜಪ ಅನುಷ್ಠಾನಾದಿಗಳಿಂದ ಆರಾಧಕನಿಗೆ ಶತ್ರುಭಯ, ರೋಗಾದಿಗಳ ಭಯ ಇತರ ವಿಪತ್ತುಗಳಿಂದ ರಕ್ಷಣೆ ದೊರೆಯುವುದು, ಇಷ್ಟಾರ್ಥ ಸಿದ್ಧಿಸುವದು, ಎಂಬ ನಂಬುಗೆ ಇದೆ ಭಾವುಕರಲ್ಲಿ. ಜೈನರಲ್ಲಿ ಈ ಬಗೆಯ ಸಾಹಿತ್ಯ 'ಅಷ್ಟೊಂದು' ಲೋಕಪ್ರಿಯವಿಲ್ಲ; ಇದ್ದರೂ ಅವು ಜ್ವಾಲಾಮಾಲಿನಿ, ಪದ್ಮಾವತಿ ಮೊದಲಾದ 'ಶಾಸನ' ದೇವತೆಗಳ ಉಪಾಸನೆಗೆ ಸಂಬಂಧಿಸಿವೆ; ವಡ್ಡಾರಾಧನೆ ಇಂಥದಲ್ಲ; ಉಪಸರ್ಗಾದಿಗಳಿಂದಾಗುವ ಯಾತನೆಯನ್ನು ಸಹಿಸಲು ಆರಾಧಕನಿಗೆ 'ಆಧ್ಯಾತ್ಮಿಕಕವಚ'ವನ್ನು ಒದಗಿಸುವದು ಈ ಕಥೆಗಳ ಉದ್ದೇಶವೆಂಬ ಅಭಿಪ್ರಾಯವೂ ಇದೆ.[10]

ವೈದಿಕಧರ್ಮಪರ ಕವಚಗಳಾಗಲಿ ಜೈನಧರ್ಮಪರ ಕವಚಗಳಾಗಲಿ ಆರಾಧಕನಿಗೆ ಇಷ್ಟವಿರುವ ರಕ್ಷಣೆಯನ್ನು ನೀಡುವುದು ಅವುಗಳ ಉದ್ದೇಶವೆಂಬುದನ್ನು ನೆನೆದಾಗ ಈ ಭೇದ,–ರಚನೆ ಮತ್ತು ಸಂದರ್ಭದ ಮಟ್ಟಿಗೆ ಎನ್ನಬಹುದು. ವೈದಿಕಧರ್ಮದಲ್ಲಿ ಪ್ರಾಸಾದಿಕವೆಂದು ಪ್ರಸಿದ್ಧಿ ಪಡೆದ ಅನೇಕ ಸ್ತೋತ್ರಗಳು ತಂತ್ರಶಾಸ್ತ್ರ ವಿಧಾನಗಳೊಂದಿಗೆ ಕವಚ ಅಥವಾ ಕವಚಸ್ತೋತ್ರಗಳಾಗಿ ಮಾರ್ಪಟ್ಟಿವೆ. ಕೆಲವು ಕವಚಗಳೆಂದೆ ರಚಿತವಾಗಿವೆ. ಇವು ಮಂತ್ರಗಳಷ್ಟೆ ಪ್ರಭಾವಿ ಎಂಬ ನಂಬುಗೆ ಇರುವದರಿಂದ, ಪ್ರಾರಂಭದಲ್ಲಿ ಮಂತ್ರದ ಉಲ್ಲೇಖ, ಅದರ ದೃಷ್ಟಾರನ (ಋಷಿ) ಹೆಸರು, ಛಂದಸ್ಸು, ಶಕ್ತಿ, ಕೀಲಕ ಅಂದರೆ ಬಲಸಂವರ್ಧಕ ಅಭಿಮಾನಿದೇವತೆಗಳ ಹೆಸರು, ಮಂತ್ರೋಕ್ತ ದೇವತೆಯ ಧ್ಯಾನ ಮೊದಲಾದವುಗಳ ನಿರ್ದೇಶವಿರುತ್ತದೆ. ನಂತರ ಆರಾಧಕನ ಅಂಗಾಂಗಗಳಲ್ಲಿ ಮಂತ್ರೋಕ್ತದೇವತೆ ನೆಲೆಸಿ ಅವನನ್ನು ವಿವಿಧ ಆಪತ್ತುಗಳಿಂದ ರಕ್ಷಿಸಲೆಂಬ ಪ್ರಾರ್ಥನೆ ಮತ್ತು ಫಲಶ್ರುತಿಯೊಂದಿಗೆ ಸ್ತೋತ್ರ ಕೊನೆಗೊಳ್ಳುತ್ತದೆ. ಉದಾಹರಣೆಗಾಗಿ ಲಕ್ಷ್ಮೀಹೃದಯ. ನಾರಾಯಣವರ್ಮ (ಕವಚ), ಅತ್ಯಂತ ಲೋಕಪ್ರಿಯವಿರುವ ರಾಮರಕ್ಷಾ, (ಇದಕ್ಕೆ ವಜ್ರಪಂಜರ, ಕವಚ ಎಂಬ ಹೆಸರುಗಳೂ ಉಂಟು) ಮೊದಲಾದವನ್ನು ನೋಡಬಹುದು.

---

9. ಕ. ಸಾ. ಪ. ಸಂ. ೨೪/೪, ಪು. ii
10. ಬೃ. ಕೋ. ಮುನ್ನುಡಿ, ಪು. ೬೪

ವಡ್ಡಾರಾಧನ-ಕವಚದ ಉದ್ದೇಶವೇ ಬೇರೆ. ಸ್ವಯಂಪ್ರೇರಣೆಯಿಂದ ಸಲ್ಲೇಖನವ್ರತವನ್ನು ತೊಟ್ಟು, ಜಿನಧ್ಯಾನದೊಂದಿಗೆ ಪಾರ್ಥಿವ ದೇಹವನ್ನು ತ್ಯಜಿಸಿ, ಸದ್ಗತಿಯನ್ನು ಪಡೆಯಬೇಕೆಂಬ ಆರಾಧಕನಿಗೆ ವೈಧಿಕಧರ್ಮಪರ ಕವಚಸ್ತೋತ್ರಗಳ ಬಗೆಯ ದೇಹರಕ್ಷಣೆಯ ಅಗತ್ಯವಿಲ್ಲ. ಬದಲಾಗಿ ದೇಹತ್ಯಾಗಕ್ಕೆ ನಿಮಿತ್ತವಾಗಿರುವ ಉಪಸರ್ಗ-ಪರೀಷಹಗಳಿಂದ ಉಂಟಾಗುವ ದೈಹಿಕ ಮಾನಸಿಕ ಯಾತನೆಗಳನ್ನು ಸಮಾಧಾನದಿಂದ ಸೈರಿಸುವ ಸಾಮರ್ಥ್ಯ ಅವನಿಗೆ ಬೇಕು. ಜಿನಸ್ಮರಣೆಯೊಂದಿಗೆ ಅನ್ಯಸಹಾಯವಿಲ್ಲದೆ ಈ ಬಗೆಯ ಯಾತನೆಗಳನ್ನು ಸಹಿಸಿ ಸದ್ಗತಿಯನ್ನು ಹೊಂದಿದ ಪುರಾಣಪುರುಷರ ಕಥಾರೂಪಿ ಕವಚವು ಆರಾಧಕನಿಗೆ ತಕ್ಕ ರಕ್ಷಣೆಯನ್ನು ಒದಗಿಸುವದೆಂಬ ಭಾವನೆ ವಿಶ್ವಾಸಗಳು ಈ ಕಥೆಗಳ ಬುಡದಲ್ಲಿವೆ. ಇಲ್ಲವಾದರೆ ಭಗವತೀ ಆರಾಧನಾಕಾರ ಇದಕ್ಕೆ ಕವಚಾಧಿಕಾರ ಎಂದು ಹೆಸರಿತ್ತು ಕವಚದ ಅಂಗವಾಗಿ ಈ ಕಥೆಗಳನ್ನು ಉಲ್ಲೇಖಿಸಿದ ಇಂಗಿತವೇನು? ಆಗಲೆ ಪ್ರಚಾರದಲ್ಲಿದ್ದ ಈ ಕಥೆಗಳಲ್ಲಿ ಪ್ರಾಸಾದಿಕ ಗುಣವಿದೆಂಬ ಭಾವನೆ ಉಪದೇಶಕ—ಆರಾಧಕ—ಇಬ್ಬರಲ್ಲಿಯೂ ಬೇರೂರಿರಬೇಕು. ಅಂತೆಯೆ ಭಗವತೀ ಆರಾಧನಾಕಾರ ಕವಚವೆಂದು ಗಾಥೆಗಳ ರೂಪದಲ್ಲಿ ಇವುಗಳನ್ನು ತನ್ನ ಗ್ರಂಥದಲ್ಲಿ ಅಳವಡಿಸಿಕೊಂಡಿರಬೇಕು, ಎಂದು ಭಾವಿಸುವದು ಹೆಚ್ಚು ಸೂಕ್ತವಾಗುವದು.

ವಡ್ಡಾರಾಧನ ಕವಚ-ಕಥೆಗಳನ್ನು ಮಹಾಭಾರತದಲ್ಲಿ ಬೃಹದಶ್ವಮುನಿಯು ಯುಧಿಷ್ಠಿರನಿಗೆ ಹೇಳಿದ 'ನಳ-ದಮಯಂತಿ' ಕಥೆಗೆ ಹೋಲಿಸಬಹುದು. ವನವಾಸದಲ್ಲಿರುವಾಗ ಯುಧಿಷ್ಠಿರ ಬೃಹದಶ್ವನೆದುರು ತನ್ನಷ್ಟು ದುರ್ದೈವಿಗಳು ಅನ್ಯರಾರೂ ಇಲ್ಲವೆಂದು ಗೋಳಿಡುವನು. ಬೃಹದಶ್ವ-"ಹೀಗೆ ತಿಳಿಯಬೇಡ; ಅನೇಕರು ನಿನಗಿಂತ ಹೆಚ್ಚು ವಿಪತ್ತುಗಳನ್ನು ಅನುಭೋಗಿಸಿ ಕೊನೆಗೆ ಸುದಿನಗಳನ್ನು ಕಂಡಿರುವರು; ನೀನಾದರೂ ಕಾಣುವಿ", ಎಂದು ಸಂತೈಸಿ, ಯುಧಿಷ್ಠಿರನಂತೆಯೆ ಜೂಜಿನಲ್ಲಿ ಸರ್ವಸ್ವವನ್ನು ಕಳಕೊಂಡು, ಅರಣ್ಯದಲ್ಲಿ ಹೆಂಡತಿಯಿಂದಗಲಿ, ಅನೇಕ ಬಗೆಯ ಕಷ್ಟಕೋಟಲೆಗಳನ್ನು ಎದುರಿಸಿ, ಕೊನೆಗೆ ಸುದಿನಗಳನ್ನು ಕಂಡ ನಳ ಮತ್ತು ಆತನ ಹೆಂಡತಿ ದಮಯಂತಿಯ ಕಥೆಯನ್ನು ಹೇಳಿ,—'ನೀನಾದರೊ ಹೆಂಡತಿ, ತಮ್ಮಂದಿರೊಡನೆ ಇರುವಿ; ಕರೆದಾಗ ಬರುವ ಶ್ರೀಕೃಷ್ಣ ನಿನ್ನ ನೆರವಿಗಿರುವನು', ಎಂದು ಯುಧಿಷ್ಠಿರನಲ್ಲಿ ಆಶೆವಿಶ್ವಾಸಗಳನ್ನು ಹುಟ್ಟಿಸುವನು. ಜೊತೆಗೆ ತಾನು ವಿವರಿಸಿದ ಕಥೆಯನ್ನು ಭಕ್ತಿವಿಶ್ವಾಸಗಳಿಂದ ಕೇಳಿದವರಿಗೆ ಕಷ್ಟಗಳು ಅಳಿದು ಪುತ್ರ, ಪೌತ್ರ, ಅನೇಕ ಬಗೆಯ ಸುಖಸಂಪತ್ತು ಲಭಿಸುವವೆಂದು ಅದರ ಪ್ರಾಸಾದಿಕ ಗುಣವನ್ನು ನಿರ್ದೇಶಿಸುವನು. ಇದಾದರೂ ಬೃಹದಶ್ವನು ಯುಧಿಷ್ಠಿರನಿಗೆ ತೊಡಿಸಿದ ಒಂದು ಬಗೆಯ ಕವಚವಲ್ಲದೆ ಬೇರೊಂದಾಗದು.

ವಡ್ಡಾರಾಧನೆಯ ಕವಚ ಇಂಥದು. ಕವಚವು ಯೋಧನನ್ನು ಶತ್ರುಗಳಿಂದ ರಕ್ಷಿಸುವಂತೆ, ಕಥಾರೂಪಿ ಕವಚವು ಕರ್ಮರೂಪಿ ಶತ್ರುವಿನೊಡನೆ ಹೋರಾಡುತ್ತಿ

ರುವ ಆರಾಧಕನನ್ನು ರಕ್ಷಿಸುವದೆಂಬ ಪೀಠಿಕೆಯಿಂದ ಪ್ರಾರಂಭವಾಗಿ—'ಪುರಾಣ ಪ್ರಸಿದ್ಧರಿರುವ ಈ ಕಥಾಪುರುಷರು ಜಿನಧ್ಯಾನಮಗ್ನರಾಗಿ, ಅನ್ಯರ ಸಹಾಯವಿಲ್ಲದೆ, ಉಪಸರ್ಗ ಪರೀಷಹಗಳನ್ನು ಜಯಿಸಿ, ಆತ್ಮಕಲ್ಯಾಣವನ್ನು ಸಾಧಿಸಿದರು; ನಿನಗಾದರೊ ಇಲ್ಲಿ ಜ್ಞಾನಿಗಳಾದ ಆಚಾರ್ಯರು ಧೈರ್ಯಕೊಡುತ್ತಿರುವರು; ಎದೆಗೆಡಬೇಡ; ಆರಾಧನೆಯಿಂದ ಹಿಂಜರಿಯಬೇಡ; ಜಿನಭಗವಾನನ ವಚನಗಳನ್ನು ಧ್ಯಾನಿಸು; ಅವು ಅಮೃತಸಮಾನವಿವೆ; ಮೋಕ್ಷಪ್ರದವಿವೆ', ಎಂಬ ಉಪದೇಶದೊಡನೆ ಕೊನೆಗೊಳ್ಳುತ್ತದೆ, ಭಗವತೀ ಆರಾಧನೆಯಲ್ಲಿಯ ಕವಚನಿರೂಪಣೆ.[11]

ವಡ್ಡಾರಾಧನೆಯ ಈ ಕಥೆಗಳಿಗೆ ಕವಚವೆಂದಿರುವುದನ್ನು ಈ ದೃಷ್ಟಿಯಿಂದ ನೋಡಬಹುದಲ್ಲದೆ, ಜೈನಸಾಹಿತ್ಯದಲ್ಲಿಯ ಕವಚಗ್ರಂಥಗಳ ಸ್ವರೂಪ ತಿಳಿಯದು, ಸ್ವರೂಪದಲ್ಲಿ ವಡ್ಡಾರಾಧನೆಯ ಕವಚ ವೈದಿಕಧರ್ಮಪರ ಕವಚಗಳಿಂದ ಭಿನ್ನವಿದೆ, ಇವೇ ಮೊದಲಾದ ಕಾರಣಗಳಿಂದ ಸರಿಯಾಗಿ ಹೊಂದಿಕೊಳ್ಳುವ, ಪ್ರಾಚೀನತಮ ಪ್ರತಿಯಲ್ಲಿರುವ 'ವೊಡ್ಡಾರಾಧನೆಯ ಕವಚವು' ಪಾಠವನ್ನು ತ್ಯಜಿಸುವುದು ಯುಕ್ತವಾಗದು.

ಆಕರಗಳ ಸಮಸ್ಯೆ—ವಡ್ಡಾರಾಧನೆಗೆ ಹರಿಷೇಣನ ಬೃಹತ್ ಕಥಾಕೋಶ ಆಕರವಿರಬೇಕೆಂಬ ಅಭಿಪ್ರಾಯವಿದೆ.[12] ಇದು ಸರಿಯೆನಿಸದು. ಕಥಾಶರೀರ, ಕಥಾಪುರುಷರ ಹೆಸರು, ಇತ್ಯಾದಿ ಒಂದೇ ಆಗಿದ್ದರೂ ವಡ್ಡಾರಾಧನೆಯ ಕಥೆಗಳು ಹೆಚ್ಚು ವಿಸ್ತಾರವಾಗಿವೆ. ಎರಡೂ ಗ್ರಂಥಗಳನ್ನು ಎದುರಿಟ್ಟುಕೊಂಡು ನೋಡಿದಾಗ ಇನ್ನೂ ಹಲವು ವ್ಯತ್ಯಾಸಗಳು ಕಂಡುಬರುವವು. ಅಲ್ಲದೆ ಲಭ್ಯವಿರುವ ಅಂಶ-ಆಧಾರಗಳನ್ನು ಗಮನಿಸಿ ಕನ್ನಡ ವಿದ್ವಾಂಸರು ವಡ್ಡಾರಾಧನೆಯ ಕಾಲವನ್ನು ಕ್ರಿ.ಸು. ೯೨೦ ಎಂದು ಊಹಿಸಿರುವರು.[13] ಹರಿಷೇಣನ ಗ್ರಂಥ ಹುಟ್ಟಿರುವದು ೯೩೨ರಲ್ಲಿ. ಒಂದೊಮ್ಮೆ ವಡ್ಡಾರಾಧನೆಗೆ ಹರಿಷೇಣನ ಈ ಗ್ರಂಥ ಆಕರವಾಗಿದ್ದರೆ ಅದರ ಕಾಲ ಕ್ರಿ. ೯೩೨ ನಂತರ ಎಂದು ಭಾವಿಸಬೇಕಾಗುವದು. ಬಹುಶಃ ಎರಡಕ್ಕೂ ಬೇರೊಂದು ಭಗವತೀ ಆರಾಧನೆಯ ಕಥೆಗಳನ್ನು ಒಳಗೊಂಡಿರುವ ಗ್ರಂಥವು ಆಕರವಿರಬೇಕೆಂಬ ಅಭಿಪ್ರಾಯವು ಸಮಂಜಸವೆನಿಸುವದು.[14] ಜೊತೆಗೆ ಶ್ರೀಚಂದ್ರನ ಕಥಾಕೋಶವು ಹರಿಷೇಣನ ಕಥಾಕೋಶ ಮತ್ತು ಇತರ ಕೆಲವು ಆಕರಗ್ರಂಥಗಳನ್ನು ಆಧರಿಸಿದೆಂಬ ಅಭಿಪ್ರಾಯವಿದೆ.[15] ಹೀಗಿದ್ದರೆ ಆತನ ಇತರ ಆಕರಗಳಲ್ಲಿ ಒಂದು ವಡ್ಡಾರಾಧನೆಗೂ

---

11. ಈ ಉಪದೇಶಕ್ಕೆ ಸಂಬಂಧಿಸಿದ ಭಗವತೀ ಆರಾಧನೆಯಲ್ಲಿಯ ೨ಗಾಥೆಗಳು ವಡ್ಡಾರಾಧನೆಯ 'ಘ' ಪ್ರತಿಯಲ್ಲಿದ್ದು ಗ್ರಂಥದ ಕೊನೆಗೆ ಬಂದಿವೆ. (ವಡ್ಡಾ. ಪು. ೧೯೪).

12. ಸಂ.ಕ.ಸಾ.ಚ. ಪು. ೧೫.

13. ಕ.ಸಾ.ಚ. ಪು. ೬೭.

14. ಕ.ಸಾ.ಚ. ಪು. ೭೭; ಬೃ.ಕೋ. ಮುನ್ನುಡಿ, ಪು. ೬೬,

15. ಬೃ.ಕೋ. ಮುನ್ನುಡಿ, ಪು. ೯೨,

ಆಕರವಿರಬೇಕೆಂದು ತೋರುತ್ತದೆ. ವಡ್ಡಾರಾಧನೆಯ ಕಥೆಗಳಿಗೂ ಶ್ರೀಚಂದ್ರನ ಕಥೆಗಳಿಗೂ ಭಗವತೀ ಆರಾಧನೆಯ ಗಾಥೆಗಳು ಸೂಚನಾಪದ್ಯಗಳಾಗಿ ಮತ್ತು ಆತನ ಗ್ರಂಥದಲ್ಲಿ ೧೯ ಕಥೆಗಳನಂತರ 'ಇದಿಷ್ಟು ಕವಚಾಧಿಕಾರ (ಕವಚಾಹಿಯಾರೋಯಂ)' ಎಂದು ಬಂದಿರುವದು ಈ ಊಹೆಗೆ ಪೋಷಕವಿದೆ. ಇದಿನ್ನೊಂದು ಪೋಷಕ ಅಂಶ—ಚಾಣಕ್ಯಮುನಿಯ ಕಥೆಯಲ್ಲಿ, ನಂದವಂಶದ ನಾಶಕ್ಕಾಗಿ ಪಣತೊಟ್ಟ ಸುಬಂಧು ಅದಕ್ಕೆ ತಕ್ಕ ವ್ಯಕ್ತಿಯನ್ನು ಕಂಡುಹಿಡಿಯಲು ಪಂಡಿತರ ಸಭಾಗೃಹದಲ್ಲಿ ವಡ್ಡಾರಾಧನೆಯ ಮೇರೆಗೆ—

> ಶಕ್ಯಾಶಕ್ತಿಸಹಸ್ರೇಣ ನೀತಿಶಾಸ್ತ್ರವಿಶಾರದಾಃ।
> ವ್ಯವಸಾಯದ್ವಿತೀಯೇನ ಕೃತ್ಸ್ನಾ ಜೇತುಂ ವಸುಂಧರಾಂ ॥

—ಶ್ಲೋಕವನ್ನು ಬರೆಯಿಸುವನು. ಇದನ್ನೋದಿದ ಚಾಣಕ್ಯ ನೀತಿಶಾಸ್ತ್ರಕ್ಕೆ ಸಮ್ಮತವಿರದ ಈ ಶ್ಲೋಕದಲ್ಲಿಯ 'ಶಕ್ಯಾಶಕ್ತಿ ಸಹಸ್ರೇಣ' ಪದಗಳನ್ನು ಅಳಿಸಿ ಆ ಸ್ಥಳದಲ್ಲಿ 'ಶಕ್ಯಾಹೇಕಶರೀರೇಣ' ಪದಗಳನ್ನು ಸೇರಿಸುವನು. ಶ್ರೀಚಂದ್ರನ ಕಥಾಕೋಶದಲ್ಲಿ ಇದೇ ಶ್ಲೋಕವಿದೆ.[16] ಹರಿಷೇಣನ ಗ್ರಂಥದಲ್ಲಿ ಇದರ ಬದಲು—

> ನರೇಣೈಕಶರೀರೇಣ ನಯಶಾಸ್ತ್ರಯುತೇನ ಚ।
> ವ್ಯವಸಾಯೇನ ಯುಕ್ತೇನ ಜೇತುಂ ಶಕ್ಯಾ ವಸುಂಧರಾ ॥[17]

—ಶ್ಲೋಕವಿದೆ. ಒಂದೊಮ್ಮೆ ಹರಿಷೇಣನ ಕೃತಿಗೂ ವಡ್ಡಾರಾಧನೆಗೂ ಇದ್ದಿರಬಹುದಾದ ಆಕರ ಒಂದೇ ಆಗಿದ್ದರೆ ವಡ್ಡಾರಾಧನೆಯಲ್ಲೂ ಇದೇ ಶ್ಲೋಕವಿರುತ್ತಿತ್ತು.

ಗ್ರಂಥಕರ್ತೃತ್ವ—ವಡ್ಡಾರಾಧನೆಯ ಕರ್ತ ಶಿವಕೊಟ್ಯಾಚಾರ್ಯನೆಂದು ಭಾವಿಸಲಾಗಿದೆ. ಇವನಾರೊ ತಿಳಿಯದು. ಭಗವತೀ ಆರಾಧನೆಯ ಕರ್ತ ಪಾಣಿ-ತಲ-ಭೋಜಿ (ಬೋಗಸೆಯಲ್ಲಿ ಹಾಕಿಸಿಕೊಂಡು ಉಣ್ಣುವವ) ಶಿವಾರ್ಯನೆಂದಿದೆ. ಆದಿಪುರಾಣಕಾರ ಜಿನಸೇನ—

> ಶೀತೀಭೂತಂ ಜಗದ್ಯಸ್ಯ ವಾಚಾऽऽರಾಧ್ಯ ಚತುಷ್ಟಯಂ।
> ಮೋಕ್ಷಮಾರ್ಗಂ ಸಪಾಯನ್ನಃ ಶಿವಕೋಟಿಮುನೀಶ್ವರಃ ॥

—ಮೋಕ್ಷದಾಯಕ ಚತುರ್ವಿಧ (ದರ್ಶನ, ಜ್ಞಾನ, ಚರಿತ್ರ, ತಪ) ಆರಾಧನೆಯಿಂದ ಲೋಕಕ್ಕೆ ತಂಪನ್ನು ತಂದ ಶಿವಕೋಟಿಯು ನಮ್ಮನ್ನು ರಕ್ಷಿಸಲಿ, ಎಂದು ಸ್ತುತಿಸಿರುವುದರಿಂದ,[18] ಈತ ಶಿವಕೋಟಿಯೆಂದು ಸಹ ಪ್ರಸಿದ್ಧನಿರುವದು ವ್ಯಕ್ತವಾಗುವದು. ದೇವಚಂದ್ರನ ರಾಜಾವಳಿ ಕಥೆಯಲ್ಲಿ ಮತ್ತು ಇತರತ್ರ ಸಮಂತಭದ್ರನ ಶಿಷ್ಯನೆಂದು

---

16. ವಡ್ಡಾ. ಪು. ೧ಲಳ; ಬೃ.ಕೋ. ಟಿಪ್ಪಣಿ, ಪು. ೩೯೩.
17. ಬೃ. ಕೋ. ಪು. ೩೩೭.
18. ಮ. ಪು. ೧–೪೯.

ಒಬ್ಬ ಶಿವಕೋಟಿಯ ಉಲ್ಲೇಖವಿದೆ.[19] ಪ್ರಭಾಚಂದ್ರ ತನ್ನ ಕಥಾಕೋಶದಲ್ಲಿ ಈತನೇ ಭಗವತೀ ಆರಾಧನಾಕಾರನೆಂದಿರುವನು.[20] ಇದು ಕೆಲವರಿಗೆ ಒಪ್ಪಿತವಿಲ್ಲ. ಆದರೆ ಭಗವತೀ ಆರಾಧನಾಕಾರ ಶಿವಾರ್ಯ ಶಿವಕೋಟಿಯೆಂದೂ ಪ್ರಸಿದ್ಧನಿದ್ದ; ಜಿನಸೇನ ಆತನನ್ನು ಸ್ತುತಿಸಿರುವದರಿಂದ ಜಿನಸೇನನಿಗಿಂತ ಪೂರ್ವಿಕ ಅಂದರೆ ಕ್ರಿ. ೭೬೪–೮೪೩ ಕ್ಕಿಂತ ಮೊದಲಿನವ ಎಂಬಲ್ಲಿ ಭಿನ್ನಾಭಿಪ್ರಾಯವಿಲ್ಲ.

> ವಡ್ಡಾರಾಧನೆಯ 'ಈ ಪೇೞ್ದ ಪತ್ತೊಂಬತ್ತು ಕಥೆಗಳಂ ಶಿವಕೋಟ್ಯಾಚಾರರ್ ಪೇೞ್ದ ವಡ್ಡಾರಾಧನೆಯ ಕವಚವು'

—ಸಮಾಪ್ತಿವಾಕ್ಯವನ್ನು 'ಈ ಪೇೞ್ದ ಪತ್ತೊಂಬತ್ತು ಕಥೆಗಳಂ' ಮತ್ತು ಶಿವಕೋಟ್ಯಾಚಾರರ್ ಪೇೞ್ದ ವಡ್ಡಾರಾಧನೆಯ ಕವಚವು' ಎಂದು ಎರಡು ವಾಕ್ಯಗಳಲ್ಲಿ ವಿಂಗಡಿಸಿ, ಕಥೆಗಳನ್ನು ಹೇಳಿದವ ಒಬ್ಬ, ಆತನಾರೊ ತಿಳಿಯದು, ವಡ್ಡಾರಾಧನೆಯ (ಭಗವತೀ ಆರಾಧನೆಯ) ಕವಚವನ್ನು ಹೇಳಿದವ ಶಿವಕೋಟಿ; ಇಬ್ಬರೂ ಭಿನ್ನ ವ್ಯಕ್ತಿಗಳು, ಎಂಬ ಅಭಿಪ್ರಾಯವಿದೆ.[21] ವಡ್ಡಾರಾಧನೆಯ ಒಂದು ಹಸ್ತಪ್ರತಿಯಲ್ಲಿ ಶಿವಕೋಟಿ ಎಂಬುದನ್ನು ರೇವಾಕೋಟಿ ಎಂದು ಸಹ ಓದಬಹುದಾಗಿದೆ. ಹೀಗೆ ಓದಿರುವದೂ ಉಂಟು. ಆದರೆ ಇತರ ಹಸ್ತಪ್ರತಿಗಳಲ್ಲಿ ಶಿವಕೋಟಿಯೆಂದು ಸ್ಪಷ್ಟವಾಗಿರುವದರಿಂದ ಈ ಚರ್ಚೆಯನ್ನು ಬೆಳೆಸುವ ಅಗತ್ಯವಿಲ್ಲ. ಸಮಾಪ್ತಿವಾಕ್ಯವನ್ನು 'ಇಲ್ಲಿ ಹೇಳಿದ ೧೯ ಕಥೆಗಳು ಶಿವಕೊಟ್ಯಾಚಾರ್ಯರು ಹೇಳಿದ ವಡ್ಡಾರಾಧನೆಯ ಕವಚರೂಪವಾಗಿವೆ', ಎಂದು ಅರ್ಥವಿಸಿ, ಭಗವತೀ ಆರಾಧನಕಾರ ಶಿವಕೋಟಿ, ಸಮಂತಭದ್ರನ ಶಿಷ್ಯ ಶಿವಕೋಟಿ—ಇವರಿಂದ ಭಿನ್ನನಿರುವ ಮೂರನೆಯ ಶಿವಕೋಟಿಯನ್ನು ಕಲ್ಪಿಸಿ, ಬೇರೆ ಆಧಾರಗಳು ದೊರೆವತನಕ ಈ ಮೂರನೆಯವನೇ ವಡ್ಡಾರಾಧನೆಯ ಕರ್ತನೆಂದು ಗ್ರಹಿಸಬಹುದೆಂಬ ಸೂಚನೆ ಇದೆ.[22] ಇದಾದರೂ ಸರಿಯೆನಿಸದು. ವಡ್ಡಾರಾಧನೆ ಸಮಗ್ರ ಭಗವತೀ ಆರಾಧನೆಗಿರುವ ಇನ್ನೊಂದು ಹೆಸರು; ಆ ಗ್ರಂಥ ಮತ್ತು ಅದರಲ್ಲಿರುವ ಕವಚಗಾಥೆಗಳ ಕರ್ತ ಶಿವಕೋಟಿ; ಆತ ಸಮಂತಭದ್ರನ ಶಿಷ್ಯನಿರಬಹುದು ಇರಲಿಕ್ಕಿಲ್ಲ; ಸೂಚನಾರೂಪದಲ್ಲಿರುವ ಆತನ ಕವಚಗಾಥೆಗಳನ್ನು ಅನ್ಯನೊಬ್ಬನು ಕನ್ನಡದಲ್ಲಿ ವಿಸ್ತರಿಸಿ, ಹರಿಷೇಣಾದಿಗಳ ಕಥಾಕೋಶಗಳ ಮಾದರಿಯಲ್ಲಿ, ಪೂರ್ಣ ಕಥೆಗಳ ರೂಪದಲ್ಲಿ ನಿರೂಪಿಸಿ ಅದಕ್ಕೆ 'ವಡ್ಡಾರಾಧನೆಯ ಕವಚ' ಎಂದು ಹೆಸರು ಕೊಟ್ಟಿರಬೇಕೆಂಬ ಹಿನ್ನೆಲೆಯೊಂದಿಗೆ ಈ ಸಮಾಪ್ತಿ ವಾಕ್ಯವನ್ನು ಅರ್ಥವಿಸುವದು ಸೂಕ್ತ ಮತ್ತು ಸಮಂಜಸ ಮಾರ್ಗವೆನಿಸುವದು. ಇಲ್ಲವಾದರೆ ಅದರಲ್ಲಿ 'ಈ ಪೇೞ್ದಪತ್ತೊಂಬತ್ತು ಕಥೆಗಳಂ',

19. ಕ.ಚ. ಸಂ. ೧, ಪು. ೨.
20. ಬೃ.ಕೋ. ಮುನ್ನುಡಿ, ಪು. ೫೩.
21. ಬೃ.ಕೋ. ಮುನ್ನುಡಿ, ಪು. ೬೯.
22. ಕ.ಸಾ.ಚ. ಪು. ೭೧.

'ಶಿವಕೋಟ್ಯಾಚಾರ್ಯರ್ ಪೇೞ್ದ ವಡ್ಡಾರಾಧನೆಯ ಕವಚವು' ಎಂದು ಎರಡು ಸಲ 'ಪೇೞ್ದ' ಪದವನ್ನು ಪ್ರಯೋಗಿಸಿರುವ ಉದ್ದೇಶ ತಿಳಿಯದಾಗುವದು. ಒಂದೊಮ್ಮೆ ಮೇಲ್ಕಾಣಿಸಿದ ಸೂಚನೆಯ ಮೇರೆಗೆ ಮೂರನೆಯ ಶಿವಕೋಟಿಯೆ ವಡ್ಡಾರಾಧನೆಯ ಕರ್ತನಿದ್ದರೆ ಸಮಾಪ್ತಿವಾಕ್ಯ 'ಈ ಪತ್ತೊಂಬತ್ತು ಕಥೆಗಳಂ ಶಿವಕೋಟ್ಯಾಚಾರ್ಯರ್ ಪೇೞ್ದ ವಡ್ಡಾರಾಧನೆಯ ಕವಚವು', ಎಂದಿರುತ್ತಿತ್ತು.

ರಚನಾಕಾಲ—ಶಾಂತಿನಾಥನ ಸುಕುಮಾರಚರಿತ್ರೆಯಲ್ಲಿ (ಕ್ರಿ. ೧೦೭೦) ವಡ್ಡಾರಾಧನೆಯಿಂದ ಎತ್ತಿಕೊಂಡ ಭಾಗಗಳಿರುವದರಿಂದ ವಡ್ಡಾರಾಧನೆಯು ಇದಕ್ಕಿಂತ ಮೊದಲು ರಚಿತವಾಗಿರುವದು ಸ್ಪಷ್ಟವಿದೆ. ಕೆಳಗಿನ ಗಡುವನ್ನು ಕ್ರಿ. ೬ ನೆಯ ಶತಮಾನಕ್ಕೆ ಎಳೆದಿರುವದುಂಟು. ಜಿನಸೇನ-ಗುಣಭದ್ರರ ಮಹಾಪುರಾಣ (ಆದಿ, ಉತ್ತರ)ದಲ್ಲಿ ಗುಣಭದ್ರಕೃತವಿರುವ 'ಆದೌಜನ್ಮಜರಾರೋಗಾ'—ಶ್ಲೋಕ ವಡ್ಡಾರಾಧನೆಯಲ್ಲಿ ಉದಾಹೃತವಾಗಿದೆ.[23] ಗುಣಭದ್ರನು ಮಹಾಪುರಾಣದಲ್ಲಿಯ ತನ್ನ ಭಾಗವನ್ನು ಕ್ರಿ. ೮೯೮ರಲ್ಲಿ ಮುಗಿಸಿದನು. ಆದ್ದರಿಂದ ವಡ್ಡಾರಾಧನೆಯ ಕೆಳಗಣ ಗಡುವನ್ನು ಇದಕ್ಕೂ ಕೆಳಗೆ ಸರಿಸುವಂತಿಲ್ಲ. ಈ ಅಂಶವನ್ನೂ ವಡ್ಡಾರಾಧನೆಯಲ್ಲಿ ಕಂಡು ಬರುವ ಪ್ರಾಚೀನ ಶಬ್ದಗಳನ್ನೂ, ವ್ಯಾಕರಣ ಪ್ರಕ್ರಿಯೆಗಳನ್ನೂ, ಶೈಲಿಯನ್ನೂ ಗಮನಿಸಿ ಇದರ ಕಾಲವನ್ನು ಗುಣಭದ್ರನ ಸಮೀಪ ಅಂದರೆ ಕ್ರಿ. ೯೨೦ ಕ್ಕೆ ತಂದು ನಿಲ್ಲಿಸಲಾಗಿದೆ.[24]

ಗುಣಭದ್ರನ ಉಪರೋಕ್ತ ಶ್ಲೋಕವಲ್ಲದೆ 'ಭೋಗಸ್ತೃಷ್ಣಾಗ್ನಿಸಂವೃದ್ಧ್ಯೈ' ಎಂಬ ಇನ್ನೂ ಒಂದು ಶ್ಲೋಕ ವಡ್ಡಾರಾಧನೆಯಲ್ಲಿ ಉದಾಹೃತವಾಗಿದೆ.[25] ಆದರೆ ಗುಣಭದ್ರ ಪ್ರಾಚೀನರಿಂದ ಆಗಾಗ ಶ್ಲೋಕಗಳನ್ನು ಅನುವಾದಿಸುತ್ತಿದ್ದ. ಕಥೆಗೆ ನಿಕಟ ಸಂಬಂಧವಿರದ ಶ್ಲೋಕಾದಿಗಳನ್ನು ಅನ್ಯರು ಸಹ ಹಿಂದಿನಿಂದ ಸೇರಿಸಿರಬಹುದಾಗಿದೆ, ಎಂಬ ಆಕ್ಷೇಪಣೆಗಳಿವೆ. ಗುಣಭದ್ರನ ಈ ಶ್ಲೋಕಗಳು ಸ್ವಕೃತವೊ ಅನುವಾದಿತವೊ ಎಂಬುದು ಅವನ ಕೃತಿಯ ವಿಮರ್ಶೆಗೆ ಸಂಬಂಧಿಸಿದೆ. ಇಲ್ಲಿ ಗಮನಿಸಬೇಕಾದುದು ಅವು ವ್ಯತ್ಯಾಸವಿಲ್ಲದೆ ಆತನ ಗ್ರಂಥದಲ್ಲಿರುವಂತೆಯೆ ವಡ್ಡಾರಾಧನೆಯಲ್ಲಿ ಉದಾಹೃತವಾಗಿವೆಂಬುದು. ಯಾವುದೊಂದು ಗ್ರಂಥದಲ್ಲಿ ಅನ್ಯಗ್ರಂಥಗಳಿಂದ ಉದಾಹರಿಸಿದ ಶ್ಲೋಕ ಮೊದಲಾದವು ಕಥಾಸಂದರ್ಭಕ್ಕೆ ಎಷ್ಟರಮಟ್ಟಿಗೆ ಹೊಂದಿಕೊಳ್ಳುವವೆಂಬುದು ಗ್ರಂಥಕಾರನ ವಿವೇಕಕ್ಕೆ ಸೇರಿದೆ. ಇಲ್ಲಿ ಕೆಲವು ಸಲ ಆತ ತಪ್ಪಬಹುದು. ಹಿಂದಿನವರು ಸಹ ಅವುಗಳನ್ನು ಸೇರಿಸಿರಬಹುದು. ವಡ್ಡಾರಾಧನೆಯ ಮಟ್ಟಿಗೆ ಎರಡೂ ಸಂಭವನೀಯ. ಇಂಥ ಸಂದರ್ಭಗಳಲ್ಲಿ ಗ್ರಂಥಕಾರನಿಂದಲೇ ಅವು

23. ಮ. ಪು. ೪೬–೧೯೭; ವಡ್ಡಾ. ಪು. ೬೮.
24. ಕ.ಸಾ.ಚ. ಪು. ೬೪–೭೦.
25. ಮ. ಪು. ೪೫–೨೦೩; ವಡ್ಡಾ. ಪು. ೧೧೩.

ಸೇರಿಸಲ್ಪಟ್ಟಿರಬೇಕೆಂದು ಭಾವಿಸಲು ಗ್ರಂಥದ ಬೇರೆಬೇರೆ ಹಸ್ತಪ್ರತಿಗಳಲ್ಲಿ ಅವು ಏಕರೂಪದಲ್ಲಿ, ಅದೇ ಸ್ಥಳದಲ್ಲಿ, ಅದೇ ಸಂದರ್ಭದಲ್ಲಿ ಬಂದಿವೆಂಬುದು ಒಂದು ಸ್ವೀಕಾರಾರ್ಹ ಮಾನದಂಡ.[26] ವಡ್ಡಾರಾಧನೆಯಲ್ಲಿ ಉದಾಹೃತವಾದ ಗುಣಭದ್ರನ ಶ್ಲೋಕಗಳಿಗೆ ಈ ಮಾನದಂಡ ೧೦೦% ಅನ್ವಯಿಸುವದರಿಂದ ಗ್ರಂಥಕಾರನೇ ಅವುಗಳನ್ನು ಸೇರಿಸಿರುವನೆಂದು ಭಾವಿಸಬಹುದಾಗಿದೆ.

ಇನ್ನೊಂದು ವಿಚಾರ. ವಡ್ಡಾರಾಧನೆಯಲ್ಲಿ ಧರ್ಮಘೋಷನ ಕಥೆಯಲ್ಲಿ ಧರ್ಮಘೋಷ ಮತ್ತು ಆತನ ತಮ್ಮ ಧರ್ಮಕೀರ್ತಿ ಗುಣೋತ್ತಮ ಭಟಾರರಲ್ಲಿ 'ಪ್ರಥಮಾನುಯೋಗ, ಚರಣಾನುಯೋಗ, ಕರಣಾನುಯೋಗ, ದ್ರವ್ಯಾನುಯೋಗಂಗಳಂ ಕಲ್ತು' ಶಾಸ್ತ್ರಪಾರಂಗತರಾದರೆಂಬ ಮಾತಿದೆ. ಸುಕುಮಾರಸ್ವಾಮಿಯ ಕಥೆಯಲ್ಲಿಯೂ ಇವುಗಳ ಉಲ್ಲೇಖವಿದೆ.[27] ಈ ನಾಲ್ಕು ಅನುಯೋಗಗಳಲ್ಲಿ ಪ್ರಥಮಾನುಯೋಗವು ತ್ರಿಷಷ್ಠಿಶಲಾಕಾಪುರುಷರ ಚರಿತ್ರೆಗಳಿರುವ ರವಿಷೇಣನ ಪದ್ಮಪುರಾಣ (ಕ್ರಿ. ೬೭೮), ಜಿನಸೇನನ ಹರಿವಂಶಪುರಾಣ (ಕ್ರಿ. ೭೮೩), ಜಿನಸೇನ-ಗುಣಭದ್ರರ ಮಹಾಪುರಾಣ (ಕ್ರಿ. ೮೯೮)ಗಳ ಅಧ್ಯಯನಕ್ಕೆ ಸಂಬಂಧಿಸಿದೆ. ದಿಗಂಬರ ಜೈನ ಸಂಪ್ರದಾಯದ ಆಗಮಗ್ರಂಥಗಳೊಡನೆ ಅನುಯೋಗ ಗ್ರಂಥಗಳನ್ನು ಹಿಂದಿನಿಂದ ಸೇರಿಸಿಕೊಳ್ಳಲಾಗಿದೆಂಬ ಅಭಿಪ್ರಾಯವಿದೆ.[28] ಈ ಅಂಶವಾದರೂ ವಡ್ಡಾರಾಧನೆಯು ಜಿನಸೇನ–ಗುಣಭದ್ರರ ಮಹಾಪುರಾಣಕ್ಕಿಂತ ಮೊದಲಿನದಾಗದು ಎನ್ನಲು ಪೂರಕವಾಗಿದೆ. ಆದ್ದರಿಂದ ವಡ್ಡಾರಾಧನೆಯ ಕಾಲವನ್ನು ಗುಣಭದ್ರನನಂತರ, ಶೈಲಿಯ ದೃಷ್ಟಿಯಿಂದ ಅವನ ಸಮೀಪವರ್ತಿಯಾಗಿ ಅಂದರೆ ಕ್ರಿ. ೯೨೦ ಎಂದಿರುವದು ಸ್ವೀಕಾರಾರ್ಹ ಊಹೆ ಎನ್ನಬಹದು.

ಇದಿಷ್ಟು ವಡ್ಡಾರಾಧನೆಯ ವಿಚಾರ. ಕನ್ನಡ ಸಾಹಿತ್ಯಚರಿತ್ರೆಯಲ್ಲಿ ಇದೊಂದು ವೈಶಿಷ್ಟ್ಯಪೂರ್ಣ ಕೃತಿಯೆಂಬುದು ಯಥೋಚಿತವಿದ್ದರೂ ಇದರ ಕರ್ತ ಶಿವಕೋಟಿ ಎಂಬುದರ ಮತ್ತು ಸಮಾಪ್ತಿವಾಕ್ಯದಲ್ಲಿ 'ವಡ್ಡಾರಾಧನೆ' ಎಂದಿಷ್ಟೇ ಇರಿಸಿ ಇದನ್ನೇ ಗ್ರಂಥದ ಹೆಸರಾಗಿ ಸ್ವೀಕರಿಸಿರುವದರ ಸಾಮಂಜಸ್ಯತೆಯ ಪುನರ್ವಿಚಾರ ಅಗತ್ಯವೆನಿಸುವದು.[29]

---

26. ಬೃ.ಕೋ. ಮುನ್ನುಡಿ. ಪು. ೭೦.
27. ವಡ್ಡಾ., ಪು. ೧೦೩, ೬.
28. ಹಿ.ಇಂ.ಲಿ., ಪು. ೪೭೪.
29. ಅನುಬಂಧವನ್ನು ನೋಡಿರಿ.

ಪಂಪರನ್ನರ ವಸ್ತು ವಿಸಂಗತಿಗಳು

ಪಂಪ ಕನ್ನಡ ಕವಿಗಳಿಗೆ ಆದಿಕವಿ, ತನ್ನ 'ವಿಕ್ರಮಾರ್ಜುನ ವಿಜಯ' ಪೂರ್ವಿಕರ ಕೃತಿಗಳನ್ನು 'ಇಕ್ಕಿಮೆಟ್ಟಿದ' ಕೃತಿ ಎಂದು ಹೇಳಿಕೊಂಡಿರುವನು. ರನ್ನ ಕವಿಚಕ್ರವರ್ತಿ. ತನ್ನ ಕೃತಿರತ್ನ 'ಗದಾಯುದ್ಧ' ವನ್ನು 'ಪರೀಕ್ಷಿಪಂಗೆಂಟಿರ್ದೆಯೇ' ಎಂದು ಘೋಷಿಸಿರುವನು. ಇಬ್ಬರೂ ಪ್ರಾಚೀನರು. ಜೈನರು. ಭಾರತೀಯ ಅಂದರೆ ಸಂಸ್ಕೃತ ಪರಂಪರೆಯಲ್ಲಿ ಬೆಳೆದು ಬಂದ ಕನ್ನಡ ಕಾವ್ಯರಚನೆಯಲ್ಲಿ ಪಳಗಿದವರು. ಈ ಕೃತಿಗಳಿಂದ ತಮ್ಮ ಆಶ್ರಯದಾತರನ್ನೂ ಮತ್ತು ತತ್ಕಾಲೀನ ವಿದ್ವಾಂಸರನ್ನೂ ಮೆಚ್ಚಿಸಿ ಮನ್ನಣೆ ಪಡೆದವರು. ಈರ್ವರ ಪ್ರತಿಭೆ ಕವಿತ್ವಸಾಮರ್ಥ್ಯಗಳ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೂ ವಿಸಂಗತವೆಂದು ತೋರುವ ಕೆಲವು ಸಂದರ್ಭಗಳು ಈ ಕೃತಿಗಳಿಗಾಗಿ ಅವರು ಅನುಸರಿಸಿದ ವಸ್ತುರಚನಾತಂತ್ರವನ್ನು ಆಧುನಿಕರ ದೃಷ್ಟಿಯಲ್ಲಿ ಸದೋಷವಾಗಿಸಿವೆ.

ಪಂಪ ತನ್ನ ಆಶ್ರಯದಾತ ಚಾಲುಕ್ಯ ಸಾಮಂತ ಚೂಡಾಮಣಿ ಅರಿಕೇಸರಿಯನ್ನು ವಿಕ್ರಮಾರ್ಜುನನೆಂಬ ಹೆಸರಿನಿಂದ ಅರ್ಜುನನಲ್ಲಿ ಸಂದಿಸಿ ವ್ಯಾಸ ಭಾರತವನ್ನು 'ಸಮಸ್ತಭಾರತ' ಅಥವಾ 'ವಿಕ್ರಮಾರ್ಜುನ ವಿಜಯ' ಎಂದು ಕನ್ನಡಿಸಿರುವನು. ಇದೇ ರೀತಿ ರನ್ನ ತನ್ನ ಆಶ್ರಯದಾತ ಚಾಲುಕ್ಯ ಚಕ್ರವರ್ತಿ ಆಹವಮಲ್ಲ-ತೈಲಪನ ಮಗ ಸತ್ಯಾಶ್ರಯ-ಇರಿವಬೆಡಂಗನನ್ನು ಭೀಮನಲ್ಲಿ ಸಂದಿಸಿ ವ್ಯಾಸ ಭಾರತದ ಗದಾ-ಸೌಪ್ತಿಕ ಪರ್ವಗಳಲ್ಲಿಯ ಭೀಮ ದುರ್ಯೋಧನರ ಗದಾಯುದ್ಧವನ್ನು ವಸ್ತುವಾಗಿಸಿಕೊಂಡಿರುವನು. ಜೊತೆಗೆ 'ಸಿಂಹಾವಲೋಕನ ಕ್ರಮ' ದಿಂದ ಸೂಚ್ಯವಾಗಿ ಭಾರತದ ಮುಖ್ಯಾಂಶಗಳನ್ನು ಓದುಗರ ಗಮನಕ್ಕೆ ತಂದಿರುವನು. ಅರಿಕೇಸರಿ ಇರಿವಬೆಡಂಗ ಇಬ್ಬರೂ ಕ್ಷತ್ರಿಯರು, ವೈದಿಕ ಮತಾವಲಂಬಿಗಳು.

ಮೂಲ ಕಥಾನಕದಲ್ಲಿ ಉಚಿತ ವ್ಯತ್ಯಾಸಗಳನ್ನು ಮಾಡಿಕೊಂಡು ತಮ್ಮ ಕೃತಿಯ ಸೌಂದರ್ಯವನ್ನು ಹೆಚ್ಚಿಸುವ ಅವಕಾಶ ಕವಿಗಳಿಗೆ ಇದ್ದೇ ಇದೆ. ಆದರೆ ಪಂಪ ದ್ರೌಪದಿಯು ಪಂಚಪಾಂಡವರ ಪತ್ನಿ ಎಂಬ ಲೋಕಪ್ರಸಿದ್ಧ ಸಂಗತಿಯನ್ನು ಮರೆಮಾಡಿ ಅವಳನ್ನು ಅರ್ಜುನ ಒಬ್ಬನಿಗೇನೆ ಮದುವೆ ಮಾಡಿಸಿರುವನು; ಪ್ರಾರಂಭದಿಂದ ಕಷ್ಟಕಾರ್ಪಣ್ಯಗಳನ್ನು ಅನುಭವಿಸಿದ ದ್ರೌಪದಿಯನ್ನು ಅರ್ಜುನ ಪಟ್ಟಾಭಿಷೇಕದ ಸಮಯದಲ್ಲಿ ಹಿಂದೆ ಸರಿಸಿ ಸುಭದ್ರೆಗೆ ಪಟ್ಟಮಹಿಷಿಯ ಪದವನ್ನು ಕೊಟ್ಟಿರುವನು; ಅರಿಕೇಸರಿ ಅರ್ಜುನರಲ್ಲಿ ಅಭೇದವನ್ನು ಕಲ್ಪಿಸುವದರೊಂದಿಗೆ ಅರ್ಜುನನ ಸಾಹಸಕೃತಿಗಳಲ್ಲಿ ಅರಿಕೇಸರಿಯ ಸಾಹಸಕೃತಿಗಳನ್ನು ಸೇರಿಸಿ ಅನೌಚಿತ್ಯಕ್ಕೆ ಆಸ್ಪದವಿತ್ತಿರುವನು; ರನ್ನನಾದರೂ ಭೀಮನ ವಿಷಯದಲ್ಲಿ ಹೀಗೆಯೆ ಮಾಡಿರುವನು, ಎಂಬ ಆಕ್ಷೇಪಣೆಗಳಿವೆ.

ಪ್ರಕಟ—ಪ್ರಚ್ಛನ್ನ ತಂತ್ರ

ಸಮಸ್ತ ಅಂದರೆ ಭಾರತದ ಆದಿಪರ್ವದಿಂದ ಕುರುಪಾಂಡವ ಯುದ್ಧ ಮತ್ತು ಯುಧಿಷ್ಠಿರನ (ಪಂಪನ ಕೃತಿಯಲ್ಲಿ ಅರ್ಜುನನ) ಪಟ್ಟಾಭಿಷೇಕದ ವರೆಗಿನ ಕಥೆ ಪಂಪಭಾರತದಲ್ಲಿ ಸಂಗ್ರಹಿತವಾಗಿದೆ. ಅರ್ಜುನನ ಸಾಹಸ, ದ್ರೌಪದಿಯ ಮಾನ ಭಂಗ, ದುರ್ಯೋಧನ ದುಶ್ಶಾಸನರ ಛಲ, ದುಷ್ಟತನ, ಭೀಮನ ಕ್ರೋಧ, ಪ್ರತೀ ಕಾರ, ಇವು ಮಹಾಭಾರತದ ಮುಖ್ಯಾಂಶಗಳು. ಇವುಗಳಿಗೆ ಸುಸಂಬದ್ಧತೆ, ಸಾಮಂಜಸ್ಯತೆ, ಬರಬೇಕಾದರೆ ದ್ರೌಪದಿ ಪಂಚವಲ್ಲಭೆ ಇರಲೇಬೇಕು. ಕ್ಷಣಹೊತ್ತು ಮೂಲ ಭಾರತವನ್ನು ಬದಿಗಿರಿಸಿ ಪಂಪ ಚಿತ್ರಿಸಿದಂದದಲ್ಲಿ ದ್ರೌಪದಿ ಏಕವಲ್ಲಭೆ, ಅರ್ಜುನನ ಹೆಂಡತಿ, ಎಂದು ಬಗೆದರೂ ದುಶ್ಶಾಸನನನ್ನು ವಧಿಸಿದಾಗ ಅವನೇ ವರ್ಣಿಸಿ ದಂತೆ ಭೀಮ ಅವಳನ್ನು 'ತನ್ನ ತಳೋದರಿ' ಎಂದು ನಡೆಸಿಕೊಳ್ಳುವದು ಓದುಗ ರನ್ನು ಗೊಂದಲದಲ್ಲಿ ಕೆಡವುವದು. ಆದರೆ ನಿಜಸ್ಥಿತಿ ಹೀಗಿಲ್ಲ. ಪಂಪನ ದೃಷ್ಟಿಯಲ್ಲೂ ಆಕೆ ಪಂಚವಲ್ಲಭೆ. ಪ್ರಕಟವಾಗಿ ಅವನು ಅರ್ಜುನ ಒಬ್ಬನಿಗೇನೆ ಮದುವೆ ಮಾಡಿಸಿ ದ್ದರೂ ಅದೇ ಸಮಯದಲ್ಲಿ ಆಕೆ ಪಾಂಡವರೈವರ ಪತ್ನಿಯಾದಳೆಂಬದನ್ನು ಪರ್ಯಾಯ ದಿಂದ ಸೂಚಿಸಿರುವನು. ನಂತರ ಈ ತಂತ್ರಕ್ಕೆ ಅನುಗುಣವಾಗಿ ಒಮ್ಮೆ ಅವಳು ಏಕ ವಲ್ಲಭೆ ಇನ್ನೊಮ್ಮೆ ಪಂಚವಲ್ಲಭೆ ಇರಲೇಬೇಕು ಎಂಬುವಂದದಲ್ಲಿ ಕಥೆಯನ್ನು ಮುಂದರಿಸಿ ಓದುಗರೊಡನೆ ಕಣ್ಣುಮುಚ್ಚಾಲೆ ಆಡಿರುವನು. ಇದನ್ನು ಅರಿತುಕೊಂಡಾಗ ದ್ರೌಪದಿಯನ್ನು ಏಕವಲ್ಲಭೆಯನ್ನಾಗಿಸಿ ಪಂಪ ತೊಂದರೆಗೀಡಾಗಿರುವನೆಂಬ ಆಕ್ಷೇಪಣೆ ಇಲ್ಲದಂತಾಗಿ ಅವನ ವಿಷಯದಲ್ಲಿರುವ ಗೌರವಾದರಗಳು ಇಮ್ಮಡಿಸುವವು.

ಕವಿಗಳಿಗೆ ಅರಿಕೇಸರಿಯ ಆಹ್ವಾನ

ಪಂಪ ದ್ರೌಪದಿಯು ಪಂಚವಲ್ಲಭೆ ಎಂಬುದನ್ನು ಸೂಚಿಸಿದ ಬಗೆಯನ್ನು ತಿಳಿಯುವ ಮೊದಲು ಆತನ ಈ ಕೃತಿರಚನೆಗಿರುವ ಹಿನ್ನೆಲೆಯನ್ನಿಷ್ಟು ನೋಡಬೇಕು. ಪಂಪನ ಆಶ್ರಯದಾತ ಅರಿಕೇಸರಿ ಪಂಡಿತ, ರಸಿಕ, ಎಂಬುದನ್ನು 'ಪಂಡಿತರ ಗೋಷ್ಠಿಯೊಳಂ ತಾನೆ ಸೊಗಯಿಸುವದಱಿಂ ವಿಬುಧ ವನಜವನ ಕಳಹಂಸನುಂ' ಎಂದು ಅವನೇ ಬಣ್ಣಿಸಿರುವನು. ರಾಜಾಸ್ಥಾನದ ಪಂಡಿತ ಮಂಡಲಿಯಲ್ಲಿ ವಿವಿಧ ವಿಷಯಗಳ ಚರ್ಚೆ ನಡೆಯುತ್ತಿತ್ತು. ಬಾಣ ಕಾದಂಬರಿಯಲ್ಲಿ ಶೂದ್ರಕ ತನ್ನ ಆಸ್ಥಾನ ಪಂಡಿತರೊಡನೆ 'ಕದಾಚಿದಾಬದ್ಧವಿದಗ್ಧ ಮಂಡಲಃ ಕಾವ್ಯಪ್ರಬಂಧರ ಚನೇನ, ಕದಾಚಿತ್ ಶಾಸ್ತ್ರಾಲಾಪೇನ, ಕದಾಚಿತ್ ಆಖ್ಯಾಯಿಕೇತಿಹಾಸ ಪುರಾಣಾ ಕರ್ಣೇನ....' ಕಾಲಯಾಪನೆ ಮಾಡುತ್ತಿದ್ದನೆಂಬ ವರ್ಣನೆ ಇದೆ. ಅರಿಕೇಸರಿ ಇಂಥವ. ಪ್ರತಿಭಾವಂತ ಕವಿಗಳಿಂದ ಕಾವ್ಯವನ್ನು ಬರೆಯಿಸಿ ಆ ಮೂಲಕ ತಮ್ಮ ಕೀರ್ತಿಯನ್ನು ನೆಲೆಸಬಯಸುವದು ಆಗಿನ ಅರಸರಿಗೆ ಸರ್ವೇಸಾಮಾನ್ಯ. ಅರಿಕೇಸರಿಯಾದರೂ ಇದಕ್ಕೆ ಅಪವಾದನಾಗಲಾರ. ಸಮಸ್ತ ಭಾರತವನ್ನು ಬರೆಯಿಸಿ ಆ ಮೂಲಕ ಆತ

ತನ್ನ ಕೀರ್ತಿಯನ್ನು ನಿಲ್ಲಿಸಬಯಸಿರಬೇಕು.

ಆದರೆ ಮಹಾಭಾರತ ವಸ್ತುಕ ಅಂದರೆ ಯಾವನೊಬ್ಬ ಉದಾತ್ತ ಪುರುಷನ ಸುತ್ತ ಹೆಣೆದ ಲಕ್ಷಣಬದ್ಧ ಕೃತಿಯಲ್ಲ. ಅದು ವರ್ಣಕ, ಕುರುಪಾಂಡವರ ಇತಿಹಾಸ. ವಿಶ್ವದ ಎಲ್ಲ ವಿಷಯಗಳನ್ನು ಒಳಗೊಂಡಿದೆ. ಒಂದೊಂದು ಸಂದರ್ಭದಲ್ಲಿ ಒಬ್ಬೊಬ್ಬನು ಪ್ರಮುಖ ಪಾತ್ರವನ್ನು ವಹಿಸಿರುವನು. ಶ್ರೀಕೃಷ್ಣ ಅದರ ಸೂತ್ರಧಾರ.[1] ಇಂಥ ಮಹಾರ್ಘ್ವ ಕೃತಿಯ, ವರ್ಣಕದ, ಲೌಕಿಕಾಂಶಗಳನ್ನು ಸಂಗ್ರಹಿಸಿ ವಿಕೃತಗೊಳಿಸದೆ (ಮೆಯ್ಗೆಡಲೀಯದೆ) ಕಥೆಯಲ್ಲಿ (ವಸ್ತುಕದಲ್ಲಿ) ಒಡಂಬಡಿಸಿ ನಿರೂಪಿಸುವದಾದರೆ ಅದನ್ನು ಪಂಪನೋರ್ವನೆ ಮಾಡಬಲ್ಲನೆಂಬುದನ್ನು ಮನಗಂಡು ಅರಿಕೇಸರಿಯೇ

1. ಕನ್ನಡ ಕಾವ್ಯಪ್ರಕಾರಗಳಲ್ಲಿ ವಸ್ತುಕ ವರ್ಣಕಗಳ ಸ್ವರೂಪ ಇನ್ನೂ ಅನಿಶ್ಚಿತವಾಗಿ ಉಳಿದಿದೆ. ಈ ಬಗೆಯ ಕಾವ್ಯಪ್ರಕಾರಗಳು ಬೌದ್ಧಸಾಹಿತ್ಯದಲ್ಲಿ ಕಾಣಸಿಗುತ್ತವೆ. ಅಲ್ಲಿ ವಸ್ತು ಎಂದರೆ ಕಥೆ. ವಿಸ್ತರ, ವರ್ಣನ ಎಂದರೆ ಟೀಕೆ, ವಿವರಣೆ, ಇತ್ಯಾದಿ. ಬೌದ್ಧಸಾಹಿತ್ಯದಲ್ಲಿರುವ ಮಹಾವಸ್ತು, ಲಲಿತ ವಿಸ್ತರ, ಜಾತಕಟ್ಠವಣ್ಣನಾ ಮೊದಲಾದವನ್ನು ಇಲ್ಲಿ ಉದಾಹರಿಸಬಹುದು. ಇವು ಮಿಶ್ರ ಅಂದರೆ ಗದ್ಯ-ಪದ್ಯ-ಯುಕ್ತ ಕೃತಿಗಳು. ವಸ್ತುಕ ಎಂದರೆ ಕಥಾಕಾವ್ಯ. ಬರಬರುತ್ತ ಅದರಲ್ಲಿ ಮಹಾಕಾವ್ಯದ ಲಕ್ಷಣಗಳು ಅಂದರೆ ಉದಾತ್ತ ನಾಯಕ, ನಗರಾರ್ಣವಾದಿ ಅಷ್ಟಾದಶ ವರ್ಣನ, ಪ್ರಗಲ್ಭ ಕಾವ್ಯಶೈಲಿ ಮೊದಲಾದವು ಸೇರಿ ಇಂದು ನಮಗೆ ಪರಿಚಿತವಿರುವ ಚಂಪೂಗಳಾದವು. ಪಂಪರನ್ನರ ಕೃತಿಗಳು ಇಂಥವು. ಇತರತ್ರ ಇವು ಮಿಶ್ರ ಅಥವಾ ಚಂಪೂ ಎಂದು ಪ್ರಸಿದ್ಧವಾದರೂ ಕನ್ನಡದಲ್ಲಿ ವಸ್ತುಕಗಳು, ವಚನ ಕಾವ್ಯಗಳು, ಎಂದು ಸಹ ಗುರುತಿಸಲ್ಪಡುತ್ತಿದ್ದವು. ಅಪ್ರತಿಮವೀರ ಚರಿತೆಯಲ್ಲಿ ತಿರುಮಲಾರ್ಯ ' ಇದರ್ಕೆ ' ಅಂದರೆ ಲಕ್ಷಣಬದ್ಧ ಮಿಶ್ರಕಾವ್ಯಕ್ಕೆ ' ವಸ್ತುಕಮೆಂದುಂ ಚಂಪುವೆಂದುಂ ಪೆಸರ್ ' ಎಂದಿರುವದರ ಹಿನ್ನೆಲೆಯಾದರೂ ಇದೇ. ವಸ್ತುಕಗಳು ಚಂಪೂ ಇದ್ದರೂ ಎಲ್ಲ ಚಂಪೂಗಳು ವಸ್ತುಕಗಳಲ್ಲ. ಪಶ್ಚಿಮ ಚಾಲುಕ್ಯದೊರೆ ಸೋಮೇಶ್ವರ—

ಗದ್ಯೈಃ ಪದ್ಯೈಃ ಸಮಾಯುಕ್ತಾಮೇತದ್ವರ್ಣನಕೈರ್ಯುತಾ ।
ಚಂಪೂನಾಮ್ನಾ ಸಮಾಖ್ಯಾತಾಂ ಶುಶ್ರೂಷೇತ ಮಹೀಪತಿಃ ॥

—ಎಂದು ಚಂಪುವಿನ ಲಕ್ಷಣವನ್ನು ಹೇಳಿರುವನು ಮಾನಸೋಲ್ಲಾಸದಲ್ಲಿ. ' ಏತದ್ವರ್ಣನಕೈರ್ಯುತಾ ' ಎಂದರೆ ಇದಕ್ಕೆ ಮೊದಲು ಆತ ವಿವರಿಸಿದ ಮಹಾಕಾವ್ಯದಲ್ಲಿ ಇರಬೇಕಿದ್ದ ೧೮ ವರ್ಣನೆಗಳು ಮತ್ತು ಇತರ ಲಕ್ಷಣಗಳು, ವಸ್ತುಕ ಇಂಥದು.

ವರ್ಣಕ ಹೀಗೆಯೆ ಇರಬೇಕೆಂಬ ನಿರ್ಬಂಧವಿಲ್ಲ. ವಿಷಯಾನುಸಾರ ಬಿಂಗಡನೆಯಲ್ಲಿ ವರ್ಣಕಕ್ಕೂ ಇತರ ಕಾವ್ಯಪ್ರಕಾರಗಳಿಗೂ ವ್ಯತ್ಯಾಸವಿಲ್ಲದಿದ್ದರೂ ಅದು ಯಾವುದೊಂದು ವಿಶಿಷ್ಟ ಕಾವ್ಯಪ್ರಕಾರದ ಲಕ್ಷಣಗಳಿಗೆ ಸಂಪೂರ್ಣವಾಗಿ ಹೊಂದುವದಿಲ್ಲ. ವರ್ಣಕದ ಈ ಲಕ್ಷಣ ಪ್ರಸಿದ್ಧ ಲಾಕ್ಷಣಿಕ ರುದ್ರಟನ ಕಾವ್ಯಾಲಂಕಾರದಲ್ಲಿ ಕಾಣಸಿಗುತ್ತದೆ. ಆತ ಮಹಾಕಾವ್ಯಾದಿ ಕಾವ್ಯಪ್ರಕಾರಗಳನ್ನು ಉಲ್ಲೇಖಿಸಿ ಇವುಗಳ ಲಕ್ಷಣಗಳಿಗೆ ಸಂಪೂರ್ಣ ಹೊಂದಿಕೊಳ್ಳದ ಕಾವ್ಯ ವರ್ಣಕ (ಅನ್ಯದ್ವರ್ಣಕ ಮಾತ್ರಂ) ಎಂದಿರುವನು. ' ಸಕಲ ಲಕ್ಷಣವು ವಸ್ತುಕಕೆ, ವರ್ಣಕಕ್ಕಿಸ್ಸು ವಿಕಲವಾದರು ದೋಷವಿಲ್ಲ ' ಎಂಬ ರತ್ನಾಕರವರ್ಣಿಯ ಮತ್ತು ' ವರ್ಣಕಕ್ಕಿಲ್ಲ ಲಕ್ಷಣಂ ' ಎಂಬ ವಿರೂಪಾಕ್ಷ ಪಂಡಿತನ ಉಕ್ತಿಗಳಾದರೂ ಇದನ್ನೇ ಸೂಚಿಸುವವು.

ತನ್ನನ್ನು ಈ ಕಾರ್ಯವನ್ನು ಕೈಕೊಳ್ಳಲು ಕೇಳಿಕೊಂಡ, ಎಂದಿರುವನು ಪಂಪ. ಅರಿಕೇಸರಿಯ ಈ ಬಿನ್ನಹ ಆತ ಪಂಡಿತಗೋಷ್ಠಿಗೆ ಒಡ್ಡಿದ ಒಂದು ಸಮಸ್ಯೆಯೇ ಸೈ. ಇತರರು ತಮ್ಮ ಅಸಮರ್ಥತೆಯನ್ನು ವ್ಯಕ್ತಪಡಿಸಿದಾಗ ಆತ ಪಂಪನೆಡೆ ಬಂದಂತಿದೆ. ಭಾರತದ ಯಾವುದೊಂದು ಸಂದರ್ಭವನ್ನು ತೆಗೆದುಕೊಂಡು ಅದನ್ನು ವಸ್ತುಕದಲ್ಲಿ ಮಾರ್ಪಡಿಸುವದು ದುಸ್ತರವಿಲ್ಲ. ರನ್ನನ ಗದಾಯುದ್ಧ ಇಂಥದು. ಆದರೆ ಅರ್ಜುನ ಇಲ್ಲವೆ ಭೀಮನನ್ನು ನಾಯಕನನ್ನು ಮಾಡಿ, ಆತ ಮತ್ತು ಆಶ್ರಯದಾತ ಅರಸನಲ್ಲಿ ಅಭೇದವನ್ನು ಕಲ್ಪಿಸಿ ಸಮಗ್ರ ಭಾರತವನ್ನು ವಸ್ತುಕದಲ್ಲಿ ಮಾರ್ಪಡಿಸುವದು ದುಸ್ಸಾಧ್ಯ. ದ್ರೌಪದಿಯ ಪಂಚಪತಿತ್ವ ಇದಕ್ಕೆ ಅಡ್ಡಬರುತ್ತದೆ. ಅರಿಕೇಸರಿ ಕವಿಗಳಿಗೊಡ್ಡಿದ ಸಮಸ್ಯೆಗಿದ್ದ ಮುಖ್ಯ ತೊಡಕು ಇದೇ.

ಊಹಾಶ್ವಗಳ ಓಡಾಟ

ಅರ್ಜುನ ಅರಿಕೇಸರಿಯರಲ್ಲಿ ಕಲ್ಪಿಸಿದ ಅಭೇದದ ಮೂಲಕ ದ್ರೌಪದಿಯನ್ನು ಏಕವಲ್ಲಭೆಯಾಗಿಸುವದು ಅನಿವಾರ್ಯವಾಯಿತು ; ಇದಕ್ಕಾಗಿ ಮಾಡಿಕೊಂಡ ಬದಲಾವಣೆಗಳಿಂದ ಪಂಪ ತೊಂದರೆಗೀಡಾದ; ಇತರ ಅಭಾಸ ಅನೌಚಿತ್ಯಗಳು ಸೇರಿಕೊಂಡವು; ಪಂಪ ಈ ದಿಸೆಯಲ್ಲಿ ಅಯಶಸ್ವಿಯಾಗಿದ್ದರೂ ಆತನ ಸಮಸ್ತ ಭಾರತ 'ಮೂಲ ಭಾರತದಲ್ಲಿಯ ಚಿನ್ನವನ್ನು ತಂದು ಹೊಸದಾಗಿ ಎರಕಹೊಯ್ದು ಒಪ್ಪವಿಟ್ಟು ನಿಲ್ಲಿಸಿದ ಪುತ್ತಳಿ'; ಅಲ್ಲದೆ ಪಂಪ ಜೈನ; ದ್ರೌಪದಿಯ ಪಂಚ ಪತಿತ್ವ ಜೈನರಿಗೆ ಅಗ್ರಾಹ್ಯ ; ಆತಏವ ಪಂಪ ಭಾರತವನ್ನು ವ್ಯಾಸ ಭಾರತದೊಡನೆ ಹೋಲಿಸುವುದು ಸರಿಯಾಗದು, ಎಂಬ ಅಭಿಪ್ರಾಯಗಳು ಇಂದು ಸಾಮಾನ್ಯವಾಗಿವೆ.

ಜೈನರಿಗೆ ದ್ರೌಪದಿಯ ಪಂಚ ಪತಿತ್ವವು ಅಗ್ರಾಹ್ಯವೆಂಬುದು ನಿರ್ವಿವಾದ. ಪುನ್ನಾಟ ಸಂಘೀಯ ಜಿನಸೇನನ (ಕ್ರಿ. ೭೮೩) ಹರಿವಂಶ ಪುರಾಣ, ಬ್ರಹ್ಮಶಿವನ (ಕಿ. ೧೨ ಶ.) ಸಮಯ ಪರೀಕ್ಷೆ ಮತ್ತು ಶುಭ ಚಂದ್ರನ (ಕ್ರಿ. ೧೬ ಶ.) ಪಾಂಡವ ಪುರಾಣದಲ್ಲಿ ಇದರ ತೀವ್ರ ಖಂಡನೆ ಇದೆ. ಆದರೆ ಪಂಪನಾಗಲಿ ರನ್ನನಾಗಲಿ ಇಲ್ಲಿ ತಮ್ಮ ಧಾರ್ಮಿಕ ಭಾವನೆಗಳಿಗೆ ಎಡೆ ಇತ್ತಿಲ್ಲ, ದುಶ್ಯಾಸನನನ್ನು ವಧಿಸಿದಾಗ ದ್ರೌಪದಿಯನ್ನು 'ತನ್ನ ತಳೋದರಿ' ಎಂದು ಭೀಮ ಆಕೆಯ ವೇಣೀ ಸಂಹಾರವನ್ನು ಮಾಡಿರುವುದು ಜೈನನಿದ್ದರೂ ಈ ಕಥಾನಕದ ಮಟ್ಟಿಗೆ ಪಂಪ ಆಕೆಯನ್ನು ಪಂಚವಲ್ಲಭೆ ಎಂದು ಬಗೆದಿರುವುದಕ್ಕೆ ಸಾಕ್ಷಿ. ಭೀಮ ದ್ರೌಪದಿಯ ವೇಣೀ ಸಂಹಾರ ಮಾಡುವುದು ಸಂಸ್ಕೃತ ವೇಣೀ ಸಂಹಾರವನ್ನು ರಚಿಸಿದ ಭಟ್ಟ ನಾರಾಯಣನ ಸೃಷ್ಟಿ. ಮೂಲ ಭಾರತದಲ್ಲಿ ಇದಿಲ್ಲ.[1] ಪಂಪ ಭಾರತದಲ್ಲಿ ಈ ಸನ್ನಿವೇಶ ದುಶ್ಯಾಸನನ

1. ವೇಣೀ (ವಿಮರ್ಶೆ), ಪು. ೨೭–೨೮. ಪಾಂಡವರು ವನವಾಸಕ್ಕೆ ಹೊರಟ ಸಮಯದಲ್ಲಿ ದ್ರೌಪದಿ:–ಉಟ್ಟ ಬಟ್ಟೆ, ಧೂಳು ಮುಸುಕಿದ ದೇಹ, ಕೆದರಿದ ಕೂದಲಗಳಿಂದ ಇಂದು ನಾಸುಹೋಗುತ್ತಿರುವಂತೆ ೧೪ ವರ್ಷಗಳ ನಂತರ ಪತಿ ಪುತ್ರಾದಿಗಳ ಮರಣದಿಂದ ಆಕ್ರೋಶ

ವಧೆಯ ನಂತರ ಬಂದಿದ್ದರೆ ಭಟ್ಟನಾರಾಯಣ ಮತ್ತು ರನ್ನರ ಕೃತಿಗಳಲ್ಲಿ ದುರ್ಯೋಧನ ಊರುಭಂಗದ ನಂತರ ಬಂದಿದೆ. ಸಭೆಯಲ್ಲಿ ದುಶ್ಶ್ಯಾಸನ ದ್ರೌಪದಿಯ ಮುಡಿ ಹಿಡಿದೆಳೆದಾಗ ಬಿಚ್ಚಿದ ಆ ಮುಡಿಯನ್ನು ಎಳೆದವನ ಕರಳುಗಳಿಂದಲೇ ಕಟ್ಟುವೆನೆಂಬ ಆಕೆಯ ಪ್ರತಿಜ್ಞೆ ಪಂಪ ಭಾರತದಲ್ಲಿ ಮಾತ್ರ ಕಾಣುವುದು (೭/೧೦). ಇಷ್ಟೇ ಅಲ್ಲ, ದ್ರೌಪದಿಯ ಈ ಪ್ರತಿಜ್ಞೆಯಿಂದ ಭೀಮ (ಅರ್ಜುನನಲ್ಲ) ಮತ್ತಿಷ್ಟು ಕೆರಳಿ, ದುಶ್ಶ್ಯಾಸನನನ್ನು ಕೊಂದು ನಾನೇ ನಿನ್ನ ಮುಡಿ ಕಟ್ಟುವೆನು (ಕರುಳ್ಗಳಿನಾನಲ್ತೆ ವಿಳಾಸದಿಂ ಮುಡಿಯಿಪೆಂ ಪಂಕೇಜ ಪತ್ರೇಕ್ಷಣೇ-೭/೧೨) ಎಂದು ಪ್ರತಿಜ್ಞೆ ಮಾಡುವನು, ದ್ರೌಪದಿಯ ಪಂಚಪತಿತ್ವದ ಮಾತಿರಲಿ, ಅವಳ ಪತಿಯಲ್ಲದವನಿಂದ (ಇದೇ ನಿಜವಿದ್ದರೆ), ಸಾಮಾನ್ಯರ ದೃಷ್ಟಿಯಲ್ಲಿ ಕೂಡ ಧರ್ಮಬಾಹಿರವೆನಿಸುವ ಮತ್ತು ಮೂಲ ಭಾರತದಲ್ಲಿಲ್ಲದ, ಈ ಬಗೆಯ ಪ್ರತಿಜ್ಞೆಯನ್ನು ಮಾಡಿಸುವ ಅಗತ್ಯವೇನಿತ್ತು? ಕವಿ ಜೈನನಿರಲಿ, ಜೈನೇತರನಿರಲಿ, ದ್ರೌಪದಿ ಪಂಚವಲ್ಲಭೆ ಇದ್ದರೇನೆ ಭೀಮನ ಈ ಪ್ರತಿಜ್ಞೆಗೆ ಸಹಜತೆ, ಸಾಮಂಜಸ್ಯತೆ, ಬರಬಲ್ಲವು. ದ್ರೌಪದಿ ಪಂಚವಲ್ಲಭೆ ಎಂಬುದು ಪಂಪ ಭಾರತದಲ್ಲಿ ಕಣ್ಣು ತಪ್ಪಿಸಿ ಕುಳಿತಿರುವುದರಿಂದ ಸಂಶೋಧಕರ ಊಹಾಕುದುರೆಗಳ ಓಡಾಟಕ್ಕೆ ಕವಿಯ ಮತವೂ ಒಂದು ತಾಣವಾಗಿದೆ, ಇಷ್ಟೇ. ರನ್ನನಂತೂ 'ಪಾಂಚಾಲಿಯಂ ಪಂಚವಲ್ಲಭೆಯಂ' ಎಂದು ಸ್ಪಷ್ಟವಾಗಿ ಹೇಳಿರುವನು (೩/೩೬). ಇಲ್ಲಿ ಮತಾಭಿಮಾನ ಎಲ್ಲಿದೆ?

ಪಂಪಭಾರತವನ್ನು ವ್ಯಾಸಭಾರತದೊಡನೆ ಹೋಲಿಸಲಾಗದೆಂಬ ಮಾತು ಅಗ್ರಾಹ್ಯ. ಸ್ವರೂಪದಲ್ಲಿ ವರ್ಣಕವಿರುವದನ್ನು ವಸ್ತುಕದಲ್ಲಿ ಮಾರ್ಪಡಿಸಿ ಮೂಲವನ್ನು 'ಮೆಯ್ಗಿಡಲೀಯದೆ', 'ಕಥೆಗಳೊಂದುಂ ಕುಂದಲೀಯದೆ' ನಿರೂಪಿಸುವೆನೆಂದು ಪ್ರತಿಜ್ಞಾಪೂರ್ವಕವಾಗಿ ಹೇಳಿರುವದರಿಂದ, ಓದುಗರಲ್ಲಿ ಒಂದನ್ನೊಂದು ಹೋಲಿಸಿ ನೋಡಬೇಕೆಂಬ ಕುತೂಹಲವನ್ನು ಪಂಪನೇ ಕೆರಳಿಸಿರುವನು.

ಇಕ್ಕಟ್ಟಿನ ಪ್ರಸಂಗ

ಅರ್ಜುನ ಅರಿಕೇಸರಿಯರಲ್ಲಿರುವ ಅಭೇದದ ಮೂಲಕ ದ್ರೌಪದಿಯನ್ನು ಏಕವಲ್ಲಭೆಯನ್ನಾಗಿಸುವದು ಅನಿವಾರ್ಯವಿದ್ದರೂ ವಿಸಂಗತಿಗಳು ತೋರದಂತೆ ಪಂಪ

ಮಾಡುತ್ತ ನೀವಾದರೂ ಹೀಗೆಯೆ ಹಸ್ತಿನಾಪುರವನ್ನು ಪ್ರವೇಶಿಸುವಿರಿ, ಎಂದು ಕೌರವ ಸ್ತ್ರೀಯರನ್ನು ಶಪಿಸುವಳು (ಸಭಾ. ೮೦/೧೯-೨೦). ಮುಂದೆ ಕೃಷ್ಣನು ಸಂಧಿಯ ಪ್ರಸ್ತಾಪಕ್ಕಾಗಿ ಕೌರವರೆಡೆ ಹೊರಟಾಗ ಆಕೆ ಬಿಚ್ಚಿ ಇಳಿಬಿದ್ದ ಕೂದಲುಗಳನ್ನು ಎತ್ತಿ ಹಿಡಿದು ದುಶ್ಶ್ಯಾಸನನಿಂದ ತನಗಾದ ಮಾನಭಂಗವನ್ನು ಅವನ ನೆನಪಿಗೆ ತಂದುಕೊಡುವಳು (ಉದ್ಯೋಗ. ೮೦/೩೪, ೩೬. ೩೯). ದ್ರೌಪದಿಯ ಈ ಸಂದರ್ಭದಲ್ಲಿರುವ ಮಾತುಗಳನ್ನು ಆಧರಿಸಿ ಭಟ್ಟನಾರಾಯಣ ವೇಣೀ ಸಂಹಾರದ ಕಲ್ಪನೆಯಯನ್ನು ರೂಪಿಸಿದಂತಿದೆ. ನಾಟಕೀಯ ಮತ್ತು ಆಕರ್ಷಕವಿರುವ ಆತನ ಈ ಕಲ್ಪನೆ ಲೋಕಪ್ರಿಯವಾಗಿ ಮೂಲ ಭಾರತದಲ್ಲಿಯದು ಎನ್ನುವಷ್ಟು ಸರ್ವತ್ರ ರೂಢವಾಗಿದೆ.

ಆ ರೀತಿ ಮೂಲವನ್ನು ಮಾರ್ಪಡಿಸಿದ್ದರೆ ಕಥೆ ಮೆಯ್ಗೆಡುತ್ತಿತ್ತು. ಇತರರಿರಲಿ ಸ್ವತಃ ಅರಿಕೇಸರಿ ಕೂಡ ಈ ಬಗೆಯ ಮಾರ್ಪಾಟಿಗೆ ಒಪ್ಪುತ್ತಿದ್ದನೊ ಇಲ್ಲವೊ ಎಂಬುದು ಸಂದೇಹಾಸ್ಪದವಿದೆ. ಯಾಕಂದರೆ ಮೂಲವನ್ನು ಮೆಯ್ಗೆಡಿಸದೆ ಅದನ್ನು ವಸ್ತುಕದಲ್ಲಿ ಒಡಂಬಡಿಸಬೇಕೆಂಬ ಅವನ ಆಹ್ವಾನವಿತ್ತು ಕವಿಗಳಿಗೆ. ಅಲ್ಲದೆ ಮಾನವ ಧರ್ಮಶಾಸ್ತ್ರದಲ್ಲಿ ಬಹುಪತಿತ್ವವು ಅಧರ್ಮವಿದ್ದರೂ ದ್ರೌಪದಿಯ ವಿಷಯದಲ್ಲಿ ಧರ್ಮವೆಂದೇ ಗಣಿಸಲ್ಪಟ್ಟದೆ. ಕಾವ್ಯಶಾಸ್ತ್ರಜ್ಞರು ಕೂಡ 'ಧರ್ಮವಿರುದ್ಧ' ದೋಷಕ್ಕೆ ಅಪವಾದವೆಂದು ದ್ರೌಪದಿಯ ಪಂಚಪತಿತ್ವವನ್ನು ಲಕ್ಷ್ಯವಾಗಿ ಕೊಟ್ಟರುವರು.[1] ಸ್ವಯಂವರದಲ್ಲಿ ಮತ್ಸ್ಯಯಂತ್ರವನ್ನು ಭೇದಿಸಿ ದ್ರೌಪದಿಯನ್ನು ಗೆದ್ದಿರುವದು ಅರ್ಜುನನ 'ಸಾಹಸ ಮಹಿಮೆ'ಗಳಲ್ಲಿ ಒಂದು ಮಹತ್ವದ 'ಮಹಿಮೆ'. ಪಂಪ ಇದನ್ನು ಬಿಡುವಂತಿರಲಿಲ್ಲ. ಇತ್ತ ಬಹಿರಂಗವಾಗಿ ಆಕೆಯನ್ನು ಪಂಚವಲ್ಲಭೆಯನ್ನಾಗಿಸಿ ಅರಿಕೇಸರಿಯ ವಿಷಯದಲ್ಲಿ ಸಲ್ಲದ ಕುಚೋದ್ಯಕ್ಕೆ ಆಸ್ಪದ ಕೊಡುವಂತಿರಲಿಲ್ಲ; ಏಕವಲ್ಲಭೆಯನ್ನಾಗಿಸಿ ಮೂಲ ಕಥೆಯನ್ನು ಮೆಯ್ಗೆಡಿಸುವಂತಿರಲಿಲ್ಲ.

ಈ ನಿರ್ಬಂಧಗಳನ್ನು ದಾಟಲು ಪಂಪ ಭಾಗವತ ಪುರಾಣದಲ್ಲಿ ಬರುವ ವೃತ್ರಾಸುರಾಖ್ಯಾನದಲ್ಲಿಯ ವಿಶ್ವರೂಪಾಚಾರ್ಯನಂತೆ ವರ್ತಿಸಿದಂತಿದೆ. ದೇವತೆಗಳ ಪೌರೋಹಿತ್ಯವನ್ನು ವಹಿಸಿದ ವಿಶ್ವರೂಪಾಚಾರ್ಯ ದೇವದಾನವ ಇಬ್ಬರಿಗೂ ಬಂಧು. ಯಜ್ಞಕಾಲದಲ್ಲಿ ಆತ ಬಹಿರಂಗವಾಗಿ ದೇವತೆಗಳಿಗೆ ಮತ್ತು ಅದೇ ಸಮಯದಲ್ಲಿ ಅಂತರಂಗದಿಂದ ದಾನವರಿಗೆ ಹವಿರ್ಭಾಗವನ್ನು ಅರ್ಪಿಸುತ್ತಿದ್ದನಂತೆ. ಪಂಪನಾದರೂ ದ್ರೌಪದಿಯ ಪಂಚಪತಿತ್ವದ ವಿಷಯದಲ್ಲಿ ಹೀಗೆ ಮಾಡಿದಂತಿದೆ. ದ್ರೌಪದಿಯನ್ನು ಪ್ರಕಟವಾಗಿ ಅರ್ಜುನನೊಡನೆ ಮದುವೆ ಮಾಡಿ ಆಕೆ ಏಕವಲ್ಲಭೆಯೆಂಬ ಆಭಾಸವನ್ನು ಹುಟ್ಟಿಸಿ ಅದೇ ಸಮಯದಲ್ಲಿ ಆಕೆ ಪಂಚವಲ್ಲಭೆಯಾದಳು ಎಂಬುದನ್ನು ಪರ್ಯಾಯದಿಂದ ಸೂಚಿಸಿ ಆತ ಈ ಇಕ್ಕಟ್ಟಿನಿಂದ ಪಾರಾದಂತಿದೆ. ಅದು ಹೀಗೆ—

ದ್ರೌಪದಿ ಮತ್ತು ಪಾಂಡವರ ಪೂರ್ವವೃತ್ತಾಂತ

ಬಕವಧೆಯ ನಂತರ ಪಾಂಡವರು ಕೆಲಕಾಲ ಏಕಚಕ್ರ ನಗರದಲ್ಲಿಯೆ ವಾಸವಾಗಿದ್ದರು. ಆಗ ಬ್ರಾಹ್ಮಣನೊಬ್ಬನು ತನ್ನ ಪ್ರವಾಸಕಥೆಯನ್ನು ವಿವರಿಸುತ್ತ ದ್ರುಪದ ದ್ರೋಣರ ಪೂರ್ವ ವೃತ್ತಾಂತ, ಯಜ್ಞದಲ್ಲಿ ಧೃಷ್ಟದ್ಯುಮ್ನ ದ್ರೌಪದಿಯರ ಜನ್ಮ, ದ್ರೌಪದಿಯ ಸ್ವಯಂವರ ಸಿದ್ಧತೆ, ಮೊದಲಾದ ವಿಷಯಗಳನ್ನು ಪಾಂಡವರಿಗೆ ತಿಳಿಸಿದನು. ದ್ರುಪದನ ಮನಸ್ಸಿನಲ್ಲಿ ತನ್ನ ಮಗಳನ್ನು ಅರ್ಜುನನಿಗೇನೆ ಕೊಡಬೇಕೆಂದಿತ್ತು. ಅರಗಿನ ಮನೆಯ ಅನಾಹುತದ ನಂತರ ಪಾಂಡವರ ವೃತ್ತಾಂತ

---

1. ಪಂಚಾನಾಂ ಪಾಂಡುಪುತ್ರಾಣಾಂ ಪತ್ನೀ ಪಾಂಚಾಲಕನ್ಯಕಾ ।
ಸತೀನಾಮಗ್ರಣೀಸ್ಸಾಸೀದ್ದೈವೋಹಿ ವಿಧಿರೀದೃಶಃ ॥೧/೨೦೨
—ಭೋಜ, ಸರಸ್ವತೀ ಕಂಠಾಭರಣ

ತಿಳಿಯದ್ದರಿಂದ ಉಪಾಯಗಾಣದೆ ಸ್ವಯಂವರದ ಏರ್ಪಾಡು ಮಾಡಿದ್ದನು. ಬೇಕೆಂತಲೆ ಭಾರವಾದ ಧನುಸ್ಸನ್ನು ಮಾಡಿಸಿ ಅದರಿಂದ ಲಕ್ಷ್ಯವನ್ನು ಭೇದಿಸಿದವನನ್ನು ದ್ರೌಪದಿ ವರಿಸುವಳೆಂದು ಸಾರಿದ್ದನು. ಅರ್ಜುನನಂಥ ಸಾಹಸಿಗೆ ಮಾತ್ರ ಈ ಕಾರ್ಯ ಸಾಧ್ಯವಿದ್ದುದರಿಂದ ದೈವವಶಾತ್ ಅವನೇ ಬಂದು ಲಕ್ಷ್ಯವನ್ನು ಭೇದಿಸಬಹುದೆಂಬ ಆಶೆಯನ್ನು ಇಟ್ಟುಕೊಂಡಿದ್ದನು. ಪಂಪಭಾರತದಲ್ಲಿ ಕೂಡ ಇದು ಸಂಗ್ರಹಿತವಾಗಿ ಬಂದಿದೆ.

ಸ್ವಯಂವರದ ಸಮಾಚಾರವನ್ನು ಕೇಳಿ ಧರ್ಮಾದಿಗಳು ಅಲ್ಲಿಗೆ ಹೋಗಲು ಉತ್ಸುಕರಾದರು. ಪಾಂಡವರನ್ನು ಕಾಣಲು ಬಂದ ವ್ಯಾಸಋಷಿ ಅವರಿಗೆ ದ್ರೌಪದಿಯ ಪೂರ್ವಜನ್ಮದ ವೃತ್ತಾಂತವನ್ನು ಅರುಹಿದನು. ದ್ರೌಪದಿ ಪೂರ್ವಜನ್ಮದಲ್ಲಿ ಒಬ್ಬ ಮುನಿಕನ್ಯೆ ಇದ್ದಳು. ಯೋಗ್ಯಪತಿಗಾಗಿ ಶಂಕರನನ್ನು ಕುರಿತು ತಪಸ್ಸು ಮಾಡಿದಳು. ಶಂಕರನು ಪ್ರಸನ್ನನಾಗಿ ವರವನ್ನು ಕೇಳೆಂದಾಗ ಔತ್ಸುಕ್ಯದ ಭರದಲ್ಲಿ ಆಕೆ 'ಪತಿಂ ದೇಹಿ, ಪತಿಂದೇಹಿ' ಎಂದು ಐದು ಸಲ ನುಡಿದಳು. ಶಂಕರ,–ಹಾಗೇ ಆಗಲಿ, ನಿನಗೆ ಐವರು ಪತಿಗಳಾಗುವರು ಎನ್ನಲು, ದ್ರೌಪದಿ–ಸ್ವಾಮಿನ್, ನಾನು ಕೇಳಿರುವದು ಒಬ್ಬ ಪತಿಯನ್ನು, ಎಂದಾಗ ಶಂಕರ—ಈ ಜನ್ಮದಲ್ಲಿ ನಿನಗೆ ಮದುವೆ ಇಲ್ಲ; ಮುಂದಿನ ಜನ್ಮದಲ್ಲಿ ಐವರು ಪತಿಗಳಾಗುವರು ಎಂದು ಹೇಳಿ ಅಂತರ್ಧಾನನಾದನು. ಆ ಮುನಿ ಕನ್ಯೆಯೆ ಈಗ ದ್ರೌಪದಿಯಾಗಿ ಜನ್ಮಿಸಿರುವಳು; ನೀವು ಐವರು ಆಕೆಯ ಪತಿಗಳು; ಇದು ದೈವಸಂಕಲ್ಪ; ಇದನ್ನು ತಿಳಿಸಲೆಂದೇ ನಾನು ಇಲ್ಲಿಗೆ ಬಂದಿರುವೆನು; ಅಗತ್ಯ ವಾಗಿ ಹೋಗಿರಿ; ಅವಳನ್ನು ಮದುವೆಯಾಗಿ ಸುಖದಿಂದ ಬಾಳಿರಿ ಎಂದು ಉಪದೇಶಿಸಿ ಅವರಿಂದ ಬೀಳ್ಕೊಂಡನು.[1]

ಸ್ವಯಂವರದ ನಂತರ ತಾವು ಐವರೂ ದ್ರೌಪದಿಯನ್ನು ವರಿಸತಕ್ಕವರು; ಇದು ತಮ್ಮ ತಾಯಿಯ ಆಜ್ಞೆ ಎಂದು ಧರ್ಮ ಆಗ್ರಹ ತೊಟ್ಟನು. ದ್ರುಪದ ಅದಕ್ಕೆ ಒಡಂಬಡಲಿಲ್ಲ. ಅರ್ಜುನ ಅಥವಾ ನಿಮ್ಮಲ್ಲಿ ಯಾರಾದರೂ ಒಬ್ಬರು ಅವಳನ್ನು ಮದುವೆಯಾಗಬಹುದು; ಆದರೆ ಐವರು ಒಬ್ಬಳನ್ನು ಮದುವೆಯಾಗುವದು ಧರ್ಮ ವಿರುದ್ಧ; ಅದಕ್ಕೆ ತನ್ನ ಸಮ್ಮತಿ ಇಲ್ಲ ಎಂದು ಸ್ಪಷ್ಟವಾಗಿ ತಿಳಿಸಿದನು. ಆಗ ವ್ಯಾಸ ಪುನಃ ಬಂದು ದ್ರುಪದನನ್ನು ಏಕಾಂತದಲ್ಲಿ ಕರೆದುಕೊಂಡು ಹೋಗಿ ಶಂಕರನ ಕ್ರೋಧಕ್ಕೆ ಪಾತ್ರರಾಗಿದ್ದ ಪೂರ್ವೇಂದ್ರರ ಮತ್ತು ಅವರ ಪತ್ನಿ ಸ್ವರ್ಗಶ್ರೀ (ಇಂದ್ರಾಣಿ)ಯ ವೃತ್ತಾಂತವನ್ನು ತಿಳಿಸಿದನು.

ಹಿಮಾಲಯದಡಿ ಗಂಗಾ ತಟಾಕದಲ್ಲಿ ಯಮಧರ್ಮನು ಯಜ್ಞಮಾಡುತ್ತಿರು ವಾಗ ನದಿಯಲ್ಲಿ ಸುಂದರ ಕಮಲ ಪುಷ್ಪಗಳು ತೇಲಿ ಬರುತ್ತಿರುವದು ಕಂಡಿತು. ಅದರ ರಹಸ್ಯವನ್ನು ತಿಳಿಯಲು ಹೊರಟ ಇಂದ್ರನಿಗೆ ಪ್ರವಾಹ ಮಧ್ಯದಲ್ಲಿ ಕಣ್ಣೀರು ಸುರಿ

---

1. ಮ. ಭಾ. ಆದಿ. ೧೬೯/೬–೧೭.

ಸುತ್ತ ನಿಂತ ಒಬ್ಬ ತರುಣಿ ಮತ್ತು ಆಕೆಯ ಕಣ್ಣೀರ ಹನಿಗಳು ನೀರಿನಲ್ಲಿ ಬಿದ್ದಾಕ್ಷಣ ಕಮಲಗಳಾಗಿ ತೇಲಿ ಹೋಗುವದು ಕಂಡಿತು. ಇಂದ್ರ ನೀನಾರೆಂದು ಕೇಳಿದಾಗ ತನ್ನನ್ನು ಹಿಂಬಾಲಿಸೆಂದು ತಿಳಿಸಿ ಆಕೆ ಮುಂದೆ ಸಾಗಿದಳು.

ಬೆಟ್ಟದ ಮೇಲೆ ತರುಣನೋರ್ವನು ವಲ್ಲಭೆಯೊಡನೆ ಪಗಡೆಯಾಡುತ್ತಿದ್ದ. ಅವಳ ದುಃಖಕ್ಕೆ ಆ ತರುಣನೇ ಕಾರಣನೆಂದು ಬಗೆದು ಇಂದ್ರ ಅವನೊಡನೆ ಉದ್ಧಟ ತನದಿಂದ ವರ್ತಿಸಿದ. ಅವನಾದರೊ ಸಾಕ್ಷಾತ್ ಶಂಕರ. ಪಾರ್ವತಿಯೊಡನೆ ಪಗಡೆ ಯಾಡುತ್ತಿದ್ದ. ಇಂದ್ರನ ಗರ್ವವನ್ನು ತಗ್ಗಿಸಲು ಶಂಕರ ಸಮೀಪದ ಗುಹೆಯಲ್ಲಿರುವು ದನ್ನು ನೋಡ ಹೇಳಿದ. ಆ ಗುಹೆಯಲ್ಲಿ ಅವನಂಥ, ಅಷ್ಟೇ ತೇಜಸ್ವಿಗಳಾದ, ಬೇರೆ ನಾಲ್ವರಿದ್ದರು. ಶಂಕರ,-ಇವರು ನಿನ್ನ ಮೊದಲು ಇಂದ್ರ ಪಟ್ಟವನ್ನಾಳಿದವರು; ನಿನ್ನಂತೆ ಉದ್ಧಟತನದಿಂದ ವರ್ತಿಸಿ ಈ ಗತಿಗೆ ಇಳಿದಿರುವರು; ಈಕೆ ಸ್ವರ್ಗಶ್ರೀ ಇಂದ್ರಾಣಿ; ನೀವೆಲ್ಲರೂ ಮನುಷ್ಯರಾಗಿ ಜನ್ಮಿಸಿ ಕರ್ಮಸವೆದ ಬಳಿಕ ಮತ್ತೆ ನಿಮ್ಮ ಲೋಕವನ್ನು ಸೇರಿರಿ, ಎಂದ.

ಆಗ ಪೂರ್ವೇಂದ್ರರು ಭೂಲೋಕದಲ್ಲಿ ಜನ್ಮ ತಾಳುವೆವು. ಆದರೆ ಯಮಧರ್ಮ, ವಾಯು, ಇಂದ್ರ ಮತ್ತು ಅಶ್ವಿನಿದೇವತೆಗಳು ನಮ್ಮನ್ನು ಗರ್ಭರೂಪದಲ್ಲಿ ನಮ್ಮ ಜನ್ಮದಾತ್ರಿಯ ಉದರದಲ್ಲಿ ಇರಿಸಬೇಕು, ಎಂದು ಬೇಡಿಕೊಂಡರು. ವರ್ತಮಾನೇಂದ್ರ ನಿಗೆ ತನ್ನ ಪಟ್ಟವನ್ನು ತ್ಯಜಿಸಿ ಭೂಲೋಕದಲ್ಲಿ ಜನ್ಮ ತಾಳುವುದು ಸಾಧ್ಯವಿಲ್ಲದ್ದರಿಂದ ಸ್ವಾಂಶಸಂಭೂತ ಪ್ರತಿ ಇಂದ್ರನನ್ನು ಕಳಿಸುವೆನೆಂದ. ಶಂಕರ ಒಪ್ಪಿಕೊಂಡು ಅವ ರನ್ನು ಬಿಳ್ಕೊಟ್ಟ. ಆ ನಾಲ್ವರು ಪೂರ್ವೇಂದ್ರರು ಮತ್ತು ವರ್ತಮಾನೇಂದ್ರ ಸಂಭೂತಪ್ರತಿ ಇಂದ್ರ ಇಂದು ಪಂಚಪಾಂಡವರಾಗಿ ಜನ್ಮಿಸಿರುವರು. ಸ್ವರ್ಗ ಲಕ್ಷ್ಮಿ ಇಂದ್ರಾಣಿ ಅವರ ಪತ್ನಿ, ಇಂದು ನಿನ್ನ ಮಗಳಾಗಿರುವಳು. ಇದಕ್ಕೆ ಮೊದಲು ಮುನಿ ಕನ್ಯೆ ಇದ್ದಳು. ಆಗ ಅವಳ ತಪಸ್ಸಿಗೆ ಮೆಚ್ಚಿದ ಶಂಕರ ಮುಂದಿನ ಜನ್ಮದಲ್ಲಿ ಐವರು ಪತಿಗಳಾಗುವರೆಂದು ವರವಿತ್ತಿರುವನು. ಇವರೆಲ್ಲರೂ ದೇವ ಪುರುಷರು. ದ್ರೌಪದಿ ದೇವ ಪತ್ನಿ. ಇವರ ವಲ್ಲಭೆ. ಭೂಲೋಕದಲ್ಲಿಯೂ ಈಕೆ ಪಂಚ ವಲ್ಲಭೆ ಆಗಬೇಕೆಂ ಬುದು ಬ್ರಹ್ಮಸಂಕಲ್ಪವಿದೆ. ಇದರಲ್ಲಿ ಅಧರ್ಮವೆಂಬುದಿಲ್ಲ. ಅನ್ಯಥಾ ಯೋಚಿಸದೆ ಐವರು ಪಾಂಡವರೊಂದಿಗೆ ನಿನ್ನ ಮಗಳ ಮದುವೆ ಮಾಡು, ಎಂದು ಉಪದೇಶಿಸಿ, ವ್ಯಾಸ ದ್ರುಪದನಿಗೆ ದಿವ್ಯದೃಷ್ಟಿಯನ್ನಿತ್ತು ಪಾಂಡವರು ಪಂಚೇಂದ್ರರು, ದ್ರೌಪದಿ ಇಂದ್ರಾಣಿ, ಅವರ ಪತ್ನಿ. ಎಂಬುದನ್ನು ಮನಗಾಣಿಸಿಕೊಟ್ಟನು. [1]

ಇಷ್ಟಾದ ಬಳಿಕ ದ್ರೌಪದಿಯೊಂದಿಗೆ ಮೊದಲು ಯುಧಿಷ್ಠಿರನ ಮದುವೆ ಯಾಯಿತು. ಪುರೋಹಿತ ಅವರೀರ್ವರನ್ನು ವಿಧ್ಯುಕ್ತವಾಗಿ ಅಗ್ನಿಪ್ರದಕ್ಷಿಣೆ ಮಾಡಿ ಸಿದ (ಪಂಪ ಭಾರತದಲ್ಲಿ ಇದು ಅರ್ಜುನನ ವಿವಾಹ ವಿಧಿಯಾಗಿ ಬಂದಿದೆ). ಮುಂದೆ

1. ಮ. ಭಾ. ಆದಿ-ಅಧ್ಯಾಯ ೧೯೬.

ಕ್ರಮದಿಂದ ಒಬ್ಬೊಬ್ಬನಿಗೆ ಒಂದೊಂದು ದಿನ ಅವಳೊಡನೆ ಮದುವೆಯಾಯಿತು. ಮೂಲ ಭಾರತದಲ್ಲಿಯ ಈ ಅಂಶ ಧರ್ಮಾದಿಗಳನ್ನು ಬೇರ್ಪಡಿಸಿ ಅರ್ಜುನ ಒಬ್ಬನೊಂದಿಗೇನೆ ದ್ರೌಪದಿಯ ಮದುವೆ ಮಾಡಿಸಿ ಏಕವಲ್ಲಭೆಯೆಂಬ ಆಭಾಸವನ್ನು ಹುಟ್ಟಿಸಲು ಪಂಪನಿಗೆ ಅನುಕೂಲವಾಗಿ ಪರಿಣಮಿಸಿತು. ಇಲ್ಲವಾದರೆ ಅವನಿಗಿದ್ದ ಸಮಸ್ಯೆ ಇನ್ನೂ ಹೆಚ್ಚು ದುಸ್ತರವಾಗುತ್ತಿತ್ತು.

ದ್ರೌಪದಿ ಪಂಚ ಪತಿತ್ವದ ನಿದರ್ಶನಗಳು

ಪಾಂಡವರು ಏಕಚಕ್ರ ನಗರದಿಂದ ಹೊರಡುವಾಗ ವ್ಯಾಸ ಅವರಿಗೆ ದ್ರೌಪದಿಯ ಪೂರ್ವವೃತ್ತಾಂತವನ್ನು ತಿಳಿಸಿ, ಅವಳು ನಿಮ್ಮ ಐವರ ಪತ್ನಿಯಾಗಬೇಕೆಂಬುದು ದೈವ ಸಂಕಲ್ಪ; ಪಾಂಚಾಲನಗರಕ್ಕೆ ಹೋಗಿ ಅವಳನ್ನು ಪಡೆದು ಸುಖವಾಗಿ ಬಾಳಿರಿ, ಎಂದು ಸಲಹೆ ಇತ್ತಿರುವದು ಮತ್ತು ದ್ರುಪದನಿಗೆ ಪಂಚೇಂದ್ರರ ವೃತ್ತಾಂತವನ್ನು ತಿಳಿಸಿ ದ್ರೌಪದಿ ಪಂಚವಲ್ಲಭೆ ಎಂಬುದನ್ನು ಮನಗಾಣಿಸಿ ಕೊಟ್ಟಿರುವದು ಅವಳು ಅವರೆಲ್ಲರ ಪತ್ನಿ ಎಂಬುದರ ಸ್ಪಷ್ಟ ನಿದರ್ಶನಗಳು. ಪಂಪ ಪ್ರಕಟವಾಗಿ ಅರ್ಜುನ ಒಬ್ಬನೊಡನೆ ಆಕೆಯ ಮದುವೆಮಾಡಿಸಿದ್ದರೂ ಇವನ್ನು ಅದೇ ಅಂದರೆ ಸ್ವಯಂವರ ಸಂದರ್ಭದಲ್ಲಿ ಸೂಚ್ಯವಾಗಿ ತಂದಿರುವನು. ದ್ರುಪದನಗರಕ್ಕೆ ತಾವು ಹೊರಟ ಉದ್ದೇಶ್ಯಮತ್ತು 'ಪಾರಾಶರ ಮುನೀಂದ್ರೋಪದೇಶವೊಡಂಬಡೆ' ಪಾಂಡವರು ಏಕ ಚಕ್ರ ನಗರದಿಂದ ಪಾಂಚಾಲನಗರಕ್ಕೆ ಪಯಣ ಬೆಳೆಸಿದರು, ಎಂದಿರುವನು[1]. ಇಲ್ಲಿ ಪಾರಾಶರ ಮುನೀಂದ್ರೋಪದೇಶವೊಡಂಬಡೆ' ಎಂಬುದರ ಅರ್ಥವೇನು? ಇದು ದ್ರೌಪದಿ ಪಂಚವಲ್ಲಭೆ; ನೀವೇ ಅವಳ ಐವರು ಪತಿಗಳು, ಎಂಬ ವ್ಯಾಸೋಪದೇಶ ವಲ್ಲದೆ ಬೇರೊಂದಾಗದು. ಧರ್ಮಾದಿ ಪಂಚಪಾಂಡವರು ಮೂಲದಲ್ಲಿ ಪಂಚೇಂದ್ರರು; ದ್ರೌಪದಿ ಇಂದ್ರಾಣಿ–ಅವರ ಪತ್ನಿ, ಎಂಬುದನ್ನು ಅರ್ಜುನ ದ್ರೌಪದಿಯರ ವಿವಾಹ ಸಮಯದಲ್ಲಿ ಮಂಗಲಪಾಠಕರು ಅವರನ್ನು ಇಂದ್ರ–ಇಂದ್ರಾಣಿಗೆ ಹೋಲಿಸಿ ಮಾಡಿದ ಸಾಮಾನ್ಯಸ್ತುತಿಯೆಂತೆ ತೋರುವ ಈ ಪದ್ಯದಲ್ಲಿ ಸಾಂಕೇತಿಕವಾಗಿ ಬಂದಿದೆ—

ಶಾ ‖ ಇಂದ್ರಾನೋಕಹವೊಪ್ಪುವಿಂದ್ರ ತುರಗಂ ಸಂದಿಂದ್ರಗೇಹಂ ಪೊದ-
ಳ್ದಿಂದ್ರಾನೇಕಪವೊಪ್ಪುವಿಂದ್ರನಖಿಳೇಂದ್ರೈಶ್ವರ್ಯಮಿಂದ್ರಾಣಿಸಂ- |
ದಿಂದ್ರಾನರ್ಘ್ಯ ವಿಭೂಷಣಂಗಳರಿಭೂಪಾಳಾವಳೀಮಸ್ತಮ-
ಶ್ಚಂದ್ರಗೀಗರಿಗಂಗೆಮಂಗಳ ಮಹಾಶ್ರೀಯುಂ ಜಯಶ್ರೀಯುಮಂ ‖ ೩/೭೯

—ಇಲ್ಲಿ ಇಂದ್ರಾಣಿಪದ ದ್ರೌಪದಿದ್ಯೋತಕ ಎಂಬುದು ಸ್ಪಷ್ಟವಿದೆ.[2] ಇಂದ್ರಾ

---

1. ಪಾರಾಶರ ಎಂಬುದು ಸರಿಯಾದ ಪಾಠ, ಪರಾಶರ ಎಂದು ತಪ್ಪಿಬಿದ್ದಿದೆ. ಪರಾಶರ ವ್ಯಾಸನ ತಂದೆ; ಪಂ. ಭಾ. 3/33 ನಂತರದ ಗದ್ಯ.
2. ಮ. ಭಾ. ಆದಿ, ೬೭–೧೫೮.

ನೋಕಹ (ಕಲ್ಪವೃಕ್ಷ), ಇಂದ್ರತುರಗ (ಉಚ್ಚೈಶ್ರವ), ಇಂದ್ರಗೇಹ (ಸ್ವರ್ಗ) ಇಂದ್ರಾನೇಕಪ (ಐರಾವತ) ಇವು ಇಂದ್ರನಿಗೆ ನಿತಾಂತವಾಗಿ ಹೊಂದಿಕೊಂಡಿರುವ ವಸ್ತುಗಳು. ಇವಿಲ್ಲದ ಇಂದ್ರ ಇಂದ್ರನಲ್ಲ. ಇಂದ್ರ (ಅರ್ಜುನ), ಇಂದ್ರಾಣಿ(ದ್ರೌಪದಿ) ಮತ್ತು ಕಲ್ಪವೃಕ್ಷಾದಿ ನಾಲ್ಕು ಇಂದ್ರವಿಶಿಷ್ಟ ವಸ್ತುಗಳಲ್ಲಿ ಧರ್ಮಾದಿ ನಾಲ್ವರು ಪೂರ್ವೇಂದ್ರರನ್ನು ಅನುಸಂಧಿಸಿ ಪಂಪ ಈ ಪದ್ಯದಲ್ಲಿ ದ್ರೌಪದಿ ಪಂಚವಲ್ಲಭೆ ಎಂಬು ದನ್ನು ದ್ರುಪದನಿಗೆ ಮನಗಾಣಿಸಿಕೊಡಲು ವ್ಯಾಸಮುನಿಯು ಹೇಳಿದ ಪೂರ್ವೇಂದ್ರರ ಕಥೆಯನ್ನು ಸಾಂಕೇತಿವಾಗಿ ಹೆಣೆದಂತಿದೆ. ಇಲ್ಲವಾದರೆ ಅಡಿಗಡಿಗೆ ಪುನರಾವೃತ್ತ ವಾಗುವ ಇಂದ್ರ, ಇಂದ್ರಾಣಿ ಪದಗಳಿಂದ ಮತ್ತು ಇಂದ್ರವಿಶಿಷ್ಟ ಹಲವು ವಸ್ತು ಗಳಿದ್ದರೂ ಅವುಗಳಲ್ಲಿ ನಾಲ್ಕೇ ವಸ್ತುಗಳನ್ನು ಉಲ್ಲೇಖಿಸಿ ಅವರೆಲ್ಲರ ಸಮೀಕರಣ ದಿಂದ ಅರ್ಜುನನ ವೈಭವವನ್ನು ಬಣ್ಣಿಸಿರುವುದರ ಇಂಗಿತ ತಿಳಿಯದಾಗುವದು.

ಅನ್ಯಸಂದರ್ಭಗಳು

ಈ ಪದ್ಯದ ನಂತರ ಅರ್ಜುನನನ್ನು ಸೆಜ್ಜೆವನೆಗೆ ಕಳಿಸುವ ಸಂದರ್ಭವಿದ್ದು ಅಲ್ಲಿ 'ಮತ್ತಿನ ನಾಲ್ವರ್ಗಂ ಕೊಂತಿಗಂ ಬೇಱೆ ವೇಱೆ ಮಾಡಂಗಳಂ ಬೀಡು ವೇೞ್ದು' ಎಂಬ ಮಾತಿದೆ. ದ್ರೌಪದಿ ನಿಜವಾಗಿಯೂ ಏಕವಲ್ಲಭೆಯಾಗಿದ್ದರೆ ಈ ಮಾತಿನ ಅಗತ್ಯವೇ ಇದ್ದಿಲ್ಲ. ಇದ್ದರೂ ಧರ್ಮಾದಿ ನಾಲ್ವರು ಪಾಂಡವರಿಗೆ ಮತ್ತು ಕುಂತಿಗೆ ದ್ರುಪದ ಬೇರೊಂದು ಆವಾಸದ ಏರ್ಪಾಡು ಮಾಡಿದನೆಂಬುದು ಸರಿಹೋಗುತ್ತಿತ್ತು. ಇಲ್ಲಿಯಾದರೂ ಒಬ್ಬೊಬ್ಬರಿಗೆ ಒಂದೊಂದು ಆವಾಸದ ಏರ್ಪಾಡಾಗಿದೆ. ರಾಜಸ್ತ್ರೀ ಯರಿಗಾಗಿ ಪ್ರತ್ಯೇಕ ಆವಾಸಗಳಿರುವದು ಸುಪರಿಚಿತವಿದೆ. ವಿವಾಹಿತ ರಾಜಕುಮಾರ ರಿಗೂ ಪ್ರತ್ಯೇಕ ಆವಾಸಗಳಿರುವದು ರಾಮಾಯಣದಲ್ಲಿ ಬಂದಿದೆ. ರಾಮನಿಗೆ ಯುವರಾಜ ಪಟ್ಟವನ್ನು ಕಟ್ಟಬೇಕೆಂಬ ತನ್ನ ಸಂಕಲ್ಪವನ್ನು ತಿಳಿಸಲು ರಾಮನನ್ನು ಕರೆತರುವದಕ್ಕಾಗಿ ದಶರಥ ದೂತನನ್ನು ರಾಮನ ಮನೆಗೆ (ರಾಮಸ್ಯಭವನಂ) ಕಳಿಸು ವನು. ದಶರಥನ ಆವಾಸಕ್ಕೆ 'ರಾಜಭವನ' ಎಂದಿದೆ. ಕೌಸಲ್ಯಾದಿ ರಾಜಸ್ತ್ರೀಯ ರಿಗೆ ಅವರವರ ಅಂತಃಪುರಗಳಿದ್ದವು. ವ್ಯಾಸ ಭಾರತದಲ್ಲಿ ಕೂಡ ಯುಧಿಷ್ಠಿರ ಪಟ್ಟಾಭಿ ಷೇಕದ ನಂತರ ಪಾಂಡವರು ಬೇರೆ ಬೇರೆ ಮನೆಗಳಲ್ಲಿ ವಾಸಿಸತೊಡಗಿದರು ಎಂಬ ಮಾತಿದೆ. ಅಷ್ಟೊತ್ತಿಗೆ ಅವರ ಸಂಸಾರ ಬೆಳದಿತ್ತು. ಪ್ರತಿಯೊಬ್ಬನಿಗೂ ದ್ರೌಪದಿಯು ಹೊರ್ತಾಗಿ ಬೇರೆ ಹೆಂಡಂದಿರು ಬಂದಿದ್ದರು.

ಭೀಮ ಹಿಡಿಂಬೆಯನ್ನು ವರಿಸಿದಾಗ ಆಕೆ ಮಿಕ್ಕವರನ್ನು ತನ್ನ ಆವಾಸದಲ್ಲಿರಿಸಿ ಭೀಮನೊಡನೆ ವಿಹಾರಕ್ಕೆ ತೆರಳಿದಳೆಂದಿಷ್ಟೇ ಹೇಳಿದ ಪಂಪ ಇಲ್ಲಿ ಅರ್ಜುನನನ್ನು ಬಿಟ್ಟು ಉಳಿದವರಿಗೆ ದ್ರುಪದ ಬೇರೆ ಬೇರೆ ಆವಾಸಗಳನ್ನು ಒದಗಿಸಿದ ಎಂದಿರುವದು ಸಹೇತುಕವಿದ್ದು ದ್ರೌಪದಿ ಅರ್ಜುನನೊಡನೆ ಉಳಿದ ಪಾಂಡವರ ಪತ್ನಿಯು ಆದಳೆಂಬು ದಕ್ಕೆ ಪೋಷಕ ಅಂಶವೆನ್ನುವಂತಿದೆ.

ದ್ರೌಪದಿ ವಿವಾಹದನಂತರ—

ವ॥ ಚರರಾಗೆಯ್ದಿದರೆಯ್ದಿ ಹಸ್ತಿನಪುರಕ್ಕಾ ಪಾಂಡವರ್ ತಮ್ಮುತ- ।
ಯ್ವರು ಮಿರ್ದರ್ ದ್ರುಪದಾಧಿರಾಜ ಪುರದೊಳ್‌ಕೆಯ್ಕೊಂಡು ಪಾಂಚಾಳಿಯಂ ॥ ೪/೧

—ಈ ಪದ್ಯಾರ್ಧದಲ್ಲಿ ಪಂಪ ಪಾಂಡವರು ದ್ರುಪದನ ಪಟ್ಟಣದಲ್ಲಿ 'ತಮ್ಮುತಯ್ವರು' ಅಂದರೆ ತಾವು ಐವರು 'ಪಾಂಚಾಳಿಯಂಕೆಯ್ಕೊಂಡಿರ್ದರ್' ಎಂಬುದನ್ನು ಚಾರರು ಹಸ್ತಿನಾಪುರದಲ್ಲಿದ್ದ ದುರ್ಯೋಧನನಿಗೆ ತಿಳಿಸಿದರು ಎಂದಿರುವನು. ಈ ಪದ್ಯಾರ್ಧ ಇದೇ ಸಂದರ್ಭದಲ್ಲಿರುವ—

ತತೋರಾಜ್ಞಾಂ ಚರೈರಾಪ್ತೈಃ ಪ್ರವೃತ್ತಿರುಪನೀಯತ ।
ಪಾಂಡವೈರುಪಸಂಪನ್ನಾ ದ್ರೌಪದೀ ಪತಿಭಿಃ ಶುಭಾ ॥ ಆದಿ. ೨೦೦/೧

—ಮಹಾಭಾರತದಲ್ಲಿಯ ಈ ಶ್ಲೋಕದ ಅನುವಾದ. ಪಂಪ ಇದರಲ್ಲಿಯ 'ಪತಿಭಿಃ' ಶಬ್ದದ ಬದಲು 'ತಮ್ಮುತಯ್ವರು' ಮತ್ತು 'ಕೆಯ್ಕೊಂಡು' ಶಬ್ದಗಳನ್ನು ಬಳಸಿರುವನು. ಕೆಯ್ಕೊಳ್ಳು ಎನ್ನುವುದಕ್ಕೆ ತನ್ನದಾಗಿಸಿಕೊಳ್ಳು ಎಂಬ ಸಾಮಾನ್ಯಾರ್ಥವಿದ್ದರೂ ಇದಕ್ಕೆ ಅಭಿನವಪಂಪನ 'ನಾಣಂ ಪಿಂಗಿಸಿ ಮುಗ್ಧೆಗೆ ಜಾಣಂ ಕೆಯ್ಕೊಳಿಸುವಂತೆ' ಎಂಬ ವಿಶೇಷಾರ್ಥವಿರುವ ಉದಾಹರಣೆಯೂ ಇದೆ ಕಿಟೆಲ್‌ಕೋಶದಲ್ಲಿ. ಅತಏವ ಪಂಪನ ಈ ಪದ್ಯಾರ್ಧದ ಅರ್ಥ ಪಂಚಪಾಂಡವರು ದ್ರೌಪದಿಯನ್ನು ತಮ್ಮ ಪತ್ನಿಯನ್ನಾಗಿ ಸ್ವೀಕರಿಸಿದ್ದರು ಎಂದಲ್ಲದೆ ಬೇರೊಂದಾಗದು.

ದ್ರೌಪದಿ ಸ್ವಯಂವರ ಸಂದರ್ಭದಲ್ಲಿ ಬಂದಿರುವ ಮಂಗಳ ಪಾಠಕರ ಉಪರೊಕ್ತ ಮಂಗಳದೊಸಗೆ, ದ್ರುಪದನು ಧರ್ಮಾದಿ ನಾಲ್ವರಿಗೆ ಮತ್ತು ಕುಂತಿಗೆ ಪ್ರತ್ಯೇಕ ಬಿಡಾರಗಳನ್ನು ಒದಗಿಸಿದನೆಂಬ ಮತ್ತು ಮದುವೆಯ ನಂತರ ಪಾಂಡವರು 'ತಮ್ಮುತಯ್ವರು ಪಾಂಚಾಳಿಯಂ ಕೆಯ್ಕೊಂಡು' ದ್ರುಪದ ನಗರದಲ್ಲಿ ವಾಸವಾಗಿದ್ದರೆಂಬ ಮಾತುಗಳನ್ನು ಅನ್ಯಥಾ ಅರ್ಥವಿಸಬಹುದಾದರೂ ದ್ರೌಪದಿ ಪಂಚವಲ್ಲಭೆ ಎಂಬುದಕ್ಕೆ ಸುಸ್ಪಷ್ಟ ಸೂಚನೆ ಇರುವ 'ಪಾರಾಶರ ಮುನೀಂದ್ರೋಪದೇಶ'ದಲ್ಲಿ ಅಡಗಿದ ಅರ್ಥದೊಂದಿಗೆ ನೋಡಿದಾಗ ಇವಾದರೂ ಅವಳು ಪಾಂಡವರೈವರ ಪತ್ನಿಯಾದಳು ಎಂಬುದರ ನಿದರ್ಶನಗಳೆಂಬಲ್ಲಿ ಸಂದೇಹ ಉಳಿಯದು. ಪ್ರಕಟವಾಗಿ ಪಂಪ ಅವಳನ್ನು ಅರ್ಜುನ ಒಬ್ಬನೊಡನೆ ಮದುವೆ ಮಾಡಿಸಿರುವುದು ಆಭಾಸ ಮಾತ್ರ; ಆಶ್ರಯದಾತ ಅರಿಕೇಸರಿಯ ವಿಷಯದಲ್ಲಿ ಸಲ್ಲದ ಕುಚೋದ್ಯಕ್ಕೆ ಆಸ್ಪದ ದೊರೆಯದಂತೆ ಮಾಡಲು ಅಗತ್ಯವಿರುವ ಮಾರ್ಪಾಟು, ಎಂಬುದು ಸ್ಪಷ್ಟವಾಗದಿರದು. ಇಷ್ಟೇ ಅಲ್ಲ, ತಾನು ಸೃಷ್ಟಿಸಿದ ಈ ಅಭಾಸವೇ ವಸ್ತು ಸ್ಥಿತಿಯೆಂದು ತಿಳಿಯುವಂತಾಗಬಾರದು ಮತ್ತು ಆ ಮೂಲಕ ತನಗೆ ಕಥೆಯನ್ನು ಮೆಯ್ಗಿಡಿಸಿದನೆಂಬ ಅಪವಾದ ತಟ್ಟಬಾರದು ಎಂದು ಪಂಪ ಉದ್ದೇಶಪೂರ್ವಕವಾಗಿ ದುಶ್ಶಾಸನ ವಧೆಯ ಸಂದರ್ಭದಲ್ಲಿ ಭೀಮ ಅವಳನ್ನು 'ತನ್ನ ತಳೋದರಿ' ಎಂದು ನಡೆಸಿಕೊಳ್ಳುವಂತೆ ಮಾಡಿರಬೇಕೆಂದು ಭಾವಿಸುವಂತಿದೆ.

ಪಂಪನ ಈ ತಂತ್ರ ವ್ಯಾಸ ಭಾರತದ ಸಂದಿಗೊಂದಿಗಳನ್ನು ಬಲ್ಲ ಅಂದಿನವರ ಅಭಿಪ್ರಾಯದಲ್ಲಿ ಪೂರ್ಣ ಯಶಸ್ವಿಯಾಗಿರಬೇಕು; ಇಲ್ಲವಾದರೆ ಆತನ ಈ ಕೃತಿಗೆ ಇಷ್ಟೊಂದು ಮನ್ನಣೆ ದೊರೆಯುತ್ತಿದ್ದಿಲ್ಲ; ವೈದಿಕ ಮತಾವಲಂಬಿಗಳಾದ ಅರಿಕೇಸರಿ ಮತ್ತು ಇತರ ಸಹೃದಯರು ಇಷ್ಟಕ್ಕಿಂತ ಹೆಚ್ಚು ಅವೇಕ್ಷಿಸಿಕಲಾರರು, ಎನಿಸುವದು. ಆದರೆ ಇಂದಿನವರಾದ ನಾವು ಆಭಾಸವನ್ನೇ ನಿಜವೆಂದು ನಂಬಿ ಅವನನ್ನು ದೋಷಿಯೆಂದು ನಿರ್ಣಯಿಸಿ, ಅರಿಕೇಸರಿಯ ದಾಕ್ಷಿಣ್ಯದಲ್ಲಿ ಬಿದ್ದು ಕನ್ನಡದ ಆದಿಕವಿ ಇಲ್ಲಿ ಜಾರಿರುವನು; ಕಣ್ಣು ಬಿಟ್ಟುಕೊಂಡೇ ಜಾರಿರುವನು, ಎಂದು ಮುದ್ರೆಯನ್ನೊತ್ತಿರುವೆವು.

ಸುಭದ್ರೆಗೆ ಪಟ್ಟವೇಕೆ ?

ಅರ್ಜುನ ಪಟ್ಟಾಭಿಷೇಕದ ಸಮಯದಲ್ಲಿ ದ್ರೌಪದಿಯ ಬದಲು ಸುಭದ್ರೆಗೆ ಪಟ್ಟಗಟ್ಟಿರುವದಾದರೂ ಆಕೆ ಪಂಚವಲ್ಲಭೆ ಎಂಬ ಕಾರಣದಿಂದಲೇ. ಅಯ್ವರ ಪತ್ನಿ ಇದ್ದರೂ ಆಕೆಯ ಮಾನ ಸನ್ಮಾನಗಳೆಲ್ಲ ಹಿರಿಯನೆಂಬ ಕಾರಣದಿಂದ ಯುಧಿಷ್ಠಿರನ ಮಾನಸನ್ಮಾನಗಳೊಂದಿಗೆ ಸಲ್ಲಗ್ನವಾಗಿವೆ. ವ್ಯಾಸಭಾರತದಲ್ಲಿ ಯುಧಿಷ್ಠಿರನ ಪಟ್ಟಾಭಿಷೇಕ ಇಂತಾಗಿದೆ. ಅಲ್ಲಿ ದ್ರೌಪದಿಯೇ ಪಟ್ಟರಾಣಿ. ಭೀಮಾದಿಗಳು ಅವನ ಆಧೀನವರ್ತಿಗಳು. ಸ್ವಯಂವರದಲ್ಲಿ ದ್ರೌಪದಿಯನ್ನು ಗೆದ್ದ ಬಳಿಕ ಯುಧಿಷ್ಠಿರ ಅರ್ಜುನನಿಗೆ ಅವಳನ್ನು ನೀನೇ ಮದುವೆಯಾಗೆಂದನು. ಆಗ ಅರ್ಜುನ ಅಣ್ಣಾ, ನೀನು ಹಿರಿಯ; ಮೊದಲು ನಿನ್ನ ಮದುವೆ. ನಂತರ ಭೀಮಾದಿ ನಮ್ಮೆಲ್ಲರ ಮದುವೆ; ಇದನ್ನು ಬಿಟ್ಟು ನೀನೇ ಮದುವೆಯಾಗೆಂದು ಹೇಳಿ ನನ್ನನ್ನು ಅಧರ್ಮದಲ್ಲಿ ಕೆಡವಬೇಡ; ಇದು ಶಿಷ್ಟ ಪರಂಪರೆಯಲ್ಲ; ನಾವೆಲ್ಲರೂ, ದ್ರೌಪದಿ ಸಹ, ನಿನ್ನ ಆಜ್ಞೆಯಲ್ಲಿರುವೆವು, ಎನ್ನುವನು.[1] ಜೂಜಿನ ದುರಂತವನ್ನು ಮತ್ತು ದ್ರೌಪದಿಯ ಕರುಣಾಜನಕ ಸ್ಥಿತಿಯನ್ನು ಸಹಿಸದೆ ಧೃತರಾಷ್ಟ್ರ ಅವಳಿಗೆ ಬೇಕಾದ ವರವನ್ನು ಕೇಳೆಂದಾಗ ಆಕೆ ಯುಧೀಷ್ಠಿರನ ಮತ್ತು ಆತನಿಂದ ಜನ್ಮಿಸಿದ ತನ್ನ ಮಗ ಪ್ರತಿವಿಂಧ್ಯನ ಸ್ವಾತಂತ್ರ್ಯವನ್ನು ಬೇಡಿದಳು. ಧೃತರಾಷ್ಟ್ರ ಇನ್ನೊಂದು ವರವನ್ನು ಕೇಳೆನಲು ಅವರವರ ಶಸ್ತ್ರಾಸ್ತ್ರ ಸಮೇತ ಭೀಮಾದಿ ನಾಲ್ವರು ಪತಿಗಳ ಸ್ವಾತಂತ್ರ್ಯವನ್ನು ಕೇಳಿದಳು.[2] ದ್ರೌಪದಿಯ ಈ ಕೃತಿಯಿಂದ ಪಂಪ ಭಾರತದಲ್ಲಿ ಕೂಡ ಯುಧಿಷ್ಠಿರ ತಾನಾಗಿಯೇ ರಾಜ್ಯಬೇಡೆಂದಾಗ ಅವನೊಂದಿಗೆ ಆಕೆ ಸಹ ತನಗೆ ಪಟ್ಟ ಮಹಿಷಿಯ ಸ್ಥಾನ ಬೇಡೆಂದಳೆಂದು ಊಹಿಸಬಹುದಾಗಿದೆ.

ಯುಧಿಷ್ಠಿರ ತನಗೆ ರಾಜ್ಯ ಬೇಡೆಂದರೂ ಹಿರಿಯನಾಗಿ ತಮ್ಮಂದಿರ ಕಲ್ಯಾಣವನ್ನು ಚಿಂತಿಸುತ್ತ ಅವರವನಾಗಿಯೆ ಉಳಿದ. ಅರ್ಜುನನಿಗೆ ಪಟ್ಟವನ್ನು ದೊರಕಿಸಲು ಪಂಪ ಯುಧಿಷ್ಠಿರನಿಂದ ತನಗೆ ರಾಜ್ಯದಲ್ಲಿ ಮೋಹವಿಲ್ಲೆಂದೆನಿಸಿ, ಅಖಂಡ ರಾಜ್ಯದಲ್ಲಿ

1. ಮ. ಭಾ. ಆದಿ. ೧೯೧/೮-೧೦.
2. ಅದೇ, ಸಭಾ. ೭೧/೨೮-೩೨.

ಭೀಮಾದಿಗಳಿಗೆ ಪಾಲು ಕೊಡಿಸಿ, ಉಳಿದ ಭಾಗಕ್ಕೆ ಅರ್ಜುನನನ್ನು ಅರಸನನ್ನಾಗಿಸಿರುವನು. ಇಂಥ ವಿಭಜಿತ ರಾಜ್ಯದ ಸಿಂಹಾಸನವನ್ನೇರಿದ ಅವನಿಗೆ, ಅದೂ ಯುಧಿಷ್ಠಿರನ ಉಪಸ್ಥಿತಿಯಲ್ಲಿ, ದ್ರೌಪದಿಯನ್ನು ಪಟ್ಟಮಹಿಷಿಯನ್ನಾಗಿಸುವುದು ಲೋಕಪ್ರಸಿದ್ಧವಿರುವ ಅವಳ ಸ್ಥಾನಮಾನಗಳಿಗೆ ಕುಂದು ತಂದಂತಾಗುತ್ತಿತ್ತು. ಬಹುಶಃ ಇವೆಲ್ಲ ಅಂಶಗಳನ್ನು ಮನದಂದು ಪಂಪ ಅರ್ಜುನನೊಂದಿಗೆ ವಿಧ್ಯುಕ್ತವಾಗಿ ಮದುವೆಯಾದ ಸುಭದ್ರೆಯನ್ನು ಅವನ ಪಟ್ಟಮಹಿಷಿಯನ್ನಾಗಿಸಿದಂತಿದೆ.

ಗದಾಯುದ್ಧದಲ್ಲಿ ಕೂಡ ಊರುಭಂಗದ ನಂತರ ಧರ್ಮಾದಿ ಪಾಂಡವರು ಶ್ರೀಕೃಷ್ಣ ಹಾಗು ದ್ರೌಪದಿ ಭೀಮನ ಬಾಹುದಂಡಗಳನ್ನು ಪೂಜಿಸಿದ ನಂತರ ಆಕೆ ಹಿಂದೆ ಸರಿಯುವಳು. ಅಲ್ಲಿ ಸಹ ಯುಧಿಷ್ಠಿರ ತನಗೆ ರಾಜ್ಯದಲ್ಲಿ ಮೋಹವಿಲ್ಲೆಂದು ಹೇಳಿ ಭೀಮನ ಪಟ್ಟಾಭಿಷೇಕಕ್ಕೆ ಅನುವು ಮಾಡಿಕೊಡುವನು. ಯುಧಿಷ್ಠಿರನ ನಂತರ ಭೀಮ ಹಿರಿಯನಿದ್ದರೂ ಆತನ ಪಟ್ಟಾಭಿಷೇಕ ಸಮಯದಲ್ಲಿ ದ್ರೌಪದಿಯ ಹೆಸರಿಲ್ಲ. ಕ್ರಮಪ್ರಾಪ್ತವೆಂದು ಬಗೆದು ಓದುಗರು ಅವಳಾದರೂ ಭೀಮನ ಪಟ್ಟರಾಣಿ ಆದಳೆಂದು ಊಹಿಸಿಕೊಳ್ಳಬಹುದು. ಪಂಪ ಭಾರತದಲ್ಲಿ ಸುಭದ್ರೆಯ ಹೆಸರು ಬಂದಿರುವಂತೆ ರನ್ನ ಇಲ್ಲಿ ದ್ರೌಪದಿಯ ಹೆಸರನ್ನೇಕೆ ತಂದಿಲ್ಲ, ಎಂಬುದು ಯೋಚನೆಗೆಟ್ಟುಕೊಳ್ಳುತ್ತದೆ. ರಾಕ್ಷಸಿಯೆಂದು ಹಿಡಿಂಬೆಯನ್ನು ಬಿಟ್ಟರೂ ಭೀಮನಿಗೆ ಬಲಂಧರೆಯೆಂಬ ಇನ್ನೊಬ್ಬ ಹೆಂಡತಿ ಇದ್ದಳು. ಕೇವಲ ಪರಾಕ್ರಮವೇ ಕನ್ಯಾಶುಲ್ಕವೆಂದು ಸಾರಿದ ಅವಳನ್ನು ಆತ ಆ ಶುಲ್ಕವನ್ನಿತ್ತು ಮದುವೆಯಾಗಿದ್ದ.[1] ಹಿಡಿಂಬೆ ರಾಕ್ಷಸಿ, ಬಲಂಧರೆ ಅಪ್ರಸಿದ್ಧ, ದ್ರೌಪದಿಯ ಮಾನಸನ್ಮಾನಗಳು ಯಧಿಷ್ಠಿರನ ಜೊತೆಗೆ, ಎಂದು ಬಗೆದು ರನ್ನ ಓದುಗರು ತಮಗೆ ಸರಿದೋರಿದಂತೆ ತಾವೇ ಊಹಿಸಿಕೊಳ್ಳಲಿ ಎಂದು ಭೀಮನ ಪಟ್ಟಾಭಿಷೇಕ ಸಮಯದಲ್ಲಿ ಬೇಕೆಂತಲೇ ದ್ರೌಪದಿಯ ಹೆಸರನ್ನು ಬಿಟ್ಟಿರಬಹುದೆ, ಎಂಬ ಸಂದೇಹ ಮೂಡುತ್ತದೆ.

'ಮೊದಲಿನಿಂದ ಕಡೆತನಕ ಪಾಂಡವರೊಡನೆ ಪಡಬಾರದ ಕಷ್ಟವನ್ನು ಅನುಭವಿಸಿದವಳು ದ್ರೌಪದಿ; ಸುಖದ ಕಾಲ ಬಂದಾಗ ಸದ್ದಿಲ್ಲದೆ ಗದ್ದುಗೆ ಏರಿದವಳು ಸುಭದ್ರೆ', ಎಂದು ಪಂಪನನ್ನು ಆಕ್ಷೇಪಿಸುವ ಮೊದಲು ಈ ಅಂಶಗಳ ವಿಚಾರ ನಡೆಯಬೇಕಿತ್ತು ಎನಿಸುವದು.

ವ್ಯಾಸಭಾರತಕ್ಕೂ ಪಂಪಭಾರತಕ್ಕೂ ಇರುವ ಒಂದೇ ಒಂದು ಮಹತ್ವದ ವ್ಯತ್ಯಾಸವೆಂದರೆ ಯುಧಿಷ್ಠಿರನ ಬದಲು ಅರ್ಜುನನಿಗೆ ಪಟ್ಟಗಟ್ಟಿರುವದು. ಗ್ರಂಥಾಂತ್ಯದಲ್ಲಿ ತಾನು ಸಂಗ್ರಹಿಸಿದ ವ್ಯಾಸ ಭಾರತದ ವಿಷಯಗಳನ್ನು ಉಲ್ಲೇಖಿಸುತ್ತ ಪಂಪ ಮುಚ್ಚುಮರೆಯಿಲ್ಲದೆ ಈ ಸಂದರ್ಭವನ್ನು 'ಅರ್ಜುನಾಭಿಷೇಕಂ' ಎಂದಿರುವನು. ಗ್ರಂಥಾರಂಭದಲ್ಲಿ 'ಕವಿವ್ಯಾಸನೆನೆಂಬ ಗರ್ವಮೆನಗಿಲ್ಲ, ಗುಣಾರ್ಣವನೊಳ್ಪು ಮನ್ಮನೋವಾಸಮನೆಯ್ದೆ ಪೇೞ್ದಪೆನ್' ಎಂದಿರುವನು. ಆದ್ದರಿಂದ ಇಷ್ಟುಮಟ್ಟಿಗೆ ಪಂಪ

1. ಮ. ಭಾ. ಆದಿ-೯೫/೭೭.

ವಹಿಸಿದ ಸ್ವಾತಂತ್ರ್ಯವು ಉಪೇಕ್ಷಣೀಯ, ಆತನ ಮಟ್ಟಿಗೆ ಭೂಷಣಪ್ರದ, ಎನ್ನ ಬಹುದು.

ಅರ್ಜುನ ಸಾಮಂತಚೂಡಾಮಣಿ !

ಅರಿಕೇಸರಿ ಸಾಮಂತಚೂಡಾಮಣಿ. ತ್ರಿಲೋಕಕ್ಕೈಕ ವೀರನಾದ ಅರ್ಜುನ ನಿಗೂ ಪಂಪ ಈ ಬಿರುದನ್ನು ಅಂಟಿಸಿರುವದು ಅನುಚಿತವೆಂಬ ಅಭಿಪ್ರಾಯವಿದೆ. ಅರ್ಜುನನ ಜನ್ಮೋತ್ಸವದಲ್ಲಿ ಆತನಿಗಿಟ್ಟ ಅರಿಕೇಸರಿಯ ಹಲವು ಹೆಸರುಗಳಲ್ಲಿ ಇದೂ ಒಂದು. ಅರ್ಜುನನಿಗೆ ಸಂಬಂಧಿಸಿ ಹಲವೆಡೆಗಳಲ್ಲಿ ಬಂದಿದ್ದರೂ ಅರಿಕೇಸರಿಯ ಸಾಹಸಗಳನ್ನು ಅರ್ಜುನನವೆಂದು ಬಣ್ಣಿಸುವಾಗ ಪಂಪ ಇದನ್ನು ಅರ್ಜುನ ಅರಿಕೇಸರಿ ಇಬ್ಬರಿಗೂ ಹೊಂದುವಂತೆ ಬಳಸಿರುವನು. ಕೊನೆಯಸಲ ಇದನ್ನು ಬಳಸಿರುವದು ಯುಧಿಷ್ಠಿರ ಕೃಷ್ಣನ ಅನುಮತಿಯಿಂದ ಅರ್ಜುನನಿಗೆ ಪಟ್ಟಗಟ್ಟಬೇಕೆಂದು ನಿರ್ಣಯಿಸಿ ದಾಗ. ಪಟ್ಟಾಭಿಷೇಕದ ನಂತರ ಅರ್ಜುನನವೆಂದು ಅರಿಕೇಸರಿಯ ಸಾಹಸಗಳ ಪುನರುಕ್ತಿಯಾಗಿದ್ದರೂ ಪಂಪ ಅಲ್ಲಿ ಈ ಪದವನ್ನು ಬಳಸಿಲ್ಲ. ಸಾಮಂತ ಪದಕ್ಕೆ ಮಾಂಡಲಿಕನೆಂಬ ಅರ್ಥದೊಡನೆ ಅಗ್ರಗಣ್ಯ, ಮಹಾಸೇನಾಪತಿ, ಎಂಬ ಅರ್ಥ ಗಳಿವೆ. ಮಾಂಡಲಿಕರಲ್ಲಿ ಹಿರಿಯನೆಂಬ ಅರ್ಥದಲ್ಲಿ 'ಸಾಮಂತಚೂಡಾಮಣಿ' ಬಿರು ದನ್ನು ಅರ್ಜುನನಿಗೆ ಅನ್ವಯಿಸುವದು ಅನುಚಿತವಾದರೂ ಶೌರ್ಯ ಸಾಹಸಗಳಲ್ಲಿ ಆತ ಅಗ್ರಗಣ್ಯನೆಂಬಲ್ಲಿ ಭಿನ್ನಾಭಿಪ್ರಾಯಕ್ಕೆ ಇಂಬಿಲ್ಲ. ಬಹುಶಃ ಪಂಪ ಅರ್ಜುನನ ವಿಷಯದಲ್ಲಿ ಅಗ್ರಗಣ್ಯ ಎಂಬರ್ಥದಲ್ಲಿ ಮತ್ತು ಅರಿಕೇಸರಿಯ ಸಂದರ್ಭ ಬಂದಾಗ ಅವನಿಗೂ ಹೊಂದುವಂತೆ ಈ ಬಿರುದನ್ನು ಬಳಸಿದಂತಿದೆ.

ಅರ್ಜುನನ ಹೆಸರಿನಲ್ಲಿ ಅರಿಕೇಸರಿಗೆ ಅಧಿರಾಜನೆಂದು ಪಟ್ಟಗಟ್ಟಿರುವದು ನಿಜ ಜೀವನದಲ್ಲಿ ಆತನ ಅಧಿರಾಜನಿದ್ದ ಬಲ್ಲಹ (ರಾಷ್ಟ್ರಕೂಟ ಮುಮ್ಮಡಿ ಕೃಷ್ಣ ?)ನಿಗೆ ಅಥವಾ ಅವನ ಅಭಿಮಾನಿಗಳಿಗೆ ಎಷ್ಟರ ಮಟ್ಟಿಗೆ ರುಚಿಸುತ್ತಿತ್ತೊ ಎಂಬುದೊಂದು ಪ್ರಶ್ನೆ. ಬಹುಶಃ ಇದನ್ನು ಮುಂದಾಲೋಚಿಸಿ ಪಂಪ

ಪಸರಿಸಿನೀಳ್ದ ತನ್ನ ಜಸದೊಳ್ ಪೆಱನೊರ್ವನ ಕೀರ್ತಿ ತಳ್ತು ರಂ–
ಜಿಸೆ ನೆಗೞ್ವಾತನೇಂ ನೆಗೞ್ವನೆಂಬ ಚಲಂ ಮಿಗೆ ತನ್ನ ಪೆಂಪು ತ–।
ನ್ನೆಸಕಮೆ ತನ್ನ ವಿಕ್ರಮಮೆ ತನ್ನ ನೆಗೞ್ತೆಯೆ ತನ್ನ ಮಾತೆ ತಾ–
ನೆಸೆವ ಜಗತ್ರಯಕ್ಕೆನಿಸಿ ಪಾಲಿಸಿದಂ ನೆಲನಂ ಗುಣಾರ್ಣವಂ ॥ ೧೪/೩೯

—ಈ ಪದ್ಯದಲ್ಲಿ ಒಬ್ಬನ ಕೀರ್ತಿಯಲ್ಲಿ ಇನ್ನೊಬ್ಬನ ಕೀರ್ತಿ ಸೇರಿದರೆ ಅದಕ್ಕೆ ಬೆಲೆಯಿಲ್ಲೆಂದು ಬಗೆದು ತನ್ನ ಸ್ವಂತ ಪರಾಕ್ರಮ, ಕಾರ್ಯ ಕೌಶಲ್ಯ, ಮೊದಲಾದ ಗುಣಗಳಿಂದ ಮೂರು ಲೋಕಗಳಿಗೆ ಒಡೆಯನಾದನೆಂದು ಅರ್ಜುನನ ರಾಜ್ಯಭಾರ ವನ್ನು ಬಣ್ಣಿಸಿರುವನು. ಈ ಬಣ್ಣನೆಯಲ್ಲಿ–ಪಾರ್ಥಿವ ಸ್ಥಾನಮಾನಗಳು ದೈವಾ ಯತ್ತ ; ನಿಜವಾದ ಬೆಲೆ ಇರುವದು ಪರಾಕ್ರಮಾದಿ ಉದಾತ್ತ ಗುಣಗಳಿಗೆ ; ಸಾಮಂತ

ನಿದ್ದರೂ ಗುಣಾರ್ಣವನಾದ ಅರಿಕೇಸರಿ ತನ್ನ ಈ ಗುಣಗಳಿಂದ ಮೂರು ಲೋಕಗಳಿಗೆ ಒಡೆಯನಾದ, ಎಂಬ ಧ್ವನಿ ಇರುವದರಿಂದ ಪಂಪ ಇಲ್ಲಿ ಬಲ್ಲಹನನ್ನು ಕೆಳಗಿಳಿಸದೆ ಅರಿಕೇಸರಿಯನ್ನು ಮೇಲಕ್ಕೇರಿಸಿದಂತಿದೆ.[1]

---

1. ಪಂಪಭಾರತದಲ್ಲಿ ಭಾರತದ ಲೋಕಪೂಜ್ಯತೆಯನ್ನು ಬಣ್ಣಿಸುವ ಸುಪರಿಚಿತ 'ಚಲದೊಳ್ ದುರ್ಯೋಧನಂ ನನ್ನಿಯೊಳಿನತನಯಂ' ಉಪಸಂಹಾರಾತ್ಮಕ ಪದ್ಯದಲ್ಲಿ ದುರ್ಯೋಧನ, ಕರ್ಣ, ಭೀಮ, ಶಲ್ಯ, ಭೀಷ್ಮ, ದ್ರೋಣ, ಅರ್ಜುನ, ಧರ್ಮ ಇವರ ಹೆಸರುಗಳಿದ್ದು ಭಾರತದ ಸೂತ್ರಧಾರ ಶ್ರೀಕೃಷ್ಣನ ಹೆಸರಿಲ್ಲದಿರುವದು ಚರ್ಚೆಗೆ ಆಸ್ಪದವಿತ್ತಿದೆ. ಈ ಚರ್ಚೆಗೆ ಸಂಬಂಧಿಸಿ ಪಂಪನ ಅರ್ಜುನ ವ್ಯಾಸಭಾರತದ ಅರ್ಜುನನಲ್ಲ; ಆತ ಸ್ವಾಭಿಮಾನಿ; ತನ್ನ ಸ್ವಂತ ಮಹಿಮೆ ಪರಾಕ್ರಮಗಳಿಂದ ಮೆರೆಯುವವ; ಶ್ರೀಕೃಷ್ಣನ ನೆರಳಾಗಿ ಬಾಳುವವನಲ್ಲ; ಅಂತೆಯೆ ಇಲ್ಲಿ ಶ್ರೀಕೃಷ್ಣನ ಹೆಸರಿಲ್ಲ, ಎಂಬುದಕ್ಕೆ ಈ ಪದ್ಯ ಆಧಾರವಾಗಿ ಬಂದಿದೆ. ಶ್ರೀಕೃಷ್ಣ ಇವರೆಲ್ಲರನ್ನು ಮೀರಿದ ಮಹಾಮಹಿಮ; ಇಲ್ಲಿ ಪಂಪನ ಮೌನವು ಶ್ರೀಕೃಷ್ಣನ ಲೋಕೋತ್ತರತ್ವಕ್ಕೆ ಉತ್ತಮ 'ಧ್ವನಿ' ಕಾಣಿಕೆ; ಗ್ರಂಥದುದ್ದಕ್ಕೂ ಶ್ರೀಕೃಷ್ಣನ ದೇವತ್ವದ ಪ್ರಸ್ತಾಪವಿದ್ದರೂ ಇದನ್ನು ವಾಚ್ಯವಾಗಿ ಹೇಳಲು 'ಜಿನಪದಾಂಬೋಜ ವರಪ್ರಸಾದೋತ್ಪನ್ನ' ಪಂಪ ಅದೇಕೋ ಹಿಂತೆಗೆದಿರುವನು, ಎಂಬ ಅನ್ಯ ಅಭಿಪ್ರಾಯಗಳಾದರೂ ವ್ಯಕ್ತವಾಗಿವೆ.

ಹಾಗೆ ನೋಡಿದರೆ ಈ ಚರ್ಚೆ ಅನಗತ್ಯ ಮತ್ತು ತಪ್ಪುತಿಳಿವಳಿಕೆಗೆ ಇಂಬುಗೊಡುವಂಥದು. ಪಂಪನಾಗಲಿ ರನ್ನನಾಗಲಿ ಮತೀಯ ಇಲ್ಲವೆ ಬೇರೆ ಯಾವುದೇ ಕಾರಣದಿಂದ ತಮ್ಮ ಈ ಕೃತಿಗಳಲ್ಲಿ ಶ್ರೀಕೃಷ್ಣನನ್ನು ಲಘುವಾಗಿ ಕಂಡಿಲ್ಲ. ಇಬ್ಬರೂ ಅವನನ್ನು ಸಾಕ್ಷಾತ್ ನಾರಾಯಣನೆಂದೇ ಬಣ್ಣಿಸಿರುವರು. 'ವಿಕ್ರಮಾರ್ಜುನನ ಮನದೊಳಾದ ವ್ಯಾಮೋಹಮಂ ಕಳೆಯಲು ದಿವ್ಯಸ್ವರೂಪಂ ತೋರಿದ ಮುಕುಂದ' ಇದೊಂದು ಮಾತಿನಲ್ಲಿ ಪಂಪ ಸಮಗ್ರ ಭಗವದ್ಗೀತೆಯನ್ನು ಸಂಗ್ರಹಿಸಿರುವನು. 'ಚಲದೊಳ್ ದುರ್ಯೋಧನಂ' ಪದ್ಯದಲ್ಲಿ ಉಕ್ತರಾದವರು ಭಾರತ ವೀರರು. ಒಬ್ಬೊಬ್ಬರು ಒಂದೊಂದು ಗುಣಕ್ಕೆ ಹೆಸರಾದವರು. ಶ್ರೀಕೃಷ್ಣ ಇವರೆಲ್ಲರಿಗಿಂತ ಶ್ರೇಷ್ಠನಿದ್ದರೂ ಭಾರತವೀರನೆಂದು ಪ್ರಸಿದ್ಧನಿಲ್ಲ. ಪ್ರಾಮುಖ್ಯವಾಗಿ ಆತ ಸತ್ಪಕ್ಷ ಸಹಾಯಕ, ಪಾಂಡವ ಬಂಧು, ಚತುರಮುತ್ಸದ್ದಿ, ಎಂದು ಕಾಣಿಸಿಕೊಂಡಿರುವನು.

ಇದನ್ನು ಮನದಂದು ಪಂಪ ಒಮ್ಮೆ ಅಂದರೆ ರಾಜಸೂಯ ಯಾಗದ ನಂತರ ಧರ್ಮನಿಂದ, ಎರಡನೆಯ ಸಲ ಕಾವ್ಯಸಂಹಾರದಲ್ಲಿ ಕಥಾನಾಯಕ ಅರ್ಜುನನಿಂದ ಶ್ರೀಕೃಷ್ಣನ ಸ್ತುತಿಮಾಡಿಸಿರುವನು. ಭಾರತದ ಕಥೆಯನ್ನು ಎರಡು ಮುಖ್ಯ ಘಟ್ಟಗಳಲ್ಲಿ ವಿಂಗಡಿಸಬಹುದು. ಒಂದು–ಪ್ರಾರಂಭದಿಂದ ಇಂದ್ರಪ್ರಸ್ಥದಲ್ಲಿ ಯುಧಿಷ್ಠಿರನ ಪಟ್ಟಾಭಿಷೇಕ ಮತ್ತು ರಾಜಸೂಯಯಾಗ; ಎರಡು–ಮುಂದಿನ ಕಥೆ ಅಂದರೆ ಜೂಜು, ವನವಾಸ, ಅಜ್ಞಾತವಾಸ, ಯುದ್ಧ, ಪುನಃ ಯುಧಿಷ್ಠಿರನ ಪಟ್ಟಾಭಿಷೇಕ. ಪಂಪ ಭಾರತದಲ್ಲಿ ಎರಡನೆಯ ಸಲ ಯುಧಿಷ್ಠಿರನ ಬದಲು ಅರ್ಜುನನಿಗೆ ಪಟ್ಟವಾಗಿರುವದರಿಂದ ಶ್ರೀಕೃಷ್ಣನ ಸ್ತುತಿ ಆತನ ಮುಖದಿಂದ ಬಂದಿದೆ.

ರನ್ನ ಶ್ರೀಕೃಷ್ಣನನ್ನು 'ಸಕಲ ಜಗದುತ್ಪತ್ತಿಸ್ಥಿತಿ ಪ್ರಳಯ ಪ್ರಭು' ಎಂದು ಬಣ್ಣಿಸಿ ಕಾವ್ಯಸಂಹಾರದಲ್ಲಿ ಯುಧಿಷ್ಠಿರನಿಂದ ಅವನ ಸ್ತುತಿ ಮಾಡಿಸಿರುವನು.

ಕಾವ್ಯಸಂಹಾರ ಎನ್ನುವದು ನಾಟ್ಯಶಾಸ್ತ್ರದಲ್ಲಿ ಬರುವ ಒಂದು ಪಾರಿಭಾಷಿಕಪದ. ಫಲಪ್ರಾಪ್ತಿಯನಂತರ ನಾಯಕನಿಗೆ ಮೊದಲಿನಿಂದಲೂ ಬೆಂಗಾವಲಾಗಿ ನಿಂತು ನೆರವಾಗುತ್ತಿರುವ ಹಿರಿಯ ವ್ಯಕ್ತಿ 'ನನ್ನಿಂದ ಇನ್ನೇನಾಗಬೇಕು?' ಎಂದು ಕೇಳುವನು. ಆಗ ನಾಯಕ–'ನಿನ್ನ

ಇಂದು ವಿಸಂಗತ–ಅಂದು ಅಲಂಕಾರಿಕ

ಅರ್ಜುನ ತನ್ನ ಪರಾಕ್ರಮವನ್ನು ಮೆರೆಯುವದರೊಂದಿಗೆ ತಾನು ನರಸಿಂಗ ಜಾಕವ್ವೆ (ಅರಿಕೇಸರಿಯ ತಂದೆತಾಯಿ)ಯರ ಮಗನೆಂದು ಹೇಳಿಕೊಂಡಾಗ, ಕೃಷ್ಣನು ಸಂಧಾನ ಕಾರ್ಯಕ್ಕೆ ಹೋದಾಗ ಅರ್ಜುನನ ಸಾಹಸ ಮಹಿಮೆಗಳೊಂದಿಗೆ ಅರಿಕೇಸರಿಯ ವಿಜಯಗಳನ್ನು ಸೇರಿಸಿ ಹೇಳುವಾಗ ಓದುಗರಿಗೆ 'ದಿಗ್ಭ್ರಮೆ' ಹಿಡಿದಂತಾಗುವದೆಂಬ ಆಕ್ಷೇಪಣೆ ಇದೆ. ರನ್ನ ಕೂಡ ಹೀಗೆಯೆ ಮಾಡಿರುವನು. ಯುದ್ಧದಲ್ಲಿ ದುರ್ಯೋಧನನ ತೊಡೆಗಳನ್ನು ಮುರಿವೆನೆಂಬ ಪ್ರತಿಜ್ಞೆಯನ್ನು ನೆರವೇರಿಸದೆ ಹೋದರೆ ತಾನು ಆಹವಮಲ್ಲ ಜಾಕವ್ವೆ (ಇರಿವ ಬೆಡಂಗನ ತಂದೆತಾಯಿ)ಯರ ಮಗನೆಂಬುದು ಸಾರ್ಥಕವಾಗದು, ಎಂದು ಭೀಮನಿಂದ ನುಡಿಸಿರುವನು. ಭೀಮನ ಸಾಹಸಕೃತಿಗಳೊಂದಿಗೆ ಇರಿವಬೆಡಂಗನ ಸಾಹಸಕೃತಿಗಳನ್ನು ಸೇರಿಸಿ ಬಣ್ಣಿಸಿರುವನು. ಭೀಮನಿಗೆ ಚಾಲುಕ್ಯವಂಶಾವಳಿಯನ್ನು ಅಂಟಿಸಿರುವನು.

ಪಂಪರನ್ನರ ಈ ಬಗೆಯ ಬಣ್ಣನೆ ಆಶ್ರಯದಾತರಲ್ಲಿ ಅವರಿಗಿದ್ದ ಅತೀವ ಪಕ್ಷಪಾತದಿಂದ ಸ್ಫುರಿಸಿದ ಕವಿವ್ಯಾಪಾರವಲ್ಲದೆ ಬೇರೊಂದಲ್ಲ. ಪೂರ್ವಭೂಮಿಪರ ಗುಣಗಳನ್ನು ತಮ್ಮ ಪ್ರಭುವಿಗೆ ಆರೋಪಿಸಿ ಸ್ತುತಿಸುವದು ಸರ್ವೇಸಾಮಾನ್ಯ; ತಮ್ಮ ಪ್ರಭುವಿನ ಗುಣಗಳನ್ನು ಪೂರ್ವಭೂಮಿಪರಿಗೆ ಆರೋಪಿಸಿ ಅವರ ಗುಣಕೀರ್ತನ ಮಾಡುವದು ಅಪೂರ್ವ; ಅರಿಕೇಸರಿಯ ಸಾಹಸಗಳನ್ನು ಅರ್ಜುನನಿಗೆ ಆರೋಪಿಸಿ ಅರ್ಜುನನ ಸಾಹಸ ಮಹಿಮೆಗಳನ್ನು ಬಣ್ಣಿಸುವ ಬಯಕೆಯಾಗಿದೆ ತನಗೆ, ಎಂದಿರುವನು ಪಂಪ.[1] ರನ್ನನಾದರೂ ತನ್ನ ಆಶ್ರಯದಾತನ ಗುಣಕೀರ್ತನೆಗಾಗಿ ಇದೇ ತಂತ್ರವನ್ನು ಅನುಸರಿಸಿರುವನು.

ವಾಸ್ತವತೆಯ ದೃಷ್ಟಿಯಿಂದ ವಿಸಂಗತವೆನಿಸಿದರೂ ಕಾವ್ಯಶಾಸ್ತ್ರದಲ್ಲಿ ಪಂಪರನ್ನರ ಈ ಕವಿವ್ಯಾಪಾರ 'ಉಭಯಾಭೇದ ರೂಪಕಾಲಂಕಾರ' ಎನಿಸಿಕೊಂಡಿದ್ದು ಆ ಕಾಲದಲ್ಲಿ ಸರ್ವತ್ರ ಗ್ರಾಹ್ಯವಿದ್ದಂತೆ ತೋರುವದು. ಇಲ್ಲವಾದರೆ ಒಬ್ಬರಿಂದೊಬ್ಬರಿಗೆ ಅರ್ಧ ಶತಕದಷ್ಟು ಅಂತರವಿರುವ ಇಬ್ಬರು ಮಹಾಕವಿಗಳು ಈ ರೀತಿ ತಮ್ಮ

ದಯದಿಂದ ಎಲ್ಲವೂ ಸಿದ್ಧಿಸಿತು', ಎಂದು ತನ್ನ ಕೃತಜ್ಞತೆಯನ್ನು ವ್ಯಕ್ತಪಡಿಸುವನು. ನಂತರ ಪ್ರಶಸ್ತಿ ಅಥವಾ ಭರತವಾಕ್ಯದಿಂದ ನಾಟಕ ಮುಗಿಯುವದು. ಪಂಪ ಭಾರತ ಗದಾಯುದ್ಧಗಳು ಶ್ರಾವ್ಯ ಕಾವ್ಯಗಳಿದ್ದರೂ ಅವುಗಳ ಮುಕ್ತಾಯ ಇಂತಾಗಿದೆ. ಭಾರತದ ಸೂತ್ರಧಾರ ಪಾಂಡವ ಬಂಧು ಶ್ರೀಕೃಷನ ಸ್ತುತಿ ಗೌರವಗಳಿಗೆ ಇದೇ ಅಂದರೆ ಕಾವ್ಯ ಸಂಹಾರವೇ ತಕ್ಕ ಸ್ಥಾನವೆಂದು ಬಗೆದು ಪಂಪ ರನ್ನರು ಇದನ್ನೇ ಆರಿಸಿಕೊಂಡಂತಿದೆ.

1. ಚಂ|| ವಿಪುಳ ಯಶೋವಿತಾನ ಗುಣಮಿಲ್ಲದನಂ ಪ್ರಭುಮಾಡಿ ಪೂರ್ವಭೂ—
ಮಿಪರ ಪದಂಗಳಂ ಪುಗಿಸಿ ಪೋಲಿಪೋಡೀತನುದಾತ್ತ ಪೂರ್ವಭೂ—|
ಮಿಪರುಮನೋಳ್ಪಿನೊಳ್ ತಗುಳುವಂದೊಡೆ ಮೀಕಥೆಯೊಳ್—ತಗುಳ್ಚಿ ಪೋ
ಲಿಪೊಡೆನಗಱ್ತಿಯಾದುದು ಗುಣಾರ್ಣವ ಭೂಭುಜನಂ ಕಿರೀಟಿಯೊಳ್ || ೧/೧೪

ಆಶ್ರಯದಾತರ ಗುಣಕೀರ್ತನ ಮಾಡಿರುವದಕ್ಕೆ ಸಮರ್ಪಕ ಉತ್ತರ ದೊರೆಯು ವಂತಿಲ್ಲ.

ಉಭಯಾಭೇದ ರೂಪಕಾಲಂಕಾರವೆಂದ ಬಳಿಕ ಉಳಿದ ಅಂದರೆ ದೇಶ-ಕಾಲಾದಿ ನಿರ್ಬಂಧಗಳನ್ನು ಕಳಚಿ ಆಶ್ರಯದಾತ ಕಥಾನಾಯಕ ಮತ್ತು ಅವನ ಗುಣವೃತ್ತಿ ಗಳನ್ನು ತೊಟ್ಟ ಮಹಾಪುರುಷ ಒಬ್ಬರಿಂದೊಬ್ಬರು ಅಭಿನ್ನರಾಗುವರು. ಇದಕ್ಕಾಗಿ ಪಂಪರನ್ನರು ಒಂದೊಂದು ಸಂವಿಧಾನವನ್ನು ಕಲ್ಪಿಸಿಕೊಂಡಿರುವರು. ಪಂಪ ಅರ್ಜುನನ ಜನ್ಮೋತ್ಸವ ಸಂದರ್ಭದಲ್ಲಿ ತ್ರಿಕಾಲಜ್ಞರಾದ ದೇವ ಋಷಿಗಳ ಉಪಸ್ಥಿತಿಯಲ್ಲಿ ಅರ್ಜುನನಿಗೆ ಆತನ ಪ್ರಸಿದ್ಧ ಹೆಸರುಗಳೊಂದಿಗೆ ಚಾಳುಕ್ಯವಂಶೋದ್ಭವ, ಅರಿಕೇಸರಿ, ವಿಕ್ರಮಾರ್ಜುನ, ಉದಾತ್ತನಾರಾಯಣ, ಸಾಮಂತಚೂಡಾಮಣಿ, ಮೊದಲಾದ ಅರಿಕೇಸರಿಯ ಹೆಸರುಗಳಿನ್ನಿಡಿಸಿ, ಇವುಗಳನ್ನು ಅರ್ಜುನನಿಗೆ ಮತ್ತು ಅರಿಕೇಸರಿಯ ವಿಜಯಗಳ ಪ್ರಸ್ತಾಪ ಬಂದಾಗ ಶ್ಲೇಷೆಯಿಂದ ಅವನಿಗೂ ಅನ್ವಯಿಸುವಂತೆ ಬಳಸಿ ರುವನು.[1] ಅರ್ಜುನನೆಂದರೆ ಅರಿಕೇಸರಿ, ಅರಿಕೇಸರಿಯೆಂದರೆ ಅರ್ಜುನ ಎಂಬ ಆಭಾಸವನ್ನು ಉಂಟುಮಾಡಿರುವನು. ಅರ್ಜುನ ಜಾಕವ್ವೆಯ ಮಗನೆಂದರೂ ಅಷ್ಟೇ, ಅರಿಕೇಸರಿ ಕುಂತಿಯ ಮಗನೆಂದರೂ ಅಷ್ಟೇ, ಎಂಬ ಭಾವನೆ ಮೂಡುವಂತೆ ಮಾಡಿ ರುವನು. ಸ್ವತಃ ಶ್ರೀಕೃಷ್ಣ ತನ್ನ ಮತ್ತು ಅರ್ಜುನನ ಯುಗ ಯುಗಾಂತರಗಳ ಸಂಬಂಧವನ್ನು ವಿವರಿಸುವಾಗ ಅರ್ಜುನನನ್ನು ಅರಿಗ, ಉದಾತ್ತ ನಾರಾಯಣ ಎಂದು ಅರಿಕೇಸರಿಯ ಹೆಸರುಗಳಿಂದ ಸಂಬೋಧಿಸಿ ಪರ್ಯಾಯದಿಂದ ಅರ್ಜುನ ಅರಿಕೇಸರಿಯರ ಅಭಿನ್ನತ್ವವನ್ನು ವ್ಯಕ್ತಪಡಿಸುವಂತೆ ಮಾಡಿರುವನು.[2]

ರನ್ನ 'ದೃಷ್ಟಾದೃಷ್ಟ ಪರಂಪರೆ' ಎಂಬ ಹೆಸರಿನ ಕಂಚುಕಿಯನ್ನು ಸೃಷ್ಟಿಸಿ ಆಕೆಯ ಮುಖಾಂತರ ಭೀಮ ಇರಿವಬೇಡಂಗರಲ್ಲಿ ಅಭೇದವನ್ನು ಪ್ರಸ್ಥಾಪಿಸಿರುವನು.

ಪ್ರಾಚೀನ ಪರಂಪರೆ

ಆಶ್ರಯದಾತ ಅರಸ, ವಿಷ್ಣು, ಭೀಮಾದಿಗಳಂಥ ಮಹಾಪುರುಷರಲ್ಲಿ ಅಭೇದ ವನ್ನು ಕಲ್ಪಿಸಿ ಆಶ್ರಯದಾತ ಅರಸನನ್ನು ಹೊಗಳುವ ಸಂಪ್ರದಾಯ ಬಹಳ ಪ್ರಾಚೀನ

1. ಈ ವೈಶಿಷ್ಟ್ಯವನ್ನು ಬಿಟ್ಟರೆ ವ್ಯಾಸಭಾರತದಲ್ಲಿಯ ಅರ್ಜುನ ಜನ್ಮೋತ್ಸವದ ಬಣ್ಣ ನೆಗೂ ಇದಕ್ಕೂ ವಿಶೇಷ ವ್ಯತ್ಯಾಸವಿಲ್ಲ (ಮ. ಭಾ. ಆದಿ, ೧೨೩/೩೬-೭೯).
2. ಮುನ್ನೆ ಬದರಿಕಾಶ್ರಮದೊಳ್—

ಕಂ ‖ ಆಯತಿಯಿಂದಂ ನರ ನಾ—
ರಾಯಣರೆನೆ ನೆಗಳ್ದಿರ್ದವರಿಗನಾವಿರ್ವರು ಮಿಂ—।
ತೀಯುಗದೊಳೀಗಳಾಂ ನಾ-
ರಾಯಣನೆಂ ನೀನುದಾತ್ತ ನಾರಾಯಣನೈ ‖ ೪/೪೫

ವ॥ ಅದಱಿಂ ನಿನಗ ಮೆನಗಮೇತಱೊಳಂ ವಿಕಲ್ಪಮುಂ ವಿಚ್ಛಿನ್ನಮುಮಿಲ್ಲ...

ಕಾಲದಿಂದ ಕನಿಷ್ಟ ವಿಶಾಖದತ್ತನ ಮುದ್ರಾರಾಕ್ಷಸದ ಕಾಲದಿಂದ ನಡೆದು ಬಂದಿದೆ. ವಿಶಾಖದತ್ತ ಇಮ್ಮಡಿ ಚಂದ್ರಗುಪ್ತನ (ಕ್ರಿ.ಶ. ೪೫೦) ಮಾಂಡಲಿಕ. ಕಾವ್ಯಸಂಹಾರದಲ್ಲಿ ಆತ ಇಮ್ಮಡಿ ಚಂದ್ರಗುಪ್ತ, ವರಾಹರೂಪಿ ವಿಷ್ಣು, ನಾಟಕದ ನಾಯಕ (?) ಚಂದ್ರಗುಪ್ತ ಮೌರ್ಯ ಇವರಲ್ಲಿ ಅಭೇದವನ್ನು ಕಲ್ಪಿಸಿ ತನ್ನ ಅಧಿರಾಜ ಇಮ್ಮಡಿ ಚಂದ್ರಗುಪ್ತನನ್ನು ಸ್ತುತಿಸಿರುವನು. ಇದು ಆ ಪದ್ಯ—

ವಾರಾಹೀಮಾತ್ಮಯೋನೇಸ್ತನುಮವನ ವಿಧಾವಾಸ್ಥಿತಸ್ಯಾನುರೂಪಾಂ
ಯಸ್ಯಪ್ರಾಗ್ದಂತಕೋಟಿಂ ಪ್ರಲಯ ಪರಿಗತಾಶಿಶ್ರಿಯೇ ಭೂತಧಾತ್ರೀ ।
ಮ್ಲೇಚ್ಛೈರುದ್ವಿಜ್ಯಮಾನಾಭುಜಯುಗ ಮಧುನಾ ಸಂಶ್ರಿತಾ ರಾಜಮೂರ್ತೇಃ
ಸಶ್ರೀಮದ್ಬಂಧುಭೃತ್ಯಶ್ಚಿರಮವತು ಮಹೀಂ ಪಾರ್ಥಿವಶ್ಚಂದ್ರಗುಪ್ತಃ ॥

—ಪೂರ್ವದಲ್ಲಿ ವರಾಹರೂಪವನ್ನು ಧರಿಸಿ ಪಾತಾಳ ಲೋಕದಿಂದ ಪೃಥ್ವಿಯನ್ನೆತ್ತಿ ಉದ್ಧರಿಸಿದ ಮತ್ತು ಈಗ ಮ್ಲೇಚ್ಛರ ಉಪಟಳದಿಂದ ಆ ಭೂದೇವಿಯನ್ನು ರಕ್ಷಿಸಿದ ಚಂದ್ರಗುಪ್ತನು ಅವಳನ್ನು ಚಿರಕಾಲ ಕಾಪಾಡಲಿ ಎಂಬುದು ಈ ಪದ್ಯದ ಆಶಯ. ನಾಟಕದಲ್ಲಿ ಈ ಪದ್ಯ ಚಂದ್ರಗುಪ್ತ ಮೌರ್ಯನ ಮಹಾಮಂತ್ರಿ ಅಮಾತ್ಯರಾಕ್ಷಸನ ಮುಖದಿಂದ ಭರತವಾಕ್ಯವೆಂದು ಬಂದಿದೆ. ಚಂದ್ರಗುಪ್ತ, ಚಾಣಕ್ಯ, ರಾಕ್ಷಸಾದಿಗಳು ಇಮ್ಮಡಿ ಚಂದ್ರಗುಪ್ತನಿಗಿಂತ ಕನಿಷ್ಟ ೬೦೦ ವರ್ಷಗಳಿಂದ ಪೂರ್ವಿಕರು. ಆದರೂ ರಾಕ್ಷಸನ ಮುಖದಿಂದ ತನ್ನ ಸ್ವಾಮಿಯ ಸ್ತುತಿಯೆಂದು ಈ ಮಾತು ಬಂದಿರುವದು ಗಮನಾರ್ಹವಿದ್ದು, ಇದಕ್ಕೂ ಸಂಧಾನಕ್ಕೆ ಹೋದಾಗ ಶ್ರೀಕೃಷ್ಣ ಅರ್ಜುನನ ಸಾಹಸ ಕೃತಿಗಳೊಂದಿಗೆ ಅರಿಕೇಸರಿಯ ಸಾಹಸ ಕೃತಿಗಳನ್ನು ಸೇರಿಸಿ ಬಣ್ಣಿಸಿರುವದಕ್ಕೂ ವ್ಯತ್ಯಾಸವೇನಿದೆ? ವಿಶಾಖದತ್ತನ ಈ ಬಣ್ಣನೆ ಸಮಂಜಸವಿದ್ದರೆ ಇದರಿಂದ ಭಿನ್ನವಿರದ ಪಂಪರನ್ನರ ಬಣ್ಣನೆ ಅಸಮಂಜಸವೇಕೆ? ಅರ್ಜುನ ತಾನು ನರಸಿಂಗ ಜಾಕವ್ವೆಯರ ಮಗ, ಭೀಮ ಆಹವಮಲ್ಲ ಜಾಕವ್ವೆಯರ ಮಗ ಎಂದಿರುವದು ಈ ಬಗೆಯ ಕವಿವ್ಯಾಪಾರಜನ್ಯ ಅಭೇದ ಕಲ್ಪನೆಯ ಮುಂದಣ ಹೆಜ್ಜೆ ಎನ್ನಬಹುದು ಇಷ್ಟೇ.[1]

ಸ್ವಲ್ಪದರಲ್ಲಿ, ಪಂಪ ರನ್ನರು ಸಂಪ್ರದಾಯ ನಿಷ್ಠ ಕವಿಗಳು. ಶಾಸ್ತ್ರಪರಂಪರೆಗಳ ಕಟ್ಟುಗಳನ್ನು ಮೀರದೆ, ತತ್ಕಾಲೀನ ಲೋಕಾಭಿರುಚಿ ಮತ್ತು ಕಾವ್ಯಶಾಸ್ತ್ರದ ಮಾನ

1. ಮುದ್ರಾರಾಕ್ಷಸದ ಕಾಲ ಅನಿಶ್ಚಿತವಿದ್ದು ಇಮ್ಮಡಿ ಚಂದ್ರಗುಪ್ತನ ಕಾಲದಲ್ಲಿ ರಚಿತವಾಗಿರಬೇಕೆಂದು ಬಹುಜನ ವಿದ್ವಾಂಸರ ಮತವಿದೆ. ಟೀಕಾಕಾರ ಧುಂಡಿರಾಜ ಈ ಪದ್ಯದಲ್ಲಿ ಉಕ್ತನಾದ ಚಂದ್ರಗುಪ್ತನನ್ನು ಮೌರ್ಯ ಚಂದ್ರಗುಪ್ತನೆಂದೇ ಬಗೆದಿರುವನು. ವಿಷ್ಣುವಿನಿಂದ ಆತ ಅಭಿನ್ನನೆಂಬುದಕ್ಕೆ ಸುಪರಿಚಿತ ‘ ನಾ ವಿಷ್ಣುಃ ಪೃಥಿವೀಪತಿಃ ’ ಉಕ್ತಿಯನ್ನು ಆಧಾರವಾಗಿ ಕೊಟ್ಟಿರುವನು. ಈ ಬಗೆಯ ಅಭೇದ ಕಲ್ಪನೆಗೆ ‘ಉಭಯಾಭೇದ ರೂಪಕಾಲಂಕಾರ’ ಎಂದಿರುವನು. ಇಲ್ಲಿರುವ ಮ್ಲೇಚ್ಛ ಮತ್ತು ಅಧುನಾ ಪದಗಳನ್ನು ಗಮನಿಸಿ ಈತ ಇಮ್ಮಡಿ ಚಂದ್ರಗುಪ್ತನೆಂದು ನಿರ್ಣಯಿಸಿದವರು ಆಧುನಿಕ ಅನ್ವೇಷಕರು. ಚಂದ್ರಗುಪ್ತ ಹೆಸರಿನ ಬದಲು ಅವಂತಿವರ್ಮ, ರಂತಿ (ದಂತಿ) ವರ್ಮ ಪಾಠಗಳಿವೆ. ಈ ವಿಷಯ ಬೇರೆ.

ದಂಡಗಳನ್ನು ಅನುಸರಿಸಿ ತಮ್ಮ ಕೃತಿಗಳನ್ನು ರಚಿಸಿರುವರು. ಅವುಗಳಿಂದಾಗಿ ಬೇಕಾದಷ್ಟು ಮನ್ನಣೆ ಪುರಸ್ಕಾರಗಳನ್ನು ಪಡೆದಿರುವರು. ಇಂದು ವಿಸಂಗತವೆಂದು ಗಣಿಸಲಾದ ಸಂದರ್ಭಗಳು ನಿಜವಾಗಿಯೂ ವಿಸಂಗತವಿದ್ದರೆ ಅವರ ಈ ಕೃತಿಗಳಿಗೆ ಇಷ್ಟೊಂದು ಮನ್ನಣೆ ಪುರಸ್ಕಾರಗಳು ದೊರೆತಿರುವದಕ್ಕೆ ಸಮರ್ಪಕ ಉತ್ತರವನ್ನು ಶೋಧಿಸಬೇಕು. ಎಲ್ಲಿಯವರೆಗೆ ಇಂಥ ಉತ್ತರ ದೊರೆಯುವದಿಲ್ಲವೊ ಅಲ್ಲಿಯವರೆಗೆ ಈ ವಿಸಂಗತಗಳು ಮೇಲ್ನೋಟಕ್ಕೆ ಮಾತ್ರ ಎಂದಿಟ್ಟುಕೊಂಡು ಇದ್ದದರಲ್ಲಿಯೇ ಇವುಗಳ ಸುಸಂಗತವನ್ನು ಕಂಡುಕೊಳ್ಳುವದು ಸೂಕ್ತಮಾರ್ಗ. ಇದೊಂದು ಇಂಥ ಯತ್ನ.

ರನ್ನನ ಮೂರು ಸಮಸ್ಯಾತ್ಮಕ ಛಂದೋಬಂಧಗಳು*

"ರತ್ನತ್ರಯ" ಕವಿಗಳಲ್ಲೊಬ್ಬನಾದ ರನ್ನನ ಗದಾಯುದ್ಧದಲ್ಲಿಯ ಮೂರು ಪದ್ಯಗಳ ಛಂದಸ್ಸಾವುದೆಂಬುದು ಸಂಶೋಧಕರಿಗೊಂದು ಸಮಸ್ಯೆಯಾಗಿದೆ. ಇವುಗಳಲ್ಲಿ ಒಂದು 'ತ್ರಿಪದಿ' ಎಂದು ಹೆಸರಿಸಲ್ಪಟ್ಟಿದೆ.[1] ಎರಡನೆಯದು 'ಮಾತ್ರಾ-ಸಮಕ-ಷಟ್ಪದಿ'.[2] ಮೂರನೆಯದು 'ಅರ್ಧಸಮವರ್ಣವೃತ್ತ'.[3] ರನ್ನನ ಈ ತ್ರಿಪದಿಯು ಗ್ರಂಥೋಕ್ತ ಅಥವಾ ಪ್ರಯೋಗದಲ್ಲಿ ಯಾವ ತ್ರಿಪದಿಗೂ ಹೊಂದುವದಿಲ್ಲ. ಮಾತ್ರಾ ಸಮಕ-ಷಟ್ಪದಿಯು ಇತ್ತ ಮಾತ್ರಾಸಮಕವೂ ಅಲ್ಲ, ಅತ್ತ ಕನ್ನಡದ ಯಾವ ಷಟ್ಪದಿಯೂ ಅಲ್ಲ. ಸಂಪಾದನೆಗಾಗಿ ಆಕರವೆಂದಿಟ್ಟುಕೊಂಡ ಹಸ್ತಪ್ರತಿಗಳಲ್ಲಿಯೇ ಹೀಗೆ ಹೆಸರಿಸಲ್ಪಟ್ಟಿರುವದರಿಂದ ಇವುಗಳ ಛಂದಸ್ಸಾವುದೆಂಬುದು ಹೆಚ್ಚು ಕುತೂಹಲವನ್ನು ಹುಟ್ಟಿಸಿದೆ. ಮೂರನೆಯದು ಈ ಗ್ರಂಥದ ಸಂಪಾದಕರಿತ್ತ ಹೆಸರು. ಕುಂದಣಗಾರರು ಇದಕ್ಕೆ ಛಂದಃಶಾಸ್ತ್ರದಲ್ಲಿಯೆ ಸ್ಥಾನ ದೊರೆತಿಲ್ಲವೆಂದಿರುವರು.[4]

ತ್ರಿಪದಿ—ಗದಾಯುದ್ಧದಲ್ಲಿಯ ತ್ರಿಪದಿ ಇದು—

ಪದ್ಯರಚನೆಯೊಳ್ಕಾಳಿದಾಸನುಂ ।
ಗದ್ಯರಚನೆಯೊಳ್ ಬಾಣನುಂ ಮುಂಕವಿಗಳಿರ್ವರುಂ ।
ನೆಗಟ್ದರವರಿಂ ಸತ್ಕವಿಗಳಿರ್ವರುಮೆಮಗಭಿವಂದ್ಯರ್ ॥

ರನ್ನನ ತ್ರಿಪದಿ ಮಾತ್ರಾಸಮಕ-ಷಟ್ಪದಿಗಳ ಛಂದಸ್ಸನ್ನು ಕುರಿತು ಚರ್ಚಿಸಿದವರಲ್ಲಿ ಗೋವಿಂದ ಪೈ ಪ್ರಮುಖರು.[5] ಅವರ ಅಭಿಪ್ರಾಯದಲ್ಲಿ ಇದು ತ್ರಿಪದಿಯೆ ಅಲ್ಲ; ಯಾವ ರೀತಿಯ ತ್ರಿಪದಿಯ ಪ್ರಸ್ತಾರಕ್ಕೂ ಇದು ಸೇರುವುದಿಲ್ಲ; ಇದರ

---

* ಕರ್ನಾಟಕ ಭಾರತಿ, ೧/೧. ಇಲ್ಲಿ ಪರಿಷ್ಕರಿಸಲ್ಪಟ್ಟಿದೆ. ಮಧ್ಯಂತರದಲ್ಲಿ ರನ್ನನ ತ್ರಿಪದಿಗೆ ಸಂಬಂಧಿಸಿ ಶಿಥಿಲದ್ವಿತ್ವ ಮತ್ತು ಪ್ರಾಸ ವಿಷಯದಲ್ಲಿ ಆಕ್ಷೇಪಣೆಗಳು ಬಂದವು. ಜೊತೆಗೆ ಪದ್ಯವನ್ನು ಉಪಜಾತಿ ಮತ್ತು ಅರ್ಧಸಮ ಮಾತ್ರಾ-ವೃತ್ತ-ಕೋಕಿಲೆಯಲ್ಲಿ ಪುನರ್ರಚಿಸಿದ ಮಾದರಿಗಳೂ ದೊರೆತವು. ಈ ಪರಿಷ್ಕರಣದಲ್ಲಿ ಇವುಗಳನ್ನೂ ಆಕ್ಷೇಪಣೆಗಳಿಗಿತ್ತ ವಿವರಣೆಯನ್ನೂ ಸೇರಿಸಿಕೊಂಡು ಮೂಲದಲ್ಲಿಯ ನಿಲುವೆಯನ್ನು ಪುನಃ ಪ್ರಸ್ತಾಪಿಸಲಾಗಿದೆ.

1. ರ. ಗ. ಯು. : ೧.೯.
2. ಅದೇ ೯.೩೦ (೧೮೯೫), ೯.೨೦ (೧೯೨೫).
3. ಅದೇ ೭.೫೬ (೧೮೯೫), ೭.೪೫ (೧೯೬೫).
4. ಕ. ಛಂ. ವಿ. ಮುನ್ನುಡಿ, ಪು. ೧.
5. ಕನ್ನಡ ಷಟ್ಪದಿಗಳು—ಜ. ಕ. ಸಂ. ೯, ಪು. ೧೪೪.

ಮೂರನೆಯ ಚರಣದಲ್ಲಿ ಪ್ರಾಸವಿಲ್ಲ: ಬಹುಶಃ ಕಂದಪದ್ಯವಿದ್ದು ಸಂಪ್ರತಿಕಾರರು ತ್ರಿಪದಿಯೆಂದಿರಬಹುದೆಂದು ಭಾವಿಸಿ ಪದ್ಯವನ್ನು ಹೀಗೆ ಪುನರ್ರಚಿಸಿರುವರು—

(ಮೃದು) ಪದ್ಯರಚನೆಯೊಳ್ಕಾ–
ಳಿದಾಸನುಂ ಗದ್ಯರಚನೆಯೊಳ್ ಬಾಣನುಮುಂ–।
ಕದ ಕವಿಗಳಿರ್ವರುಂ ನೆಗ–
ಟ್ದಿದಱಿಂ ಸತ್ಕವಿಗಳಿರ್ವರೆಮಗಭಿವಂದ್ಯರ್ ॥

—ಇಲ್ಲಿ ಅವರು ಪ್ರಾರಂಭದಲ್ಲಿ 'ಮೃದು' ಪದವನ್ನು ಸೇರಿಸಿ, ಮೂಲದಲ್ಲಿಯ 'ಬಾಣನುಂ ಮುಂಕವಿಗಳು' ಪದಗಳನ್ನು 'ಬಾಣನು ಮುಂಕದ ಕವಿಗಳು', 'ನೆಗಟ್ದಿರದಱಿಂ' ಪದಗಳನ್ನು 'ನೆಗಟ್ದಿದಱಿಂ' ಮತ್ತು 'ರುಮೆಮುಗಭಿವಂದ್ಯರ್! ಪದಗಳನ್ನು 'ರೆಮುಗಭಿವಂದ್ಯರ್' ಎಂದು ಪರಿವರ್ತಿಸಿಕೊಂಡಿರುವರು.

ಸೇಡಿಯಾಪು ಕೃಷ್ಣಭಟ್ಟರು ಮೂರು ಸಾಲಾಗಿ ಮುದ್ರಿತವಾದ ಮಾತ್ರದಿಂದ ಇದಕ್ಕೆ ತ್ರಿಪದಿ ಎನ್ನಬೇಕೆ, ಎಂದು ಪ್ರಶ್ನಿಸಿ ಗೋವಿಂದ ಪೈಯವರ ಧಾಟಿಯನ್ನೇ ಅನುಸರಿಸಿರುವರು.[1]

'ಕಸ್ತೂರಿ'ಯ ಪಿ. ವಿ. ಆಚಾರ್ಯರ ಅಭಿಪ್ರಾಯದಲ್ಲಿ ಇದೊಂದು ಉಪಜಾತಿ-ಅಕ್ಷರವೃತ್ತ. ಪುನರ್ರಚನೆ ಹೀಗಿದೆ—[2]

ಪದ್ಯರಚನೆಯೊಳ್ ಕಾಳಿದಾಸನುಂ
ಗದ್ಯರಚನೆಯೊಳ್ ಬಾಣನುಂ ಮುಂ–।
ಕವಿಗಳಿರ್ವರುಂ ನೆಗಟ್ದಿರದಱಿಂ ಸ–
ತ್ಕವಿಗಳಿರ್ವರು ಮೆಮುಗಭಿವಂದ್ಯರ್ ॥

—ಇಲ್ಲಿ ಮೂಲದಲ್ಲಿಯ ಪದಗಳು ವ್ಯತ್ಯಾಸವಿಲ್ಲದೆ ಬಂದಿವೆ. ನಾಲ್ಕು ಪಾದಗಳು. ಪ್ರತಿ ಪಾದದಲ್ಲಿ ಕ್ರಮದಿಂದ ೧೧, ೧೦, ೧೩, ೧೨ ಅಕ್ಷರಗಳಿವೆ. ಪ್ರಾಸ ವ್ಯವಸ್ಥೆ—೧/೨, ೩/೪. ಲಯ ಸರಿಹೋಗುತ್ತದೆ ಎಂದಿರುವರು.

ಇದು ಮೇವುಂಡಿ ಮಲ್ಲಾರಿಯವರ ಪುನರ್ರಚನೆ:[3]

ಪದ್ಯರಚನೆಯೊಳ್ ಕಾಳಿದಾಸನುಂ
ಗದ್ಯರಚನೆಯೊಳ್ ಬಾಣನುಂ (ಮಹಾ) ।
ಕವಿಗಳಿರ್ವರುಂ ನೆಗಟ್ದಿರದಱ (ನಾ)
ಕವಿಗಳಿರ್ವರು ಮೆನಗಭಿವಂದ್ಯ (ರಯ್) ॥

—ಅವರೆಣಿಕೆಯಲ್ಲಿ ಇದು ಮಾತ್ರಾ ವಿಶಿಷ್ಟ ಮತ್ತಕೋಕಿಲೆ. ಪಾದಮಾತ್ರೆಗಳ ಮೊತ್ತ(೧೭)ದಲ್ಲಿ ವ್ಯತ್ಯಾಸವಿಲ್ಲದಿದ್ದರೂ ಅಕ್ಷರಗಳ ಲೆಕ್ಕದಿಂದ ಮೊದಲಿನ

1. ತ್ರಿಪದಿಯ ಲಕ್ಷಣಗಳು–ಸಮರ್ಪಣೆ–ಧರ್ಮಸ್ಥಳದ ಶ್ರೀ ಮಂಜಯ್ಯ ಹೆಗ್ಗಡೆಯವರ ಷಷ್ಟ್ಯಬ್ದಪೂರ್ತಿ ಸ್ಮರಣಿಕೆ (೧೯೫೦), ಪು. ೨೩೭.

2. ನನಗೆ ಬರೆದ ಪತ್ರದಲ್ಲಿ.

3. ಕರ್ನಾಟಕ ಭಾರತಿ, ೧/೨, ಪು. ೧೯೪–೨೦೦.

ವೆರಡು ಪಾದಗಳಲ್ಲಿ ೧೧, ಉಳಿದೆರಡು ಪಾದಗಳಲ್ಲಿ ೧೩ ಅಕ್ಷರಗಳು ಇರುವದರಿಂದ ಮತ್ತು ಎರಡೆರಡು ಪಾದಗಳ ಪ್ರಾಸವ್ಯವಸ್ಥೆ ಇರುವದರಿಂದ ಅರ್ಧಸಮವೃತ್ತ. ಮತ್ತ ಕೋಕಿಲೆ ೧೨ ಅಕ್ಷರಗಳ ಅಕ್ಷರವೃತ್ತ–ನಭಜರ (∪∪∪/–∪∪/∪–∪/–∪–). ಮಾತ್ರೆಗಳ ಲೆಕ್ಕದಿಂದ ಮತ್ತಕೋಕಿಲೆಯ ೧೬ ಮಾತ್ರೆಗಳನ್ನು ૩–૪–૩–૩–ಗುರು ಎಂದು ಒಡೆದು ರನ್ನ ಈ ಪದ್ಯವನ್ನು ರಚಿಸಿರಬೇಕು. ಪಂಪಭಾರತದಲ್ಲಿಯ 'ನಂದನಂಗಳೊಳ್ ಸುಳಿವ ಬಿರಯಿಯಿಂ'. ಮೊದಲಾದ ಮಂದಾನಿಲ ಅಥವಾ ಮಟ್ಟರಗಳೆಯ ಪಾದಗಳನ್ನೂ, ೧೬ ಮಾತ್ರೆಗಳಿಗೆ ಸರಿಹೋಗುವ ಮತ್ತಕೋಕಿಲೆಯ ಪಾದಗಳನ್ನೂ ಮತ್ತು ಇವೆರಡರ ಧಾಟಿಯಲ್ಲಿಯ ಸಾಮ್ಯವನ್ನೂ ಗಮನಿಸಿ ರನ್ನ ಈ ಪ್ರಯೋಗವನ್ನು ಕೈಕೊಂಡಿರಬೇಕು, ಎಂದಿರುವರು. ಮಂದಾನಿಲ ರಗಳೆ/ಮತ್ತಕೋಕಿಲೆಯ ೧೬ ಮಾತ್ರೆಗಳಿಗೆ ಮತ್ತು ૩–૪–૩–૩–ಗುರು ಗಣವಿಭಾಗಕ್ಕೆ ಸರಿಹೋಗುವಂತೆ ಪುನರ್ರಚನೆಯಲ್ಲಿ–ಮೂಲದಲ್ಲಿಯ 'ಮುಂಕವಿಗಳು' ಪದಗಳಲ್ಲಿಯ 'ಮುಂ' ಬದಲು 'ಮಹಾ', 'ನೆಗಟ್ದ್ರದಜಿಂ ಸತ್ಕವಿಗಳು' ಬದಲು 'ನೆಗಟ್ದ್ರದಜಿನಾಕವಿಗಳು, 'ಎಮಗೆ' ಬದಲು 'ಎನಗೆ', 'ಅಭಿವಂದ್ಯರ್' ಬದಲು 'ಅಭಿವಂದ್ಯರಯ್' ಎಂದು ಮಾರ್ಪಾಟುಗಳನ್ನು ಮಾಡಿಕೊಂಡಿರುವರು.

ಆದರೆ ಇದು ತ್ರಿಪದಿ. ಸಾಮಾನ್ಯವಾಗಿ ನಮಗೆ ಪರಿಚಿತವಿರುವ ನಾಗವರ್ಮೋಕ್ತ ತ್ರಿಮೂರ್ತಿಗಣ ಘಟಿತ ಅಥವಾ ಪ್ರಯೋಗದಲ್ಲಿ ಕಂಡುಬರುವ ತ್ರಿಪದಿಯಲ್ಲ. ಇದು ಗಾಥಾ ಅಥವಾ ಗಾಥಾ ತ್ರಿಪದಿ. ಸಂಗೀತ ರತ್ನಾಕರದ ಶಾರ್ಙ್ಗದೇವ ಉಲ್ಲೇಖಿಸಿದ ತ್ರಿಪಥಕವೂ ಆಗಬಹುದು.

ಸಂಸ್ಕೃತದಲ್ಲಿ ಗಾಥೆಯೆಂದರೆ ಗ್ರಂಥೋಕ್ತವಲ್ಲದ ಯಾವುದೊಂದು ಕ್ರಮಬದ್ಧ ಅಥವಾ ಅಕ್ರಮ ಅಕ್ಷರ/ಮಾತ್ರಾ ಛಂದೋಬಂಧ, ಹಾಡು, ಲೋಕೋಕ್ತಿ. ಗಾಥೆಯನ್ನು ಉಲ್ಲೇಖಿಸಿದವರಲ್ಲಿ ಪಿಂಗಲ (ಛಂದಃಶಾಸ್ತ್ರ), ಜನಾಶ್ರಯಿಕಾರ (ಕ್ರಿ. ೬ ಶ. ಕೊನೆ–ಛಂದೋವಿಚಿತಿ), ರತ್ನಮಂಜೂಷಾಕಾರ (ಕ್ರಿ. ೬ ಶ. ನಂತರ–ಛಂದೋವಿಚಿತಿ), ಕೇದಾರಭಟ್ಟ (ಕ್ರಿ. ೧೧೦೦ – ವೃತ್ತರತ್ನಾಕರ), ಹೇಮಚಂದ್ರ (ಕ್ರಿ. ೧೦೮೯–೧೧೭೩–ಛಂದೋನುಶಾಸನ), ಕನ್ನಡದಲ್ಲಿ ನಾಗವರ್ಮ (ಕ್ರಿ. ೯೯೦–ಛಂದೋಂಬುಧಿ), ಗುಣಚಂದ್ರ (ಕ್ರಿ. ೧೬೫೦–ಛಂದಸ್ಸಾರ) ಇವರು ಪ್ರಮುಖರು. ಪ್ರಾಕೃತದಲ್ಲಿ ಸಾಮಾನ್ಯವಾಗಿ ಗಾಥೆಯೆಂದರೆ, ಸಂಸ್ಕೃತದ ಆರ್ಯಾ ಛಂದಸ್ಸಿನಲ್ಲಿ ರಚಿಸಿದ ಪ್ರಾಕೃತ ಪದ್ಯ. ಹೇಮಚಂದ್ರನು ಗಾಥೆಯ ಈ ವ್ಯಾಖ್ಯೆಯನ್ನು ಸಂಸ್ಕೃತವನ್ನು ಬಿಟ್ಟು ಎಲ್ಲ ಭಾಷೆಗಳಲ್ಲಿಯ ಈ ಬಗೆಯ ಪದ್ಯಗಳಿಗೆ ಅನ್ವಯಿಸಿರುವನು. ಆರ್ಯೈವ ಸಂಸ್ಕೃತೇತರ ಭಾಷಾಸುಗಾಥಾ ಸಂಜ್ಞೇತಿ ಗಾಥಾಗ್ರಹಣಂ" ಎಂದಿರುವನು ಆತ. ಇದರ ಹೊರತಾಗಿ ಪಿಂಗಲಾದಿಗಳ ಗಾಥೆಯನ್ನೂ ವಿವರಿಸಿರುವನು.[1]

1. ಹೇ. ಛಂ. ೪/೧, ೬/೭೩

ಪಿಂಗಲನ ದೃಷ್ಟಿಯಲ್ಲಿ, ಆತನ ಗ್ರಂಥದಲ್ಲಿ ಉಕ್ತವಾಗಿರದ ಯಾವುದೆ ಛಂದೋಬಂಧವು ಗಾಥೆಯೆನಿಸಿಕೊಳ್ಳುತ್ತದೆ. 'ಅತ್ರಾನುಕ್ತಂ ಗಾಥಾ' ಎಂದಿದೆ ಆತನ ಸೂತ್ರ.[1] ಭಾಷ್ಯಕಾರ ಹಲಾಯುಧನು ಇದನ್ನು ಇಲ್ಲಿ (ಈ ಗ್ರಂಥದಲ್ಲಿ) ಉಕ್ತವಾಗಿರದ ಆದರೆ ಪ್ರಯೋಗದಲ್ಲಿ ಕಂಡುಬರುವ ಯಾವುದೆ ಛಂದೋಬಂಧವನ್ನು ಗಾಥೆಯೆಂದು ತಿಳಿಯಬೇಕು (ಅತ್ರ ಶಾಸ್ತ್ರೇ ನಾಮೋದ್ದೇಶನಂ ಯನ್ನೋಕ್ತಂ ಛಂದಃ ಪ್ರಯೋಗೇ ಚ ದೃಶ್ಯತೇ ತದ್ಗಾಥೇತಿ ಮಂತವ್ಯಂ) ಎಂದು ಅರ್ಥವಿಸಿರುವನು ಮತ್ತು ಇದಕ್ಕನುಸರಿಸಿ ಗಾಥೆಗಳೆಂದು ಯುಕ್ತಸೂತ್ರಗಳೊಡನೆ ಕುಡ್ಮಲದಂತಿ ಮೊದಲಾದ ೧೮ ಸಮವೃತ್ತಗಳನ್ನು ಪಿಂಗಲನ ಗ್ರಂಥದಲ್ಲಿ ಸೇರಿಸಿರುವನು. ಅನಂತರದ ಲಾಕ್ಷಣಿಕರು ಇವುಗಳನ್ನು ಇವೇ ಅಥವಾ ಬೇರೆ ಹೆಸರುಗಳಿಂದ ಯುಕ್ತಸ್ಥಾನಗಳಲ್ಲಿ ತಮ್ಮ ಗ್ರಂಥಗಳಲ್ಲಿ ಸೇರಿಸಿಕೊಂಡಿರುವರು. ಇವುಗಳಲ್ಲಿ ತಾನೇ ನಿರ್ಮಿಸಿದ್ದೆಂದು ಹೇಳಿಕೊಂಡ ಆದಿನಾಗವರ್ಮನ ಮಲ್ಲಿಕಾಮಾಲೆಯು[2] ವಿಬುಧಪ್ರಿಯಾ ಎಂಬ ಹೆಸರಿನಿಂದ ಮಡಗಿಕೊಂಡಿದೆ.

ಪಿಂಗಲನ ಗಾಥೆಯ ಈ ವ್ಯಾಖ್ಯೆ ಅತ್ಯಂತ ಅರ್ಥಗರ್ಭಿತವಿದೆ. ಯಾಕಂದರೆ ಛಂದೋಬಂಧಗಳ ವೈವಿಧ್ಯತೆಗೆ ಮಿತಿಯಿಲ್ಲ. ಕೇವಲ ವರ್ಣವೃತ್ತಗಳ ಸಂಖ್ಯೆಯೆ ಕೋಟಿಗಳನ್ನು ಮಿಕ್ಕಿದೆ. ಮಾತ್ರಾಬಂಧಗಳಲ್ಲಿ ಆರ್ಯೆ ಒಂದರಲ್ಲಿಯೆ ೮ ಕೋಟಿ ೧೯ ಲಕ್ಷ ೨೦ ಸಾವಿರ ಭೇದಗಳಾಗುವುವು, ಎಂದಿರುವನು ಹೇಮಚಂದ್ರ[3] ಶ್ರೀಕೃಷ್ಣನು ಗೀತೆಯಲ್ಲಿ ವಿವಿಧ ಛಂದೋಬಂಧಗಳನ್ನು ವಿಶ್ವರೂಪಿ ಅಶ್ವತ್ಥವೃಕ್ಷದ ಎಲೆಗಳಿಗೆ ಹೋಲಿಸಿರುವನು.[4] ರಾಜಶೇಖರನು ಇವುಗಳನ್ನು ಕಾವ್ಯಪುರುಷನ ರೋಮಗಳಿಗೆ ಹೋಲಿಸಿರುವನು.[5] ಭರತನು ಪ್ರತಿಯೊಂದು ಶಬ್ದವೂ ಛಂದಸ್ಸು, ಛಂದಸಿಲ್ಲದ ಶಬ್ದವಿಲ್ಲ (ಛಂದೋಹೀನೋ ನ ಶಬ್ದೋಽಸ್ತಿ, ನ ಛಂದಃ ಶಬ್ದ ವರ್ಜಿತಂ–ನಾ. ಶಾ. ೧೪–೧೫) ಎಂದಿರುವನು. ಇದಲ್ಲದೆ ಪ್ರತಿಭಾಸಂಪನ್ನ ಕವಿಗಳು, ಲಾಕ್ಷಣಿಕರು, ಹೊಸ ಹೊಸ ಛಂದೋಬಂಧಗಳನ್ನು ನಿರ್ಮಿಸುತ್ತಿದ್ದರು. ನಮ್ಮ ನಾಗವರ್ಮನು 'ನಾಗವರ್ಮವಿನಿರ್ಮಿತಂ' ಎಂದು ಕೆಲವು ವೃತ್ತಗಳ ವಿಷಯದಲ್ಲಿ ಹೇಳಿಕೊಂಡಿರುವನು. ಯಾವುದೊಂದು ವಿಶಿಷ್ಟ ಛಂದೋಬಂಧವು ನಮಗೆ ಅಪರಿಚಿತವಿರಬಹುದು; ವಿಚಿತ್ರ ರೀತಿಯಲ್ಲಿ ರಚಿಸಲ್ಪಟ್ಟಿರಬಹುದು; ತ್ರುಟಿತ ದೋಷಯುಕ್ತವೆನಿಸಬಹುದು. ಆದರೆ ಇಷ್ಟೊಂದು ಅಪರಿಮಿತ ಛಂದೋಬಂಧಗಳಲ್ಲಿ ಅದು ಎಲ್ಲಿಯಾದರೂ ಹುದುಗಿಕೊಂಡಿರಬಹುದಾಗಿದೆ. ಇಲ್ಲವೆಂದು ಎದೆತಟ್ಟಿ ಹೇಳುವವರಾರು? ರನ್ನನ ಈ ಪದ್ಯ

1. ಪಿಂ. ಛಂ. ೮.೧
2. ಕಿಟೆಲ್–ನಾ. ಛಂ. ೨.೧೯೪
3. ಹೇ. ಛಂ. ೪.೧
4. ಭಗವದ್ಗೀತಾ, ೧೫.೧
5. ಕಾವ್ಯಮೀಮಾಂಸಾ, ಅ. ೩.

ಗಳ ವಿಷಯದಲ್ಲಿ ಪ್ರತಿಕಾರರ ಕೈವಾಡವಿರಬಹುದೆಂಬ ಸಂದೇಹಕ್ಕೆ ಇಂಬು ದೊರೆತಿದೆ. ಇದು ಸಮಂಜಸವೆನಿಸದು. ನಾಲ್ಕು ಹಸ್ತಪ್ರತಿಗಳ ಆಧಾರದಿಂದ ರನ್ನನ ಗದಾಯುದ್ಧ ಗ್ರಂಥವನ್ನು ಸಂಪಾದಿಸಲಾಗಿದೆ. ತ್ರಿಪದಿ, ಮಾತ್ರಾಸಮಕ ಷಟ್ಪದಿಯೆಂದು ಈ ಪದ್ಯಗಳನ್ನು ಹೆಸರಿಸಿಸುವದು ಪ್ರತಿಕಾರರ ಕೈವಾಡವಿದ್ದರೆ ನಾಲ್ಕೂ ಹಸ್ತಪ್ರತಿಗಳಲ್ಲಿ ಹೀಗೆಂತಾಯಿತು ? ಮೂಲ ಆಕರದಲ್ಲಿಯೇ ಇಂತಿದ್ದು ಅದೊಂದರ ಆಧಾರದಿಂದ ಈ ನಾಲ್ಕು ಪ್ರತಿಗಳು ಸಿದ್ಧವಾಗಿದ್ದರೆ ಮಾತ್ರ ಹೀಗಾಗುವ ಸಂಭವವಿದೆ. ಆದರೆ ವಸ್ತು ಸ್ಥಿತಿ ಇಂತಿಲ್ಲ.[1]

ಬರಬರುತ್ತ ಗಾಥೆಯ ವ್ಯಾಪ್ತಿಯು ಸಂಕುಚಿತವಾಗಿ, ಅದೊಂದು ಗ್ರಂಥೋಕ್ತ ಲಕ್ಷಣಬದ್ಧವಲ್ಲದ ಛಂದೋಬಂಧ ; ಮಹಾಭಾರತಾದಿ ಋಷಿ ಪ್ರಣೀತ ಗ್ರಂಥಗಳಲ್ಲಿ ದೊರೆಯುವದರಿಂದ ಆರ್ಷಪ್ರಯೋಗ; ಲೌಕಿಕ ಕವಿಗಳು ಬುದ್ಧಿ ಪುರಸ್ಸರವಾಗಿ ಇಂಥ ಪ್ರಯೋಗಗಳನ್ನು ಕೈಕೊಳ್ಳುವದು ಉಚಿತವಾಗದು, ಎಂಬ ಭಾವನೆಗೆ ಇಂಬು ದೊರೆಯಿತು. ಜನಾಶ್ರಯಿಕಾರನ ಗಾಥೆಯ ವ್ಯಾಖ್ಯೆಯು ಈ ಅಂಶಗಳನ್ನು ಒಳ ಗೊಂಡಿದೆ. ಗಾಥೆಯ ಕುರಿತಿರುವ ಆತನ 'ಸಾರ್ಷೀ' ಸೂತ್ರಕ್ಕೆ ವೃತ್ತಿಕಾರನು : 'ಸಾಚ ಗಾಥಾ ಆರ್ಷೀತಿ-ಜ್ಞೇಯಾ....ಪಂಚಸ್ವನುಷ್ಟುಬಾದಿ ಜಗತ್ಯಂತೇಷು ಸಾ ಗಾಥಾಭವತಿ....ಸಾಗಾಥಾ ಚತುರ್ಭಿರ್ವಾ ಷಡ್ಭಿರ್ವಾ ಸ್ವಜಾತೀಯೈರ್ವಾ ವಿಜಾತೀಯೈರ್ವಾಭವತಿ', ಎಂದಿರುವನು. ಈ ಮೇರೆಗೆ ಗಾಥೆ ಋಷಿ ಪ್ರಣೀತ (ಆದ್ದರಿಂದ ಸಾಮಾನ್ಯರು ಇದನ್ನು ಪ್ರಯೋಗಿಸುವದು ಉಚಿತವಾಗದು); ಅನು ಷ್ಟುಪ್‌ದಿಂದ ಜಗತೀವರೆಗಿನ ಐದು ಛಂದಸ್ಸುಗಳಲ್ಲಿ ಹುಟ್ಟುತ್ತದೆ ; ಸ್ವಜಾತೀಯ ಅಂದರೆ ಅದೇ ಛಂದಸ್ಸಿನ ಬೇರೆ ಬೇರೆ ವೃತ್ತಗಳ ಪಾದಗಳಿಂದ ಅಥವಾ ವಿಜಾತೀಯ ಬೇರೆ ಬೇರೆ ವೃತ್ತಗಳ ಪಾದಗಳಿಂದ ಯುಕ್ತವಾಗಿರುವ ನಾಲ್ಕು ಅಥವಾ ಆರು ಪಾದ ಗಳ ಬಂಧವಿರುತ್ತದೆ. ಲಕ್ಷ್ಯವೆಂದು ವೃತ್ತಿಕಾರನು ಇಂಥದೊಂದು ನಾಲ್ಕು ಪಾದ ಗಳ ಮತ್ತು ಇನ್ನೊಂದು ಆರು ಪಾದಗಳ ಪದ್ಯವನ್ನು ಉದಾಹರಿಸಿರುವನು. ನಾಲ್ಕು ಪಾದಗಳ ಲಕ್ಷ್ಯ ಎಲ್ಲಿಯದೆಂಬುದು ಗೊತ್ತಿಲ್ಲ. ಆರು-ಪಾದಗಳ ಲಕ್ಷ್ಯ ಮಹಾ ಭಾರತದಲ್ಲಿಯ ಮೂರು ಪಾದಗಳಿರುವ ಅನುಷ್ಟುಪ್ ಶ್ಲೋಕ. ಎಂಟು ಅಕ್ಷರ ಪಾದ ಗಳಲ್ಲಿ ಒಡೆದಾಗ ಇದರಲ್ಲಿ ಆರು ಪಾದಗಳು ಹೊರಡುತ್ತವೆ. ವ್ಯಾಸ ಪ್ರಣೀತ ಇದ್ದುದರಿಂದ ಆರ್ಷೀ. ಅದು ಇಂತಿದೆ—

> ದಶಧರ್ಮಂ ನಜಾನಂತಿ, ಧೃತರಾಷ್ಟ್ರ ನಿಬೋಧ ತಾನ್
> ಮತ್ತಃ ಪ್ರಮತ್ತ ಉನ್ಮತ್ತಃ, ಶ್ರಾಂತಃ ಕ್ರುದ್ಧೋ ಬುಭುಕ್ಷಿತಃ ।
> ತ್ವರಮಾಣಶ್ಚ ಭೀತಶ್ಚ, ಕಾಮೀ ಚೋರಶ್ಚ ತೇ ದಶ ॥

ಕಾಲಕ್ರಮದಲ್ಲಿ ರತ್ನಮಂಜೂಷಾಕಾರನು ಜನಾಶ್ರಯಿಕಾರನನಂತರದವ. ಆತನ

1. ಗ. ಯು. (೧೯೩೫) ಮುನ್ನುಡಿ, ಪು. ೨೧-೨೩.

ಮೇರೆಗೆ ಗಾಥೆಯೊಂದು ಅಪ್ರಸಿದ್ಧ ಛಂದೋಬಂಧ; 'ಗಾಥಾಽಪ್ರಸಿದ್ಧಾ' ಎಂದಿದೆ ಆತನ ಸೂತ್ರ[1]. ಭಾಷ್ಯಕಾರನು: ಛಂದಃಶಾಸ್ತ್ರದಲ್ಲಿ ಮೂರು ಬಗೆಯ ಬಂಧಗಳಿರುತ್ತವೆ-(೧) ನಿಯತಮಾತ್ರಾ ಅನಿಯತಾಕ್ಷರಬಂಧಗಳು; ಉದಾ: ಆರ್ಯಾದಿಗಳು; (೨) ನಿಯತಮಾತ್ರಾ ನಿಯತಾಕ್ಷರಬಂಧಗಳು; ಉದಾ: ಉದ್ಗತಾದಿಗಳು; (೩) ನಿಯತಾಕ್ಷರ ಅನಿಯಮಾತ್ರಾ ಬಂಧಗಳು, ಉದಾ: ಗಾಯತ್ರಿ ಮೊದಲಾದವು. ಈ ಮೂರೂ ಬಗೆಯ ಬಂಧಗಳಿಗೆ ಹೊಂದಿಕೊಳ್ಳದ ಮತ್ತು ಶ್ಲೋಕದಂತಿರುವ ಬಂಧ ಗಾಥಾ' ಎಂದು ಈ ಸೂತ್ರವನ್ನು ವಿವರಿಸಿರುವನು. ಈತನ ಲಕ್ಷ್ಯವಾದರೂ ಮಹಾಭಾರತದಲ್ಲಿಯದೆ. ಅದು ಇಂತಿದೆ—

ಯುಧಿಷ್ಠಿರೋ ಧರ್ಮಮಯೋ ಮಹಾದ್ರುಮಃ ।
ಸ್ಕಂಧೋಽರ್ಜುನೋ ಭೀಮಸೇನೋಽಸ್ಯ ಶಾಖಾ ।
ಮಾದ್ರೀಸುತೌ ಪುಷ್ಪಫಲೇ ಸಮೃದ್ಧೇ ।
ಮೂಲಂ ಕೃಷ್ಣೋ ಬ್ರಹ್ಮ ಚ ಬ್ರಾಹ್ಮಣಾಶ್ಚ ॥

ಇದು ಚತುಷ್ಪದಿ. ಪ್ರತಿ ಪಾದವು ಒಂದೊಂದು ವೃತ್ತದ ಪಾದವಿದೆ. ಮೊದಲನೆಯ ಪಾದದಲ್ಲಿ ೧೨ ಅಕ್ಷರಗಳಿವೆ. ಉಳಿದವುಗಳಲ್ಲಿ ೧೧ ಅಕ್ಷರಗಳಿವೆ. ಮೊದಲನೆಯದು ಇಂದ್ರವಂಶಾ (ತತಜರ) ವೃತ್ತ. ಎರಡನೆಯದು ಲಯಗ್ರಾಹಿ (ತ ತ ಗ ಗ). ಮೂರನೆಯದು ಇಂದ್ರವಜ್ರಾ (ತ ತ ಜ ಗ ಗ). ನಾಲ್ಕನೆಯದು ಶಾಲಿನಿ (ಮ ತ ತ ಗ ಗ).

ಕೇದಾರಭಟ್ಟನು ಅನಿಯತಾಕ್ಷರ ಪಾದಗಳಿರುವದು ಅಥವಾ ಅನಿಯತ (ನಾಲ್ಕಕ್ಕಿಂತ ಕಡಿಮೆ ಅಥವಾ ಹೆಚ್ಚು) ಪಾದಗಳಿರುವದು ಗಾಥೆಯ ಸಾಮಾನ್ಯ ಲಕ್ಷಣವೆಂದಿರುವನು.[2] ಹೇಮಚಂದ್ರನ ಗಾಥೆಯ ವ್ಯಾಖ್ಯೆ ಪಿಂಗಲನಂತೆಯೆ ಇದೆ. ಅವನಾದರೂ ಲಕ್ಷ್ಯವೆಂದು ಮಹಾಭಾರತದಲ್ಲಿಯ 'ದಶಧರ್ಮಂ' ಶ್ಲೋಕವನ್ನು ಕೊಟ್ಟದ್ದು, ಗಾಥೆಗೆ ೩ ಅಥವಾ ೬ ಪಾದಗಳಿದ್ದು ಶ್ಲೋಕದೋಪಾದಿಯಲ್ಲಿರುವದು (ಅತ್ರ ತ್ರಿಭಿಃ ಷಡ್ಭಿರ್ವಾ ಪಾದೈಃ ಶ್ಲೋಕಃ) ಎಂದಿರುವನು. ಕೇದಾರನಾದರೂ ಇದೇ ಲಕ್ಷ್ಯವನ್ನು ಸೂಚಿಸಿರುವನು. ಜನಾಶ್ರಯಿಯ ನಂತರ ಗಾಥೆಯು ಆರ್ಷವೆಂಬ ಭಾವನೆ ಕಂಡು ಬರುವದಿಲ್ಲ.

ಆದಿನಾಗವರ್ಮನು ಸಂಸ್ಕೃತದ ಗಾಥೆಯನ್ನು ಜಾತಿಗಾದೆಯೆಂದು ಹೆಸರಿಸಿ, ಮಹಾಭಾರತದ 'ದಶಧರ್ಮಂ' ಮಾದರಿಯಲ್ಲಿ ಲಕ್ಷಣ-ಲಕ್ಷ್ಯಗಳನ್ನು ಹೇಳಿರುವನು.[3] ಇದು ಆತನ ಲಕ್ಷಣ-ಲಕ್ಷ್ಯಪದ್ಯ—

1. ರ. ಮಂ. ೭. ೩೪
2. ವೃ. ರ. ೫.೪
3. ಕಿಟೆಲ್, ಸಾ. ಛಂ. ೨೫೩.

ಪದಮೂರಾಗಿಯುಂ ಶ್ಲೋಕದ ಲಕ್ಷಣಮುಮಾಗಿಯುಂ।
ವಿದಿತಂ ಜಾತಿಗಾದೆಯೆಂಬುದು ಸಂದಭಿಧಾನದಿಂ।
ದಿದನೋದು ವಿಲೋಲ ಷಟ್ಪದ ಸನ್ನಿಭಕುಂತಳೇ॥

ಗುಣಚಂದ್ರನು ಕೇದಾರನನ್ನೇ ಅನುಸರಿಸಿದ್ದರೂ ಗಾಥೆಯ ತನ್ನ ಲಕ್ಷ್ಯದಲ್ಲಿ ಶ್ಲೋಕದ ಅಷ್ಟಾಕ್ಷರಿ ಪಾದಗಳನ್ನಿಡುವ ಗೋಜಿಗೆ ಹೋಗಿಲ್ಲ. ಕೇದಾರನ 'ವಿಷಮಾಕ್ಷರಪಾದಂ ವಾ ಪಾದೈರಸಮಂ' ಲಕ್ಷಣವನ್ನಿಷ್ಟೆ ಇಟ್ಟುಕೊಂಡು, ೩ ಅಥವಾ ೬ ಪಾದಗಳಿಗೆ ಹೊಂದುವಂತೆ ತನ್ನ ಲಕ್ಷ್ಯವನ್ನು ರಚಿಸಿರುವನು.[1] ಇದು ಆತನ ಲಕ್ಷ್ಯ–

ವಿಷಮಾಕ್ಷರ ಪಾದಾಢ್ಯಂ, ವೈಷಮ್ಯಾದಿ ತೋರೆಪಾದಂಗಳಿಂ।
ವಿಷಮಾಕ್ಷರಮಂಘ್ರಿ, ವೈಷಮ್ಯಸಮಾತ್ತ ಪಾದಂಗಳುಂ।
ಘೋಷಂ ಗಾಥಾಹ್ವಯಕ್ಕೆ, ಭಾಷಾಢ್ಯಛಂದೋಂಕಮುಂ ಪ್ರಾಪ್ತಂ॥

–ಇದರಲ್ಲಿ ೩ ಪಾದಗಳ ಲೆಕ್ಕದಿಂದ ಪ್ರತಿಪಾದದಲ್ಲಿ ಅಕ್ಷರ ವೈಷಮ್ಯ (೧೮, ೧೭, ೧೬) ವಿದೆ. ಮೂರು ಪಾದಗಳಿರುವದರಿಂದ ಅಸಮ ಪಾದಗಳೂ ಇವೆ. ಆರು ಪಾದಗಳ ಲೆಕ್ಕದಿಂದ ಸಹ ಇವೇ ಲಕ್ಷಣಗಳು (೮/೧೦,೭/೧೦,೭/೯) ಕಂಡುಬರುವವು.

ಗಾಥೆಯ ಈ ಇತಿಹಾಸದಿಂದ ಪಾದಾಕ್ಷರವೈಷಮ್ಯ, ಪಾದವೈಷಮ್ಯ ಇವುಗಳಲ್ಲಿ ಯಾವುದೊಂದು ಅಥವಾ ಎರಡೂ ಲಕ್ಷಣಗಳಿರುವ ಪದ್ಯ ಗಾಥಾ ಎಂಬುದು ಸ್ಪಷ್ಟವಾಗದಿರದು.

ಪದ್ಯಕ್ಕೆ ೪ ಪಾದಗಳು (ಪದ್ಯಂ ಚತುಷ್ಪದಂ), ಅತಏವ ೩/೬ ಪಾದಗಳಿರುವ ಪದ್ಯಗಳು ಗಾಥೆಗಳಾಗುವವೆಂದು ಜನಾಶ್ರಯಿಕಾರ ಮತ್ತು ಇತರ ಲಾಕ್ಷಣಿಕರು ವಿವರಿಸಿರುವರು. ಕೇದಾರನು 'ವಿಷಮಾಕ್ಷರ-ಪಾದಂ ವಾ ಪಾದೈರಸಮಂ' ಎಂದು ಗಾಥೆಯನ್ನು ವಿವರಿಸಿದ್ದರೂ ಲಕ್ಷ್ಯವೆಂದು ಮಹಾಭಾರತದಲ್ಲಿಯ ೩/೬ ಪಾದಗಳ 'ದಶಧರ್ಮಂ' ಶ್ಲೋಕವನ್ನೇ ಉದಾಹರಿಸಿರುವನು. ಒಂದೇ ಲಕ್ಷಣವುಳ್ಳ ಆದರೆ ೫ ಪಾದಗಳಿರುವ ಪದ್ಯವಾದರೂ ಗಾಥೆಯೆನಿಸಿಕೊಳ್ಳುತ್ತಿತ್ತು ಎಂಬುದು ರೂಪಗೋಸ್ವಾಮಿಯ (ಕ್ರಿ. ಶ. ೧೫೫೦) 'ಸ್ತವಮಾಲಾ'ಯೆಂಬ ಗ್ರಂಥದಿಂದ ಗೊತ್ತಾಗುವದು. ಇದರಲ್ಲಿ ತೋಟಕ (೪ ಸಗಣಗಳು) ವೃತ್ತದ ಒಂದು ಪಂಚಪದಿ ಇದೆ. ವ್ಯಾಖ್ಯಾಕಾರನು ಇದೊಂದು ಗಾಥಾಯೆಂದು ಹೇಳಿ, ಆಧಾರವೆಂದು ಗೀತಾವಲಿಯೆಂಬ ಗ್ರಂಥದಲ್ಲಿಯ 'ಪಾದೈರಸಮಂ ಚ ಗಾಥಾ' ಎಂಬ ಸೂತ್ರವನ್ನು ಉದಾಹರಿಸಿರುವನು.[2] ಕನ್ನಡದಲ್ಲಿಯೂ ಇಂಥ ಪದ್ಯಗಳು ದೊರೆಯುವವು. ಕವಿಲಿಂಗನ (ಸು. ೧೮೯೦) ಪದಗಳೆಂಬ ಗ್ರಂಥದಲ್ಲಿಯ ಇಂಥವೆರಡು ಪದ್ಯಗಳು ಕವಿಚರಿತೆಯಲ್ಲಿ ಉದಾಹೃತವಾಗಿವೆ.[3] ಇವುಗಳಲ್ಲಿ ಒಂದು ಚಂಪಕಮಾಲೆ, ಇನ್ನೊಂದು ಉತ್ಪಲಮಾಲೆ,

---

1. ಗುಣಚಂದ್ರ-ಛಂದಸ್ಸಾರ, ಅ. ೪.
2. ಸ್ತವಮಾಲಾ, ಪು. ೪೭.
3. ಕ. ಕ. ಚ, ಸಂ. ೨, ಪು. ೧೩೭.

ಎರಡರಲ್ಲೂ ೫ ಪಾದಗಳಿರುವದರಿಂದ ಕವಿಚರಿತೆಕಾರರು ಇವು ಪಂಚಪದಿಗಳೆಂದಿರುವರು. ಆದರೆ ಸ್ತವಮಾಲೆಯಲ್ಲಿಯ ಮೇಲಿನ ಉದಾಹರಣೆಯಿಂದ ಇವಾದರೂ ಗಾಥೆಗಳೇ ಎನ್ನಬೇಕಾಗುವದು.

ಗಾಥೆಯ ವ್ಯಾಪ್ತಿಯಲ್ಲಿ ಮಾತ್ರಾನಿಯತ ಪದ್ಯಗಳೂ ಒಳಗೊಳ್ಳುತ್ತಿದ್ದ ವೆಂಬುದು ಸಂಗೀತರತ್ನಾಕರಕಾರ ಶಾರ್ಙದೇವನ ಗಾಥೆಯ ವ್ಯಾಖ್ಯೆಯಿಂದ ಗೊತ್ತಾಗುವದು. ಈ ಮೊದಲು ಉಲ್ಲೇಖಿಸಿದ ಹೇಮಚಂದ್ರನ 'ಆರ್ಯೈವ ಸಂಸ್ಕೃತೇತರ ಭಾಷಾಸು ಗಾಥಾ ಸಂಜ್ಞೇತಿ ಗಾಥಾಗ್ರಹಣಂ'—ಉಕ್ತಿಗನುಸರಿಸಿ ಸಂಗೀತರತ್ನಾಕರಕಾರನು 'ಆರ್ಯೈವ ಪ್ರಾಕೃತೇ ಗೇಯಾ ಸ್ಯಾತ್ ಪಂಚಚರಣಾಥವಾ; ತ್ರಿಪದೀ ಷಟ್ಪದೀ ಗಾಥೇತ್ಯಪರೇ ಸೂರಯೋ ಜಗುಃ' ಎಂದಿರುವನು.[1] ಆರ್ಯೆಯು ಮಾತ್ರಾ ಅಥವಾ ಮಾತ್ರಾಗಣನಿಯತಬಂಧ. ಸಂಸ್ಕೃತೇತರ ಭಾಷೆಯಲ್ಲಿ ಕಟ್ಟಿದ ಆರ್ಯೆಗೆ ಗಾಥೆಯೆಂಬುದಲ್ಲದೆ, ೩, ೫, ೬ ಪಾದಗಳಿರುವ ಇಂಥ ಪದ್ಯಗಳಾದರೂ ಗಾಥೆಗಳು. ಅತಏವ ಅಕ್ಷರನಿಯತಬಂಧಗಳೊಂದಿಗೆ ಮಾತ್ರಾ, ಮಾತ್ರಗಣ ನಿಯತ ಬಂಧಗಳಾದರೂ ಗಾಥೆಯವ್ಯಾಪ್ತಿಯಲ್ಲಿ ಬರುವವೆಂಬುದು ಶಾರ್ಙ್ಗದೇವನ ಈ ಉಕ್ತಿಯಿಂದ ಕಂಡುಬರುವದು. 'ಮಾತ್ರಾ ಗಾಥಾ' ಪದಕ್ಕಿರುವ ಕುಟ್ಟನೀಮತ ವ್ಯಾಖ್ಯಾಕಾರನ 'ಕತಿಚಿನ್ಮಾತ್ರ ಛಂದಾಂಸಿ ವಿಶೇಷ ಸಂಜ್ಞಾಭಾವಾತ್ ಶಾಸ್ತ್ರಕಾರೈಃ ಛಂದೋಗ್ರಂಥೇಷು ನೋಕ್ತಾನಿ। ಪುನಸ್ತಾನಿ ಲೋಕೇ ದೃಶ್ಯಂತೇ। ತಾನಿ ಸರ್ವಾಣಿ ಗಾಥಾಶಬ್ದೇನ ವ್ಯವಹ್ರಿಯಂತೇ, ವಿವರಣೆ ಶಾರ್ಙ ದೇವನ ಉಕ್ತಿಗೆ ಪೋಷಕವಾಗಿದೆ.[2]

ಪಿಂಗಲನನ್ನು ಮೊದಲು ಮಾಡಿಕೊಂಡು ಸಂಸ್ಕೃತ, ಉಭಯ (ಸಂಸ್ಕೃತ, ಪ್ರಾಕೃತ) ಕನ್ನಡ ಲಾಕ್ಷಣಿಕರ ಗ್ರಂಥಗಳಲ್ಲಿ ಕಂಡುಬರುವ ಗಾಥೆಯ ಈ ವಿವರಣೆಯಿಂದ ಅದೊಂದು ಗ್ರಂಥೋಕ್ತವಲ್ಲದ ಆದರೆ ಪ್ರಯೋಗದಲ್ಲಿ ಕಂಡುಬರುವ ಅಕ್ಷರ, ಮಾತ್ರಾ ಬಂಧ ಎಂಬುದು ಸ್ಪಷ್ಟವಾಗದಿರದು. ರನ್ನನ ತ್ರಿಪದಿ ಇಂಥದು. ತ್ರಿಪದಿ ಮಾತ್ರಾ ಬಂಧವಿರುವದರಿಂದ, ಮತ್ತು ಹೀಗೆಂದು ಹೆಸರಿಸಲ್ಪಟ್ಟಿರುವದರಿಂದ ಇದಾದರೂ ಮಾತ್ರಾ ಬಂಧ.

ಇದೇನೊ ಸರಿ. ಆದರೆ ಇನ್ನೊಂದು ತೊಡಕಿದೆ. ಅದೆಂದರೆ ಇದರ ಮೂರನೆಯ ಪಾದದಲ್ಲಿ ಕಂಡುಬರುವ ಪ್ರಾಸರಾಹಿತ್ಯ. ಗೋವಿಂದಪೈ––ಸೇಡಿಯಾಪು ಈ ದೋಷವನ್ನು ಬೆರಳುನೀಡಿ ತೋರಿಸಿರುವರು. ನಾಗವರ್ಮಾದಿ ಕನ್ನಡ ಲಾಕ್ಷಣಿಕರು

1. ಸಂ. ರ. ೪.೩೧.

2. ಇದೊಂದು ಪ್ರಾಚೀನ ಗ್ರಂಥ. ದಾಮೋದರಗುಪ್ತ (ಕ್ರಿ. ೭೭೯-೮೧೩) ಎಂಬುವನು ಇದನ್ನು ರಚಿಸಿರುವನು. ಕುಂಟಣಿಯೊಬ್ಬಳು ವೇಶ್ಯಾವೃತ್ತಿಯಲ್ಲಿ ಕಾಲಿರಿಸಲು ಪ್ರಾಪ್ತವಯಸಳಾದ ಬಾಲೆಗೆ ಆ ವೃತ್ತಿಯ ರೀತಿ, ನೀತಿ, ರಹಸ್ಯಗಳನ್ನು ತಿಳಿಹೇಳಿರುವಳು. ಸಂಸ್ಕೃತದಲ್ಲಿ ಕುಟ್ಟನಿ ಎಂದರೆ ಕುಂಟಣಿ

ಗಾಥೆಯ ತಮ್ಮಲಕ್ಷ್ಯಗಳಲ್ಲಿ ಪ್ರಾಸನಿಯಮವನ್ನು ಪಾಲಿಸಿರುವರು. ಆದ್ದರಿಂದ ಇದು ವಿಚಾರಾರ್ಹ ಆಕ್ಷೇಪಣೆ. ಪ್ರಾಸರಾಹಿತ್ಯದೊಂದಿಗೆ ಗೋವಿಂದಪೈ–ಸೇಡಿಯಾಪು ಗಳ ಕಣ್ಣುತಪ್ಪಿಸಿ ಇದರಲ್ಲಿ ಇನ್ನೊಂದು ದೋಷವು ಹುದುಗಿಕೊಂಡಿದೆ. ಆದರೂ ಮುಳ್ಳಿನಿಂದ ಮುಳ್ಳು ತೆಗೆಯುವಂತೆ ಎರಡೂ ದೋಷಗಳನ್ನು ಏಕಕಾಲದಲ್ಲಿ ಪರಿಹರಿಸಿಕೊಳ್ಳುವಂತಿದೆ. ಪಾದಾದಿ ಮಾತ್ರೆಯು ಗುರು ಇದ್ದರೆ ಉಳಿದ ಪಾದಗಳ ಲ್ಲಿಯೂ ಅದು ಗುರು ಇರಬೇಕು; ಲಘು ಇದ್ದರೆ ಅದು ಲಘು ಇರಬೇಕೆಂಬುದು ಕನ್ನಡ ಪದ್ಯಬಂಧಗಳ ವೈಶಿಷ್ಟ್ಯ. ಇದಾದರೂ ಪ್ರಾಸದಷ್ಟೇ ಮಹತ್ವದ್ದಿದೆ. 'ಆದಿಗುರು ಪೂರ್ವಶ್ಚೇತ್ಪಾದೋ ಗುರುಪೂರ್ವಕಾಸ್ತಥಾನ್ಯೋ ಜಾತೌ; ಪಾದೋ ಲಘು ಪೂರ್ವಶ್ಚೇದಾದಿಃ ಶೇಷಾಸ್ತಥೈವಭಾಷಾವಿಷಯೇ' ಎಂದಿರುವನು ಜಯ ಕೀರ್ತಿ.[1]

ರನ್ನನ ತ್ರಿಪದಿಯಲ್ಲಿ ಮೊದಲಿನ ಎರಡು ಪಾದಗಳ ಆರಂಭದ ಮಾತ್ರೆಗಳು ಗುರು ಇವೆ. ಮೂರನೆಯ ಪಾದವು 'ನೆಗಟ್ದರದರಿಂ' ಎಂದು ಪ್ರಾರಂಭವಾಗುತ್ತದೆ. ಇಲ್ಲಿ 'ನೆ' ಅಕ್ಷರ ಲಘುವಾಗಿಯೆ ಉಳಿಯುವದರಿಂದ ಮೇಲಿನ ನಿಯಮಕ್ಕೆ ಚ್ಯುತಿ- ಬರುವದು. ಈ ದೋಷ ಪರಿಹಾರವಾಗಬೇಕಾದರೆ 'ನೆ' ಎರಡನೆಯ ಪಾದದ ಕೊನೆಯ ಅಕ್ಷರವಾಗಿ ನಿಲ್ಲಬೇಕು. ಆಗ 'ಗಟ್ದರವರಿಂ' ಇಷ್ಟೇ ಉಳಿಯುವದರಿಂದ ಮತ್ತು 'ಗ' ಮುಂದಣ ಅಕ್ಷರ 'ಟ್ದ' ದ್ವಿತ್ತವಿರುವದರಿಂದ 'ಗ' ಗುರುವಾಗುತ್ತದೆ. ಈ ರೀತಿ ಮೂರೂ ಪಾದಗಳಲ್ಲಿ ಪಾದಾದಿಮಾತ್ರೆಯ ಏಕರೂಪತೆಯ ನಿಯಮ ಕೂಡಿ ಬರುತ್ತದೆ, ಮತ್ತು ಇದರೊಂದಿಗೆ ಪ್ರಾಸವೂ ಹೊಂದುತ್ತದೆ. ಇಲ್ಲಿರುವದು ಶಿಥಿಲ ದ್ವಿತ್ವಾಕ್ಷರ. ಇವು ಕನ್ನಡಕವಿಗಳಿಗೆ 'ಅನುಕೂಲಸಿಂಧು' ವಿನಂತಿರುವದು ಸರ್ವ ವಿದಿತವಿದೆ.[2]

---

1. ಜ. ಕೀ. ಛಂ. ೭/೨೨.

2. 'ನೆಗಟ್ದ' ನಿತ್ಯಶಿಥಿಲದ್ವಿತ್ವ. ಆದ್ದರಿಂದ 'ಟ್ದ' ಹಿಂದಣ ಗ-ಕ್ಕೆ ಗುರುತ್ವವಿಲ್ಲ; ಟ್ದ-ಪ್ರಾಸ ದ್ಯ-ಕ್ಕೆ ಉಚಿತವಾಗದೆಂದು ಆಕ್ಷೇಪಿಸಲಾಗಿದೆ. ಶಾಸ್ತ್ರದ ಮಟ್ಟಿಗೆ ಇದು ನಿಜ. ಆದರೆ ಎಷ್ಟೋ ಸಲ ಶಾಸ್ತ್ರದಲ್ಲಿ ಒಂದಿದ್ದರೆ ಪ್ರಯೋಗದಲ್ಲಿ ಇನ್ನೊಂದಿರುವದುಂಟು. ಶಬ್ದ ಮಣಿದರ್ಪಣಕಾರ ಕೇಶಿರಾಜ ಸೂತ್ರ ೩೬ರ ಕೆಳಗೆ ದ್ವಿತ್ವಗಳನ್ನು ನಿಯತ, ಶಿಥಿಲ, ಉಭಯ (ಶಿಥಿಲ/ದ್ವಿತ್ವ) ಎಂದು ವಿಂಗಡಿಸಿರುವನು. ಶಿಥಿಲದ್ವಿತ್ವಗಳಿಗೆ ಉದಾಹರಣೆಗಳೆಂದು ನೆಗಟ್ದಂ, ಪೊಗಟ್ದಂ, ಮಗುಟ್ದಂ, ಜಗುಟ್ದಂ, ಮೊದಲಾದ ಕೆಲವು ಉದಾಹರಣೆಗಳನ್ನು ಕೊಟ್ಟಿರು ವನು. ಛಂದಸ್ಸಿನಲ್ಲಿ ಇವುಗಳಲ್ಲಿಯ 'ಟ್ದ' ಹಿಂದಣ ಗ-ಕ್ಕೆ ಗುರುತ್ವವಿಲ್ಲ. ಸಾಮಾನ್ಯವಾಗಿ ಕವಿಗಳು ಈ ನಿಯಮವನ್ನು ಪಾಲಿಸಿರುವರು. ಆದರೆ 'ಝುಳಕಂ ಝುಳುಪಿಸಿದಂ' ಕಂದಪದ್ಯ ದಲ್ಲಿ ಕೇಶಿರಾಜನೇ ಈ ನಿಯಮವನ್ನು ಉಲ್ಲಂಘಿಸಿರುವನು (ಸೂತ್ರ ೨೫). ಈ ಪದ್ಯದ ಮೂರನೆಯ ಪಾದ—'ವಳಿಗೆ ನೆಗಟ್ದೊಂದುಳಿಜಂ' ಎಂದಿದೆ. ಕಂದದ ಲಕ್ಷಣಕ್ಕನುಸರಿಸಿ ಈ ಪಾದವನ್ನು ೩ ಚತುರ್ಮಾತ್ರಾಗಣಗಳಲ್ಲಿ ವಿಂಗಡಿಸುವಾಗ 'ನೆಗಟ್ದ'ದಲ್ಲಿಯ 'ಗ' ಗುರು ವಾದರೇನೇ ಇದು ಸಾಧ್ಯ. ನಿಯಮಕ್ಕನುಸರಿಸಿ ಲಘು ಎಂದಿಟ್ಟುಕೊಂಡರೆ ಲೆಕ್ಕ ತಪ್ಪುವದು.

ತ್ರಿಪಥಕ (?)

ಸಂಗೀತ ರತ್ನಾಕರದ ಶಾರ್ಙ್ಗದೇವ ಪ್ರಬಂಧಾಧ್ಯಾಯದಲ್ಲಿ (೪/೨೭೪, ೨೭೮) ತ್ರಿಪಥಕ ಎಂಬ ಪ್ರಬಂಧವನ್ನು ವಿವರಿಸಿರುವನು. ಲಕ್ಷಣ : ಪಾದತ್ರಯಂ ತ್ರಿಪಥಕೇ ಪಾಟೈಶ್ಚ ಬಿರುದೈ : ಸ್ವರೈಃ, ಸ್ತುತಿ ಸ್ತೋತ್ರಾದಿ ಗುಣಕೀರ್ತನದಲ್ಲಿ ಇದರ ಬಳಕೆ, ಎಂದಿರುವನು. ಪಾಟ ಮತ್ತು ಸ್ವರಗಳು ಸಂಗೀತ ಅಥವಾ ಹಾಡುಗಾರಿಕೆಗೆ ಸೇರಿವೆ. ಪಾಟ ಎಂದರೆ ಧಾ, ಧಿನ್, ಮೊದಲಾದ ವಾದ್ಯಾಕ್ಷರಗಳು, ತಾಲಕ್ಕೆ ಸಂಬಂಧಿಸಿವೆ. ಸ್ವರ ಎಂದರೆ ಸರಿಗಮಾದಿ ಸ್ವರಗಳು, ಬಿರುದ ಎಂದರೆ ಶೂರ, ಧೀರ, ಉದಾರ,

---

ಇವು ಬೇರೆ ಕೆಲವು ಉದಾಹರಣೆಗಳು—

(೧) ' ಳ ನೆಗಟ್ದ ನೆಗೞ್ತೆ ತನ್ನಭಶ್ವರ ಪತಯಾ '

—ಇದು ಪೊನ್ನನ ಶಾಂತಿಪುರಾಣದಲ್ಲಿಯ (೨/೫೦) ಕಂದಪದ್ಯದ ೪ನೆಯ ಪಾದ; 'ನೆಗಟ್ದ' ದಲ್ಲಿಯ ' ಗ ' ಗುರುವಾದರೆ ಮಾತ್ರ ಈ ಪಾದದ ಗಣ-ವಿಭಾಗ ಹೊಂದಿಕೊಳ್ಳುವದು.

(೨) ' ಬೆನೆಕೆರಣತ್ರಯಪ್ರಕೃತಿಶುದ್ಧಿ ನೆಗೞ್ದಿರೆ ಮುನ್ನಿನ ರಾಜ್ಯಲೀಲೆಯಿಂ '

—ಇದು ರನ್ನನ ಅಜಿತಪುರಾಣದಲ್ಲಿಯ ' ತನುತನುವಾಗೆ (೩/೨) ' ಪದ್ಯದ ೩ನೆಯ ಚರಣ. ಚಂಪಕಮಾಲೆ (ನಜಭಜಜಜರ)—೨೧ ಅಕ್ಷರಗಳ ವೃತ್ತ. ಈ ಪಾದದಲ್ಲಿ ೨೪ ಅಕ್ಷರ ಗಳಿದ್ದು ಆ ಮೂಲಕ ಒಂದು ಜ-ಗಣ ಹೆಚ್ಚಾಗಿದೆ. ಉಳಿದ ಮೂರು ಪಾದಗಳು ಲಕ್ಷಣಕ್ಕೆ ಹೊಂದಿಕೊಂಡಿವೆ. ಈ ಪಾದದಲ್ಲಿಯ ೫ನೆಯ ಗಣ ಜ-ಗಣವಾಗಬೇಕಾದರೆ ' ನೆಗಟ್ದ 'ದಲ್ಲಿಯ ' ಗ ' ಗುರುವಾಗಲೇಬೇಕು.

(೩) ' ಬರಮೆ ಜಗುಟ್ದ...... '

—ಇವು ನೇಮಿಚಂದ್ರನ ಲೀಲಾವತಿಯಲ್ಲಿಯ ' ಪರೆಯ ಕುರುಳ್ಗಳಂತೆ ' ಚಂಪಕ ಮಾಲೆಯ (ನಜಭಜಜಜರ) ೪ನೆಯ ಪಾದದ ಮೊದಲಿನವೆರಡು (ನಜ) ಗಣಗಳು. ' ಜಗುಟ್ದ ' ದಲ್ಲಿಯ ' ಗು ' ಗುರುವಾದರೇನೇ ಎರಡನೆಯ ಗಣ ಜ-ಗಣವಾಗಬಲ್ಲದು.

(೪) ' ಬರದ ಪುಳಿಂದಿ ತಾಳ್ದಿಸೆವ ಮೂಗಿನ ಮುತ್ತು ಮುಗುಟ್ದ ನೋಡಲು '

—ಇದು ಹರಿಹರನ ಗಿರಿಜಾಕಲ್ಯಾಣದಲ್ಲಿಯುದು. ' ಕರಮೆಸೆದತ್ತು ಕೌಮುದಿಯ ಬಿತ್ತು ' ಚಂಪಕಮಾಲೆಯ ತೃತೀಯ ಪಾದ. ಚಂಪಕಮಾಲೆಯ ಕೊನೆಯವೆರಡು ಗಣಗಳು—ಜರ. ಇಲ್ಲಿರುವ ' ಮುಗುಟ್ದ 'ದಲ್ಲಿಯ ' ಗು ' ಗುರುವಾಗದೆ ಜ-ಗಣ ಸಿದ್ಧಿಸದು.

(೫) ' ನನವರತಂ ಪೊಗಟ್ದುಕೆ.... '

—ಇವು ಚಂಪಕಮಾಲೆಯ ಪ್ರಾರಂಭದ ಮೂರು ಗಣಗಳು (ನಜಭ). ಹರಿಹರನ ಪಂಪಾ ಶತಕದಲ್ಲಿಯ 'ಮನುಜರ ಮೇಲೆ ಸಾವವರ ' ಪದ್ಯದ ೩ನೆಯ ಚರಣದಲ್ಲಿವೆ. ' ಪೊಗಟ್ದ 'ದಲ್ಲಿಯ 'ಗ'-ನ್ನು ಗುರುವಾಗಿಸದೆ ಭ-ಗಣ ಹುಟ್ಟದು.

ಇನ್ನು ಪ್ರಾಸವಿಚಾರ. ಕನ್ನಡ ಪದ್ಯಗಳಿಗೆ ದ್ವಿತೀಯಾಕ್ಷರ ಪ್ರಾಸ ಸಾಮಾನ್ಯವಿದ್ದರೂ ಪ್ರಯೋಗದಲ್ಲಿ ಎಷ್ಟೋ ಸಲ ಇನ್ನೊಂದಿರುವುದುಂಟು. ಪ್ರಾಸವನ್ನು ಮೀರಿರುವ ಉದಾಹರಣೆ ಗಳೆಂದು ಲ-ಳ, ಱ-ರ, ಭ-ಫ, ರ್ಥ-ರ್ತ, ೞ್ತ-ರ್ತ, ನ್ತ್ರ-ನ್ತ, ಸ-ಶ, ಣ್ಬ-ಂಬ, ರ್ಮ್ಯ-ರ್ಮ, —ಪ್ರಾಸಗಳಿರುವ ಕೆಲವು ಪದ್ಯಗಳು ಕನ್ನಡ ಕೈಪಿಡಿಯಲ್ಲಿ ಉದಾಹೃತವಾಗಿವೆ. ಇವುಗಳೊಂದಿಗೆ ಹ್ವ (ಸ್ವೀಕೃತಪಾಠ)—ವ (ಪಂಪಭಾರತ ೨/೩), ಣ (ಸ್ವೀಕೃತಪಾಠ)—ಳ (ಅದೇ ೪/೩೬),

ಮೊದಲಾದ ಗುಣೋತ್ಕರ್ಷ ವಾಚಕ ಪದಗಳು. ಈ ಪ್ರಬಂಧ ಗರ್ಭದಲ್ಲಿ ಬಿರುದಗಳಿರಲೇ ಬೇಕು. ಛಂದಸ್ಸಿನ ಮಟ್ಟಿಗೆ ಇದಕ್ಕೆ ಮೂರು ಪಾದಗಳೆಂಬ ನಿಯಮವನ್ನು ಬಿಟ್ಟರೆ ಇತರ ನಿರ್ಬಂಧಗಳಿಲ್ಲ, ರನ್ನನ ತ್ರಿಪದಿಯಲ್ಲಿ ಮೂರು ಪಾದಗಳಿವೆ. ಪದ್ಯರಚನೆಯಲ್ಲಿ ಕಾಳಿದಾಸ, ಗದ್ಯರಚನೆಯಲ್ಲಿ ಬಾಣ, ಇಬ್ಬರೂ ಸತ್ಕವಿಗಳು, ಪ್ರಾಚೀನರು, ಪ್ರಸಿದ್ಧರು, ಅಭಿವಂದ್ಯರು, ಎಂದು ಅವರನ್ನು ಸ್ತುತಿಸಿರುವನು. ಆದ್ದರಿಂದ ಇದಾದರೂ ತ್ರಿಪಥಕ, ತ್ರಿಪಥ, ಇದ್ದು ಬಳಕೆಯಲ್ಲಿ ತ್ರಿಪದಿಯಾಗಿರುವದು ಅಸಂಭವವಿಲ್ಲ.

ಮಾತ್ರಾಸಮಕ ಷಟ್ಪದಿ

ಇದಾದರೂ ಲಕ್ಷಣ ಗ್ರಂಥಗಳಲ್ಲಿ ಉಕ್ತವಾಗಿಲ್ಲ. ಆದ್ದರಿಂದ ಇದು ಕೂಡ ಗಾಥಾ ಅಥವಾ ಗಾಥಾ ಷಟ್ಪದಿಯೆಂದು ಹೇಳಬೇಕಾಗುವದು, ಜೋಡು ಹೆಸರಿರುವದರಿಂದ ಇದು ಮಾತ್ರಾಸಮಕ ಮತ್ತು ಷಟ್ಪದಿ ಲಕ್ಷಣಗಳಿರುವ ಮಿಶ್ರಬಂಧವೆಂಬುದು ಸ್ಪಷ್ಟವಿದೆ. ಮಾತ್ರಾಸಮಕವು ಪ್ರತಿಪಾದದಲ್ಲಿ ೧೬ ಮಾತ್ರೆ (೪ ಚತುರ್ಮಾತ್ರಾಗಣ)ಗಳ ಸಮಚತುಷ್ಪದಿ. ಕನ್ನಡದಲ್ಲಿ ಮಂದಾನಿಲರಗಳೆಗಾಗಿ ಕೆಲವೆಡೆ ಬಳಸಲ್ಪಟ್ಟಿದೆ (ರಾಜಶೇಖರ ವಿಳಾಸ, ೯/೪೦ ನಂತರ). ಷಟ್ಪದಿಯಾದರೋ ೬ ಪಾದಗಳ ಮಾತ್ರಾ ಬಂಧ. ರನ್ನನ ಸಮಯದಲ್ಲಿ ಇದ್ದಿರಬಹುದಾದ ಕನ್ನಡ ಷಟ್ಪದಿಗಳ ರೂಪ ಊಹಾತ್ಮಕ. ಆದಿ ನಾಗವರ್ಮ, ಜಯಕೀರ್ತಿ, ಪಶ್ಚಿಮ ಚಾಲುಕ್ಯ ಸೋಮೇಶ್ವರ ಇವರು ಲಕ್ಷಿಸಿದ ಷಟ್ಪದಿಗಳು ತ್ರಿಮೂರ್ತಿಗಣ (ಬ್ರಹ್ಮ,

---

ಂತ-ಂದ್ರ (ಪೊನ್ನ-ಶಾಂ.ಪುರಾಣ, ೧೨/೪೮), ಸ್ತ-ಸ (ರನ್ನ-ಅಜಿತಪುರಾಣ, ೬/೭೦), ರ್ದ-ನ (ಅದೇ ೧೦/೩೫), ಸ್ತ-ಸ್ತ್ಯ, ಪ್ರ-ಪ್ಪ, ರ್ಗ-ಟ್ಗ, ತ್ಕ್ಯ-ತ್ಕ (ಕ.ಚ. ಸಂ. ೧, ಪು. ೨೮, ೫೯), ತ್ಯ-ತ (ಚಾಮರಸ-ಪ್ರ.ಲೀಲೆ), ತ್ಯ-ಕ್ತ (ಗುರುಬಸವ–ಶಿವಯೋಗಾಂಗಭೂಷಣ,–ಕ.ಚ.ಸಂ. ೨, ಪು. ೭೫) ಪ್ರಾಸಗಳಿರುವ ಪದ್ಯಗಳನ್ನೂ ಸೇರಿಸಬಹುದಾಗಿದೆ. ಇವುಗಳಲ್ಲಿಯ ತ್ಯ-ಕ್ತ ಪ್ರಾಸಕ್ಕೂ ರನ್ನನ ಪದ್ಯದ ವಿಷಯದಲ್ಲಿ ಸೂಚಿಸಿದ ದ್ಯ-ಟ್ಟ ಪ್ರಾಸಕ್ಕೂ ವ್ಯತ್ಯಾಸವೇನಿದೆ ?

ಈ ಬಗೆಯ ಪ್ರಾಸಗಳನ್ನು ಅಪವಾದಗಳೆಂದು ಗ್ರಹಿಸಬೇಕೇ ಅಥವಾ ಇವುಗಳಿಗೊಂದು ಶಾಸ್ತ್ರ / ಪರಂಪರೆಯ ಆಧಾರವಿದೆಯೇ ಎಂಬುದೊಂದು ವಿಚಾರಣೀಯ ಅಂಶ. ಕವಿರಾಜಮಾರ್ಗದಲ್ಲಿ ದಕ್ಷಿಣೋತ್ತರ ಮಾರ್ಗಗಳ ನಿರೂಪಣೆಯ ಸಂದರ್ಭದಲ್ಲಿ ವರ್ಣಾನುಪ್ರಾಸ ಶ್ರುತ್ಯನುಪಾಸಗಳ ವಿಚಾರ ಬರುತ್ತದೆ. ಅದೇ ಅಕ್ಷರ ಪುನಃ ಪುನಃ ಬಂದರೆ ವರ್ಣಾನುಪ್ರಾಸ. ಉದಾ: ಧವಳಜಳಧರ ಕುಳಾಕುಳ, ಇತ್ಯಾದಿ. ಶ್ರುತ್ಯನುಪ್ರಾಸದಲ್ಲಿ ಭಿನ್ನಾಕ್ಷರಗಳಿದ್ದರೂ ಏಕಸ್ಥಾನ ಅಥವಾ ಆದರ ಸಮೀಪ ಸ್ಥಾನದಲ್ಲಿ (ದಂತ್ಯ, ಓಷ್ಠ್ಯ, ಇತ್ಯಾದಿ) ಉಚ್ಚರಿಸಲ್ಪಡುವ ಅಕ್ಷರಗಳಿರುತ್ತವೆ. ಉದಾ: ದೆಸೆಗಳ್ ವಿಶಾಲಮಾದುವು, ಇತ್ಯಾದಿ. ಕನ್ನಡದಲ್ಲಿ ವರ್ಣಪ್ರಾಸವೇ ಬಳಕೆಯಲ್ಲಿದ್ದರೂ ಕವಿಗಳು ಅಲ್ಲಲ್ಲಿ ಶ್ರುತಿಪ್ರಾಸವನ್ನು ಅಥವಾ ಇವೆರಡರ ಮಿಶ್ರಣವನ್ನು ಬಳಸಿದಂತಿದೆ. ಉಪರೋಕ್ತ ಉದಾಹರಣೆಗಳಲ್ಲಿ ಲ–ಳ, ಜ–ರ, ಸ–ಶ, ಹ್ವ–ವ, ಣ–ಳ, ಸ್ರ–ಸ, ತ್ಯ–ತ, ರ್ದ–ನ, ಸ್ತ–ಸ್ತ್ಯ, ತ್ಕ್ಯ–ತ್ಕ, ರ್ಗ–ಟ್ಗ, ತ್ಯ–ಕ್ತ ಮೊದಲಾದವು ಈ ಬಗೆಯವಿದ್ದು ಶಾಸ್ತ್ರೋಕ್ತ ವರ್ಣಪ್ರಾಸಗಳೊಂದಿಗೆ ಇವುಗಳನ್ನೂ ಬಳಸಿರುವಂತೆ ತೋರುತ್ತದೆ.

ವಿಷ್ಣು, ರುದ್ರ) ರಚಿತವಾಗಿವೆ. ಸಂಗೀತ ರತ್ನಾಕರದ ಶಾರ್ಙ್ಗದೇವನೂ ಇದನ್ನು ಹೀಗೆಯೆ ಲಕ್ಷಿಸಿರುವನು. ಇಷ್ಟೆ ಅಲ್ಲ, ಇದು ತಾಲವರ್ಜಿತವಿದ್ದು ಇದರಲ್ಲಿ ಮತ್ತು ತ್ರಿಪದಿ ಚೌಪದಿಗಳಲ್ಲಿ ಬಹಳ ಭೇದಗಳಿವೆ (ಏತಾಸಾಂ ಭೂರಯೋ ಬಹವೋ ಭೇದಾ:) ಎಂದಿರುವನು.[1] ಬಹುಶಃ ಇವುಗಳಿಂದ ಬೇರ್ಪಡಿಸಿ ಹೇಳಲು ರನ್ನನ ಈ ಷಟ್ಪದಿಗೆ ಮಾತ್ರಾಸಮಕ ಷಟ್ಪದಿ ಎಂದಂತಿದೆ. ವಿವರವಾದ ಚರ್ಚೆ ಇಲ್ಲಿ ಅಪ್ರಸ್ತುತ. ಷಟ್ಪದಿ ಯೆಂದರೆ ೬ ಪಾದಗಳ ಪದ್ಯ, ಕನ್ನಡದಲ್ಲಿ ಅದರಲ್ಲಿ ಹಿರಿಕಿರಿ ಚರಣಗಳಿರುತ್ತವೆ, ಎಂಬುದಿಷ್ಟೆ ನಮಗೆ ಸಾಕು.

ಗದಾಯುದ್ಧದ ೧೮೯೫ ಮತ್ತು ೧೯೨೫ ರ ಆವೃತ್ತಿಗಳಲ್ಲಿ ಮಾತ್ರಾಸಮಕ ಷಟ್ಪದಿಯ ಪಾಠ ಹೀಗಿದೆ—

೧೮೯೫

ಹಾ ಕುರುಕುಲ ಮೂಲಸ್ತಂಭಾ
ಹಾ ಕುರುಕುಲ ಮೃಗರಾಜಾ
ಹಾ ಕುರು ನೃಪವತ್ಸಾ........ಹೃದ್ವ್ಯಸನ ಭಂಜನಾ ।
ಹಾ ಕುಂಭಸಂಭವಶಿಷ್ಯಾ—
ಹಾ ಸಕಲನೃಪಪೂಜಿತಾ
ಹಾ...................ಟ ಪನ್ನಗಕೇತೂ ॥

೧೯೨೫

ಹಾ ಕುರುಕುಲ ಮೂಲಸ್ತಂಭಾ
ಹಾ ಕುರುಕುಲ ಮೃಗರಾಜಾ
ಹಾ ಕುರುನೃಪವತ್ಸಾ ...ಹೃದ್ವ್ಯಸನಭಂಜನಾ ।
ಹಾ ಕುಂಭಸಂಭವಶಿಷ್ಯಾ—
ಹಾ.......................
ಹಾ.......................ಪನ್ನಗಕೇತೂ ॥

ಪಾಠಾಂತರ: ....ನೃಪಮುಕುಟಾನತಚರಣಾ । ಹಾ ಸಕಲನೃಪಪೂಜಿತಾ ಹಾ....ಟ.... (ಅಡಿಟಿಪ್ಪಣಿ, ೧೯೨೫ ರ ಆವೃತ್ತಿ).

ಇವೆರಡೂ ಪಾಠಗಳನ್ನೂ ಪಾಠಾಂತರ ಪದಗಳನ್ನೂ ಹೋಲಿಸಿ ನೋಡಿದಾಗ ಪಾಠಾಂತರದಲ್ಲಿಯ 'ನೃಪಮುಕುಟಾನತಚರಣಾ' ಪದ ಪದ್ಯದ ಐದನೆಯ ಚರಣವಿರ ಬೇಕೆಂದು ತೋರುತ್ತದೆ. ಮೂರನೆಯ ಚರಣ ಎರಡೂ ಆವೃತ್ತಿಗಳಲ್ಲಿ ತ್ರುಟಿತ ವಿರುವದರಿಂದ ಪ್ರಕೃತ ಚರ್ಚೆಗೆ ಅದರಿಂದ ವಿಶೇಷ ನೆರವು ದೊರೆಯುವಂತಿಲ್ಲ. ಆರ ನೆಯ ಚರಣದಿಂದಲೂ ಇಷ್ಟೇ.

ಎರಡೂ ಆವೃತ್ತಿಗಳಲ್ಲಿಯ ಪದ್ಯಪಾಠ ಮತ್ತು ಪಾಠಾಂತರ ಪದಗಳನ್ನು ಈ ಮೇಲಿನಂತೆ ಸಮನ್ವಯಿಸಿದ ಪದ್ಯ ಇಂತಾಗುವದು—

---

1. ಸಂ.ರ, ೪/೨೨೪ ಮತ್ತು ಟೀಕೆ.

ಹಾ ಕು ರು ಕು ಲ ಮೂ ಲ ಸ್ತ ಂಭಾ
— ∪ ∪ | ∪ ∪ —| – –| —
ಹಾ ಕು ರು ಕು ಲ ನ್ನೃ ಗ ರಾ ಜಾ
— ∪ ∪ | ∪ ∪ ∪ ∪| – –
ಹಾ ಕು ರು ನೃ ಪ ವ ತ್ಸಾ,....ಹೃದ್ವ್ಯಸನಭಂಜನಾ।
— ∪ ∪ | ∪ ∪—|—. (?)
ಹಾ ಕು ಂ ಭ ಸ ಂ ಭ ವ ಶಿ ಷ್ಯಾ
— — | ∪ — ∪| ∪ – –
ಹಾ ನೃ ಪ ಮು ಕು ಟಾ ನ ತ ಚ ರ ಣಾ
— ∪ ∪| ∪ ∪ —| ∪ ∪ ∪ ∪ |—
ಹಾ ಸ ಕ ಲ ನೃ ಪ ಪೂ ಜಿ ತಾ, ಹಾ....ಟ ಪನ್ನಗಕೇತೂ॥
— ∪ ∪ |— ∪ ∪ |— ∪ — (?)

—ಇವುಗಳನ್ನು ಮಾತ್ರಾಸಮಕದ ಪಾದಗಳೆಂದು ಗ್ರಹಿಸಿ ಆ ರೀತಿ ಚತುರ್ಮಾತ್ರಾಗಣಗಳಲ್ಲಿ ಪ್ರಸ್ತರಿಸಲಾಗಿದೆ.

ಮೊದಲನೆಯ ಪಾದದಲ್ಲಿ ೧೪ ಮಾತ್ರೆಗಳಿರುವದನ್ನು ಗಮನಿಸಿ ಅದನ್ನೆ ತಳಹದಿಯಾಗಿಟ್ಟುಕೊಂಡು ೧೯-೨೫ನೆಯ ಆವೃತ್ತಿಯಲ್ಲಿ ಸಂಪಾದಕರು ಪದ್ಯವನ್ನು ಭಾಮಿನಿ ಷಟ್ಪದಿಯ ಮಾತ್ರೆಗಳಿಗೆ (ಕಿರಿ-೧೪, ಹಿರಿ-೨೩) ಸರಿಹೋಗುವಂತೆ ತ್ರುಟಿತ ಸ್ಥಳಗಳಲ್ಲಿ ಯುಕ್ತ ಅಕ್ಷರ/ಪದಗಳನ್ನು ಸೇರಿಸಿ ಪುನರ್ರಚಿಸಿರುವರು. ಗೋವಿಂದ ಪೈ ಅವರ ಈ ಕೃತಿಯನ್ನು ಖಂಡಿಸಿ, ಇದು ಮಾತ್ರಾಸಮಕ ಷಟ್ಪದಿಯಲ್ಲ; ಇದರಲ್ಲಿ ಮಾತ್ರಾಸಮಕದ ಲಕ್ಷಣಗಳಿಲ್ಲ; ಹೀಗೆಂದು ಹೆಸರಿಸಿರುವದು ಪ್ರತಿಕಾರರ ತಪ್ಪು, ಎಂದು ಪ್ರತಿ-ಪಾದಿಸಿ, ಒಂದೊಮ್ಮೆ ಕನ್ನಡದ ಯಾವುದೊಂದು ಷಟ್ಪದಿ ಎಂದಿಟ್ಟುಕೊಂಡರೆ ಇದು ಪರಿವರ್ಧಿನಿ ಇರಬೇಕೆಂದಿರುವರು. ಪದ್ಯದ ೫, ೬ನೆಯ ಪಾದಗಳಲ್ಲಿರುವ ಪ್ರಾಸರಾಹಿತ್ಯವನ್ನು ಗಮನಿಸಿ, 'ಹಾ' ನಂತರ ಇನ್ನೊಂದು 'ಹಾ' ಸೇರಿಸಿ, ಪ್ರಾಸವನ್ನು ಸರಿಪಡಿಸಿಕೊಂಡು, ಪರಿವರ್ಧಿನಿಗೆ ಸರಿಹೋಗುವಂತೆ ಪದ್ಯವನ್ನು ಪುನರ್ರಚಿಸಿರುವರು.[1] ಕುಂದಣಗಾರರು: ಷಟ್ಪದಿಯು ಮೂಲದಲ್ಲಿ ಒಂದೆ ಎಂದು ನಾಗವರ್ಮನ ಅಭಿಪ್ರಾಯ (?) ಹೀಗಿದ್ದರೂ ರನ್ನನ ಈ ಮಾತ್ರಸಮಕ ಷಟ್ಪದಿ ಎಲ್ಲಿಂದ ಆವಿರ್ಭವಿಸಿತು, ಎಂದು ಪ್ರಶ್ನಿಸಿ, ಜಾನಪದದಲ್ಲಿ ಎಲ್ಲ ಬಗೆಯ ಷಟ್ಪದಿಗಳಿದ್ದವು; ನಾಗವರ್ಮ ಅವುಗಳನ್ನು ಲಕ್ಷಿಸಿಲ್ಲ; ರನ್ನನ ಷಟ್ಪದಿ ಇವುಗಳಲ್ಲೊಂದು, ಎಂದು ಸಮಸ್ಯೆಗೆ ಪರಿಹಾರವನ್ನು ಸೂಚಿಸಿರುವರು.

ಆದರೆ ಇದು ಮಾತ್ರಾಸಮಕ ಷಟ್ಪದಿಯೆ. ಗ್ರಂಥೋಕ್ತವಿಲ್ಲದ್ದರಿಂದ ಗಾಥಾ ಅಥವಾ ಗಾಥಾ ಷಟ್ಪದಿ. ಎರಡು ಮಾತ್ರಾಸುಮಕ ಪದ್ಯಗಳನ್ನಿಟ್ಟುಕೊಂಡು,

1. ಜ. ಕ. ಸಂ. ೯/೨೪೪

ಅವುಗಳ ೩, ೪ ಮತ್ತು ೭, ೮ನೆಯ ಪಾದಗಳನ್ನು ಒಂದು ಪಾದವೆಂದು ಗಣಿಸಿ, ಇದನ್ನು ನಿರ್ಮಿಸಲಾಗಿದೆ. ರನ್ನನೇ ಇದನ್ನು ಹೀಗೆ ಮಾರ್ಪಡಿಸಿದನೊ ಅಥವಾ ಇಂಥದೊಂದು ಬಂಧವು ಆತನ ಕಾಲದಲ್ಲಿ ಪ್ರಯೋಗದಲ್ಲಿತ್ತೊ, ಎಂಬುದು ತಿಳಿಯದ ವಿಷಯ. ಎಂತಿದ್ದರೂ ಈ ಚರ್ಚೆ ನಮಗೆ ಅಪ್ರಸ್ತುತ, ನಮಗೆ ಬೇಕಾದುದು ಮಾತ್ರಾ ಸಮಕ ಮತ್ತು ಷಟ್ಪದಿಯ ಲಕ್ಷಣಗಳಿಗೆ ಇದು ಎಷ್ಟರಮಟ್ಟಿಗೆ ಸರಿಹೋಗುವ ದೆಂಬುದು. ಎರಡು ಮಾತ್ರಾಸಮಕ ಪದ್ಯಗಳಿಂದ ಇದು ಹುಟ್ಟಿರುವುದರಿಂದ ನಮಗೆ ಪರಿಚಿತವಿರುವ ನಾಗವರ್ಮೋಕ್ತ ಅಥವಾ ಇತರ ಷಟ್ಪದಿಗಳ ಅಸ್ತಿತ್ವ, ವಿಕಾಸ, ಇದಕ್ಕೂ ಅವುಗಳಿಗೂ ಇರಬಹುದಾದ ಸಂಬಂಧ ಇವೇ ಮೊದಲಾದ ಅನುಷಂಗಿತ ವಿಷಯಗಳ ವಿವೇಚನೆಯ ಅಗತ್ಯವಿಲ್ಲ. ಪ್ರಾಕೃತ ಅಪಭ್ರಂಶ ಭಾಷೆಗಳಲ್ಲಿ ಷಟ್ಪದಿ ಗಳಿವೆ ಅವು ಮಾತ್ರಾಷಟ್ಪದಿಗಳು. ನಾಗವರ್ಮನಿಗಿಂತ ಮೊದಲಿನವು. ಕಿರಿಚರಣ ಗಳಲ್ಲಿ ಕನಿಷ್ಟ ೭, ಹಿರಿಚರಣಗಳಲ್ಲಿ ೧೦ ರಿಂದ ೧೭ ಮಾತ್ರೆಗಳಿರುತ್ತವೆ. ಕರ್ನಾ ಟಕಕ್ಕೆ ಒಲಸೆ ಬಂದು ರಾಷ್ಟ್ರಕೂಟರ ಆಶ್ರಯದಲ್ಲಿ ತನ್ನ ಗ್ರಂಥಗಳನ್ನು ರಚಿಸಿದ ಸ್ವಯಂಭುವಿನ ಛಂದೋಗ್ರಂಥದಲ್ಲಿ ಲಕ್ಷಿತವಾಗಿವೆ. ಹಿರಿಚರಣಗಳಲ್ಲಿಯ ಪರಮಾ ವಧಿ ಮಾತ್ರಾಸಂಖ್ಯೆ ೧೭ ಇರುವದರಿಂದ, ಇವುಗಳಿಗೂ ರನ್ನನ ಮಾತ್ರಾಸಮಕ ಷಟ್ಪದಿಗೂ ಸಂಬಂಧವಿರಲಾರದು. ರನ್ನನ ಪದ್ಯ ಮೂಲದಲ್ಲಿ ಮಾತ್ರಾಸಮಕ, ಆರು ಪಾದಗಳಿರುವದರಿಂದ ಷಟ್ಪದಿ, ಇಷ್ಟೆ.

ಮಾತ್ರಾಸಮಕ ಎಂಬುದು ಜಾತಿವಾಚಕ ಮತ್ತು ವರ್ಗವಾಚಕ ಹೆಸರಿರುವದು. ಮಾತ್ರಾಸಮಕದ ಹೊರ್ತಾಗಿ ಈ ವರ್ಗದಲ್ಲಿ ವಾನವಾಸಿಕಾ, ವಿಶ್ಲೋಕ, ಚಿತ್ರಾ, ಉಪಚಿತ್ರಾ, ಪಾದಾಕುಲಕ ಎಂಬ ೫ ಒಳಭೇದಗಳಿವೆ. ಈ ಆರೂ ಭೇದಗಳನ್ನು ಲಾಕ್ಷಣಿಕರು ಮಾತ್ರಾವೃತ್ತ ಪ್ರಕರಣದಲ್ಲಿ ಒಂದೆಡೆ ಅಥವಾ ಮಾತ್ರಾಸಮಕಾಧಿ ಕರಣ, ಪ್ರಕರಣ, ಎಂದು ಪ್ರತ್ಯೇಕಿಸಿ ಹೇಳಿರುವರು. ಗುಣಚಂದ್ರ ಇವುಗಳನ್ನು ಷೋಡಶಮಾತ್ರಾ ದ್ವಿಪದಿಗಳೆಂದು ಹೆಸರಿಸಿ ಉಪಚಿತ್ರಾ ಒಂದನ್ನು ಬಿಟ್ಟು ಉಳಿದವು ಗಳನ್ನು ಇವೇ ಹೆಸರುಗಳಿಂದ ಲಕ್ಷಿಸಿರುವನು. ಮಂದಾನಿಲ ರಗಳೆಗಾಗಿ ಇವುಗಳ ಬಳಕೆ ಇದ್ದುದರಿಂದ ಆತನಸಮಯದಲ್ಲಿ ಇವು ದ್ವಿಪದಿಗಳೆಂದು ಗಣಿಸಲ್ಪಟ್ಟಿದ್ದವೆಂದು ತೋರು ವದು. ಮಾತ್ರಾಸಮಕ ಮತ್ತು ಅದರ ಭೇದಗಳ ಲಕ್ಷಣಗಳಿವು—

(೧) ಮಾತ್ರಾಸಮಕ—೪ ಪಾದಗಳು; ಪ್ರತಿಪಾದದಲ್ಲಿ ೪ ಮಾತ್ರೆಗಳ ೪ ಗಣ ಗಳು; ಮೊದಲನೆಯ ಗಣ ಜ-ಗಣ (◡–◡) ಇರಕೂಡದು; ೯ ನೆಯ ಮಾತ್ರೆ ಲಘು (◡) ಮತ್ತು ನಾಲ್ಕನೆಯ ಗಣದ ಕೊನೆಯ ಎರಡು ಮಾತ್ರೆಗಳು ಸೇರಿ ಒಂದು ಗುರು(–) ಇರಬೇಕು.

(೨) ವಾನವಾಸಿಕಾ—ರಚನೆ ಮಾತ್ರಾಸಮಕದಂತೆಯೆ; ಆದರೆ ೯ ಮತ್ತು ೧೨ ನೆಯ ಮಾತ್ರೆಗಳು ಲಘು ಇರಬೇಕು.

(೩) ವಿಶ್ಲೋಕ—ರಚನೆ ಮಾತ್ರಾಸಮಕದಂತೆಯೆ; ಆದರೆ ೫ ನೆಯ ಮತ್ತು

೮ನೆಯ ಮಾತ್ರೆಗಳು ಲಘು ಇರಬೇಕು. ೯ನೆಯ ಮಾತ್ರೆ ಲಘು ಇರಬಹುದು ಅಥವಾ ೯, ೧೦ ಸೇರಿ ಗುರು ಆಗಿರಬಹುದು.

(೪) ಚಿತ್ರಾ—ರಚನೆ ಮಾತ್ರಾಸಮಕದಂತೆಯೆ; ೫, ೮, ೯ನೆಯ ಮಾತ್ರೆಗಳು ಲಘು ಇರಬೇಕು.

(೫) ಉಪಚಿತ್ರಾ—ರಚನೆ ಮಾತ್ರಾಸಮಕದಂತೆಯೆ; ಆದರೆ ೯, ೧೦ ನೆಯ ಮಾತ್ರೆಗಳು ಸೇರಿ ಒಂದು ಗುರು ಆಗಬೇಕು.

(೬) **ಪಾದಾಕುಲಕ**—ಮೇಲಿನ ೫ ಜಾತಿಗಳಲ್ಲಿಯ ಯಾವವೆ ಪಾದಗಳಿರುವ ಮಿಶ್ರಬಂಧ.

ರನ್ನನ ಮಾತ್ರಾಸಮಕ-ಷಟ್ಪದಿಯಲ್ಲಿ ಯಾವುದೆ ಪಾದದಲ್ಲಿ (ಕಿರಿಚರಣ) ೧೬ ಮಾತ್ರೆಗಳಿಲ್ಲ. ಮಾತ್ರಾಸಮಕದ ಲೆಕ್ಕದಿಂದ ಹಿರಿಚರಣಗಳಲ್ಲಿ ೩೨ ಮಾತ್ರೆಗಳಿರಬೇಕು. ಇಲ್ಲಿ ಅವು ತ್ರುಟಿತವಿರುವದರಿಂದ ಇಂತಿಷ್ಟೆ ಎಂಬುದು ಊಹೆಯ ವಿಷಯವಾಗುವದು. ಮೊದಲನೆಯ ಪಾದದಲ್ಲಿ ೧೪, ಎರಡನೆಯದರಲ್ಲಿ ೧೨, ಮೂರನೆಯದರಲ್ಲಿ (?), ನಾಲ್ಕನೆಯದರಲ್ಲಿ ೧೩, ಐದನೆಯದರಲ್ಲಿ ೧೪, ಆರನೆಯದರಲ್ಲಿ (?) ಮಾತ್ರೆಗಳಿವೆ. ಆದರೂ ಇದು ಮಾತ್ರಾಸಮಕವೆ (ಜಾತಿವಾಚಕ ಅರ್ಥದಲ್ಲಿ). ಪ್ರಾರಂಭದಲ್ಲಿ ಜಗಣವರ್ಜ್ಯ, ನಿರ್ದಿಷ್ಟ ಸ್ಥಾನದಲ್ಲಿಯ ಮಾತ್ರೆ ಲಘು ಅಥವಾ ಎರಡು ಲಘುಗಳು ಸೇರಿ ಗುರು ಮತ್ತು ಕೊನೆಯವೆರಡು ಲಘುಗಳು ಸೇರಿ ಗುರು ಇರಬೇಕೆಂಬುದು ಈ ಜಾತಿಯ ಪದ್ಯಗಳ ಮುಖ್ಯಲಕ್ಷಣ. ಪಾದಗಳಲ್ಲಿ ಇಂತಿಷ್ಟೆ ಮಾತ್ರೆಗಳಿರಬೇಕೆಂಬುದಕ್ಕೂ ಇಷ್ಟೆ ಮಹತ್ವವಿದೆ. ಆದರೆ ಸನ್ನಿವೇಶ, ರಸಪೋಷಣ, ಔಚಿತ್ಯ ಮೊದಲಾದ ಕಾರಣಗಳಿಗಾಗಿ, ಪಾದದಲ್ಲಿರುವ ಪದ್ಯಲಕ್ಷಣಕ್ಕೆ ಅವಶ್ಯವಿರುವ ಮಾತ್ರೆಗಳನ್ನು ಬಿಟ್ಟು ಉಳಿದವುಗಳಲ್ಲಿ ಹೆಚ್ಚು ಕಡಿಮೆ ಮಾಡಿಕೊಳ್ಳುವ ಅವಕಾಶ ಕವಿಗಳಿಗಿದ್ದಿತು. ಮಾತ್ರಾಸಮಕ ಜಾತಿಗಳ ವಿಷಯದಲ್ಲಿ, ಮೊದಲಿನ ೧೦ ಮಾತ್ರೆಗಳಲ್ಲಿ ಮತ್ತು ಕೊನೆಯವೆರಡು ಮಾತ್ರೆಗಳಲ್ಲಿ ಈ ಬಗೆಯ ಹೆಚ್ಚುಕಡಿಮೆಗೆ ಆಸ್ಪದವಿಲ್ಲ. ವಾನವಾಸಿಕದ ವಿಷಯದಲ್ಲಿ ೧೨ ನೆಯ ಮಾತ್ರೆ ಸಹ ಲಘು ಇರಬೇಕಾದುದರಿಂದ ಮೊದಲಿನ ೧೨ ಮಾತ್ರೆಗಳಲ್ಲಿ ನ್ಯೂನಾಧಿಕ್ಯತೆಗೆ ಇಂಬಿಲ್ಲ. ಉದಾಹರಣೆಗಾಗಿ ಮಾತ್ರಾಸಮಕದಲ್ಲಿಯೆ ಕೆಲವು ಮಾತ್ರೆಗಳನ್ನು ಬಿಡುವ ಸಂದರ್ಭವಿದ್ದರೆ, ೧೦ ರಿಂದ ೧೪ ವರೆಗೆ ಪರಮಾವಧಿ ೫ ಮಾತ್ರೆಗಳನ್ನು ಬಿಡಬಹುದಾಗಿದೆ. ಹೀಗೆ ಮಾಡುವಾಗ ೯ ನೆಯ ಮಾತ್ರೆ ಲಘು, ಕೊನೆಯವೆರಡು ಲಘುಗಳು ಸೇರಿ ೧ ಗುರು ಇರಬೇಕೆಂಬುದನ್ನು ಮರೆಯಲಾಗದು. ವಾನವಾಸಿಕದಲ್ಲಿ ಹೀಗೆ ಪರಮಾವಧಿ ೨ ಮಾತ್ರೆಗಳನ್ನು ಬಿಡಬಹುದಾಗಿದೆ.

ರನ್ನನ ಮಾತ್ರಾಸಮಕ-ಷಟ್ಪದಿಯಲ್ಲಿ ಇಂತಾಗಿದೆ. ಇದರಲ್ಲಿಯ ಒಂದೊಂದು ಪಾದವು ಆವರೆಗೆ ವೈಭವದಿಂದ ಮೆರೆದ ಆದರೆ ಭೀಮನ ಗದೆಯ ಪ್ರಾಣಾಂತಿಕ ಪೆಟ್ಟಿನಿಂದ ದಿಕ್ಕಿಲ್ಲದೆ ಭೂಮಿಯ ಮೇಲೆ ನರಳುತ್ತ ಬಿದ್ದಿರುವ 'ಅಭಿಮಾನಧನ'

ದುರ್ಯೋಧನನ ಕರುಣಾಜನಕ ಸ್ಥಿತಿಯನ್ನು ಕಂಡು, ಕೋಪ ಸಂತಾಪಗಳಿಂದ ಉಕ್ಕಿಬಂದ ಅಶ್ವತ್ಥಾಮನ ಒಂದೊಂದು ಉದ್ಗಾರವಿದೆ. ಛಂದಸ್ಸಿನ ಪೂರ್ಣ ಹಿಡಿತದಲ್ಲಿ ಇವುಗಳನ್ನು ಅಳವಡಿಸಿಕೊಳ್ಳುವಾಗ ಮೂಲದಲ್ಲಿ ಕಂಡುಬರುವ ಶಕ್ತಿ ಸಹಜತೆಗಳು ಕುಗ್ಗಬಹುದಾಗಿದೆ. ಆದ್ದರಿಂದ ಸಾಧ್ಯವಿದ್ದಷ್ಟು ಇವುಗಳನ್ನು ಇದ್ದಂತೆಯೆ ಇಡುವದು ಹೆಚ್ಚು ಚೆನ್ನವೆನಿಸುತ್ತದೆ. ಹೋಲಿಸಿ ನೋಡಿರಿ—

ಮೂಲ— ಹಾ ಕುರುಕುಲ ಮೂಲಸ್ತಂಭಾ!
ಹಾ ಕುರುಕುಲ ಮೃಗರಾಜಾ! —ಇತ್ಯಾದಿ

ಪುನರ್ರಚಿತ— ಹಾ ಹಾ ಕುರುಕುಲ ಮೂಲಸ್ತಂಭಾ!
ಹಾ ಹಾ ಕುರು[ನೃಪ]ಕುಲ ಮೃಗರಾಜಾ!

—ಇತ್ಯಾದಿ, ಗೋವಿಂದ ಪೈ (ಜ. ಕ. ಸಂ. ೯)

ಗದಾಯುದ್ಧವು ರನ್ನನ ರೌದ್ರರಸ-ಪ್ರದರ್ಶನ-ಕೌಶಲ್ಯದ ಕ್ಷೇತ್ರ-ವೆಂದಿರುವರು ಬೇಂದ್ರೆ.[1] ಚಂಪು ಇದ್ದರೂ ದೃಶ್ಯಕಾವ್ಯದ ಎಲ್ಲ ಅಂಶಗಳಿವೆ ಇದರಲ್ಲಿ. ದೃಶ್ಯಕಾವ್ಯ (ನಾಟಕ)ದಲ್ಲಿ ಸಹ ಇದು ಪರಿವರ್ತಿಸಲ್ಪಟ್ಟಿದೆ. ಇಂಥ ಕೃತಿಯಲ್ಲಿ, ಅದರಲ್ಲೂ ಇಲ್ಲಿ ಬರುವ 'ಕೋಪ-ಪಾಟಳ-ಪರುಷೇಕ್ಷಣ' ಮೂರ್ತಿಗಳಂತಿರುವ ಭೀಮ, ದುರ್ಯೋಧನ ಅಶ್ವತ್ಥಾಮರ ಮಾತು, ಉದ್ಗಾರಗಳಲ್ಲಿ ಕೃತ್ರಿಮತೆಯ ಸೋಂಕು ಸಹ ನೃಪತುಂಗನ ಮಾತಿನಲ್ಲಿ ಕುದಿಯುವ ಹಾಲಿಗೆ ಮಜ್ಜಿಗೆಯ ಹನಿಗಳನ್ನು ಬೆರೆಸಿದಂತಾಗುವದು. ಇದನ್ನರಿತ ರನ್ನ ಮಾತ್ರಾಸಮುಕದ ಪಾದಮಾತ್ರಾ ಸಂಖ್ಯೆ ಮತ್ತು ಕನ್ನಡ ವಿಶಿಷ್ಟವಿರುವ ಪ್ರಾಸನಿಯಮಗಳನ್ನು ಸಡಿಲಿಸಿ ಮಾತ್ರಾಸಮುಕದ ಉಳಿದ ಲಕ್ಷಣಗಳಿಗೆ ಸರಿಹೋಗುವಂತೆ ಅಶ್ವತ್ಥಾಮನ ಒಂದೊಂದು ಉದ್ಗಾರವನ್ನು ಒಂದೊಂದು ಪಾದವಾಗಿಸಿಕೊಂಡು, ರಸೋಚಿತ ಕಾಕು ಅಥವಾ ಪಾದಾಂತ ಸ್ವರನ್ಯಾಸಕ್ಕೆ ಇಂಬುಗೊಟ್ಟಂತಿದೆ. ಈ ಬಗೆಯ ಪದ್ಯರಚನೆಯ ನಿಯಮೋಲ್ಲಂಘನೆಗೆ ಶಾಸ್ತ್ರಪರಂಪರೆಗಳ ಬೆಂಬಲವಿದ್ದಿತು, ಇದೆ, ಎಂಬುದನ್ನು ಈ ಕೆಳಗಣ ವಿವರಗಳಿಂದ ಕಾಣಬಹುದು.

ರನ್ನನ ಮಾತ್ರಾಸಮುಕ ಷಟ್ಪದಿಯ ಮೊದಲಿನವೆರಡು ಪಾದಗಳು ಮಾತ್ರಾಸಮುಕದ ಉಪಚಿತ್ರಾ ಭೇಧಕ್ಕೆ ಸರಿಹೋಗುವವು. ನಾಲ್ಕು ಐದನೆಯ ಪಾದಗಳು ಮಾತ್ರಾಸಮುಕಕ್ಕೆ ಹೊಂದಿಕೊಳ್ಳುವವು. ಮೂರು ಆರನೆಯ ಪಾದಗಳು ತ್ರುಟಿತವಿದ್ದರೂ ಅವುಗಳ ಪ್ರಥಮಾರ್ಧಗಳು ಉಳಿದ ನಾಲ್ಕು ಪಾದಗಳಂತಿವೆ. ಅವಾದರೂ ಉಪಚಿತ್ರಾ ಭೇದಕ್ಕೆ ಸರಿಹೋಗುವವು. ಎಲ್ಲ ಪಾದಗಳ ಕೊನೆಗೆ ಗುರು ಇದೆ. ಪ್ರತಿ ಪಾದದ ದ್ವಿತೀಯಾರ್ಧದಲ್ಲಿ ಕೆಲವು ಮಾತ್ರೆಗಳನ್ನು ಬಿಟ್ಟಿರುವುದರಿಂದ ೩/೪ನೆಯ ಗಣಗಳಲ್ಲಿ ಚತುರ್ಮಾತ್ರೆಗಳು ಹೊರಡುವುದಿಲ್ಲ. ಈ ಗಣಗಳಲ್ಲಿ ಬಿಟ್ಟಿರುವ ಮಾತ್ರೆಗಳನ್ನು ಪಾದಾಂತ ಗುರುವನ್ನೆಳೆದು ತುಂಬಿಕೊಂಡು ಪದ್ಯವನ್ನು ಮತ್ರಾಸಮುಕದ

1. ಸಾ ಸಂ. ಪು. ೧೦೫.

ಪಾದಗಳಿಗೆ ಮತ್ತು ೬ ಪಾದಗಳಿರುವುದರಿಂದ ಮಾತ್ರಾಸಮಕ ಷಟ್ಪದಿಗೆ ಸರಿದೂಗುವಂತೆ ಹೊಂದಿಸಿಕೊಂಡು ಹೇಳಬೇಕೆಂಬುದು ರನ್ನನ ಮನೀಷೆ ಇದ್ದಂತೆ ತೋರುತ್ತದೆ.

ರಸಪೋಷಣೆ ಅಥವಾ ಇತರ ಯಾವುದೇ ಉದ್ದೇಶದಿಂದ ಪಾದಾಕ್ಷರ/ಪಾದ ಮಾತ್ರೆಗಳ ಸಂಖ್ಯೆಯಲ್ಲಿ ಹೆಚ್ಚುಕಡಿಮೆ ಮಾಡಿಕೊಳ್ಳುವ ಕವಿಗಳಿರುವ ಅವಕಾಶಕ್ಕೆ ವೈದಿಕ ಛಂದಸ್ಸುಗಳಲ್ಲಿರುವ ಇಂಥ ಅವಕಾಶವು ತಳಹದಿ ಇರಬೇಕೆನಿಸುವದು. ದೃಷ್ಟಾರರಿಗೆ ಅಂತಃಸ್ಫೂರ್ತಿಯಿಂದ ಗೋಚರವಾಗಿರುವುದರಿಂದ ಕೆಲವು ವೇದ ಮಂತ್ರಗಳಲ್ಲಿ ನಿಯಮೋಕ್ತ ಸಂಖ್ಯೆಗಿಂತ ಹೆಚ್ಚು ಅಥವಾ ಕಡಿಮೆ ಅಕ್ಷರಗಳು ಹೊರಡುತ್ತವೆ. ಹೀಗಿದ್ದರೂ ಆ ಮಂತ್ರಗಳ ಛಂದಸ್ಸು ಬೇರೊಂದಾಗದೆಂಬ ನಿಯಮವನ್ನು ಮಾಡಿಕೊಂಡು, ಒಂದು ಅಕ್ಷರ ಕಡಿಮೆ ಇದ್ದರೆ ನಿಚೃತ್, ಎರಡಿದ್ದರೆ ವಿರಾಟ್ ಒಂದು ಅಕ್ಷರ ಹೆಚ್ಚಾಗಿದ್ದರೆ ಭುರಿಕ್, ಎರಡಿದ್ದರೆ ಸ್ವರಾಟ್ ಎಂಬ ಒಳಭೇದಗಳನ್ನು ಕಲ್ಪಿಸಿಕೊಂಡಿರುವರು. ಛಂದಃಪೂರ್ತಿಗಾಗಿ ಪದಗಳಲ್ಲಿಯ ಸಂಧಿಸಮಾಸಾದಿಗಳನ್ನು ವಿಂಗಡಿಸಿ ಅಕ್ಷರಗಳ ಲೋಪವನ್ನು ತುಂಬಿಕೊಳ್ಳುತ್ತಿದ್ದರು (ಉದಾ : ತತ್ಸವಿತುರ್ವರೇಣ್ಯಮ್-ತತ್ಸವಿತುರ್ವ-ರೇಣಿಯಮ್). ನಿಚೃತಾದಿಭೇದಗಳು ಪಾದಾಕ್ಷರಗಳಲ್ಲಿ ಪರಮಾವಧಿ ಎರಡು ಅಕ್ಷರಗಳ ನ್ಯೂನಾಧಿಕಕ್ಕೆ ಪರಿಮಿತವಾಗಿವೆ. ಎರಡಕ್ಕಿಂತ ಹೆಚ್ಚು ಅಕ್ಷರಗಳ ಕೊರತೆ ಇರುವ ಮಂತ್ರಗಳುಂಟು. ಇವುಗಳನ್ನು ಶಂಕುಮತಿ, ಕಕುಮ್ಮತಿ, ಪಿಪೀಲಿಕಾಮಧ್ಯಾ, ಯವಮಧ್ಯಾ ಮೊದಲಾದ ಭೇದಗಳಲ್ಲಿ ವಿಂಗಡಿಸಿಕೊಂಡಿರುವರು. ಆದರೆ ಛಂದಸ್ಸು ಅದೇ. ಅದರಲ್ಲಿ ಬದಲಾವಣೆ ಇಲ್ಲ.[1] ಪಠನ ಅಥವಾ ಗಾನ (ಸಾಮಗಾನ) ಸಮಯದಲ್ಲಿ ಸ್ತೋಭ (ಆ, ಏ, ಈ, ಊ ಇತ್ಯಾದಿ) ಗಳನ್ನು ಸೇರಿಸಿ ಅವುಗಳನ್ನು ಎಳೆದು, ಪುನರುಚ್ಚರಿಸಿ, ಅಕ್ಷರಗಳ ಲೋಪವನ್ನು ತುಂಬಿಕೊಂಡು ಛಂದಸ್ಸಿಗೆ/ಧಾಟಿಗೆ ತೂಗಿಸಿಕೊಂಡು ಹೇಳುತ್ತಿದ್ದರು. ಅಕ್ಷರಗಳು ಹೆಚ್ಚಾಗಿದ್ದರೆ ಅವುಗಳನ್ನು ಯುಕ್ತ ರೀತಿಯಲ್ಲಿ ಕಡಿಮೆಮಾಡಿಕೊಳ್ಳುವ ಅವಕಾಶವೂ ಇತ್ತು (ಉದಾ : ಅಗ್ನ ಆಯಾ ಹೀ–ಓಗ್ನಾಹೀ).[2]

ವೈದಿಕ ಛಂದಸ್ಸುಗಳಲ್ಲಿ ಕಲ್ಪಿಸಿಕೊಂಡ ನಿಚೃತಾದಿ ಭೇದಗಳನ್ನು ಲೌಕಿಕ ಛಂದಸ್ಸುಗಳಿಗೆ ಅನ್ವಯಿಸಿಕೊಳ್ಳುವ ಬಗ್ಗೆ ಲಾಕ್ಷಣಿಕರಲ್ಲಿ ಮತಭೇದವಿದೆ. ಪಿಂಗಲ ಛಂದಃಸೂತ್ರಗಳ ಭಾಷ್ಯಕಾರ ಹಲಾಯುಧನು ವೈದಿಕ ಛಂದಸ್ಸುಗಳ ನಿಚೃತಾದಿ ಭೇದಗಳು ಲೌಕಿಕ ಛಂದಸ್ಸುಗಳಲ್ಲಿಲ್ಲವೆಂದಿರುವನು.[3] ಪಿಂಗಲನ ತರುವಾಯ ಪ್ರಾಚೀನತಮನಿರುವ ಜನಾಶ್ರಯಿಕಾರನು ಲೌಕಿಕ ಛಂದಸ್ಸುಗಳಿಗಾದರೂ ಈ ಭೇದಗಳು ಅನ್ವಯಿಸುವವೆಂದು ಸ್ಪಷ್ಟವಾಗಿ ಹೇಳಿರುವನಲ್ಲದೆ ಲೌಕಿಕ ನಿಚೃತ್, ವಿರಾಟ್, ಭುರಿಕ್, ಸ್ವರಾಟ್‌ಗಳ ಲಕ್ಷ್ಯಗಳನ್ನು ಕೊಟ್ಟಿರುವನು. ವೈದಿಕ

1. ವೈ. ಛಂ. ಮೀ. ಪು, ೯೫, ಮುಂದೆ. 2. ಭಾರತೀಯ ಸಂಗೀತದ ಸಾಹಿತ್ಯಿಕ ಇತಿಹಾಸ-ಡಾ. ವಿ. ರಾಘವನ್, ಜ. ಎಮ್. ಎ. ಸಂ. ೨೩, ಪು. ೬೪. ಮತ್ತು ಭಾರತೀಯ ಸಂಗೀತದ ಐತಿಹಾಸಿಕ ಅಭಿವೃದ್ಧಿ—ಸ್ವಾಮಿ ಪ್ರಜ್ಞಾನಂದ, ಪಿ. ಛಂ. ೩.೬೩. 3. ಪಿ. ಛಂ. ೩-೬೩.

ಛಂದಸ್ಸುಗಳು ಕೇವಲ ಅಕ್ಷರನಿಯತ ಬಂಧಗಳು. ಲೌಕಿಕ ಛಂದಸ್ಸುಗಳಲ್ಲಿ ಅಕ್ಷರ ಛಂದಸ್ಸು, ಮಾತ್ರಾ ಛಂದಸ್ಸುಗಳೆಂಬ ಭೇದಗಳಿವೆ. ಇದನ್ನು ಮನದಂದು ಲೌಕಿಕದ ಅಕ್ಷರಛಂದಸ್ಸು, ಮಾತ್ರಾಛಂದಸ್ಸು ಎರಡೂ ಭೇದಗಳಿಗೆ (ಲೌಕಿಕಂ ಚ ವಿಶೇಷಿತಲಕ್ಷಣಮೇವ ವೃತ್ತಂ ವಾ ಜಾತಿರ್ವಾ ಏವಂ ಭವತಿ)—ಇವು ಅನ್ವಯಿಸುವವೆಂದಿರುವನು.[1] ಜನಾಶ್ರಯಿಕಾರನು ದಾಕ್ಷಿಣಾತ್ಯ. ಛಂದಃಶಾಸ್ತ್ರದಲ್ಲಿ ಒಬ್ಬ ಮತಪ್ರವರ್ತಕನಿದ್ದನು. ಆತನ ಮತವನ್ನು ಪುರಸ್ಕರಿಸಿ ಕವಿಗಳು ವೈದಿಕದ ನಿಚೃತಾದಿ ಭೇದಗಳ ಮತ್ತು ಗಾನಸಮಯದಲ್ಲಿ ಪ್ರಯೋಗಿಸಲಾಗುತ್ತಿದ್ದ ಸ್ತೋಭಗಳ ಪರಂಪರೆಯನ್ನು ಲೌಕಿಕ ಛಂದಸ್ಸುಗಳಿಗೂ ಅನ್ವಯಿಸಿ ಸನ್ನಿವೇಶ, ರಸಪೋಷಣ ಮೊದಲಾದ ಉದ್ದೇಶಗಳಿಂದ ತಮಗೆ ಸರಿದೋರಿದಂತೆ ಪಾದಾಕ್ಷರ/ಪಾದ ಮಾತ್ರೆಗಳಲ್ಲಿ ಹೆಚ್ಚು ಕಡಿಮೆ ಮಾಡಿಕೊಳ್ಳುತ್ತಿದ್ದರೆಂದು ತೋರುತ್ತದೆ. ಜಾನಪದ ಸಾಹಿತ್ಯದಲ್ಲಿ ಧಾಟಿಗನುಸರಿಸಿ ಅಕ್ಷರಗಳ ಉಚ್ಚಾರವನ್ನು ಎಳೆದು ಅಥವಾ ಸಂಕುಚಿತಗೊಳಿಸಿ ಪದ್ಯವನ್ನು ಹೇಳುವದುಂಟು. ಆದರೆ ಶಿಷ್ಟಕವಿಗಳಿಗೆ ಈ ಬಗೆಯ ಸ್ವಾತಂತ್ರ್ಯವನ್ನು ಬಳಸಿಕೊಂಡು ಪದ್ಯಗಳನ್ನು ರಚಿಸಲು ಅಥವಾ ಪಠಿಸಲು ವೈದಿಕ ಛಂದಸ್ಸುಗಳಲ್ಲಿರುವ ಈ ವೈಶಿಷ್ಟ್ಯಗಳು ಮತ್ತು ಜನಾಶ್ರಯಿಕಾರನು ಇವುಗಳನ್ನು ಲೌಕಿಕ ಛಂದಸ್ಸುಗಳಿಗೆ ಅನ್ವಯಿಸಿರುವದು ಕಾರಣವಿರಬೇಕು. ತೀ. ನಂ. ಶ್ರೀ. ಯವರ ಮಾತ್ರೆ, ಮುಡಿ, ಪದ್ಮ ಗಣಗಳ ವಿವೇಚನೆಯ ಆಶಯವಾದರೂ ಇದೇ.[2] ಅವರ ಈ ವಿವೇಚನೆ ಹೆಚ್ಚಾಗಿ ಆಧುನಿಕ ಕನ್ನಡ ಕವನಗಳಿಗೆ ಸಂಬಂಧಿಸಿದೆ. ಅಪೂರ್ಣ ಮಾತ್ರೆಗಳಿರುವ ಗಣಗಳಿಗೆ ಪೂರ್ಣ ಗಣಗಳ ಬೆಲೆಕೊಟ್ಟು, ಔಚಿತ್ಯಕ್ಕನುಸರಿಸಿ ಲೋಪವಾದ ಮಾತ್ರೆಗಳ ಉಚ್ಚಾರಕ್ಕೆ ತಗಲುವಷ್ಟು ಸಮಯವನ್ನು ಧ್ವನಿ ಎಳೆದು ಅಥವಾ ಮೌನದಿಂದ ತುಂಬಿಕೊಂಡು ಪದ್ಯವನ್ನು ಹೇಳುವದರಿಂದ ಹೆಚ್ಚು ಸೊಬಗುಂಟಾಗುವದು ಎಂಬುದು ಅವರ ವಿವೇಚನೆಯ ಮಥಿತಾರ್ಥ. ಇಂಥ ಅಪೂರ್ಣ ಗಣಗಳನ್ನು ಅವರು ಮುಡಿ, ಪದ್ಮಗಣ ಎಂದು ಹೆಸರಿಸಿರುವರು. ಅವರ ಈ ವಿವೇಚನೆಗೂ ವೈದಿಕ ಸ್ತೋಭ ಸಂಪ್ರದಾಯಕ್ಕೂ ತಾತ್ವಿಕ ಭೇದವಿಲ್ಲೆಂಬುದು ಈ ಮೇಲಿನ ಸ್ತೋಭಗಳ ವಿವರಣೆಯಿಂದ ಸ್ಫುಟವಾಗದಿರದು.[3]

ಸಮಸ್ಯಾತ್ಮಕವಿರುವ ಇವೆರಡು ಪದ್ಯಗಳ ಹೊರ್ತಾಗಿ ನೂರಾರು ಕಂದ ವೃತ್ತ

---

1. ಜನಾಶ್ರಯಿ, ೧-೬.೭. ;

2. ಸಮಾಲೋಕನ, ಪು. ೨೦೫ ಮುಂದೆ.

3. ಗಣ–ಮಾತ್ರೆಗಳ ನ್ಯೂನಾಧಿಕಕ್ಕೆ ಶಿಥಿಲದ್ವಿತ್ವ ವಿಚಾರದಲ್ಲಿ ಈ ಮೊದಲು ಉದಾಹರಿಸಿದ ಗದಾಯುದ್ಧದಲ್ಲಿಯ ಚಂಪಕಮಾಲೆಯ ಪಾದವನ್ನೂ ಈ ಮುಂದಣ 'ಶಾಂತಿನಾಥನ ಪದ್ದಳಿ' ಲೇಖವನ್ನೂ ನೋಡಬಹುದು. ಪ್ರಾಸವಿಚಾರದಲ್ಲಿ ಡಿ. ಎಲ್. ಎನ್. ಉದ್ಧೃತ ಮಿಶ್ರ ಅಂಪರೆ ಆದಿ, ಅಂತ್ಯ, ಆದ್ಯಂತ ಮತ್ತು ಪ್ರಾಸ ಹೀನ ಲಲಿತ ರಗಳೆಯ ಪಾದಗಳನ್ನು ಪರಾಂಬರಿಸಬಹುದು (ಡಿ. ಎಲ್. ಎನ್. ಪ್ರ. ಕ. ೪೫–೨ ; ಕನ್ನಡ ಛಂದಸ್ಸು–ಟಿ. ವಿ. ವೆಂ. ಶಾಸ್ತ್ರೀ, ಪು. ೬೧–ಟಿಪ್ಪಣಿ).

ಗಳು ರನ್ನನ ಈ ಗ್ರಂಥದಲ್ಲಿವೆ. ಕಂದ, ಚಂಪಕಮಾಲೆ ಮೊದಲಾದ ಖ್ಯಾತಕರ್ನಾಟಕಗಳು ಮತ್ತು 'ಇರಲೀ ಮಾದ್ರಿ ತನೂಜಂ' ಅರ್ಧಸಮವೃತ್ತ—ಇವಿಷ್ಟನ್ನು ಬಿಟ್ಟು ಉಳಿದ ವೃತ್ತಗಳಿಗೆ ಹಸ್ತಪ್ರತಿಗಳಲ್ಲಿ ಸರಿಯಾದ ಹೆಸರುಗಳಿವೆ. ಇವುಗಳಲ್ಲಿ ಒಂದು ನವನಲಿನ, ಇನ್ನೊಂದು ಲಲಿತ, ಮೂರನೆಯದು ಪೃಥ್ವೀ. ಅರ್ಧಸಮವೃತ್ತ ನಿಯಮಾನುಸಾರ ರಚಿತವಾಗಿದ್ದರೂ ಶಾಸ್ತ್ರಗ್ರಂಥಗಳಲ್ಲಿ ಅದು ಉಕ್ತವಾಗಿಲ್ಲ. ಆದ್ದರಿಂದ ಅದಕ್ಕೆ ಹೆಸರುಕೊಟ್ಟಿಲ್ಲ. ಅಂತೆಯೆ ಸಂಪಾದಕರು ಈ ವೃತ್ತದ ಹೆಸರು ಮಾತ್ರ ಕೆಯಲ್ಲಿ ಇಲ್ಲ ಎಂದಿರುವರು, ಅಡಿಟಿಪ್ಪಣಿಯಲ್ಲಿ. ಇವೆಲ್ಲ ಚತುಷ್ಪದಿಗಳಾಗಿಯೇ ಬಂದಿವೆ. ಮಾತ್ರಾಸಮಕ ಷಟ್ಪದಿ ಹೆಸರಿಗನುಸರಿಸಿ ೬ ಪಾದಗಳಲ್ಲಿ, ತ್ರಿಪದಿ ೩ ಪಾದಗಳಲ್ಲಿ ಬಂದಿವೆ. ಪ್ರತಿಕಾರರ ದೋಷವೆಂದು ಅವರಿತ್ತ ಈ ಹೆಸರುಗಳನ್ನು ಹೊಡೆದು ಹಾಕಿದರೂ ಕಂದವೃತ್ತಾದಿಗಳನ್ನು ೪ ಪಾದಗಳಲ್ಲಿ, ಮಾತ್ರಾ ಸಮಕ ಷಟ್ಪದಿಯನ್ನು ೬, ತ್ರಿಪದಿಯನ್ನು ೩ ಪಾದಗಳಲ್ಲಿ ಬರೆದಿರುವದನ್ನು ಹೊಡೆದುಹಾಕುವದು ಸುಲಭವಲ್ಲ. ಅಲ್ಲದೆ ನಮಗೆ ಪರಿಚಿತವಿರುವ ತ್ರಿಪದಿ ಷಟ್ಪದಿಗಳ ಸಂಖ್ಯೆ ಅಲ್ಪ. ಸಂಗೀತರತ್ನಾಕರದ ಶಾರ್ಙ್ಗದೇವನಾದರೊ ಇವುಗಳಲ್ಲಿ ಬಹಳಷ್ಟು (ಭೂರಯ:) ಭೇದಗಳಿವೆ, ಎಂದಿರುವನು. ತ್ರಿಪಥಕ ಎಂಬ ಪ್ರತ್ಯೇಕ ಜಾತಿಯನ್ನು ಉಲ್ಲೇಖಿಸಿರುವನು. ಸಂಶೋಧನೆಯನ್ನು ಈ ದಿಸೆಯಲ್ಲಿ ಮುಂದುವರಿಸಿ, ರನ್ನನ ಈ ಪದ್ಯಗಳಿಗೆ ತ್ರಿಪದಿ, ಮಾತ್ರಸಮಕ ಷಟ್ಪದಿ ಎಂದಿರುವದು ಪ್ರತಿಕಾರರ ದೋಷ ಎಂದು ನಿಶ್ಚಿತ ಪಡಿಸಿಕೊಳ್ಳದೆ ಇವುಗಳ ಪುನರ್ರಚನೆಗೆ ಕೈಹಾಕುವುದು ಮಳಲ ಮೇಲೆ ಮನೆ ಕಟ್ಟಿದಂತಾಗುವುದು. ಇದಕ್ಕೆ ಸ್ಥಿರತೆಯಿಲ್ಲ. ಕೊನೆಯಿಲ್ಲ. ಈಗಾಗಲೆ ರನ್ನನ ತ್ರಿಪದಿ ಕಂದ, ಉಪಜಾತಿ,ಅರ್ಧಸಮ-ಮಾತ್ರಾವಿಶಿಷ್ಟ-ಮತ್ತ-ಕೋಕಿಲೆ ಎಂದು, ಮಾತ್ರಾಸಮಕ ಷಟ್ಪದಿ ಭಾಮಿನಿ, ಪರಿವರ್ಧಿನಿ ಎಂದು ಪುನರ್ರಚಿತವಾಗಿವೆ. ಇನ್ನೂ ಹಲವು ಬಗೆಗಳಲ್ಲಿ ಇವುಗಳ ಪುನರ್ರಚನೆಯಾಗಬಹುದು. ಈ ರೀತಿ ಕಾಲಾಂತರದಲ್ಲಿ ಸಂಶೋಧನೆಯ ಹೆಸರಿನಲ್ಲಿ ಇದೊಂದು ಬೌದ್ಧಿಕ ಕಸರತ್ತಾಗಿ ಪರಿಣಮಿಸಬಹುದೆ ಹೊರ್ತು ಸಮಸ್ಯೆಗೆ ಪರಿಹಾರ ದೊರೆಯದು.

ರನ್ನನ ಈ ಪದ್ಯಗಳು ತ್ರಿಪದಿಮಾತ್ರಾಸಮಕ ಷಟ್ಪದಿಗಳಿರಲಿ ಬೇರೆ ಯಾವವೆ ಇರಲಿ, ಇವು ಛಂದೋ ಬಂಧಗಳೆಂಬಲ್ಲಿ ಮತಭೇದವಿಲ್ಲ. ಆದರೆ ಆ ಛಂದಸ್ಸಾವದೆಂಬುದು ಇಂದು ತಿಳಿಯದಾಗಿದೆ. ಇಂಥ ಸಂದರ್ಭಗಳಲ್ಲಿ ಛಂದಸ್ಸುಗಳ ಅನಂತತ್ವವನ್ನು ಮನದಂದು ಲಾಕ್ಷಣಿಕರು ಇವಕ್ಕೆ ಗಾಥಾ ಎನ್ನಬೇಕೆಂದಿರುವರು. ಕೆಲವರು ಗಾಥೆ ತ್ರಿಪದಿ ಷಟ್ಪದಿಗಳಲ್ಲಿರುವದು ಎಂದಿರುವರು. ಬೇರೆ ಕೆಲವರು ವಿಷಮಪಾದ, ವಿಷಮಾಕ್ಷರ ಪಾದಗಳಿರುವದು ಗಾಥೆ ಎಂದಿರುವರು. ಅಕ್ಷರ ಬಂಧಗಳೊಂದಿಗೆ ಮಾತ್ರಾ ಬಂಧಗಳನ್ನು ಸೇರಿಸಿಕೊಂಡಿರುವರು. ರನ್ನನ ಈ ಪದ್ಯಗಳು ಇಂತಿರುವದರಿಂದ ಇವಾದರೂ ಗಾಥಾ ಅಥವಾ ಗಾಥಾತ್ರಿಪದಿ, ಗಾಥಾ ಷಟ್ಪದಿ ಎನ್ನಬೇಕಾಗುವುದು. ಹೀಗೆನ್ನುವಾಗ ಕವಿಗೆ ದೋಷ ತಟ್ಟುವದಿಲ್ಲ; ಪ್ರತಿಕಾರರು ತಪ್ಪಿತಸ್ಥರಾಗುವುದಿಲ್ಲ;

ಪದ್ಯಗಳಲ್ಲಿಯ ಶಬ್ದಗಳಿಗೆ ಕೈಹಚ್ಚಬೇಕಿಲ್ಲ; ಹೆಚ್ಚಿನ ಶಬ್ದಗಳನ್ನು ಸೇರಿಸುವ ಅಥವಾ ಇದ್ದವುಗಳನ್ನು ತೆಗೆದುಹಾಕುವ ಮತ್ತು ಪಾದಗಳ ಸಂಖ್ಯೆಯಲ್ಲಿ ವ್ಯತ್ಯಾಸ ಮಾಡುವ ಅಗತ್ಯವಿಲ್ಲ. ಹಾಗೆ ನೋಡಿದರೆ ರನ್ನನ ಈ ಪದ್ಯಗಳನ್ನು ಗಾಥಾವರ್ಗದಲ್ಲಿ ಸೇರಿಸುವುದು ಸಂಶೋಧನೆಯ ಫಲವಲ್ಲ. ಛಂದಶಾಸ್ತ್ರದಲ್ಲಿಯ 'ಅನುಕ್ತಂ ಗಾಥಾ' ಸೂತ್ರದ ಪರಿಚಯವಿದ್ದವರು ಹೆಚ್ಚು ತಲೆ ತುರಿಸಿಕೊಳ್ಳದೆ ಥಟ್ಟನೆ ಒಂದು ಮಾತಿನಲ್ಲಿ 'ಇದು ಗಾಥಾ' ಎಂದು ಹೇಳಿ ಮುಂದೆ ಸಾಗುವರು. ಇಲ್ಲಿ ಸಹ ಇಷ್ಟೆ ಇದ್ದು ಇದಕ್ಕೆ ಪೂರ್ವಭಾವಿಯಾಗಿ ಗಾಥೆಯ ಇತಿಹಾಸ ಬಂದಿದೆ. ತ್ರಿಪದಿಯಲ್ಲಿಯ ಪ್ರಾಸಾರಾಹಿತ್ಯಾದಿ ದೋಷಗಳನ್ನು ನಿವಾರಿಸಿಕೊಳ್ಳುವ ಬಗೆ, ಮಾತ್ರಾಸುಮುಕ ಷಟ್ಪದಿಯನ್ನು ಮಾತ್ರಾಸಮುಕ ಬಂಧಗಳಿಗೆ ಹೊಂದಿಸಿಕೊಳ್ಳುವ ಬಗೆ ಊಹಾತ್ಮಕವಿದ್ದರೂ ಇವು ಗಾಥಾ ಅಥವಾ ಗಾಥಾ ತ್ರಿಪದಿ, ಗಾಥಾ ಷಟ್ಪದಿ ಎಂಬಲ್ಲಿ ಸಂದೇಹವಿಲ್ಲ.

ರನ್ನ 'ರತ್ನತ್ರಯ' ಕವಿಗಳಲ್ಲೊಬ್ಬ. ಅತಏವ ಅವನ ತ್ರಿಪದಿ ಮಾತ್ರಾಸಮುಕ ಷಟ್ಪದಿಗಳಲ್ಲಿ ಕಂಡುಬರುವ ಲೋಪದೋಷಗಳಿಗೆ ಒಂದು ಹಿನ್ನೆಲೆ ಇರಬೇಕು. ಅದಾವುದೆಂಬುದನ್ನು ಗುರುತಿಸುವ ಯತ್ನದಲ್ಲಿ ಕಂಡುಬರುವ ಫಲಿತಾಂಶಗಳನ್ನು ವಿದ್ವಾಂಸರ ಮುಂದಿಡುವುದು ಈ ವಿವೇಚನೆಯ ಉದ್ದೇಶ. ರನ್ನನಂಥ ಉದ್ದಾಮ ಕವಿ ಈ ಬಗೆಯ ಲೊಪದೋಷಗಳಿಗೆ ಎಡೆಗೊಡಲಾರನೆಂಬುದು ಎಷ್ಟು ಬಲವತ್ತರ ಕಾರಣವಿದೆಯೊ, ಪ್ರತಿಕಾರರು ಆತನ ಈ ಪದ್ಯಗಳಿಗೆ ತಪ್ಪು ತಿಳುವಳಿಕೆಯಿಂದ ಈ ಹೆಸರುಗಳನ್ನು ಕೊಟ್ಟಿರಲಾರರೆಂಬ ಕಾರಣವಾದರೂ ಅಷ್ಟೇ ಬಲವತ್ತರವಿದೆ. ವಸ್ತುಸ್ಥಿತಿ ಇವೆರಡರ ಮಧ್ಯದಲ್ಲಿರಬಹುದಾಗಿದೆ. ಅದೆಂದರೆ ರನ್ನನೆ ಇವುಗಳನ್ನು ಹೀಗೆ ರಚಿಸಿರಬಹುದಾಗಿದೆ. ಹೀಗೆನ್ನುವುದರಿಂದ ಆತನ 'ಕವಿಚಕ್ರವರ್ತಿ' ಪದವಿಗೆ ಸುತರಾಂಬಾಧೆ ತಟ್ಟದೆಂಬುದು ಈ ಮೇಲಿನ ವಿವೇಚನೆಯಿಂದ ಸ್ಪಷ್ಟವಾಗದಿರದು. ತ್ರಿಪದಿ ಮಾತ್ರಾಸಮುಕ ಷಟ್ಪದಿ ಎಂದು ಅವನೇ ಹೆಸರಿಸಿರಬಹುದು ಅಥವಾ ಅನ್ಯರು ಹೆಸರಿಸಿರಬಹುದು. ಯಾರೆ ಇರಲಿ ಅವರಿತ್ತ ಈ ಹೆಸರುಗಳು ಅನುಚಿತವೆಂದು ಬಗೆಯುವಂತಿಲ್ಲ.

ಅರ್ಧಸಮವೃತ್ತ

ಗದಾಯುದ್ಧದ ಆಶ್ವಾಸ ೭.೪೧ನೆಯ "ಇರಲೀ ಮಾದ್ರಿ ತನೂಜಂ" ಅರ್ಧಸಮ-ವರ್ಣ-ವೃತ್ತದಲ್ಲಿ ಸಮಸ್ಯೆಯೆಂಬುದಿಲ್ಲ. ಸಂಪಾದಕರು ಇದನ್ನು ಅರ್ಧಸಮವೃತ್ತವೆಂದಿರುವರು. ಇಂಥ ವೃತ್ತಗಳ ವ್ಯಾಖ್ಯೆಗನುಸರಿಸಿ ಅವರು ಸರಿಯಾಗಿಯೆ ಹೇಳಿರುವರು. ಕುಂದಣಗಾರರು ಇದಕ್ಕೆ ಛಂದಃಶಾಸ್ತ್ರದಲ್ಲಿ ಸ್ಥಾನವಿಲ್ಲೆಂದಿರುವರು. ಅದೇಕೆಂಬುದನ್ನಿಷ್ಟೆ ಇಲ್ಲಿ ಚರ್ಚಿಸಲಾಗಿದೆ. ವೃತ್ತದ ಪೂರ್ತಿ ಪಾಠ ಇಂತಿದೆ—

ಇರಲೀ ಮಾದ್ರಿತನೂಜರಿರ್ಬರವರಿನ್ನೇಗೆಯ್ದಪರ್ ಧರ್ಮಜಂ
ಚಿರಸೀಗಳ್ ಭೀಮಸೇನಂ ಪೊಣರಲಿನಿಬರಂ ನಂದನರ್ ಮೂವರಿಲ್ಲೀ।
ನರಸುಂ ಬರ್ಕೆ ಕೃತಾಂತಜಂ ಪವನಜಂ ಗಾಂಡೀವಧಾನುಷ್ಕಮೂ-
ವರಳೊರ್ವಂ ಬರ್ಕೆ ಭೀಮಂ ತೊಡರ್ದನಿಬರೊಳಂ ಬರ್ಕೆ ಪೇೞ್ ಬನ್ನಮೀವೆಂ॥

ಚತುಷ್ಪದಿ ಪದ್ಯಗಳಲ್ಲಿ ಸಮ, ಅರ್ಧಸಮ, ವಿಷಮ ಎಂಬ ಮೂರು ಸಾಮಾನ್ಯ ಭೇದಗಳುಂಟು. ನಾಲ್ಕೂ ಪಾದಗಳ ಲಕ್ಷಣ ಒಂದೇ ಆಗಿದ್ದರೆ ಅದು ಸಮವೃತ್ತ. ಒಂದು ಮೂರನೆಯ ಮತ್ತು ಎರಡು ನಾಲ್ಕನೆಯ ಪಾದಗಳ ಲಕ್ಷಣ ಒಂದೇ ಇದ್ದರೆ ಅದು ಅರ್ಧ ಸಮವೃತ್ತ. ನಾಲ್ಕೂ ಪಾದಗಳ ಲಕ್ಷಣ ಬೇರೆಬೇರೆಯಾಗಿದ್ದರೆ ಅದು ವಿಷಮ ವೃತ್ತ. ರನ್ನನ ಈ ಪದ್ಯದಲ್ಲಿ ಒಂದನೆಯ ಮತ್ತು ಮೂರನೆಯ ಪಾದಗಳು ೨೦ ಅಕ್ಷರ ಗಳ ಮತ್ತೇಭವಿಕ್ರೀಡಿತದಲ್ಲಿ (ಸಭರನಮಯಲಗ) ಮತ್ತು ಎರಡು ನಾಲ್ಕನೆಯ ಪಾದ ಗಳು ೨೨ ಅಕ್ಷರಗಳ ಮಹಾಸ್ರಗ್ಧರೆಯಲ್ಲಿ (ಸತತನಸರರಗ) ಇವೆ. ವೇಲಣಕರರ ಅಭಿ ಪ್ರಾಯದಲ್ಲಿ, ಸಂಸ್ಕೃತದಲ್ಲಿಯ ಅರ್ಧಸಮವೃತ್ತಗಳು ಪ್ರಾಕೃತ ಲಾಕ್ಷಣಿಕರ ಕೊಡು ಗೆಯೆಂದಿದೆ. ಪ್ರಾಕೃತಛಂದೋಬಂಧಗಳಲ್ಲಿ ಒಂದು ಪಾದವನ್ನು ಹಿರಿಕಿರಿ ಚರಣಗಳಲ್ಲಿ ವಿಭಜಿಸುವ ಪ್ರವೃತ್ತಿ ಎದ್ದು ಕಾಣುವದು. ಸಂಸ್ಕೃತಲಾಕ್ಷಣಿಕರು ಇವುಗಳಿಗೆ ನಿರ್ದಿಷ್ಟ ರೂಪವನ್ನು ಕೊಟ್ಟು ಸಂಸ್ಕೃತದಲ್ಲಿ ಅಳವಡಿಸಿಕೊಂಡರು. ಪಿಂಗಲನು ಇಂಥ ೧೦ ವೃತ್ತಗಳನ್ನು ಉಲ್ಲೇಖಿಸಿರುವದರಿಂದ ಈ ಉಪಕ್ರಮ ಬಹಳ ಪ್ರಾಚೀನ ಕಾಲದಿಂದ ನಡೆದುಬಂದಿರಬೇಕು, ಎಂದಿರುವರು ಅವರು.[1] ಪ್ರಾರಂಭದಲ್ಲಿ ಧಾಟಿಗೆ ಸರಿ ಹೋಗುವ ಮತ್ತು ಒಂದು ಅಕ್ಷರದ ವ್ಯತ್ಯಾಸವಿರುವ ಎರಡು ವೃತ್ತಗಳ ಪಾದಗಳನ್ನು ಇದಕ್ಕಾಗಿ ಬಳಸಿಕೊಳ್ಳುತ್ತಿದ್ದರೆಂದು ತೋರುತ್ತದೆ (೧೦/೧೧, ೧೦/೧೧ ಹೀಗೆ). ನಾಗವರ್ಮನ ಕಾಲದಲ್ಲಿ ಈ ವ್ಯತ್ಯಾಸ ಎರಡು ಅಕ್ಷರಗಳಿಗೆ ಏರಿರುವದು ಕಂಡು ಬರುವದು. ಒಂದು ಅಕ್ಷರ ಹೆಚ್ಚು ಅಥವಾ ಕಡಿಮೆ (ಏಕವರ್ಣಹೀನಾಧಿಕದಿಂ) ಎಂದು ಅರ್ಧಸಮವೃತ್ತದ ಲಕ್ಷಣವನ್ನು ವಿವರಿಸಿದ್ದರೂ, ಅವನು ಲಕ್ಷಿಸಿದ ರವಿಪ್ರಭೆಯಲ್ಲಿ ೧೯/೨೦,೧೮/೨೦ ಅಕ್ಷರಗಳಿವೆ.[2] ಬರಬರುತ್ತ ಈ ವ್ಯತ್ಯಾಸ ಹೆಚ್ಚಾಗಿ ಸಂಸ್ಕೃತ ದಲ್ಲಿ ೩/೨೪, ೫/೨೪ ಅಕ್ಷರಗಳ ಅರ್ಧ ಸಮವೃತ್ತಗಳು ದೊರೆಯುತ್ತವೆ.[3] ಅರ್ಧ ಸಮ ವೃತ್ತಗಳು ಸ್ವಜಾತೀಯ ವಿಜಾತೀಯ ವೃತ್ತ ಪಾದಗಳಿಂದ ಕೂಡಿರುವುದರಿಂದ ಇವುಗಳಲ್ಲಿ ಲಕ್ಷಾವಧಿ ಭೇದಗಳಾಗುತ್ತವೆ. ಇಂತಾದ ಲಕ್ಷಾವಧಿ ಭೇದಗಳಲ್ಲಿ ಗತಿ ಸಂಪನ್ನವಿರುವ ಕೆಲವು ಪ್ರಯೋಗದಲ್ಲಿ ಬಂದಿವೆ. ಸಂಸ್ಕೃತದಲ್ಲಿ ಪ್ರತ್ಯೇಕ ಹೆಸರಿನಿಂದ ನಿರ್ದೇಶಿಸಲಾದ ಇಂಥ ವೃತ್ತಗಳ ಸಂಖ್ಯೆ ೫೦ ಮಾತ್ರ.[4] ಇವುಗಳಲ್ಲಿ ಕೆಲವು (ಪುಷ್ಪಿ ತಾಗ್ರಾ, ವಿಯೋಗಿನಿ ಇತ್ಯಾದಿ) ಕನ್ನಡದಲ್ಲಿ ಪ್ರಯೋಗಿಸಲ್ಪಟ್ಟಿವೆ. ಇಮ್ಮಡಿ ನಾಗ ವರ್ಮನ ಶಬ್ದ ಸ್ಮೃತಿಯಲ್ಲಿಯ ಇಂಥದೊಂದು ವೃತ್ತ ಕೈಪಿಡಿಯಲ್ಲಿ ನಾಗವೆಂಬ ಹೆಸರಿನಿಂದ ಉದ್ಧೃತವಾಗಿದೆ.[5] ಇದು ಸಂಸ್ಕೃತದಲ್ಲಿಲ್ಲ. ನಾಗವೆಂದು ಇದನ್ನು ಇಮ್ಮಡಿ

---

1. ಜಯದಾಮನ್, ಮುನ್ನುಡಿ, ಪು. ೨೩
2. ಕಿಟೆಲ್-ನಾ. ಛಂ. ಪದ್ಯ ೨೩೮-೨೩೯
3. ಹೇ. ಛಂ. ೩/೨೪, ೨೭
4. ಹೇಮ. ಛಂದೊ. ಅನುಬಂಧ ಪು. ೩೧೦
5. ಕೈಪಿಡಿ, ಪು. ೮೯

ನಾಗವರ್ಮನೇ ಹೆಸರಿಸಿರುವನೊ ಅನ್ಯರೊ ಎಂಬುದು ಸ್ಪಷ್ಟವಿಲ್ಲ. ಯಾರೆ ಇರಲಿ ಕನ್ನಡ ಛಂದಃಶಾಸ್ತ್ರದಲ್ಲಿ ಈ ಹೆಸರಿನೊಂದಿಗೆ ಇದಕ್ಕೊಂದು ಸ್ಥಾನ ದೊರೆತಿದೆ. ರನ್ನನಾದರೂ ತನ್ನ 'ಇರಲೀ ಮಾದ್ರಿತನೂಜಂ' ಅರ್ಧ ಸಮವೃತ್ತಕೆ ಒಂದು ಹೆಸರು ಕೊಟ್ಟಿದ್ದರೆ, ಸಂಸ್ಕೃತ ಛಂದೋಗ್ರಂಥಗಳಲ್ಲಿ ಇಲ್ಲದಿದ್ದರೂ ಆತನ ನಂತರ ಕನ್ನಡದಲ್ಲಿ ಹುಟ್ಟಿದ ಛಂದೋಗ್ರಂಥಗಳಲ್ಲಿ ಅದಕ್ಕೊಂದು ಸ್ಥಾನ ದೊರೆಯುತ್ತಿತ್ತು. ಅವನು ಹೀಗೆ ಮಾಡಿಲ್ಲವಾದ್ದರಿಂದ ಭಿನ್ನ-ವೃತ್ತ ಪಾದಗಳ ಸಂಕರದಿಂದ ಹುಟ್ಟುವ ಲಕ್ಷಾವಧಿ ಅರ್ಧಸಮವೃತ್ತಗಳಲ್ಲಿ ಇದೂ ಒಂದು ಎಂದು ಭಾವಿಸಿ ಕೈಬಿಡಬೇಕಾಗಿದೆ, ಇಷ್ಟೆ.

ಮೂವತ್ತಾರರ ಒಗಟ

(ರನ್ನನ ಒಂದು ಪದ್ಯವಿಶೇಷ)

ಗದಾಯುದ್ಧದ ಪ್ರಾರಂಭದಲ್ಲಿ ಕವಿಚಕ್ರವರ್ತಿ ರನ್ನ ವಿಷ್ಣು ಬ್ರಹ್ಮ ರುದ್ರಾದಿ ದೇವತೆಗಳನ್ನು ಸ್ತುತಿಸಿ ನಂತರ

ಪದಿನಾಱಿಲ್ಲ ವಲಂಕ್ರಿಯಾರಚನೆ ಮೂವತ್ತಾಱು ನೇರ್ಪಟ್ಟುವೊಂ-
ದಿದ ಶೃಂಗಾರಮುದಲ್ಲವೊಂದೆ ರಸವೊಂಬತ್ತೆಯ್ದೊಡಂಬಟ್ಟು ವೆಂ-।
ಬುದ ನೆಂಬೆನ್ನಮಂಗನೋಚಿತ ರಸಾಲಂಕಾರಮಂತಾಳ್ದದೊ
ಪ್ಪಿದ ವಾಕ್ಸುಂದರಿ ಬಂದು ಸನ್ನಿಹಿತೆಯಕ್ಕೆನ್ನೀ ಮುಖಾಂಭೋಜದೊಳ್ ॥-೧-೬

ಈ ಪದ್ಯದಲ್ಲಿ ಸ್ತ್ರೀಯರು ರಸಾಲಂಕಾರ ಪ್ರಿಯರು. ಸರಸ್ವತಿಯಾದರೂ ಅಷ್ಟೇ. ಸಾಮಾನ್ಯ ಅಂಗನೋಚಿತ ಅಲಂಕಾರಗಳು ೧೬, ರಸ ಒಂದು (ಶೃಂಗಾರ) ಇದ್ದರೆ ಸರಸ್ವತಿಗೆ ಪ್ರಿಯವಿರುವ ಅಲಂಕಾರಗಳು ೩೬, ರಸಗಳು-೯. ಇಷ್ಟೊಂದು ಅಲಂಕಾರ ರಸಗಳಿಂದ ಭೂಷಿತಳಾದ ವಾಕ್ಸುಂದರಿಯು ತನ್ನ ಮುಖಾರವಿಂದದಲ್ಲಿ ನೆಲೆಸಿ ಅನುಗ್ರಹಿಸಲಿ, ಎಂದು ಕೋರಿರುವನು.

ಈ ಪದ್ಯಕ್ಕಿರುವ ವ್ಯಾಖ್ಯೆಯಲ್ಲಿ-ರಸಗಳು ೯-ಶೃಂಗಾರ, ವೀರ, ಕರುಣ, ಅದ್ಭುತ ಹಾಸ್ಯ, ಭಯಾನಕ, ಬೀಭತ್ಸ, ರೌದ್ರ, ಶಾಂತ. ಕಾವ್ಯದೇವಿಗೆ ಇವಿಷ್ಟೂ ಇಷ್ಟ. ಆದರೆ ಸ್ತ್ರೀಸಾಮಾನ್ಯಕ್ಕೆ ಶೃಂಗಾರದಲ್ಲಿಯೇ ಆಸಕ್ತಿ. ಅಂಗನೋಚಿತ ಅಲಂಕಾರಗಳು ೧೬,-ಸ್ನಾನ, ವಿಲೇಪನ, ವಸ್ತ್ರ, ಶಿರೋಭೂಷಣ, ತಿಲಕ, ಕಜ್ಜಲ (ಕಾಡಿಗೆ), ನಾಸಾಭೂಷಣ, ಮಕರಪತ್ರ (ಕೆನ್ನೆಗಳ ಮೇಲೆ ಚಿತ್ರಿಸಿಕೊಳ್ಳುವ ವರ್ಣ ವಿನ್ಯಾಸ), ಕುಂಡಲ, ಹಾರ, ಕೇಯೂರ (ಭುಜಗಳ ತೊಡಿಗೆ), ಮಣಿಭೂಷಣ, ಅಂಗುಲೀಯಕ, ಕಾಂಚಿದಾಮ (ಒಡ್ಯಾಣ), ನೂಪುರ (ಕಾಲುಂಗುರ), ಅಲಕ್ತಕ (ಅರಗಿನರಸದ ಲೇಪನ), ಎಂದು ವಿವರಿಸಿದೆ. ಸರಸ್ವತಿಯ ೩೬ ಅಲಂಕಾರಗಳ ಸಂಬಂಧದಲ್ಲಿ, ರನ್ನನ ಕಾಲಕ್ಕೆ ಸುಪರಿಚಿತವಿದ್ದ ಭಾಮಹಾದಿ ಲಾಕ್ಷಣಿಕರ ಗ್ರಂಥಗಳಲ್ಲಿ ೪೦ಕ್ಕಿಂತ ಹೆಚ್ಚು ಅಲಂಕಾರಗಳು ಉಕ್ತವಾಗಿರುವದರಿಂದ ಕಾವ್ಯದೇವಿಯ ಅಲಂಕಾರಗಳು ೩೬ ಎಂಬ ರನ್ನನ ಮಾತು ಭರತನ ನಾಟ್ಯಶಾಸ್ತ್ರದಲ್ಲಿ ಹೇಳಿದ ೩೬ ಕಾವ್ಯ ಲಕ್ಷಣಗಳು ಇರಬಹುದೇ, ಎಂಬ ಪ್ರಶ್ನೆಯೊಂದಿಗೆ ವಿಷಯವನ್ನು ಮುಗಿಸಲಾಗಿದೆ.

ಮೂವತ್ತಾರರ ಒಗಟವೆಂಬುದು ಇದೇ.[1] ಗದಾಯುದ್ಧದ ಪ್ರಥಮ ಸಂಸ್ಕರಣದಲ್ಲಿರುವ ಈ ಪದ್ಯದಲ್ಲಿ 'ಪದಿನಾಱುಂ' ಬದಲು 'ಪದಿನೆಂಟುಂ' ಪಾಠವಿದೆ. ಅತ

---

1. ನಾಡಕವಿ ಬೇಂದ್ರೆ ಇತ್ತ ಹೆಸರು. ಅವಗಾಹನೆಗಾಗಿ ಸಾದರಪಡಿಸಿದ ಒಂದು ಪ್ರಬಂಧದ ಹಸ್ತಪ್ರತಿಯಲ್ಲಿ ಉಲ್ಲೇಖಿಸಿರುವರು.

ಏವ ಈ ಒಗಟದ ಜೊತೆಗೆ ಸ್ತ್ರೀ ಸಾಮಾನ್ಯ ಅಲಂಕಾರಗಳು ಹದಿನಾರೊ ಹದಿನೆಂಟೊ ಎಂಬ ಇನ್ನೊಂದು ಒಗಟ ಹುಟ್ಟಿಕೊಂಡಿದೆ. ರನ್ನನ ಅಜಿತ ಪುರಾಣದಲ್ಲಿ ಇದೇ ಪದ್ಯ ಪುನರಾವೃತ್ತವಾಗಿದ್ದು ಅಲ್ಲಿ 'ಪದಿನಾಱುಂ' ಪಾಠವಿದೆ. ಗದಾಯುದ್ಧದ ತೃತೀಯ ಸಂಸ್ಕರಣದಲ್ಲಾದ ಪಾಠಪರಿವರ್ತನೆಗೆ ಸಂಪಾದಕೀಯ ವಿವರಣೆ ಇಲ್ಲ. ಸಂಪಾದನೆಗಾಗಿ ಬಳಸಿದ ನಾಲ್ಕು ಮಾತೃಕೆಗಳಲ್ಲಿ ಎರಡು ಪ್ರಥಮ ಸಂಸ್ಕರಣಕ್ಕೆ ಬಳಸಿದ ಪ್ರತಿಗಳಿವೆ. ಮೂರನೆಯದು ತ್ರುಟಿತ, ಅಸಮಗ್ರ, ಅಪ್ರಯೋಜಕ ಪ್ರತಿ ಎನ್ನಲಾಗಿದೆ. ನಾಲ್ಕನೆಯದು ಮದ್ರಾಸ ಪ್ರಾಚ್ಯಕೋಶಾಗಾರದಲ್ಲಿಯ ಪ್ರತಿ. ಇದರಲ್ಲಿ ಈ ಪದ್ಯವಿರುವ ಮೊದಲನೆಯ ಆಶ್ವಾಸವಿಲ್ಲ.[1] ಅಂತು ಗದಾಯುದ್ಧದಮಟ್ಟಿಗೆ ಈ ಪಾಠ 'ಪದಿನೆಂಟುಂ' ಎಂಬುದು ನಿಸ್ಸಂದಿಗ್ಧ. ಆದರೂ ರಸಗಳು ಒಂಬತ್ತು ಎನ್ನುವಲ್ಲಿ ಪಾಠಕ್ಲೇಶವಿರುವದನ್ನೂ ಅಜಿತಪುರಾಣದಲ್ಲಿ ಈ ಪದ್ಯ ಪೂರ್ಣರೂಪದಲ್ಲಿರುವುದನ್ನೂ ಗಮನಿಸಿ, ಅಲ್ಲಿ 'ಪದಿನಾಱುಂ' ಪಾಠವಿದ್ದರೂ ಅದೇ ಸಾಧುವೆಂದು ಬಗೆದು ಅದನ್ನು ಗದಾಯುದ್ಧದ ತೃತೀಯ ಸಂಸ್ಕರಣದಲ್ಲಿ ಸೇರಿಸಿದಂತಿದೆ. ತೀ. ನಂ. ಶ್ರೀ. ಸಂಪಾದಿತ ಗದಾಯುದ್ಧ ಸಂಗ್ರಹದಲ್ಲಿ ಈ ಪಾಠ ಅಜಿತ ಪುರಾಣದಲ್ಲಿಯದು ಎಂಬುದನ್ನು ಸ್ಪಷ್ಟೀಕರಿಸಿ ಮೇಲಿನಂತೆ ಪದ್ಯದ ಅರ್ಥವನ್ನು ವಿವರಿಸಲಾಗಿದೆ.[2]

ಆದರೆ ಈ ಪದ್ಯದಲ್ಲಿ ಬಳಸಿದ 'ಅಂಗನೋಚಿತ' ಪದ ಸಹೇತುಕವಿದ್ದು 'ಪದಿನೆಂಟುಂ' ಪಾಠವೇ ಸರಿಯಾದ ಪಾಠವೆಂದು ಹೇಳಬೇಕಾಗುವುದು.[3] 'ಪದಿನಾಱುಂ' ಪಾಠಕ್ಕೆ ಸರಿಹೋಗುವ ಉಪರೋಕ್ತ ಸ್ನಾನ, ವಿಲೇಪನಾದಿ ೧೬ ಅಲಂಕಾರಗಳ ವಿವರಣೆಗೆ ಆಧಾರವನ್ನು ಸೂಚಿಸಿಲ್ಲವಾದ್ದರಿಂದ ಅದರ ವಿಶ್ವಾಸಾರ್ಹತೆ ಸಂದಿಗ್ಧವಾಗಿದೆ. ಭರತೋಕ್ತ ಅಂಗನೋಚಿತ ಅಲಂಕಾರಗಳಿಗೆ ಇಂತಿಷ್ಟೇ ಎಂಬ ಮಿತಿಯಿಲ್ಲ. 'ಆಕೇಶ-ಆನಖಾಂತ' ಎಂದು ಹೇಳಿ ನಾನಾ ಬಗೆಯ ಅಲಂಕಾರಗಳನ್ನು ವಿವರಿಸಿರವನು ಆತ. ಅವಯವಗಳ ನೇರೆಗೆ ಅಂದರೆ ಕಂಠ, ಕಿವಿ, ಮೂಗು, ಹೀಗೆ ವಿಂಗಡಿಸಿದರೂ ಅವುಗಳ ಸಂಖ್ಯೆ ೧೬ ಮಿಕ್ಕುತ್ತದೆ. ಅವುಗಳಲ್ಲಿ ಸ್ನಾನ, ವಸ್ತ್ರ, ಶಿರೋಭೂಷಣ (ಮುಕುಟ?) ಗಳಿಲ್ಲ. ಇಷ್ಟೇ ಅಲ್ಲ, ಮನುಷ್ಯರಿರಲಿ ದೇವತೆಗಳಿರಲಿ ಸ್ತ್ರೀಯರಿಗೆ ಆತ ಮುಕುಟವನ್ನು ಹೇಳಿಲ್ಲ. ಬಹುಶಃ ಮುಕುಟದಿಂದ ನೆತ್ತಿಯ ಮೇಲಿನ ಚೂಡಾಮಣಿ ಮೊದಲಾದ ಅಲಂಕಾರಗಳು ಮುಚ್ಚಿಹೋಗುವದರಿಂದ ಆತ ಅದನ್ನು ಬಿಟ್ಟಿರುವಂತೆ

1. ಗ. ಯು. (3), ಮುನ್ನುಡಿ, ಪು. ೨೧; ಗ. ಯು. (ಕೃ), ಮುನ್ನುಡಿ, ಪು. ೨.

2. ಗ. ಯು. ಸಂ. ಪು. ೧, ೯ಳ ಟಿಪ್ಪಣಿ.

3. ರಚನಾಕ್ರಮದಲ್ಲಿ ಗದಾಯುದ್ಧ ಮೊದಲೊ ಅಜಿತಪುರಾಣ ಮೊದಲೊ ಎಂಬ ವಾದವಿದೆ. ಗದಾಯುದ್ಧ ಅ.ಪು.ದ ನಂತರದ್ದೆಂದು ಇಟ್ಟುಕೊಂಡರೂ ಇದರಿಂದ ಗ. ಯು. ಮಾತೃಕೆಗಳಲ್ಲಿಯ 'ಪದಿನೆಂಟುಂ' ಪಾಠವನ್ನು ತಳ್ಳಿಹಾಕುವದು ಸುಲಭವಿಲ್ಲ. ಹೆಚ್ಚಿನ ಚರ್ಚೆ ಇಲ್ಲಿ ಅನಗತ್ಯ.

ತೋರುತ್ತದೆ.[1] ದೇವದೇವತೆಗಳನ್ನು ಷೋಡಶೋಪಚಾರಗಳಿಂದ ಪೂಜಿಸುವುದುಂಟು. ಈ ಉಪಚಾರಗಳಲ್ಲಿ 'ಸ್ನಾನಂ ವಸನಾಭರಣಾನಿಚ' ಎಂದು ಸ್ನಾನ, ವಸ್ತ್ರ, ಅಲಂಕಾರಗಳು ಬಿಡಿಬಿಡಿಯಾಗಿ ಬಂದಿವೆ.[2] ಒಂದೊಮ್ಮೆ ವಸ್ತ್ರಗಳನ್ನು ಅಲಂಕಾರಗಳಲ್ಲಿ ಸೇರಿಸಿಕೊಂಡರೂ ಸ್ನಾನ ಅಲಂಕಾರ ಹೇಗಾಗಬಲ್ಲದು? ಆಗಬಹುದೆಂದು ಬಗೆದರೂ ಅದನ್ನು ಅಂಗನೋಚಿತ ಸ್ನಾನ ಪುರುಷೋಚಿತ ಸ್ನಾನವೆಂದು ವಿಗಂಡಿಸುವದೆಂತು? ವಿಲೇಪನವಾದರೂ ಇಂಥದೇ.

ಕಾವ್ಯದೇವಿಯ ಅಲಂಕಾರಗಳು ೩೬ ಎಂಬ ರನ್ನನ ಮಾತು ಭರತೋಕ್ತ ೩೬ ಕಾವ್ಯಲಕ್ಷಣಗಳಿಗೆ ಅನ್ವಯಿಸಬಹುದೇ ಎಂದು ಪ್ರಶ್ನಿಸುವಲ್ಲಿ ತೀ. ನಂ. ಶ್ರೀ. ಈ ಒಗಟವನ್ನು ಬಿಡಿಸುವ ದಿಸೆಯನ್ನು ತೋರಿಸಿದಂತಾಗಿದೆ. ಅಲಂಕಾರಗಳಲ್ಲಿ ಎರಡು ಬಗೆಗಳಿವೆ-ಪ್ರಥಕ್‌ಸಿದ್ಧ ಮತ್ತು ಅಪ್ರಥಕ್‌ಸಿದ್ಧ. ಎರಡೂ ಶರೀರಕ್ಕೆ ಸಂಬಂಧಿಸಿವೆ. ಇಷ್ಟಾನುಸಾರ ಧರಿಸಬಹುದಾದ ಹಾರಕೇಯೂರಾದಿಗಳು ಪ್ರಥಕ್‌ಸಿದ್ಧ ಅಲಂಕಾರಗಳು. ಕಾವ್ಯದಲ್ಲಿ ಉಪಮಾರೂಪಕಾದಿ ಅಲಂಕಾರಗಳು ಈ ಬಗೆಯವೆಂದು ಗಣಿಸಲ್ಪಟ್ಟವೆ. ಶರೀರದಿಂದ ಬೇರ್ಪಡಿಸಲಾಗದ ಅಂದರೆ ಜನ್ಮ ಇಲ್ಲವೆ ಸ್ವಭಾವಿಸಿದ್ಧವಿರುವ ಹರವಾದ ಹಣೆ, ವಿಶಾಲವಾದ ಕಣ್ಣುಗಳು, ಅಂಗಾಂಗಳ ಆಕರ್ಷಕ ವಿನ್ಯಾಸ, ಮೊದಲಾದವು ಅಪ್ರಥಕ್‌ಸಿದ್ಧ ಅಲಂಕಾರಗಳು. ಭರತನ ೩೬ ಕಾವ್ಯಲಕ್ಷಣಗಳು ಇಂಥವೆಂದು ಬಗೆಯಲ್ಪಟ್ಟವೆ. ಇವುಗಳಿಗೆ ಹೊಂದಿಕೊಳ್ಳಬೇಕಾದರೆ ರನ್ನನ ಸ್ತ್ರೀ ಸಾಮಾನ್ಯ (ಅಂಗನೋಚಿತ) ಅಲಂಕಾರಗಳು ಇಂಥವೇ ಇರಬೇಕಾದುದು ಕ್ರಮ ಪ್ರಾಪ್ತವಿದೆ.

ಸತ್ವ-ಜಗಳೆಂದು ಸ್ತ್ರೀಯರಲ್ಲಿ ತಾರುಣ್ಯದೊಂದಿಗೆ ಕಂಡುಬರುವ ೨೦ ಅಲಂಕಾರಗಳನ್ನು ವಿವರಿಸಿ, ಇವು ಭಾವರಸಾಶ್ರಯ, ಮಾತು ಮತ್ತು ಅಂಗಾಂಗಳಲ್ಲಾಗುವ ಪ್ರಕ್ರಿಯೆಯಿಂದ ಅಭಿವ್ಯಕ್ತಿ ಪಡೆಯುವಂಥವು, ಎಂದಿರುವನು ಭರತ. ಇವುಗಳಲ್ಲಿ ಮೂರು ಶರೀರಜ ಅಂದರೆ ಶರೀರ ಧರ್ಮದಿಂದ ಹುಟ್ಟಿರುವಂಥವು; ಏಳು ಅಯತ್ನಜ ಅಂದರೆ ಪ್ರಯತ್ನವಿಲ್ಲದೆ ತಾವಾಗಿಯೇ ಬರುವಂಥವು; ೧೦ ಸ್ವಭಾವಜ ಅಂದರೆ ಸತ್ವಜಗಳೊಂದಿಗೆ ಬೆಳೆದು ಬರುವಂಥವು. ಬೇರೆ ಬೇರೆ ಗ್ರಂಥಗಳಲ್ಲಿ ಇವುಗಳ ಸಂಖ್ಯೆ ಬೇರೆ ಬೇರೆ ಇದೆ. ಕೆಲವರು ಇವುಗಳಲ್ಲಿ ಕೆಲವನ್ನು ಬಿಟ್ಟು ಅಥವಾ ಇವುಗಳೊಡನೆ ಬೇರೆ ಕೆಲವನ್ನು ಸೇರಿಸಿರುವರು. ಇದೆಲ್ಲ ರನ್ನನ ನಂತರದ ಮಾರ್ಪಾಟು. ದಶರೂಪಕದ ಧನಂಜಯ ಮಾತ್ರ ಭರತನನ್ನು ಅನುಸರಿಸಿರುವನು.[3] ಈತ ರನ್ನನ ಸಮಕಾಲೀನ. ರನ್ನನ ಆಶ್ರಯದಾತ ತೈಲಪನಿಂದ ಸೋಲಿಸಲ್ಪಟ್ಟ ಮುಂಜನ ಆಶ್ರಿತ.

---

1. ನಾ. ಶಾ. ಅ. ೨೧
2. ಆಪ್ಟೆಕೋಶ
3. ನಾ. ಶಾ. ಅ. ೨೨-೪ ಮುಂದೆ; ದಶರೂಪಕ, ೨-೫೭ ಮುಂದೆ.

ಇವು ಭರತ-ಧನಂಜಯೋಕ್ತ ಸ್ತ್ರೀಸಹಜ ಅಲಂಕಾರಗಳು-

ಶರೀರಜ (೩)- ಭಾವ, ಹಾವ, ಹೇಲಾ. ಶೃಂಗಾರಕ್ಕೆ ಯಾವುದೊಂದು ನಿಮಿತ್ತದಿಂದ ಮೊದಲು ಮಾಡುವುದು ಭಾವ. ಆ ಭಾವದಿಂದ ಅಂಗಾಂಗಗಳಲ್ಲಿ ಉಂಟಾಗುವ ಪ್ರಕ್ರಿಯೆ ಹಾವ. ಸುವ್ಯಕ್ತ ಹಾವ ಹೇಲಾ.

ಆಯತ್ನಜ (೭)-ಶೋಭಾ, ಕಾಂತಿ, ದೀಪ್ತಿ, ಮಾಧುರ್ಯ, ಪ್ರಗಲ್ಭತಾ, ಔದಾರ್ಯ, ಧೈರ್ಯ.

-ತಾರುಣ್ಯದೊಂದಿಗೆ ಅರಳುವ ಅಂಗ ಸೌಂದರ್ಯ ಶೋಭಾ. ಕಾಂತಿ-ದೀಪ್ತಿಗಳು ಶೋಭೆಯ ಮುಂದಣ ಅವಸ್ಥೆಗಳು. ಶಾಂತ ಮತ್ತು ರಮಣೀಯ ವಾಚಿಕ-ಆಂಗಿಕ ಅಭಿವ್ಯಕ್ತಿ ಮಾಧುರ್ಯ. ಚಿತ್ತಕ್ಷೋಭ ಇಲ್ಲದಿರುವದು ಪ್ರಗಲ್ಭತಾ. ಯಾವಾಗಲೂ ಪ್ರಸನ್ನಳಾಗಿರುವದು ಔದಾರ್ಯ. ಸ್ಥಿರ ಮನೋವೃತ್ತಿ ಧೈರ್ಯ.

ಸ್ವಭಾವಜ (೧೦)-ಲೀಲಾ, ವಿಲಾಸ, ವಿಚ್ಛಿತ್ತಿ, ವಿಭ್ರಮ, ಕಿಲಕಿಂಚಿತ್ ಮೋಟ್ಟಾಯಿತ, ಕುಟ್ಟಮಿತ, ಬಿಬ್ಬೋಕ, ಲಲಿತ, ವಿಹೃತ.

ಅಂಗಾಂಗಳ ಮಧುರ ಚೇಷ್ಟೆಯಿಂದ ಪ್ರಿಯಕರನನ್ನು ಅನುಕರಿಸುವದು ಲೀಲಾ. ಸಂತೋಷಾತಿಶಯದಿಂದ ಮಾತು ಮತ್ತು ಕ್ರಿಯೆಗಳಲ್ಲಿ ಕಂಡುಬರುವ ಪ್ರಕ್ರಿಯೆ ವಿಲಾಸ. ಕಡಿಮೆ ವಸ್ತ್ರಾಲಂಕಾರಗಳಿದ್ದರೂ ಅಷ್ಟರಿಂದಲೇ ಹೆಚ್ಚುವ ಕಾಂತಿ ವಿಚ್ಛಿತ್ತಿ. ಆತುರದಲ್ಲಾಗುವ ಮೈಮೇಲಿನ ಉಡಿಗೆ ತೊಡಿಗೆಗಳ ಸ್ಥಾನಾಂತರ ವಿಭ್ರಮ. ಕ್ರೋಧ, ಹರ್ಷ, ಕಣ್ಣೀರು ಇವುಗಳಿಂದ ಕೂಡಿದ ಮನಸ್ಥಿತಿಯ ಅಭಿವ್ಯಕ್ತಿ ಕಿಲಕಿಂಚಿತ್. ಪ್ರಿಯತಮನ ವೃತ್ತಾಂತದಿಂದ ವಿದಿತವಾಗುವ ಆತನ ಭಾವಗಳನ್ನು ತನ್ನವಾಗಿಸಿ ಕೊಳ್ಳುವದು ಮೋಟ್ಟಾಯಿತ. ಪ್ರಿಯಕರನ ಸ್ಪರ್ಶದಿಂದ ಒಳಗೆ ಆನಂದ ವಿದ್ದರೂ ಕೋಪವನ್ನು ತೋರಿಸುವದು ಕುಟ್ಟಮಿತ. ಗರ್ವ ಅಭಿಮಾನಗಳಿಂದ ಇಷ್ಟ ವಿಷಯಗಳಲ್ಲಿ ಕೂಡ ಅನಾಸ್ಥೆಯನ್ನು ತೋರಿಸುವದು ಬಿಬ್ಬೋಕ. ಅಂಗಾಂಗಗಳ ಸುಕುಮಾರ ಮತ್ತು ಮೃದು ವಿನ್ಯಾಸ ಲಲಿತ. ತಕ್ಕ ಸಮಯವಿದ್ದರೂ ಲಜ್ಜೆಯಿಂದ ಹೇಳಬೇಕಾದುದನ್ನು ಹೇಳದಿರುವದು ವಿಹೃತ.

ಈ ೨೦ ಅಲಂಕಾರಗಳಲ್ಲಿ ಎರಡು, ಕಾಂತಿ ಮತ್ತು ದೀಪ್ತಿ, ಶೋಭೆಯ ಮುಂದಣ ಅವಸ್ಥೆಗಳೆಂಬುದನ್ನು ಗಮನಿಸಿದಾಗ ರನ್ನ ಇವೆರಡನ್ನು ಬಿಟ್ಟು ಸ್ತ್ರೀ ಸಾಮಾನ್ಯ (ಅಂಗನೋಚಿತ) ಅಲಂಕಾಗಳು ೧೮ ಮತ್ತು ಇವೆಲ್ಲ ಶೃಂಗಾರಕ್ಕೆ ಸಂಬಂಧಿ ಸಿರುವದರಿಂದ ಸ್ತ್ರೀಸಹಜ ರಸ ಒಂದು-ಶೃಂಗಾರ, ಎಂದಿರುವನೆಂಬಲ್ಲಿ ಸಂದೇಹ ಉಳಿಯದು. ಇವಾದರೂ ಹರವಾದ ಹಣೆ, ವಿಶಾಲವಾದ ಕಣ್ಣು ಮೊದಲಾದ ಶಾರೀರಕ ಲಕ್ಷಣಗಳಂತೆ-ಅಪ್ರಥಕ್ ಸಿದ್ಧ ಅಲಂಕಾರಗಳು ಮತ್ತು ಹಾರಕೇಯೂರಾದಿ ಪ್ರಥಕ್ ಸಿದ್ಧ ಅಲಂಕಾರಗಳಿಂದ ಭಿನ್ನ ಎಂಬುದು ಸ್ಪಷ್ಟವಾಗದಿರದು.

೩೬ ಕಾವ್ಯಲಕ್ಷಣಗಳು—ವಾಚಿಕಾಭಿನಯದ ಅಂಗವಾಗಿ ಛಂದಸ್ಸು, ಅಲಂಕಾರ, ಮೊದಲಾದ ಕಾವ್ಯಾಂಗಗಳೊಂದಿಗೆ ಭರತ—' ಕಾವ್ಯಬಂಧಾಸ್ತು

ಕರ್ತವ್ಯಾಃ ಷಟ್‌ತ್ರಿಂಶಲ್ಲಕ್ಷಣಾನ್ವಿತಾಃ' ಎಂದು ೩೬ ಕಾವ್ಯಲಕ್ಷಣಗಳನ್ನು ವಿವರಿಸಿರುವನು.[1] ಛಂದಸ್ಸು ಅಲಂಕಾರಗಳಿಗಿರುವಂತೆ ಇಲ್ಲಿಯ ಲಕ್ಷಣಗಳಿಗೆ ಲಕ್ಷ್ಯಗಳಿಲ್ಲ. ಕಾವ್ಯದಲ್ಲಿ ಇವುಗಳ ಸ್ಥಾನ ಮತ್ತು ಉಪಮಾರೂಪಕಾದಿ ಪ್ರಸಿದ್ಧ ಅಲಂಕಾರಗಳಿಗೂ ಇವಕ್ಕೂ ಇರುವ ವ್ಯತ್ಯಾಸವನ್ನು ಸೂಚಿಸಿಲ್ಲ. ನಂತರದ ಲಾಕ್ಷಣಿಕರಾದರೂ ಇವುಗಳನ್ನು ಕುರಿತು ಹೆಚ್ಚು ಚರ್ಚಿಸಿಲ್ಲ. ಇವುಗಳನ್ನು ಎತ್ತಿಕೊಂಡು ಚರ್ಚಿಸಿದವರಲ್ಲಿ ನಾಟ್ಯ ಶಾಸ್ತ್ರಕ್ಕೆ ವ್ಯಾಖ್ಯೆಯನ್ನು ಬರೆದ ಅಭಿನವಗುಪ್ತನೇ ಮೊದಲಿಗ. ಈತ ರನ್ನನ ಸಮಕಾಲೀನ. ಕಾಶ್ಮೀರಕ. ಗುಣ, ಅಲಂಕಾರ, ರೀತಿ, ಮೊದಲಾದವು ಕಾವ್ಯದ ಪ್ರಸಿದ್ಧ ಅಂಗಗಳು; ಲಕ್ಷಣಗಳು ಅಪ್ರಸಿದ್ಧ (ಲಕ್ಷಣಾನಿ ತು ನ ಪ್ರಸಿದ್ಧಾನಿ), ಎಂಬ ಪೀಠಿಕೆಯೊಂದಿಗೆ ತನ್ನ ವಿವೇಚನೆಯನ್ನು ಪ್ರಾರಂಭಿಸಿರುವನು. ಇವುಗಳಲ್ಲಿ ಅನೇಕ ಲಕ್ಷಣಗಳು ಉಪಮಾದಿ ಅಲಂಕಾರಗಳಂತೆ ತೋರುತ್ತವೆ. ಕೆಲವು ಹಿಂದಿನಿಂದ ತಮ್ಮ ಮೂಲ ಅಂದರೆ ಭರತೋಕ್ತ ಹೆಸರಿನೊಂದಿಗೇನೆ ಅಲಂಕಾರಗಳಲ್ಲಿ ಮಾರ್ಪಾಟಾಗಿವೆ (ಉದಾ. ಸಂಶಯ, ದೃಷ್ಟಾಂತ, ನಿದರ್ಶನ, ನಿರುಕ್ತ, ಲೇಶ, ಹೇತು, ಇತ್ಯಾದಿ).

ಸಾಲದ್ದಕ್ಕೆ ಇವುಗಳ ಎರಡು ಪಾಠಗಳಿವೆ. ಎರಡರಲ್ಲೂ ೩೬ ಲಕ್ಷಣಗಳಿದ್ದು ಒಂದು ಉಪಜಾತಿ ವೃತ್ತದಲ್ಲಿ ಇನ್ನೊಂದು ಅನುಷ್ಟುಪ್ ಶ್ಲೋಕಗಳಲ್ಲಿದೆ. ಎರಡರಲ್ಲಿ ಯಾವುದು ಮೂಲ ಯಾವುದು ಪ್ರಕ್ಷಿಪ್ತ ಎಂಬುದು ಗೊತ್ತಿಲ್ಲ. ಲಾಕ್ಷಣಿಕರಲ್ಲಿ ಕೆಲವರು ಉಪಜಾತಿ ಪಾಠವನ್ನು ಅನುಸರಿಸಿದ್ದರೆ ಕೆಲವರು ಅನುಷ್ಟುಪ್ ಪಾಠವನ್ನು ಅನುಸರಿಸಿರುವರು. ಬೇರೆ ಕೆಲವರು ಎರಡರಲ್ಲಿಯ ಕೆಲವನ್ನು ಆಯ್ದುಕೊಂಡು ಹೊಸದಾಗಿ ಕೆಲವನ್ನು ಸೇರಿಸಿ ತಮ್ಮದೇ ಆದ ಒಂದು ಪಟ್ಟಿಯನ್ನು ತಯಾರಿಸಿರುವರು. ಅವುಗಳ ಸಂಖ್ಯೆಯಲ್ಲಿಯೂ ವ್ಯತ್ಯಾಸವಿದೆ. ಭರತೋಕ್ತ ಲಕ್ಷಣಗಳ ಅರ್ಥಗಾರಿಕೆಯಲ್ಲಿಯೂ ಭಿನ್ನಾಭಿಪ್ರಾಯಗಳಾಗಿವೆ. ಕೆಲವರು ಇವನ್ನು ಕಾವ್ಯನಾಟಕ ಎರಡಕ್ಕೂ ಅನ್ವಯಿಸಿರುವರು. ಇತರರು ನಾಟಕಾಲಂಕಾರಗಳೆಂದು ಕೇವಲ ನಾಟಕಗಳಿಗೆ ಅನ್ವಯಿಸಿರುವರು. ಕೆಲವರು ಇವಾದರೂ ಉಪಮಾದಿ ಅಲಂಕಾರಗಳ ಜಾತಿಗೆ ಸೇರುವವೆಂದು ಭಾವಿಸಿದ್ದರೆ ಬೇರೆ ಕೆಲವರು ಇವುಗಳನ್ನು ನಾಟಕಗಳಿಗೆ ಅನ್ವಯಿಸುವ ಮುಖ ಪ್ರತಿಮುಖಾದಿ ಪಂಚ ಸಂಧಿಗಳ ಅಂಗವಾಗಿ ಬರುವ ಸಂಧ್ಯಂಗ ವೀಥ್ಯಂಗ. ಮೊದಲಾದ ಉಪಾಂಗಗಳ ವರ್ಗಕ್ಕೆ ಸೇರಿಸಿರುವರು. ದಶರೂಪಕದ ಧನಂಜಯ ಇವುಗಳ ಪ್ರತ್ಯೇಕ ಅಸ್ತಿತ್ವವನ್ನೇ ಅಲ್ಲಗಳೆದಿರುವನು. ಇವುಗಳಲ್ಲಿ ಕೆಲವು ಉಪಮಾದಿ ಅಲಂಕಾರಗಳಲ್ಲಿ, ಉಳಿದವು ಹರ್ಷ, ಉತ್ಸಾಹ, ಮೊದಲಾದ ಭಾವಾಭಿವ್ಯಕ್ತಿಯಲ್ಲಿ ಅಂತರ್ಭಾವವಾಗುವವು, ಎಂದಿರುವನು ಆತ.[2] ಕೆಲವು

---

1. ನಾ. ಶಾ. ಅ. ೧೬ ಮತ್ತು ಅನುಬಂಧ; ಸಂ. ಕ.ಅ.,ಪು.೧–೪೬; ಲಾ.ಸಂ.ಡಾ' ಪು. ೧೫೬ ಮುಂದೆ.

2. ದಶರೂಪಕ ೪–೪೯.

5

ಲಕ್ಷಣಗಳು ಉಪಜಾತಿ ಅನುಷ್ಟುಪ್ ಎರಡೂ ಪಾಠಗಳಲ್ಲಿ ಅಕ್ಷರಶಃ ಬಂದಿವೆ. ಕೆಲವುಗಳ ಲಕ್ಷಣ ಒಂದರಿಂದೊಂದು ಭಿನ್ನವಿಲ್ಲ. ಒಟ್ಟು ಇಂಥ ೧೭ ಲಕ್ಷಣಗಳಿವೆ. ಅಭಿನವಗುಪ್ತ ಉಪಜಾತಿ ಪಾಠವನ್ನು ಸ್ವೀಕರಿಸಿ ಅದರಲ್ಲಿಯ ಲಕ್ಷಣಗಳಿಗೆ ಸರಿ ಹೋಗುವ ಅನುಷ್ಟುಪ್ ಪಾಠದಲ್ಲಿಯ ಲಕ್ಷಣಗಳನ್ನು ಉಲ್ಲೇಖಿಸಿರುವನು. ಆದರೆ ಆತನ ಈ ಸಮೀಕರಣ ಆಧುನಿಕರಿಗೆ ಮಾನ್ಯವಿಲ್ಲ. ಏಕಪಕ್ಷೀಯವೆಂದು ಭಾವಿಸಿರುವರು ಅವರು. ಉಪಜಾತಿ ಪಟ್ಟಿಯನ್ನು ಅನುಸರಿಸಿರುವದಕ್ಕೆ ಅಭಿನವಗುಪ್ತ ಅದು ತನ್ನ ಗುರುವಿನಿಂದ ದೊರೆಯಿತೆಂದು ಹೇಳಿರುವನು. ಉಪಜಾತಿ ಅನುಷ್ಟುಪ್ ಎರಡೂ ಪಾಠಗಳಲ್ಲಿಯ ಲಕ್ಷಣಗಳನ್ನು ಕೆಳಗೆ ಟಿಪ್ಪಣಿಯಲ್ಲಿ ಕೊಟ್ಟಿದೆ.[1]

ಅಭಿನವಗುಪ್ತ ಭರತೋಕ್ತ ಕಾವ್ಯಲಕ್ಷಣಗಳು ಉಪಮಾದಿ ಅಲಂಕಾರಗಳಿಗೆ ಸಮೀಪವರ್ತಿಯಾಗಿವೆ; ನಾಟ್ಯಶಾಸ್ತ್ರದಲ್ಲಿಯ ಅವುಗಳ ವಿವರಣೆ ದಿಙ್ಮಾತ್ರ; ಅವುಗಳ ಸಂಖ್ಯೆಯನ್ನು ೩೬ ಕ್ಕೆ ಮಿತವಾಗಿಸಬೇಕಿಲ್ಲ; ಅವು ಕಾವ್ಯ ನಾಟಕ ಎರಡಕ್ಕೂ

1.

ಉಪಜಾತಿ ಅನುಷ್ಟುಪ್ ಎರಡೂ ಪಟ್ಟಿಗಳಲ್ಲಿ ಸಮಾನವಾಗಿರುವವು	ಉಪಜಾತಿ ಪಟ್ಟಿಯಲ್ಲಿ ಮಾತ್ರ	ಅನುಷ್ಟುಪ್ ಪಟ್ಟಿಯಲ್ಲಿ ಮಾತ್ರ
(೧) ವಿಭೂಷಣ	(೧೮) ಅಭಿಮಾನ	(೧೮) ಅಭಿಪ್ರಾಯ
(೨) ಅಕ್ಷರಸಂಹಿತ	(೧೯) ಪ್ರೋತ್ಸಾಹನ	(೧೯) ನಿದರ್ಶನ
(೩) ಶೋಭಾ	(೨೦) ಗುಣಾನುವಾದ	(೨೦) ವಿಶೇಷಣ
(೪) ಉದಾಹರಣ	(೨೧) ಮಿಥ್ಯಾಧ್ಯವಸಾಯ	(೨೧) ಗುಣಾತಿಪಾತ
(೫) ಹೇತು	(೨೨) ಆಕ್ರಂದ	(೨೨) ತುಲ್ಯತರ್ಕ
(೬) ಸಂಶಯ	(೨೩) ಆಖ್ಯಾನ	(೨೩) ದೃಷ್ಟ
(೭) ದೃಷ್ಟಾಂತ	(೨೪) ಯಾಂಚಾ	(೨೪) ಉಪದಿಷ್ಟ
(೮) ಪ್ರಾಪ್ತಿ	(೨೫) ಪ್ರತಿಷೇದ	(೨೫) ವಿಚಾರ
(೯) ನಿರುಕ್ತ	(೨೬) ನಿರ್ಭಾಸನ	(೨೬) ತದ್ವಿಪರ್ಯಯ
(೧೦) ಸಿದ್ಧಿ	(೨೭) ಆಶೀ	(೨೭) ಭ್ರಂಶ
(೧೧) ಅತಿಶಯ	(೨೮) ಕಪಟ	(೨೮) ಅನುನಯ
(೧೨) ಪದೋಚ್ಚಯ	(೨೯) ಕ್ಷಮಾ	(೨೯) ಮಾಲಾ
(೧೩) ಪೃಚ್ಛಾ	(೩೦) ಪಶ್ಚಾತ್ತಾಪ	(೩೦) ದಾಕ್ಷಿಣ್ಯ
(೧೪) ಸಾರೂಪ್ಯ	(೩೧) ಅರ್ಥಾನುವೃತ್ತಿ	(೩೧) ಗರ್ಹಣ
(೧೫) ಮನೋರಥ	(೩೨) ಉಪಪತ್ತಿ	(೩೨) ಅರ್ಥಾಪತ್ತಿ
(೧೬) ಗುಣಕೀರ್ತನ	(೩೩) ಯುಕ್ತಿ	(೩೩) ಪ್ರಸಿದ್ಧಿ
(೧೭) ಪ್ರಿಯೋಕ್ತಿ	(೩೪) ಕಾರ್ಯ	(೩೪) ಲೇಶ
	(೩೫) ಅನುನೀತಿ	(೩೫) ಕ್ಷೋಭ
	(೩೬) ಪರಿದೇವನ	(೩೬) ಅನುಕ್ತಸಿದ್ಧಿ

ಬೇಕು, ಎಂದು ಬಗೆದಿರುವನು. ಈ ಅಭಿಪ್ರಾಯಕ್ಕೆ ಮೊದಲು ಲಕ್ಷಣಗಳ ವಿಷಯದಲ್ಲಿ ದಶಪಕ್ಷಗಳೆಂದು ಪ್ರಸಿದ್ಧವಿರುವ ೧೦ ಪಕ್ಷಗಳ ಅಭಿಪ್ರಾಯಗಳನ್ನು ವಿವರಿಸಿರುವನು.

ಕಾವ್ಯದ ಆತ್ಮ ರಸ, ಲಕ್ಷಣಗಳು ಕಾವ್ಯಶಾರೀರಕ್ಕೆ ಸಂಬಂಧಿಸಿವೆ. ರಸಕ್ಕೆ ಸಹಜವಿರುವ ಗುಣಗಳಿಂದ ಅವು ಭಿನ್ನ. ಅವು ದ್ವಿವಿಧ-(೧) ಸಿದ್ಧರೂಪ-ಜನ್ಮದೊಂದಿಗೆ ಬಂದ ಹರವಾದ ಹಣೆ, ವಿಶಾಲವಾದ ಕಣ್ಣುಗಳು, ಅಂಗಕಾಂತಿ, ಇತ್ಯಾದಿ; (೨) ಸಾಧ್ಯರೂಪ-ಪ್ರಯತ್ನ ಸಾಧ್ಯ-ನಡಿಗೆ, ನಿಲ್ಲುವ ಭಂಗಿ, ಇತ್ಯಾದಿ. ಕಾವ್ಯದಲ್ಲಿ ಕಂಡುಬರುವ ಈ ಬಗೆಯ ಸ್ವಾಭಾವಿಕ ಸೌಂದರ್ಯಾಂಶಗಳೇ ಲಕ್ಷಣಗಳು, ಎಂಬುದೊಂದು ಅಭಿಪ್ರಾಯ. ಹಲ, ಚಕ್ರ, ಧ್ವಜ, ಮೊದಲಾದ ಸಾಮುದ್ರಿಕ ಚಿಹ್ನಗಳಿಂದ ವ್ಯಕ್ತಿಯ ಘನತೆ ಹೆಚ್ಚುವಂತೆ ಪಾತ್ರಗಳ ಅರ್ಥಗರ್ಭಿತ ಆಕರ್ಷಕ ಮಾತುಗಳಿಂದ ಕಥಾವಸ್ತು ಹೆಚ್ಚು ಕಳೆಗಟ್ಟುವದು, ಒಂದು ದೃಷ್ಟಿಯಿಂದ ಈ ಬಗೆಯ ನುಡಿಬಲ್ಮೆಗಳು ಮುಖ ಪ್ರತಿಮುಖಾದಿ ಪಂಚ ಸಂಧಿಗಳ ಕೆಳಗೆ ಬರುವ ಸಂಧ್ಯಂಗ ವೀಥ್ಯಂಗಗಳ ವರ್ಗಕ್ಕೆ ಸೇರುವವು, ಎಂಬುದು ಇನ್ನೊಂದು ಅಭಿಪ್ರಾಯ. ಲಕ್ಷಣಗಳು ಕವಿ ವ್ಯಾಪಾರ ಜನ್ಯ ; ಸನ್ನಿವೇಶ, ಸಾಹಚರ್ಯ, ಮೊದಲಾದವುಗಳ ಕ್ರಿಯೆ-ಪ್ರಕ್ರಿಯೆಗಳಿಂದ ನೇರವಾಗಿ ಇಲ್ಲವೆ ಪಾತ್ರಗಳ ಮುಖಾಂತರ ಅಭಿವ್ಯಕ್ತಿ ಪಡೆವ ಕವಿಭಾವ ; ಒಮ್ಮೊಮ್ಮೆ ಆ ಭಾವವು ಅಲಂಕಾರಿಕವಾಗಿ, ಒಮ್ಮೊಮ್ಮೆ ಸಹಜ ಸುಂದರವಾಗಿ ಪ್ರಕಟವಾಗುವದು ; ಭರತೋಕ್ತ ಕಾವ್ಯ ಲಕ್ಷಣಗಳು ಈ ಬಗೆಯ ಸಹಜ ಸುಂದರ ಅಲಂಕಾರಗಳೆಂಬುದು ಮೂರನೆಯ ಅಭಿಪ್ರಾಯ. ಯಾವುದೊಂದು ಪ್ರಬಂಧದಲ್ಲಿ ಒಂದು ಅಥವಾ ಹೆಚ್ಚು ಲಕ್ಷಣಗಳು ಸುವ್ಯಕ್ತವಿದ್ದು ಅವೇ ಅದರ ವೈಶಿಷ್ಟ್ಯವಾಗಿರುತ್ತವೆ. ಈ ರೀತಿ ಲಕ್ಷಣಗಳು ಸಮಗ್ರ ಪ್ರಬಂಧವನ್ನು ಆವರಿಸಿರುವುದರಿಂದ ಅವು ಪ್ರಬಂಧ ಧರ್ಮಗಳು, ಎಂಬುದು ನಾಲ್ಕನೆಯ ಅಭಿಪ್ರಾಯ. ಲಕ್ಷಣಗಳು ಕವಿಯ ಅಭಿಪ್ರಾಯ ವಿಶೇಷ ಎಂಬುದು ಐದನೆಯ ಅಭಿಪ್ರಾಯ. ಔಚಿತ್ಯಪೂರ್ಣ ಗುಣಾಲಂಕಾರಗಳ ಬಳಕೆಯೇ ಲಕ್ಷಣವೆಂಬುದು ಆರನೆಯ ಅಭಿಪ್ರಾಯ. ಏಳನೆಯ ಅಭಿಪ್ರಾಯದ ಮೇರೆಗೆ ಲಕ್ಷಣಗಳು ಪ್ರಸಿದ್ಧವಿರುವ ಉಪಮಾದಿ ಅಲಂಕಾರಗಳ ಮಾತೃಸ್ಥಾನದಲ್ಲಿವೆ. ಭರತ ಮೂರೇ ಅಲಂಕಾರಗಳನ್ನು ಹೇಳಿರುವನು—ಉಪಮಾ, ರೂಪಕ, ದೀಪಕ. ಇವು ಮತ್ತು ಲಕ್ಷಣಗಳ ಸಂಕರದಿಂದ ಇತರ ಅಲಂಕಾರಗಳು ಹುಟ್ಟುವವು. ಉಳಿದ ಮೂರು ಅಭಿಪ್ರಾಯಗಳು ತುಸು ಹೆಚ್ಚು ಕಡಿಮೆ ಈ ಏಳರಲ್ಲಿ ಸಮಾವೇಶವಾಗುತ್ತವೆ.

ಭರತನ ಕಾವ್ಯಲಕ್ಷಣಗಳು ಕಾವ್ಯ ಮತ್ತು ನಾಟಕ ಎರಡರಲ್ಲೂ ಪ್ರಯೋಗಾರ್ಹ ಎಂಬುದು 'ಕಾವ್ಯಬಂಧಾಸ್ತು ಕರ್ತವ್ಯಾಃ ಷಟ್‌ತ್ರಿಂಶಲ್ಲಕ್ಷಣಾನ್ವಿತಾಃ' ಆತನ ಈ ಉಕ್ತಿಯಲ್ಲಿ ವ್ಯಕ್ತವಾಗಿದೆ. ಈ ಉಕ್ತಿ ಕಾವ್ಯಲಕ್ಷಣಗಳ ವಿವರಣೆ ಇರುವ ಅಧ್ಯಾಯದ ಹಿಂದಣ ಅಧ್ಯಾಯದಲ್ಲಿ ಮುಂಬರುವ ಅಧ್ಯಾಯಗತ ವಿಷಯದ ಸೂಚನಾರೂಪಿ ಶ್ಲೋಕವಾಗಿ ಕೊನೆಯಲ್ಲಿ ಬಂದಿದೆ. ಇನ್ನೊಂದೆಡೆ ನಾಟಕಗಳಲ್ಲೂ ಕಾವ್ಯ

ಲಕ್ಷಣಗಳು ಇಷ್ಟವೆಂದಿರುವನು (ನಾ. ಶಾ. ೧೯-೧೩೯).

ಲಕ್ಷಣಗಳು ಎನ್ನುವದರೊಂದಿಗೆ ಭರತ ಇವುಗಳನ್ನು ವಿಭೂಷಣ, ಭೂಷಣ ಸಂಮಿತಿ ಎಂದಿರುವನು. ಉಪಮಾದಿ ಪರಿಚಿತ ಅಲಂಕಾರಗಳಿಂದ ಇವು ಭಿನ್ನವಿದ್ದರೂ ಇವಾದರೂ ಕಾವ್ಯಕ್ಕೆ ಶೋಭೆಯನ್ನು ಕೊಡುವ ಒಂದು ಬಗೆಯ ಅಲಂಕಾರಗಳು ಎಂಬುದು ಆತನ ಮನೀಷೆ. ಒಂದೆರಡು ಲಕ್ಷಣಗಳ ವಿಷಯದಲ್ಲಿ ಆತ ನಾಟಕಾಶ್ರಯ ಎಂದಿದ್ದರೂ ಅಷ್ಟು ಮಾತ್ರದಿಂದ ಲಕ್ಷಣಗಳು ಕೇವಲ ನಾಟಕೋಪಯೋಗಿ ಎನ್ನುವಂತಿಲ್ಲ. ಗುಣಾಲಂಕಾರಗಳನ್ನು ವಿವರಿಸುವ ಮೊದಲು ಇವುಗಳನ್ನು ವಿವರಿಸಿರುವುದರಿಂದ ಬಹುಶಃ ಆತನ ಸಮಯದಲ್ಲಿ ಲಕ್ಷಣಗಳಿಗೇನೆ ಪ್ರಾಶಸ್ತ್ಯವಿರಬೇಕೆಂದು ತೋರುವುದು. ಅಲಂಕಾರ ಶಾಸ್ತ್ರವು ಅಭಿವೃದ್ಧಿ ಹೊಂದಿದಂತೆ ಲಕ್ಷಣಗಳು ಹಿಂದೆ ಬಿದ್ದಿರಬೇಕು ಮತ್ತು ನಾಟಕಗಳನ್ನು ಕುರಿತು ಲಕ್ಷಣ ಗ್ರಂಥಗಳನ್ನು ಬರೆದವರು ಇವುಗಳನ್ನು ಎತ್ತಿಕೊಂಡು, ಭರತನ ಗ್ರಂಥ ಪ್ರಾಮುಖ್ಯವಾಗಿ ನಾಟಕಕ್ಕೆ ಸಂಬಂಧಿಸಿರುವುದನ್ನು ನೆನೆದು, ನಾಟಕದ ಮಟ್ಟಿಗೆ ಇವುಗಳ ವ್ಯಾಪ್ತಿಯನ್ನು ಮಿತಗೊಳಿಸಿದಂತಿದೆ. ಕಾವ್ಯಕ್ಕೂ ಇವುಗಳನ್ನು ಅನ್ವಯಿಸಿದವರಲ್ಲಿ ಅಭಿನವಗುಪ್ತ ಮತ್ತು ಅವನ ನಂತರ ಆಗಿಹೋದ ಚಂದ್ರಾಲೋಕದ ಕರ್ತ ಪೀಯೂಷವರ್ಷ ಜಯದೇವ (ಕ್ರಿ.ಶ. ೧೨೦೦) ಇವರನ್ನು ಹೆಸರಿಸಬಹುದು. ಲಾಕ್ಷಣಿಕನಲ್ಲದಿದ್ದರೂ ಗದಾಯುದ್ಧದಲ್ಲಿ ಸರಸ್ವತಿಯ ಅಲಂಕಾರಗಳೆಂದು ಲಕ್ಷಣಗಳನ್ನು ಎತ್ತಿ ಹಿಡಿದಿರುವುದರಿಂದ ರನ್ನ ಮೂರನೆಯವನೆಂದು ಹೇಳಬಹುದು.

ಭರತೋಕ್ತ ಲಕ್ಷಣಗಳಲ್ಲಿ ಕೆಲವು 'ಅರ್ಥಾಪೇಕ್ಷ' ಇದ್ದು ಅಲಂಕಾರಗಳಿಗೆ, ಕೆಲವು 'ಕ್ರಿಯಾಪೇಕ್ಷ' ಇದ್ದು ಭಾವಾಭಿವ್ಯಕ್ತಿಗೆ ಹೊಂದಿಕೊಳ್ಳುವುದನ್ನು ಗಮನಿಸಿ ದಶರೂಪಕದ ಧನಂಜಯ ಇವುಗಳನ್ನು ಅಲಂಕಾರ ಮತ್ತು ಭಾವಗಳಲ್ಲಿ ಹಂಚಿ ಹಾಕಿರುವುದು ಸಯುಕ್ತಿಕವೆಂದು ಆಧುನಿಕರು ಅಭಿಪ್ರಾಯಪಟ್ಟಿರುವರು.[1]

ಸ್ವಲ್ಪದಲ್ಲಿ ಲಕ್ಷಣಗಳು ಕಾವ್ಯಸೌಂದರ್ಯದ ಮೂಲಭೂತ ಘಟಕಗಳು. ರಸಪೋಷಣೆ ಅವುಗಳ ಮುಖ್ಯೋದ್ದೇಶ. ಅಲಂಕಾರಗಳಿಲ್ಲದೆ ಕಾವ್ಯಸುಂದರವಾಗಬಲ್ಲದು. ಆದರೆ ಲಕ್ಷಣ ಹೀನ ಕಾವ್ಯ ಸಪ್ಪಗಾಗುವದು. ಅವು ಒಮ್ಮೊಮ್ಮೆ ಅಲಂಕಾರಿಕ ಅಥವಾ ಸಹಜ ಸುಂದರ ಮಾತುಗಳಾಗಿ ಕಾಣಿಸಿಕೊಳ್ಳುವವು. ಒಮ್ಮೊಮ್ಮೆ ಪಾತ್ರಗಳ ಇಲ್ಲವೆ ಕವಿಯ ಭಾವಾಭಿವ್ಯಕ್ತಿಯಲ್ಲಿ, ಒಮ್ಮೊಮ್ಮೆ ವಸ್ತುಪೋಷಕವಾಗಿ ಮೈದೋರುವವು. ಅಲಂಕಾರಗಳ ಬಳಕೆಯಂತೆ ಲಕ್ಷಣಗಳ ಬಳಕೆಯಾದರೂ ಕವಿಯ ಇಷ್ಟವನ್ನು ಅವಲಂಬಿಸಿದೆ.

ರನ್ನ ಭರತನ ಅನುಯಾಯಿ. ಅಜಿತಪುರಾಣದಲ್ಲಿ ಬರುವ ಅಮರೇಂದ್ರನ ನಾಟ್ಯವರ್ಣನೆಯು ಈ ಸಂದರ್ಭದಲ್ಲಿರುವ ಪಂಪ ಪೊನ್ನರ ನಾಟ್ಯವರ್ಣನೆಯಂತಿಲ್ಲ.

---

1. ಸಂ. ಕ. ಅ., ಪು. ೪೮.

ಅದೊಂದು ಭರತ-ಶಾಸ್ತ್ರದ ಸಂಕ್ಷಿಪ್ತನಿರೂಪಣೆ. ‘ಭರತದ ಸಾರಸರ್ವಸ್ವಮುಮಂ ನಾಟ್ಯಧರ್ಮದೊಳ್ ಸೌಧರ್ಮಕಲ್ಪೇಶ್ವರಂ ಪ್ರತ್ಯಕ್ಷಂ ಮಾಡಿದಾಗಳ್,’ ಎಂದು ಅದನ್ನು ಅವನೇ ವರ್ಣಿಸಿರುವನು. ಭರತ ಕಾವ್ಯಲಕ್ಷಣಗಳನ್ನು ವಾಚಿಕಾಭಿನಯದ ಅಂಗವಾಗಿ ಹೇಳಿರುವದನ್ನು ಗಮನಿಸಿ, ರನ್ನ ತನ್ನ ಪದ್ಯದಲ್ಲಿ ಸರಸ್ವತಿಯನ್ನು ಉದ್ದೇಶಪೂರ್ವಕವಾಗಿ ‘ವಾಕ್ಸುಂದರಿ’ ಎಂದು ಉಲ್ಲೇಖಿಸಿ, ‘ಅಂಗನೋಚಿತ’ ಅಲಂಕಾರಗಳೆಂದು ಭರತನ ಭಾವ ಹಾವಾದಿ ಅಪ್ರಥಕ್‌ಸಿದ್ಧ ೨೦ (ರನ್ನನ ಮೇರೆಗೆ ೧೮) ಅಲಂಕಾರಗಳನ್ನು ಮತ್ತು ಅವುಗಳಿಗೆ ಹೊಂದಿಕೊಂಡಿರುವ ಶೃಂಗಾರರಸವನ್ನು ಸ್ತ್ರೀ ಸಾಮಾನ್ಯಕ್ಕೆ ಮತ್ತು ವಿಭೂಷಣ, ಭೂಷಣ ಸಂಮಿತಿ ಎಂದು ಉಕ್ತವಾದ ಇವೇಬಗೆಯ ೩೬ ಕಾವ್ಯಲಕ್ಷಣಗಳನ್ನು ಮತ್ತು ಶೃಂಗಾರಾದಿ ೯ ರಸಗಳನ್ನು ಸರಸ್ವತಿಗೆ ಅನ್ವಯಿಸಿ, ಇಷ್ಟೊಂದು ರಸಾಲಂಕಾರಗಳಿಂದ ಭೂಷಿತಳಾದ ಸರಸ್ವತಿ ತನ್ನ ಮುಖಾಂಭೋಜದಲ್ಲಿ ನೆಲಿಸಿ ಅನುಗ್ರಹಿಸಲೆಂದು ಕೋರಿರುವನು.

ಗದಾಯುದ್ಧದಲ್ಲಿ ಕಾವ್ಯಲಕ್ಷಣಗಳು

ಇಲ್ಲಿಗೆ ೩೬ರ ಒಗಟ ಬಿಟ್ಟಂತಾಯಿತು. ಆದರೆ ಪದ್ಯದ ಮಟ್ಟಿಗೆ. ರನ್ನ ಸರಸ್ವತಿಯನ್ನು ಹೀಗೆ ಸ್ತುತಿಸಿರುವದು ಸಹೇತುಕವೇ ಅಥವಾ ಅದೊಂದು ಅಹೇತುಕ ಅಂದರೆ ಉದ್ದೇಶರಹಿತ ಕವಿವ್ಯಾಪಾರವೇ? ಸಹೇತುಕವಿದ್ದರೆ ಅದಕ್ಕೊಂದು ಪ್ರಚೋದಕವಿದ್ದಿತೇ? ಗದಾಯುದ್ಧದಲ್ಲಿ ೩೬ ಕಾವ್ಯಲಕ್ಷಣಗಳನ್ನು ಮತ್ತು ೯ ರಸಗಳನ್ನು ಬಿಂಬಿಸುವ ಉದಾಹರಣೆಗಳಿವೆಯೇ? ಇವೇ ಮೊದಲಾದ ಪ್ರಶ್ನೆಗಳು ಈ ಪದ್ಯದ ಜಾಡಿನಲ್ಲಿ ಮೂಡುತ್ತವೆ.

ರನ್ನನ ಈ ಪದ್ಯ ಸಹೇತುಕವೆಂಬುದು ನಿಸ್ಸಂದಿಗ್ಧ. ಗದಾಯುದ್ಧಕ್ಕಾಗಿ ವ್ಯಾಸ ಭಾರತದಲ್ಲಿಯ ಗದಾ-ಸೌಪ್ತಿಕ ಪರ್ವಗಳಲ್ಲಿಯ ಕಥಾನಕದೊಂದಿಗೆ ಆತ ಪಂಪಭಾರತ, ಭಟ್ಟನಾರಾಯಣನ ವೇಣೀಸಂಹಾರ, ಭಾಸನ ಊರುಭಂಗ, ಇವು ಗಳಿಂದ ಪ್ರಯೋಜನ ಪಡೆದಿರುವನೆಂದು ಹೇಳುವದುಂಟು. ಇವುಗಳಲ್ಲಿ ವೇಣೀ ಸಂಹಾರವೇ ಆತನಿಗಿದ್ದ ಸ್ಫೂರ್ತಿಸ್ಥಾನ. ಗದಾಯುದ್ಧದೊಂದಿಗೆ ಈ ಮೂರನ್ನೂ ಇಟ್ಟುಕೊಂಡು ನೋಡಿದಾಗ ಈ ಮಾತಿನ ಪ್ರತೀತಿಯಾಗುವದು. ವೇಣೀಸಂಹಾರ ೩೬ ಕಾವ್ಯಲಕ್ಷಣಗಳಿಂದ ಕೂಡಿದ ನಾಟಕವೆಂದು ಪ್ರಸಿದ್ಧವಿತ್ತು. ಬೇರೆ ಬೇರೆ ನಾಟಕಗಳ ವೈಶಿಷ್ಟ್ಯವನ್ನು ವಿವರಿಸುತ್ತ ಭಾವ ಪ್ರಕಾಶನದ ಶಾರದಾತನಯ (ಕ್ರಿ.ಶ. ೧೨೦೦) ‘ವೇಣೀಸಂಹಾರಃ ಷಟ್‌ತ್ರಿಂಶದ್ಭೂಷಣೋಜ್ಜ್ವಲಃ,’ ಎಂದಿರುವನು. ಇಲ್ಲಿ ಲಕ್ಷಣಗಳಿಗೆ ಭೂಷಣ ಎಂದಿರುವದನ್ನು ಗಮನಿಸಬೇಕು. ಲಕ್ಷಣಗಳ ನಿರೂಪಣೆಯಲ್ಲಿ ಆತ ಇವುಗಳಿಗೆ ಅಲಂಕಾರಗಳೆಂದು ಸಹ (ಅಲಂಕಾರಾಃಕಥಿತಾ) ಎಂದಿರುವನು.[1] ವೇಣೀಸಂಹಾರದ ಈ ಬಗೆಯ ಪ್ರಸಿದ್ಧಿ ಶಾರದಾತನಯನ ನಂತರ

1. ಭಾ. ಪ್ರ. ಅ. ೮, ಪು. ೨೨೩-೨೨೪.

ನಾಮಶೇಷವಾದಂತೆ ತೋರುವದು. ವೇಣೀಸಂಹಾರ ಮತ್ತು ಭವಭೂತಿಯ ಮಾಲತೀ ಮಾಧವಕ್ಕೆ ಟೀಕೆಯನ್ನು ಬರೆದ ಜಗದ್ಧರ (ಕ್ರಿ. ೧೪೬೦) ಮಾಲತೀ ಮಾಧವದಲ್ಲಿಯ ಕೆಲವು ಲಕ್ಷಣಗಳನ್ನು ಎತ್ತಿತೋರಿಸಿದ್ದರೂ ವೇಣೀಸಂಹಾರವ ಟೀಕೆಯಲ್ಲಿ ಲಕ್ಷಣಗಳ ಮಾತೆತ್ತಿಲ್ಲ.

ರನ್ನ ಶಾರದಾತನಯನ ಪೂರ್ವಿಕ. ವೇಣೀಸಂಹಾರವು ಷಟ್‌ತ್ರಿಂಶದ್ಭೂಷಣೋಜ್ವಲ ಎಂಬದು ಅವನಿಗೆ ಅವಗತವಿದ್ದು, ಅದರಿಂದ ಪ್ರಚೋದಿತನಾದ ಆತ ಕಾವ್ಯದೇವಿಯ ಅಲಂಕಾರಗಳು ೩೬ ಎಂದು ಬಣ್ಣಿಸಿದಂತಿದೆ. ವಾಗ್ದೇವಿಯನ್ನು ಹೀಗೆ ಬಣ್ಣಿಸಿದ ಆತ ತನ್ನ ಕೃತಿಯಲ್ಲೂ ಅವಳ ೩೬ ಅಲಂಕಾರಗಳನ್ನು ಬಳಸಿರುವ ಸಂಭಾವ್ಯತೆಯಾದರೂ ಇಲ್ಲದಿಲ್ಲ. ಇದೆಲ್ಲ ಊಹಾತ್ಮಕವೆಂದು ಬೇರೆ ಹೇಳಬೇಕಿಲ್ಲ. ಗದಾಯುದ್ಧದಲ್ಲಿ ಇದ್ದಿರಬಹುದಾದ ಭರತೋಕ್ತ ಕಾವ್ಯಲಕ್ಷಣಗಳ ಉದಾಹರಣೆಗಳನ್ನು ಆರಿಸುವ ಮೊದಲು ರನ್ನ ಇವುಗಳ, ಉಪಜಾತಿ ಅನುಷ್ಟುಪ್ ಪಟ್ಟಿಗಳಲ್ಲಿ ಯಾವುದನ್ನು ಅನುಸರಿಸಿರಬೇಕೆಂಬುದರ ನಿರ್ಣಯವಾಗಬೇಕು. ಅಭಿನವಗುಪ್ತ, ದಶರೂಪಕದ ಧನಂಜಯ ಮತ್ತು ನಾಟಕ-ಲಕ್ಷಣ-ರತ್ನಕೋಶದ ಸಾಗರನಂದಿ ರನ್ನನ ಕಾಲಖಂಡದಲ್ಲಿ ಬರುವರು. ಇವರಲ್ಲಿ ಅಭಿನವಗುಪ್ತ ಧನಂಜಯರು ರನ್ನನ ಸಮಕಾಲೀನರು. ಸಾಗರನಂದಿಯ ಕಾಲ ಕ್ರಿ.ಶ. ೯೦೦–೧೧೦೦ ಎಂದು ಗ್ರಹಿಸಲಾಗಿದೆ. ಭರತ ತನ್ನ ಈ ಕಾವ್ಯಲಕ್ಷಣಗಳಿಗೆ ಭೂಷಣಸಂಮಿತಿ ಎಂದಿರುವದು ಉಪಜಾತಿ ಪಟ್ಟಿಯಲ್ಲಿ ಮಾತ್ರ. ಅನುಷ್ಟುಪಟ್ಟಿಯಲ್ಲಿ ಎಲ್ಲೆಡೆ ಲಕ್ಷಣವೆಂದಿದೆ. ಅಭಿನವಗುಪ್ತನಿಗೆ ಎರಡೂ ಅವಗತವಿದ್ದವು. ಸಾಗರನಂದಿ ಲಕ್ಷಣಗಳೆಂದು ಉಲ್ಲೇಖಿಸಿ ಅನುಷ್ಟುಪ್ ಪಟ್ಟಿಯನ್ನು ಅನುಸರಿಸಿರುವನು. ಧನಂಜಯ 'ಷಟ್‌ತ್ರಿಂಶದ್ಭೂಷಣಾನಿ' ಎಂದಿರುವದರಿಂದ ಆತ ಉಪಜಾತಿಪಟ್ಟಿಯನ್ನು ಅನುಸರಿಸಿದಂತಿದೆ. ಧನಂಜಯನ ಈ ಉಕ್ತಿಗೆ ಟೀಕೆಯಲ್ಲಿ ಧನಿಕ—'ವಿಭೂಷಣಂಚಾಕ್ಷರ ಸಂಹಿತಿಶ್ಚ. . .,' ಎಂದು ವಿವರಣೆ ಕೊಟ್ಟಿರುವನು. ಈ ವಿವರಣೆ ಉಪಜಾತಿಪಟ್ಟಿಯಲ್ಲಿಯದು. ಧನಿಕ ಧನಂಜಯನ ಸಮಕಾಲೀನ ಆತನ ಸಹೋದರನೆಂಬ ಪ್ರತೀತಿಯಿದೆ. ಇವರೀರ್ವರೂ ಮಾಳವದವರು. ರನ್ನನ ಸಮೀಪವರ್ತಿಗಳು. ರನ್ನನಾದರೂ ಭರತನ ೩೬ ಲಕ್ಷಣಗಳನ್ನು ವಾಕ್ಸುಂದರಿಯ ಅಲಂಕಾರಗಳು (ಭೂಷಣಗಳು) ಎಂದು ಬಣ್ಣಿಸಿರುವುದರಿಂದ ಆತ ಸಹ ಉಪಜಾತಿ ಪಟ್ಟಿಯನ್ನು ಅನುಸರಿಸಿರುವದು ಹೆಚ್ಚು ಸಂಬವನೀಯವಿದೆ. ಉಪಜಾತಿ ಪಟ್ಟಿಯನ್ನೇ ಅನುಸರಿಸಿರುವನೆಂದು ಗ್ರಹಿಸಿ ಅದರಲ್ಲಿಯ ಲಕ್ಷಣಗಳ ವಿವರಣೆಗೆ ಸರಿಹೋಗಬಹುದಾದ ಗದಾಯುದ್ಧದಲ್ಲಿಯ ಉದಾಹರಣೆಗಳಿವು.[1]—

---

1. ಇವಾದರೂ ೧೦೦% ಊಹಾತ್ಮಕ. ಇವುಗಳಿಗಿಂತ ಹೆಚ್ಚು ಸುಂದರವಾಗಿ ಹೊಂದಿಕೊಳ್ಳುವಂಥ ಉದಾಹರಣೆಗಳು ಇರಬಹುದಾದರೂ ಈ ವಿಷಯ ಇಲ್ಲಿ ಅಪ್ರಸಕ್ತ. ಭರತನ ಲಕ್ಷಣಗಳು ಕಾವ್ಯದ ಮೂಲಭೂತ ಘಟಕಗಳು, ಅಪ್ರಥಕ್‌ಸಿದ್ಧ ಅಲಂಕಾರಗಳು, ಇರುವುದರಿಂದ ಅನ್ಯಕವಿಗಳ ಕೃತಿಗಳಲ್ಲೂ ಇವು ಕಾಣಸಿಗುವವು. ಹೆಚ್ಚೇಕೆ, ಭರತನನಾಟ್ಯ ಶಾಸ್ತ್ರವನ್ನು

೧. ವಿಭೂಷಣ—ಗುಣಾಲಂಕಾರಗಳಿಂದ ಕೂಡಿದ ಹೃದಯಂಗಮ ಬಣ್ಣನೆ ವಿಭೂಷಣ. ಯುದ್ಧಸನ್ನದ್ಧರಾಗಿ ನಿಂತಿರುವ ಕೋಪೋದ್ರಿಕ್ತ ಭೀಮ ದುರ್ಯೋಧನರನ್ನು ರನ್ನ—

ಉದಯಾದ್ರಿಯು ಮಸ್ತಾದ್ರಿಯು-
ಮುದಗ್ರ ಕೋಪೋತ್ಕ ರಂಗಳಿರ್ಪಂತಿರೆ ನೀ- |
ಳ್ದುದವಿದ ರುನ್ನತ ಮೂರ್ತಿಗ-
ಳೊದವಿ ಗದಾಯುದದೆ ಭೀಮ ಭುಜಗಧ್ವಜರುಂ|| ೮/೬

— ಉದಯಾದ್ರಿ ಅಸ್ತಾದ್ರಿಗಳಿಗೆ ಹೋಲಿಸಿರುವನು. ಶೌರ್ಯಸಾಹಸಗಳಲ್ಲಿ ಇಬ್ಬರೂ ಸರಿಸಮಾನರು; ಸೋತು ಹಿಮ್ಮೆಟ್ಟುವವರಲ್ಲ; ಪರ್ವತದಂತೆ ಸ್ಥಿರರು; ಉನ್ನತ ಮೂರ್ತಿಗಳು ಎಂದು ಹೊಗಳಿರುವನು. ಭೀಮನನ್ನು ಉದಯಾದ್ರಿಗೆ ದುರ್ಯೋಧನನನ್ನು ಅಸ್ತಾದ್ರಿಗೆ ಹೋಲಿಸುವಲ್ಲಿ ಭೀಮನಿಗೆ ಜಯ, ದುರ್ಯೋಧನನಿಗೆ ಅಪಜಯ ಎಂಬುದನ್ನು ಸೂಚಿಸಿರುವನು. ಅರ್ಥಾಲಂಕಾರ ಶಬ್ದಾಲಂಕಾರ ಎರಡನ್ನೂ ಒಳಗೊಂಡಿರುವ ಈ ಪದ್ಯದ ಬಂಧಶ್ಲಿಷ್ಟ (ಅಶಿಥಿಲ)ವಿದ್ದು ಇದೊಂದು ಕನ್ನಡದಲ್ಲಿರುವ ನೃಪತುಂಗೋಕ್ತ ದಕ್ಷಿಣ ಮಾರ್ಗದ ನಿಬಿಡ ಮತ್ತು ಪ್ರಸನ್ನ (ವೈದರ್ಭಿಯ ಶ್ಲೇಷ ಅಥವಾ ಶ್ಲಿಷ್ಟ, ಪ್ರಸಾದ) ಗುಣಗಳ ಉತ್ಕೃಷ್ಟ ಲಕ್ಷ್ಯದಂತಿದೆ. ವೈದರ್ಭಿ ರೀತಿಗೆ ಕಾಳಿದಾಸ ಎತ್ತಿದ ಕೈ. ಕಾಳಿದಾಸನನ್ನು ಆದರ್ಶವಾಗಿಸಿಕೊಂಡು 'ಪದ್ಯರಚನೆಯೊಳ್ ಕಾಳಿದಾಸನುಂ' ಎಂದು ಅವನನ್ನು ಅಭಿವಂದಿಸಿದ ರನ್ನನಿಗೆ ಭೂಷಣಪ್ರದವಾಗಿದೆ.

೨. ಅಕ್ಷರ ಸಂಹಿತ—ಸ್ವಲ್ಪೇ ಆದರೆ ಅರ್ಥಪೂರ್ಣ ಅಥವಾ ನೃಪತುಂಗನ 'ಕಿರಿದರೊಳು ಪಿರಿದರ್ಥವಿರುವ' ಮಾತು ಅಕ್ಷರ ಸಂಹಿತ. ರನ್ನ ಇದನ್ನು 'ಚಿ:' ಎಂಬ ಏಕಾಕ್ಷರ ಶಬ್ದದಲ್ಲಿ ಸಾಧಿಸಿರುವನು. ಯಾವನೊ ಒಬ್ಬನು ಹೊರಬಿದ್ದಂತೆ ಭಾಸವಾಗಲೆಂದು ಬೆನ್ನು ಮುಂದೆ ಮಾಡಿ ವೈಶಂಪಾಯನ ಸರೋವರನ್ನು ಪ್ರವೇಶಿಸಿದ ದುರ್ಯೋಧನನನ್ನು ಕಂಡು,–ಚಿ: , ಎಂದವನಂ ರಾಜ್ಯಲಕ್ಷ್ಮಿ ಪೇಸಿಬಿಸುಟಳ್ ಎಂಬ ಮಾತಿನಲ್ಲಿ ಮಹಾನುಭಾವನೆಂದು ತಾನೇ ಏರಿಸಿದ ಮಹೋನ್ನತ ಸ್ಥಾನದಿಂದ ರನ್ನ ಅವನನ್ನು ಕೆಳಗೆ ನೂಕಿರುವನು.[1] ಪ್ರತಿನಾಯಕನನ್ನು ನಾಯಕನಷ್ಟೇ ಉನ್ನತ ಮಟ್ಟದಲ್ಲಿರಿಸಿ ಚಿತ್ರಿಸುವುದು ಕಾವ್ಯ ರಚನೆಯ ಅವಶ್ಯ ನಿಯಮಗಳಲ್ಲಿ ಒಂದು. 'ಲುಬ್ಧೋ ಧೀರೋದ್ಧತ:ಸ್ತಬ್ಧ: ಪಾಪ ಕೃತ್‌ವ್ಯಸನೀ ರಿಪು:' ಎಂದು ಪ್ರತಿ

ಕುರಿತಿರುವ ಮರಾಠಿ ಗ್ರಂಥದಲ್ಲಿ ಸುಪ್ರಸಿದ್ಧ ಅರ್ವಾಚೀನ ನಾಟಕಕಾರರಾದ ರಾ ಮ ಗಡೇಶ ಗಡಕರಿಯವರ 'ಏಕs ಚ ಪ್ಯಾಲಾ' ನಾಟಕದಲ್ಲಿಯ ಮಾತುಗಳನ್ನು ಇವುಗಳಿಗೆ ಲಕ್ಷ್ಯಗಳೆಂದು ಕೊಡಲಾಗಿದೆ. ವ್ಯತ್ಯಾಸವಿಷ್ಟೇ – ರನ್ನ ಇವುಗಳನ್ನು ಉದ್ದೇಶಪೂರ್ವಕವಾಗಿ ಬಳಸಿದ್ದರೆ ಇತರರ ವಿಷಯ ಇಂತಿಲ್ಲ.

1. ಗ. ಯು. 3, ೬–೯.

ನಾಯಕನ ಸಾಮಾನ್ಯ ಲಕ್ಷಣವನ್ನು ಹೇಳಿರುವನು ಧನಂಜಯ.[1] ಇವುಗಳಲ್ಲಿ ಸ್ಥಿರತ್ವ (ಸ್ತಬ್ಧ) ಮತ್ತು ಧೀರೋದ್ಧತ ಗುಣಗಳು ಗದಾಯುದ್ಧದ ನಾಯಕ ಭೀಮ ಮತ್ತು ಪ್ರತಿನಾಯಕ ದುರ್ಯೋಧನ ಇಬ್ಬರಿಗೂ ಸಮಾನವಾಗಿವೆ. ರನ್ನ ದುರ್ಯೋಧನನ ಈ ಗುಣಗಳನ್ನು ಮತ್ತು ಆತನ ಇತರ ಸದ್ಗುಣಗಳನ್ನು ಎದ್ದು ಕಾಣುವಂತೆ ಬಣ್ಣಿಸಿರುವನು. ಜೊತೆಗೆ ಅವನ ಅವಗುಣಗಳನ್ನು ಹೇಳದೆ ಬಿಟ್ಟಿಲ್ಲ. ಇದರ ಮುಂದಣ ಪದ್ಯದಲ್ಲಿಯೇ ವಿರಾಟನ ಆಕಳುಗಳನ್ನು ಓಡಿಸಿಕೊಂಡು ಹೋದದ್ದು, ದ್ರೌಪದಿಯ ಸೀರೆಯನ್ನು ಸೆಳೆಯಲು ದುಶ್ಶಾಸನನನ್ನು ಪ್ರೋತ್ಸಾಹಿಸಿದ್ದು ಮತ್ತು ಹೇಡಿ, ಮೋಸಗಾರನಂತೆ ಬೆನ್ನು ಮುಂದೆ ಮಾಡಿ ಸರೋವರವನ್ನು ಪ್ರವೇಶಿಸಿದ್ದು ಅವನ ವಿನಾಶಕ್ಕೆ ಕಾರಣವಾದವೆಂದು ದುರ್ಯೋಧನನ ಅಕೃತ್ಯಗಳನ್ನು ಉಲ್ಲೇಖಿಸಿರುವನು. ಮಹಾಭಾರತದ ಅರ್ಜುನ ಕರ್ಣ, ಭೀಮ ದುರ್ಯೋಧನರನ್ನು ಪಂಪನ ಅರ್ಜುನ ಕರ್ಣರೊಂದಿಗೆ ರನ್ನನ ಭೀಮ ದುರ್ಯೋಧನರೊಂದಿಗೆ ಹೋಲಿಸಿ ಆ ಮೂಲಕ ಕವಿ ಕೌಶಲ್ಯವನ್ನು ಹೊಗಳುವುದುಂಟು. ಆದರೆ ಇದೊಂದು ಕವಿ ಕೃತಿಯಲ್ಲಿ ಪ್ರತಿನಾಯಕನನ್ನು ಚಿತ್ರಿಸುವ ಶಾಸ್ತ್ರೋಕ್ತ ತಂತ್ರವೆಂಬುದನ್ನು[2] ನೆನೆದಾಗ ಪಂಪ ರನ್ನರ ಕರ್ಣ ದುರ್ಯೋಧನರ ಪಾತ್ರ ಚಿತ್ರಣ ಕ್ರಮಪ್ರಾಪ್ತ ಎನ್ನಬೇಕಾಗುವುದು. ಪ್ರತಿನಾಯಕನನ್ನು ಮೇಲಕ್ಕೇರಿಸಿ ಅಥವಾ ನಿಜವಾದ ನಾಯಕ ಅವನೇ ಎಂಬುವ ಪ್ರತಿಪಾದನೆಯನ್ನು ಪ್ರಾಚೀನ ಸಾಹಿತ್ಯದಲ್ಲಿ ಆಧುನಿಕ ಭಾವನಾ ವ್ಯಾಪಾರವನ್ನು ಕಾಣಲೆತ್ನಿಸುವ ಒಂದು ಬಗೆ (A mere reading of modern sentiment in ancient literature); ಆ ಪಾತ್ರಗಳನ್ನು ಸೃಷ್ಟಿಸಿದ ಕವಿಗಳು ಸುತರಾಂ ಹಾಗೆ ಇಚ್ಛಿಸಿರಲಿಲ್ಲ, ಎಂಬ ಕೀಥರ ಅಭಿಪ್ರಾಯದ ಹಿನ್ನೆಲೆಯೊಂದಿಗೆ ನೋಡಬೇಕು.[3] ಕೀಥರ ಈ ಮಾತು ಭಾಸನ ಊರುಭಂಗದ ನಾಯಕ ದುರ್ಯೋಧನನೆಂದು ಪ್ರತಿಪಾದಿಸುವವರನ್ನು ಕುರಿತಿದೆ. ಗದಾಯುದ್ಧದ 'ನಿಜವಾದ ನಾಯಕ' ದುರ್ಯೋಧನ ಎಂಬ ಅಭಿಪ್ರಾಯಕ್ಕೂ ಈ ಮಾತು ಅನ್ವಯಿಸುವಂತಿದೆ.

೩. **ಶೋಭಾ**—ಪ್ರಸಿದ್ಧ ಕೃತಿ ಇಲ್ಲವೆ ಮಾತಿನ ದೃಷ್ಟಾಂತದಿಂದ ಅಪ್ರಸಿದ್ಧ ಕೃತಿ ಇಲ್ಲವೆ ಮಾತನ್ನು ಸಮರ್ಥಿಸುವದು ಶೋಭಾ. ಅಭಿನವಗುಪ್ತ ಇದಕ್ಕೆ ಲಕ್ಷ್ಯವೆಂದು ಶಾಕುಂತಲದಲ್ಲಿ ದುಷ್ಯಂತನ ಸೇನಾನಿ ಅನಿಷ್ಟವೆಂದು ಗಣಿಸಲಾದ ಮೃಗಯಾವಿನೋದವನ್ನು ಲೋಕಪ್ರಸಿದ್ಧ ಮಾತುಗಳಿಂದ ಸಮರ್ಥಿಸುವ 'ಮೇದಶ್ಛೇದಕೃಶೋದರಂ' ಪದ್ಯವನ್ನು ಕೊಟ್ಟಿರುವನು. ಈ ಪದ್ಯದಲ್ಲಿ ದುಷ್ಯಂತನ ಸೇನಾನಿ: ಮೃಗಯಾ ವಿಹಾರದಿಂದ ಕೊಬ್ಬು ಕರಗುವದು, ಮೈಹಗುರಾಗುವದು ಓಡುತ್ತಿರುವ

1. ದಶರೂಪಕ, ೨–೧೪.

2. ತಾ. ಸಂ.ಡ್ರಾ. , ಪು. ೩೦೫.

3. ಸಂ. ಡ್ರಾ. , ಪು. ೨೭೮.

ಮೃಗವನ್ನು ಗುರಿಯಿಟ್ಟು ತಪ್ಪದೆ ಹೊಡೆಯುವುದು ಬಿಲ್ಲುಗಾರನಿಗೆ ಭೂಷಣ, ಎಂದು ಮುಂತಾಗಿ ಮೃಗಯಾವಿಹಾರವನ್ನು ಸಮರ್ಥಿಸುವನು.[1] ಕೊಬ್ಬು ಕರಗಿಸಲು ಮತ್ತು ಧನುರ್ವಿದ್ಯೆಯಲ್ಲಿ ಪಾರಂಗತನಾಗಲು ಇತರ ಸಾಧನಗಳಿರುವದನ್ನು ಮತ್ತು ಇದಕ್ಕಾಗಿ ಚಿಗರೆ. ಮೊಲ, ಮೊದಲಾದ ನಿರುಪದ್ರವಿ ಪ್ರಾಣಿಗಳನ್ನು ಕೊಲ್ಲಬೇಕಿಲ್ಲ, ಎಂಬುದನ್ನು ಬಲ್ಲ ಪ್ರೇಕ್ಷಕರಲ್ಲಿ ದುಷ್ಯಂತನ ಸೇನಾನಿಯ ಈ ಸಮರ್ಥನೆಯಿಂದ ಒಂದು ಬಗೆಯ ಮೃದು ಹಾಸ್ಯಮೂಡುವದು. ಅಭಿನವಗುಪ್ತ,-ಈ ಪದ್ಯದಲ್ಲಿ ಯಾವುದೇ ಬಗೆಯ ಅಲಂಕಾರವಿಲ್ಲ. ಮೃಗಯಾ ವಿನೋದದ ಚಮತ್ಕಾರಿತ ಸಮರ್ಥನೆಯೇ ಈ ಪದ್ಯದ ಜೀವಾಳ, ಇದೇ ಶೋಭಾ ಎಂದಿರುವನು.

ಗದಾಯುದ್ಧದಲ್ಲಿ ಭೀಮ,-ಯುದ್ಧಕ್ಕಂಜಿ ಕೊಳದಲ್ಲಿ ಅಡಗಿಕೊಂಡಿರುವ ನೀನೆಂಥ ವೀರನೆಂದು ದುರ್ಯೋಧನನ್ನು ಮೂದಲಿಸಿದಾಗ, ಆತ-

ಅಸುರಂ ವಸುಧಾ ತಳಮಂ
ರಸಾತಳಕ್ಕುಯ್ಯೆ ಹರಿತರಲ್ಪೊಕ್ಕವೊಲೀ ।
ವಸುಮತಿಯ ನೆತ್ತಿ ನಿನ್ನಯ
ದೆಸೆಯಿಂ ತರೆ ಪೊಕ್ಕೆನಂಜಿ ಪೊಕ್ಕೆನೆ ಕೊಳನಂ ॥ ೭-೩೪

—ಪೂರ್ವದಲ್ಲಿ ಹಿರಣ್ಯಾಕ್ಷನು ಭೂಮಿಯನ್ನು ಸುರುಳಿಸುತ್ತಿ ಅಧೋಲೋಕಕ್ಕೆ ಒಯ್ದಾಗ ವಿಷ್ಣು ಅದನ್ನೆತ್ತಿತರಲು ಸಮುದ್ರವನ್ನು ಹೊಕ್ಕಂತೆ ನಾನು ಕೂಡ ನಿನ್ನ ಹಿಡಿತಕ್ಕೆ ಸಿಕ್ಕ ಭೂಮಿಯನ್ನು ಕಸಿದುತರಲು ಕೊಳವನ್ನು ಹೊಕ್ಕೆ; ನಿನ್ನ ಭಯದಿಂದಲ್ಲ, ಎಂದು ತನ್ನ ಕೃತಿಯನ್ನು ಸಮರ್ಥಿಸಿಕೊಳ್ಳುವನು. ಮಹಾಭಾರತದ ಮೇರೆಗೆ ಶ್ರಮ ಪರಿಹರಿಸಿಕೊಳ್ಳಲು, ಗದಾಯುದ್ಧದ ಮೇರೆಗೆ ಬಲರಾಮಾದಿಗಳು ಬರುವತನಕ ಕಾಲವಂಚನೆಗೆಯ್ಯಲು ದುರ್ಯೋಧನ ಕೊಳದಲ್ಲಿ ಅಡಗಿಕೊಂಡಿದ್ದ, ಕೊಳವನ್ನು ಹೊಕ್ಕರೀತಿ ಅವನ ವ್ಯಕ್ತಿತ್ವಕ್ಕೆ ಕುಂದು ತರುವಂಥದು, ಎಂಬುದನ್ನು ಬಲ್ಲ ಶ್ರೋತೃಗಳಿಗೆ ಆತನ ಈ ಸಮರ್ಥನೆ ಚಮತ್ಕಾರಿಕವೆನಿಸುವದು.

೪. **ಉದಾಹರಣ**—ಅನ್ಯರಿಗೆ ತಿಳಿಯದಂತೆ ಜಾಣ್ಮೆಯಿಂದ ತಿಳಿಸಬೇಕಾದವನಿಗೆ ತನ್ನ ಮನೋಗತವನ್ನು ತಿಳಿಸುವುದು ಉದಾಹರಣ. ಸರಳ ಯುದ್ಧದಲ್ಲಿ ದುರ್ಯೋಧನ ಅಜೇಯನೆಂಬುದನ್ನು ಅರಿತು ಕೃಷ್ಣ-

ಪೊಡೆಯಲರಾತಂ ರಾಗದೆ
ತೊಡೆಯಂ ಪೊಯ್ದಾರ್ವನೆವದೆನೆಜನೀತಂಗೀ-।

---

1. ಶಾಕುಂತಲ, ೨/೫; ಅನುಷ್ಟುಪ್ ಪಟ್ಟಿಯನ್ನು ಅನುಸರಿಸಿದ ಟೀಕಾಕಾರ ರಾಘವಭಟ್ಟ ಸಂದರ್ಭವನ್ನು ಗಮನಿಸಿ ಇದನ್ನು ಅದರಲ್ಲಿಯ ದಾಕ್ಷಿಣ್ಯವೆಂಬ ಲಕ್ಷಣಕ್ಕೆ ಜೋಡಿಸಿರುವನು. ಈ ಲಕ್ಷಣ ಇಲ್ಲಿ ವಿವರಿಸಿದ ೩೫ ನೆಯ ಅನುನೀತಿಗೆ ಸಮೀಪವಿದೆ. ಶಕುಂತಲೆಯನ್ನು ಕಂಡಬಳಿಕ ನಿರುತ್ಸಾಹಿಯಾದ ದುಷ್ಯಂತನನ್ನು ಬೇಟೆಗಾಗಿ ಪುನಃ ಹುರಿದುಂಬಿಸಲು ಯತ್ನಿಸುವನು ಆತನ ಸೇನಾನಿ.

ಯೆಡೆಯೆಂದು ತೋಱುಕುಡೆ ಪೊಲ-
ಗಿಡಿದಱಿದಂ ಪರಮಪಂಡಿತಂ ಪವನಸುತಂ॥ ೮-೩೫

—ಭೀಮನನ್ನು ಪ್ರೋತ್ಸಾಹಿಸುವ ನೆವದಲ್ಲಿ ತೊಡೆತಟ್ಟಿ ಆತನ ಊರುಭಂಗ ಪ್ರತಿಜ್ಞೆ ಮತ್ತು ದುರ್ಯೋಧನನನ್ನು ಕೆಡವಲು ತೊಡೆಯೇ ತಕ್ಕಸ್ಥಾನವೆಂಬುದನ್ನು ಸೂಚಿಸುವನು. ಭೀಮ ಅದನ್ನು ಗ್ರಹಿಸಿ ದುರ್ಯೋಧನನನ್ನು ಹೊಡೆದು ಕೆಡವುವನು. ಇಲ್ಲಿರುವ ಚಮತ್ಕೃತಿ-ಗದಾಯುದ್ಧಕ್ಕೆ ಆಕರವಿರುವ ಮಹಾಭಾರತದಿಂದಲೇ ಬಂದಿದೆ. ಅಲ್ಲಿ ಈ ಸೂಚನೆ ಕೃಷ್ಣನ ಆದೇಶಾನುಸಾರ ಅರ್ಜುನನಿಂದ ಬಂದಿದ್ದರೆ ಇಲ್ಲಿ ಕೃಷ್ಣನೇ ಹೀಗೆ ಮಾಡಿರುವನು. ಮೂಲದ ಈ ವ್ಯತ್ಯಾಸ ಮೊದಲು ಸಲ ಕಂಡುಬರುವದು ಭಾಸನ ಊರುಭಂಗದಲ್ಲಿ. ಪಂಪಭಾರತದಲ್ಲೂ ಹೀಗೆಯೆ ಇದೆ.

೫. **ಹೇತು**—ಹತ್ತಾರು ಮಾತುಗಳಿಂದ ಒಂದು ಮಾತಿನ ಮೇಲ್ಮೆಯನ್ನು ಸ್ಥಿರಪಡಿಸುವುದು ಹೇತು. ಪಾಂಡವರೊಡನೆ ಸಂಧಿಯನ್ನು ಮಾಡಿಕೊಂಡು ನೆಮ್ಮದಿಯಿಂದ ಬಾಳಬೇಕೆಂಬುದು ಧೃತರಾಷ್ಟ್ರಾದಿಗಳ ಇಚ್ಛೆ. ದುರ್ಯೋಧನ ತನ್ನೆಡೆಗೆ ಬಂದಾಗ ಭೀಷ್ಮನಾದರೂ ಅದನ್ನೇ ಬೋಧಿಸುವನು. ಆದರೆ ದುರ್ಯೋಧನನಿಗೆ ಸಂಧಿಬೇಡ. ಅಭಿಮಾನಧನ ಆತ. ಭೀಷ್ಮ ಸಂಧಿಯ ಮಾತನ್ನೆತ್ತಲು ದುರ್ಯೋಧನ ೧೧ ಪದ್ಯಗಳಲ್ಲಿ ಬೇರೆ ಬೇರೆ ಕಾರಣಗಳನ್ನು ಕೊಟ್ಟು ತನ್ನ ನಿರ್ಧಾರವನ್ನು ಸಮರ್ಥಿಸುವನು. ಅವುಗಳಲ್ಲಿ ಇದೊಂದು—

ಪುದುವಾಳಲ್ಕಣಮಾಗದೆಂತು ಮವರೊಳ್ ಸಂಧಾನಮಂ ಮಾಡಲಾ
ಗದು ನೀಮಿಲ್ಲದೆ ಯಜ್ಞ ಬಿಲ್ಲಗುರುಗಳ್ತಾಮಿಲ್ಲದಾಕರ್ಣ ನಿ।
ಲ್ಲದೆ ದುಶ್ಶಾಸನನಿಲ್ಲದಾರೊಡನೆ ರಾಜ್ಯಂಗೆಯ್ವೆ ನಾರ್ಗೆನ್ನ ಸಂ
ಪದಮಂ ತೋಱುವೆನಾರ್ಗೆ ತೋಱಿ ಮೆಱೆವೆಂ ನಾನಾ ವಿನೋದಂಗಳಂ॥
೫-೫೨

—ಪಾಂಡವರೊಡನೆ ಕೂಡಿಬಾಳುವದು ಸಾಧ್ಯವಿಲ್ಲದಾಗ ಸಂಧಿಯ ಮಾತೇಕೆ? ನೀವಿಲ್ಲದೆ, ಗುರು ದ್ರೋಣನಿಲ್ಲದೆ, ಕರ್ಣನಿಲ್ಲದೆ, ದುಶ್ಶಾಸನನಿಲ್ಲದೆ, ಯಾರೊಡನೆ ರಾಜ್ಯವಾಳಲಿ? ಯಾರಿಗೆ ನನ್ನ ಸಂಪದವನ್ನು ತೋರಿಸಲಿ? ಯಾರೊಂದಿಗೆ ವಿನೋದದಿಂದ ಕಾಲ ಕಳೆಯಲಿ?—ಎಂದು ದುರ್ಯೋಧನ ಭೀಷ್ಮನನ್ನು ಕೇಳುವನು. ಇವೆಲ್ಲ ಮಾತುಗಳ ಗುರಿ ಒಂದೇ—ಸಂಧಿ ಬೇಡ, ಎಂಬುದು.

೬. **ಸಂಶಯ**—ಅನಿಶ್ಚಿತ ಮನಸ್ಥಿತಿ. ಅಶ್ವತ್ಥಾಮ ಗಾಯಗೊಂಡ ದುರ್ಯೋಧನನನ್ನು ಕಾಣಹೊರಟಾಗ ಮಾರ್ಗದಲ್ಲಿ ರಾಜ್ಯಲಕ್ಷ್ಮಿಯನ್ನು ಕಂಡು, ನೀನಾರೆಂದು ಕೇಳುವನು. ಆಕೆ ತಾನು ರಾಜ್ಯಲಕ್ಷ್ಮಿ. ಹರಿಯ ಅಪ್ಪಣೆಯಿಂದ ದುರ್ಯೋಧನನನ್ನು ಬಿಟ್ಟು ಪಾಂಡವರಲ್ಲಿಗೆ ಹೊರಟಿರುವೆನೆಂದು ಹೇಳಿದಾಗ, ಅಶ್ವತ್ಥಾಮ ಅವಳನ್ನು ಜರಿದು ನುಡಿದು,—ಸಂಗ್ರಾಮದಲ್ಲಿ ಪಾಂಡವರಿರಲಿ, ಆ ನಿನ

ಹರಿಯ ಆಟ ಸಹ ನನ್ನೆದುರು ನಡೆಯದು; ಮೊದಲಿದ್ದಲ್ಲಿಗೆ ನಡೆ ಎಂದು ಅವಳನ್ನು ಗದ್ದರಿಸುವನು. ಇದು ಆಕೆಯ ಆ ಸಂದರ್ಭದಲ್ಲಿಯ ಅನಿಶ್ಚಿತ ಮನಸ್ಥಿತಿಯ ಬಣ್ಣನೆ—

ಅತ್ತಲಸುರಾರಿ ಬೆಸಸಿದ-
ನಿತ್ತಲ್ ರುದ್ರಾವತಾರನೆಱೆದೊಯ್ದಪನೆಂ- |
ದತ್ತ ಪುಲಿಯಿತ್ತ ದರಿಯೆಂ-
ದತ್ತಿತ್ತಡಿಯಿಡದೆ ಲಕ್ಷ್ಮಿ ತಳವೆಳಗಾದಳ್ || ೯-೧೬

೭. ದೃಷ್ಟಾಂತ—ಲೋಕಪ್ರಸಿದ್ಧ ಉದಾಹರಣೆಗಳೊಂದಿಗೆ ತನ್ನ ಮಾತಿನ ಯಥಾರ್ಥತೆಯನ್ನು ಬಿಂಬಿಸುವದು ದೃಷ್ಟಾಂತ. ಯುಧಿಷ್ಠಿರನನ್ನು ನ್ಯಾಯಮೂರ್ತಿ, ಸತ್ಯಶೀಲ, ಎಂದು ಮುಂತಾಗಿ ಬಣ್ಣಿಸುವ ಸಂಜಯನ ಮಾತುಗಳನ್ನು ಆಕ್ಷೇಪಿಸಿ ದುರ್ಯೋಧನ—

ಕಳಶಜನನಿಂತು ಕೊಲಿಸಿದ
ಖಳನೆ ಗಡಂ ಧರ್ಮನಂದನಂ ಕ್ರೂರದಿನಂ- |
ಗಳಪೆಸಱಿಂ ಮಱೆಯಿಸಿ ಮಂ-
ಗಳವಾರಂ ವಡ್ಡವಾರಮೆಂಬಂತೆ ವಲಂ || ೩-೨೬

—ಅಶ್ವತ್ಥಾಮ ಮಡಿದನೆಂಬ ಅರ್ಧ ಸತ್ಯವನ್ನು ನುಡಿದು ದ್ರೋಣನನ್ನು ಕೊಲ್ಲಿಸಿದ ಧರ್ಮ ಧರ್ಮನಲ್ಲ, ಅಧರ್ಮ. ಶನಿ ಕುಜರು ಕ್ರೂರರಿದ್ದರೂ ಬಾಧಾ ಪರಿಹಾರಾರ್ಥವಾಗಿ ಅವರ ಆಧಿಪತ್ಯವಿರುವ ಶನಿವಾರ ಕುಜವಾರಗಳನ್ನು ವಡ್ಡ (ಮಹಾ) ವಾರ ಮಂಗಳವಾರ ಎಂದು ಹೇಳುವಂತಿದೆ ಯುಧಿಷ್ಠಿರನ ಈ ಗುಣ ಕೀರ್ತನ, ಎನ್ನುವನು. ಶನಿವಾರ ಕುಜವಾರಗಳನ್ನು ವಡ್ಡವಾರ ಮಂಗಳವಾರ ಎಂದು ಹೇಳುವ ಲೋಕರೂಢಿಯನ್ನು ದೃಷ್ಟಾಂತಿಸಿ ದುರ್ಯೋಧನ—ಈ ರೀತಿ ದ್ರೋಣನನ್ನು ಕೊಲ್ಲಿಸಿದ ಯುಧಿಷ್ಠಿರ ನಿಜವಾಗಿಯೂ ಕ್ರೂರ, ಅಧರ್ಮಿ, ಎಂಬ ತನ್ನ ಅಭಿಪ್ರಾಯವನ್ನು ಮುಂದೊಡ್ಡಿ ಸಂಜಯನ ಬಣ್ಣನೆಯನ್ನು ಹೀಗಳೆದಿರುವನು.

೮. ಪ್ರಾಪ್ತಿ—ಯಾವುದೊಂದು ವಸ್ತು ಅಥವಾ ವಿಷಯದ ಅಂಶ ಮಾತ್ರ ಜ್ಞಾನದಿಂದ ಅದರ ಯಥಾಸ್ಥಿತಿಯನ್ನು ಊಹಿಸುವದು ಪ್ರಾಪ್ತಿ. ಶಾಕುಂತಲದಲ್ಲಿ, ಶಕುಂತಲೆಯ ಹೆಜ್ಜೆಯ ಗುರುತುಗಳಿಂದ ದುಷ್ಯಂತ ಅವಳು ಲತಾಮಂಟಪದಲ್ಲಿ ಇರುವದನ್ನು ಊಹಿಸುವ 'ಅಭ್ಯುನ್ನತಾ ಪುರಸ್ತಾತ್' ಪದ್ಯವನ್ನು ಅಭಿನವಗುಪ್ತ ಇದಕ್ಕೆ ಲಕ್ಷ್ಯವೆಂದು ಕೊಟ್ಟಿರುವನು.[1] ಗದಾಯುದ್ಧದಲ್ಲಿ ದುರ್ಯೋಧನನನ್ನು ಅರಸುತ್ತಿದ್ದ ಕಿರಾತದೂತರು—

---

1. ಶಾಕುಂತಲ, ೩-೬.

ವೈಶಂಪಾಯನ ಸರೋವರಕ್ಕೆ ನೀರ್ಗುಡಿಯೆ ಪೋಗಿ ಹಲಕುಲಿಶ-
ಕಮಲಶಂಖಚಕ್ರ ಲಾಂಛನಮುಪ್ಪಡಿವಜ್ಜೆಯಂ ಕೊಳದ ತಡಿಯೊಳ್
ಕಂಡೆವಲ್ಲಿ ಪೊರಮಟ್ಟ ಪಜ್ಜೆಯಲ್ಲದೆ ಪೊಕ್ಕ ಪಜ್ಜೆಯಂ ಕಾಣೆವು |

—೬-೩೭ ನಂತರದ ಗದ್ಯ

—ಎಂದು ಅರಿಕೆಮಾಡಿದಾಗ ಕೃಷ್ಣ ಅಷ್ಟರಿಂದಲೇ ದುರ್ಯೋಧನ ಆ ಸರೋವರದಲ್ಲಿ ಅಡಗಿರುವದನ್ನು ಊಹಿಸಿ ಪಾಂಡವರೊಡನೆ ಅತ್ತ ಹೋಗುವನು.

೯. ನಿರುಕ್ತ--ವ್ಯುತ್ಪತ್ತಿ, ಅರ್ಥಗಾರಿಕೆ, ಸ್ಪಷ್ಟೀಕರಣ. ಇದರಲ್ಲಿ ಎರಡು ಭೇದಗಳು--ತಥ್ಯ, ಅತಥ್ಯ. ಮೊದಲಿನದು ವಸ್ತುಸ್ಥಿತಿಗೆ ಹೊಂದಿಕೊಂಡಿರುತ್ತದೆ. ಎರಡನೆಯದು ಕಾಲ್ಪನಿಕ. ಯುದ್ಧದ ದುರಂತವನ್ನು ತಪ್ಪಿಸಲು ಕೃಷ್ಣ ಕೌರವರೆಡೆ ಹೋಗಿ, ಕುಶಸ್ಥಳ (ಇಂದ್ರಪ್ರಸ್ಥ ?), ವೃಕಪ್ರಸ್ಥ, ಜಯಂತ, ವಾರಣಾವತ ಮತ್ತು ಯಾವುದೇ ಇನ್ನೊಂದು ಊರುಗಳನ್ನು ಕೊಟ್ಟರೆ ಸಾಕು ; ಪಾಂಡವರು ಅಷ್ಟರಿಂದಲೇ ತೃಪ್ತರಾಗುವರು, ಎಂದು ತಿಳಿಸುತ್ತಾನೆ. ಕೌರವನಾಶದ ಪ್ರತಿಜ್ಞೆ ಮಾಡಿದ ಭೀಮ ಇದರಿಂದ ಕಿಡಿಕಿಡಿಯಾಗುವನು. ಆಗ ಸಹದೇವ, ಈ ಬೇಡಿಕೆ ಸಂಧಿಗಾಗಿ ಅಲ್ಲ; ಈ ಊರುಗಳು ಜತುಗ್ರಹಜ್ವಲನ, ವಿಷದ ಲಡ್ಡುಗೆ, ದ್ಯೂತ, ಸಭಾಪ್ರತಾರಣಾದಿ ಕೌರವರ ಅಕೃತ್ಯಗಳ ದ್ಯೋತಕವಿವೆ; ಕೌರವರು ಇದಕ್ಕೆ ಒಪ್ಪುವದಿಲ್ಲ; ಆದರೆ ಜನರಲ್ಲಿ ಪಾಂಡವರು ಅಲ್ಪಸಂತೋಷಿಗಳು; ಅವರಿಗೆ ಯುದ್ಧ ಬೇಡ; ಐದು ಊರುಗಳನ್ನು ಕೇಳಿದರೂ ಕೌರವರು ಅಷ್ಟು ಸಹ ಕೊಡಲಿಲ್ಲ, ಎಂಬ ಅಭಿಪ್ರಾಯ ನೆಲೆಗೊಳ್ಳುವದು, ಎಂದು ಮುಂತಾಗಿ ಭೀಮನನ್ನು ಸಮಾಧಾನಪಡಿಸಲು ಯತ್ನಿಸುವನು. ಇದೆಲ್ಲ ಭಟ್ಟ ನಾರಾಯಣನ ನಿರುಕ್ತ. ವೇಣೀಸಂಹಾರದಲ್ಲಿ ಬಂದಿದೆ[1] ಇದಕ್ಕೆ ಮೂಲಭಾರತದ ಬೆಂಬಲವಿಲ್ಲ. ಅತಏವ ಅತಥ್ಯ. ಭಟ್ಟನಾರಾಯಣನ ಈ ನಿರುಕ್ತವನ್ನು ಗದಾಯುದ್ಧದಲ್ಲಿ ರನ್ನ--

ಅಂದು ಕುಶಸ್ಥಲಂ ಜತುಗೃಹಜ್ವಲನಕ್ಕೆ ಜಯಂತಮಂತೆ ಕಾ-
ಳಿಂದಿ ವೃಕಸ್ಥಳಂ ವಿಷದಲಡ್ಡುಗೆಗಾದುದು ವಾರಣಾವತಂ |
ಸಂದಸಭಾಪ್ರತಾರಣಕೆ ಕಾರಣಮೆಂದಱಿಪಲ್ಕೆ ಬೇಡಿದರ್
ಸಂಧಿಗೆಯಲ್ಕೆ ಬೇಡಿದರೆ ಪಾಂಡುತನೂಭವರಯ್ದು ಬಾಡಮಂ || ೩-೨೧

—ಪಾಂಡವರ ಗುಣಕೀರ್ತನದಲ್ಲಿ ಸಂಜಯನ ನಿರುಕ್ತವನ್ನಾಗಿಸಿ ಆ ಮೂಲಕ ಪಾಂಡವರು ಸಾಮಾನ್ಯರಲ್ಲ ಎಂಬುದನ್ನು ವ್ಯಕ್ತಪಡಿಸಿರುವನು.

ಇನ್ನೊಂದೆಡೆ ದುರ್ಯೋಧನ—

ಅನುಪಮಫಲದೆ ಜನಾರ್ದನ-
ನೆನಲಕ್ಕುಂ ಗುರುಜನಾರ್ದನಂ ಬಂಧು ಜನಾ- |

1. ವೇಣೀ, ೧-೬ ಮತ್ತು ಮುಂದೆ.

ರ್ದನನೆಂದು ಪಾಪಫಲದಿಂ
ನಿನಗಾಯ್ತು ಪೆಸರ್ನಿರರ್ಥಕಂ ವಾಕ್ಯಾರ್ಥಂ ॥ ೭–೫೦

—ಈ ಪದ್ಯದಲ್ಲಿ ಗುರುಜನಘಾತಕ, ಬಂಧುಜನ ಘಾತಕ ಎಂದು ಕೃಷ್ಣನಿಗಿರುವ ಜನಾರ್ದನ ಹೆಸರಿನ ವ್ಯುತ್ಪತ್ತಿಯನ್ನು ಬಿಡಿಸಿ ಅವನನ್ನು ಮೂದಲಿಸಿರುವನು. ಇದಾದರೂ ಅತಥ್ಯನಿರುಕ್ತ.

೧೦. ಸಿದ್ಧಿ—ಸಾಮಾನ್ಯ ಇಲ್ಲವೆ ಅಪ್ರಸಿದ್ಧ ವಿಷಯ ಅಥವಾ ವ್ಯಕ್ತಿಯನ್ನು ಪ್ರಸಿದ್ಧ ವಿಷಯ ವ್ಯಕ್ತಿಗಳೊಂದಿಗೆ ಸೇರಿಸಿ ಆ ಮೂಲಕ ಮೊದಲಿನದರ ಮೇಲ್ಮೆಯನ್ನು ಹೆಚ್ಚಿಸುವದು ಸಿದ್ಧಿ. ಸಮಗ್ರ ಗದಾಯುದ್ಧವೇ ಇದಕ್ಕೆ ಉದಾಹರಣೆಯಾಗುವಂತಿದೆ. ಭೀಮನೆದುರು ಸತ್ಯಾಶ್ರಯ ಇರಿವಬೆಡಂಗ ತೀರ ಸಾಮಾನ್ಯವ್ಯಕ್ತಿ. ಆದರೂ ರನ್ನ ಅವರೀರ್ವರಲ್ಲಿ ಅಭೇದವನ್ನು ಕಲ್ಪಿಸಿ ಕೃತಕಾರ್ಯನಾಗಿರುವನು. ಇದೊಂದು ಉದಾಹರಣೆ—

ಸತ್ಯಪ್ರತಿಜ್ಞನೆನೆ ಕುರು-
ಪತ್ಯೂರು ಕಿರೀಟಭಂಗಮಂ ಪಡೆದು ಜಗ- ।
ತ್ಸ್ತುತ್ಯಕೃತಕೃತ್ಯನೆನಿಸದೆ
ಸತ್ಯಾಶ್ರಯವೆಸರ್ಗೆ ಮುಯ್ಯನಾಂಪನೆ ಭೀಮಂ ॥ ೧–೬೪

—ಸತ್ಯಪ್ರತಿಜ್ಞನಾದ ಭೀಮನಿಗೆ ಕುರುಪತಿಯ ತೊಡಗಳನ್ನು ಮುರಿದಲ್ಲದೆ ಆತನಿಗಿರುವ 'ಸತ್ಯಾಶ್ರಯ' ಎಂಬ ಹೆಸರು ಸಾರ್ಥಕವಾಗದು ಎಂಬ ಭೀಮನ ಮಾತಿನಲ್ಲಿ ಭೀಮ ಸತ್ಯಾಶ್ರಯ ಒಬ್ಬರಿಂದೊಬ್ಬರು ಅಭಿನ್ನರೆಂದು ಸೂಚಿಸಿರುವನು, ರನ್ನ.

೧೧. **ಅತಿಶಯ**—ಉತ್ತಮ ಗುಣಗಳನ್ನು ವಿಶೇಷ ರೀತಿಯಿಂದ ಬಣ್ಣಿಸುವದು ಅತಿಶಯ. ಕರ್ಣ ಅಸಾಮಾನ್ಯ ಶೂರನೆಂಬುದು ಲೋಕಪ್ರಸಿದ್ಧ. ಆತ ಅರ್ಜುನನಿಂದ ಹತನಾದನೆಂಬುದು ಅಷ್ಟೇ ಲೋಕಪ್ರಸಿದ್ಧ. ಆದರೆ ಈ ಪದ್ಯದಲ್ಲಿ ದುರ್ಯೋಧನ—

ಪರಶುಧರಂ ಚಕ್ರಧರಂ
ಸುರಪತಿ ಭೂಕಾಂತೆ ಕೊಂತಿಯೆಂದೀ ಪೇಟ್ವ-।
ಯ್ವರೆ ಕೂಡಿ ನಿನ್ನ ಕೊಂದ-
ರ್ನರನೊರ್ವನೆ ಕೊಂದನಲ್ಲನಂಗಾಧಿಪತೀ ॥ ೫–೨೬

—ಅರ್ಜುನನೋರ್ವನೇ ನಿನ್ನನ್ನು ಕೊಂದನೆಂಬುದು ಸರಿಯಲ್ಲ. ಪರಶುರಾಮ, ಕೃಷ್ಣ, ಇಂದ್ರ, ಭೂಮಿ, ಕುಂತಿ, ಈ ಐವರು ಕೂಡಿ ನಿನ್ನನ್ನು ಕೊಂದರು; ಅರ್ಜುನ ನಿಮಿತ್ತ ಮಾತ್ರ, ಎಂದು ಅರ್ಜುನನನ್ನು ಲಘುವಾಗಿಸಿ ಕರ್ಣನ ಶೌರ್ಯಾತಿಶಯವನ್ನು ಬಣ್ಣಿಸಿ ಪ್ರತಾಪಿಸಿರುವನು.

೧೨. ಪದೋಚ್ಚಯ—ಒಂದೇ ಅರ್ಥವನ್ನು ಕೊಡುವ ಪದಗಳ ಸಂಯೋಜನೆಯಿಂದ ಪ್ರಶಂಸಿಸುವದು ಪದೋಚ್ಚಯ. ಗದಾಯುದ್ಧದಲ್ಲಿ ಸಂಜಯ—

ದೊಣೆಯಿಂದಂ ತೆಗೆವಾಗಳೊಂದು ತುಡುವಾಗಳ್ಪತ್ತು ಬಾಣಂ ಧನು-
ರ್ಗುಣದಿಂದಂ ಬಿಡುವಲ್ಲಿ ನೂಱು ಪರಿವಾಗಳ್ಸಾಸಿರಂ ವೈರಿಮಾ- |
ರ್ಗಣಮುಂ ಛೇದಿಸುವಲ್ಲಿ ಲಕ್ಷ ನಡುವಾಗಳ್ಕೋಟಿ ಸೇನಾಂಗದೊಳ್
ಗಣನಾತೀತಮಿದೆಂದೊಡೇವೊಗೞ್ವುದೋ ಬಿಲ್ಬಲ್ಮೆಯಂ ಪಾರ್ಥನಾ || ೩-೩

—ಬತ್ತಳಿಕೆಯಿಂದ ತೆಗೆವಾಗ ಒಂದು, ತೊಡುವಾಗ ೧೦, ಬಿಡುವಾಗ ೧೦೦, ರಭಸದಿಂದ ಮುನ್ನುಗ್ಗುವಾಗ ೧೦೦೦, ವೈರಿ ಬಾಣಗಳನ್ನು ಕತ್ತರಿಸುವಾಗ ಲಕ್ಷ, ನಡುವಾಗ ಕೋಟಿ, ಶತ್ರುಸೈನ್ಯದಲ್ಲಿ ಹಾಹಾಕಾರವನ್ನು ಎಬ್ಬಿಸುವಾಗ ಗಣನಾತೀತ, ಎಂದು ಅರ್ಜುನನ ಬಿಲ್ಬಲ್ಮೆಯನ್ನು ಬಣ್ಣಿಸಿರುವನು. ಇಲ್ಲಿ ಯಾವುದೇ ಅಲಂಕಾರವಿಲ್ಲ. ೧, ೧೦, ೧೦೦, ಇತ್ಯಾದಿ ಪದಗಳು ಅರ್ಥದಲ್ಲಿ ಒಂದೇ ಅಂದರೆ ಸಂಖ್ಯಾವಾಚಕಗಳಿದ್ದರೂ ಒಂದರಿಂದ ಇನ್ನೊಂದು ಉತ್ತರೋತ್ತರ ಹೆಚ್ಚುತ್ತ ಕೊನೆಗೆ ಅಗಣಿತವಾಗುವವೆಂಬ ಮಾತಿನ ಚಮತ್ಕಾರ ಮೆಚ್ಚುವಂಥಹದಿದೆ.

೧೩. ಪೃಚ್ಛಾ—ಕೋಪ ಶೋಕಾದಿ ಭಾವೋದ್ರಿಕ್ತ ಮನಸ್ಥಿತಿಯಲ್ಲಿ ತನ್ನನ್ನು ತಾನೇ ಇಲ್ಲವೆ ಅನ್ಯರನ್ನು ಪ್ರಶ್ನಿಸುವದು ಪೃಚ್ಛಾ. ವೇಣೀಸಂಹಾರದಲ್ಲಿಯ 'ಕರ್ತಾದ್ಯೂತಚ್ಛಲಾನಾಂ' ಪದ್ಯವನ್ನು[1] ಅಭಿನವಗುಪ್ತ ಇದಕ್ಕೆ ಲಕ್ಷ್ಯವೆಂದು ಕೊಟ್ಟಿರುವನು. ಸಮರಾಂಗಣದಲ್ಲಿ ಸುಯೋಧನನನ್ನು ಕಾಣದೆ ಭೀಮ—ಕರ್ಣನ ಮಿತ್ರ, ೧೦೦ ಕೌರವರ ಹಿರಿಯ, ಯುಧಿಷ್ಠಿರನನ್ನು ಜೂಜಿಗೆಳೆದ, ಅರಗಿನ ಮನೆಗೆ ಬೆಂಕಿಯನ್ನಿಟ್ಟ, ದ್ರೌಪದಿಯ ಮಾನಭಂಗ ಮಾಡಿದ, ಪಾಂಡವರನ್ನು ದಾಸರೆಂದು ಬಗೆದ ನಿಮ್ಮರಸು ದುರ್ಯೋಧನ ಎಲ್ಲಿರುವನು? ಎಂದು ಶಿಬಿರರಕ್ಷಕರನ್ನು ಗರ್ಜಿಸಿ ಕೇಳುವನು. ಗದಾಯುದ್ಧದಲ್ಲಿ ಇದೇ ಪದ್ಯ—

ಧೃತ-ರಾಷ್ಟ್ರಾಪತ್ಯ ಕಂಜಪ್ರಿಯ ಸುತ-ಸಖನೇಕಾದಶಾಕ್ಷೋಹಿಣೀಶಂ
ಕೃತಕದ್ಯೂತ ಸ್ವನಾಥೀಕೃತಯಮಸುತ ಭೀಮಾರ್ಜುನಂ ದ್ರೋಣ ಭೀಷ್ಮೋ-|
ಚಿತವಾಕ್ಯದ್ವೇಷಿ ಕೃಷ್ಣಾಂಬರ ಕಬರಿಹರಂ ಶೋಕತೀವ್ರಾಗ್ನಿದಗ್ಧಂ
ಸುತಶೋಕಾಕ್ರಾಂತನೆಲ್ಲಿರ್ದನೊ ನೃಪತಿಲಕಂ ನಿಮ್ಮರಾಜಾಧಿರಾಜಂ || ೬-೩೦

—ಸ್ವಲ್ಪ ರೂಪಾಂತರ ಹೊಂದಿಬಂದಿದೆ.

೧೪. ಸಾರೂಪ್ಯ—ಚಿತ್ತಕ್ಷೋಭದಿಂದ ಅಸತ್ಯವನ್ನು ಸತ್ಯವೆಂದು ಬಗೆದು ವರ್ತಿಸುವದು ಸಾರೂಪ್ಯ. ವೇಣೀಸಂಹಾರದಲ್ಲಿ ಭೀಮ ಗದಾಯುದ್ಧದಲ್ಲಿ ಹತನಾದನೆಂಬ ಅಸತ್ಯ ವಾರ್ತೆಯನ್ನು ಸತ್ಯವೆಂದು ನಂಬಿ ದ್ರೌಪದಿ ಯುಧಿಷ್ಠಿರರು ಅಗ್ನಿ

1. ವೇಣೀ, ೫-೨೬.

ಪ್ರವೇಶಕ್ಕೆ ಸಿದ್ಧರಾದಾಗ ಭೀಮ ಬರುವನು. ಆದರೆ ಯುಧಿಷ್ಠಿರನು ದುರ್ಯೋಧನನೇ ತನ್ನನ್ನು ಹಂಗಿಸಲು ಬಂದನೆಂದು ಭ್ರಮಿಸಿ ಕೊಲ್ಲಬೇಕೆಂದು ಮುಗಿಬಿದ್ದು ಅವನನ್ನು ಹಿಡಿದುಕೊಳ್ಳುವನು.[1] ಗದಾಯುದ್ಧದಲ್ಲಿ ಧೃತರಾಷ್ಟ್ರ ಗಾಂಧಾರಿಯರು ದುರ್ಯೋಧನನನ್ನು ಕಾಣಲು ರಣಭೂಮಿಗೆ ಬಂದಾಗ ರನ್ನ ಈ ಬಗೆಯ ಸನ್ನಿವೇಶವನ್ನು ಸೃಷ್ಟಿಸಿರುವನು. ಅವರು ತನ್ನತ್ತ ಬರುವದನ್ನು ತಿಳಿದು ದುಃಖ ಉಮ್ಮಳಿಸಿ ದುರ್ಯೋಧನ ಮೂರ್ಛೆಹೋಗುವನು. ಮಡಿದನೆಂಬ ಭ್ರಾಂತಿಯಿಂದ—

ಗಾಂಧಾರಿ— ಎಮಗಂಧಯಷ್ಟಿಯಾಗಿ-
ರ್ದೆಮಗನೆ ನೀನುಳ್ಳೊಡೆಲ್ಲಮೊಳವೆಂದಿರೆ ನಿ- |
ನ್ನುಮನಿರಿಸದೆ ಕುರುವಂಶಾ-
ನಿಮಿತ್ತರಿಪು ಪಾಶಪಾಣಿ ಸವಿನೋಡಿದನೇ || ೩-೭೯

ಧೃತರಾಷ್ಟ್ರ—ಹಾ! ಕುರುಕುಲ ಚೂಡಾಮಣಿ
ಹಾ! ಕುರುಕುಲ ಚಕ್ರವರ್ತಿ ಹಾ! ಸಕಲಧರಿ- |
ತ್ರೀ ಕಾಂತ ನಿನ್ನುಮಂ ಪರ-
ಲೋಕಕಟ್ಟಿದನೆ ಕಾಯ್ದು ಮಾಯ್ದು ವಿಧಾತ್ರಂ || ೩-೮೨

—ಇಬ್ಬರೂ ಪ್ರಲಾಪಿಸುವರು.

೧೫. ಮನೋರಥ— ತಮ್ಮ ಮನೋಗತವನ್ನು ನೇರವಾಗಿ ತಿಳಿಸದೆ ಅನ್ಯರೀತಿಯಿಂದ ವ್ಯಕ್ತಪಡಿಸುವುದು ಮನೋರಥ. ಧ್ವನಿಪ್ರಸ್ಥಾನಕರ ಮೇರೆಗೆ 'ಪ್ರತೀಯಮಾನ' ಅರ್ಥದಿಂದ ಧ್ವನಿಸುವ ಅಭಿಪ್ರಾಯ. ಕವಿಗೆ ಕೀರ್ತಿ ಧನ ಎರಡೂ ಬೇಕು; ಗುಣಾಭಿಮಾನಿ ಮತ್ತು ಉದಾರ ಆಶ್ರಯದಾತನಿಂದ ಮಾತ್ರ ಇವು ದೊರೆಯಬಲ್ಲವು, ಎಂಬುದು ಸರ್ವೇಸಾಮಾನ್ಯ. ರನ್ನನಾದರೂ ಇದಕ್ಕೆ ಅಪವಾದವಾಗಲಾರ. ಈ ಮಾತನ್ನು ನೇರವಾಗಿ ತಿಳಿಸದೆ—

ಶ್ರೀಯುತನೊಳುದಾರತೆ ವಾ-
ಕ್ಶ್ರೀಯುತನೊಳಮತ್ಸರತ್ವ ಮಾಗದುದಾರಂ |
ಶ್ರೀಯುತನಮತ್ಸರಂ ವಾ-
ಕ್ಶ್ರೀಯುತನಾದೊಡೆ ಕೃತಾರ್ಥರಾಗರೆ ಕವಿಗಳ್ || ೧/೪೯

—ಸಾಮಾನ್ಯ ನೀತಿ ವಾಕ್ಯದಂತಿರುವ ಈ ಮಾತುಗಳಲ್ಲಿ ಆತ ತನ್ನ ಮನೋಗತವನ್ನು ತಿಳಿಸಿರುವನು. ಜೊತೆಗೆ ತನ್ನ ಈ ಮನೋಗತವನ್ನು ಪೂರೈಸಲು ಪ್ರವೃತ್ತರಾಗುವಂತೆ ಆಶ್ರಯದಾತ ತೈಲಪ ಇರಿವಬೆಡಂಗರನ್ನು ಪ್ರಚೋದಿಸಿರುವನು.

1. ವೇಣೀ, ೬/೩೭ ನಂತರ ಗದ್ಯ.

೧೬. **ಗುಣಕೀರ್ತನ**--ವ್ಯಕ್ತಿ ಇಲ್ಲವೆ ವಸ್ತುವಿನ ಬೇರೆ ಬೇರೆ ಗುಣಗಳನ್ನು ತತ್ಸಮ ಗುಣಗಳಿರುವ ವ್ಯಕ್ತಿ/ವಸ್ತುಗಳೊಂದಿಗೆ ಸಮೀಕರಿಸಿ ಹೊಗಳುವುದು ಗುಣಕೀರ್ತನ. ರನ್ನ ಈ ಪದ್ಯದಲ್ಲಿ–

ಖಳ ದುಶ್ಶಾಸನ ಕೃಷ್ಣಲೋಹಿತ ಜಲಾಶ್ಲಿಷ್ಟಂ ಕುರುಪ್ರೋದ್ಭವ
ಪ್ರಳಯಜ್ವಾಲಿ ಸುಯೋಧನೋರು ಮುಕುಟೋದ್ಘಟ್ಟ ಪ್ರತಿಜ್ಞಾಕ್ಷರಾ |
ವಳಿವಿನ್ಯಸ್ತ ವಿಶಾಳನಿಶ್ಚಳ ಶಿಲಾಸ್ತಂಭಂ ಕುರುಕ್ಷೇತ್ರದೊಳ್
ಪ್ರಳಯೋಗ್ರಾಂತಕನಂತ ಗುರ್ವನೊಳಕೊಂಡಿರ್ದಂ ಹಿಡಿಬಾಂತಕಂ || ೧/೫೫

— ಕೌರವ ವಿನಾಶದಲ್ಲಿ ಅಗ್ನಿ, ಪ್ರತಿಜ್ಞಾನಿಷ್ಠೆಯಲ್ಲಿ ಶಿಲಾಸ್ತಂಭ, ಶತ್ರು ಸಂಹಾರದಲ್ಲಿ ಯಮ, ಎಂದು ಭೀಮನನ್ನು ಪ್ರಶಂಸಿರುವನು.

೧೭. **ಪ್ರಿಯೋಕ್ತಿ**– ಕೋಪ ಬರುವಂತಿದ್ದರೂ ಹರ್ಷದಲ್ಲಿ ಪರ್ಯವಸಾನಗುವ ಮಾತು ಪ್ರಿಯೋಕ್ತಿ. ಅಪಮಾನದಿಂದ ಬೆಂದು ಬೆಂಡಾದ ದ್ರೌಪದಿಗೆ ದುರ್ಯೋಧನನ ತೊಡೆಗಳನ್ನು ಮುರಿದೇ ತೀರುವೆನೆಂಬ ಭೀಮನ ಪ್ರತಿಜ್ಞೆಯಿಂದ ಪೂರ್ಣ ಸಮಾಧಾನವಾಗುವುದಿಲ್ಲ. ಆಕೆ ಮತ್ತೆ ಮತ್ತೆ ಅವನನ್ನು ಕೆಣಕುವಳು. ಆಗ ಆಕೆಯ ಮೇಳದ ಕೆಳದಿ ಬುದ್ಧಿಮತಿ (ವೇಣೀ ಸಂಹಾರದಲ್ಲಿ ದ್ರೌಪದಿಯ ಕೆಳದಿಯ ಹೆಸರಾದರೂ ಇದೇ) ಮತ್ತು ಭೀಮನ ಪರಿಹಾಸಪ್ರಿಯ ನರ್ಮಸಚಿವ ವಿದೂಷಕ ಇಬ್ಬರೂ ಭೀಮ ಸತ್ಯಪ್ರತಿಜ್ಞನೆಂಬುದನ್ನು ಪುನಃ ದೃಢಪಡಿಸುವರು. ಆ ಸಂದರ್ಭದಲ್ಲಿ ನರ್ಮಸಚಿವ–

ಕುರುಕುಲಮುಮಂ ನುಂಗಿದೆ ಯಿ–
ನ್ನರೆಬರುಮುಂ ನುಂಗಲಿರ್ಪೆ ಕುರುಪತಿಯುಮನಿ–|
ನ್ನೆರಡನೆಯ ಹಿಡಿಂಬಿಯನೆ–
ಮ್ಮರಸಂ ರಕ್ಕಸಿಯನೆಲ್ಲಿ ತಂದನೊ ನಿನ್ನಂ ||೨/೯

– ಕುರುಕುಲವನ್ನು ನುಂಗಿದೆ ; ಕುರುಪತಿಯನ್ನು ನುಂಗಲಿರುವೆ ; ಎರಡನೆಯ ಹಿಡಿಂಬೆಯಂತಿರುವ ನಿನ್ನಂಥ ರಕ್ಕಸಿಯನ್ನು ನಮ್ಮರಸ ಭೀಮ ಎಲ್ಲಿಂದ ತಂದನೊ, ಎಂದು ಹಾಸ್ಯ ಮಾಡುತ್ತಾನೆ. ಎರಡನೆಯ ಹಿಡಂಬಿ, ರಕ್ಕಸಿ, ಎಂದುದಕ್ಕೆ ದ್ರೌಪದಿಗೆ ಕೋಪವಿಲ್ಲ. ' ಅಳುತ್ತ ಬಂದ ತನ್ನಂ ನಗುತ್ತಂ ಪೋಪಂತೆ ಸಂತೋಷಂ ಮಾಡಿಸಿದುದ ಕೊಡಂಬಟ್ಟು ಚಾರುಹಾಸಿನಿ ನಿಜವಾಸಕ್ಕೆ ಪೋಪಳ್ ', ಎಂದು ರನ್ನ ಈ ಸನ್ನಿವೇಶವನ್ನು ಉಪಸಂಹರಿಸಿರುವನು.

೧೮. **ಅಭಿಮಾನ**– ಹಿರಿಯರು ಹಿತಚಿಂತಕರು ಎಷ್ಟು ಹೇಳಿದರೂ ಕೇಳದೆ ತನ್ನ ಹಟವನ್ನು ಸಾಧಿಸುವುದು ಅಭಿಮಾನ. ಗದಾಯುದ್ಧದಲ್ಲಿ ದುರ್ಯೋಧನ ಅಭಿಮಾನದ ಈ ಬಗೆಯ ಲಕ್ಷಣಕ್ಕನುಸರಿಸಿ ಸೃಷ್ಟಿಸಲ್ಪಟ್ಟಿರುವನು ಎಂದರೆ ತಪ್ಪಾಗದು. ' ಅಭಿಮಾನಧನನು ಮೆನಿಸಿದ ಸುಯೋಧನಂ ' ಎಂದೇ ರನ್ನ ನಮಗೆ ಆತನ

ಪರಿಚಯ ಮಾಡಿಕೊಟ್ಟಿರುವನು. ಸಂಧಿಯನ್ನು ಮಾಡಿಕೊಳ್ಳೆಂಬ ಸಂಜಯ, ಧೃತ ರಾಷ್ಟ್ರ ಗಾಂಧಾರಿಯರ ಸಲಹೆಯನ್ನು ನಿರಾಕರಿಸಿ ಭೀಷ್ಮನಲ್ಲಿ ಬಂದಾಗ ಆತ ಸಹ ಅದನ್ನೇ ಉಪದೇಶಿಸುವನು. ಆಗ ದುರ್ಯೋಧನ–

ಖಂಡಿತಮೆನಿಪ್ಪ ಪರಮಹಿ–
ಮಂಡಲ ಧವಳಾತಪತ್ರ ಸಂಪದಮೆನಗೇ |
ಭಂಡಮದನೊಲ್ಲೆನೊಲ್ಲೆನ–
ಖಂಡಿತಮಭಿಮಾನಮದನೆ ಬಲ್ಪಿಡಿವಿಡಿವೆಂ || ೫–೫೩

ಸಂಧಿಯನ್ನು ಮಾಡಿಕೊಂಡು ಬರಬಹುದಾದ ವಿಭಜಿತ (ಖಂಡಿತ) ರಾಜ್ಯ ನನಗೆ ಬೇಡ; ಈಗ ಉಳಿದಿರುವುದು ಅಭಿಮಾನವೊಂದೇ; ಅದು ಅಖಂಡವಿದೆ; ಅದನ್ನೇ ಹಿಡಿದು ಮುಂದರಿಯುವೆನು, ಎನ್ನುವನು. ದುರ್ಯೋಧನನ ಸ್ವಾಭಿಮಾನದ ಈ ಮಾತನ್ನು ಮೆಚ್ಚಿಕೊಂಡರೂ ಭೀಷ್ಮನಿಗೆ ಅದರಿಂದ ವಿಷಾದವಾಗುವುದು. ಕೌರವರ ಅಕೃತ್ಯಗಳಿಂದ ಬೆಳೆದು ಹೆಮ್ಮರವಾಗಿ ನಿಂತ ವೈರವೃಕ್ಷ ದುರ್ಯೋಧನನ ಊರು ಭಂಗ ರೂಪದಲ್ಲಿ ಫಲಿಸದೆ ಬಿಡದೆಂದು ಉಸುರ್ಗರೆಯುವನು. ಭೀಷ್ಮನ ಈ ಬಗೆಯ ಮಾತುಗಳು ವೇಣೀಸಂಹಾರದಲ್ಲಿ ಕರ್ಣನ ದೂತ ಸುಂದರಕನ ಮುಖದಿಂದ ಬಂದಿವೆ.[1]

೧೯. ಪ್ರೋತ್ಸಾಹನ– ಕಾರ್ಯೋನ್ಮುಖನಾಗಿಸಲು ಅಪ್ರತ್ಯಕ್ಷ ರೀತಿಯಿಂದ ಉತ್ತೇಜನ ಕೊಡುವುದು ಪ್ರೋತ್ಸಾಹನ. ಭೀಮ ದುರ್ಯೋಧನರು ಯುದ್ಧಕ್ಕೆ ನಿಂತಾಗ ಸಹ ಧರ್ಮ ಕೃಷ್ಣರು : ಈಗಾದರೂ ಸಂಧಿಗೊಪ್ಪು ಎಂದು ದುರ್ಯೋಧನನ ಮನವೊಲಿಸಲು ಯತ್ನಿಸುವರು. ಪ್ರತಿಜ್ಞಾಪೂರ್ತಿಗಾಗಿ ಆತುರಗೊಂಡ ಭೀಮ ನಡುವೆ ಬಂದು–

ನೀನಯ್ದು ಬಾಡದೊಳ್ಸಂ–
ಧಾನಂ ಮಾಡಲ್ಕೆ ಪೋದೊಡಲ್ಲದೆ ಮುನ್ನೀ |
ಮಾನಧನನೆಯ್ದೆ ನಿಜತನು–
ಜಾನುಜರಟ್ಟಾಡೆ ಸಂಧಿಯಂ ಮಾಡುವನೇ || ೭–೪೭

—ಐದು ಗ್ರಾಮಗಳನ್ನು ಕೇಳಿದಾಗ ಒಪ್ಪದಿದ್ದ ಮತ್ತು ಈಗ ಎಲ್ಲರನ್ನು ಕಳೆದುಕೊಂಡ ಈ 'ಮಾನಧನ' ಸಂಧಿಗೊಪ್ಪುವನೇ ಎನ್ನುವನು. ಭೀಮನ ಈ ಪ್ರಶ್ನೆ ಕೃಷ್ಣನನ್ನು ಕುರಿತಿದ್ದರೂ ಇದರ ನಿಜವಾದ ಗುರಿ ದುರ್ಯೋಧನನ ಅಭಿಮಾನವನ್ನು ಮತ್ತಿಷ್ಟು ಕೆರಳಿಸಿ ಅವನನ್ನು ಯುದ್ಧಕ್ಕೆಳೆಯುವದು. ಉದ್ದೇಶಪೂರ್ವಕವಿರುವ ಭೀಮನ ಈ 'ಪ್ರೋತ್ಸಾಹನ' ಮುಂದಿನ ಪದ್ಯದಲ್ಲಿರುವ—

ಇನತನಯನ ನೇರ್ಪಿಂಗ-
ರ್ಜುನನಂ ಮುಂಕೊಳ್ವೆನೆನ್ನ ತಮ್ಮನ ನೇರ್ಪಿಂ- |

1. ವೇಣೀ, ೪/೯ ನಂತರ.

ಗನಿಲಜನಂ ಕೊಲ್ವೆಂ ಕಮ-
ಲನಾಭನೇರ್ಪಿಂಗೆ ನೇರ್ಪುಗೊಳ್ಳದೆ ಮಾಣೆಂ ॥ ೭-೪೭

—ದುರ್ಯೋಧನನ ಈ ಉತ್ತರದಲ್ಲಿ ಪೂರ್ಣ ಫಲಿಸಿದೆ.

೨೦. **ಗುಣಾನುವಾದ**—ದೊಡ್ಡವರೊಡನೆ ಸಣ್ಣವರನ್ನು ಸರಿದೂಗಿಸಿ ಸ್ತುತಿಸುವದು ಗುಣಾನುವಾದ. ಗದಾಯುದ್ಧದ ರಚನೆಯೇ ಈ ಬಗೆಯದು. ಪರಾಂಬರಿಸಿರಿ—

ಎನಿಸಿದ ಸತ್ಯಾಶ್ರಯ ದೇ-
ವನೆ ಪೃಥ್ವೀವಲ್ಲಭಂ ಕಥಾನಾಯಕನಾ- ।
ಗನಿಲಜನೊಳ್ಪೋಲಿಸಿ ಪೇ-
ಳ್ದನೀ ಗದಾಯುದ್ಧಮಂ ಮಹಾಕವಿ ರನ್ನಂ ॥ ೧-೩೧

—ಭೀಮ ದಿವ್ಯಮಾನವ. ಸತ್ಯಾಶ್ರಯ ಇರಿವಬೆಡಂಗ ಸಾಮಾನ್ಯ ಮಾನವ. ಆದರೂ ರನ್ನ ಅವರೀರ್ವರನ್ನು ಹೋಲಿಸಿ, ಒಂದು ಹೆಜ್ಜೆ ಮುಂದೆ ಹೋಗಿ, ಅವರೀರ್ವರಲ್ಲಿ ಅಭೇದವನ್ನು ಕಲ್ಪಿಸಿ ತನ್ನ ಕಥಾನಕವನ್ನು ರಚಿಸಿರುವನು. ಇದಕ್ಕೂ ೧ನೆಯ ಲಕ್ಷಣ ಸಿದ್ಧಿಗೂ ವಿಶೇಷ ವ್ಯತ್ಯಾಸವಿಲ್ಲ.

೨೧. **ಮಿಥ್ಯಾಧ್ಯವಸಾಯ**—ಅಶಕ್ಯ ಅವಾಸ್ತವ ಅಭಿಪ್ರಾಯವನ್ನು ಅಂಥದೇ ಆಧಾರದೊಂದಿಗೆ ಪ್ರತಿಪಾದಿಸುವ ಮಾತಿನ ಚಮತ್ಕಾರ ಮಿಥ್ಯಾಧ್ಯವಸಾಯ. ಲಾಕ್ಷಣಿಕರು ಇದಕ್ಕೆ ಶಾಕುಂತಲದಲ್ಲಿಯ ‘ ಇದಂಕಿಲಾವ್ಯಾಜ ಮನೋಹರಂ ವಪುಃ ’ ಪದ್ಯವನ್ನು ಲಕ್ಷ್ಯವೆಂದು ಕೊಟ್ಟಿರುವರು. ಆಶ್ರಮದ ಗಿಡಗಳಿಗೆ ನೀರೆರೆಯುವ ಶಕುಂತಲೆಯನ್ನು ಕಂಡು ದುಷ್ಯಂತ, ಕೋಮಲಕಾಯದ ಇವಳಿಗೆ ಈ ಕೆಲಸವನ್ನು ಒಪ್ಪಿಸಿರುವದು ಅನ್ಯಾಯ ; ಕಮಲಪತ್ರದ ಅಲಗಿನಿಂದ ಶಮೀವೃಕ್ಷವನ್ನು ಕೊಯ್ಯುವಂತಿದೆ ಇದು, ಎನ್ನುವನು.[1] ಶಕುಂತಲೆಯಾಗಲಿ ಅವಳಿಗೆ ಈ ಕೆಲಸವನ್ನು ಒಪ್ಪಿಸಿದ ಕಣ್ವನಾಗಲಿ ಹೀಗೆ ಎಣಿಸಿರಲಿಲ್ಲ. ಅತ ಏವ ದುಷ್ಯಂತನ ಈ ಅಭಿಪ್ರಾಯ ಅವಾಸ್ತವ. ಕಮಲದೆಲೆಯ ಅಲಗಿನಿಂದ ಶಮೀವೃಕ್ಷವನ್ನು ಕೊಯ್ಯುವದಾದರೂ ಅಷ್ಟೇ ಅವಾಸ್ತವ. ಗದಾಯುದ್ಧದಲ್ಲಿ ದುರ್ಯೋಧನ—

ಕರವಾಳಂ ಮಸೆವಂದದೆ
ಮರವಾಳಂ ಮಸೆಯೆ ಕೂರಿತಮಕ್ಕುಮೆ ? ಕಲಿಯಂ ।
ಪೊರೆದೊಡೆ ಕೂರ್ಪಂ ತೋರ್ಪಂ-
ತಿರೆ ತೋರ್ಕುಮೆ ಪಂದೆಪತಿಗೆ ಸಂಗರದೆಡೆಯೊಳ್ ॥ ೨-೨೩

1. ಶಾಕುಂತಲ, ೧-೧೭ ; ರಾಘವ ಭಟ್ಟ ಇದನ್ನು ಅಸುಷ್ಟುಪ್ ಪಟ್ಟಿಯ ಅಭಿಪ್ರಾಯ ಲಕ್ಷಣಕ್ಕೆ ಜೋಡಿಸಿರುವನು. ವಿವರಣೆಯಲ್ಲಿ ಇದರ ಮತ್ತು ಅಭಿಪ್ರಾಯದ ಲಕ್ಷಣಗಳಲ್ಲಿ ವಿಶೇಷ ವ್ಯತ್ಯಾಸವಿಲ್ಲ.

—ಕರ್ಣನ ಮೇಲಿನ ಕೋಪದಿಂದ ಶಸ್ತ್ರಸನ್ಯಾಸವನ್ನು ಕೈಕೊಂಡ ಅಶ್ವತ್ಥಾಮನನ್ನು ಈತ ಶೂರನಲ್ಲ, ಹೇಡಿ; ಲೋಹದ ಕತ್ತಿಯನ್ನು ಮಸೆಯುವಂತೆ ಕಟ್ಟಿಗೆಯ ಕತ್ತಿಯನ್ನು ಮಸೆದರೆ ಅದು ಹದನಾಗಬಲ್ಲದೆ? ನಿಜವಾದ ಶೂರನಿಗೆ ಆಶ್ರಯವಿತ್ತು ಪೋಷಿಸಿದ್ದರೆ ಸಂಗರದಲ್ಲಿ ಆತ ಕಲಿತನವನ್ನು ತೋರಿಸುತ್ತಿದ್ದ, ಎಂದು ಆಕ್ಷೇಪಿಸುವನು. ಅಶ್ವತ್ಥಾಮ ರುದ್ರಾಂಶ; ಸಂಗ್ರಾಮದಲ್ಲಿ ವಿಷ್ಣುವನ್ನು ಕೂಡ ಎದುರಿಸಬಲ್ಲನೆಂಬುದು ದುರ್ಯೋಧನನಿಗೆ ಕೂಡ ಗೊತ್ತಿತ್ತು. ಗಾಯಗೊಂಡು ಮರಣೋನ್ಮುಖನಾದಾಗ ಅಶ್ವತ್ಥಾಮನ ಈ ಖ್ಯಾತಿಯನ್ನು ಅನುಲಕ್ಷಿಸಿ, ಕೊನೆಯ ಉಪಾಯವೆಂದು ಪಾಂಡವರ ಸಂಹಾರಕ್ಕಾಗಿ ದುರ್ಯೋಧನನೇ ಅವನನ್ನು ಪ್ರಚೋದಿಸುವನು. ಅತಏವ ದುರ್ಯೋಧನನ ಈ ಆಕ್ಷೇಪಣೆ ಅವಾಸ್ತವ. ಲೋಹದ ಕತ್ತಿಯ ಬದಲು ಕಟ್ಟಿಗೆಯ ಕತ್ತಿಯನ್ನು ಬಳಸುವದು ಮತ್ತು ಅದನ್ನು ಮಸೆದು ಹದನಾಗಿಸುವದಾದರೂ ಅಷ್ಟೇ ಅವಾಸ್ತವ.

೨೨. ಕ್ರಂದ—ಭಾವಾಧಿಕ್ಯದಿಂದ ಹೊರಬರುವ ಮಾತು, ಉದ್ಗಾರ, ಪ್ರಶ್ನೆ, ಇತ್ಯಾದಿ. ರನ್ನನ ಪರಾವರ್ತಿ ಲಾಕ್ಷಣಿಕರು ಇದನ್ನು ಶೋಕಸಂದರ್ಭಗಳಿಗೆ ಮಿತಗೊಳಿಸಿರುವರು. ಗದಾಯುದ್ಧದಲ್ಲಿ ಈ ಬಗೆಯ ಅನೇಕ ಉದಾಹರಣೆಗಳಿವೆ. ಅವುಗಳಲ್ಲಿ ಇದೊಂದು —

> **ಶೋಕಂ ಮಿಗೆ ಫಣಿರಾಜ ಪ-**
> **ತಾಕಂ ವಿಕಳಿತ ವಿವೇಕಶೂನ್ಯಂ ಬಾಷ್ಪೋ- |**
> **ದ್ರೇಕಂ ಹಾ! ದುಶ್ಶಾಸನ**
> **ಹಾ! ಕರ್ಣಾ! ಎನುತಮಂತೆ ಮೂರ್ಛೆಗೆ ಸಂದಂ || ೩–೭೭**

—ಇಲ್ಲಿಯ ಹಾ, ದುಶ್ಶಾಸನ ! ಹಾ, ಕರ್ಣಾ! ಗಳಲ್ಲಿಯ 'ಹಾ' ಉದ್ಗಾರ ಅವರೀರ್ವರ ನಿಧನದಿಂದಾದ ದುರ್ಯೋಧನನ ಸಂತಾಪ ಅದೆಷ್ಟು ತೀವ್ರವಿತ್ತೆಂಬುದನ್ನು ಎತ್ತಿ ತೋರಿಸುವದು. ಭರತನ ವಿವರಣೆಯಿಂದ ಬೇರ್ಪಡಿಸಿ ಹೇಳಲು ರನ್ನ ಈ ಬಗೆಯ ಪ್ರಲಾಪವನ್ನು 'ಕರುಣಾಕ್ರಂದನ' ಎಂದಿರುವಂತೆ ತೋರುವದು. ಭರತ ಪರ್ಯಾಯದಿಂದ ಅಥವಾ ಪ್ರತೀಯಮಾನ ಅರ್ಥದಿಂದ ವಿದಿತವಾಗುವ ಈ ಬಗೆಯ ಭಾವಾಭಿವ್ಯಕ್ತಿಗೆ ಆಕ್ರಂದ ಎಂದಿರುವನು. ಇದಕ್ಕೆ ಲಕ್ಷ್ಯವೆಂದು ಅಭಿನವಗುಪ್ತ, ಆಗಂತುಕನನ್ನು ಮೋಹಿಸಿದ ತರುಣಿಯೋರ್ವಳು ಆತ ಹೊರಟು ನಿಂತಾಗ : ಇಷ್ಟೇಕೆ ಅವಸರ; ಕತ್ತಲಾಗಿದೆ; ಇತ್ತನೋಡು, ಉದಿಸುತ್ತಿರುವ ಚಂದ್ರಮನನ್ನು ಚುಂಬಿಸಲು ನಿಶಾರಮಣಿ ಉತ್ಸುಕಳಾದಂತಿದೆ, ಎಂದು ಪರ್ಯಾಯದಿಂದ ತನ್ನ ಮನೋಗತವನ್ನು ತಿಳಿಸಿದಳೆಂಬ ಸ್ವಕೃತ ಪದ್ಯವನ್ನು ಕೊಟ್ಟಿರುವನು. ಗದಾಯುದ್ಧದಲ್ಲಿ ಸಂಧಿಯ ಪ್ರಸ್ತಾಪದಿಂದ ಉದ್ರಿಕ್ತನಾದ ಭೀಮ—

ಧಾತ್ರಿಯುಮನಿೀ ಹುತಾಶನ
ಪುತ್ರಿಯುಮಂ ಬಱಿದೆ ಸೋಲ್ತನಲ್ಲಂ ಜೂದಿಂ।
ಕ್ಷತ್ರಿಯ ತೇಜಮುಮಂ ಯಮ-
ಪುತ್ರಂ ರಿಪುಗಂದೆಸೋಲ್ತನಾಗಲೆವೇಡಾ॥ ೧-೬೦

—ಅಳ್ಳಿದೆಯ ಈತ ಜೂಜಿನಲ್ಲಿ ದ್ರೌಪದಿಸಹಿತ ಸರ್ವಸ್ವವನ್ನಿಷ್ಟೇ ಸೋಲಲಿಲ್ಲ! ಜೊತೆಗೆ ಕ್ಷತ್ರಿಯ ತೇಜಸ್ಸನ್ನು ಕೂಡ ಸೋತ! ಎಂದು ಧರ್ಮನನ್ನು ಜರಿದು ನುಡಿಯುವನು. ಅಪಕಾರದ ಪ್ರತೀಕಾರ ಕ್ಷಾತ್ರಧರ್ಮ, ಪರಾಕ್ರಮದ ಕುರುಹು, ಎಂದು ನೆರೆನಂಬಿದ ಭೀಮನ ಅಭಿಪ್ರಾಯ ನೇರವಾಗಿ ಬಂದಿರದೆ, ಜೂಜಿನಲ್ಲಿ ಕ್ಷತ್ರಿಯ ತೇಜಸ್ಸನ್ನು ಕೂಡ ಸೋತನೆಂಬ ಮಾತಿನಲ್ಲಿ ಪರ್ಯಾಯದಿಂದ ವ್ಯಕ್ತವಾಗಿದೆ. ಈ ಪದ್ಯ ರನ್ನನ ಸ್ವಂತದ್ದಲ್ಲ. ವೇಣೀಸಂಹಾರದಲ್ಲಿಯ 'ಯತ್ತದೂರ್ಜಿತಮುತ್ಯುಗ್ರಂ ಕ್ಷಾತ್ರಂ ತೇಜೋಽಸ್ಯಭೂಪತೇ:' ಪದ್ಯದ ಅನುವಾದ. ಸಂಧಿಯ ಪ್ರಸ್ತಾಪದಿಂದ ಕ್ರುದ್ಧನಾದ ಭೀಮನ ಮಾತು. [1]

೨೩. ಖ್ಯಾನ—ಪ್ರಶ್ನೋತ್ತರಗಳ ಮೂಲಕ ನಿಜಾಂಶವನ್ನು ತಿಳಿಯುವುದು ಆಖ್ಯಾನ. ಭೀಮ ದುರ್ಯೋಧನರ ಯುದ್ಧ ಪ್ರಾರಂಭವಾಗುವ ಮೊದಲು ಬಲರಾಮ ಇದೇನೆಂದು ಕೃಷ್ಣನನ್ನು ಕೇಳುವನು. ನಡೆದ ಘಟನೆಗಳನ್ನು ತಿಳಿಸಿ ಕೃಷ್ಣ,-ನಿಜವೊ ಸುಳ್ಳೊ ಎಂಬುದನ್ನು ದುರ್ಯೋಧನನನ್ನು ಕೇಳು, ಎಂದು ಉತ್ತರಿಸುವನು. ದುರ್ಯೋಧನನನ್ನು ಕೇಳಲಾಗಿ ಆತ,—ಕೃಷ್ಣನ ಮಾತು ನಿಜ; ಇಷ್ಟ ಮಿತ್ರ ಬಂಧುಗಳನ್ನು ಕಳಕೊಂಡ ನನಗೆ ಸಂಧಿ ಬೇಕಿಲ್ಲ, ಛಲವನ್ನೇ ಮೆರೆಯುವೆನು, ಎಂದು ತನ್ನ ದೃಢನಿರ್ಧಾರವನ್ನು ತಿಳಿಸುವನು. (೩/೫೮-೬೦)

೨೪. ಯಾಂಚಾ—ಇದರ ಮತ್ತು ಉಪರೊಕ್ತ ೧೭ನೆಯ ಪ್ರಿಯೋಕ್ತಿಯ ಲಕ್ಷಣ ಶಬ್ದಶಃ ಒಂದೇ ಆಗಿದೆ. ಇದಕ್ಕಿರುವ ಅಭಿನವಗುಪ್ತನ ಲಕ್ಷ್ಯದಲ್ಲಿ ಬಿನ್ನಹ (ಯಾಂಚಾ) ಹೆಚ್ಚಿಗೆ ಸೇರಿದೆ. ಒಂದಕ್ಕೊಂದು ಹೊಂದಿಬಂದಿರುವ ಪದ್ಯಗಳಲ್ಲಿ ರನ್ನ ಇವೆರಡೂ ಲಕ್ಷಣಗಳನ್ನು ತಂದಂತಿದೆ. ಪ್ರಿಯೋಕ್ತಿಯ ಸಂದರ್ಭದಲ್ಲಿ ಉದಾಹರಿಸಿದ 'ಕುರುಕುಲಮಂನುಂಗಿದೆ' ಪದ್ಯದಲ್ಲಿ ಭೀಮನ ನರ್ಮಸಚಿವ ದ್ರೌಪದಿಗೆ ಎರಡನೆಯ ಹಿಡಿಂಬೆಯೆಂದು ಹಾಸ್ಯಮಾಡಿ ಮುಂದಣ ಪದ್ಯದಲ್ಲಿ—

ಮಾರುತಿ ನಿಜವೇಣೀ ಸಂ—
ಹಾರಂ ಮಾಡಿದೊಡೆ ಮಾೞ್ಪುದೆನಗಂ ನಿನಗಂ।
ಪೂರಣೆಗೆ ಜಠರಪಿಠರಕ
ಪೂರಣೆಗೇಂ ಮಾಡದೆಂತು ಕರೆವೆಂ ನಿನ್ನಂ॥ ೨-೧೦

1. ವೇಣೀ, ೧/೧೩.

—ಭೀಮ ನಿನ್ನ ವೇಣೀಸಂಹಾರವನ್ನು ಮಾಡಿದಾಗ ನನಗೂ ನಿನಗೂ ಹೊಟ್ಟೆತುಂಬುವಷ್ಟು ತಿಂಡಿ ತಿನಿಸುಗಳನ್ನು ಮಾಡು, ಎಂದು ಬೆಸಗೊಳ್ಳುವನು.

ರನ್ನನ ಪರಾವರ್ತಿ ಲಾಕ್ಷಣಿಕರು ಬಿನ್ನಹವೆಂಬ ಸಾಮಾನ್ಯಾರ್ಥದಲ್ಲಿ ಈ ಲಕ್ಷಣ ವನ್ನು ವಿವರಿಸಿರುವರು. ಅವರ ಅಭಿಪ್ರಾಯದಲ್ಲಿ ಆ ಬಿನ್ನಹದ ಸ್ವೀಕಾರ ಇಲ್ಲವೆ ಅಸ್ವೀಕಾರಕ್ಕೆ ವಸ್ತು ಪೋಷಣೆಯಲ್ಲಿ ಮಹತ್ವದ ಸ್ಥಾನವಿರಬೇಕೆಂಬುದು ಸ್ಪಷ್ಟವಿದೆ. ಭೀಮ ದುರ್ಯೋಧನರು ಯುದ್ಧಸನ್ನದ್ಧರಾದಾಗ ಧರ್ಮ ಕೊನೆಯ ಸಲ ಶಾಂತಿಯ ಮಾತನ್ನು ಪ್ರಸ್ತಾಪಿಸುವನು. ತಮಗೆ ಅರ್ಧರಾಜ್ಯ ಕೂಡ ಬೇಡ; ಸಮಸ್ತವನ್ನು ನೀನೇ ತೆಗೆದುಕೊಂಡು ಸುಖವಾಗಿರು; ಕುಲಕ್ಷಯ ತಪ್ಪಿದರೆ ಸಾಕು; ಹಟವನ್ನು ಬಿಡು, ಎಂದು ದುರ್ಯೋಧನನನ್ನು ಪ್ರಾರ್ಥಿಸುವನು. ಕೃಷ್ಣ ಅದನ್ನು ಅನುಮೋದಿ ಸುವನು (೭–೪೩–೪೫). ಇದಕ್ಕೆ ಮೊದಲು ಸಂಜಯ, ಧೃತರಾಷ್ಟ್ರ, ಗಾಂಧಾರಿ, ಭೀಷ್ಮ, ಎಲ್ಲರೂ ತಮ್ಮ ತಮ್ಮ ಪರಿಯಲ್ಲಿ ಸಂಧಿಯ ಮಾತನ್ನೇ ಬೋಧಿಸಿದ್ದರು. ಬಲರಾಮ ಉಪಸ್ಥಿತನಿದ್ದರೆ ಆತನಾದರೂ ಬೇರೆ ಹೇಳುತ್ತಿದ್ದಿಲ್ಲ. ಇವರೆಲ್ಲರ ಅದ ರಲ್ಲೂ ತನ್ನ ಪಕ್ಷಪಾತಿಯಾದ ಬಲರಾಮನ ಮಾತನ್ನು ಮನ್ನಿಸಿ ದುರ್ಯೋಧನ ತನ್ನ ನಿರ್ಧಾರವನ್ನು ಬದಲಿಸಿದ್ದರೆ ಏನಾಗುತ್ತಿತ್ತೋ ಏನೋ. ಬಲರಾಮ ಸ್ವಲ್ಪ ತಡ ಮಾಡಿ ಬಂದ. ಭೀಮ ನಡುವೆ ಬಿದ್ದು ದುರ್ಯೋಧನನನ್ನು ಕೆಣಕಿದ. ಅವನ ಹಟ ಮೇರೆದಪ್ಪಿತು. ಆಗಬಾರದ್ದು ಆಗಿಹೋಯಿತು. ಧರ್ಮನ ಬಿನ್ನಹ ಅಲ್ಲಿಗೇ ಬಿದ್ದು ಹೋಯಿತು.

೨೫. ಪ್ರತಿಷೇಧ—ಕಾರ್ಯಪ್ರವರ್ತನಾದವನನ್ನು ಜಾಣತನದಿಂದ ಹಿಂದಿ ರುಗಿಸುವುದು ಪ್ರತಿಷೇಧ. ಸಂಧಿಗೆ ಒಡಂಬಡನೆಂಬುದನ್ನು ಮನಗಂಡು ಭೀಷ್ಮ ಧೃತರಾಷ್ಟ್ರ ಗಾಂಧಾರಿಯರಿಗೆ,—ದುರ್ಯೋಧನ ನನ್ನ ಮಾತನ್ನು ಕೇಳಲೊಲ್ಲ; ಸಂಧಿ ಗಾಗಿ ನೀವೇ ಪ್ರಯತ್ನಿಸಿರಿ, ಎಂದು ಹೇಳಿಕಳಿಸಿ, ಅವರಿಗೆ ಸಮಯ ದೊರೆಯಲೆಂದು ಬಲದೇವಾದಿಗಳು ಬರುವವರೆಗಾದರೂ ದಾರಿಕಾಯಲು ದುರ್ಯೋಧನನ ಮನವೊ ಲಿಸಿ ತಾತ್ಪೂರ್ತಿಕವಿದ್ದರೂ ಅವನನ್ನು ಕೈಕೊಂಡ ಕಾರ್ಯದಿಂದ ಹಿಂದಿರುಗಿಸುವನು ಮತ್ತು ಅಲ್ಲಿಯವರೆಗೆ ವೈಶಂಪಾಯನ ಸರಸ್ಸಿನಲ್ಲಿ ಗುಪ್ತವಾಗಿರಲು ಅವನಿಗೆ ಜಲ ಸ್ತಂಭ ವಿದ್ಯೆಯನ್ನು ಉಪದೇಶಿಸುವನು (೬–೨, ಮುಂದೆ). ಮಹಾಭಾರತದಲ್ಲಿ ಇಂತಿಲ್ಲ. ವಿಶ್ರಾಂತಿಗಾಗಿ ದುರ್ಯೋಧನ ತಾನಾಗಿಯೇ ಸರಸ್ಸಿನಲ್ಲಿ ಅಡಗಿಕೊಳ್ಳು ವನು. ಜಲಸ್ತಂಭ ವಿದ್ಯೆ ಅವನಿಗೆ ಮೊದಲಿನಿಂದಲೂ ಅವಗತವಿತ್ತು.

೨೬. ನಿಭಾರ್ಷಸನ—ಬೇರೆ ಬೇರೆ ಕೃತಿಗಳ ಉಲ್ಲೇಖವಿರುವ ಹೊಗಳಿಕೆ, ತೆಗಳಿಕೆ, ಬಣ್ಣನೆ, ಇತ್ಯಾದಿ. ಇದು ಭಾಸನವೆಂದೂ ಪ್ರಸಿದ್ಧವಿದೆ. ಈ ಪದ್ಯದಲ್ಲಿ—

ಜತುಗೃಹದೊಳ್ಸುಡಲ್ಬಗೆದನೆಲ್ಲಿದನಿಕ್ಕಿ ವಿಷಾನ್ನಮಂ ಮರು—
ತ್ಸುತನನುಪಾಯದಿಂ ಕೊಲಲೊಡರ್ಚಿದನೆಲ್ಲಿದನಾದುರೋದರ |

ವ್ಯತಿಕರದೊಳ್ಪರಾಭವಿಸಿ ಕೃಷ್ಣೆಯನುಯ್ದ ಪರಾಧಿಯೆಲ್ಲಿದಂ
ಕೃತಕಸಭಾ ಪ್ರವೇಶಕರನೆಲ್ಲಿದನೆಲ್ಲಿದನೋ, ಸುಯೋಧನಂ॥ ೬–೩೯

—ಜತುಗ್ರಹ ದಹನ ಮೊದಲಾದ ದುರ್ಯೋಧನನ ಅಕೃತ್ಯಗಳನ್ನು ಉಲ್ಲೇಖಿಸಿ ಆ ದುರ್ಯೋಧನ ಎಲ್ಲಿರುವನೆಂದು ಗರ್ಜಿಸುವನು ಭೀಮ. ಅಭಿನವಗುಪ್ತ ಇದಕ್ಕೆ ಲಕ್ಷ್ಯವೆಂದು ಈ ಮೊದಲು ೧೩ ನೆಯ ಪೃಚ್ಛಾಲಕ್ಷಣದ ಸಂದರ್ಭದಲ್ಲಿ ಉಲ್ಲೇಖಿಸಿದ ವೇಣೀಸಂಹಾರದಲ್ಲಿಯ 'ಕರ್ತಾದ್ಯೂತಚ್ಛಲಾನಾಂ' ಪದ್ಯವನ್ನು ಪುನಃ ಉದಾಹರಿಸಿರುವನು. ಗದಾಯುದ್ಧದಲ್ಲಿ ಈ ಪದ್ಯ 'ಧೃತರಾಷ್ಟ್ರಾಪತ್ಯ ಕಂಜಪ್ರಿಯ ಸುತಸಖ' (೬–೩೦) ಎಂದು ರೂಪಾಂತರ ಹೊಂದಿ ಬಂದಿರುವುದರಿಂದ ಇದಾದರೂ ಇಲ್ಲಿ ಲಕ್ಷ್ಯವಾಗಬಲ್ಲದು.

೨೭. ಆಶೀ—ಆಶೀರ್ವಾದ. ಸಂದರ್ಭ, ಸನ್ನಿವೇಶ, ಪರಸ್ಪರರಲ್ಲಿಯ ಗೌರವ, ಪ್ರೀತಿ ಇತ್ಯಾದಿಗಳ ಮೇರೆಗೆ ಆಶೀರ್ವಾದದ ಸ್ವರೂಪದಲ್ಲಿ ವ್ಯತ್ಯಾಸವಾಗುವದು. ಗದಾಯುದ್ಧದಲ್ಲಿ ಆಶೀರ್ವಾದದ ಮೂರು ಸನ್ನಿವೇಶಗಳಿವೆ. ಒಂದರಲ್ಲಿ ಮೂರ್ಛೆ ತಿಳಿದೆದ್ದ ದುರ್ಯೋಧನನನ್ನು ಧೃತರಾಷ್ಟ್ರ ಗಾಂಧಾರಿಯರು ಆಶೀರ್ವದಿಸುವರು. ಮಡಿದುಹೋಗಿರಬೇಕೆಂದು ಭಾವಿಸಿದ ಅವರಿಗೆ ಅವನು ಬದುಕ್ಕಿದ್ದರೆ ಸಾಕು. ಅವರ ಆಶೀರ್ವಾದದಲ್ಲಿ ಪುತ್ರವಾತ್ಸಲ್ಯ ಉಕ್ಕಿಬಂದಿದೆ. 'ತದೀಯ ವಚನಾಮೃತ ಸ್ಪರ್ಶನದಿಂದಾನಂದಿತ ಚಿತ್ತರಾಗಿ ತಡವರಿಸಿಯುಂ ತೆಬ್ಬರಿಸಿಯುಂ ತೆಗೆದಪ್ಪಿಯುಂ ಮನಃ ಕ್ಷತ ಶರೀರನಂ ಪರಮಾಶೀರ್ವಚನ ಶತಸಹಸ್ರಂಗಳಿಂ ಪರಸಿ ಪುನಃ ಪುನರಾಲಿಂಗನಂಗೆಯ್ದು'ಎಂದು ಈ ಸನ್ನಿವೇಶವನ್ನು ಬಣ್ಣಿಸಿರುವನು, ರನ್ನ (೩–೮೪ ನಂತರ). ಇನ್ನೊಂದರಲ್ಲಿ ಭೀಷ್ಮ ದುರ್ಯೋಧನನನ್ನು ಆಶೀರ್ವದಿಸಿರುವನು. ಭೀಷ್ಮನಿಗೆ ವಂಶಗೌರವ, ಸ್ವಜನೋತ್ಕರ್ಷ ಮುಖ್ಯ. ಒಂದೊಮ್ಮೆ ಪರಮ ವೈಭವಸಂಪನ್ನನಿದ್ದ ದುರ್ಯೋಧನ ಏಕಾಕಿಯಾಗಿ ತನ್ನೆಡೆ ಬಂದಿರುವುದನ್ನು ಕಂಡು 'ಬಾಷ್ಪಾಂಬುಪೂರಿತ ಲೋಚನನಾಗಿ' ಅವನನ್ನು ಆಶೀರ್ವದಿಸುವನು (೫–೪೦ ನಂತರ). ಮೂರನೆಯ ಸಂದರ್ಭ ಗದಾಯುದ್ಧದ ಸಮಯದಲ್ಲಿ. ಬಲರಾಮ ದುರ್ಯೋಧನನ ಕರುಣಾಜನಕ ಸ್ಥಿತಿಯನ್ನು ಕಂಡು ಮರುಗುವನು. ಅಲ್ಲಿಯೆ ಇದ್ದ ಕೃಷ್ಣ ಮತ್ತು ಪಾಂಡವರನ್ನು ಕಂಡು ಶೀಘ್ರಕೋಪಿಯಾದ ಆತ ಅವರೇ ದುರ್ಯೋಧನನನ್ನು ಈ ಅವಸ್ಥೆಗೆ ತಂದಿರಬಹುದೆಂದು ಭಾವಿಸುವನು. ಈ ಸಂದರ್ಭವನ್ನು ರನ್ನ—'ಏಕಾಕಿಗನಾಗಿ ಸಾವಿಯ ದೇಸಿಗನಾಗಿ ನಿಂದ ಕುರುಕುಲಸ್ವಾಮಿಯುಮಂ ಕಂಡು ದೇವಕೀನಂದನನ ವದನಾರವಿಂದಮಂ ನೋಡಿ ವಿಸ್ಮಯಾಕ್ರಾಂತಚಿತ್ತನಾಗಿ ಮನದೊಳ್ಪಟ್ಟು ವಡೆದು ತನಗೆಱಗಿದ ಫಣಿರಾಜಕೇತನನಂ ಮನದೆಱಕದಿಂ ಪರಸಿ ಗರುಡಕೇತನನಂ ಪಾಂಡವರುಮಂ ಪರಸಲೊಲ್ಲದೆ ಮುಳಿದು....,' ಎಂದು ಬಣ್ಣಿಸಿರುವನು (೭–೫೬ ನಂತರ).

೨೮. ಕಪಟ—ಮೋಸಗಾರಿಕೆ. ಗದಾಯುದ್ಧದಲ್ಲಿ ಇಂಥ ಮೂರು ಸಂದರ್ಭಗಳಿವೆ. (೧) ದುರ್ಯೋಧನ ವೈಶಂಪಾಯನ ಸರಸ್ಸನ್ನು ಪ್ರವೇಶಿಸಿದ ರೀತಿ, (೨) ಗದಾಯುದ್ಧದಲ್ಲಿ ಹೊಕ್ಕುಳದ ಕೆಳಗೆ ಹೊಡೆಯಬಾರದೆಂಬ ನಿಯಮವಿದ್ದರೂ ಅದನ್ನು ಉಲ್ಲಂಘಿಸಿ ಭೀಮ ದುರ್ಯೋಧನನ ತೊಡೆಗಳನ್ನು ಮುರಿದದ್ದು, (೩) ಅಶ್ವತ್ಥಾಮ ರಾತ್ರಿ ಸಮಯದಲ್ಲಿ ಪಾಂಡವರ ಶಿಬಿರವನ್ನು ಹೊಕ್ಕು ಮಲಗಿದ ದೃಷ್ಟದ್ಯುಮ್ನಾದಿ ಯೋಧರನ್ನು ಶ್ರುತಸೋಮಾದಿ ಪಾಂಡವ ಪುತ್ರರನ್ನು ಸಂಹರಿಸಿದ್ದು. ಇವುಗಳಲ್ಲಿ ಮೊದಲಿನದು ಕವಿಕಲ್ಪನೆ. ಭಟ್ಟನಾರಾಯಣಾದಿ ಪೂರ್ವಿಕರಿಂದ ನಡೆದು ಬಂದಿದೆ. ಉಳಿದೆರಡು ಮೂಲದಲ್ಲಿ ಅಂದರೆ ಮಹಾಭಾರತದಲ್ಲಿ ಉಕ್ತವಾಗಿವೆ. ಇವು ಒಂದಿಲ್ಲೊಂದು ರೀತಿಯಿಂದ ಸಮರ್ಥನೀಯವಿದ್ದರೂ ಈ ಕೃತಿಗಳನ್ನೆಸಗಿದ ದುರ್ಯೋಧನ, ಭೀಮ, ಅಶ್ವತ್ಥಾಮರಿಗೆ ಕಲಂಕಗಳಾಗಿಯೇ ಉಳಿದಿವೆ.

೨೯. ಕ್ಷಮಾ—ಅಪಮಾನಾಸ್ಪದ ಪ್ರಸಂಗಗಳಲ್ಲಿ ಕೂಡ ವಿವೇಕವನ್ನು ಕಾಪಾಡಿಕೊಳ್ಳುವದು ಕ್ಷಮಾ. ಗದಾಯುದ್ಧದ ಸಮಯದಲ್ಲಿ ದುರ್ಯೋಧನ ಕೃಷ್ಣನನ್ನು ಮನಸ್ವಿ ಹಳಿಯುವನು (೭–೪೯–೫೫). ಮರುಮಾತಾಡದೆ ಕೃಷ್ಣ ಅದನ್ನು ಸಹಿಸಿಕೊಂಡು, 'ಕೌರವಕುಲ ಚೂಡಾಮಣಿಯೊಳೇನನಾಳೋಚಿಸಿದ್ಯೆ,' ಎಂದು ಕೇಳಿದ ಬಲರಾಮನಿಗೆ ಆವರೆಗಿನ ವೃತ್ತಾಂತವನ್ನು ತಿಳಿಸಿ ಅದರ ಸತ್ಯಾಸತ್ಯತೆಯ ವಿಷಯದಲ್ಲಿ ದುರ್ಯೋಧನನನ್ನು ಕೇಳಬಹುದೆಂದು ಶಾಂತಚಿತ್ತದಿಂದ ಉತ್ತರಿಸುವನು. ಮೌನದಿಂದ ದುರ್ಯೋಧನನ ನಿಂದೆಯನ್ನು ಸಹಿಸಿಕೊಂಡಿರುವಲ್ಲಿ ಕೃಷ್ಣನ ಕ್ಷಮಾಗುಣ ವ್ಯಕ್ತವಾಗಿದೆ.

೩೦. ಪಶ್ಚಾತ್ತಾಪ—ಮಿಂಚಿ ಹೋದ ಮಾತಿಗೆ ಮಿಡುಕುವದು ಪಶ್ಚಾತ್ತಾಪ. ಸಭೆಯಲ್ಲಿ ದ್ರೌಪದಿಯ ಮಾನಭಂಗವಾದಾಗ ಆಗಲೇ ಅದರ ಪರಿಮಾರ್ಜನವಾಗಬೇಕಿತ್ತು. ಧರ್ಮನ ಆದೇಶಕ್ಕೆ ಕಟ್ಟುಬಿದ್ದು ಸುಮ್ಮನಿದ್ದುದಕ್ಕಾಗಿ ಭೀಮ ಮೇಲಿಂದ ಮೇಲೆ ಪರಿತಪಿಸುವನು. ಅಪಮಾನದಿಂದ ಕೊರಗುತ್ತಿರುವ ದ್ರೌಪದಿ ತನ್ನೆಡೆ ಬಂದಾಗ ಮತ್ತೆ ಅದು ಉಮ್ಮಳಿಸಿ ಭೀಮ—

ವಿನಯಮನೆ ಬಗೆದು ವಿಕ್ರಮ-
ಮನೆ ಬಗೆಯದೆ ನರನುಮಾನುಮೆನಗಂ ಸಮ್ಮೋ- |
ಹನ ಮಾದುದಕ್ಕು ಮಂದ-
ಣ್ಣನ ಸೂನೃತವಚನವೆಂಬ ಮಂತ್ರಾಕ್ಷರದಿಂ || ೧–೬೨

—ಎಂದು ಪರಿತಪಿಸುವನು. ಭೀಮನ ಈ ಮಾತಿಗಿರುವ 'ಎಂದು ಪಶ್ಚಾತ್ತಾಪಂಗೆಯ್ದು' ಶಬ್ದಗಳಿಂದ ರನ್ನನೇ ಇದು ಪಶ್ಚಾತ್ತಾಪ ಲಕ್ಷಣದ ಲಕ್ಷ್ಯವೆಂದು ಸೂಚಿಸಿದಂತಿದೆ.

೩೧. ಅರ್ಥಾನುವೃತ್ತಿ—ಪ್ರೀತಿ, ದಾಕ್ಷಿಣ್ಯ, ಇತ್ಯಾದಿಗಳ ಮೂಲಕ

ಅನ್ಯರ ಕಾರ್ಯವನ್ನು ಅವರ ಅನುಮತಿಯಿಂದ ತಾನೇ ಮಾಡುವದು ಅರ್ಥಾನುವೃತ್ತಿ. ಇದಕ್ಕೆ ಅನುವೃತ್ತಿ ಎಂದು ಸಹ ಹೇಳುವದುಂಟು. ದ್ರೌಪದಿಗೆ ದುರ್ಯೋಧನನ ಊರುಭಂಗ ಮಾಡಿಯೇ ತೀರುವೆನೆಂಬ ಭೀಮನ ಪ್ರತಿಜ್ಞೆಯನ್ನು ಎಷ್ಟು ಸಲ ಕೇಳಿದರೂ ಸಾಲದು. ಸ್ವತಃ ಭೀಮ, ಆಕೆಯ ಮೇಳದ ಕೆಳದಿ ಬುದ್ಧಿಮತಿ ಅದನ್ನು ದೃಢಪಡಿಸಿದರೂ ಅವಳಿಗೆ ತೃಪ್ತಿಯಿಲ್ಲ. ಆಗ 'ಭೀಮಸೇನನು-ಮತದೊಳ್' ಆತನ ನರ್ಮಸಚಿವ, 'ದುಶ್ಶಾಸನಾದಿಗಳಪ್ಪ ನೂರ್ವರ್ ಕೌರವರು ಮನಗಃವರ್ಗೆ ಕೊಂದಿಕ್ಕಿದ ನಿನ್ನೊರ್ಬನುೞಿದಂ. ದುರ್ಯೋಧನನಂ ಕೊಲ್ವುದುಂ ಗೆಲ್ವುದುಂ ನಮ್ಮರಸಂಗಾವುದು ಗಹನಮದರ್ಕೆ ಚಿಂತಿಸದಿರು' ಎಂದು ಪುನಃ ಅವಳಲ್ಲಿ ನಂಬಿಗೆಯನ್ನು ಹುಟ್ಟಿಸುವನು.

೩೨. ಉಪಪತ್ತಿ—ಸಕಾರಣವಾಗಿ ಒಂದೊಂದು ಮಾತನ್ನು ನಿರಾಕರಿಸುವದು ಉಪಪತ್ತಿ. ಗಾಯಗೊಂಡ ದುರ್ಯೋಧನನತ್ತ ಹೋಗುತ್ತಿದ್ದ ಅಶ್ವತ್ಥಾಮ ಮಾರ್ಗದಲ್ಲಿ ರಾಜ್ಯಲಕ್ಷ್ಮಿಯನ್ನು ಕಂಡು ನೀನಾರೆಂದು ಕೇಳುವನು. ಅದಕ್ಕೆ ಆಕೆ—

ಅಮೃತಪಯೋನಿಧಿ ಮಂಥನದೆ ಪುಟ್ಟಿದೆನಬ್ಜಭವಾಂತರಾಳದೊಳ್
ರಮಿಯಿಪ ಪದ್ಮನಾಭನುರದೊಳ್ ನೆಲಸಿರ್ಪ ಮಹಾನುಭಾವೆಯಾಂ ।
ಕಮಲೆಯೆನಿನ್ನೆಗಂ ಕುರುಮಹೀಪತಿಯೊಳ್ ನೆಲೆಸಿರ್ದೆ ನೀಗಳು-
ತ್ತಮ ಪುರುಷೋತ್ತಮಂ ಬೆಸಸೆ ಪಾಂಡವರೊಳ್ ನೆಲಸಲ್ಕೆ ಪೋದಪೆಂ ॥
೯–೪

—ಎಂದು ಹೆಮ್ಮೆಯಿಂದ ಉತ್ತರಿಸಿ ಹರಿಯ ಅಪ್ಪಣೆಯಿಂದ ದುರ್ಯೋಧನನನ್ನು ಬಿಟ್ಟು ಪಾಂಡವರಲ್ಲಿ ನೆಲೆಸಲು ಹೊರಟಿರುವದಾಗಿ ತಿಳಿಸುವಳು. ಆಗ ತಿರಸ್ಕಾರಯುಕ್ತ-ಮುಗುಳ್ನಗೆ ನಕ್ಕು ಅಶ್ವತ್ಥಾಮ—

ಚಳಮತಿಯಾದೆ ನೀಂ ಜಡಧಿ ಸಂಭವೆಯಪ್ಪುದಱಿಂ ಸರೋಜಸಂ-
ಕುಳರಜದಿಂದೆ ನೀಂ ಪೊರೆದು ರಾಜಸದೊಳ್ ನೆಲೆಸಿರ್ಪೆ ಗೋಪುಗಾ- ।
ದಳವಱಿದಿರ್ದ ಕೃಷ್ಣನೊಡನಿರ್ದುದಱಿಂದವೆ ಗೋಪಿಯಾದೆಯ-
ಗ್ಗಳದ ವಿವೇಕಮಿಲ್ಲ ನಿನಗೆತ್ತಱಿವಾ ಪುರುಷಾಂತರಂಗಳಾ ॥ ೯–೫

ಚಂಚಲವಾದ ಜಲರಾಶಿಯಲ್ಲಿ ಹುಟ್ಟಿದ್ದರಿಂದ ನೀನು ಚಂಚಲ ಬುದ್ಧಿಯವಳು; ಕಮಲ ಸಮೂಹದ ಹುಡಿಯಿಂದ (ರಜ) ಆವರಿಸಲ್ಪಟ್ಟಿರುವದರಿಂದ ರಜೋಗುಣದವಳು; ದನಗಾಹಿ ಕೃಷ್ಣನ ಸಹವಾಸದಿಂದ ನೀನಾದರೂ ದನಗಾಹಿ (ಮೂಢಳು), ಎಂದು ಅವಳು ಹೆಮ್ಮೆಯಿಂದ ಹೇಳಿದ ಮಾತುಗಳನ್ನು ಒಂದೊಂದಾಗಿ ಖಂಡಿಸಿ ಮೂದಲಿಸುವನು.

೩೩. ಯುಕ್ತಿ–ಒಂದಕ್ಕೊಂದು ಸರಾಗವಾಗಿರುವ ಸಂದರ್ಭೋಚಿತ ಅಂಶಗ

ಳನ್ನು ಎತ್ತಿ ಬಣ್ಣಿಸುವುದು ಯುಕ್ತಿ. ಭೀಮ ದುರ್ಯೋಧನರ ಯುದ್ಧ ವರ್ಣನೆಯಲ್ಲಿ ರನ್ನ—

ನೆಲಸಿದ ಬಿನ್ನಣಂ ಸೆಣಸಿ ಬಿನ್ನಣಮುಂ ಗೆಲೆ ಕಾಣ್ಕೆ ಕಾಣ್ಕೆಯಂ
ಗೆಲೆ ಜವಮುಂ ಜವಂಗೆಲೆ ಬಲಂ ಬಲಮುಂಗೆಲೆ ದಂಡೆ ದಂಡೆಯಂ।
ಗೆಲೆ ಮುಳಿಸುಣ್ಮಿಪೊಣ್ಮಿ ಮುಳಿಸಂ ಗೆಲೆ ಸತ್ವದುಳುರ್ಕೆ ಸತ್ವಮುಂ
ಗೆಲೆ ಗೆಲವಾರ್ತರಿಲ್ಲ ಕುರುಪಾಂಡು ತನೂಭವರೊರ್ವರೊರ್ವರಂ ॥ ೮–೩೩

– ಶಕ್ತಿ ನೈಪುಣ್ಯಾದಿಗಳಲ್ಲಿ ಇಬ್ಬರೂ ಸರಿಸಮಾನರು. ಬಲ, ಬಿನ್ನಣ, ಹಿಡಿತ ದೃಷ್ಟಿ, ವೇಗ, ಈರ್ಷೆ ಯಾವುದನ್ನೂ ತೆಗೆದುಕೊಂಡರೂ ಒಬ್ಬನು ಇನ್ನೊಬ್ಬನಿಗಿಂತ ಕಡಿಮೆ ಇಲ್ಲ; ಇಬ್ಬರೂ ಅಜೇಯರು, ಎಂದು ಬಣ್ಣಿಸಿರುವನು.

೩೪. ಕಾರ್ಯ– ಗುಣವನ್ನು ದೋಷವೆಂದು, ದೋಷವನ್ನು ಗುಣವೆಂದು ಬಣ್ಣಿಸುವುದು ಕಾರ್ಯ. ಜೂಜಿನಲ್ಲಿ ಸೋತು ವನವಾಸದಲ್ಲಿದ್ದ ಪಾಂಡವರನ್ನು ನೋಡಿಕೊಂಡು ಮೈತ್ರೇಯ ಋಷಿ ಹಸ್ತಿನಾವತಿಗೆ ಬಂದು, ಪಾಂಡವರೊಡನೆ ಶಾಂತಿ ಯಿಂದ ಇರಬೇಕೆಂದು ದುರ್ಯೋಧನನಿಗೆ ಬೋಧಿಸುವನು. ದುರ್ಯೋಧನ ನಕ್ಕು ತೊಡೆಯನ್ನು ತಟ್ಟಿಕೊಳ್ಳುವನು. ಕೋಪಗೊಂಡ ಮೈತ್ರೇಯ, ಯುದ್ಧದಲ್ಲಿ ಭೀಮ ನಿನ್ನ ತೊಡೆಗಳನ್ನು ಮುರಿಯುವನೆಂದು ಶಪಿಸುವನು. ದುರ್ಯೋಧನನ ದೋಷವಿದ್ದರೂ, ' ಕನಕಲತಾ ಲಾಂಛಿತೋತ್ತುಂಗ ಘನಗದಾಯುಧನಂ ದಿವ್ಯಮುನಿವ ರಾಪರಾಧನುಂ ಸಕಲ ಲಕ್ಷ್ಮೀ ನಿವಾಸನುಂ........'; ಎಂದು ರನ್ನ ಇದನ್ನು ಅವನ ಗುಣವರ್ಣನದಲ್ಲಿ ಸೇರಿಸಿ ಬಣ್ಣಿಸಿರುವನು.(೨/೧೦ ನಂತರ).

೩೫. ಅನುನೀತಿ– ಸಿಟ್ಟು ಬರುವಂಥ ಮಾತುಗಳಿದ್ದರೂ ನುಂಗಿಕೊಂಡು ಪುನ: ಪ್ರೀತಿಯನ್ನು ಸಂಪಾದಿಸಲು ಯತ್ನಿಸುವುದು ಅನುನೀತಿ. ಪಾಂಡವರ ಗುಣ ವರ್ಣನದಿಂದ ಸಿಟ್ಟಿಗೆದ್ದ ದುರ್ಯೋಧನ ಸಂಜಯನನ್ನು ಬಿರುನುಡಿಗಳಿಂದ ಹಳಿದಾಗ ಸಂಜಯ.– 'ಮೌನಂ ಸರ್ವಾರ್ಥ ಸಾಧನಂ, ಆರಾಧ್ಯಂನ ಪ್ರಕೋಪಯೇತ್, ಎಂದು ದುರ್ಯೋಧನನ ಬಿರುನುಡಿಗಳನ್ನು ಉಪೇಕ್ಷಿಸಿ, ಬಲದೇವಾದಿಗಳ ನೆರವಿನಿಂದ ಯುದ್ಧದಲ್ಲಿ ಜಯ ಸಂಪಾದಿಸು, ಎಂದು ಮಾತಿನ ದಿಕ್ಕನ್ನು ಬದಲಿಸಿ ಪುನ: ಅವನ ಪ್ರೀತಿಯನ್ನು ಗಳಿಸಲು ಯತ್ನಿಸುವನು (೩|೫೮ ನಂತರ).

೩೬. ಪರಿದೇವನ— ನಿಜಸ್ಥಿತಿ ಲೋಕಪ್ರಸಿದ್ಧವಿರುವಾಗ ಭಾವೋದ್ರೇಕ ದಿಂದ ಇಲ್ಲವೆ ಕುತ್ಸಿತ ಬುದ್ಧಿಯಿಂದ ಯಾರೊಬ್ಬರನ್ನು ನಿಂದಿಸುವದು ಪರಿದೇವನ. ಹೀಗೆ ಮಾಡುವುದು ನಿಂದಕನ ಗೌರವಕ್ಕೇನೆ ಹಾನಿ. ತನಗಾದ ಕಷ್ಟನಷ್ಟಗಳಿಂದ ಶೋಕಾಕ್ರಾಂತನಾದ ದುರ್ಯೋಧನ ದ್ರೋಣ ಅಶ್ವತ್ಥಾಮರನ್ನು ಕೃತಘ್ನರು, ಪ್ರಚ್ಛನ್ನ ಪಾಂಡವ ಪಕ್ಷಪಾತಿಗಳು ಎಂದು ಮುಂತಾಗಿ ಹಳಿಯುವನು. ನಿಜಸ್ಥಿತಿ ಯನ್ನು ಬಲ್ಲ ಸಂಜಯ,– ದ್ರೋಣ ಈತನಿಗೆ ಕವಚದಂತಿದ್ದ; ಅಶ್ವತ್ಥಾಮಸಾಕ್ಷಾತ್

ರುದ್ರಾವತಾರ, ಅವರನ್ನು ಪರೀಕ್ಷಿಸಲು ಇವನೆಷ್ಟರವ, ಎಂದು ನೊಂದುಕೊಂಡು–

ಧೃತರಾಷ್ಟ್ರಂದ್ರುಮಮಾದುದು
ಶತಶಾಖಂ ಪಂಚಶಾಖಮಾದುದು ಪಾಂಡು–।
ಕ್ಷಿತಿರುಹಮಕ್ಷಯ ಮಾಯ್ತಾ
ದ್ವಿತೀಯ ಮಾಯ್ತೇಕ ಶಾಖಮಿವನಿಂದಾದ್ಯಂ ॥ ೨–೫೯

ಧೃತರಾಷ್ಟ್ರವೆಂಬ ವೃಕ್ಷಕ್ಕೆ ೧೦೦ ಶಾಖೆಗಳಿದ್ದರೆ ಪಾಂಡು ವೃಕ್ಷಕ್ಕೆ ಐದೇ ಶಾಖೆಗಳು. ಐದು ಶಾಖೆಗಳ ವೃಕ್ಷ ಇಂದು ಅಕ್ಷಯವಾಗಿದೆ. ೧೦೦ ಶಾಖೆಗಳ ವೃಕ್ಷ ಈತನ ಮೂಲಕ ಏಕ ಶಾಖೆಯಾಗಿದೆ, ಎಂದು ದುರ್ಯೋಧನನ ವಿಷಯದಲ್ಲಿ ಜುಗುಪ್ಸೆ ತಾಳುವನು.

೯. ರಸಗಳು—ಸಂದರ್ಭಾನುಸಾರ ಗದಾಯುದ್ಧದಲ್ಲಿ ಎಲ್ಲ ರಸಗಳು ಬಂದಿದ್ದರೂ ಪ್ರಾಮುಖ್ಯವಾಗಿರುವುದು ಕರುಣ. ವೇಣೀ ಸಂಹಾರದಲ್ಲಿ ಸಹ ಹೀಗೆಯೇ ಆಗಿದೆ. ಶೃಂಗಾರ ವೀರಗಳಲ್ಲಿ ಒಂದು ಪ್ರಧಾನ ಮತ್ತು ಉಳಿದವು ಅಂಗರಸಗಳಾಗಿ ಬರಬೇಕೆಂಬುದು ಒಂದು ಅಭಿಪ್ರಾಯ. ಕವಿ ಕೃತಿಯಲ್ಲಿ ನಾನಾ ರಸಗಳಿರಬೇಕು; ಅವುಗಳಲ್ಲಿ ಒಂದನ್ನು ಪ್ರಧಾನವಾಗಿಸಿ ಅದರ ಉತ್ಕರ್ಷವನ್ನು ಸಾಧಿಸಬೇಕು, ಎಂಬುದು ಇನ್ನೊಂದು ಅಭಿಪ್ರಾಯ.[1] ಎರಡನೆಯ ಅಭಿಪ್ರಾಯದಲ್ಲಿ ಪ್ರಧಾನ ರಸ ಇಂಥದೇ ಇರಬೇಕೆಂಬ ನಿರ್ಬಂಧವಿಲ್ಲ. ರಸಗಳ ಸಂಖ್ಯೆ, ಉತ್ಪತ್ತಿ, ಸ್ವರೂಪ,ಆಸ್ವಾದ ಇವುಗಳ ವಿಷಯದಲ್ಲಿ ಚರ್ಚೆ ಎಂದಿನಿಂದಲೂ ನಡೆದು ಬಂದಿದೆ. ಜೊತೆಗೆ ರಸವಿರುವುದು ಒಂದೇ; ಮಿಕ್ಕವು ಅದರ ಬೇರೆ ಬೇರೆ ರೂಪಗಳು, ಎಂಬ ಅಭಿಪ್ರಾಯವಾದರೂ ಬೆಳೆದು ಬಂದಿದೆ. ಹೀಗೆ ಭಾವಿಸಿದ ಪ್ರಾಚೀನರಲ್ಲಿ ಭವಭೂತಿ (ಕ್ರಿ.ಶ. ೬೭೫-೭೨೫) ಒಬ್ಬ. ಆತನ ಉತ್ತರ ರಾಮ ಚರಿತದಲ್ಲಿಯ 'ಏಕೋರಸಃ ಕರುಣಏವ' ಪದ್ಯ ಸುಪರಿಚಿತವಿದೆ. ಭಟ್ಟ ನಾರಾಯಣನ ಕರುಣ ರಸದ ಬಣ್ಣನೆ, ಶೈಲಿ, ಇತ್ಯಾದಿಗಳಲ್ಲಿ ಕಂಡುಬರುವ ಭವಭೂತಿಯ ಪ್ರಭಾವ ಮತ್ತು ವೇಣೀ ಸಂಹಾರದಲ್ಲಿ ಒಡೆದು ಕಾಣುವ ಕರುಣ ರಸದ ಆಧಿಕ್ಯವನ್ನು ಎತ್ತಿ ತೋರಿಸಿ ಆಧುನಿಕ ವಿದ್ವಾಂಸರು ವೇಣೀ ಸಂಹಾರದ ಪ್ರಧಾನ ರಸ ಕರುಣ ಎಂದು ಅಭಿಪ್ರಾಯ ಪಟ್ಟಿರುವರು. ಪ್ರಾಚೀನ ಟೀಕಾಕಾರರು ವೀರ ಎಂದಿದ್ದರೂ ಅದು ಧನಂಜಯಾದಿ ಲಾಕ್ಷಣಿಕರ ಪರಂಪರಾಗತ ಅಭಿಪ್ರಾಯ, ಎಂದು ಪ್ರತಿಪಾದಿಸಿರುವರು.[2] ಗದಾಯುದ್ಧದ ವಿಷಯವಾದರೂ ಇದರಿಂದ ಭಿನ್ನವಿಲ್ಲ, ಎನ್ನಬಹುದು.

ಗದಾಯುದ್ಧದ ನಾಯಕ ಭೀಮ. ಸತ್ಯಾಶ್ರಯ ಇರಿವ ಬೆಡಂಗನ ಸಾಹಸ

1. ದಶರೂಪಕ, ೪–೪೫; ಧ್ವನ್ಯಾಲೋಕ,–೪–೨೧,–ವೇಣೀ(ವಿಮರ್ಶೆ)ಯಲ್ಲಿ ಉಧೃತ.
2. ವೇಣೀ (ವಿಮರ್ಶೆ) ಪು. ೬೪ ; ವೇಣೀ (ದೇ), ಮು. ಪು.೨೬.

ಕೃತಿಗಳನ್ನು ಬಣ್ಣಿಸಲೆಂದೇ ಆವರೀರ್ವರಲ್ಲಿ ಅಭೇದವನ್ನು ಕಲ್ಪಿಸಿ ರನ್ನ ಈ ಕೃತಿಯನ್ನು ರಚಿಸಿರುವನು. ವೀರರಲ್ಲಿ ಭೀಮ ಅದ್ವಿತೀಯ. 'ಗಂಡಿನೊಳ್ ಭೀಮಸೇನಂ' ಎಂದಿರುವನು ಪಂಪ. 'ಯುದ್ಧದೊಳ್ ಕುಱಿದಱಿಯಾಗಿ ಬಿಟ್ಟ್ರಿಬಲಂಗಳೆ ಪೇೞವೆ ನಿನ್ನ ಬೀರಮಂ' ಎಂದು ಸ್ವತ: ದ್ರೌಪದಿ ಅವನ ಪರಾಕ್ರಮವನ್ನು ಬಣ್ಣಿಸಿರುವಳು ಗದಾಯುದ್ಧದಲ್ಲಿ, ಎಂದು ಮುಂತಾಗಿ ಪ್ರತಿಪಾದಿಸಿ ಗದಾಯುದ್ಧದ ಪ್ರಧಾನರಸ ವೀರ ಎಂಬುದೊಂದು ಅಭಿಪ್ರಾಯ. ತತ್ವತ: ಇದು ಸರಿ ಇರಬಹುದಾದರೂ ಒಡೆದು ಕಂಡು ಬರುವುದು ಭೀಮ, ದುರ್ಯೋಧನ, ಅಶ್ವತ್ಥಾಮರ ಕೋಪಾಟೋಪ ಮತ್ತು ತಜ್ಜನ್ಯ ವಾಗಾಡಂಬರ; ವೀರ ರಸವಿದ್ದರೂ ಅದು ರೌದ್ರಕ್ಕೆ ಅಧೀನವಾಗಿ ಬಂದಿದೆ, ಎಂಬುದು ಇನ್ನೊಂದು ಅಭಿಪ್ರಾಯ. ವೀರ–ರೌದ್ರ ಎಂಬ ದ್ವಿಸಂಧಾನ ಅಭಿಪ್ರಾಯವೂ ವ್ಯಕ್ತವಾಗಿದೆ. ಇವುಗಳೊಂದಿಗೆ[1]—

> ರನ್ನನ ಕೈವಾಡ, ಚೆಲುವು ಕೆಲಸ ಎಲ್ಲಿ–ಭೀಮನಲ್ಲೇ ?
> ದುರ್ಯೋಧನನಲ್ಲೇ ? ಪಂಪನ, ಜೈನಧರ್ಮದ ಶಲಾಕಾಪುರುಷರ,
> ಕರ್ಮದಲ್ಲಿ ತೊಳಲಿ ಮೋಕ್ಷಗಾಮಿಗಳಾಗುವರ ಮಾರ್ಗ ಎತ್ತ
> ಸಾಗುತ್ತದೆ ? ಮೇಲ್ಪಂಕ್ತಿ ಹೇಗಿದೆ ? ಬಲ್ಲವರೇ ಬಲ್ಲರು, 'ರಸೋವೈಸ:'
> 'ಏಕೋರಸ: ಕರುಣ ಏವ',........

ಎಂಬ ಬಿ. ಎಂ. ಶ್ರೀಯವರ ಮಾತುಗಳಿವೆ. ಅವರ ಈ ಮಾತುಗಳು ಗದಾಯುದ್ಧದ ಪ್ರಧಾನರಸ ಅದು ಇದು ಎಂಬ ವಾದಕ್ಕೆ ಸಂಬಂಧಿಸಿಲ್ಲ. ಅದರಲ್ಲಿಯ ರಸವನ್ನು ಆಸ್ವಾದಿಸಿ ಅದಾವುದೆಂಬುದನ್ನು ತಿಳಿಪಡಿಸುವ ಸಹೃದಯನೋರ್ವನ ಮಾತುಗಳು, ಇವು.[2] 'ಅನವರತ ಬಾಷ್ಪವಾರಿಧಾರಾಪೂರ ಪರಿಪೂರಿತ ಪಲ್ಲವ ನೇತ್ರೆ' ದ್ರೌಪದಿಯೊಂದಿಗೆ ಗದಾಯುದ್ಧದ ಕಥೆ ತೊಡಗುವುದು. ಆ ಸಂದರ್ಭದಲ್ಲಿಯ ಭೀಮನ ಕೋಪ, ಅಣಕ,ಪ್ರತಿಜ್ಞೆಯ ಪುನರುಚ್ಚಾರಗಳು ದ್ರೌಪದಿಯ ಕರುಣಾಜನಕ ಪರಿಸ್ಥಿತಿಯ ಪ್ರತಿಕ್ರಿಯೆ. ನಂತರ ಬರುವವ 'ಅಭಿಮಾನಧನನುಮೆನಿಸಿದ ಚಿಂತಾಕ್ರಾಂತ ದುರ್ಯೋಧನ. ಸಂಧಿ ಮಾಡಿಕೊಳ್ಳೆಂಬ ಪಾಂಡವರ ಶೌರ್ಯಸಾಹಸಗಳ ಬಣ್ಣನೆಯಿಂದ ಕೂಡಿದ ಸಂಜಯನ ಹಿತೋಕ್ತಿಯಿಂದ ದುಃಖದಿಂದ ಕಿಡಿವಡೆದ ಅವನ ರೋಷಕ್ಕೆ ಎಣ್ಣೆ ಸುರಿದಂತಾಗುವುದು.ಬಳಿಕ ಮೃತನಾದನೆಂಬ ಭ್ರಾಂತಿಯಿಂದ ಉಕ್ಕುವ ಧೃತರಾಷ್ಟ್ರ ಗಾಂಧಾರಿಯರ ವಿಲಾಪ; ದ್ರೋಣ, ದುಶ್ಯಾಸನ, ಕರ್ಣ, ಅಭಿಮನ್ಯು ಮೊದಲಾದವರ ಮೃತದೇಹಗಳನ್ನು ಕಂಡು ದುರ್ಯೋಧನನ ಪ್ರಲಾಪ; ಏಕಾಕಿಯಾಗಿ ಬಂದ ದುರ್ಯೋಧನನನ್ನು ಕಂಡು ಭೀಷ್ಮನ ಮಾರುಕದ ಮತುಗಳು. ಕರುಣರಸ

1. ಕ. ಸಾ. ಚ., ಪು. ೧೧೩.
2. ಕೈಪಿಡಿ (ಸಂ. ೨), ಪು. ೬೨೫.

ಇಲ್ಲಿ ಸೂಸಿ ಹರಿದಿದೆ. ಗದಾಯುದ್ಧದ ನಿಜವಾದ ನಾಯಕ ದುರ್ಯೋಧನ, ಅಭಿಮಾನಧನ, ಮಹಾನುಭಾವ, ಎಂಬ ಅಭಿಪ್ರಾಯಕ್ಕೆ, ಗದಾಯುದ್ಧ ರನ್ನನ ಕೃತಿರತ್ನ ಎಂಬ ವಿಮರ್ಶನೆಗೆ, ಈ ಭಾಗ ಅಡಿಗಲ್ಲಿನಂತಿದೆ. ನಂತರ ಬರುವುದು ಭೀಮದುರ್ಯೋಧನರ ಗದಾಯುದ್ಧ. ವೀರ ರೌದ್ರಗಳ ಸ್ವಕ್ಷೇತ್ರವಿದ್ದರೂ ಗಾಂಧಾರಿ ಧೃತರಾಷ್ಟ್ರರ ಅದರಲ್ಲೂ 'ಭೀಮ, ನುಂಗು ಮುನ್ನೆಮ್ಮನೆಮ್ಮ ಸುತನಂ ಬೞಿಯಂ' ಎಂಬ ಗಾಂಧಾರಿಯ ಆಲ್ಪರಿವ ಬೇಡಿಕೆ, ಏಕಾಕಿಗನಾಗಿ ನಿಂದ ದುರ್ಯೋಧನನನ್ನು ಕಂಡು 'ಮನದೆಱಕದೆ' ಪರಸಿದ ಬಲರಾಮನ ಮನಸ್ಥಿತಿಯ ಬಣ್ಣನೆಯಲ್ಲಿ ಕರುಣ ಮತ್ತೆ ಇಣಕಿದೆ. ಹೀಗೆಯೆ ಮುಂದರಿದಾಗ ದುರ್ಯೋಧನನ ಹೃದಯದ್ರಾವಕ ಸ್ಥಿತಿಯನ್ನು ಕಂಡು ರುದ್ರಮೂರ್ತಿ ಅಶ್ವತ್ಥಾಮನ ಪ್ರಲಾಪ, ದುರ್ಯೋಧನನ ನಿರಾಶಾಜನ್ಯ ಮಾತುಗಳು, ಪಾಂಡವರೆಂದು ಬಗೆದು ಉಪಪಾಂಡವರನ್ನು ಕೊಂದು ಅವರ ತಲೆಗಳನ್ನು ತಂದಿರಿಸಿದಾಗ, 'ಪರಮೇಶ್ವರಾವತಾರನೆ, ಪರಮ ಜ್ಞಾನಿಯೆ ವಿವೇಕವಿಕಳರವೋಲ್ ಬಾಲರ ತಲೆಯನರಿದು ತಂದೆಯೊ' ಎಂಬ ಅಶ್ವತ್ಥಾಮನನ್ನು ಕುರಿತಿರುವ ದುರ್ಯೋಧನನ ಮರುಕದ ನುಡಿಗಳಲ್ಲಿ ಕರುಣದ ಪಾರಜ–ಗೆರೆ ಮತ್ತೆ ಮೇಲಕ್ಕೇರಿದೆ. ಕಥೆಯ ಮುಗಿತಾಯದಲ್ಲಿ ಸಹ ಧೃತರಾಷ್ಟ್ರ ಗಾಂಧಾರಿಯರ ಶೋಕ, ಭಾನುಮತಿ ಮೊದಲಾದ ಕೌರವ ಸ್ತ್ರೀಯರ ಕರುಣಾಕ್ರಂದನ, ಕರ್ಣನ ಕಳೇಬರವನ್ನು ಕಂಡು ಪ್ರಕಟವಾದ ಕುಂತಿಯ ಪುತ್ರಶೋಕ, ಕರ್ಣ ದುರ್ಯೋಧನಾದಿಗಳ ಶವಸಂಸ್ಕಾರ ಸನ್ನಿವೇಶಗಳಲ್ಲಿ ಕರುಣರಸ ಪುನಃ ತಲೆಯೆತ್ತಿದೆ. ದುರ್ಯೋಧನ, ಧೃತರಾಷ್ಟ್ರ, ಗಾಂಧಾರಿಯರ ಪಾತ್ರಗಳು ಉದಾತ್ತವಾಗಲು ಕರುಣಕ್ಕೆ ದೊರೆತ ಇಷ್ಟೊಂದು ಪ್ರಾಧಾನ್ಯತೆಯ ಮೂಲಕ ಎನ್ನುವಂತಿದೆ. ವೀರ ರೌದ್ರಗಳು ಕರುಣದ ಈ ರೇಖೆಗೆ ಏರಿಲ್ಲ. ವೇಣೀಸಂಹಾರದ ಪ್ರಧಾನರಸ ಕರುಣವೆಂದು ಪ್ರತಿಪಾದಿಸಿದ ವಿದ್ವಾಂಸರು ಗದಾಯುದ್ಧವನ್ನು ನೋಡಿದ್ದರೆ ಇವೆರಡರಲ್ಲಿ ಗದಾಯುದ್ಧವೇ ಮೇಲೆಂದು ಅಭಿಪ್ರಾಯ ಪಡುತ್ತಿದ್ದರೆಂದು ನಿಸ್ಸಂಕೋಚದಿಂದ ಹೇಳಬಹುದಾಗಿದೆ.

ಭವಭೂತಿ 'ಏಕೋರಸಃಕರುಣ ಏವ' ಎಂದು ಬಗೆದಿದ್ದರೆ, ರನ್ನ ಒಂದಡಿ ಮುಂದೆ ಹೋಗಿ, ರಸ ಯಾವುದಿದ್ದರೂ ಅಷ್ಟೇ, ಅದರ ಮುಖಾಂತರದಿಂದಲೇ ಉಳಿದ ರಸಗಳನ್ನು ಬಣ್ಣಿಸಬಹುದು ಎಂಬ ಅಭಿಪ್ರಾಯದವನಿದ್ದ ಎನ್ನುವಂತಿದೆ. ಗದಾಯುದ್ಧದಲ್ಲಿ ಆತ ಕರುಣವನ್ನು ಪ್ರಧಾನವಾಗಿಸಿದ್ದರೆ, ಅಜಿತಪುರಾಣದಲ್ಲಿ ಉದ್ದಾಮ ಶೃಂಗಾರವೆಂದು ಶಾಂತವನ್ನು ಎತ್ತಿಹಿಡಿದಿರುವನು. ಗದಾಯುದ್ಧದಲ್ಲಿಯೇ ಸಮರಾಂಗಣದ ಬೀಭತ್ಸ ಭಯಾನಕ ಪರಿಸರದಲ್ಲಿ ಅಭಿನವರಸಗಳೆಂದು ನವರಸಗಳನ್ನು ಸೃಷ್ಟಿಸಿ ಯಾವುದೇ ರಸದ ಅಂಗವಾಗಿ ಉಳಿದವುಗಳನ್ನು ಬಣ್ಣಿಸಬಹುದೆಂಬ ತನ್ನ ಅಭಿಪ್ರಾಯವನ್ನು ಸಕ್ರಿಯವಾಗಿಸಿರುವನು (೪/೨೦–೩೧).

ಗದಾಯುದ್ಧದಲ್ಲಿ ಕರುಣ, ವೀರ, ರೌದ್ರ, ಬೀಭತ್ಸ, ಭಯಾನಕ ರಸಗಳ ಬಣ್ಣನೆ ಸಾಕಷ್ಟಿದೆ. ಕಥಾನಕವೇ ಇಂಥದು. ಶೃಂಗಾರ ತಕ್ಕಮಟ್ಟಿಗೆ ಬಂದಿದೆ.

ಹಾಸ್ಯ, ಅದ್ಭುತ, ಶಾಂತರಸಗಳು ಮಾದರಿಗಾಗಿ ವ್ಯಕ್ತವಾಗಿವೆ. ಇವು ಕೆಲವು ಉದಾಹರಣೆಗಳು—

ಕರುಣ— ಕಾನೀನಂ ದ್ರೋಣನದೀ-
ಸೂನುಗಳೞಿದಿಂಬೞಿಕ್ಕೆ ಪೆಱತೆನಗಿಲ್ಲೆಂ- ।
ದಾನೆ ಗಳಿತಾಶ್ರು ಜಲದಿಂ
ಸೇನಾಪತ್ಯಾಭಿಷೇಕಮಂ ಮಾಡಿದಪೆಂ ॥ ೩-೬೬

—ಅಭಿಮಾನಧನ, ವೈಭವಸಂಪನ್ನ ದುರ್ಯೋಧನನ ನಿಕೃಷ್ಟಾವಸ್ಥೆಯ ಪರಮಾವಧಿ ಹಂತದಂತಿದೆ. ಕರ್ಣ, ದ್ರೋಣ, ಭೀಷ್ಮರು ಅಳಿದ ಬಳಿಕ ನನಗಾರೂ ಉಳಿಯಲಿಲ್ಲ; ಈಗ ನಾನೇ ಸೇನಾಪತಿಯಾಗಬೇಕು; ಮಡಿದವರಿಗಾಗಿ ಸುರಿಸುತ್ತಿರುವ ಕಣ್ಣೀರಿನಿಂದ ನನಗೆ ನಾನೇ ಸೇನಾಪತ್ಯದ ಅಭಿಷೇಕ ಮಾಡಿಕೊಳ್ಳಬೇಕು, ಎಂದು ಹಲಬುವನು.

ವೀರ— ಚರಣಾಕ್ರಾಂತಂಮಹೀಮಂಡಲ ಮದಿರೆ ಭುಜಾಕ್ರಾಂತ ಮಾಶಾ
ಗಜೇಂದ್ರೋತ್ಕರ ಮಾಶಾಭಿತ್ತಿಯಿಂದಂ ಪೆಱದೆಗೆಯೆ ಗದಾಕ್ರಾಂತ
ಮುದ್ಭ್ರಾಂತ ವಿದ್ಯಾ- ।
ಧರಚಕ್ರಂ ಗೆಂಟುಗೆಂಟಾಗಿರಿಸೆ ನಿಜವಿಮಾನಂಗಳಂ ಭೈರವಾಡಂ
ಬರ ಮಾಕಲ್ಪಾಂತಕಾಲಂ ನೆಗೞ್ದುದು ಸಮರಂಭೀಮದುರ್ಯೋಧನೀಯಂ॥
೮-೨೦

—ಭೀಮ ದುರ್ಯೋಧನರ ಗದಾಯುದ್ಧ ವರ್ಣನೆ. ಇಬ್ಬರೂ ಪಾದಗಳನ್ನು ಘಟ್ಟಿಸಿದಾಗ ನೆಲ ನಡುಗಿತು. ಮುಂಚಾಚಿದ ಬಾಹುಗಳು ದಿಗಂತವನ್ನು ಮುಟ್ಟಿದಾಗ ದಿಗ್ಗಜಗಳು ಹಿಂದೆ ಸರಿದವು. ಗದೆಗಳನ್ನು ಬೀಸುವಾಗ ತಮಗೆಲ್ಲಿ ಪೆಟ್ಟು ಬೀಳುವದೊ ಎಂದು ಬೆದರಿ ವಿದ್ಯಾಧರಾದಿ ದೇವತೆಗಳು ತಮ್ಮ ವಿಮಾನಗಳನ್ನು ಹಿಂದೂಡಿದರು. ಇಬ್ಬರೂ ಸರಿಸಮಾನರಿದ್ದದರಿಂದ ಯುದ್ಧ ಕಲ್ಪಾಂತದವರೆಗೆ ನಡೆವಂತೆ ತೋರಿತು. ಎಲ್ಲವೂ ಅತಿಶಯೋಕ್ತಿ. ಇಬ್ಬರೂ ಅಸಾಮಾನ್ಯ ವೀರರು. ಒಬ್ಬರಿಗೊಬ್ಬರು ಸೋಲುವವರಲ್ಲ, ಎಂಬುದರ ಬಣ್ಣನೆ.

ರೌದ್ರ— ಎತ್ತುವೆನೊ ಮಂದರಾದ್ರಿಯ-
ನೊತ್ತುವೆನೊ ರಸಾತಳಕ್ಕೆ ನೆಲನಂದೆಸೆಯಂ ।
ಪತ್ತುವೆನೊ ಪಗೆಯ ಬೆನ್ನಂ
ಪತ್ತುವೆನೊ ದಿಶಾಗಜಂಗಳಂ ತುತ್ತುವೆನೊ ॥ ೬-೧೮

—ದುರ್ಯೋಧನನ ಊರುಭಂಗಕ್ಕಾಗಿ ಆತುರಗೊಂಡ ಭೀಮ ‘ ಕಿಡಿಕಿಡಿ

ಪೋಗಿ ಮೀಸೆಯಂಕಡಿದು' ಮಾಡಿದ 'ಪ್ರಳಯಕಲ್ಪಸಂಕಲ್ಪ.' ಇದಿನ್ನೊಂದು ಉದಾಹರಣೆ—

ರಸೆಯಿಂ ಕಾಲಾಗ್ನಿ ರುದ್ರಂ ಪೊಱಮಡುವವೊಲಂ ತಾ ಸರೋಮಧ್ಯದಿಂಸಾ-
ಹಸಗರ್ವಾಲಂಕೃತಂ ತೊಟ್ಟನೆಕೊಳೆಪೊಱಮಟ್ಟಿಲ್ಲಿದಂ ಭೀಮನೆಂದೆ- |
ಣ್ದೆಸೆಯಂ ನೋಡುತ್ತೆ ಮತ್ತದ್ಭುತ ನಟನಿಟಲಾಲೋಲ ಕೀಲಾಕ್ಷಿವೋಲ್ದ-
ಳ್ದಿಸೆ ಕೋಪಾರಕ್ತನೇತ್ರಂ ನಿಜಭುಜಗದೆಯಂ ತೂಗಿದಂ ಧಾರ್ತರಾಷ್ಟ್ರಂ ||
೭–೩೦

—ಭೀಮನ ಮೂದಲಿಕೆಯಿಂದ ಕೆರಳಿ 'ನೀರೊಳಗಿರ್ದುಂ ಬೆಮರ್ತ' ದುರ್ಯೋಧನ ವೈಶಂಪಾಯನ ಸರಸ್ಸಿನಿಂದ ಹೊರಬರುವಾಗಿನ ಬಣ್ಣನೆ. ದುರ್ಯೋಧನನ್ನು ಪ್ರಳಯಾಗ್ನಿಗೂ ರೋಷದಿಂದ ಜ್ವಲಿಸುವ ಆತನ ರಕ್ತ ನೇತ್ರಗಳನ್ನು ತಾಂಡವ ರುದ್ರನ ಉರಿಗಣ್ಣಿಗೂ ಹೋಲಿಸಿರುವನು, ರನ್ನ.

ಶೃಂಗಾರ—ಸ್ಮರಸಂಜೀವನೆ ಕೃಷ್ಣೆ ಪೂಮುಡಿದಳಾಶೃಂಗಾರಮಾಭಾವಮಾ
ಪರಿಜಾವಿಭ್ರಮಬೆಡಂಗು ನೆಗೞ್ದಾ ಸೌಂದರ್ಯಮಾಬಿಂಕಮಾ |
ತರಳಾಪಾಂಗ ವಿಲಾಸಮಾಲಟಹಮಾ ಲಾವಣ್ಯ ಮಾಪುಣ್ಯಮಾ
ದರಹಾಸಾಮೃತ ಮೇಂಮನಂಗೊಳಿಸಿತೋ ಚಾಳುಕ್ಯಕಂದರ್ಪನಾ ||
೮–೫೦

—ದುರ್ಯೋಧನ ಊರುಭಂಗದ ನಂತರ 'ಮಾಂಗಲ್ಯ ಮಾಲಾಲಂಕೃತಳಾಗಿ' ಬರುವ ದ್ರೌಪದಿಯ ವರ್ಣನೆ. ಕಥಾರಂಭದಲ್ಲಿ ಕ್ರೋಧವನ್ನು ಉದ್ರೇಕಿಸಿ ಭೀಮನನ್ನು ಪ್ರತಿಜ್ಞಾಪಾಲನೆಗೆ ಪ್ರಚೋದಿಸಿದ ಅವಳು ಈಗ ಅವನ ಪ್ರೇಮವನ್ನು ಉಕ್ಕಿಸುವಳು. ಇದಕ್ಕೆ ಮೊದಲು ಭೀಮ—

ಪಗೆ ಮಡಿದುದು ಮುಡಿಯೆನೆ ನಗೆ-
ಮೊಗದಿಂ ಪಾಂಚಾಳಿ ಮಱೆದೆನಾಂ ಪಲಕಾಲಂ |
ವಿಗತಾಭ್ಯಾಸದೆ ಸತ್ತಿಗ
ಪಗೆಯಂ ಮಡಿಯಿಸಿದೆ ನೀನೆ ಮುಡಿಯಲ್ವೇೞ್ಕುಂ || ೮–೪೮

—ಇನ್ನೇನು ಶತ್ರುಸತ್ತನು, ಮುಡಿಯನ್ನು ಕಟ್ಟಿಕೊ ಎಂದು ಹೇಳಿದಾಗ, ವರ್ಷಾನುವರ್ಷ ಹಾಗೆಯೆ ಬಿಟ್ಟಿರುವುದರಿಂದ ಮುಡಿಕಟ್ಟುವ ಅಭ್ಯಾಸ ತಪ್ಪಿಹೋಗಿದೆ; ನೀನೇ ಈ ಕೆಲಸವನ್ನು ಮಾಡುವುದು ಚೆನ್ನ, ಎಂದು ದ್ರೌಪದಿ ನಗೆಮೊಗದಿಂದ ತನ್ನ ಬಯಕೆಯನ್ನು ತಿಳಿಸುವಳು. ಭೀಮ 'ಅಂತೆಗೆಯ್ವೆ' ಎಂದು ಅವಳ ಮುಡಿಕಟ್ಟುವನು. ಈ ಪದ್ಯ ರನ್ನನ ಸ್ವಂತದ್ದಲ್ಲ. ವೇಣೀಸಂಹಾರದಲ್ಲಿ ಈ ಸಂದರ್ಭದಲ್ಲಿರುವ 'ವಿಸ್ಮೃತಾಸ್ಮ್ಯೇತಂ ವ್ಯಾಪಾರಂ. ನಾಥಸ್ಯ ಪ್ರಸಾದೇನ ಪುನರಪಿ ಶಿಕ್ಷಿಷ್ಯೇ',

ಎಂಬ ದ್ರೌಪದಿಯ ಮಾತಿನ ಅನುವಾದ.

ಹಾಸ್ಯ—ದುರ್ಯೋಧನನನ್ನು ಕೊಲ್ಲುವುದು ನಮ್ಮರಸನಿಗೆ ಮಹಾಕಾರ್ಯ್ಯವಲ್ಲ, ಚಿಂತಿಸಬೇಡ, ಎಂದು ಭೀಮನ ಪರವಾಗಿ ಭರವಸೆ ನೀಡುವಾಗ ನರ್ಮಸಚಿವ ದ್ರೌಪದಿಗೆ ಎರಡನೆಯ ಹಿಡಿಂಬೆ ಎಂದು ಹಾಸ್ಯಮಾಡುವನು. ಈ ಸಂಧರ್ಭದ 'ಕುರುಕುಲಮಂನುಂಗಿದೆ' ಪದ್ಯವನ್ನು ಈ ಮೊದಲು ೧೭ನೆಯ ಕಾವ್ಯಲಕ್ಷಣ ಪ್ರಿಯೋಕ್ತಿಯ ವಿವರಣದಲ್ಲಿ ಕೊಟ್ಟಿದೆ.

ಬೀಭತ್ಸ—ರಕ್ತ, ಮಾಂಸ, ಕರುಳು, ಇತ್ಯಾದಿಗಳ ಜುಗುಪ್ಸೆ ಹುಟ್ಟುವಂಥ ವರ್ಣನೆ ಅಥವಾ ದೃಶ್ಯದಿಂದ ಈ ರಸ ಉತ್ಪನ್ನವಾಗುವದು. ಇದೊಂದು ಉದಾಹರಣೆ–

ಗುರುವಿನ ನೆತ್ತರಂ ಕುಡಿವೆನಪ್ಪೊಡವಂ ದ್ವಿಜವಂಶಜಂ ನಿಜಾ-
ವರಜನ ನೆತ್ತರಂ ಕುಡಿವೆನಪ್ಪೊಡೆ ಭೀಮನೆ ಪೀರ್ದನೆಯ್ದೆ ಭೀ- |
ಷ್ಮರ ಬಿಸುನೆತ್ತರಂ ಕುಡಿವೊಡಿನ್ನುಮೊಳಂ ಕುರುರಾಜ ನಿನ್ನ ನೆ-
ತ್ತರ ಸವಿನೋಟ್ಟಿನಂ ಬಯಸಿ ಬೀತಪೆನೆಂದುದದೊಂದುಪುಲ್ಮರುಳ್ || ೪-೪೨

—ಗುರು ದ್ರೋಣನ ರಕ್ತವನ್ನು ಕುಡಿಯಬೇಕೆಂದರೆ ಆತ ಬ್ರಾಹ್ಮಣ; ದುಶ್ಶ್ಯಾಸನನ ರಕ್ತವನ್ನು ಭೀಮ ಕುಡಿದ; ಭೀಷ್ಮ ಇನ್ನೂ ಬದುಕಿರುವ. ಆದ್ದರಿಂದ ನಿನ್ನ ಬಿಸಿ ರಕ್ತಕ್ಕಾಗಿ ಹಾತೊರೆಯುವೆ, ಎಂದು ಒಂದು ರಣಪಿಶಾಚಿ ದುರ್ಯೋಧನನನ್ನು ಕೆಣಕುವದು.[1]

---

1. ಬ್ರಾಹ್ಮಣನೆಂಬ ಕಾರಣದಿಂದ ದ್ರೋಣನ ರಕ್ತವನ್ನು ಕುಡಿಯಲಿಲ್ಲ ಎಂಬ ಪಿಶಾಚಿಯ ಮಾತು ವೇಣೀಸಂಹಾರದಲ್ಲಿ ವಸಾಗಂಧಿ ಮತ್ತು ರುಧಿರಪ್ರಿಯ ರಕ್ಕಸ ದಂಪತಿಗಳ ಸಂಭಾಷಣೆಯ ಪಡಿನೆಳಲು. ವಸಾಗಂಧಿ ದ್ರೋಣನ ರಕ್ತವನ್ನು ಕುಡಿಯಲು ಕರೆದಾಗ, ರುಧಿರಪ್ರಿಯ –ಬೇಡ, ಅದು ಬ್ರಾಹ್ಮಣನ ರಕ್ತ; ಗಂಟಲು ಸುಡುವದು (ಬ್ರಾಹ್ಮಣಶೋಣಿತಂ ಖಲ್ವೇತತ್, ಗಲಂದಹದ್ದಹತ್ ಪ್ರವಿಶತಿ) ಎನ್ನುವನು. ಭಟ್ಟನಾರಾಯಣ ಈ ಪಾತ್ರಗಳನ್ನು ಸೃಷ್ಟಿಸಿರುವದರ ಉದ್ದೇಶ ರನ್ನನ ಕಣ್ಣು ತಪ್ಪಿಸಿ ಕುಳಿತಂತೆ ತೋರುವದು. ಭೀಮ ದೇವಾಂಶ. ಉಚ್ಚಕುಲ ಸಂಭೂತ, ಕೃತಿಗೆ ನಾಯಕ. ಇಂಥವ ಮಾನವ ರಕ್ತ ಅದೂ ಸ್ವಬಾಂಧವನ ರಕ್ತವನ್ನು ಕುಡಿಯುವದು ರಾಕ್ಷಸೀ ಕಾರ್ಯ. ಇತ್ತ ದುಶ್ಶ್ಯಾಸನನ ರಕ್ತವನ್ನು ಹೀರುವೆನೆಂಬ ಭೀಮನ ಪ್ರತಿಜ್ಞೆಗೆ ಭಂಗ ಬರಬಾರದು, ಅತ್ತ ಆತನ ಚಾರಿತ್ರ್ಯಕ್ಕೆ ದೋಷ ತಟ್ಟಬಾರದು. ಇದನ್ನು ಮುಂದಾಲೋಚಿಸಿ ರಾಕ್ಷಸರಾಣಿ ಹಿಡಿಂಬೆ, ಭೀಮ ದುಶ್ಶ್ಯಾನನ ರಕ್ತವನ್ನು ಕುಡಿಯುವಾಗ ಸೂಕ್ಷ್ಮರೂಪದಿಂದ ಅವನ ಗಂಟಲದಲ್ಲಿ ಕುಳಿತು ಆ ರಕ್ತ ಒಳಗಿಳಿಯದಂತೆ ನೀನೇ ಕುಡಿಯಬೇಕೆಂದು ರುಧಿರಪ್ರಿಯನಿಗೆ ಆಜ್ಞಾಪಿಸುವಳು (ರುಧಿ.—ವೃಕೋದರೇಣ ದುಃಶಾಸನಸ್ಯ ರುಧಿರಂಪಾತುಂ ಪ್ರತಿಜ್ಞಾತಂ; ತಚ್ಚಾಸ್ಮಾಭೀ ರಾಕ್ಷಸೈರನುಪ್ರವಿಶ್ಯ ಪಾತವ್ಯಂ), ಮತ್ತು ಆ ಮೂಲಕ ಭೀಮನ ಚಾರಿತ್ರ್ಯಕ್ಕೆ ತಗಲುವ ಕಲಂಕವನ್ನು ತಪ್ಪಿಸುವಳು (ವೇಣೀ, ೩-ವಿಷ್ಕಂಭಕ; ವೇಣೀ–ವಿಮರ್ಶೆ, ಪು. ೫೪). ಭೀಮ ಮತ್ತು ಸತ್ಯಾಶ್ರಯ ಇರಿವ ಬೆಡಂಗರಲ್ಲಿ ಅಭೇದವನ್ನು ಕಲ್ಪಿಸಿದ ರನ್ನ ರಣಪಿಶಾಚಿಯಿಂದ 'ನಿಜಾವರಜನ ನೆತ್ತರಂ ಕುಡಿವೆನೆಪ್ಪೊಡೆ ಭೀಮನೆ ಪೀರ್ದನೆಯ್ದೆ' ಎಂದು ನುಡಿಸುವ ಬದಲು ಭಟ್ಟನಾರಾಯಣನ ಈ ತಂತ್ರವನ್ನು ಒಂದಿಲ್ಲೊಂದು ರೀತಿಯಿಂದ ಬಳಸಿಕೊಳ್ಳಬೇಕಿತ್ತು, ಎನಿಸುವದು.

ಭಯಾನಕ— ಕದನದೊಳಣ್ಮಿದೊಳ್ಮಿದುಳ ಕರ್ದಮದೊಳ್ಜುಗುಳ್ದಂಭ್ರಜಾಜಿ ಪೋ–
ಪುದುಮೊಡನಿರ್ದಸಂಜಯನಿಳೇಶ್ವರಂ ಪಿಡಿದೂರುಭಂಗಮಾ–।
ಗದೆವಲಮೆಂದೊಡಾಗದೆನೆ ಪುಲ್ಮರುಳೊಂದೆಡೆವೋಗಿ ಭೀಮಕೋ–
ಪದೆ ನಿನಗೂರು ಭಂಗಭಯಮಾಗದೆಪೋಕುಮೆ ಕೌರವೇಶ್ವರಾ॥
೪–೪೨

—ರಣರಂಗದ ರಕ್ತಮಾಂಸಗಳ ಕೆಸರಿನಲ್ಲಿ ನಡೆವಾಗ ದುರ್ಯೋಧನನ ಕಾಲು ಜಾರುವುದು. ಆಗ ಸಂಜಯ,–ಊರುಭಂಗವಾಗಲಿಲ್ಲಷ್ಟೇ? ಎಂದು ಅವನನ್ನು ಕೇಳುವನು. ಸಂಜಯನ ಮಾತನ್ನೆತ್ತಿಕೊಂಡು ರಣಪಿಶಾಚಿ.–ಭೀಮನ ಕೋಪದಿಂದ ನಿನ್ನ ಊರುಭಂಗವಾದಿರದು, ಎಂದು ದುರ್ಯೋಧನನನ್ನು ಹಂಗಿಸುವದು. ಮೈತ್ರೇಯ ಶಾಪದ ನೆನಪಾಗಿ ದುರ್ಯೋಧನ ಮನದಲ್ಲಿ ಅಳಕುವನು. ಧೈರ್ಯ ತಂದುಕೊಂಡು ಹುಚ್ಚು ಪಿಶಾಚಿಗಳ ಮಾತಿನಲ್ಲಿ ಹುರುಳಿಲ್ಲವೆಂದು ಮುಂದರಿಯುವನು. ಇದರಲ್ಲಿ ಮುಂದಾಗುವದರ ಸೂಚನೆಯನ್ನು ತಂದಿರುವನು ರನ್ನ. ವೇಣೀಸಂಹಾರದಲ್ಲಿ ಈ ಬಗೆಯ ಸನ್ನಿವೇಶವನ್ನು ಭಟ್ಟನಾರಾಯಣ ದುರ್ಯೋಧನನ ಪತ್ನಿ ಭಾನುಮತಿಯ ಸ್ವಪ್ನದ ಮೂಲಕ ಸೃಷ್ಟಿಸಿರುವನು. ಭಾನುಮತಿ ಸ್ವಪ್ನದಲ್ಲಿ ಒಂದು ಮುಂಗುಸಿ ೧೦೦ ಸರ್ಪಗಳನ್ನು ಕೊಲ್ಲುವುದನ್ನು ಕಾಣುವಳು. ಭಯಗೊಂಡ ಆಕೆ ತನ್ನ ಸಖಿಗೆ ಈ ಸ್ವಪ್ನ ವೃತ್ತಾಂತವನ್ನು ವಿವರಿಸುವಾಗ ಮರೆಯಲ್ಲಿ ನಿಂತು ಕೇಳುತ್ತಿದ್ದ ದುರ್ಯೋಧನ,–ಮುಂಗುಸಿಯು ೧೦೦ ಸರ್ಪಗಳನ್ನು ಸಂಹರಿಸಿತೆಂಬ ಕೌರವ ಸಂಹಾರ ಸೂಚಕ ಮಾತಿನಿಂದ ಮನದಲ್ಲಿ ಅಳಕುವನು. ಧೈರ್ಯತಂದುಕೊಂಡು ಮುಂಬಂದು,–ಗ್ರಹ ಗತಿ, ಸ್ವಪ್ನ ಶಕುನಾದಿಗಳ ಫಲ ಕಾಕತಾಲೀಯ ನ್ಯಾಯದಂತಿರುವುದು, ಚಿಂತಿಸಬೇಡ ಎಂದು ಅವಳನ್ನು ಸಂತೈಸುವನು.[1]

ಅದ್ಭುತ—ಅಲೌಕಿಕ ವಸ್ತು ಇಲ್ಲವೆ ಕೃತಿಯಿಂದಾಗುವ ವಿಸ್ಮಯ ಅದ್ಭುತ ರಸದ ಉಗಮಸ್ಥಾನ. ಊರುಭಂಗದ ನಂತರ ಕೃಷ್ಣ ಧರ್ಮಾರ್ಜುನಾದಿ ಪಾಂಡವರು, ದ್ರೌಪದಿ, ಎಲ್ಲರೂ ಸೇರಿ ಭೀಮನ ಬಾಹುದಂಡಗಳನ್ನು ಪೂಜಿಸುವರು. ಆ ಸಂದರ್ಭದಲ್ಲಿ ಭೀಮ—

ಅಸುಹೃನ್ಮಾಂಸದಿನಸ್ರರಕ್ತ ಮಧುವಿಂ ವಿದ್ವಿಷ್ಟರೋಬ್ಜಂಗಳಿಂ–
ದಸಮಾಮಿತ್ರ ಕಠೋರದಂತಕುಲದಿಂ ರೌದ್ರಾರ್ಚನಾ ದ್ರವ್ಯದಿಂ–।
ದೊಸೆದಾಗಳ್ಬಲವಂದು ಮುಗ್ಗಿ ಪೊಡೆವಟ್ಟುತ್ಸಾಹದಿಂ ತಾನೆ ಪೂ–
ಜಿಸಿದಂ ಸಾಹಸಭೀಮನಾಹವಜಯೋದ್ದಂಡಂ ಗದಾದಂಡಮಂ॥ ೮–೬೬

—ಜೇನುತುಪ್ಪವೆಂದು ಶತ್ರುಗಳ ರಕ್ತಮಾಂಸ, ಪುಷ್ಪಗಳೆಂದು ಶಿರಸ್ಸು, ದಂತ

1. ವೇಣೀ, ೨–೧೫

ವಳಿ. ಇವೇ ಮೊದಲಾದ ‘ ರೌದ್ರಾರ್ಚನ ದ್ರವ್ಯ ’ಗಳಿಂದ ಸ್ವತಃ ತನ್ನ ಬಾಹುದಂಡಗಳನ್ನೂ ಗದಾದಂಡವನ್ನೂ ಪೂಜಿಸಿದನು. ಪೂಜೆಗಾಗಿ ಆತ ಬಳಿಸಿದ ದ್ರವ್ಯಗಳು ಅಲೌಕಿಕ. ಸಾಮಾನ್ಯ ಪರಿಸ್ಥಿತಿಯಲ್ಲಿ ಜುಗುಪ್ಸೆ (ಬೀಭತ್ಸ) ಹುಟ್ಟಿಸುವಂಥವು. ವಿಜಯೋನ್ಮಾದದ ಈ ಸಮಯದಲ್ಲಿ ಅದ್ಭುತವಾಗಿ ಪರಿಣಮಿಸಿವೆ. ಇನ್ನೊಂದು ಉದಾಹರಣೆ—

ಶರವೊಂದಂ ತೆಗೆದು ನಿಜೋ
ದರದಿಂ ಲೆಕ್ಕಣಿಕೆ ಮಾಡಿ ಗಜಮದ ಮಸಿಯಂ |
ತರಿಸಿ ಪತಾಕಾ ಪಟದೊಳ್
ಬರದಟ್ಟಿದ ನಂಥನೃಪತಿಗಾಸಿಂಧುಸುತಂ || ೬–೨

—ದುರ್ಯೋಧನ ಸಂಧಿಗೆ ಒಪ್ಪನೆಂಬುದನ್ನು ಮನಗಂಡು, ಭೀಷ್ಮ ತನ್ನ ಶರೀರದಲ್ಲಿ ನಟ್ಟಿರುವ ಬಾಣಗಳಲ್ಲಿ ಒಂದನ್ನು ಹಿರಿದು ಲೆಕ್ಕಣಿಕೆಯನ್ನು ಮಾಡಿ ಆನೆಯ ಮದೋದಕ ಮಸಿಯಲ್ಲೆದ್ದಿ ಧ್ವಜದ ಬಟ್ಟೆಯ ಮೇಲೆ,—ಈತ ಸಂಧಿಗೆ ಒಡಂಬಡುವದಿಲ್ಲ; ನೀನೇ ಯತ್ನಿಸು ಎಂದು ಧೃತರಾಷ್ಟ್ರನಿಗೆ ಒಂದು ಲಿಖಿತ ಸಂದೇಶವನ್ನು ಕಳಿಸುವನು ಸಂಜಯನೊಡನೆ. ಈ ಲೇಖನ ಸಾಹಿತ್ಯ ಅಲೌಕಿಕ. ಅತ ಏವ ಅದ್ಭುತ. ಆದರೆ ಈ ಕಲ್ಪನೆ ರನ್ನನದಲ್ಲ. ವೇಣೀಸಂಹಾರದಲ್ಲಿಯದು. ಅಲ್ಲಿ ಕರ್ಣ ತನ್ನ ಶಿರೋವೇಷ್ಟನದ ಒಂದು ತುಂಡನ್ನು ಹರಿದು ಶರೀರದಿಂದ ಸುರಿಯುತ್ತಿದ್ದ ರಕ್ತದಲ್ಲಿ ಬಾಣವನ್ನೆದ್ದಿ ಸೂತ ಸುಂದರಕನೊಂದಿಗೆ,—ರಣದಲ್ಲಿ ದುಶ್ಶಾಸನನನ್ನು ವಧಿಸಿದ ಭೀಮನನ್ನು ಕೊಲ್ಲುವದಾಗಲಿಲ್ಲ; ನೀನೇ ಇದನ್ನು ನಿರ್ವಹಿಸು,’ ಎಂದು ದುರ್ಯೋಧನನಿಗೆ ಲಿಖಿತ ಸಂದೇಶವನ್ನು ಕಳಿಸುವನು.[1]

ಶಾಂತ—ಶಾಂತರಸದ ವಿಷಯದಲ್ಲಿರುವ ವಾದ ಇಂದಿಗೂ ಬಗೆ ಹರಿದಿಲ್ಲ. ಆದರೆ ಶಾಂತರಸ ಸೇರಿ ರಸಗಳು ಒಂಬತ್ತು, ನವರಸಗಳು ಎಂಬುದು ಮನೆಮಾತಾಗಿದೆ. ನಮಗಿಷ್ಟು ಸಾಕು. ನಾಟ್ಯಶಾಸ್ತ್ರದಲ್ಲಿ ಪ್ರಕ್ಷಿಪ್ತವೆಂದು ಗಣಿಸಲಾದ ಶಾಂತರಸದ ಲಕ್ಷಣ ಂತಿದೆ—

ನಯತ್ರ ದುಃಖಂ ನಸುಖಂ ನದ್ವೇಷೋನಾಪಿ ಮತ್ಸರಃ
ಸಮಃ ಸರ್ವೇಷು ಭೂತೇಷು ಸಶಾಂತಃ ಪ್ರಥಿತೋ ರಸಃ ||

—ಎಲ್ಲಿ ಸುಖ ದುಃಖಗಳಿಲ್ಲವೊ, ದ್ವೇಷ ಮತ್ಸರಗಳಿಲ್ಲವೊ, ಎಲ್ಲಿ ಜೀವಕೋಟಿಗಳಲ್ಲಿ ಸಮಭಾವ ನೆಲೆಸಿದೆಯೋ ಅದು ಶಾಂತ.[2] ಗದಾಯುದ್ಧದಲ್ಲಿ ದುರ್ಯೋಧನನ ಅವಸಾನ ಈ ಬಗೆಯದು ಎನ್ನುವಂತಿದೆ. ರನ್ನನ ಮಾತುಗಳಲ್ಲಿ–‘ ಚಿತ್ತ ಸಮಾಧಾನಂ

1. ವೇಣೀ, ೪–೧೧, ನಂತರ.
2. ನಾ. ಶಾ., ೬–೮೨ ನಂತರ.

ಗೆಯ್ದು ಅಜಿತನಂ ಸ್ಮರಿಯಿಸಿ, ಸುರಲೋಕವುಂ ಸಾಧಿಸುವೆ,' ಎಂದು ಅಶ್ವತ್ಥಾಮಾದಿಗಳನ್ನು ವಿಸರ್ಜಿಸಿ ದುರ್ಯೋದನ ಅಂದು ಸಂಧ್ಯಾಸಮಯದಲ್ಲಿ ಪ್ರಾಣವಿಸರ್ಜನೋನ್ಮುಖನಾದ. ಹೀಗೆ ನಿರ್ವಿಕಾರಚಿತ್ತದಿಂದ ಸುರಲೋಕಾಪೇಕ್ಷಿಯಾಗಿ ಅಜಿತ (ಕೃಷ್ಣ) ನನ್ನು ಸ್ಮರಿಸುತ್ತ ಆತ ಅಸುವನ್ನು ನೀಗಿದಾಗ—

ಪಂಕಜಮುಂ ಸುಹೃದ್ವದನ ಪಂಕಜಮುಂ ಮುಗಿವನ್ನಮುಗ್ರತೇ-
ಜಂಕಿಡುತಿರ್ಪಿನಂ ನಿಜಕರಂಗಳನಂದುಡುಗುತ್ತುಮಿರ್ದುಚ- |
ಕ್ರಾಂಕ ಮುಗಲ್ಪಿನಂ ಕ್ರಮದಿನಂಬರಮುಂ ಬಿಸುಟುರ್ಬಿನಂಧಕಾ-
ರಂ ಕವಿತರ್ಪಿನಂ ಕುರುಕುಲಾರ್ಕನು ಮರ್ಕನುಮಸ್ತಮೆಯ್ದಿದರ್ || ೯–೩೫

ಕುರುವಂಶದ ಸೂರ್ಯನೂ ವಿಶ್ವದ ಸೂರ್ಯನೂ ಏಕ ಕಾಲದಲ್ಲಿ ಅಸ್ತಂಗತರಾದರು. ವಿಶ್ವಸೂರ್ಯನ ಅಸ್ತದೊಂದಿಗೆ ಕಮಲಗಳು ಮುದುಡಿಕೊಂಡವು. ಕುರು ವಂಶ ಸೂರ್ಯನ ಅಸ್ತದೊಂದಿಗೆ ಆತನ ಆಪ್ತೇಷ್ಟರ ಮುಖಕಮಲಗಳು ಮುದು, ಕೊಂಡವು. ಸೂರ್ಯ ಆವರೆಗೆ ತೇಜಸ್ಸಿನಿಂದ ಬೆಳಗಿದ ತನ್ನ ಕರ(ಕಿರಣ)ಗಳನ್ನು ಒಳಗೆಳೆದುಕೊಂಡ. ದುರ್ಯೋಧನ ತನ್ನ ಕರ (ಕೈ)ಗಳನ್ನು ಮುದುಡಿಕೊಂಡ. ಚಕ್ರವಾಕಗಳು ಒಂದನ್ನೊಂದು ಅಗಲಿದವು. ಅದುವರೆಗಿದ್ದ ಚಕ್ರವರ್ತಿತ್ವವು ದುರ್ಯೋಧನನನ್ನು ಅಗಲಿತು. ಆಕಾಶವು ಅಂಧಕಾರಮಯವಾಯಿತು. ದುರ್ಯೋಧನನ ಅವಸಾನದಿಂದ ಭೂ ಲೋಕವು ಕತ್ತಲದಲ್ಲಿ ಮುಳುಗಿತು, ಎಂದು ಬಣ್ಣಿಸಿರುವನು ರನ್ನ.

ಶಾಂತ ರಸದ ಉತ್ಪತ್ತಿ, ಸ್ವರೂಪ ಇತ್ಯಾದಿಗಳ ವಿಷಯದಲ್ಲಿರುವ ವಾದವಿವಾದ ಏನೇ ಇರಲಿ, ಗದಾಯುದ್ಧದ ಈ ಭಾಗವನ್ನು ಓದಿದಾಗ ಆವರೆಗಿನ ರಾಗ ದ್ವೇಷ ಜನ್ಯ ಅಬ್ಬರ ಆಕ್ರೋಶಗಳು ಅಡಗಿ ಓದುಗರಲ್ಲಿ ಒಂದು ಬಗೆಯ ವೈರಾಗ್ಯಭಾವ ಮೂಡುವುದು. ಶಾಂತರಸವೆಂಬುವುದು ಇದು ಅಥವಾ ಇಂಥದು ,ಎಂದರೆ ತಪ್ಪಾಗದು.

ಇಲ್ಲಿಗೆ ರನ್ನನ ಸಮಸ್ಯಾತ್ಮಕ ಸರಸ್ವತಿ ಸ್ತುತಿ ಪದ್ಯದ ವಿಚಾರ ಪೂರ್ಣವಾದಂತಾಯಿತು. ಭರತೋಕ್ತ ಕಾವ್ಯ ಲಕ್ಷಣಗಳನ್ನು ಅಭಿನವಗುಪ್ತ ಅಪ್ರಸ್ಥಿವೆಂದು ಬಗೆದಿದ್ದರೆ ಧನಂಜಯ ಅವುಗಳ ಪ್ರತ್ಯೇಕ ಅಸ್ತಿತ್ವವನ್ನೇ ಅಲ್ಲಗಳೆದಿರುವನು. ಇವರೀರ್ವರನ್ನು ಮಿಕ್ಕಿ ರನ್ನ ಅವು ಕಾವ್ಯದೇವಿಯ ಅಲಂಕಾರಗಳೆಂದು ಬಗೆದು ಆ ರೀತಿ ಅವಳನ್ನು ಬಣ್ಣಿಸಿ ಸ್ತುತಿಸಿರುವನು. ಕಾವ್ಯದೇವಿಗೆ ನವರಸಗಳು ಇಷ್ಟವೆಂಬುದು 'ಕೃತಿಗೆ ರಸಮೆ ಸಾರಂ' ಎಂದು ದೃಢವಾಗಿ ನಂಬಿದ ಕನ್ನಡ ಕವಿಗಳಿಗೆ ಸರ್ವೇಸಾಮಾನ್ಯ. ಆದರೆ ಲಕ್ಷಣಗಳ ವಿಷಯದಲ್ಲಿ ತೋರಿದ ರನ್ನನ ಪಕ್ಷಪಾತ ಕಾವ್ಯದಲ್ಲಿರಬಹುದಾದ ಅವುಗಳ ನಿಜವಾದ ಸ್ಥಾನಮಾನಗಳ ಬಗ್ಗೆ ಕುತೂಹಲವನ್ನು ಕೆರಳಿಸುವಂತಿದೆ. ಅವುಗಳ ಸ್ವರೂಪವನ್ನು ತಿಳಿಯಲೆತ್ನಿಸಿದ ಅಭಿನವಗುಪ್ತನಂಥ ಮಹಾಮೇಧಾವಿಗಳು ಊಹಾಸಾಗರದಲ್ಲಿ ತೇಲಾಡಿದಾಗ ಇಂದಿನವರಾದ ನಾವುಯಾವ ಗಿಡದ ತೊಪ್ಪಲು ? ಆದರೂ ಒಂದು ಮಾತು ಸ್ಪಷ್ಟವಿರುವಂತೆ ತೋರುವುದು. ಅದೆಂದರೆ

ಮಹಾಕಾವ್ಯಗಳಿಗೆ ಇಷ್ಟವಿರುವ ಅಷ್ಟಾದಶವರ್ಣನೆಗಳನ್ನು ಔಚಿತ್ಯದ ಹಿಡಿತದಲ್ಲಿ ಇಟ್ಟುಕೊಂಡು ಯಾವುದೊಂದು ಕಥಾನಕವನ್ನು ಭರತೋಕ್ತ ಮತ್ತು ಇತರ ಲಾಕ್ಷಣಿಕರು ವಿವರಿಸಿದ ಕಾವ್ಯ-ನಾಟಕ ಲಕ್ಷಣ (ಅಲಂಕಾರ)ಗಳನ್ನು ಕೌಶಲ್ಯದಿಂದ ಸೇರಿಸಿ ರಚಿಸಿದರೆ ಅದು ಗದಾಯುದ್ಧದ ಬಗೆಯ ಕೃತಿಯಾಗಬಹುದೆಂಬುದು. ಹಿಂದಣ ಕವಿಗಳಾರೂ ವಾಗ್ದೇವಿಯ ಭಂಡಾರ ಮುದ್ರೆಯನ್ನು ಕವಿತ್ವದಿಂದ ಒಡೆಯಲಿಲ್ಲೆಂಬ ರನ್ನನ ಆತ್ಮ ಪ್ರಶಂಸೆಯ (೧-೩೮) ಹಿನ್ನೆಲೆಯಾದರೂ ಇದೇ ಇರಬಹುದೆಂದು ತೋರುವುದು.

ಗದಾಯುದ್ಧದ ರಚನಾಕಾಲ

ಕವಿಚಕ್ರವರ್ತಿ ರನ್ನನ ಗದಾಯುದ್ಧವನ್ನು ಆವರಿಸಿದ ಸಮುಸ್ಯೆಗಳಲ್ಲಿ ಅದರ ರಚನಾಕಾಲವೂ ಒಂದು. ಗದಾಯುದ್ಧದಲ್ಲಿಯೇ ಅದರ ರಚನಾಕಾಲವನ್ನು ಸೂಚಿಸುವ ಒಂದು ಪದ್ಯವಿದ್ದರೂ ಸರಿಯಾದ ಅರ್ಥವಾಗದ್ದರಿಂದ ಭಿನ್ನಾಭಿಪ್ರಾಯಗಳು ಹಬ್ಬಿಕೊಂಡಿವೆ. ಪೂರ್ಣ ಅರ್ಥವಾಗದಿದ್ದರೂ ಆ ಪದ್ಯವನ್ನಾಧರಿಸಿ ಇದ್ದದರಲ್ಲಿಯೇ ಅದರ ರಚನಾ ಕಾಲ ಶ. ೯೦೪ (ಕ್ರಿ. ೯೮೨) ಎಂದು ಕೆಲವರು ಬಗೆದಿದ್ದರೆ ಬೇರೆ ಕೆಲವರು ಅನ್ಯಮಾರ್ಗಗಳಿಂದ ಕ್ರಿ. ೧೦೦೬ ರಲ್ಲಿ ಅಥವಾ ಸ್ವಲ್ಪ ಹಿಂದುಮುಂದು ಅದು ರಚಿತವಾಗಿರಬೇಕೆಂದು ಬಗೆದಿರುವರು. ಕ್ರಿ. ೯೮೨ ಅದರ ಸರಿಯಾದ ರಚನಾಕಾಲ; ಬೇರೊಂದು ದೃಷ್ಟಿಯಿಂದ ನಿರುಕಿಸಿದಾಗ ಪದ್ಯದಲ್ಲಿ ಉಕ್ತವಾದ ಶಕವರ್ಷವಾದರೂ ಇದಕ್ಕೆ ಸರಿಹೋಗುವದು ಎಂಬುದು ಈ ವಿವೇಚನೆಯ ಫಲಿತಾಂಶ.

ಸಧ್ಯ ದೊರೆತಿರುವ ರನ್ನನ ಕೃತಿಗಳು ಎರಡು–ಅಜಿತಪುರಾಣ ಮತ್ತು ಗದಾಯುದ್ಧ ಅಥವಾ ಸಾಹಸಭೀಮ ವಿಜಯ. ಅಜಿತಪುರಾಣದಲ್ಲಿ ರನ್ನ—

> ಕರಮೆಸೆದುವು ರತ್ನತ್ರಯ
> ಪರಿಕಲ್ಪದೆ ಪರಶುರಾಮ ಚರಿತಂ ಚಕ್ರೇ—
> ಶ್ವರ ಚರಿತ ಮಜಿತ ತೀರ್ಥೇ—
> ಶ್ವರ ಚರಿತಂ ರತ್ನನಿಂದೆ ಭುವನತ್ರಯದೊಳ್ ‖ ೧೨–೪೨

—ಪರುಶುರಾಮ ಚರಿತ, ಚಕ್ರೇಶ್ವರ ಚರಿತ ಮತ್ತು ಅಜಿತ ತೀರ್ಥೇಶ್ವರ ಚರಿತ ಇವು ಮೂರು (ರತ್ನತ್ರಯ) ತನ್ನ ಕೃತಿಗಳೆಂದಿರುವನು. ಇವುಗಳಲ್ಲಿ ಪರುಶುರಾಮ ಚರಿತ ದೊರೆತಿಲ್ಲ. ಚಕ್ರೇಶ್ವರ ಚರಿತ ಗದಾಯುದ್ಧದ ಇನ್ನೊಂದು ಹೆಸರು; ಪರಶುರಾಮ ಚರಿತವು 'ಸಮರ ಪರಶುರಾಮ' ಎಂದು ಬಿರುದಿದ್ದ ಚಾವುಂಡರಾಯನ (ಕಿ. ೯೭೮) ಚರಿತವೆಂದು ಕೆಲವರು ಅಭಿಪ್ರಾಯಪಟ್ಟಿರುವರು.

ತನ್ನ ಕೃತಿಗಳ ನಿರ್ದೇಶದೊಂದಿಗೆ ಅಜಿತ ಪುರಾಣದಲ್ಲಿ ರನ್ನ,—"ಶಕವರ್ಷ ಪಂಚದಶಾಧಿಕ ನವಶತಮಾಗೆ ವಿಜಯಸಂವತ್ಸರ (೧೨–೫೪)" ಎಂದು ಅದರ ರಚನಾ ಕಾಲವನ್ನು ಮತ್ತು "ಸೌಮ್ಯ ಸಂವತ್ಸರದೊಳ್....ಉದಯಿಸಿದಂ .. ಕವಿರತ್ನಂ (೧೨–೪೯)" ಎಂದು ತನ್ನ ಜನ್ಮ ವರ್ಷವನ್ನು ಉಲ್ಲೇಖಿಸಿರುವನು. ರನ್ನನ ಈ ಹೇಳಿಕೆಯ ಮೇರೆಗೆ ಅಜಿತ ಪುರಾಣದ ರಚನಾಕಾಲ ಶಕ ೯೧೫ (ಕ್ರಿ. ೯೯೩) ಆಗುವದು. ವಿಜಯ ಸಂವತ್ಸರಕ್ಕೂ ರನ್ನ ಹುಟ್ಟಿದ ಸೌಮ್ಯಕ್ಕೂ ೪೪ ವರ್ಷಗಳ ಅಂತರವಿರುವದರಿಂದ ಆತನ ಜನ್ಮ ವರ್ಷ ಶ. ೯೧೫–೪೪=೮೭೧ (ಕ್ರಿ. ೯೪೯) ಆಗುವದು.

ಗದಾಯುದ್ಧದ ಕೊನೆಯಲ್ಲಿ ಅದರ ರಚನಾಕಾಲವನ್ನು ಸೂಚಿಸುವ—

> ಶಕಸಮುಗತಿ ಋತುಯುಗ ಶಶಿ
> ನಿಕರಾಂಕಂ ಚಿತ್ರಭಾನು [ಸಂವತ್ಸರ] ಕಾ—।
> ರ್ತಿಕ ಸಿತಸಪ್ತಮಿ [ದಿನದೊಳ್]
> ಸುಕರಂ ಬುಧಸೇವ್ಯಮಾಯ್ತು ರನ್ನನ ಕಾವ್ಯಂ ॥ ೧೦-೨೩

-—ಈ ಪದ್ಯವಿದೆ. ಕಂಸದಲ್ಲಿಯ ಪದಗಳನ್ನು ತ್ರುಟಿತವಿರುವಲ್ಲಿ ಸಂಪಾದಕರ್ರು ಸೇರಿಸಿರುವರು. ಒಂದು ಹಸ್ತ ಪ್ರತಿಯಲ್ಲಿ 'ಸಮುಗತಿ' ಪದಗಳು 'ಗತಿಸಮು' ಎಂದು ಹಿಂದುಮುಂದಾಗಿವೆ. ಇಲ್ಲಿರುವ ಶಕ ವರ್ಷವನ್ನು ಸೂಚಿಸುವ ಪದಗಳ ಸರಿಯಾದ ಅರ್ಥವಾಗಿಲ್ಲ. ಚಿತ್ರಭಾನು ಸಂವತ್ಸರ ಕಾರ್ತಿಕ ಸಿತ ಸಪ್ತಮಿಯನ್ನು ರನ್ನನ ಜನ್ಮ ವರ್ಷಕ್ಕೆ ಹೊಂದಿಸಿ ನೋಡಿದಾಗ ಶಕ ೯೦೪ (ಕ್ರಿ. ೧೭ ಅಕ್ಟೋಬರ ೯೮೨) ಆಗುವದು. ಸಮುಕ್ಕೆ ವರ್ಷ ಎಂಬರ್ಥವಿದೆ. ಗತಿ-ಎಂದರೆ ೪, ಋತು-೬, ಯುಗ-೨, ಶಶಿ-೧. ಅಂಕಿಗಳನ್ನು ಬಲದಿಂದ ಎಡಕ್ಕೆ ಎಣಿಸುವದರಿಂದ ಮತ್ತು 'ನಿಕರಾಂಕಂ' ಎಂದರೆ ಇವುಗಳ ಒಟ್ಟು ಬೇರೀಜು ಎಂದಿರುವುದರಿಂದ ಈ ರೀತಿ ಲಬ್ಧವಾಗುವ ಸಂಖ್ಯೆ ೧+೨+೬+೪=೧೩ ಆಗುವದು. 'ಗತಿಸಮು' ಪಾಠವನ್ನು ಹಿಡಿದರೆ ಮಧ್ಯದಲ್ಲಿ ಸಮು (ವರ್ಷ) ಪದವು ಬರುವದರಿಂದ ಅರ್ಥವಾಗುವುದಿಲ್ಲ. ಸಮುಕ್ಕೆ ಯಾವುದೊಂದು ಸಮಸಂಖ್ಯೆ ಅಂದರೆ ೨, ೪, ೬, ೮. ಇವುಗಳಲ್ಲಿ ಒಂದು ಎಂದಿಟ್ಟುಕೊಂಡರೆ ಇದು ಸೇರಿಬರುವ ನಿಕರಾಂಕ ೧೫, ೧೭, ೧೯, ೨೧ ಆಗುವದು. ಇವುಗಳಲ್ಲಿ ಯಾವುದೊಂದನ್ನು ಇಟ್ಟುಕೊಂಡರೂ ಇದಕ್ಕೂ ರನ್ನನ ಕಾಲಕ್ಕೂ ಹೊಂದಾಣಿಕೆಯಾಗುವುದಿಲ್ಲ. ರನ್ನನ ಜನ್ಮವರ್ಷಕ್ಕೂ ಅದರ ಮುಂದಣ ಚಿತ್ರಭಾನುವಿಗೂ ೩೩ ವರ್ಷಗಳ ಅಂತರವಿರುವದರಿಂದ ಇವು ಸೇರಿ ಗದಾಯುದ್ಧದ ರಚನಾಕಾಲ ಶ-೯೦೪ (ಕ್ರಿ. ೯೮೨) ಆಗಬೇಕು. ಇದರ ಮುಂದಣ ಚಿತ್ರ ಭಾನು ಶ. ೯೬೪ (ಕ್ರಿ. ೧೦೪೨) ರಲ್ಲಿ ಬರುವದು. ಆಗ ರನ್ನನಿಗೆ ೯೩ ವಯಸ್ಸಾಗುವದು. ಅವನ ಆಶ್ರಯದಾತ ಆಹವಮಲ್ಲ ತೈಲಪ ಮತ್ತು ಆತನ ಮಗ ಸತ್ಯಾಶ್ರಯ-ಇರಿವಬೆಡಂಗ (ಗದಾಯುದ್ಧದ ಕಥಾನಾಯಕ) ಇಬ್ಬರೂ ಜೀವಿಸಿರುವದಿಲ್ಲ. ತೈಲಪನ ಆಳಿಕೆಯ ಕಾಲ ಕ್ರಿ. ೯೭೩-೯೯೭; ಸತ್ಯಾಶ್ರಯನ ಈ ಕಾಲ ಕ್ರಿ. ೯೯೭-೧೦೦೯. ಕೆಲವರು ಶಕವರ್ಷದ ಸಮಸ್ಯೆಯನ್ನು ಅಷ್ಟಕ್ಕೇ ಬಿಟ್ಟು, ಚಿತ್ರ ಭಾನು ಸಂವತ್ಸರವನ್ನಷ್ಟೇ ಹಿಡಿದು, ಅದಕ್ಕೂ ರನ್ನನ ಕಾಲಕ್ಕೂ ಮತ್ತು ಅವನ ಆಶ್ರಯದಾತರ ಕಾಲಕ್ಕೂ ಮೇಳಹಾಕಿ ಗದಾಯುದ್ಧದ ರಚನಾಕಾಲವನ್ನು ಶಕ ೯೦೪ (ಕ್ರಿ. ೯೮೨) ಎಂದು ನಿರ್ಣಯಿಸಿರುವರು.

ಆಕ್ಷೇಪಣೆಗಳು

ಈ ನಿರ್ಣಯ ಬೇರೆ ಕೆಲವರಿಗೆ ಒಪ್ಪಿತವಿಲ್ಲ. ಅವರ ದೃಷ್ಟಿಯಲ್ಲಿ-

೧. ಗದಾಯುದ್ಧದ ರಚನಾಕಾಲವನ್ನು ಸೂಚಿಸುವ ಪದ್ಯ ತ್ರುಟಿತ, ಅಸ್ಪಷ್ಟ, ಬಹುಶ: ಪ್ರಕ್ಷಿಪ್ತ.
೨. ಕ್ರಿ. ೯೮೨ರಲ್ಲಿ ರಚಿತವಾಗಿದ್ದರೆ ಮುಂದೆ ೧೧ ವರ್ಷಗಳ ನಂತರ (ಕ್ರಿ. ೯೯೩) ರಚಿತವಾದ ಆಜಿತಪುರಾಣದಲ್ಲಿ ಉಕ್ತವಾದ ರನ್ನನ ಕೃತಿಗಳಲ್ಲಿ ಅದರ ಉಲ್ಲೇಖವಿರ ಬೇಕಿತ್ತು. ದೊರೆತಿಲ್ಲವೆಂದು ಪರಶುರಾಮ ಚರಿತವನ್ನು ಬಿಟ್ಟರೂ ಅದರೊಂದಿಗೆ ಉಕ್ತ ವಾದ ಚಕ್ರೇಶ್ವರ ಚರಿತವು ಗದಾಯುದ್ಧದ ಇನ್ನೊಂದು ಹೆಸರಾಗದು. ಜೈನ ಧರ್ಮ ದಲ್ಲಿ ಅತ್ಯಂತ ಪವಿತ್ರವೆನಿಸಿದ ರತ್ನತ್ರಯಗಳಿಗೆ ರನ್ನ ತನ್ನ ಮೂರು ಕೃತಿಗಳನ್ನು ಹೋಲಿಸಿರುವನು. ಅಜಿತಪುರಾಣ ಇಂಥ ಗ್ರಂಥ. ಪ್ರತ್ಯಕ್ಷ ತೀರ್ಥಂಕರರ ಚರಿತ್ರವಿರ ದಿದ್ದರೂ ಪರುಶರಾಮಚರಿತ ಚಕ್ರೇಶ್ವರ ಚರಿತಗಳು ಈ ಮಾಲಿಕೆಯಲ್ಲಿ ಬರುವಂಥ ಹವು ಇರಬೇಕು.
೩. ಗದಾಯುದ್ಧದ ಪ್ರತಿ ಆಶ್ವಾಸಾಂತದಲ್ಲಿ–

> ಇದು ಸಮಸ್ತಭುವನವಲ್ಲಭ ಜನಾಶ್ರಯಂ ಶ್ರೀ ಪೃಥ್ವೀವಲ್ಲಭಂ
> ಮಹಾರಾಜಾಧಿರಾಜ ಪರಮೇಶ್ವರಂ ಪರಮಭಟ್ಟಾರಕಂ ಶ್ರೀಸತ್ಯಾ-
> ಶ್ರಯ ಕುಲತಿಲಕಂ ಶ್ರೀಮದಾಹವಮಲ್ಲದೇವ ಶ್ರೀಪಾದಕಲ್ಪ-
> ಪಾದಪಾಶ್ರಯಾಸನ್ನವರ್ತಿ ಕವಿಚಕ್ರವರ್ತಿ ಕವಿ ರನ್ನ
> ವಿರಚಿತಮಪ್ಪ ಚಾಳುಕ್ಯ ಚಕ್ರವರ್ತಿ ಶ್ರೀಸಾಹಸಭೀಮ ವಿಜಯದೊಳ್ ....

ಎಂಬ ಸಮಾಪ್ತಿ ವಾಕ್ಯವಿದೆ. ಇಲ್ಲಿ ರನ್ನ ಸತ್ಯಾಶ್ರಯನನ್ನು ಚಾಳುಕ್ಯ ಚಕ್ರ ವರ್ತಿ ಎಂದಿರುವನು. ಸಾಹಸಭೀಮ ಎಂಬುದು ಕಥಾನಾಯಕನನ್ನಾಗಿಸಿ ರನ್ನಅವ ನಿಗಿತ್ತ ಹೆಸರು. ಕಥಾಗರ್ಭದಲ್ಲಿ ಕೂಡ ಅವನನ್ನು ಸಾರ್ವಭೌಮ, ಪೃಥ್ವೀವಲ್ಲಭ, ಚಕ್ರವರ್ತಿ, ಚಕ್ರೇಶ್ವರ ಮತ್ತು ತತ್ಸಮ ಬಿರುದುಗಳಿಂದ ಉಲ್ಲೇಖಿಸಿರುವನು. ಅಜಿತ ಪುರಾಣ ರಚಿತವಾದಾಗ(ಕ್ರಿ. ೯೯೩) ಸತ್ಯಾಶ್ರಯ ಇನ್ನೂ ಯುವರಾಜನಿದ್ದ. ಇಲ್ಲಿ ಯಾದರೊ ಆತ ಚಕ್ರವರ್ತಿ ಇರುವನು. ಅತಏವ ಗದಾಯುದ್ಧವು ಅಜಿತ ಪುರಾಣದ ಪೂರ್ವದಲ್ಲಿ ಅಂದರೆ ಕ್ರಿ. ೯೮೨ರಲ್ಲಿ ರಚಿತವಾಗಿರಲಾರದು. ಚಕ್ರೇಶ್ವರ ಚರಿತವು ಗದಾ ಯುದ್ಧದ ಇನ್ನೊಂದು ಹೆಸರೆಂಬುದಂತೂ ದೂರದ ಮಾತು.

೪. ಗದಾಯುದ್ಧದಲ್ಲಿ ಸತ್ಯಾಶ್ರಯನ ಸಾಹಸಕೃತಿಗಳೆಂದು ಕೆಲವು ಐತಿ ಹಾಸಿಕ ಸಂಗತಿಗಳನ್ನು ಉಲ್ಲೇಖಿಸಿರುವನು. ಅಪರಾದಿ (ಜಿ) ತ ಎಂಬುವನನ್ನು ಸೋಲಿಸಿ ಸತ್ಯಾಶ್ರಯ ಅವನಿಂದ ೨೧ ಆನೆಗಳನ್ನು ಪಡೆದನೆಂಬುದು ಮತ್ತು ಅವನ ರಾಜಧಾನಿ ಮಾಡಲಾಂಶು ನಗರವನ್ನು ಸುಟ್ಟು ಭಸ್ಮ ಮಾಡಿದನೆಂಬುದು ಇವುಗಳಲ್ಲಿ ಒಂದು. ಈ ಅಪರಾಜಿತನಾರೆಂಬುದು ನಿಶ್ಚಿತವಿಲ್ಲ. ಈತ ಕೊಂಕಣ ಶಿಲಾಹಾರ ವಂಶ ದವ; ರನ್ನ ಒಂದೆಡೆ ಅಪರಾದಿ (ಜಿ)ತ, ಇತರೆಡೆ ಅಪರಾದಿತ್ಯ ಎಂದು ಉಲ್ಲೇಖಿಸಿದ್ದರೂ ಇಬ್ಬರೂ ಒಂದೇ; ಈತನ ಕಾಲ ಕ್ರಿ.ಶ. ೯೭೫–೧೦೧೦; ಈ ಘಟನೆ ಕ್ರಿ.ಶ. ೧೦೦೫ ರಲ್ಲಿ ನಡೆದಿರಬೇಕು, ಎಂದು ಬಹುಜನ ವಿದ್ವಾಂಸರ ಅಭಿಪ್ರಾಯವಿದೆ. ಗದಾಯುದ್ಧದ

ಸಂಪಾದಕರು ಈತ ಚೋಳ ವಂಶದವ, ಮಂಡಲಾಂಶು ನಗರವು ಕಾಂಚಿನಗರ ಎಂದು ಬಗೆದಿರುವರು.[1]

೫. ಪಟ್ಟಕ್ಕೆ ಬಂದಬಳಿಕ ಸತ್ಯಾಶ್ರಯ ಇರಿವಬೆಡಂಗ ದಂಡೆತ್ತಿಬಂದ ರಾಜರಾಜ ಚೋಳನನ್ನು (ಕ್ರಿ.ಶ. ೯೮೫–೧೦೧೫) ಸದೆಬಡಿದು ತನ್ನ ರಾಜ್ಯವನ್ನು ಉಳಿಸಿಕೊಂಡಿರುವುದು ಮಹತ್ವದ ಘಟನೆ. ಚೋಳರಲ್ಲಿ ರಾಜರಾಜ ಪ್ರಸಿದ್ಧ ಅರಸು. ರನ್ನನ ದುರ್ಯೋಧನನಲ್ಲಿ ಅವನ ಪಡಿನೆಳಲನ್ನು ಕಾಣುವಂತಿದೆ. ಅಂತೆಯೆ ಪ್ರತಿನಾಯಕನಿದ್ದರೂ ದುರ್ಯೋಧನನನ್ನು ನಿಜವಾದ ನಾಯಕ ಎನಿಸುವಷ್ಟು ಉದಾತ್ತನಾಗಿಸಿ ರನ್ನ ಅವನ ಪಾತ್ರವನ್ನು ಚಿತ್ರಿಸಿರುವನು. ಅಲ್ಲಲ್ಲಿ ಅವನನ್ನು ರಾಜರಾಜನೆಂದು ಸಹ ಕರೆದಿರುವನು.

೬. ಚಾಲುಕ್ಯ ವಂಶಾವಳಿಯನ್ನು ಹೇಳುವಾಗ ತೈಲಪನ ಬಿರುದುಗಳಲ್ಲಿ "ಸಮಸ್ತ ಮಾಳವ ಸಪ್ತಾರ್ಚಿ" ಎಂಬುದೊಂದು ಬಿರುದಿದೆ. ಮಾಳವದ ಪರಮಾರ ಮುಂಜನನ್ನು (ಇಮ್ಮಡಿವಾಕ್ಪತಿ) ಯುದ್ಧದಲ್ಲಿ ವಧಿಸಿದ ನಂತರ ತೈಲಪ ಈ ಬಿರುದನ್ನು ಧರಿಸಿರಬೇಕು. ಈ ಘಟನೆ ಕ್ರಿ. ೯೯೪ರ ನಂತರ ನಡೆಯಿತು. ಆತಏವ ಗದಾಯುದ್ಧವು ಕ್ರಿ. ೯೯೪ರ ನಂತರ ರಚಿತವಾಗಿರಬೇಕಲ್ಲದೆ ಅಜಿತಪುರಾಣಕ್ಕಿಂತ ಮೊದಲಲ್ಲ.

೭. ಅಜಿತಪುರಾಣದಲ್ಲಿ ರನ್ನ ತನ್ನನ್ನು ಅಭಿನವ ಕವಿ ಚಕ್ರವರ್ತಿ ಎಂದು ಹೇಳಿಕೊಂಡಿದ್ದರೆ ಗದಾಯುದ್ಧದಲ್ಲಿ ಕೇವಲ ಕವಿಚಕ್ರವರ್ತಿ ಎಂದು ಹೇಳಿಕೊಂಡಿರುವನು. ಅಜಿತ ಪುರಾಣವನ್ನು ರಚಿಸಿದಾಗ ಆತ ಅದೇ ಕವಿಚಕ್ರವರ್ತಿಯಾಗಿರಬೇಕು. ಗದಾಯುದ್ಧವನ್ನು ರಚಿಸುವಷ್ಟೊತ್ತಿಗೆ ಅದು ಹಳೆಮಾತಾಗಿ ಕವಿಚಕ್ರವರ್ತಿ ಎಂದಿಷ್ಟೇ ಹೇಳಿಕೊಳ್ಳಲು ಪ್ರಾರಂಭಿಸಿರಬೇಕು. ಇದಾದರೂ ಗದಾಯುದ್ಧದ ರಚನೆ ಅಜಿತ ಪುರಾಣದ ನಂತರ ಎಂಬುದನ್ನು ಸೂಚಿಸುವುದು.

ನಿಶ್ಚಿತ ಆಧಾರಗಳ ಅಭಾವ

ಗದಾಯುದ್ಧದ ರಚನಾಕಾಲವನ್ನು ಸೂಚಿಸುವ ಪದ್ಯದಲ್ಲಿ ಉಕ್ತವಾದ ಶಕ. ವರ್ಷವನ್ನು ಸರಿಯಾಗಿ ಗುರುತಿಸುವದು ಸಾಧ್ಯವಾಗದ್ದರಿಂದ ಇಷ್ಟೆಲ್ಲ ಊಹಾಪೋಹ ಎಂಬುದು ಸ್ಪಷ್ಟವಿದೆ. ಒಂದೊಮ್ಮೆ ಈ ಪ್ರಮೇಯವಿಲ್ಲದಿದ್ದರೆ ಸಂಶೋಧಕರ ಊಹಾ ಕುದುರೆಗಳು ಯಾವ ದಿಸೆಯಲ್ಲಿ ಸಾಗುತ್ತಿದ್ದವೊ ಏನೊ. ಶಕವರ್ಷ ತಿಳಿಯದಿದ್ದರೂ ಈ ಪದ್ಯದಲ್ಲಿ ಉಕ್ತವಾದ ಚಿತ್ರಭಾನು ಸಂವತ್ಸರ ಮತ್ತು ಅದು ಗದಾಯುದ್ಧದಂಥ ಓಜಸ್ವಿ ಕೃತಿಯನ್ನು ರಚಿಸಲು ಯುಕ್ತವಿರುವ ರನ್ನನ ವಯೋಮಾನಕ್ಕೆ ಹೊಂದಿಕೊಳ್ಳುವಂದದಲ್ಲಿ ಪ್ರತಿಪಕ್ಷಗಳ ಉಪರೋಕ್ತ ಊಹೆ ಆಕ್ಷೇಪಣೆಗಳಲ್ಲಿ ಒಂದಾದರೂ ಹೊಂದಿಕೊಳ್ಳುವದಿಲ್ಲ.

ಶಿಲಾಹಾರ ಅಪರಾಜಿತನ ಕಾಲವು (ಕ್ರಿ. ೯೭೫–೧೦೫೦) ತೈಲಪ ಮತ್ತು

1. ಗ. ಯು. ಮುನ್ನುಡಿ ೬.

ಸತ್ಯಾಶ್ರಯ ಇಬ್ಬರ ಆಳಿಕೆಯನ್ನು ಆವರಿಸಿದೆ. ತೈಲಪನಿಗೆ ಕೊಂಕಣ ಭಯಾಂಕರ ನೆಂಬ ಬಿರುದಿತ್ತು. ತೈಲಪನ ಆಜ್ಞಾನುಸಾರ (ನರಪತಿ-ತೈಲಪಂಬೆಸಸೆ), ಸತ್ಯಾಶ್ರಯನು 'ಕೊಂಕಣೇಶ್ವರನಿದಿರ್ಚಿ ಸಾಧಿಸಿದನಂಭುಧಿ ಸೀಮೆವರಂ' ಎಂದು ರನ್ನನೇ ಹೇಳಿರುವಾಗ ಸತ್ಯಾಶ್ರಯ ಅಪರಾಜಿತರ ಉಪರೋಕ್ತ ಕಾಳಗವು ಕ್ರಿ.ಶ. ೧೦೦೫ರಲ್ಲಿ ಅಂದರೆ ಸತ್ಯಾಶ್ರಯನು ಪಟ್ಟಕ್ಕೆ ಬಂದನಂತರ ನಡೆಯಿತೆಂದು ಸಾಧಿಸುವದೆಂತು?

ರಾಜರಾಜ ಚೋಳನ ಕಾಲ ಕ್ರಿ. ೯೮೫-೧೦೧೫. ಚೋಳರೊಂದಿಗಿನ ತೈಲಪನ ಘರ್ಷಣೆ ರಾಜರಾಜ ಪಟ್ಟಕ್ಕೆಬರುವ ಮೊದಲು, ನಂತರ ಸಹ, ನಡೆದಿರಬಹುದು. ತೈಲಪ ಈ ವಂಶದ ಉತ್ತಮ ಚೋಳನನ್ನು (ಕ್ರಿ.ಶ. ೯೮೦) ಗೆದ್ದನೆಂದು ಹೇಳಲಾಗುತ್ತಿದೆ. ಏನಿದ್ದರೂ ಗದಾಯುದ್ಧದಲ್ಲಿ ಚೋಳರ ಉಲ್ಲೇಖವಿಲ್ಲ. ಪಂಪ ಕೂಡ ವಿಕ್ರಮಾರ್ಜುನ ವಿಜಯದಲ್ಲಿ ದುರ್ಯೋಧನನನ್ನು ನಾಲ್ಕಾರು ಸಲ ರಾಜರಾಜ ಎಂದು ಕರೆದಿರುವನು.[೧] ಗದಾಯುದ್ಧಕ್ಕಾಗಿ ರನ್ನನು ಪಂಪ ಭಾರತದಿಂದ ಪ್ರಯೋಜನ ಪಡೆದಿರುವದು ಜನಜನಿತವಿದೆ. ಪ್ರತಿ ನಾಯಕನನ್ನು ನಾಯಕನಷ್ಟೇ ಅಥವಾ ಒಂದು ತೂಕ ಹೆಚ್ಚು ಉಚ್ಚಮಟ್ಟದಲ್ಲಿ ಚಿತ್ರಿಸಿ ಅಂಥವನನ್ನು ಕೂಡ ನಾಯಕನು ಇಕ್ಕಿಮೆಟ್ಟಿದನೆಂದು ಬಣ್ಣಿಸುವದು ಕಾವ್ಯರಚನೆಯ ಸುಪರಿಚಿತ ತಂತ್ರ. ಪರಿಸ್ಥಿತಿ ಇಂತಿರುವಾಗ ಸತ್ಯಾಶ್ರಯ ತನ್ನ ಆಳಿಕೆಯಲ್ಲಿ ರಾಜ ರಾಜ ಚೋಳನನ್ನು ಹಿಂದಟ್ಟಿದ ಘಟನೆಯ ಹಿನ್ನೆಲೆಯೊಂದಿಗಿ ದುರ್ಯೋಧನನಲ್ಲಿ ರಾಜರಾಜನ ಪಡಿನೆಳಲನ್ನು ಕಾಣುವ ಬಗೆ ಹೇಗೆ?

ಮುಂಜ ಮತ್ತು ತೈಲಪರಿಂದ ಪ್ರಾರಂಭವಾದ ಪರಮಾರ-ಚಾಲುಕ್ಯ ಘರ್ಷಣೆ ಇವೆರಡೂ ಮನೆತನಗಳಲ್ಲಿ ಮುಂದೆ ಹಲವು ತಲೆಮಾರುಗಳವರೆಗೆ ನಡೆದಿದೆ. ಪರಮಾರರು ತಮ್ಮ ವಿಜಯಗಳನ್ನು ಹೇಳಿಕೊಂಡಿದ್ದರೆ ಚಾಲುಕ್ಯರು ತಮ್ಮ ವಿಜಯಗಳನ್ನು ಹೇಳಿಕೊಂಡಿರುವರು. ತೈಲಪನ ವಿಜಯಗಳಲ್ಲಿ ಪರಮಾರರಿಗೆ ಸಂಬಂಧಿಸಿ ಸಿಂಧುರ ಕಂಧರಾಧಿರೂಢ, ಸಮಸ್ತ ಮಾಲವ ಸಪ್ತಾರ್ಚಿ, ಮುಂಜಕರಟಿ ಘಟಾವಿಘಾಟನ ಪಂಚಾನನ, ಉತ್ಪಲ ಪ್ರಲಯಾಂತಕ, ಎಂಬ ಬಿರುದುಗಳಿವೆ. ಇವುಗಳಲ್ಲಿ ಮುಂಜವಧೆಯ ಸೂಚನೆ ಇಲ್ಲ. ಸಿಂಧುರ ಮುಂಜನ ತಮ್ಮ. ಉತ್ಪಲ ಮುಂಜನ ಇನ್ನೊಂದು ಹೆಸರು. ಮುಂಜವಧೆಯ ಮೊದಲು ಪರಮಾರ ಚಾಲುಕ್ಯರಲ್ಲಿ ಅನೇಕ ಕಾಳಗಗಳಾಗಿವೆ. ಮಾಳವವು ಸಪ್ತಮಾಳವ ಎಂದು ಸಹ ಪ್ರಸಿದ್ಧವಿತ್ತು. ಪರಮಾರರವು ಎರಡು ಮೂರು ಶಾಖೆಗಳಿದ್ದವು. ಮುಂಜ ವಧೆಯ ನಂತರ ತೈಲಪ ಹೆಚ್ಚುಕಾಲ ಬದುಕಿರಲಿಲ್ಲ. ಆದ್ದರಿಂದ ಈ ಘಟನೆಗೆ ಸಂಬಂಧಿಸಿ ಆತ ಪ್ರತ್ಯೇಕ ಬಿರುದನ್ನು ಧರಿಸಿದಂತಿಲ್ಲ. ತೈಲಪನ ನಂತರ ಈ ಘಟನೆಗೆ ಸಂಬಂಧಿಸಿ 'ಮುಂಜರಾಜಶಿರಃ ಕಮಲೇನ ಭಗವತೀಂ ಚಂಡಿಕಾ ಮಾನರ್ಚ' ಎಂದಿಷ್ಟೇ ವರ್ಣನೆ ಇದೆ. 'ಸಮಸ್ತ ಮಾಲವ

---

೧. ಪಂ. ಭಾ., ೧೧/೧೩೯; ೧೨/೯ ನಂತರದ ಗದ್ಯ; ೧೩/೬೫, ೧೩/೭೪ ನಂತರದ ಗದ್ಯ, ೧೩/೮೦.

ಸಪ್ತಾರ್ಚಿ' ಬಿರುದಿನಿಂದ ತೈಲಪನು ಮುಂಜ ಮತ್ತು ಆತನ ಸಹ ಬಂಧುಗಳಿಗೆ ಮಾಂಡಲಿಕರಿಗೆ ಸಪ್ತಾರ್ಚಿ ಅಂದರೆ ಅಗ್ನಿಯಂತಿದ್ದ ಎಂದು ಭಾವಿಸಬಹುದಲ್ಲದೆ ಇದಕ್ಕೂ ಮುಂಜವಧೆಗೂ ತಳಕುಹಾಕಿ ಆ ಮೂಲಕ ಗದಾಯುದ್ಧವು ಅಜಿತ ಪುರಾಣದ ನಂತರದ್ದೆಂದು ಸಾಧಿಸುವದು ಸಮಂಜಸವಾಗದು.

ಅಜಿತಪುರಾಣದಲ್ಲಿ ಅಭಿನವಕವಿಚಕ್ರವರ್ತಿ, ಗದಾಯುದ್ಧದಲ್ಲಿ ಕವಿಚಕ್ರವರ್ತಿ ಎಂದು ಹೇಳಿಕೊಂಡಿರುವದಕ್ಕೆ ಅಜಿತಪುರಾಣ ರಚಿತವಾದಾಗ ಕವಿಚಕ್ರವರ್ತಿ ಪದವಿಗೆ ರನ್ನ ಇನ್ನೂ ಹೊಸಬ, ಗದಾಯುದ್ಧವನ್ನು ರಚಿಸುವಾಗ ಸಾಕಷ್ಟು ಹಳಬನಾಗಿದ್ದ ಎಂದು ಭಾವಿಸಲು ಸಬಲ ಆಧಾರವಿಲ್ಲ. ಅಜಿತಪುರಾಣದಲ್ಲಿ ರನ್ನ ತಾನಾದರೂ ಪುರಾಣಗಳನ್ನು ರಚಿಸಿ ಜಿನಸಮಯದೀಪಕರೆಂದು ಹೆಸರುವೆತ್ತ ಪಂಪ ಪೊನ್ನರ ಸರಿ ಸಮಾನ ಎಂದು ಹೇಳಿಕೊಂಡಿರುವನು. ಗದಾಯುದ್ಧದಲ್ಲಿ ಈ ಬಗೆಯ ಸಂದರ್ಭವಿಲ್ಲ. ಗದಾಯುದ್ಧದಲ್ಲಿ ರನ್ನ 'ಉಭಯ ಕವಿತೆಯೊಳ್ ನೆಗಳ್ದಂ', ಅಜಿತಪುರಾಣದಲ್ಲಿ 'ಉಭಯಕವಿ ಮುಖಮಂಡನ ಮಾಗಿರ್ಪ ರತ್ನಂ', 'ಚಾಳುಕ್ಯರಾಜ್ಯದೊಳ್ ನೆಗಳ್ತೆ ನುಭಯಕವಿ' ಎಂದು ಹೇಳಿಕೊಂಡಿರುವದರಿಂದ ವ್ಯಾಪಕಾರ್ಥದಲ್ಲಿ ತೈಲಪನಿತ್ತ 'ಕವಿಚಕ್ರವರ್ತಿ' ಬಿರುದನ್ನು ಆತ 'ಉಭಯಕವಿಚಕ್ರವರ್ತಿ' ಬಿರುದಿಗೆ ಸಮಾನ ವೆಂದು ಭಾವಿಸಿದಂತಿದೆ. ಪೊನ್ನ ರನ್ನನ ಪೂರ್ವಿಕ, ಉಭಯಕವಿಚಕ್ರವರ್ತಿ. ಅಜಿತ ಪುರಾಣದಲ್ಲಿ ಶ್ರೇಷ್ಠ ಪುರಾಣಕಾರರೆಂದು ಪಂಪಪೊನ್ನರೊಂದಿಗೆ ತನ್ನನ್ನು ಸೇರಿಸಿ ಕೊಂಡು ಹೇಳುವಾಗ (೧೨/೩೯) ಪೂರ್ವಿಕನಿದ್ದ ಪೊನ್ನನಿಗೆ ಅವನ ಬಿರುದನ್ನು ಪೂರ್ಣರೂಪದಲ್ಲಿ ಸಲ್ಲಿಸಿ ತಾನಾದರೂ ಅವನ ಸರಿಕನೆಂಬ ಭಾವನೆಯಿಂದ ಅಭಿನವ ಕವಿಚಕ್ರವರ್ತಿ ಎಂದಿಷ್ಟೇ ಹೇಳಿಕೊಂಡು ಆಶ್ವಾಸಾಂತ ಗದ್ಯದಲ್ಲಿ ಇದನ್ನೇ ಬಳಸಿದಂತಿದೆ. ಇದೊಂದು ಪದ್ಯವನ್ನು ಬಿಟ್ಟು ಇತರೆಡೆ ತನ್ನ ನಿಜಬಿರುದು 'ಕವಿ ಚಕ್ರವರ್ತಿ' ಎಂಬುದನ್ನು ಸ್ಪಷ್ಟವಾಗಿ ಉಲ್ಲೇಖಿಸಿರುವದು ಈ ಸಂದರ್ಭದಲ್ಲಿ ಗಮನಾರ್ಹವಿದೆ (೧/೧೪, ೮೦, ೮೪, ೮೫ ; ೧೨/೪೮, ೫೨).

ಸತ್ಯಾಶ್ರಯನನ್ನು ಚಾಳುಕ್ಯ ಚಕ್ರವರ್ತಿ, ಸಾರ್ವಭೌಮ, ಪೃಥ್ವೀವಲ್ಲಭ, ಎಂದು ಮುಂತಾಗಿ ವರ್ಣಿಸಿದ್ದರೂ ಆಶ್ವಾಸಾಂತಗದ್ಯದಲ್ಲಿ ತಾನು 'ಆಹವಮಲ್ಲದೇವ ಶ್ರೀಪಾದಶಲ್ಪ ಪಾದಪಾಶ್ರಯಾಸನ್ನವರ್ತಿ' ಎಂದುಕೊಂಡಿರುವದು ಗದಾಯುದ್ಧವು ರಚಿತವಾದಾಗ ಸತ್ಯಾಶ್ರಯ ಇನ್ನೂ ಯುವರಾಜನಿದ್ದ ಎಂಬುದಕ್ಕೆ ಪ್ರಬಲ ಆಧಾರ ವೆನ್ನುವತಿಂದೆ.[1] ಕಥಾಗರ್ಭದಲ್ಲಿ ಸತ್ಯಾಶ್ರಯನುಜೈತ್ರಯಾತ್ರೆಯನ್ನು ಕೈಕೊಂಡದ್ದು

---

1. ಕ್ರಿ. ಶ. ೧೦೭೨ ನೆಯ ಲಕ್ಕುಂಡಿ ಶಾಸನದಲ್ಲಿ ಉಕ್ತನಾದ ಒಬ್ಬ ಪಶ್ಚಿಮ ಚಾಲುಕ್ಯ ಆಹವಮಲ್ಲನನ್ನು ಈ ಶಾಸನದ ಸಂಪಾದಕರು ಸತ್ಯಾಶ್ರಯನೆಂದು ಸಾಧಿಸಿರುವರು. ಸಂಪಾದಕರ ಈ ಅಭಿಪ್ರಾಯವು ವಾದದಲ್ಲಿ ಸಿಲುಕಿರುವದರಿಂದ ಗದಾಯುದ್ಧದ ಕಾಲನಿರ್ಣಯಕ್ಕೆ ಇದರಿಂದ ಸಹಾಯವಾಗುವಂತಿಲ್ಲ. ಆದರೂ ಈ ಅಭಿಪ್ರಾಯವನ್ನು ಉದಾಹರಿಸಿ ಗದಾಯುದ್ಧದ ಆಶ್ವಾಸಾಂತ ಗದ್ಯದಲ್ಲಿಯ ಆಹವಮಲ್ಲ ಹೆಸರನ್ನು ಕೆಲವರು ಸತ್ಯಾಶ್ರಯನಿಗೆ ಅನ್ವಯಿಸಿ ಗದಾಯುದ್ಧದ ರಚನೆ ಸತ್ಯಾಶ್ರಯಪಟ್ಟಕ್ಕೆ ಬಂದ ಬಳಿಕ ಎಂದು ಪ್ರತಿಪಾದಿಸಿರುವರು.

ತೈಲಪನ ಆಜ್ಞಾನುಸಾರ (ನರಪತಿ ತೈಲಪಂ ಬೆಸಸೆ), ಆತ ತೈಲಪನ ನಚ್ಚಿನ ಆನೆ (ಅಮ್ಮನಗಂಧವಾರಣ) ಎಂದು ಬಣ್ಣಿಸಿರುವದಾದರೂ ಇದನ್ನೇ ಸಮರ್ಥಿಸುವದು.

ಯುವರಾಜನಿದ್ದರೂ ರನ್ನ ಸತ್ಯಾಶ್ರಯನನ್ನು ಚಕ್ರವರ್ತಿ ಎಂದು ಬಣ್ಣಿಸಿರುವದು ಕವಿವ್ಯಾಪಾರ. ಆತನ ವಿಷಯದಲ್ಲಿ ರನ್ನನಿಗಿದ್ದ ಗೌರವಾತಿಶಯದ ಪ್ರತೀತಿ, ಎನ್ನಬಹುದು. ಆಶ್ರಯದಾತನನ್ನು ವಿಷ್ಣು ಮತ್ತು ಭೀಮಾರ್ಜುನರಂಥ ಮಹಾಪುರುಷರೊಂದಿಗೆ ಸಂಧಿಸಿ ಹೊಗಳುವದು ಕಾವ್ಯಶಾಸ್ತ್ರದಲ್ಲಿ ಉಭಯಾಭೇಧ ರೂಪಕಾಲಂಕಾರ ಎನಿಸಿಕೊಂಡಿದೆ. 'ನಾವಿಷ್ಣುಃ ಪೃಥಿವೀಪತಿಃ' ಉಕ್ತಿಯನ್ನಾಧರಿಸಿ ಕವಿಗಳು ವಿಷ್ಣು ಮತ್ತು ಆಶ್ರಯದಾತನಲ್ಲಿ ಅಭೇದವನ್ನು ಕಲ್ಪಿಸಿ ಹೊಗಳುವದು ಸರ್ವೇಸಾಮಾನ್ಯ. ಜೊತೆಗೆ ಪಂಪ ರನ್ನರು ಮಹಾಭಾರತದ ವೀರರಾದ ಅರ್ಜುನ, ಭೀಮ ಮತ್ತು ತಮ್ಮ ಆಶ್ರಯದಾತರಲ್ಲಿ ಅಭೇದವನ್ನು ಕಲ್ಪಿಸಿ ಅರ್ಜುನ ಭೀಮರ ಸಾಹಸಗಳೊಂದಿಗೆ ಆಶ್ರಯದಾತರ ಸಾಹಸಗಳನ್ನು ಸೇರಿಸಿ ತಮ್ಮ ಕೃತಿಗಳನ್ನು ರಚಿಸಿರುವರು. ಇದಕ್ಕಾಗಿ ಅವರು ತಮ್ಮದೇ ಆದ ಒಂದು ತಂತ್ರವನ್ನು ನಿರ್ಮಿಸಿಕೊಂಡಿರುವರು. ಅರ್ಜುನನ ಜನ್ಮೋತ್ಸವದಲ್ಲಿ ಪಂಪ ತ್ರಿಕಾಲಜ್ಞರಾದ ದೇವ ಋಷಿಗಳ ಉಪಸ್ಥಿತಿಯಲ್ಲಿ ಅರ್ಜುನನಿಗೆ ಅವನ ಪ್ರಸಿದ್ಧ ಹೆಸರುಗಳೊಂದಿಗೆ ಚಾಳುಕ್ಯ ನಾರಾಯಣ ಅರಿಕೇಸರಿ, ವಿಕ್ರಮಾರ್ಜುನ, ಮೊದಲಾದ ಆಶ್ರಯದಾತ ಅರಿಕೇಸರಿಯ ಹೆಸರಗಳನ್ನು ಕೋಡಿಸಿ ತನ್ನ ಕಥಾಮುಖವನ್ನು ರಚಿಸಿಕೊಂಡಿರುವನು. ರನ್ನ ಇದಕ್ಕಾಗಿ ದೃಷ್ಟಾದೃಷ್ಟ—ಪರಂಪರೆ ಎಂಬ ಹೆಸರಿನ ಕಂಚುಕಿಯನ್ನು ಸೃಷ್ಟಿಸಿಕೊಂಡಿರುವನು. ಸತ್ಯಾಶ್ರಯನನ್ನು ಚಕ್ರವರ್ತಿ, ಸಾರ್ವಭೌಮ, ಎಂದು ಮುಂತಾಗಿ ಬಣ್ಣಿಸಿರುವದು ಇಂಥದೊಂದು ಕವಿವ್ಯಾಪಾರ. ದೃಷ್ಟಾದೃಷ್ಟ–ಪರಂಪರೆ ಕಂಚುಕಿಯ ಮೂಲಕ ಭೀಮ ಸತ್ಯಾಶ್ರಯರಲ್ಲಿ ಅಭೇದವನ್ನು ಕಲ್ಪಿಸಿದ್ದರೆ, ಗ್ರಂಥಾವತಾರದಲ್ಲಿ—

ನೆಟ್ಟನೆ ವಾಸವಂಗಮೃತವಾರಿಧಿಯೊಳ್ಪುರ ಗಂಧವಾರಣಂ
ಪುಟ್ಟೆ ಸುರೇಂದ್ರರಾಜ್ಯಮುದಿತೋದಿತಮಾದುದು ದಾನದಿಂದೊಡಂ—।
ಬಟ್ಟಿರೆ ಭದ್ರಗುಣಲಕ್ಷಣಗುಣನ್ವಿತನಮ್ಮನ ಗಂಧವಾರಣಂ
ಪುಟ್ಟೆ ನರೇಂದ್ರರಾಜ್ಯಮುದಿತೋದಿತಮಾಹವಮಲ್ಲದೇವನಾ ॥ ೧/೧೨

ಬರೆಗರ್ಭಕ್ಕರಿವಸ್ತುವಾಹನಚಯುಂಕಯ್ಗೆಯ್ದೆವಂದತ್ತುಪು—
ಟ್ಟೆರಣೋತ್ಸಾಹದೆ ಚಕ್ರವರ್ತಿ ವಿಭವಂಪುಟ್ಟಿತ್ತುಕೆಯ್ವತ್ತಿನಿಂ—।
ದಿರೆ ಪತ್ತಿತ್ತು ಸಮಸ್ತಧಾತ್ರಿವಳಯುಕ್ಕೆಂದುಂ ದಿಶಾದಂತಿಗ—
ಳ್ಬರೆಗಂ ತಂದೆಯ ಕೀರ್ತಿಯೇಂ ಬಳೆದುದೋ ಸತ್ಯಾಶ್ರಯಂ ಧನ್ಯನೋ! ॥೧/೧೧

—ಮೊದಲಿನ ಪದ್ಯದಲ್ಲಿ ಐರಾವತದ ಜನ್ಮದೊಂದಿಗೆ ದೇವೇಂದ್ರನ ರಾಜ್ಯವು ಉದಿತೋದಿತವಾದಂತೆ ಸತ್ಯಾಶ್ರಯನ ಜನ್ಮದೊಂದಿಗೆ ಆತನ ತಂದೆ ಆಹವಮಲ್ಲನ ರಾಜ್ಯವು ಉದಿತೋದಿತವಾಯಿತು ಎಂದು ಹೇಳಿ, ಎರಡನೆಯದರಲ್ಲಿ ಹುಟ್ಟಿ ನಡೆದಾಡುವಷ್ಟರಲ್ಲಿ ಸತ್ಯಾಶ್ರಯನಿಗೆ ಚಕ್ರವರ್ತಿತ್ವವು ಕಟ್ಟಿಟ್ಟಗಂಟಾಗಿತ್ತು, ಸತ್ಯಾ

ಶ್ರಯ ನಿಜವಾಗಿಯೂ ಧನ್ಯ !, ಎಂದು ಸತ್ಯಾಶ್ರಯನ ಭಾಗ್ಯಸಂಪದವನ್ನು ಬಣ್ಣಿಸಿ, ಕೊನೆಯಲ್ಲಿ ಸತ್ಯಾಶ್ರಯನಿಂದ ಅಭಿನ್ನನಿರುವ ಭೀಮನಿಗೆ ಪಟ್ಟಗಟ್ಟಿ, ಅವನನ್ನು ಸಾರ್ವಭೌಮ, ಪೃಥ್ವೀವಲ್ಲಭ, ಚಕ್ರವರ್ತಿ, ಎಂದು ಮುಂತಾಗಿ ಸ್ತುತಿಸಲು ಇಂಬು ಮಾಡಿಕೊಂಡಿರುವನು. ತೈಲಪನ ವಂತರ ಆಗಿ ಹೋದ ಚಾಲುಕ್ಯ ಮನೆತನದ ಅತ್ಯಂತ ಪ್ರಭಾವಶಾಲಿ ಅರಸು ಆರನೆಯ ವಿಕ್ರಮಾದಿತ್ಯ (ಕ್ರಿ. ೧೦೭೬–೧೧೨೭) ಜನ್ಮಿಸಿದಾಗ ಅವನನ್ನು 'ಪೂರ್ವಪೃಥ್ವೀಭೃದಭ್ಯಧಿಕ' ಎಂದು ಬಣ್ಣಿಸಿ ನಾಮಕರಣ ಸಮಾರಂಭದಲ್ಲಿ 'ವಿಕ್ರಮಾದಿತ್ಯ ಚಕ್ರವರ್ತಿ' ಎಂದು ಹೆಸರಿಸಿರುವದನ್ನು ಈ ಸಂದರ್ಭದಲ್ಲಿ ನೆನೆಯುವಂತಿದೆ. ರನ್ನ ಸತ್ಯಾಶ್ರಯನನ್ನು ಚಕ್ರವರ್ತಿ ಎಂದು ಬಣ್ಣಿಸಿರುವದಾದರೂ ಇಂಥದೊಂದು ಭಾವನಾ ವ್ಯಾಪಾರ.

ಗದಾಯುದ್ಧವು ಲೌಕಿಕವಿದ್ದರೂ, ರತ್ನತ್ರಯಗಳು ಜೈನಧರ್ಮ ವಿಶಿಷ್ಟವಿದ್ದರೂ, ರನ್ನನ ಚಕ್ರೇಶ್ವರ ಚರಿತೆಯೇ ಗದಾಯುದ್ಧವೆಂದು ಬಗೆಯಲು ಅವಕಾಶವಿಲ್ಲದಿಲ್ಲ. ಜೈನಧರ್ಮದಲ್ಲಿ ಸಮ್ಯಕ್ ದರ್ಶನ, ಸಮ್ಯಕ್ ಜ್ಞಾನ, ಸಮ್ಯಕ್ ಚಾರಿತ್ರ ಇವು ಮೂರಕ್ಕೆ ರತ್ನತ್ರಯ ಎನ್ನುವರು. ಸತ್ಯಾಶ್ರಯ ಇರಿವ ಬೆಡಂಗ ಶಾಸನಗಳಲ್ಲಿ ಮತ್ತು ಇತರತ್ರ ಅಕಲಂಕ ಚರಿತ, ಪವಿತ್ರ ಚಾರಿತ್ರಗುಣ ಎಂದು ಉಕ್ತನಾಗಿರುವನು. ಗದಾಯುದ್ಧದಲ್ಲಿ ಕೂಡ ಭೀಮನ ಬಿರುದುಗಳಲ್ಲಿ ಸತ್ಯಾಶ್ರಯನ ಬಿರುದುಗಳನ್ನು ಸೇರಿಸಿ ಹೇಳುವಾಗ (೨/೧ ನಂತರದ ಗದ್ಯ) ರನ್ನ 'ಅಕಲಂಕ ಚರಿತನುಂ ಅಮ್ಮನ ಗಂಧವಾರಣನುಂ' ಎಂದು ಅವನನ್ನು ಬಣ್ಣಿಸಿರುವನಲ್ಲದೆ—

ದೊರೆಯಾದುದು ದುರ್ಯಶದೊಳ್
ಪೊರೆಯದ ಚರಿತಂ ಪುರಾಣಪುರುಷ ಚರಿತದೊಳ್ ।
ಅರರೆ ಅಕಲಂಕಚರಿತಂ
ದೊರೆಯಾದುದೊ ಸಕಲಸತ್ಯ ಚಕ್ರೇಶ್ವರನಾ ॥ ೧/೧೩

—ಈ ಕಂದದಲ್ಲಿ ಸಮ್ಯಕ್ ಚಾರಿತ್ರದ ಗರಿಮೆಯನ್ನು ಬಣ್ಣಿಸಿ ಅಕಲಂಕ ಚರಿತನೆಂದು ಸತ್ಯಾಶ್ರಯನ ಚರಿತ್ರವನ್ನು ಚಕ್ರೇಶ್ವರ ಚರಿತ ಅರ್ಥಾತ್ ಗದಾಯುದ್ಧವನ್ನು ರತ್ನತ್ರಯಗಳ ಅಳವಿನಲ್ಲಿ ತಂದಿರುವಂತೆ ತೋರುವದು. ಚಕ್ರೇಶ್ವರ ಪದಕ್ಕೆ ಮಹಾಸೇನಾಪತಿ ಎಂಬರ್ಥವೂ ಇದೆ. ಶ್ಲೇಷೆಯಿಂದ ಸಕಲ ಚಕ್ರೇಶ್ವರನೆಂದು ರನ್ನ ಇಲ್ಲಿ ತೈಲಪನ ಸಮಯದಲ್ಲಿ ಇದ್ದಿರಬಹುದಾದ ಸತ್ಯಾಶ್ರಯನ ನಿಜವಾದ ಸ್ಥಾನಮಾನಗಳನ್ನು ಸೂಚಿಸಿದಂತಿದೆ.

ಇದೇ ಮೇರೆಗೆ ಪರಶುರಾಮಚರಿತವಾದರೂ ಚಾವುಂಡರಾಯನಿಗೆ ಸಂಬಂಧಿಸಿರಬೇಕು. ತೈಲಪನ ಆಶ್ರಯಕ್ಕೆ ಬರುವ ಮೊದಲು ರನ್ನ ಚಾವುಂಡರಾಯನ ಆಶ್ರಿತನಿದ್ದ. ಪುರಾಣ ಪ್ರಸಿದ್ಧ ಪರಶುರಾಮ ತನ್ನ ತಂದೆ ಜಮದಗ್ನಿಯನ್ನು ಕೊಂದ ಕಾರ್ತವೀರ್ಯನನ್ನು ವಧಿಸಿದಂತೆ, ಕಾಳಗದಲ್ಲಿ ಚಾವುಂಡರಾಯ ತನ್ನ ತಮ್ಮ ನಾಗವರ್ಮನನ್ನು ಕೊಂದ ಗಂಗ ಮುದುರಾಚಯನನ್ನು ವಧಿಸಿದ್ದರಿಂದ ಅವನಿಗೆ 'ಸಮರ ಪರಶುರಾಮ'

ಎಂಬ ಬಿರುದು ಬಂದಿದ್ದಿತೆಂಬ ಐತಿಹ್ಯವಿದೆ. ಚಾವುಂಡರಾಯ ಉಜ್ವಲ ಜೈನ್ನ ಸಮ್ಯಕ್ತ್ವರತ್ನಾಕರನೆಂದು ಪ್ರಸಿದ್ಧನಿದ್ದ. ಸಮ್ಯಕ್ತ್ವವೆಂದರೆ ಜಿನಮತದಲ್ಲಿ ಸಂಪೂರ್ಣ ನಂಬಿಗೆ. ಲೌಕಿಕವಿದ್ದರೂ ಚಾವುಂಡರಾಯನ ಈ ಖ್ಯಾತಿಗೆ ಅನುಗುಣವಾಗಿ ಅವನನ್ನು ಪುರಾಣಪ್ರಸಿದ್ಧ ಪರಶುರಾಮನೊಡನೆ ಸಂಧಿಸಿ ತನ್ನ ರತ್ನತ್ರಯಗಳಲ್ಲಿ ಒಂದೆಂದು ರನ್ನ ಪರಶುರಾಮ ಚರಿತವನ್ನು ರಚಿಸಿರುವದಾದರೂ ಅಸಂಭವವಿಲ್ಲ.

' ಪುನಶ್ಚಹರಿಓಂ '

ಸರಿಯಾದ ಅರ್ಥವಾಗದೆಂದು ಗದಾಯುದ್ಧ ರಚನಾಕಾಲ ಸೂಚಕ ಪದ್ಯವನ್ನು ಬಿಟ್ಟು ಬೇರೆ ಮಾರ್ಗವನ್ನು ಹಿಡಿದರೆ ಅಲ್ಲಿ ಸಹ ಸಮಸ್ಯೆಗೆ ಸಮರ್ಪಕ ಪರಿಹಾರ ವಿಲ್ಲೆಂಬುದು ಈ ವರೆಗಿನ ವಿಮರ್ಶೆಯಿಂದ ವ್ಯಕ್ತವಾಗದಿರದು. ತ್ರುಟಿತವಿದ್ದರೂ ಶಕ ವರ್ಷದಮಟ್ಟಿಗೆ ಈ ಪದ್ಯದಲ್ಲಿ ಅಕ್ಷರಸ್ಖಾಲಿತ್ಯ ಮುಂತಾದ ದೋಷಗಳಿಲ್ಲ. ' ಪುನಶ್ಚ ಹರಿಓಂ ' ಎಂದು ಇಲ್ಲಿರುವ ' ಶಕಸಮಗತಿ (ಅಥವಾ ' ಗತಿಸಮ ') ಋತುಯುಗ ಶಶಿ ನಿಕರಾಂಕ ' ಪದಗಳನ್ನು ನಿರುಕಿಸಿದಾಗ ಇಲ್ಲಿ ಸೂಚಿತವಾದ ಶಕವರ್ಷವು ತೈಲಪ ಚಕ್ರವರ್ತಿಯ ಆಳಿಕೆ ವರ್ಷಕ್ಕೆ ಸರಿಹೋಗುವ ಶಕವರ್ಷವೆಂದು ತೋರುವದು. ' ಸಮ 'ಕ್ಕೆ ವರ್ಷ ಅಥವಾ ಯುವುದೊಂದು ಸಮಸಂಖ್ಯೆ (೨, ೪, ೬, ೮) ಮತ್ತು ' ಗತಿ 'ಗೆ ೪ ಎಂದಿಟ್ಟುಕೊಂಡು ಸಮಗತಿ, ಗತಿಸಮ, ಹೇಗೆ ಓದಿದರೂ ಯುಕ್ತ ಅರ್ಥ ಹೊರಡದೆಂಬುದನ್ನು ಪ್ರಾರಂಭದಲ್ಲಿಯೆ ತೋರಿಸಲಾಗಿದೆ. ಈ ಪದಗಳಿಗೆ ' ಸಮ ವಿರುವ ಗತಿ ' ಅಂದರೆ 'ಸರಿಹೋಗುವ ಕಾಲಾವಧಿ' ಎಂದು ಅರ್ಥವಿಸಿಕೊಂಡಲ್ಲಿ ಉಳಿದ ಅಂದರೆ ಋತು (೬), ಯುಗ (೨), ಶಶಿ (೧) ಇವುಗಳ ನಿಕರಾಂಶ (ಒಟ್ಟು ಬೇರೀಜು) ೯ ಆಗುವದು. ತೈಲಪ ಪಟ್ಟಕ್ಕೆ ಬಂದದ್ದು ಶಕ ೮೯೫ (ಕ್ರಿ. ೯೭೩). ಇದರಲ್ಲಿ ೯ ಕೂಡಿಸಿದರೆ ಲಬ್ಧವಾಗುವ ಸಂಖ್ಯೆ ಶಕ ೯೦೪ (ಕ್ರಿ. ೯೮೨). ಪದ್ಯದಲ್ಲಿ ಉಕ್ತ ವಾದ ಚಿತ್ರಭಾನು ಸಂವತ್ಸರ ಒಂದನ್ನೇ ಹಿಡಿದು ಲೆಕ್ಕ ಹಾಕಿದಾಗ ಸಹ ಶಕವರ್ಷ ಇಷ್ಟೇ ಬರುವದು.

ಅಜಿತಪುರಾಣವು ರಚಿತವಾದ ಕಾಲ (ಕ್ರಿ. ೯೯೩), ಇದನ್ನಾಧರಿಸಿ ನಿರ್ಣಯಿ ಸಿದ ರನ್ನನ ಜನ್ಮವರ್ಷ (ಕ್ರಿ. ೯೪೯), ತೈಲಪನ ಆಳಿಕೆ (ಕ್ರಿ. ೯೭೩-೯೯೭), ಚಿತ್ರಭಾನು ಸಂವತ್ಸರ, ಇವಿಷ್ಟು ಈ ಸಮಸ್ಯೆಯಲ್ಲಿರುವ ನಿಶ್ಚಿತ ಅಂಶಗಳು. ಸಬಲ ಕಾರಣಗಳಿಲ್ಲದೆ ಇವನ್ನು ತಳ್ಳಿಹಾಕುವಂತಿಲ್ಲ. ಮೇಲಿನಂತೆ ಅಂದರೆ ಗದಾಯುದ್ಧದಲ್ಲಿ ಉಕ್ತವಾದ ಶಕವರ್ಷವು ತೈಲಪನ ಆಳಿಕೆ ವರ್ಷಕ್ಕೆ ಸರಿಹೋಗುವ ಶಕವರ್ಷವೆಂಬ ಲೆಕ್ಕದಿಂದ ಹೊರಡುವ ಗದಾಯುದ್ಧ ರಚನಾಕಾಲವು ಶ. ೯೦೪ (ಕ್ರಿ. ೯೮೨) ಇವುಗ ಳೊಂದಿಗೆ ಸರಾಗವಾಗಿ ಹೊಂದಿಕೊಳ್ಳುವದು ಬಲುಮಟ್ಟಿಗೆ ನಿಶ್ಚಿತ ಫಲಿತಾಂಶ ಎನ್ನು ವಂತಿದೆ. ಸತ್ಯಾಶ್ರಯನ ವಿಷಯದಲ್ಲಿ ಈ ಲೆಕ್ಕ ಹೊಂದುವದಿಲ್ಲ. ಚಿತ್ರಭಾನು ಸಂವತ್ಸರ ಅಡ್ಡ ಬರುವದು.

ಶಾಸನಗಳಲ್ಲಿ ಶಕ ವರ್ಷದ ನಿರ್ದೇಶವಿರುವದು ಸರ್ವೇ ಸಾಮಾನ್ಯ. ಕೆಲವು ಶಾಸನಗಳಲ್ಲಿ ಶಕ ವರ್ಷದ ಬದಲು ಪ್ರವರ್ಧಮಾನ ಅರಸನ ಆಳಿಕೆ ವರ್ಷ, ಕೆಲವುಗಳಲ್ಲಿ ಎರಡೂ ಇರುವದುಂಟು. ಕ್ವಚಿತ್ತಾಗಿ ಪ್ರವರ್ಧಮಾನ ಅರಸನ ಹೆಸರು, ಸಂವತ್ಸರ, ತಿಥಿ, ಇಷ್ಟೇ ವಿವರಗಳಿರುವ ಉದಾಹರಣೆಗಳೂ ಇವೆ. ಇವಾವೂ ಇಲ್ಲದ ಉದಾಹರಣೆಗಳಾದರೂ ಇಲ್ಲದಿಲ್ಲ. ಇಂಥ ಸಂದರ್ಭಗಳಲ್ಲಿ ಲಭ್ಯವಿರುವ ನಿಶ್ಚಿತಾಂಶ, ಯುಕ್ತಗ್ರಹಿಕೆ ಮತ್ತು ಅನುಮಾನಗಳಿಂದ ಶಾಸನಗಳ ಕಾಲವನ್ನು ನಿರ್ಣಯಿಸಬೇಕಾಗುವದು. ನಿಶ್ಚಿತಾಂಶಗಳೊಂದಿಗಿನ ಆಯಾ ಗ್ರಹಿಕೆ ಅನುಮಾನಗಳ ಸರಾಗ ಹೊಂದಾಣಿಕೆಯೆ ಅವುಗಳ ಸಾಮಂಜಸ್ಯತೆಯ ಮಾನದಂಡವಾಗುವದು. ಗದಾಯುದ್ಧದ ರಚನಾಕಾಲ ಸಮಸ್ಯೆಯಾದರೂ ಈ ಬಗೆಯದು.[1]

1. ಗದಾಯುದ್ಧದ ಸಂಪಾದಕರು 'ಗತಿಸಮು' ಪಾಠಹಿಡಿದು, ಗತಿ–೪, ಸಮು–೦, ಋತು–೬, ಯುಗ–೨, ಶಶಿ–೧ ಮತ್ತು ಮೊತ್ತವನ್ನು (ನಿಕರಾಂಕ) ೬, ೨, ೧ಕ್ಕೆ ಮಿತವಾಗಿಸಿ ಶಕ ವರ್ಷವನ್ನು ೯೦೪ ಎಂದು ನಿರ್ಣಯಿಸಿರುವರು (ಗ.ಯು. ಮುನ್ನುಡಿ ಪು. ೨೪). ಸಮುಕೆ, ಶೂನ್ಯ ಎಂದಿರುವದು ಮತ್ತು ಮೊತ್ತವನ್ನು ೬, ೨, ೧ ಈ ಮೂರೇ ಅಂಕಿಗಳಿಗೆ ಮಿತವಾಗಿಸಿರುವದು ಇತರರಿಗೆ ಒಪ್ಪಿತವಿಲ್ಲ.

ಗೋವಿಂದ ಪೈ ಶಕವರ್ಷ ಸಮಸ್ಯಾತ್ಮಕವಿದ್ದರೂ ಚಿತ್ರಭಾನು ಸಂವತ್ಸರ ಮತ್ತು ಅದು ರನ್ನನ ಆಯುಷ್ಯದಲ್ಲಿ ಒದಗಿರುವದನ್ನು ಲಕ್ಷಿಸಿ ಈ ಪದ್ಯವನ್ನು ತ್ಯಜಿಸಿಲ್ಲ. ಅವರ ಅಭಿಪ್ರಾಯದಲ್ಲಿ ಇದು ಚಕ್ರೇಶ್ವರ ಚರಿತೆಯ ರಚನಾಕಾಲ ಸೂಚಕ ಪದ್ಯ. ಅವರು ಗದಾಯುದ್ಧದ ರಚನೆ ಅಜಿತ ಪುರಾಣದ ನಂತರ, ಚಕ್ರೇಶ್ವರ ಚರಿತೆ ಪರಶುರಾಮ ಚರಿತೆಗಳು ಜೈನಪುರಾಣ ಕಥೆಗಳಿಗೆ ಸಂಬಂಧಿಸಿವೆ ಎಂದು ಬಗೆದಿರುವರು (ಮೂರು ಉಪನ್ಯಾಸಗಳು).

ಶಾಂತಿನಾಥನ ಪಡ್ಡಳಿ

ರಚನೆಯ ದೃಷ್ಟಿಯಿಂದ ಶಾಂತಿನಾಥನ (ಕ್ರಿ. ೧೦೬೮) ಸುಕುಮಾರ ಚರಿತೆಯಲ್ಲಿಯ ಜಿನಸ್ತುತಿ ಪಡ್ಡಳಿ ಕುತೂಹಲ ಜನ್ಯವಿದೆ. ಪಡ್ಡಳಿ ಪ್ರತಿಪಾದದಲ್ಲಿ ನಾಲ್ಕು ಚತುರ್ಮಾತ್ರಾ ಗಣಗಳಿರುವ ಚತುಷ್ಪದಿ. ಅಪಭ್ರಂಶ ಕವಿಗಳ ಪ್ರೀತಿಯ ಛಂದಸ್ಸು. ಕ್ವಚಿತ್ತಾಗಿ ಸಂಸ್ಕೃತದಲ್ಲಿಯೂ ಬಳಸಲ್ಪಟ್ಟಿದೆ. ಆದ್ಯ ಶ್ರೀ ಶಂಕರಾಚಾರ್ಯರ ಸುಪ್ರಸಿದ್ಧ 'ಭಜಗೋವಿಂದಂ' ಕೃತಿ ಇಂಥದು. ಪಡ್ಡಳಿಯು ಪದ್ದಳಿ, ಪದ್ಧತಿ-, ಪಜ್ಝಟಿಕಾ, ಪಂಜರಿಕಾ ಎಂದು ಸಹ ಪ್ರಸಿದ್ಧವಿದೆ. ಕನ್ನಡದಲ್ಲಿ ಮಂದಾನಿಲ ಅಥವಾ ಮಟ್ಟೆರಗಳೆಗಾಗಿ ಇತರ ಚತುರ್ಮಾತ್ರಾಗಣಯುಕ್ತ ಷೋಡಶಮಾತ್ರಾ ಬಂಧಗಳೊಡನೆ ದೇವತಾಸ್ತುತಿ; ವಿವಾಹಾದಿ ಮಂಗಲ ಪ್ರಸಂಗಗಳಲ್ಲಿ, ಪುರವರ್ಣಾದಿ ಸಂದರ್ಭಗಳಲ್ಲಿ ಪ್ರಯುಕ್ತವಾಗಿದೆ. ನಿರ್ದಿಷ್ಟ ಸ್ಥಾನಗಳಲ್ಲಿ ಜ-ಗಣದ (ᴗ-ᴗ) ವಿಧಿ ನಿಷೇಧವಿರುವ ಪಡ್ಡಳಿಯದೊಂದು ವಿಶೇಷ ಪ್ರಕಾರವನ್ನು ಹೇಮಚಂದ್ರ ತನ್ನ ಛಂದೋನುಶಾಸನದಲ್ಲಿ ಲಕ್ಷಿಸಿರುವನು. ಇವು ಅದರ ಲಕ್ಷಣ-ಲಕ್ಷ್ಯಗಳು—

(೧) ಪ್ರತಿಪಾದದಲ್ಲಿ ೪ ಚತುರ್ಮಾತ್ರಾ ಗಣಗಳು.
(೨) ವಿಷಮಸ್ಥಾನಗಳಲ್ಲಿ (೧, ೩) ಜ-ಗಣ ವರ್ಜ್ಯ.
(೩) ಪಾದಾಂತ ಗಣ ಜ-ಗಣ ಇಲ್ಲವೆ ಸರ್ವಲಘು (ᴗᴗᴗᴗ) ಇರಬೇಕು.
(೪) ಎರಡೆರಡು ಪಾದಗಳಿಗೆ ಪ್ರಾಸ.

ಲಕ್ಷ್ಯ—ಛತ್ರಾ | ಯಮಾಣ | ಧರಣೋ | ರಗೇಂದ್ರ |
— — | ᴗ — ᴗ | ᴗ ᴗ — | ᴗ — ᴗ

ಪಾರ್ಶ್ವಜಿ | ನೇಂದ್ರ | ಸ್ಮರಮೃಗ | ಮೃಗೇಂದ್ರ ||
— ᴗ ᴗ | — — | ᴗ ᴗ ᴗ ᴗ | ᴗ — ᴗ

ದರ್ಶಯ | ದೀರ್ಣದು | ರಿತ ತಿಮಿ | ರನಿಕರ
— ᴗ ᴗ | — ᴗ ᴗ | ᴗ ᴗ ᴗ ᴗ | ᴗ ᴗ ᴗ ᴗ

ಸತ್ಪ | ದ್ಧತಿ ಮಾ | ಸ್ಯ ಜಿ ತ ರ | ಜನಿಕರ ||
— — | ᴗ ᴗ — | ᴗ ᴗ ᴗ ᴗ | ᴗ ᴗ ᴗ ᴗ

ಸಮಮಾತ್ರಾಗಣ ಮತ್ತು ದ್ವಿಪಾದ ಪ್ರಾಸಯುಕ್ತ ಇರುವುದರಿಂದ ಕನ್ನಡದಲ್ಲಿ ರಗಳೆಗಳಂಥ ಬಹು ಪಾದಯುಕ್ತ ಮತ್ತು ತ್ವರಿತದಿಂದ ಓಡುವ ತಾಲಾನುಗ ರಚನೆಗಳಲ್ಲಿ ದ್ವಿಪದಿಯಾಗಿ ಪ್ರಯುಕ್ತವಾಗಿದೆ. ಪಂಪ, ಪೊನ್ನ, ರನ್ನ, ಆದಿನಾಗವರ್ಮ, ದುರ್ಗಸಿಂಹ ಮೊದಲಾದವರು ದೇವತಾಸ್ತುತಿ, ಪುರವರ್ಣನ, ಮೊದಲಾದ ಸಂದರ್ಭಗಳಲ್ಲಿ ಇದನ್ನು ಬಳಸಿರುವರು. ಶಾಂತಿನಾಥನ ಜಿನಸ್ತುತಿ ಪಡ್ಡಳಿ ಇಂಥದು. ಇವು ಅದರಲ್ಲಿಯ ನಾಲ್ಕು ಯುಗ್ಮಗಳು, ಕವಿಚರಿತೆಯಲ್ಲಿ ಉದಾಹೃತವಾಗಿವೆ—

ಜಯ ಜಯ । ಭುವನ । ತ್ರಯ ಪರ । ಮದೇವ ।
∪ ∪ ∪ ∪ । ∪ ∪ – । ∪ ∪ ∪ ∪ । ∪ – ∪

ದೇವೇಂ । ದ್ರಾಭ್ಯ । ರ್ಚಿತ ಚರ । ಣಕಮಲ ॥ ೧ ॥
– – । – – । ∪ ∪ ∪ ∪ । ∪ ∪ ∪ ∪

ಕಮಲವಿ । ರಹಿತ । ನಿರುಪ । ಮದೇಹ ।
∪ ∪ ∪ ∪ । ∪ ∪ ∪ । ∪ ∪ ∪ । ∪ – ∪

ದೇಹಾ । ಶ್ರಿತಶುಭ । ಲಕ್ಷಣ । ವಿನೂತ ॥ ೨ ॥
– – । ∪ ∪ ∪ ∪ । – ∪ ∪ । ∪ – ∪

ನೂತನ । ಸಂಗತ । ಕೈವ । ಲ್ಯಬೋಧ ।
– ∪ ∪ । – ∪ ∪ । – – । ∪ – ∪

ಬೋಧ । ಪ್ರಕಾಶ । ವಸ್ತು । ಸ್ವರೂಪ ॥ ೩ ॥
– – । ∪ – ∪ । – – । ∪ – ∪

ರೂಪಾ । ತಿಶಯಾ । ನ್ವಿತವಿತ । ತವಿಭವ ।
– – । ∪ ∪ – । ∪ ∪ ∪ ∪ । ∪ ∪ ∪ ∪

ಭವನಿವ । ಹಪಟಲ । ನಿರ್ಮು । ಕ್ತಜೀವ ॥ ೪ ॥
∪ ∪ ∪ ∪ । ∪ ∪ ∪ ∪ । – – । ∪ – ∪

—ಎರಡನೆಯ ಯಬುಗ್ಮದ ಪ್ರಥಮ ಪಾದದಲ್ಲಿ ೨ ಮಾತ್ರೆಗಳ ಕೊರತೆ ಇದೆ. ದೇಶಭಾಷಾ ರಚನೆಗಳಲ್ಲಿ ಗಣಮಾತ್ರೆಗಳ ನ್ಯೂನಾಧಿಕ್ಯ ಸಾಮಾನ್ಯ ಎಂದಿರುವರು ಸುಪ್ರಸಿದ್ಧ ಛಂದಃಶಾಸ್ತ್ರ ವಿದ್ವಾನ್ ವೇಲಣಕರ. ಸಂಸ್ಕೃತದಲ್ಲಿ ಕೂಡ ಆದ್ಯ ಶಂಕರಾಚಾರ್ಯರ ಉಪರೋಕ್ತ 'ಭಜಗೋವಿಂದಂ' ಕೃತಿಯಲ್ಲಿ ಒಂದೆಡೆ ೨ ಮಾತ್ರೆಗಳ ಕೊರತೆ ಇದೆ (ಪ್ರಾಪ್ತೇ। ಸನ್ನಿಹಿ। ತೇಮರ। ಣೇ××). ಪಂಪ ಪೊನ್ನರ ರಚನೆಗಳಲ್ಲಿ ಹೆಚ್ಚು ಮಾತ್ರೆಗಳಿರುವ ಒಂದೆರಡು ಸಂದರ್ಭಗಳಿವೆ. ಶಾಂತಿನಾಥನ ರಚನೆಯಲ್ಲಿ ಕಂಡುಬರುವ ಮಾತ್ರೆಗಳ ನ್ಯೂನತೆಗೆ ಈ ರೀತಿ ಪರಂಪರೆಯ ಬೆಂಬಲವಿರುವದರಿಂದ ಅದಾದರೂ ಆಕ್ಷೇಪಾರ್ಹವಾಗದು. ಪಡ್ಡಳಿಯಂಥ ತಾಲಾನುಗ ಬಂಧಗಳಲ್ಲಿ ತಾಲವೇ ಮುಖ್ಯ. ಗಾನ ಸಮಯದಲ್ಲಿ ಅರ್ಥ ಸ್ಫೂರ್ತಿ ಕೆಡದಂತೆ. ಅಕ್ಷರಗಳನ್ನು ಎಳೆದು, ಸಂಕುಚಿಸಿ, ಅಷ್ಟು ಕಾಲ ಮೌನದಿಂದಿದ್ದು ಮಾತ್ರೆಗಳ ನ್ಯೂನಾಧಿಕ್ಯವನ್ನು ತುಂಬಿಕೊಂಡು ಥಾಟ ತಾಲಗಳಿಗೆ ತೂಗಿಸಿಕೊಳ್ಳಬೇಕಾಗುವದು.

ಗಮನಿಸಬೇಕಾದ ಮುಖ್ಯಾಂಶ

ಶಾಂತಿನಾಥನ ಪಡ್ಡಳಿಯಲ್ಲಿ ಗಮನಿಸಬೇಕಾದ ಮುಖ್ಯಾಂಶವೆಂದರೆ-- ಪ್ರಾಸರಾಹಿತ್ಯ. ಪ್ರಾಸ ಶಬ್ದಾಲಂಕಾರ. ಐಚ್ಛಿಕವಿದ್ದರೂ ಕನ್ನಡ ಪದ್ಯಗಳಿಗೆ ಅಗತ್ಯ. 'ಕನ್ನಡಕ್ಕೆ ಸತತಂ ಪ್ರಾಸಂ' ಎಂದು ವಿಧಿಸಿರುವವನು ನೃಪತುಂಗ. ಪಂಪ ಪೊನ್ನರು ತಮ್ಮ ರಚನೆಗಳಿಗೆ ಅಪಭ್ರಂಶ ಕವಿಗಳ ಮಾದರಿಯಲ್ಲಿ ಅಂತ್ಯ ಪ್ರಾಸವನ್ನಿರಿಸಿದ್ದರೆ, ರನ್ನ ಆದ್ಯಂತ ಅಂತ್ಯ ಪ್ರಾಸವನ್ನಿರಿಸಿರುವನು. ಅಂತ್ಯ ಪ್ರಾಸದೊಡನೆ ಆದಿಪ್ರಾಸ

ವನ್ನು ಸೇರಿಸಿ ಈ ರಚನೆಗಳಿಗೆ ಕನ್ನಡದ ವೈಶಿಷ್ಟ್ಯವನ್ನು ತೊಡಿಸಿದವರಲ್ಲಿ ರನ್ನನೇ ಮೊದಲಿಗ. ಶಾಂತಿನಾಥ ಇವರನಂತರದವ.

ವಸ್ತುಸ್ಥಿತಿ ಇಂತಿದ್ದರೂ ಶಾಂತಿನಾಥನ ಪಡ್ಡಳಿಯಲ್ಲಿ ಎರಡೂ ಇಲ್ಲ. ಪಾದ ಬಾಹುಲ್ಯ, ಛಂದಸ್ಸು, ವಿಷಯ (ಜಿನಸ್ತುತಿ) ದೃಷ್ಟಿಯಿಂದ ಆತನ ಪಡ್ಡಳಿಯು ಮಂದಾನಿಲ ರಗಳೆಯಂತೆ ತೋರುತ್ತಿದ್ದರೂ ರಗಳೆಗೆ ಅವಶ್ಯವಿರುವ ಯುಗ್ಮ ಪ್ರಾಸ ಇದರಲ್ಲಿಲ್ಲ. ಅತ ಏವ ಇದನ್ನು ಶಾಸ್ತ್ರದ ಮಟ್ಟಿಗೆ ೧೦೦% ರಗಳೆಯೆಂದು ಬಗೆಯು ವಂತಿಲ್ಲ. ಇದು ರಗಳೆಯ ಛಂದಸ್ಸಿನಲ್ಲಿ ರಚಿಸಿದ 'ಚಕ್ರವಾಲ' ಎಂಬ ಪ್ರಬಂಧ (ನಿಬದ್ಧ ರಚನಾ ವಿಶೇಷ). ಚಕ್ರವಾಲವಾದರೂ ಸ್ತುತಿಸ್ತೋತ್ರಾದಿಗಳಿಗೆ ಬಳಸ ಲಾಗುತ್ತಿದ್ದ ಚಾಟು ಪ್ರಬಂಧ. ತಾಲಾನುಗ. ಯಮಕದ ಬಗೆಯ ಶಬ್ದಾಲಂಕಾರ ವಿಶಿಷ್ಟಬಂಧ. ವಿದ್ಯಾನಾಥನ ಪ್ರತಾಪರುದ್ರ ಯಶೋಭೂಷಣ, ಪಶ್ಚಿಮ ಚಾಲುಕ್ಯ ದೊರೆ ಸೋಮೇಶ್ವರನ ಮಾನಸೋಲ್ಲಾಸ, ಶಾರ್ಙ್ಗದೇವನ ಸಂಗೀತರತ್ನಾಕರ, ಅಮೃತಾನಂದನ ಅಲಂಕಾರ ಸಂಗ್ರಹ, ಕೃಷ್ಣಕವಿಯ ಮಂದಾರ ಮರಂದ ಚಂಪೂ ಗ್ರಂಥಗಳಲ್ಲಿ ಲಕ್ಷಿತವಾಗಿದೆ. ತಾಲಾನುಗವಿದ್ದರೂ ಇಂಥದೇ ಎಂಬ ಛಂದಸ್ಸಿನ ನಿರ್ಬಂಧವಿಲ್ಲ ಇದಕ್ಕೆ. ಗದ್ಯ-ಪದ್ಯ ಎರಡರಲ್ಲೂ ಇರಬಹುದು. ಸಂಬೋಧನ ಭೂಯಿಷ್ಟವಿದ್ದು ವಾಕ್ಯಗತ ಪದಗಳಲ್ಲಿ ಯತಿಗೆ ಹೊಂದಿರುವ ಅಥವಾ ಪಾದಾಂತ ಪದ ಅಥವಾ ಪದಭಾಗವು ಅದರ ಮುಂದಣ ಪದ ಅಥವಾ ಪದಭಾಗವಾಗಿ ಪುನರಾ ವೃತ್ತವಾಗುವದು (ವಿಮುಕ್ತಪುನರಾಕೃಷ್ಟ ಶಬ್ದಂ) ಇದರ ಲಕ್ಷಣ.[1] ಶಾಂತಿನಾಥನ ಪಡ್ಡಳಿಯಲ್ಲಿ ಪ್ರತಿ ಪಾದದ ಕೊನೆಯ ಪದ ಭಾಗ ಅದರ ಮುಂದಣ ಪಾದದ ಪ್ರಥಮ ಪದ ಇಲ್ಲವೆ ಪದಭಾಗವಾಗಿ ಬಂದಿದೆ. ಪರಾಂಬರಿಸಿರಿ—

ಜಯ ಜಯ ಭುವನತ್ರಯ ಪರಮ ದೇವ।
ದೇವೇಂದ್ರಾಭ್ಯರ್ಚಿತ-ಚರಣ ಕಮಲ ॥
ಕಮಲ ವಿರಹಿತ-ನಿರುಪಮ ದೇಹ।
ದೇಹಾಶ್ರಿತ-ಶುಭಲಕ್ಷಣ ವಿನೂತ ॥

ಹೀಗೆಯೆ ಮುಂದಣ ಯುಗ್ಮಗಳಲ್ಲಿ (ವಿನೂತ)-ನೂತನ, ಬೋಧ-ಬೋಧ, ಸ್ವರೂಪ-ರೂಪ, ವಿಭವ-ಭವ, ಪದ ಪದಭಾಗಗಳು ಪುನರಾವೃತ್ತವಾಗಿವೆ.

---

1 ಸಂಬೋಧನ ವಿಭಕ್ತ್ಯಾಯತ್ ಪ್ರಚುರಂ ಪದ್ಯಪೂರ್ವಕಂ।
ವಿಮುಕ್ತ ಪುನರಾಕೃಷ್ಟ ಶಬ್ದಂ ಸ್ಯಾಚ್ಚಕ್ರವಾಲಕಂ ॥
ಪ್ರ. ರು. ಯ., ಮಂ. ಮ. ಚಂಪೂ.

ಪೂರ್ವೇಷಾಮಕ್ಷರಾಣಾಮಂತೇಯೋ ವರ್ಣಸಮೂಹಃ ಸ ಉತ್ತರೋತ್ತರಸ್ಯ ಸಂಘ ಸ್ಯಾಕ್ಷರ ಸಮೂಹಸ್ಯಾದ್ಯೋಭವತಿಚೇತ್ ತದಾ ಚಕ್ರವಾಲಃ; ಸದ್ವಿಪ್ರಕಾರಃ—ಗದ್ಯಜ, ಪದ್ಯಜ,—ಸಂ. ರ. ಟೀಕೆ.

ಗದ್ಯ ಚಕ್ರವಾಲ ರನ್ನನ ಅಜಿತ ಪುರಾಣದಲ್ಲಿರುವ ಜಿನಸ್ತುತಿಯಲ್ಲಿ ಅಂಶತಃ ಬಂದಿದೆ. ಸಂಸ್ಕೃತದಲ್ಲಿದೆ—

ಓಂ ಜಯ ಜಯ ಜಗತ್ತ್ರಯಪತಿ.... ಕಿರೀಟಕೋಟಿಘಟಿತ-ಪಾದ **ಪೀಠ, ಪೀಠೀ** ಕೃತ-ಮಂದರಾಚಲ **ಶಿಖರ, ಶಿಖರೀ** ಭೂತ-ತಿಲಕಾಯ-ಮಾನ ಮಹನೀಯ **ಮಹಿಮೋದಯ, ಮಹಿಮೋದಯೋ** ದ್ಭಾಸಿ ಭಗವ-ಜ್ಜಿನೇಂದ್ರ.... ।

ಶಾಂತಿನಾಥ ಸಹಜಕವಿ, ಚತುರಕವಿ ಎಂದು ಪ್ರಸಿದ್ಧನಿರುವನು. "ಕವಿತ್ವ-ಸಹಜ ಪ್ರಸನ್ನವಾಗಿದೆ, ಶೈಲಿ ಧಾರಾಳವಾಗಿದೆ, ಪ್ರೌಢಿಮೆಯಿಂದ ಸರಳ ಸೌಂದರ್ಯಕ್ಕೆ ತಿರುಗುತ್ತಿದ್ದ ಚಂಪೂರೂಪಕ್ಕೆ ಇಲ್ಲಿಯೊಂದು ಮಾದರಿ ಇದೆ," ಎಂಬ ಆತನ ಸುಕುಮಾರ ಚರಿತೆಯ ವಿಮರ್ಶೆ 'ಸಹಜಕವಿ' ಬಿರುದಿಗೆ ಪೋಷಕವಾಗಿದ್ದರೆ, 'ಚತುರ ಕವಿ' ಬಿರುದಿಗೆ ಆತನ ಈ ಚಕ್ರವಾಲ ಪಡ್ಡಳಿಯು ಪೋಷಕವಾಗಿದೆ, ಎನ್ನುವಂತಿದೆ.

ಇಮ್ಮಡಿ ನಾಗವರ್ಮನ ಛಂದೋವಿಚಿತಿ*

ವೇದಾಭ್ಯಾಸಕ್ಕೆ ವೇದಾಂಗ ಅಥವಾ ಷಡಂಗಗಳೆಂದಿರುವ ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು ಮತ್ತು ಜ್ಯೋತಿಷಗಳ ಜ್ಞಾನವು ಅಗತ್ಯವಿರುವಂತೆ, ಕಾವ್ಯಾಭ್ಯಾಸಕ್ಕೆ ವ್ಯಾಕರಣ, ಛಂದಸ್ಸು, ಅಲಂಕಾರ, ಕೋಶವೆಂಬ ಕಾವ್ಯಾಂಗ ಚತುಷ್ಟಯದ ಜ್ಞಾನವು ಅವಶ್ಯವಿದೆ. ಪ್ರಾಚೀನರು ಅದೆಷ್ಟೇ ಪ್ರತಿಭಾವಂತರಿದ್ದರೂ ಶ್ರದ್ಧಾಪೂರ್ವಕವಾಗಿ ಇವುಗಳ ಅಭ್ಯಾಸ ಮಾಡುತ್ತಿದ್ದರು.

ಲೋಕೋಪಕಾರಾರ್ಥವಾಗಿ ಪಾಣಿನಿ, ಪಿಂಗಲ ಮೊದಲಾದ ಪ್ರಾಚೀನ ಋಷಿಗಳು ವ್ಯಾಕರಣ, ಛಂದಸ್ಸನ್ನು ಕುರಿತಿರುವ ಗ್ರಂಥಗಳನ್ನು ರಚಿಸಿದರು. ಲೌಕಿಕರಲ್ಲಿ ಭಾಮಹ, ದಂಡಿ, ಮೊದಲಾದವರು ಅಲಂಕಾರ ಶಾಸ್ತ್ರವನ್ನು ಕುರಿತು ಬರೆದರು. ಹಲಾಯುಧಾದಿಗಳು ಕೋಶಗ್ರಂಥಗಳನ್ನು ನಿರ್ಮಿಸಿದರು. ಆದರೆ ಇವರೆಲ್ಲರು ಕಾವ್ಯಾಂಗ ಚತುಷ್ಟಯದ ಒಂದೊಂದು ಅಂಗವನ್ನು ಪ್ರತಿನಿಧಿಸುವರು.

ಸಂಸ್ಕೃತದಲ್ಲಾಗಲಿ ಪ್ರಾಕೃತಾದಿ ಇತರ ಭಾರತೀಯ ಭಾಷೆಗಳಲ್ಲಾಗಲಿ ಕಾವ್ಯ ಶಾಸ್ತ್ರದ ನಾಲ್ಕೂ ಅಂಗಗಳನ್ನು ಕುರಿತು ನಿರ್ವಿವಾದವಾಗಿ ಒಂದೊಂದು ಗ್ರಂಥವನ್ನು ರಚಿಸಿದವರು ಇಬ್ಬರೇ ಇಬ್ಬರು. ಒಬ್ಬನು 'ಕಲಿಕಾಲ ಸರ್ವಜ್ಞ'ನೆಂದು ಕೀರ್ತಿವೆತ್ತ ಗುಜರಾತದ ಹೇಮಚಂದ್ರನು, ಇನ್ನೊಬ್ಬನು ಕರ್ಣಾಟಕದ ಇಮ್ಮಡಿ ನಾಗವರ್ಮನು; ಇಬ್ಬರೂ ಸಮಕಾಲೀನರು; ಇಬ್ಬರೂ ಜೈನರು.

ಹೇಮಚಂದ್ರನು ಸಿದ್ಧ–ಹೇಮಚಂದ್ರ–ಶಬ್ದಾನುಶಾಸನ ಅಥವಾ ಸಿದ್ಧಹೇಮ, ಕಾವ್ಯಾನುಶಾಸನ, ಛಂದೋನುಶಾಸನ, ನಾಮಮಾಲಾ, ಹೀಗೆ ಕಾವ್ಯಾಂಗ ಚತುಷ್ಟಯದ ಒಂದೊಂದು ಅಂಗವನ್ನು ಕುರಿತು ಒಂದೊಂದು ಗ್ರಂಥವನ್ನು ಬರೆದಿರುವನು. ಇದೇರೀತಿ ನಾಗವರ್ಮನು ಭಾಷಾಭೂಷಣ, ಅಭಿಧಾನವಸ್ತುಕೋಶ, ಕಾವ್ಯಾವಲೋಕನ, ಛಂದೋವಿಚಿತಿ ಎಂಬ ಗ್ರಂಥಗಳನ್ನು ಬರೆದಿರುವನು. ಭಾಷಾಭೂಷಣ ಸೂತ್ರ ವೃತ್ತಿಗಳಿಂದ ಕೂಡಿದ ಸಂಸ್ಕೃತದಲ್ಲಿರುವ ಕನ್ನಡ ವ್ಯಾಕರಣ ಗ್ರಂಥ. ಕಾವ್ಯಾವಲೋಕನದಲ್ಲಿ ಅಲಂಕಾರ ಶಾಸ್ತ್ರಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳ ವಿವೇಚನೆ ಇದೆ. ವಸ್ತುಕೋಶವು ಕನ್ನಡದಲ್ಲಿ ಬಳಸುವ ಸಂಸ್ಕೃತ ಶಬ್ದಗಳಿಗೆ ಅರ್ಥ ಹೇಳುವ ಪದ್ಯರೂಪಿ ನಿಘಂಟು. ಇದನ್ನು ವರರುಚಿ, ಭಾಗುರಿ, ಹಲಾಯುಧ, ಶಾಶ್ವತ, ಅಮರಸಿಂಹ, ಮೊದಲಾದವರ ಕೋಶಗಳ ಆಧಾರದಿಂದ ಬರೆದಿರುವುದಾಗಿ ಆತನೇ ಹೇಳಿರುವನು. ಇದಲ್ಲದೆ ಹಲಾಯುಧನ ಅಭಿಧಾನ ರತ್ನಮಾಲೆ ಎಂಬ ಕೋಶಕ್ಕೆ

---

* ಪ್ರಬುದ್ಧಕರ್ಣಾಟಕ, ಸಂ. ೩೦, ಸಂ. ೪.

ಟೀಕೆಯನ್ನು ಬರೆದಿರುವನು. ಇದರಲ್ಲಿ ಸಂಸ್ಕೃತ ಅಥವಾ ಸಮಸಂಸ್ಕೃತ ಶಬ್ದಗಳಿಗೆ ಸಮಾನಾರ್ಥ ಕನ್ನಡ ಪದಗಳಿವೆ.

ಛಂದಸ್ಸನ್ನು ಕುರಿತು ಛಂದೋವಿಚಿತಿ ಎಂಬ ಗ್ರಂಥವನ್ನು ಬರೆದಿರುವುದಾಗಿ—

> ಛಂದೋವಿಚಿತಿಯಲಂಕೃತಿ
> ಸಂದಭಿದಾನ......ಕೋಶಮೆಂಬಿವು ವಾಕ್ಶ್ರೀ।
> ಸುಂದರಿಗೆ ರತ್ನ ಮಂಡನ
> ದಂದದೊಳಿರ್ದಪುವು ನಾಗವರ್ಮನ ಕೃತಿಗಳ್ ॥

ಎಂಬ ಕಾವ್ಯಾವಲೋಕನದ ಕೊನೆಯ ಪದ್ಯದಿಂದ ಕಂಡುಬರುವದು. ಆದರೆ ಇದು ದೊರೆತಿಲ್ಲ. ಆದಿ ಅಥವಾ ಮೊದಲನೆಯ ನಾಗವರ್ಮನ (ಕ್ರಿ.ಶ. ೯೯೦) ಛಂದೋಬುಧಿಯಲ್ಲಿ ಈ ಛಂದೋವಿಚಿತಿಯ ಕೆಲವು ಭಾಗಗಳು ಸೇರಿರಬಹುದೆಂದು ಈತನ ಅಭಿಧಾನ ವಸ್ತುಕೋಶದ ಸಂಪಾದಕರು ಸೂಚಿಸಿರುವರು.[1] ಇದಕ್ಕೆ ಅವರಿತ್ತ ಕಾರಣಗಳು ಇಂತಿವೆ—

(೧) ಕಾವ್ಯಕಲಾನಿಧಿಯ ಛಂದೋಂಬುಧಿಯಲ್ಲಿ ದೊರೆಯುವ ಮಂಗಲ ಪದ್ಯಗಳು, ಕವಿಯ ವಿಷಯವನ್ನು ತಿಳಿಸುವ ಕೆಲವು ಪದ್ಯಗಳು ಕಿಟೆಲ್ ಸಂಪಾದಿತ ಛಂದೋಬುಧಿಯಲ್ಲಿಲ್ಲ.

(೨) ಆಧುನಿಕ ಸೀಸ, ಸಾಂಗತ್ಯ ಮುಂತಾದ ಎಷ್ಟೋ ಪದ್ಯಗಳು ಛಂದೋಂಬುಧಿಯ ಈ ಕಾವ್ಯಕಲಾನಿಧಿಯ ಆವೃತ್ತಿಯಲ್ಲಿ ಸೇರಿವೆ.

(೩) ಒಂದೇ ಲಕ್ಷಣ ತಿಳಿಸುವ ಎರಡು ಮೂರು ಪದ್ಯಗಳು ಹಲವು ಪ್ರತಿಗಳಲ್ಲಿ ಒಂದೇ ಸ್ಥಾನದಲ್ಲಿ ದೊರೆಯುತ್ತವೆ.

(೪) ಕೆಲವು ಹಸ್ತಪ್ರತಿಗಳ ಪ್ರಕರಣಾಂತ ಗದ್ಯದಲ್ಲಿ 'ಭಗವದರ್ಹತ್ಪರಮೇಶ್ವರ" ಬೇರೆ ಕೆಲವು ಕಡೆ 'ಭಗವದ್ಭವಾನೀವಲ್ಲಭ' ಹೀಗೆ ಬೇರೆ ಬೇರೆ ಒಕ್ಕಣಿಕೆಗಳಿವೆ.

(೫) ಅಭಿಧಾನವಸ್ತುಕೋಶದ ಕೊನೆಯಲ್ಲಿರುವ 'ಅತಿ ಬಾಣಂ.... ವಾಗ್ಗುಂಫನದೊಳ್ ನಾಕಿಗಂ' ಪದ್ಯ ಕಾವ್ಯಕಲಾನಿಧಿಯ ಛಂದೋಂಬುಧಿಯಲ್ಲಿದೆ.

ಇವುಗಳಲ್ಲಿ ಮೊದಲನೆಯ ಕಾರಣ ಕೇವಲ ಆದಿನಾಗವರ್ಮನಿಗೆ ಸಂಬಂಧಿಸಿರುವದರಿಂದ ಆ ಪದ್ಯಗಳ ಚರ್ಚೆ ಅಪ್ರಸ್ತುತ. ಎರಡನೆಯ ಕಾರಣವು, ಸೀಸ ಸಾಂಗತ್ಯಾದಿ ಅರ್ವಾಚೀನವೆಂದು ಬಗೆಯಲಾದ ಛಂದೋಬಂಧಗಳು ಇಲ್ಲಿ ಸೇರಿಸಿಕೊಂಡಿರುವಂತೆ–ಇಮ್ಮಡಿ ನಾಗವರ್ಮನ ಛಂದೋವಿಚಿತಿಯ ಪ್ರಾಚೀನ ಪದ್ಯಗಳೂ ಸೇರಿರಬಹುದೆಂಬುದಕ್ಕೆ ಸಂವಾದಿಯಾಗಿದೆ. ಆದ್ದರಿಂದ ಇದರ ಚರ್ಚೆಯಾದರೂ ಅನಾವಶ್ಯಕ.

ಮೂರನೆಯ ಕಾರಣವು ವಿಚಾರಾರ್ಹವಿದೆ. ಆದರೆ ಒಂದೇ ಸ್ಥಾನದಲ್ಲಿ

---

1. ಅ. ವ. ಕೋ. ಮುನ್ನುಡಿ, ಪು. ೧೨.

ದೊರೆಯುವ ಸಮಾನ ಲಕ್ಷಣದ ಇಂಥ ಪದ್ಯಗಳಲ್ಲಿ ಮೂಲದಿಂದ ಭಿನ್ನವಿರುವ ಪದ್ಯ ಪಾಠಾಂತರವೊ, ಅನ್ಯಕೃತವೊ? ಅನ್ಯಕೃತವಿದ್ದರೆ ಇಮ್ಮಡಿ ನಾಗವರ್ಮನಂಥ ಕವಿಯ ಸ್ಥಾನ ಮಾನಗಳಿಗೆ ಶೋಭಿಸುವಂತಹದೊ—ಇವೇ ಮೊದಲಾದ ಅಂಶ ಗಳನ್ನು ಪರಿಶೀಲಿಸಿ ಫಲಿತಾಂಶದೊಡನೆ ಈ ಕಾರಣವನ್ನು ಮುಂದೊಡ್ಡಿದ್ದರೆ ಇದಕ್ಕೆ ಬೆಲೆ ಬರುತ್ತಿತ್ತು. ಹೀಗೆ ಮಾಡುವದು ಸಹ ಅಷ್ಟೊಂದು ತೊಡಕಿನದಲ್ಲ. ಪ್ರತಿ ಯೊಬ್ಬ ಲಾಕ್ಷಣಿಕನು ತನ್ನದೊಂದು ತಂತ್ರವನ್ನು ನಿರೂಪಿಸಿಕೊಂಡಿರುತ್ತಾನೆ, ಮತ್ತು ಆ ತಂತ್ರ ಯಾವುದೆಂಬುದನ್ನು ಗ್ರಂಥಾರಂಭದಲ್ಲಿ ವಿವರಿಸಿರುತ್ತಾನೆ. ಆದಿನಾಗ ವರ್ಮನು ಛಂದಸ್ಸನ್ನು ತನ್ನ ಸತಿಗೆ ಬಣ್ಣಿಸಿರುವನು, 'ವಿಧು-ಬಿಂಬಾನನೆ, ಕೆಳದಿ, ವನಜಮುಖಿ, ಮೃಗನಯನೆ, ವಿಲೋಲ-ಷಟ್ಪದ-ಸಂನಿಭ-ಕುಂತಳೆ' ಎಂದು ಮುಂತಾಗಿ ಅಡಿಗಡಿಗೆ ಅವಳನ್ನು ಸಂಬೋಧಿಸಿರುವನು. 'ಪಿಂಗಳನಿನವನಿಯೊಳ್ ಪರಪಿದೊಡಾ ಛಂದೋಂಬು ರಾಶಿಯೊಳ್‌ಮಿಗೆ ತಂದದ ನಿಜ ಸತಿಗೆ ನಾಗವರ್ಮಂ ಪೇಳ್ದಂ' ಎಂದು ಗ್ರಂಥಾರಂಭದಲ್ಲಿ ಹೇಳಿ, ಪಿಂಗಲನಂತೆ ಸೂತ್ರರೂಪದಲ್ಲಿ ವಿವರಿಸದೆ, ಲಕ್ಷಣ ಪದ್ಯವನ್ನೇ ಲಕ್ಷ್ಯವಾಗಿ ಹೇಳಿರುವನು. ತನ್ನ ತಂತ್ರಕ್ಕೆ ಅನುಕೂಲವಾಗು ವಂತೆ ಗಣಗಳ ನಿರ್ದೇಶನಕ್ಕೆ ಪಿಂಗಲನು ಕೊಟ್ಟ ಮೂಲ ಹೆಸರು, ಅಂದರೆ, ಮ-ಯ-ರ-ಸ-ತ, ಇತ್ಯಾದಿ ಅಥವಾ ಭೂಮಿ, ಜಲ, ಅಗ್ನಿ, ವಾಯು, ಆಕಾಶ, ಇತ್ಯಾದಿ ಅವುಗಳ ಪರ್ಯಾಯ ನಾಮಗಳನ್ನು ಬಳಸಿರುವನು. ಮಾತ್ರಾಬಂಧಗಳಿಗೆ ಪಿಂಗಲನು ಚತುರ್ಮಾತ್ರಾ ಗಣಗಳನ್ನು ಬಳಸಿರುವನು. ಇವುಗಳಲ್ಲಿ ಐದು ಭೇದ ಗಳಾವುವು. ನಾಗವರ್ಮನು ಇವುಗಳಿಗೆ ಗಿರಿಶಂ, ಧೂರ್ಜಟಿ, ಶರ್ವಂ, ಪುರಾರಿ, ಶಶಿಪುರ ಎಂಬ ಪ್ರತ್ಯೇಕ ಹೆಸರುಗಳನ್ನು ಕೊಟ್ಟಿರುವನು. ಕರ್ಣಾಟಕ ವಿಷಯ ಜಾತಿಗಳ ಗಣಗಳನ್ನು ಬ್ರಹ್ಮ, ವಿಷ್ಣು, ರುದ್ರ, ಎಂದು ಹೆಸರಿಸಿರುವನು.

ಉದಾಹರಣೆಗಾಗಿ, ಛಂದೋಂಬುಧಿಯಲ್ಲಿ, ಸುಪರಿಚಿತವಿರುವ ಶಾರ್ದೂಲ ವಿಕ್ರೀಡಿತದ ಲಕ್ಷಣ ಹೀಗಿದೆ—

ಉರ್ವೀ-ಮಾರುತ-ಭಾಸ್ಕರಾನಿಲ-ವಿಯದ್ವಂದ್ವಂ ಪದಾಂತಂಗಳೊಳ್
ಶರ್ವಂ ವಿಶ್ರಮಣಂ ದಿನೇಶರೆಡೆಯೊಳ್ ನಿಲ್ಕುಂ ಮನಂಗೊಳ್ವಿನಂ।
ನಿರ್ವ್ಯಾಜಂ ಭುವನ-ತ್ರಯಂಗಳೊಳಗೀ ವೃತ್ತಂ ಪ್ರಸಿದ್ಧಂ ಕರಂ
ಚಾರ್ವಂಭೋರುಹಪತ್ರನೇತ್ರೆ, ಪೆಸರಿಂ ಶಾರ್ದೂಲ ವಿಕ್ರೀಡಿತಂ॥ 1

ಪಿಂಗಲನ ಪರಿಭಾಷೆಯಲ್ಲಿ ಈ ವೃತ್ತದ ಪ್ರತಿಪಾದದಲ್ಲಿ ಮ-ಸ-ಜ-ಸ-ತ-ತ- ಎಂಬ ಆರು ತ್ರಿಕಗಳು ಅಂದರೆ ಮೂರು ಅಕ್ಷರಗಳ ಗಣಗಳು ಮತ್ತು ಕೊನೆಗೆ ಒಂದು ಗುರು ಇದ್ದು, ೧೨ನೆಯ ಅಕ್ಷರಕ್ಕೆ ಯತಿ ಇರುತ್ತದೆ- ನಾಗವರ್ಮನು ಮಗಣಕ್ಕೆ ಉರ್ವೀ, ಸಗಣಕ್ಕೆ ಮಾರುತ, ಜಗಣಕ್ಕೆ ಭಾಸ್ಕರ, ಪುನಃ ಸಗಣಕ್ಕೆ ಅನಿಲ, ಎರಡು

1. ಛಂ., ಕಿಟೆಲ್, ಪದ್ಯ-೨೦೦.

ತಗಣಗಳಿಗೆ ವಿಯದ್ವಂದ್ವ (ಆಕಾಶ) ಮತ್ತು ಕೊನೆಯ ಗುರುವಿಗೆ ಶರ್ವ (ಈಶ್ವರ)- ಈ ಪರ್ಯಾಯ ನಾಮಗಳನ್ನಿತ್ತು ತನ್ನ ಲಕ್ಷ್ಯ ಲಕ್ಷಣ ಪದ್ಯವನ್ನು ರಚಿಸಿರುವನು. 'ವಿಶ್ರಮಣಂ ದಿನೇಶರೆಡೆಯೊಳ್‌ನಿಲ್ಕುಂ' ಎಂದು ೧೨ನೇ ಅಕ್ಷರಕ್ಕೆ ಯತಿಯನ್ನು ಹೇಳಿರುವನು. ಜೊತೆಗೆ 'ಅಂಭೋರುಹಪತ್ರನೇತ್ರೇ' ಎಂದು ಸತಿಯನ್ನು ಸಂಬೋಧಿಸಿರುವನಲ್ಲದೆ, 'ಶಾರ್ದೂಲವಿಕ್ರೀಡಿತಂ' ಎಂದು ವೃತ್ತದ ಹೆಸರನ್ನು ಸೂಚಿಸಿರುವನು. ಈ ರೀತಿ ಆತನ ಲಕ್ಷ್ಯ-ಲಕ್ಷಣ ಪದ್ಯಗಳಿಗೆ ಒಂದು ವಿಶಿಷ್ಟ ರೂಪ ಬಂದಿರುವುದರಿಂದ ಅನ್ಯಕೃತ ಪದ್ಯವಿದ್ದರೆ-ಅದನ್ನು ತಟ್ಟನೆ ಗುರುತಿಸಬಹುದಾಗಿದೆ. ಇದರಂತೆಯೇ ರಚಿತವಾಗಿದ್ದರೆ ಅದು-ಪಾಠಾಂತರವೊ ಅನುಕರಣೆಯೊ ಆಗುವದು. ಇಮ್ಮಡಿ ನಾಗವರ್ಮ ಹೀಗೆಂದಿಗೂ ಮಾಡಲಾರ. ಒಬ್ಬ ಲಾಕ್ಷಣಿಕ ಇನ್ನೊಬ್ಬನನ್ನು ಅನುಕರಿಸುವುದಿಲ್ಲವೆಂಬುದನ್ನು ಈ ಸಂದರ್ಭದಲ್ಲಿ ನೆನೆಯಬೇಕು. ಅನೇಕ ಲಾಕ್ಷಣಿಕರು ಪಿಂಗಲನ ಪರಿಭಾಷೆಯನ್ನೇ ಸ್ವೀಕರಿಸಿದ್ದರೂ ನಿರೂಪಣೆಯಲ್ಲಿ ವ್ಯತ್ಯಾಸ ಕಂಡು ಬರುವದು. ಉದಾಹರಣೆಗಾಗಿ ಗುಣಚಂದ್ರನೆಂಬ (ಕ್ರಿ.ವ. ೧೬೫೦) ಕನ್ನಡ ಲಾಕ್ಷಣಿಕನು ಇದೇ ಶಾರ್ದೂಲ ವಿಕ್ರೀಡಿತವನ್ನು ಲಕ್ಷಿಸಿದ ಬಗೆಯನ್ನು ನೋಡಿರಿ—

ಸೂರ್ಯಾಶ್ವಂ ಮಸಜಂ ತತಂ ಗುರುಯುತಂ ಶಾರ್ದೂಲ ವಿಕ್ರೀಡಿತಂ ||[1]

ಇಲ್ಲಿ ಸಹ ಪಿಂಗಲನ ಪರಿಭಾಷೆಯೇ ಇದೆ. ಲಕ್ಷಣ; ಲಕ್ಷ್ಯ, ಯತಿವೃತ್ತದ ಹೆಸರು ನಾಲ್ಕೂ ಇದ್ದು ಸೂತ್ರದ ಮಾದರಿಯಲ್ಲಿ ನಿರೂಪಿಸಲ್ಪಟ್ಟಿವೆ. ಛಂದೋಂಬುಧಿಯ ನಿರೂಪಣೆಗೂ ಇದಕ್ಕೂ ಇರುವ ವ್ಯತ್ಯಾಸ ಸೂರ್ಯಪ್ರಕಾಶದಷ್ಟು ಸ್ಪಷ್ಟವಿದೆ. ಛಂದೋಂಬುಧಿಯಲ್ಲಿ ಒಂದೊಮ್ಮೆ ಇಮ್ಮಡಿ ನಾಗವರ್ಮನ ಪದ್ಯಗಳು ಬೆರೆತುಕೊಂಡಿದ್ದರೆ ಅವಾದರೂ ಹೀಗೆಯೆ ಒಡೆದು ಕಾಣುತ್ತಿದ್ದವೆಂಬಲ್ಲಿ ಸಂದೇಹವಿಲ್ಲ.

ನಾಲ್ಕನೆಯ ಕಾರಣ. ಆದಿನಾಗವರ್ಮನು ಜೈನನಲ್ಲವೆಂದು ಈಗ ಸಾಮಾನ್ಯ ಗ್ರಹಿಕೆ ಇದೆ. ಇದಕ್ಕಿರುವ ಆಧಾರಗಳಲ್ಲಿ 'ಭಗವದ್ಭವಾನೀವಲ್ಲಭ' ಎಂಬ ಪ್ರಕರಣಾಂತ ಗದ್ಯವೂ ಒಂದು. ಇಮ್ಮಡಿ ನಾಗವರ್ಮ ಜೈನ. ಛಂದೋಂಬುಧಿಯ ಕೆಲವು ಪ್ರತಿಗಳಲ್ಲಿ 'ಭಗವದರ್ಹತ್ಪರಮೇಶ್ವರ' ಎಂದಿರುವುದರಿಂದ, ಇದು ಮತ್ತು ಇದರೊಂದಿಗೆ ಕೆಲವು ಪದ್ಯ ಮೊದಲಾದುವು ಆತನ ಛಂದೋವಿಚಿತಿಯಿಂದ ಇಲ್ಲಿಗೆ ಬಂದಿರಬೇಕೆಂದು ಈ ಕಾರಣದ ಹಿನ್ನೆಲೆ ಇರುವಂತೆ ತೋರುತ್ತದೆ. ಈ ಸಂದರ್ಭದಲ್ಲಿ ರೈಸ್ ಸಂಪಾದಿಸಿದ ಇಮ್ಮಡಿ ನಾಗವರ್ಮನ ಭಾಷಾ ಭೂಷಣದಲ್ಲಿಯ ಆವರ ಮಾತುಗಳನ್ನು ಗಮನಿಸ ಬೇಕು. ಸಂಪಾದನೆಗಾಗಿ ಕಲೆಹಾಕಿದ ಹಸ್ತಪ್ರತಿಗಳಲ್ಲಿ ಪ್ರಯೋಗವೆಂದುಕೊಟ್ಟಿರುವ ಉದಾಹರಣೆಗಳಲ್ಲಿ ಮತೀಯ ಭಾವನೆಯಿಂದ ಉಂಟಾದ ಬದಲಾವಣೆಗಳನ್ನು ಅವರು ಎತ್ತಿತೋರಿಸಿರುವರು. ಒಂದರಲ್ಲಿ 'ಶ್ರೀ ಯಧೀಶ್ವರಂ, ಶ್ರೀ ಗಧೀಶ್ವರಂ' ಎಂದಿದ್ದರೆ,

---

1. ಗು. ಛಂ. ಸಾರ, ೩-೧೯-೨.

ಇನ್ನೊಂದರಲ್ಲಿ ಅದೇ ಸ್ಥಳದಲ್ಲಿ 'ಶಾಂತಿನಾಥಂ'[1] ಎಂದಿದೆ. 'ಎಮಗಿಷ್ಟಾರ್ಥವಮಂ ಮಾಡುಗೆ, ಜಿನಂ ನಮಗಿಷ್ಟಾರ್ಥ ಮಾಳ್ಕೆ' ಎಂದಿರುವಲ್ಲಿ 'ದೇವರಿಷ್ಟಾರ್ಥಮನ್ ಮಾಡುಗೆ, ಜನಪತಿ ನಿಮಗಿಷ್ಟಾರ್ಥವಮಂ ಮಾಳ್ಕೆ' ಎಂದಿದೆ.[1] ಕಿಟೆಲ್‌ರಿಗೆ ದೊರೆತ ಛಂದೋಂಬುಧಿಯ ಹಸ್ತಪ್ರತಿಗಳಲ್ಲಿ ಒಂದು 'ಶ್ರೀವೀತರಾಗಾಯನಮಃ' ಎಂಬ ಒಕ್ಕಣಿಕೆಯಿಂದ ಪ್ರಾರಂಭಿಸಲ್ಪಟ್ಟಿತ್ತಂತೆ. ಇದರಲ್ಲಿ ಸಹ ಲಕ್ಷಣ-ಲಕ್ಷ್ಯಗಳನ್ನು ಒಂದೇ ಪದ್ಯದಲ್ಲಿ ನಿರ್ದೇಶಿಸಿದ್ದರೂ, ಋಷಭನಿಂದ ಮಹಾವೀರನವರೆಗೆ ೨೪ ತೀರ್ಥಂಕರರ ಸ್ತುತಿ ಇದ್ದಿತಂತೆ.[2] ಈ ದೃಷ್ಟಿಯಿಂದ 'ಭಗವದರ್ಹತ್ಪರಮೇಶ್ವರ' ಪ್ರಕರಣಾಂತ-ಗದ್ಯ ಇಮ್ಮಡಿ ನಾಗವರ್ಮನಿಗೆ ಅನ್ವಯಿಸುವುದೊ ಅಥವಾ ಯಾವನೊಬ್ಬ ಸಾಹಿತಿ ಇಲ್ಲವೆ ಸಂಪ್ರತಿಕಾರ ಮತಾಭಿಮಾನದಿಂದ ಇದನ್ನು ಆದಿನಾಗವರ್ಮನಿಗೆ ಅನ್ವಯಿಸಿರುವನೊ ಎಂಬುದನ್ನು ನಿರ್ಧರಿಸುವುದು ದುರಾಪಾಸ್ತವಿದೆ.

ಹಾಗೆ ನೋಡಿದರೆ ಸದ್ಯದ ಸಂಶೋಧನೆಯ ಘಟ್ಟದಲ್ಲಿ ಆದಿನಾಗವರ್ಮನ ಮತವನ್ನು ಇದಮಿತ್ಥಂ ಎಂದು ನಿರ್ಧರಿಸುವುದು ಅಸಾಧ್ಯವೆಂದೇ ಹೇಳಬೇಕಾಗುವದು. ರೈಸ್, ಈತ ಜೈನನಿದ್ದರೂ ಶೈವಮತ ಪ್ರಭಾವಿತನೆಂದಿರುವರು.[3] ಕಿಟೆಲ್, ಶೈವನೆಂದು ತೋರುತ್ತಿದ್ದರೂ ಜೈನನೆಂಬುದು ಖಚಿತ ಎಂದಿರುವರು.[4] ಕವಿಚರಿತೆಕಾರರು ತಟಸ್ಥರಿರುವರು.[5] ಗೋವಿಂದಪೈ ವೈದಿಕ ಬ್ರಾಹ್ಮಣನೆಂದು ತಿರ್ಮಾನಿಸಿರುವರು,[6] ಮುಗಳಿ ಇದನ್ನೇ ಸ್ವೀಕರಿಸಿದ್ದರೂ, ಈ ಕಾಲದ ಕವಿಗಳಲ್ಲಿ ಜೈನ-ಬ್ರಾಹ್ಮಣ, ಬ್ರಾಹ್ಮಣ-ಕ್ಷತ್ರಿಯ ಮತಗಳ ಸಮ್ಮಿಲನ ಕಂಡುಬರುವದೆಂದಿರುವರು.[7] ಆದರೆ ನಾಗವರ್ಮನೆಂಬ ಹೆಸರೇ ಆತನು ಬ್ರಾಹ್ಮಣನಲ್ಲವೆಂದು ಸೂಚಿಸುತ್ತದೆ. 'ಶರ್ಮ' ಬ್ರಾಹ್ಮಣಸೂಚಕ, 'ವರ್ಮ' ಕ್ಷತ್ರಿಯ ಸೂಚಕ ಅಭಿಧಾನಗಳು.[8] ಸ್ವತಃ ನಾಗವರ್ಮನೇ ತನ್ನನ್ನು ನಾಕಿ, ನಾಕಿಗ, ಎಂದು ಕರೆದುಕೊಂಡಿರುವನು. ಗೋವಿಂದಪೈ ಇವು 'ನಾಗ'ದ ಸಂಕ್ಷಿಪ್ತ. ರೂಪಗಳೆಂದಿರುವರು.[9] ಆದರೆ ನಾಕವೆಂದರೆ ಸ್ವರ್ಗ. ಇದು ಅಪ್ರಸಿದ್ಧವೂ ಅಲ್ಲ. ಆತ ಏವ 'ನಾಕಿಗ' ಎಂದರೆ 'ಸ್ವರ್ಗಾಧಿಪ-ಇಂದ್ರ.' ಛಂದಃಶಾಸ್ತ್ರದಲ್ಲಿ 'ನ' ಗಣಕ್ಕೆ

---

1. ಕ. ಭಾ. ಭೂ. ರೈಸ್, ಪು. ೪ ಮುನ್ನುಡಿ; ಸೂತ್ರ ೯೨, ಸೂತ್ರ ೨೨೧, ಅನುಬಂಧ ೧.
2. ಛಂ. ಕಿಟೆಲ್, ಮುನ್ನುಡಿ, ಪು. ೧.
3. ಕ. ಭಾ. ಭೂ. ರೈಸ್, ಪು. ೧, ಮುನ್ನುಡಿ.
4. ಛಂ. ಕಿಟೆಲ್ ಮುನ್ನುಡಿ, ಪು. ೧೨.
5. ಕ. ಚ. ಸಂ. ೧, ಪು. ೫೪.
6. ಕ. ಸಾ. ಪ., ಸಂ. ೨೦, ಪು. ೪೬.
7. ಕ. ಸಾ. ಚ, ಪು. ೮೨, ೧೨೧.
8. ಆಪ್ಟೇ, ಸಂಸ್ಕೃತ ನಿಘಂಟು.
9. ಕ.ಸಾ. ಪ.,ಸಂ. ೨೦, ಪು. ೨೬, ಅಡಿ ಟಿಪ್ಪಣಿ.

ಸ್ವರ್ಗ, ಸುರಪ, ಇಂದ್ರ ಮೊದಲಾದ ಸಮಾನಾರ್ಥಕ ಪರ್ಯಾಯ ನಾಮಗಳಿವೆ, 'ಪಣವಕ' ವೃತ್ತದ ಲಕ್ಷಣ-ಲಕ್ಷ್ಯಕ್ಕಾಗಿ 'ಭೂ-ನಾಕಾಂತದೊಳಿರೆ ತೋಯೇಶಂ' (ಮ-ನ-ಯ-ಗ) ಎಂದು ನಾಗವರ್ಮನೇ ನ-ಗಣಕ್ಕೆ ಪರ್ಯಾಯದಿಂದ 'ನಾಕ' ಎಂದಿರುವನು.[1] ಈ ದೃಷ್ಟಿಯಿಂದ ಮೂಲದಲ್ಲಿ 'ನಾಕವರ್ಮ'ನೆಂದಿದ್ದು ರೂಢಿಯಲ್ಲಿ 'ನಾಗವರ್ಮ' ಆಗಿರಬಹುದಾಗಿದೆ. ಕ-ಕಾರಕ್ಕೆ ಗ-ಕಾರಾದೇಶ ಸಹಜ ಮತ್ತು ಶಾಸ್ತ್ರಸಮ್ಮತವಿದೆ. ವರ್ಮ, ಇಂದ್ರ, ಚಂದ್ರ, ಜೈನರ ಅಥವಾ ಕ್ಷತ್ರಿಯರ ಹೆಸರುಗಳಿಗೆ ಹೊಂದಿಕೊಂಡು ಬರುವವು. ಉದಾಹರಣೆ-ಗುಣವರ್ಮ, ನಾಗಚಂದ್ರ, ಇಂದ್ರ (ರಾಷ್ಟ್ರಕೂಟ ಅರಸು).

ವಸ್ತುಕೋಶದ ಕೊನೆಯಲ್ಲಿರುವ 'ಅತಿಬಾಣಂ..ವಾಗ್ಗುಂಫನದೊಳ್ ನಾಕಿಗಂ' ಪದ್ಯ ಛಂದೋಂಬುಧಿಯಲ್ಲಿ ದೊರೆಯುವದೆಂಬ ಐದನೆಯ ಕಾರಣದ ಹಾಡಾದರೂ ಇಷ್ಟೇ. ಬಾಣ-ಮಯೂರ-ಮಾಘ-ಗುಣಾಢ್ಯ-ದಂಡಿ-ಧನಂಜಯರೆಂಬ ಆರು ಸಂಸ್ಕೃತ ಕವಿಗಳಿಗಿಂತ ನಾಕಿಗನು, ಅಂದರೆ ನಾಗವರ್ಮನು ಮೇಲು, ಎಂಬುದು ಈ ಪದ್ಯದ ಅರ್ಥ. ಇದರ ಎಲ್ಲ ಸಾಧಕ ಬಾಧಕ ಆಧಾರಗಳನ್ನು ಹಿಂಜಿನೋಡಿ 'ಈ ಪದ್ಯ ಆದಿನಾಗವರ್ಮನದೊ ಅಥವಾ ಇಮ್ಮಡಿ ನಾಗವರ್ಮನದೊ ಎಂದು ನಿರ್ಧರಿಸ ಲಳವಲ್ಲ' ಎಂಬ ತೀರ್ಮಾನಕ್ಕೆ ಬಂದಿರುವರು ಗೋವಿಂದಪೈ[2]. ಹಲವು ಕಾವ್ಯಗಳಲ್ಲಿ ಬರುವ ಕವಿ ಪ್ರಶಂಸಾ ಪದ್ಯಗಳನ್ನು ಅವರೇ ಬರೆದಿರುವರೆಂದು ಹೇಳುವಂತಿಲ್ಲ. ಸಾಮಾನ್ಯವಾಗಿ ಔಚಿತ್ಯದ ಎಲ್ಲೆಯಲ್ಲಿರುವ ಇಂಥ ಪದ್ಯಗಳನ್ನು ಆ ಕವಿಯವೆಂದು ಭಾವಿಸಬಹುದು. ಆದರೆ ಅವಾಸ್ತವ ಪ್ರತಿಷ್ಠಾಪರ ಪದ್ಯಗಳನ್ನು ಆಯಾಕವಿಗಳ ಅಭಿಮಾನಿಗಳು ಹಿಂದಿನಿಂದ ಸೇರಿಸಿರಬಹುದಾಗಿದೆ.[3] 'ಅತಿಬಾಣಂ' ಪದ್ಯದಲ್ಲಿ ನಾಗವರ್ಮನನನ್ನು 'ನಾಕಿಗ'ನೆಂದು ನಿರ್ದೇಶಿಸಲಾಗಿದೆ. ಈ ಹೆಸರು ಆದಿ ನಾಗ ವರ್ಮನಿಗೆ ಹೆಚ್ಚು ಹೊಂದಿಕೊಂಡಿದೆ. ಬಾಣ, ಮಯೂರಾದಿ ಕವಿಗಳನ್ನು ಹಿಮ್ಮೆಟ್ಟಿಸುವ ಕೃತಿಗಳನ್ನು ರಚಿಸಿರದಿದ್ದರೂ ಬಾಣನ ಕಾದಂಬರಿಯನ್ನು ಕನ್ನಡದಲ್ಲಿ ಪರಿವರ್ತಿಸಿದ ಕೀರ್ತಿ ಇವನಿಗಿದೆ. ಇಮ್ಮಡಿ ನಾಗವರ್ಮನ ಪದರಿನಲ್ಲಿ ಇಂಥ ಕೃತಿಗಳಾವೂ ಇಲ್ಲ. ಅವನು ಶಾಸ್ತ್ರಕವಿಯೆಂದೇ ಪ್ರಸಿದ್ಧನಿರುವನು. ಆದ್ದರಿಂದ ಆದಿನಾಗ ವರ್ಮನ ಅಭಿಮಾನಿಯೊಬ್ಬನು ಈ ಪದ್ಯವನ್ನು ಛಂದೋಂಬುಧಿಯಲ್ಲಿ ಸೇರಿಸಿರಬೇಕೆಂಬುದು ಹೆಚ್ಚು ಸಮಂಜಸವೆನಿಸುವುದು. ಹೀಗಿದ್ದರೆ ಇದು ಛಂದೋಂಬುಧಿಯಿಂದ ವಸ್ತುಕೋಶದಲ್ಲಿ ಹೋಗಿರಬಹುದಲ್ಲದೆ, ಅಲ್ಲಿಂದ ಇದರಲ್ಲಿ ಬಂದಿರಲಾರದು.

---

1. ಛಂ. ಕಿಟೆಲ್, ಪದ್ಯ ೧೫೬.

2. ಕ. ಸಾ. ಪ., ಸಂ. ೨೦, ಪು. ೧೫೩-೧೫೬.

3. ಕೆ. ವಿ. ರಾಘವಾಚಾರ್, ಜನ್ನನ ಯಶೋಧರ ಚರಿತೆ, ಮುನ್ನುಡಿ ಪು. ೮-೯ರ ಟಿಪ್ಪಣಿ.

ಕನ್ನಡ ಛಂದಸ್ಸಿನ ಕರ್ತೃ ಒಬ್ಬನೇ—ಆತ ಆದಿ ನಾಗವರ್ಮ, ಎಂಬ ಭಾವನೆ ಪ್ರಾಚೀನ ಕಾಲದಿಂದ ಬೆಳೆದು ಬಂದಿರಬೇಕು. ಕ್ರಿ.ಶ. ೧೪೦೦ರಲ್ಲಿ ಆಗಿಹೋದ ಈಶ್ವರ ಕವಿಯ 'ಕವಿ ಜಿಹ್ವಾಬಂಧನ'ದ ಆಕರವೆಂದಿಟ್ಟುಕೊಂಡ ಒಂದು ಹಸ್ತಪ್ರತಿಯಲ್ಲಿ 'ಕವಿ ಜಿಹ್ವಾ ಬಂಧನವು—ಕವಿ ಫಣಿವರ್ಮನಿಂದ ರಚಿಸಲ್ಪಟ್ಟದ್ದು-ಈ ಗ್ರಂಥಕ್ಕೆ ನಾಗವರ್ಮ ಛಂದಸ್ಸು ಎಂದೂ ಹೇಳುತ್ತಾರೆ' ಎಂದು ಬರೆದಿರುವುದನ್ನು ಈ ಗ್ರಂಥವನ್ನು ಸಂಪಾದಿಸಿದ ಪಂಚಮುಖಿ ಉಲ್ಲೇಖಿಸಿರುವರು.[1] ಈ ರೀತಿ ಆದಿ ನಾಗವರ್ಮನ ಛಂದೋಂಬುಧಿಯಲ್ಲಿ ಸ್ವಕೃತ, ಅನ್ಯಕೃತ, ಪ್ರಾಚೀನ, ಅರ್ವಾಚೀನ, ಮೂಲ, ಪಾಠಾಂತರ, ಜೈನ, ವೈದಿಕ ಪದ್ಯಗಳೂ ವಿವರಗಳೂ ದೊರೆಯುತ್ತವೆ. ಆದ್ದರಿಂದ ನಿರ್ವಿವಾದವಾಗಿ ಆತನವೆಂಬ ಪದ್ಯ ಮತ್ತು ಇತರ ವಿವರಗಳನ್ನು ಬಿಟ್ಟು ಉಳಿದವುಗಳನ್ನು ತಳಸೋಸಿ ನೋಡದೆ ಆಧಾರವೆಂದು ಭಾವಿಸುವಂತಿಲ್ಲ.

ವಸ್ತುಕೋಶದ ಸಂಪಾದಕರ ಈ ಊಹೆ ಸಾಧಾರವಿರಲಿ ನಿರಾಧಾರವಿರಲಿ, ಇಮ್ಮಡಿ ನಾಗವರ್ಮನ ಛಂದೋವಿಚಿತಿ ಕನ್ನಡದಲ್ಲಿದ್ದರೆ ಮಾತ್ರ ಇದಕ್ಕೆ ಬೆಲೆ ಇದೆ. ಆದರೆ ಈ ಗ್ರಂಥ ಕನ್ನಡದಲ್ಲಿದ್ದತೋ ಸಂಸ್ಕೃತದಲ್ಲಿದ್ದಿತೋ ಎಂಬುದು ಗೊತ್ತಿಲ್ಲ. ಕಾವ್ಯಾವಲೋಕನದ ಆದಿ ಸಂಪಾದಕ ಆರ್. ನರಸಿಂಹಾಚಾರ್ಯರು ಈ ಗ್ರಂಥ ಈವರೆಗೆ ದೊರೆತಿಲ್ಲ, ಎಂದಿಷ್ಟೇ ಹೇಳಿರುವರು.[2] ಭಾಷೆಯ ವಿಷಯದಲ್ಲಿ ಯಾವದೆ ಪ್ರಸ್ತಾಪವಿಲ್ಲ. ಬಸವನಾಳ-ಕೇಪು ಸಂಪಾದಿತ ಕಾವ್ಯಾವಲೋಕನದಲ್ಲೂ ಇಷ್ಟೆ ಇದೆ.[3] ತೀ. ನಂ. ಶ್ರೀ. ಇದನ್ನೇ ಪುನರುಚ್ಚರಿಸಿರುವರು.[4] ಮುಗಳಿ ಛಂದೋವಿಚಿತಿ ಎಂದಿಷ್ಟೆ ಉಲ್ಲೇಖಿಸಿ ಮುಂದೆ ಪ್ರಶ್ನಾರ್ಥಕ ಚಿನ್ಹವನ್ನಿರಿಸಿರುವರು.[5] ತಾವೇ ಬರೆದ ಕವಿ ಚರಿತೆಯಲ್ಲಿ ನರಸಿಂಹಾಚಾರ್ಯರು ಛಂದೋವಿಚಿತಿಯ ಹೆಸರನ್ನು ಕೂಡ ಎತ್ತಿಲ್ಲ. ಹೀಗೇಕೆಂಬುದು ಯೋಚನೆಗಿಟ್ಟುಕೊಳ್ಳುತ್ತದೆ. ಗ್ರಂಥದ ಹೆಸರನ್ನುಳಿದು ಮಿಕ್ಕ ಯಾವದೆ ವಿವರಗಳು ಗೊತ್ತಿಲ್ಲವೆಂದು ಹೀಗೆ ಮಾಡಿರಬಹುದೆನಿಸುತ್ತದೆ.

ಇಮ್ಮಡಿ ನಾಗವರ್ಮನು ಸಂಸ್ಕೃತದಲ್ಲಿಯೂ ಬರೆಯುಬಲ್ಲವನಾದ್ದರಿಂದ ಒಂದೊಮ್ಮೆ ಆತನ ಛಂದೋವಿಚಿತಿ ಸಂಸ್ಕೃತದಲ್ಲಿರಬಹುದೆ? ಇದೆ ಎಂದಿಟ್ಟುಕೊಂಡು ಮುಂದಡಿಯಿಟ್ಟರೆ, ಸಂಸ್ಕೃತದಲ್ಲಿ 'ಸಭಾಷ್ಯಾರತ್ನಮಂಜೂಷಾ' ಎಂಬುದೊಂದು ಛಂದೋ ಗ್ರಂಥ ದೊರೆಯುತ್ತದೆ. ಕಾಶಿ ಜ್ಞಾನಪೀಠದಿಂದ ೧೯೪೯ರಲ್ಲಿ ಪ್ರಕಟಿಸಲ್ಪಟ್ಟಿದೆ. ಸುಪ್ರಸಿದ್ಧ ಛಂದ:ಶಾಸ್ತ್ರ ವಿದ್ವಾನ್ ದಿ.ಹ.ದಾ. ವೇಲಣಕರರಿಂದ ಸಂಪಾದಿಸಲ್ಪಟ್ಟಿದೆ. ಇಮ್ಮಡಿ ನಾಗವರ್ಮನ ಕಣ್ಮರೆಯಾದ ಛಂದೋವಿಚಿತಿ ಇದೇ

1. ಕ. ಜಿ. ಮುನ್ನುಡಿ, ಪು. ೩.
2. ಕಾ. ಲೋ. ೧, ಮುನ್ನುಡಿ, ಪು. ೧೦.
3. ಕಾ. ಲೋ. ೨, ಮುನ್ನುಡಿ, ಪು. ೩.
4. ಭಾ. ಕಾ. ಮೀ. ಪು. ೪೭೩.
5. ಕ. ಸಾ. ಚ, ಮುಗಳಿ, ಪು. ೧೪೬.

ಇರಬಹುದೆಂದು ತೋರುತ್ತದೆ. ಆದರೆ ಮೂಲವು ಅನ್ಯಕೃತವಿದ್ದು, ಇವನು ಅದಕ್ಕೆ ವೃತ್ತಿಯನ್ನು ಬರೆದಿರುವಂತೆ ತೋರುತ್ತದೆ. ಸಂಸ್ಕೃತ ಛಂದ:ಶಾಸ್ತ್ರದಲ್ಲಿ ಪಿಂಗಲನ ನಂತರ ಹುಟ್ಟಿರುವ ಎರಡು ಅಪೂರ್ವ ಗ್ರಂಥಗಳಲ್ಲಿ ಇದೊಂದು, ಎಂದಿರುವರು ವೇಲಣಕರ.[1]

ವೇಲಣಕರರ ಅಭಿಪ್ರಾಯದಲ್ಲಿ, ವಿಷಯ ನಿರೂಪಣೆಯಲ್ಲಿ ಪಿಂಗಲನ ಪ್ರಭಾವ ಕಂಡುಬರುತ್ತದೆ ಇದರಲ್ಲಿ. ಆದರೆ ಗಣನಿರ್ದೇಶನದಲ್ಲಿ ರತ್ನಮಂಜೂಷಾಕಾರನು ಬೇರೊಂದು ಮಾರ್ಗವನ್ನು ಅನುಸರಿಸಿರುವನು. ಪಿಂಗಲನಂತೆ ವೈದಿಕ ಛಂದಸ್ಸುಗಳನ್ನು ನಿರೂಪಿಸಿಲ್ಲವಾದ್ದರಿಂದ ಇವನು ಜೈನನಿರಬೇಕೆಂದು ಸೂಚಿತವಾಗುತ್ತದೆ. ಭಾಷ್ಯಕಾರನು ಜೈನನೆಂಬುವಲ್ಲಿ ಸಂದೇಹವಿಲ್ಲ. ಮಂಗಲ ಶ್ಲೋಕದಲ್ಲಿ ಜಿನಸ್ತುತಿ ಇದೆ. ಉದಾಹರಿಸಿದ ಲಕ್ಷ್ಯ ಪದ್ಯಗಳಲ್ಲಿ ಜಿನಸ್ತುತಿ ಇಲ್ಲವೆ ಜೈನಧರ್ಮದ ಮೇಲ್ಮೆಯನ್ನು ಕುರಿತು ಅನೇಕ ಪದ್ಯಗಳಿವೆ. ಈ ಗ್ರಂಥದಲ್ಲಿ ಒಟ್ಟು ೮೫ ವರ್ಣವೃತ್ತಗಳನ್ನು ನಿರ್ದೇಶಿಸಿದೆ. ಇವುಗಳಲ್ಲಿ ೨೧ (ಲೆಕ್ಕದಿಂದ ೧೬) ವೃತ್ತಗಳನ್ನು ಪ್ರಖ್ಯಾತ ಜೈನ ಪಂಡಿತ-ಹೇಮಚಂದ್ರನನ್ನು ಬಿಟ್ಟು ಮಿಕ್ಕವರಾರೂ ಲಕ್ಷಿಸಿರುವುದಿಲ್ಲ. ಭಾಷ್ಯಕಾರನ ವಿಷಯ ತಿಳಿಯದು. ಲಕ್ಷ್ಯ ಪದ್ಯಗಳಲ್ಲಿ ಕೆಲವು ಅನ್ಯಕೃತವಿವೆ. ಕೆಲವು ಸ್ವಕೃತವಿರಬಹುದು. ಕೆಲವು ಲಕ್ಷ್ಯಗಳಲ್ಲಿ ವೃತ್ತದ ಹೆಸರು ಬಂದಿರುವದರಿಂದ ಉದಾಹರಣೆಗೆಂದೇ ಅವುಗಳನ್ನು ರಚಿಸಿರಲಿಕ್ಕೆ ಸಾಕು. ಭಾಷ್ಯಾಕಾರನು ಮೂರು ನಾಲ್ಕು ಸ್ಥಳಗಳಲ್ಲಿ ಗ್ರಂಥಕಾರನನ್ನು ನಿರ್ದೇಶಿಸಿದ್ದರೂ ಹೆಸರಿಸಿಲ್ಲ. ಒಂದೆಡೆ ಆಚಾರ್ಯನೆಂದಿರುವನು, ಇಷ್ಟೆ. ಮೂಲಗ್ರಂಥ ಸೂತ್ರ ರೂಪದಲ್ಲಿದೆ. ರಚನೆಯಕಾಲ ಕ್ರಿ.ಶ. ೬ನೆಯ ಶತಮಾನದನಂತರ ಎಂದಿಷ್ಟೆ ಹೇಳಬಹುದು.[2]

ರತ್ನಮಂಜೂಷಾಕಾರ ದಾಕ್ಷಿಣಾತ್ಯ. ಅಕ್ಷರಗಣಗಳ ನಿರೂಪಣೆಗಾಗಿ ಈತನು ಬಳಸಿರುವ ತಂತ್ರ ಅಪೂರ್ವ ; ಎಂದರೆ ಪಿಂಗಲನ ತಂತ್ರದಿಂದ ಭಿನ್ನವಾಗಿದೆ, ತುಸು ಹೆಚ್ಚು ಕಡಿಮೆ ಈ ತಂತ್ರ ಈತನಿಗಿಂತ ಮೊದಲಿನವನಾದ ಜನಾಶ್ರಯಿ ಛಂದೋವಿಚಿತಿಕಾರನು ಬಳಸಿದ ತಂತ್ರವನ್ನು ಅನುಸರಿಸಿದೆ. ಜನಾಶ್ರಯಿಕಾರನೂ ದಾಕ್ಷಿಣಾತ್ಯ. ಕ್ರಿ. ಶ. ಆರನೆಯ ಶತಮಾನದ ಕೊನೆಯವನೆಂದು ಭಾವಿಸಲಾಗಿದೆ.[3] ಪಿಂಗಲನು ತನ್ನ ತಂತ್ರಕ್ಕಾಗಿ ೩ ಗುರು ಮತ್ತು ೩ ಲಘು ಅಕ್ಷರಗಳನ್ನು ಮೂರು-ಮೂರು ಅಕ್ಷರಗಳಲ್ಲಿ ಕ್ರಮಬದ್ಧವಾಗಿ ಸಂಯೋಜಿಸಿ ಆ ಗಣಗಳನ್ನು ಮಾಡಿಕೊಂಡಿರುವನು. ಇವುಗಳಿಗೆ 'ತ್ರಿಕ'ಗಳೆನ್ನುವರು. ೮ ಗಣಗಳನ್ನೂ ೨ ಬಿಡಿ ಅಕ್ಷರಗಳನ್ನು ಅಂದರೆ-೧ ಗುರು ೧ ಲಘು-ತೆಗೆದುಕೊಂಡು ಇವುಗಳಿಗೆ-ಮ-ಯ-ರ-ಸ-ತ-ಜ-ಭ-ನ ಮತ್ತು ಗುರುಗೆ

1. ರ. ಮಂ, ಮುನ್ನುಡಿ, ಪು. ೧-೪.
2. ಹೇ. ಛಂ. ಮುನ್ನುಡಿ, ಪು. ೨.
3. ಜನಾಶ್ರಯಿ, ಪು. ಮುನ್ನುಡಿ, ಪು. ೯. ಹೇ. ಛಂ. ಮುನ್ನುಡಿ, ಪು. ೨.

-ಗ, ಲಘುಗೆ-ಲ ಎಂಬ ಸಂಜ್ಞೆಗಳನ್ನೂ ಕೊಟ್ಟು ತನ್ನ ಸೂತ್ರಗಳನ್ನು ರಚಿಸಿರುವನು. ಜನಾಶ್ರಯಿಕಾರನು ಇವುಗಳಿಗೆ ಬೇರೆ ೧೦ ಗಣಗಳನ್ನು ಸೇರಿಸಿರುವನು. ಇವುಗಳಲ್ಲಿ ೪ ದ್ವಿಕಗಳು (ಪಿಂಗಲನ ಪರಿಭಾಷೆಯಲ್ಲಿ ಗಗ, ಲಗ, ಲಲ), ಮೂರು ಚತುರಕ್ಷರ ಗಣಗಳು (ನಲ, ನಗ, ರಗ), ಎರಡು ಪಂಚಾಕ್ಷರ ಗಣಗಳು (ರ ಲ ಗ, ಭ ಗ ಗ) ಮತ್ತು ಒಂದು ಷಡಕ್ಷರ ಗಣ (ನನ) ಇವೆ. ಪಿಂಗಲನಲ್ಲಿರುವಂತೆ ಗಲ ಬಿಡಿ ಅಕ್ಷರಗಳೂ ಇವೆ. ರತ್ನಮಂಜೂಷಾಕಾರನು ಚತುರಕ್ಷರ, ಪಂಚಾಕ್ಷರ, ಷಡಕ್ಷರ ಗಣಗಳನ್ನು ಬಿಟ್ಟಿರುವನು. ಗಣಗಳಿಗಿತ್ತ ಸಂಜ್ಞೆಗಳು ಬೇರೆ ಬೇರೆ ಇವೆ. ಇವರಿಬ್ಬರಲ್ಲಿ ಇಷ್ಟೇ ವ್ಯತ್ಯಾಸ.

ರತ್ನಮಂಜೂಷೆಯು ಅಸಮಗ್ರ ಗ್ರಂಥವಿದೆ. ಆಕರಗಳೆಂದು ಬಳಸಿಕೊಂಡ ಎರಡು ಹಸ್ತಪ್ರತಿಗಳಲ್ಲಿ ಒಂದರಲ್ಲಿ ಷಟ್ಪ್ರತ್ರಯ ಅಂದರೆ ಪದ್ಯ ಪ್ರಸ್ತಾರದ ರೀತಿಗಳನ್ನು ತಿಳಿಸುವ ಕೊನೆಯ ಅಧ್ಯಾಯದಲ್ಲಿ ಮೊದಲಿನ ೧೭ ಸೂತ್ರಗಳಿವೆ. ಎರಡನೆಯದರಲ್ಲಿ ಇನ್ನೆರಡು ಸೂತ್ರಗಳಿದ್ದು ಕೆಳಗೆ ಪ್ರಸ್ತಾರ ವಿಧಿಗಳನ್ನು ತಿಳಿಸುವ ಬೇರೆ ೧೧ ಪದ್ಯಗಳಿವೆ. ಈ ಪದ್ಯಗಳನ್ನು ಸಂಪ್ರತಿಕಾರನು ಸೇರಿಸಿರಬಹುದೆಂದು ವೇಲಣಕರರ ಅಭಿಪ್ರಾಯವಿದೆ.

ಇವಿಷ್ಟು ಈ ಗ್ರಂಥದ ಸ್ವರೂಪ ವೈಶಿಷ್ಟ್ಯಗಳು. ಪಿಂಗಲನ ತ್ರಿಕಪದ್ಧತಿ, ವೃತ್ತದ ಪ್ರಸ್ತಾರ ಮತ್ತು ಘಟಕಗಳ ನಿರೂಪಣೆಗೆ ಸುಲಭ, ಆತ ಏನ ಸೋಯಿಸ್ಕರ ಇದ್ದರೂ ಅದರಿಂದ ವೃತ್ತದ ಸ್ವಾಭಾವಿಕ ಲಯ ಸಂಪೂರ್ಣವಾಗಿ ದುರ್ಲಕ್ಷಿಸಲ್ಪಟ್ಟಿದೆಯೆಂದು ವಿದ್ವಾಂಸರ ಅಭಿಪ್ರಾಯವಿದೆ.[1] ಜನಾಶ್ರಯಿಕಾರ ಇದನ್ನು ಈ ಮೊದಲೇ ಕಂಡುಹಿಡಿದು 'ಪೈಂಗಲಾದಿ ಛಂದೋವಿಚಿತಿಷು ಯಥಾಸಂಭವಂ ನ್ಯೂನಾತಿರೇಕಂ ಪರೀಕ್ಷ್ಯ ಪರಿಹೃತ್ಯ ತದ್ದೋಷ ಪರಿಹೃತಾಮಿಮಾಂ' ಎಂದರೆ ಪಿಂಗಲ ಮೊದಲಾದವರಲ್ಲಿ ಕಂಡುಬರುವ ನ್ಯೂನಾತಿರೇಕಾದಿ ದೋಷಗಳನ್ನು ಪರೀಕ್ಷಿಸಿ, ಪರಿಹರಿಸಿ, ಈ ಗ್ರಂಥವನ್ನು ಬರೆದಿರುವುದಾಗಿ ಇದರ ಪ್ರಥಮ ವ್ಯಾಖ್ಯಾನಕಾರ ಗಣಸ್ವಾಮಿ ಹೇಳಿರುವನು; ಇದನ್ನೆ ತಾನು ಹೇಳುತ್ತಿರುವದಾಗಿ ಇದರ ದ್ವಿತೀಯ ಅನಾಮಧೇಯ ವ್ಯಾಖ್ಯಾಕಾರನೆಂದಿರುವನು.[2] ಈಗಿರುವ ಮುದ್ರಿತ ಪ್ರತಿಯಲ್ಲಿರುವ ವ್ಯಾಖ್ಯಾನ ಈ ಎರಡನೆಯವನದು. 'ಗಣಸ್ವಾಮಿ ವಿರಚಿತ ವ್ಯಾಖ್ಯಾಂ ವ್ಯಾಖ್ಯಾಸ್ಯಾಮಃ' ಎಂದಿರುವದರಿಂದ ಈತನ ವ್ಯಾಖ್ಯಾನದಲ್ಲಿ ಗಣಸ್ವಾಮಿಯದೆಷ್ಟು ತನ್ನದೆಷ್ಟು ಎಂಬುದು ತಿಳಿಯುವಂತಿಲ್ಲ. ಸ್ವತಂತ್ರವೂ ಇರಬಹುದು ಅಥವಾ ಗಣಸ್ವಾಮಿಯನ್ನು ಅನುಸರಿಸಿರಬಹುದು. ಸಾಳ್ವನು (ಕ್ರಿ.ಶ. ೧೫೫೦) ತನ್ನ ರಸರತ್ನಾಕರದಲ್ಲಿ

---

1. ಮ. ಛಂ. ರ. ಪು. ೪೪೫; ವಿ. ಸೀತಾರಾಮಯ್ಯ-ಸಂಸ್ಕೃತ ಮತ್ತು ಪ್ರಾಕೃತ ಛಂದಸ್ಸು (ಇಂಗ್ಲಿಷ್), ಜೆ. ಓ. ಆರ್., ಸಂ. ೧೯, ಪು. ೫೯.

2. ಜನಾಶ್ರಯಿ, ಪು. ೧.

ಸಾಹಿತ್ಯ ಸಂಜೀವನಕಾರ ಗಣೇಶ್ವರನೊಬ್ಬನನ್ನು ಸ್ಮರಿಸಿರುವನು. ಕಿಟೆಲ್ ಬಹುಶಃ ಈ ಗ್ರಂಥ ಕನ್ನಡದಲ್ಲಿರಲಿಕ್ಕಿಲ್ಲ ಎಂದಿರುವರು.[1] ತೀ. ನಂ. ಶ್ರೀ. ಇದು ಕನ್ನಡದಲ್ಲಿದ್ದಿತೆಂದಿರುವರು.[2] ಈ ಗಣೇಶ್ವರ ಮತ್ತು ಜನಾಶ್ರಯಿಯ ಭಾಷ್ಯಾಕಾರ ಗಣಸ್ವಾಮಿ ಒಬ್ಬನೇ ವ್ಯಕ್ತಿಯಾಗಿರಬಹುದೆ, ಎಂಬ ಅನುಮಾನ ಹುಟ್ಟುತ್ತದೆ. ಸಾಹಿತ್ಯ ಸಂಜೀವನವನ್ನು ಬರೆದ ಈತ ಲಾಕ್ಷಣಿಕನೆಂಬುದು ನಿರ್ವಿವಾದ. ಜನಾಶ್ರಯಿಯೂ ಒಂದು ಲಕ್ಷಣ ಗ್ರಂಥ. ಆದ್ದರಿಂದ ಇವರಿಬ್ಬರೂ ಒಂದೇ ವ್ಯಕ್ತಿಯಾಗಿರಬಹುದಾಗಿದೆ. ಜನಾಶ್ರಯಿಯ ಎರಡನೆಯ ಭಾಷ್ಯಕಾರನು, ಅವನಾರೆಂಬುದು ಗೊತ್ತಿರದಿದ್ದರೂ, ಜೈನಪರನೆಂಬುದು ಆತನ ' ಜಿನಮದನಮಥನ ' ಮತ್ತು ' ತಂ ಜಿನಮುಹಂ ಜಿತಕಲಿಂ ಸುಗತ ಮೀಡೇ ' ಲಕ್ಷ್ಯಪದ್ಯಗಳಲ್ಲಿಯ ಜಿನಸ್ತುತಿಯಿಂದ ಗೊತ್ತಾಗುತ್ತದೆ.[3] ರತ್ನ ಮಂಜೂಷೆಯ ಭಾಷ್ಯಕಾರನು ಈತನ ' ವಿದ್ಯುನ್ನದ್ಧಂ ' ಮತ್ತು ' ಏನ ಪ್ರಾಂಶುಂ ಕ್ರೌಂಚ ಸ್ಯಾಗ್ರಂ ' ಲಕ್ಷ್ಯ ಪದ್ಯಗಳನ್ನು ತನಗಾಗಿ ಬಳಸಿಕೊಂಡಿರುವನು.[4] ಇಮ್ಮಡಿ ನಾಗವರ್ಮನೂ ಈತನು ಅಂದರೆ ಜನಾಶ್ರಯಿಯ ದ್ವಿತೀಯ ಭಾಷ್ಯಕಾರನು ' ಅಪರವಕ್ತ್ರ' ವೆಂಬ ಅರ್ಧಸಮ ಚತುಷ್ಪದಿಗೆ ಕೊಟ್ಟಿರುವ ' ಮರಕತ ಸದೃಶಂಚಯಾಮುನಂ' ಲಕ್ಷ್ಯವನ್ನು[5] ' ದ್ರುತವಿಲಂಬಿತ 'ದಲ್ಲಿ ಕನ್ನಡಿಸಿ ಕಾವ್ಯಾವಲೋಕನದಲ್ಲಿ ಐಕ್ಯವೆಂಬ ಕವಿಸಮಯಕ್ಕೆ ಉದಾಹರಣೆಯೆಂದು ಕೊಟ್ಟಿರುವನು.[6] ಆದರೆ ಈ ಪದ್ಯ ಕವಿಸಮಯದ ಪ್ರಥಮ ವಕ್ತಾರ ರಾಜಶೇಖರನ ಕಾವ್ಯಮೀಮಾಂಸೆ ಮತ್ತು ಹೇಮಚಂದ್ರನ ಕಾವ್ಯಾನುಶಾಸನದಲ್ಲಿ ಇದೇ ಸಂದರ್ಭದಲ್ಲಿ ದೊರೆಯುವದರಿಂದ ಇವುಗಳಲ್ಲಿ ಒಂದರಿಂದ ಇದನ್ನು ಆತನು ಆಯ್ದುಕೊಂಡಿರುವದು ಹೆಚ್ಚು ಸಂಭವನೀಯವಿದೆ.

ಸಾಳ್ವನು ಜೈನ; ' ನಾಗವರ್ಮ ಕವಿಕಾಮಾದಿಗಳ ಮಾರ್ಗದಿಂ ' ಎಂದು ಇಮ್ಮಡಿ ನಾಗವರ್ಮನನ್ನು ಸ್ಮರಿಸಿರುವನು. ಜನಾಶ್ರಯಿಕಾರ, ರತ್ನಮಂಜೂಷಾಕಾರ ಇಬ್ಬರೂ ದಾಕ್ಷಿಣಾತ್ಯರು ; ಗಣ ನಿರ್ದೇಶನಕ್ಕಾಗಿ ತುಸು ಹೆಚ್ಚು ಕಡಿಮೆ ಒಂದೇ ಪದ್ಧತಿಯನ್ನನುಸರಿಸಿರುವರು; ಜನಾಶ್ರಯಿಯ ಪ್ರಥಮ ಭಾಷ್ಯಕಾರ ಸಾಳ್ವನ ಗಣೇಶ್ವರನಿರಬಹುದಾಗಿದೆ ; ದ್ವಿತೀಯ ಭಾಷ್ಯಕಾರ ಜೈನಪರನೆಂಬುದು ಖಂಡಿತ : ರತ್ನ

1. ಛಂ. ಕಿಟೆಲ್, ಮುನ್ನುಡಿ, ಪು. ೪೧, ೪೨.

2. ಭಾ. ಕಾ. ಮೀ. ಪು. ೪೮೮.

3. ಜನಾಶ್ರಯಿ, ಪು. ೧೯, ಪ್ರವೃತ್ತಸಮಾನಿಯ ಒಳಭೇದ. ಪು. ೫೩, ವಿಲಾಸಿ ನಿವೃತ್ತಕ್ಕೆ ಲಕ್ಷ್ಯ.

4. ಜನಾಶ್ರಯಿ, ಪು. ೬೨, ಮತ್ತಾಕ್ರೀಡೆಗೆ ಲಕ್ಷ್ಯ. ರ. ಮಂ. ೭. ೨೧, ಮಂಜು ಕ್ರೀಡೆಗೆ ಲಕ್ಷ್ಯ. ಜನಾಶ್ರಯಿ, ಪು. ೬೬, ಮೇಘ ದಂಡಕಕ್ಕೆ ಲಕ್ಷ್ಯ. ರ. ಮಂ. ೭, ೩೧, ಅತಿ ಚ್ಛಂದಕ್ಕೆ ಲಕ್ಷ್ಯ.

5. ಜನಾಶ್ರಯಿ, ಪು. ೨೭.

6. ಕಾ. ಲೋ. ಪದ್ಯ ೯೨೨.

ಮಂಜೂಷಾಕಾರನೂ ಜೈನನಿರಬಹುದೆಂದು ವೇಲಣಕರ ಸೂಚಿಸಿರುವರು. ಭಾಷ್ಯ ಕಾರನಂತೂ ನಿಸ್ಸಂದೇಹವಾಗಿ ಜೈನ, ಜನಾಶ್ರಯಿಯ ದ್ವಿತೀಯ ಭಾಷ್ಯಕಾರನ ಉದಾಹೃತ ಲಕ್ಷ್ಯಗಳನ್ನು ತನಗಾಗಿ ಬಳಸಿಕೊಂಡಿರುವನು. ಇಮ್ಮಡಿ ನಾಗವರ್ಮನು ಜನಾಶ್ರಯಿಯ ದ್ವಿತೀಯ ಭಾಷ್ಯಕಾರನು ಉದಾಹರಿಸಿದ ಲಕ್ಷ್ಯವೊಂದನ್ನು ಈತನಿಂದಲೇ ಆಯ್ದುಕೊಂಡಿರುವನೆಂದು ನಿಶ್ಚಿತವಾಗಿ ಹೇಳಲಿಕ್ಕಾಗದಿದ್ದರೂ, ತನ ಕಾವ್ಯಾವಲೋಕನದಲ್ಲಿ ಕನ್ನಡಿಸಿ ಸೇರಿಸಿರುವನು. ಇವೆಲ್ಲ ಅಂಶಗಳು ದಕ್ಷಿಣದಲ್ಲಿ ಜೈನರದೊಂದು ಪ್ರತ್ಯೇಕ ಸಾಹಿತ್ಯ ಸಂಪ್ರದಾಯವು ಬೆಳೆದುಬಂದಿರುವುದನ್ನು ಸೂಚಿಸುವವಲ್ಲದೆ, ರತ್ನಮಂಜೂಷೆಯ ಭಾಷ್ಯಕಾರ ಇಮ್ಮಡಿನಾಗವರ್ಮನಿರಬಹು ದೆಂಬ ಊಹೆಗೆ ಪೋಷಕ ಸನ್ನಿವೇಶವನ್ನು ಒದಗಿಸುವವು.

ರತ್ನಮಂಜೂಷೆಯ ಕಾಲ ಕ್ರಿ. ಶ. ೬ನೆಯ ಶತಮಾನದನಂತರ ಎಂದಿಷ್ಟೇ ಹೇಳಿರುವದರಿಂದ ಕಾಲನಿರ್ದೇಶನದ ಮೇಲಿನ ಗಡುವನ್ನು ಎಲ್ಲಿ ಬೇಕಲ್ಲಿಗೆ ಎಳೆಯು ಬಹುದಾಗಿದೆ. ಗ್ರಂಥೋಕ್ತವಿರುವ ೮೫ ವರ್ಣವೃತ್ತಗಳಲ್ಲಿ ೨೧ ವೃತ್ತಗಳನ್ನು ಈ ಗ್ರಂಥಕಾರ ಮತ್ತು ಆಚಾರ್ಯ ಹೇಮಚಂದ್ರ ಇಬ್ಬರೇ ಲಕ್ಷಿಸಿರುವದರಿಂದ ಈತ ಹೇಮಚಂದ್ರನು ಪ್ರತಿನಿಧಿಸುವ ಜೈನಸಾಹಿತ್ಯಪರಂಪರೆಯವನಿರಬೇಕೆಂದು ವೇಲಣಕರ ಅಭಿಪ್ರಾಯ ಪಟ್ಟಿರುವರು.[1] ಆದ್ದರಿಂದ ರತ್ನಮಂಜೂಷಾಕಾರನು ಹೇಮಚಂದ್ರನ ಪೂರ್ವಿಕನೂ ಇರಬಹುದು, ಸಮಕಾಲೀನನಿರಬಹುದು, ಅನಂತರದವನಿರಬಹುದು. ಒಂದೊಮ್ಮೆ ಸಮಕಾಲೀನ ಅಥವಾ ಅನಂತರದವನಿದ್ದರೆ, ಭಾಷ್ಯಕಾರ ಆತನ ಸಮ ಕಾಲೀನ ಅಥವಾ ಅನಂತರದವನಿರುವುದು ಕ್ರಮಪ್ರಾಪ್ತವಿದೆ. ಗ್ರಂಥಕಾರರಿಗಿಂತ ಭಾಷ್ಯಕಾರರು ಈಚೆಯವರಿರುವದೇ ಹೆಚ್ಚು. ಆದ್ದರಿಂದ ಈತನಾದರೂ ಅನಂತರದವ ನೆಂದೆ ಬಗೆಯಬೇಕಾಗುವುದು. ಹೀಗಿದ್ದರೆ ರತ್ನಮಂಜೂಷೆಯ ಭಾಷ್ಯಕಾರ ಇಮ್ಮಡಿ ನಾಗವರ್ಮನಿರಬೇಕೆಂಬ ನಮ್ಮ ಊಹೆಯ ಕುದುರೆ ಇಲ್ಲಿಯೇ ಮುಗ್ಗರಿಸಿ ಬೀಳುವದು.

ಆದ್ದರಿಂದ ರತ್ನಮಂಜೂಷಾಕಾರ ಹೇಮಚಂದ್ರನಿಗಿಂತ ಸಾಕಷ್ಟು ಪ್ರಾಚೀನ ನೆಂಬುದು ಮೊದಲು ಖಚಿತವಾಗಬೇಕು. ರತ್ನಮಂಜೂಷೆ ಒಂದು ಚಿಕ್ಕ ಗ್ರಂಥ. ಇದರಲ್ಲಿ ಒಟ್ಟು ೧೪೦ ಸೂತ್ರ ಮತ್ತು ೧೪೩ ಲಕ್ಷ್ಯಪದ್ಯಗಳಿವೆ. ಗ್ರಂಥದ ಕಾಲ ನಿರ್ದೇಶ ಮೊದಲಾದ ವಿಷಯಗಳಿಗೆ ಇವುಗಳಿಂದ ಸಹಾಯವಾಗುವಂತಿಲ್ಲ. ಆದರೆ ಈ ದಿಸೆಯಲ್ಲಿ ಪ್ರಾಗ್ಗಾಯತ್ರಿ ಪಂಚಕ ಅಂದರೆ ಗಾಯತ್ರಿಯ ಪೂರ್ವದ ಉಕ್ತೆ, ಅತ್ಯುಕ್ತೆ, ಮಧ್ಯಮೆ, ಪ್ರತಿಷ್ಠೆ ಮತ್ತು ಸುಪ್ರತಿಷ್ಠೆ ಈ ಐದು ಛಂದಸ್ಸುಗಳನ್ನುಲಕ್ಷಣ ಗ್ರಂಥಗಳಲ್ಲಿ ನಿರ್ದೇಶಿಸುವ ಸಂಪ್ರದಾಯ ಸಹಾಯಕವಾಗಬಲ್ಲದು. ವೈದಿಕ ಛಂದಸ್ಸು ಗಳ ಪ್ರವಕ್ತಾರರಾದ ಪತಂಜಲಿ, ಶೌನಕ, ಗಾರ್ಗ್ಯ ಇವುಗಳನ್ನು ಹೆಸರಿಸಿರುವದರಿಂದ

1. ರ. ಮಂ. ಮುನ್ನುಡಿ, ಪು. ೩.

ಇವುಗಳ ವೈದಿಕತ್ವವು ವ್ಯಕ್ತವಾಗುತ್ತಿದ್ದರೂ ಪ್ರಯೋಗದಲ್ಲಿ ಕಂಡುಬರುವುದಿಲ್ಲ.[1] ಭರತನು ಇವುಗಳ ಪ್ರಯೋಗವನ್ನು ಕುರಿತು 'ಪ್ರಯೋಗಜಾನಿ ಪೂರ್ವಾಣಿ ಪ್ರಾಯಶೋನಭವಂತಿಹಿ' ಎಂದರೆ 'ಪ್ರಾಯಶಃ' ವ್ಯವಹಾರದಲ್ಲಿ ಇವುಗಳ ಬಳಕೆ ಇರುವುದಿಲ್ಲ ಎಂದಿರುವನು ಮತ್ತು ಇದಕ್ಕನುಸಾರವಾಗಿ ತನ್ನ ಗ್ರಂಥದಲ್ಲಿ ಅಲ್ಲೊಂದು ಇಲ್ಲೊಂದು ಇಂಥ ಒಟ್ಟು ೧೨ ವೃತ್ತಗಳನ್ನೂ ಬಳಸಿರುವನು (ಹೇ. ಛಂ. ಪು. ೨೮೫, ಸಂಸ್ಕೃತ ವೃತ್ತರೂಪ ಸೂಚಿ) ಭರತನ ಈ ಉಕ್ತಿಗೆ ಆತನ ಭಾಷ್ಯಕಾರ ಅಭಿನವಗುಪ್ತ 'ಲಕ್ಷ್ಯತೋ ಸ್ಥಿತಾನೀತಿ ವೇದವದ್ ದೃಶ್ಯತೇ ಇತಿಭಾವ:' ಎಂದಿರುವದರಿಂದ ಲೌಕಿಕ ವ್ಯವಹಾರದಲ್ಲಿ ಇವುಗಳ ಬಳಕೆ ಅಯುಕ್ತವೆಂದು ಆತನ ಅಭಿಪ್ರಾಯವಿರುವಂತೆ ತೋರುತ್ತದೆ. ವೇದಗಳಲ್ಲಿ ಇವುಗಳ ಬಳಕೆ ಇದೆ ಎಂಬುವದಕ್ಕೆ ಅಥರ್ವವೇದದ ೨೦ನೆಯ ಕಾಂಡದಲ್ಲಿ ಕೆಲವು ಸೂಕ್ತಗಳಿದ್ದು ಋಜ್ಮಯವೆಂದು ಭಾವಿಸಿದರೆ ಅವು ಪ್ರಾಗ್ಗಾಯತ್ರಿ ಛಂದಗಳ ಪ್ರಯೋಗವೆನ್ನಬಹುದೆಂದು ವಿದ್ವಾಂಸರ ಅಭಿಪ್ರಾಯವಿದೆ.[2]

ಅಭಿನವಗುಪ್ತನ ಈ ಅಭಿಪ್ರಾಯಕ್ಕೆ ಆಧಾರವೆಂಬಂತೆ ಪಿಂಗಲನು ಪ್ರಾಗ್ಗಾಯತ್ರಿ ಛಂದಗಳನ್ನು ಉಲ್ಲೇಖಿಸಿರುವದಿಲ್ಲ. ಪಿಂಗಲನನ್ನು ಹೆಚ್ಚಾಗಿ ಅನುಸರಿಸಿದ ಜಯದೇವನು ಸಹ ಇವುಗಳನ್ನು ಬಿಟ್ಟಿರುವನು. ಆತನ ನಂತರದವರು ನಮ್ಮ ಆದಿನಾಗವರ್ಮ ಗುಣಚಂದ್ರ ಸಹ ಇವುಗಳನ್ನು ನಿರ್ದೇಶಿಸಿರುವರು. ರತ್ನಮಂಜೂಷಾಕಾರ ವೈದಿಕ ಛಂದಸ್ಸುಗಳನ್ನು ಉಲ್ಲೇಖಿಸಿಲ್ಲವಾದರೂ, ಲೌಕಿಕವೃತ್ತಗಳ ನಿರ್ದೇಶನದಲ್ಲಿ ಪ್ರಾಗ್ಗಾಯತ್ರಿಗಳನ್ನು ಹೇಳಿಲ್ಲ. ಗಾಯತ್ರಿಯಿಂದ ಪ್ರಾರಂಭವಾಗುತ್ತದೆ ಅತನ ನಿರೂಪಣೆ. ಪಿಂಗಲ ಜಯದೇವ ಸಹ ಲೌಕಿಕ ವೃತ್ತಗಳ ನಿರೂಪಣೆಯನ್ನು ಗಾಯತ್ರಿಯಿಂದ ಪ್ರಾರಂಭಿಸಿರುವರು. ಜಯದೇವನಂತೂ ಗಾಯತ್ರಿಯೆ ಆದ್ಯ ಛಂದಸ್ಸೆಂದು ಭಾವಿಸಿ ಮಂಗಲಶ್ಲೋಕದಲ್ಲಿ ಗಾಯತ್ರಾಂಛಂದಸಾಂ ಪೂರ್ವಂ ವರ್ಧಮಾನಾಕ್ಷರಂಪರಂ ವಾಙ್ಮಂಡನಕರಂ ನೌಮಿ ಚಿತ್ರವೃತ್ತ ಪ್ರಸಿದ್ಧಯೇ ಎಂದು ಗಾಯತ್ರಿಗೆ ನಮಸ್ಕರಿಸಿ ಸಿರುವನು.[3] ಗಣಮಾತ್ರೆಗಳ ನಿರೂಪಣೆಗೆ ರತ್ನಮಂಜೂಷಾಕಾರ ಜನಾಶ್ರಯಿಯನ್ನು ಅನುಸರಿಸಿರುವನು. ಜನಾಶ್ರಯಿಯ ಕಾಲ ಕ್ರಿ.ಶ. ೬ನೆಯ ಶತಮಾನದ ಕೊನೆ. ಜನಾಶ್ರಯಕಾರ ಆಂಧ್ರದವನಿದ್ದು ಛಂದಃಶಾಸ್ತ್ರದಲ್ಲಿ ಒಬ್ಬ ಮತಪ್ರವರ್ತಕನಿದ್ದನು.[4] ಪಿಂಗಲನನಂತರ ಪ್ರಾಕೃತ[illegible]ಂಗಲ, ಬೃಹತ್ಪಿಂಗಲ ಗ್ರಂಥಗಳು ಹುಟ್ಟಿಕೊಂಡಂತೆ, ಕರ್ಣಾಟಕದಲ್ಲಿ ಛಂದಃ[illegible]ಜ್ಞರೆಲ್ಲರೂ ನಾಗವರ್ಮ ಎಂಬ ಭಾವನೆ ಬೆಳೆದುಬಂದಂತೆ, ತೆಲುಗಿನಲ್ಲಿ ಈತನ ಹೆ[illegible] ಕವಿಜನಾಶ್ರಯಮು' ಎಂಬ ಪ್ರಾಚೀನ (ಕ್ರಿ.ಶ.

---

1. ವೈ. ಛಂ. ವಿ[illegible]
2. ಅದೇ, ಪು. [illegible]
3. ಜಯದಾಮ[illegible]ದ ಮತ್ತು ಅದಕ್ಕಿರುವ ಹರ್ಷಟನ ವೃತ್ತಿ)
4. ಜನಾಶ್ರಯಿ[illegible]

೧೨ನೆಯ ಶತಮಾನ) ಛಂದೋಗ್ರಂಥವಿದೆ. ಜಯದೇವನ ಕಾಲ ಕ್ರಿ.ಶ. ೯೦೦ ಮೊದಲು; ಕ್ರಿ.ಶ. ೬೦೦ ಮೊದಲೆಂದು ಸಹ ಊಹಿಸಬಹುದಾಗಿದೆ.[1]

ರತ್ನಮಂಜೂಷೆ ಪ್ರಾಚೀನಗ್ರಂಥವೆಂಬುದಕ್ಕೆ ಇನ್ನೊಂದು ಸೂಚನೆ ಇದರಲ್ಲಿ ಲಕ್ಷಿಸಿದ 'ಅತಿಚ್ಛಂದಸ್' ಎಂಬ ವೃತ್ತದಲ್ಲಿ ದೊರೆಯುತ್ತದೆ.[2] ಸುಪರಿಚಿತ 'ಭುಜಂಗ ವಿಜೃಂಭಿತ' ವೃತ್ತದ ಘಟಕಗಳ ಮಧ್ಯದಲ್ಲಿ ೮ ಲಘುಗಳನ್ನು ಸೇರಿಸಿದರೆ ಈ ವೃತ್ತ ಸಿದ್ಧವಾಗುತ್ತದೆ. ಭುಜಂಗವಿಜೃಂಭಿತ ೨೬ ಅಕ್ಷರಗಳ ಬಂಧ. ಪ್ರತಿ ಪಾದದಲ್ಲಿ ಮ-ಮ-ತ-ನ-ನ-ನ-ರ-ಸ-ಲ-ಗ ಹೀಗೆ ೮ ಗಣಗಳೂ ೧ ಲಘು, ೧ ಗುರು ಇರುತ್ತವೆ. ಇವುಗಳ ಮಧ್ಯದಲ್ಲಿ ಅಂದರೆ ಮ-ಮ-ತ-ನ-ನ ನಂತರ ೮ ಲಘು ಅಕ್ಷರಗಳನ್ನು ಸೇರಿಸಿದರೆ 'ಅತಿಚ್ಛಂದಸ್' ವೃತ್ತವಾಗುವದು. ಆಗ ಇದರ ಪ್ರಸ್ತಾರ ಮ-ಮ-ತ-ನ-ನ-ನ-ನ-ನ-ಸ-ಜ-ಜ-ಗ ಆಗುವದು. ಇದನ್ನೇ ಜನಾಶ್ರಯಿಯಲ್ಲಿ 'ಮೇಘದಂಡಕ'ವೆಂದು ಹೆಸರಿಸಲಾಗಿದೆ.[3] ಇದಕ್ಕೆ ಇನ್ನೊಂದು ಅಂದರೆ ಒಟ್ಟು ೯ ಲಘು ಅಕ್ಷರಗಳನ್ನು ಸೇರಿಸಿ 'ಪಿಪೀಲಿಕಾಕರಭ' ಎಂಬ ಹೆಸರಿನಿಂದ ಸ್ವಯಂಭು ತನ್ನ ಗ್ರಂಥದಲ್ಲಿ ಸೇರಿಸಿರುವನು.[4] ಈ ಮಾರ್ಪಾಟಿನಿಂದ ವೃತ್ತದ ಪ್ರಸ್ತಾರ ಮ-ಮ-ತ-ನ-ನ-ನ-ನ-ನ-ಲ-ಲ-ಜ-ಭ-ರ ಆಗಿದೆ. ಹೇಮಚಂದ್ರನು ಇದೇ ಹೆಸರಿನಿಂದ ಈ ಛಂದೋಬಂಧವನ್ನು ತನ್ನ ಗ್ರಂಥದಲ್ಲಿ ಲಕ್ಷಿಸಿರುವನು.[5] ರತ್ನಮಂಜೂಷಾಕಾರನು ಈ ವೃತ್ತಕ್ಕಾಗಿ ಜನಾಶ್ರಯಿಯನ್ನು ಅನುಸರಿಸಿರುವದರಿಂದ ಮತ್ತು ಸ್ವಯಂಭು ಒಂದು ಅಕ್ಷರವನ್ನು ಹೆಚ್ಚಿಗೆ ಸೇರಿಸಿ ವೃತ್ತದ ರೂಪವನ್ನು ಬದಲಾಯಿಸಿರುವದರಿಂದ, ಈತನು ಜನಾಶ್ರಯಿಕಾರ ಮತ್ತು ಸ್ವಯಂಭುವಿನ ಮಧ್ಯದವನೆಂದು ಭಾವಿಸಬಹುದಾಗಿದೆ. ಸ್ವಯಂಭು ಕ್ರಿ.ಶ. ೬೭೭-೯೬೦ ಗಡುವಿನಲ್ಲಿ ಜೀವಿಸಿರಬಹುದೆಂದು ತಿಳಿಯಲಾಗಿದೆ.[6] ಅಪಭ್ರಂಶ ಸಾಹಿತ್ಯದಲ್ಲಿ ಸ್ವಯಂಭು ಅಗ್ರಗಣ್ಯ ವ್ಯಕ್ತಿ. ಈತನ 'ಪವುಮಚರಿವು' ಎಂಬ ಮಹಾಕಾವ್ಯಾತ್ಮಕ ಜೈನರಾಮಾಯಣ ಅಪಭ್ರಂಶ ಸಾಹಿತ್ಯದಲ್ಲಿ ಪ್ರಥಮ ದರ್ಜೆಯ ಗ್ರಂಥವಿದೆ. ಈತನ ಸ್ವಯಂಭೂ ಛಂದಸ್ಸು ಅಧಿಕಾರಯುಕ್ತ ಲಕ್ಷಣಗ್ರಂಥವೆನಿಸಿಕೊಂಡಿದೆ. ಮೂಲದಲ್ಲಿ ಈತನು ವರ್ಹಾಡ ಅಂದರೆ ಸದ್ಯದ ಮಹಾರಾಷ್ಟ್ರದಲ್ಲಿಯ ವಿದರ್ಭದವನಿದ್ದು, ಕರ್ನಾಟಕಕ್ಕೆ ವಲಸೆ ಬಂದು ರಾಷ್ಟ್ರಕೂಟ ಅರಸರ ಆಶ್ರಯದಲ್ಲಿ ತನ್ನ ಗ್ರಂಥಗಳನ್ನು ರಚಿಸಿದನು.

---

1. ಜಯದಾಮನ್, ಮುನ್ನುಡಿ, ಪು. ೪೪
2. ರ. ಮಂ. ೭.೩೨
3. ಜನಾಶ್ರಯಿ, ೪.೧೧೬
4. ಸ್ವಯಂಭು, ೧-೬೬
5. ಹೇ. ಛಂ. ೨-೩೮೬
6. ಪ. ಚ. ಸಂ. ೧-ಮುನ್ನುಡಿ [illegible] ನಿ,. ಸ್ವಯಂಭೂ, ಮುನ್ನುಡಿ, ಪು. ೨.

ಮಾತ್ರಾವೃತ್ತ ಪ್ರಕರಣದಲ್ಲಿ 'ಗಲಿತಕ'ವೆಂಬ ಛಂದೋಬಂಧವನ್ನು ಲಕ್ಷಿಸಿ ರತ್ನಮಂಜೂಷಾಕಾರನು ಆಧುನಿಕ ವಿದ್ವಾಂಸರನ್ನು ಗೊಂದಲದಲ್ಲಿ ಕೆಡವಿರುವನು.[1] ಗಲಿತಕ ಶುದ್ಧ ಪ್ರಾಕೃತ ಬಂಧ; ಪುರಾತನ ಬಂಧ. ಪ್ರವರಸೇನನ 'ಸೇತುಬಂಧ' ಮತ್ತು ಕಾಲಿದಾಸನ ವಿಕ್ರಮೋರ್ವಶೀಯದಲ್ಲಿ ಬಳಸಲ್ಪಟ್ಟಿದೆ. ಇದರಲ್ಲಿ ಅನೇಕ ಭೇದಗಳಿವೆ. 'ಸಂಸ್ಕೃತವಾಚ್ಯಾಯರ್ಾದ್ಯಃ ಪ್ರಾಕೃತ ವಿಷಯೇತು ಗಲಿತಕಾದ್ಯಾ ಬಹುಧಾ'-ಅಂದರೆ ಸಂಸ್ಕೃತದಲ್ಲಿ ಆರ್ಯಾದಿಗಳು ಹೇಗೋ ಹಾಗೆ ಪ್ರಾಕೃತದಲ್ಲಿ ಗಲಿತಕಾದಿಗಳೆಂದು ಜಯಕೀರ್ತಿ ವರ್ಣಿಸಿರುವನು.[2] ಹೀಗಿದ್ದರೂ ಯುಕ್ತಸೂತ್ರ ದೊಡನೆ ಇದನ್ನು ಸಂಸ್ಕೃತ ಮಾತ್ರಾ ವೃತ್ತಗಳಲ್ಲಿ ರತ್ನಮಂಜೂಷಾಕಾರನು ಅದೆಂತು ಸೇರಿಸಿರುವನೆಂಬುದು ತಿಳಿಯದಾಗಿದೆ. ಇದಕ್ಕೆ ಪ್ರಾಕೃತಾದಿ ದೇಶೀ ಬಂಧಗಳನ್ನು ಸಂಸ್ಕೃತದಲ್ಲಿ ಅಳವಡಿಸಿಕೊಳ್ಳುವ, ಎಂದಿನಿಂದಲೂ ನಡೆದು ಬಂದ ಪರಂಪರೆಯೊಂದೇ ಸಮಾಧಾನ. ಈ ಪರಂಪರೆಗೆ ಅತ್ಯಂತ ಪ್ರಾಚೀನವಿರುವ ಸಂಸ್ಕೃತದಲ್ಲಿಯ ಆರ್ಯೆ ವೈತಾಲಿಕೆಗಳೇ ಸಾಕ್ಷಿ.[3] ಇದಕ್ಕೆಂತಲೇ ಪಿಂಗಲನು ಇವುಗಳನ್ನು 'ಕೇವಲ ಲೌಕಿಕ'ವೆಂದು ವಿಂಗಡಿಸಿರುವನು. ಗಲಿತಕವನ್ನು ಲಕ್ಷಿಸಿ ರತ್ನಮಂಜೂಷಾಕಾರನು ಈ ಉಪಕ್ರಮವನ್ನು ಮುಂದುವರಿಸಿರುವನೆನ್ನಬಹುದು. ಈತನು ಲಕ್ಷಿಸಿದ ಗಲಿತಕದ ತದ್ರೂಪ ವಿರದಿದ್ದರೂ ಸಂಸ್ಕೃತದಲ್ಲಿ ರಚಿಸಿದ ಇದರದೊಂದು ಭೇದ ಕಾಲಿದಾಸನ ವಿಕ್ರಮೋರ್ವಶೀಯದಲ್ಲಿ (೪-೫೬/೫೯) ದೊರೆಯುವದರಿಂದ ಈ ಬಂಧ ಒಂದೊಮ್ಮೆ ಕಾಲಿದಾಸಾದಿ ಪ್ರಾಚೀನ ಕವಿಗಳ ಮೆಚ್ಚಿಕೆಗೆ ಪಾತ್ರವಾಗಿತ್ತೆಂದು ತೋರುತ್ತದೆ. ವಿಕ್ರಮೋರ್ವಶೀಯದಲ್ಲಿಯ ಗಲಿತಕವನ್ನು ವೇಲಣಕರ 'ವಿಶಾಲ ಗಲಿತ'ವೆಂದು ಗುರುತಿಸಿರುವರು.[4] ರತ್ನ ಮಂಜೂಷಾಕಾರನನ್ನು ಬಿಟ್ಟು ಇತರರಾರೂ, ಜನಾಶ್ರಯಿ ಸಹ, ಈ ಬಂಧವನ್ನು ಸಂಸ್ಕೃತ ಬಂಧವೆಂದು ಲಕ್ಷಿಸಿಲ್ಲವೆಂಬುದು ಈ ಗ್ರಂಥದ ಪ್ರಾಚೀನತೆಯನ್ನು ಸೂಚಿಸುವ ಇನ್ನೊಂದು ಆಧಾರವೆಂದು ಬಗೆಯಬಹುದಾಗಿದೆ.

ಒಟ್ಟಿನಲ್ಲಿ ರತ್ನಮಂಜೂಷೆಯೊಂದು ಪ್ರಾಚೀನ ಗ್ರಂಥವೆಂಬುದು ಖಚಿತ. ಆದ್ದರಿಂದ ಇದರಲ್ಲಿಯ ೮೫ ವರ್ಣವೃತ್ತಗಳಲ್ಲಿ ೨೧ ವೃತ್ತಗಳನ್ನು ಹೇಮಚಂದ್ರನೊಬ್ಬನೇ ಲಕ್ಷಿಸಿದ್ದರೂ, ಆತನೇ ಇವುಗಳನ್ನು ಈ ಗ್ರಂಥದಿಂದ ಆಯ್ದುಕೊಂಡಿರುವನೆಂದು ನಿಸ್ಸಂದೇಹವಾಗಿ ಹೇಳಬಹುದು. ಹೇಮಚಂದ್ರನೊಬ್ಬ ನಿಷ್ಣಾತ ಸಂಗ್ರಹಕಾರ; ಅವನಲ್ಲಿ ನಾವೀನ್ಯವೆಂಬುದಿಲ್ಲ; ಉಪಲಬ್ಧವಿದ್ದ ಎಲ್ಲ ಗ್ರಂಥಗಳಿಂದ ತನಗೆ ಉಪಯುಕ್ತವಿರುವ ಎಲ್ಲ ವಿವರಗಳನ್ನು ಸಂಗ್ರಹಿಸಿ, ಸಮನ್ವಯಿಸಿ, ತಪ್ಪು ತಡೆಗಳಿಲ್ಲದೆ ಎಲ್ಲರಿಗೂ ತಿಳಿಯುವಂತೆ ನಿರೂಪಿಸುವದು ಆತನ ವೈಶಿಷ್ಟ್ಯವೆಂಬ ವೇಲಣಕರರ

1. ರ.ಮಂ. ೩, ೧೬, ಟಿಪ್ಪಣಿ ಪು. ೪೬.
2. ಜಯದಾಮನ್, ಪು. ೪೬, (ಜ.ಕೀ. ಛಂದೋನುಶಾಶನ, ೧. ೩೨).
3. ಜಯದಾಮನ್, ಪು. ೨೪. ಮುನ್ನುಡಿ.
4. ಹೇ. ಛಂ. ಮುನ್ನುಡಿ, ಪು. ೧೮–೧೯, ಅಡಿಟಿಪ್ಪಣಿ ೧೪.

ಮಾತುಗಳು ಈ ಸಂದರ್ಭದಲ್ಲಿ ಪೂರಕವಾಗಿವೆ.[1] ವಿಂಟರನಿಟ್ಜ, ಹೇಮಚಂದ್ರನಲ್ಲಿ ನಾವೀನ್ಯವಿಲ್ಲದಿದ್ದರೂ, ಅಗಾಧ ಪಾಂಡಿತ್ಯ ಮತ್ತು ವ್ಯವಹಾರಿಕ ದೃಷ್ಟಿಯಿಂದಾಗಿ ಆತನ ಗ್ರಂಥಗಳು ಬಹಳ ಉಪಯುಕ್ತವಿವೆ, ಎಂದಿರುವನು.[2] ಹೆಚ್ಚೇಕೆ, ಹೇಮಚಂದ್ರನ ಸಮಕಾಲೀನರೇ ಆತನಲ್ಲಿ ನಾವೀನ್ಯವಿಲ್ಲೆಂದು ಟೀಕಿಸಿರುವದಾಗಿ ತೋರುತ್ತದೆ. ಅಂತೆಯೆ ಆತನು 'ಅನಾದಯ ಏವೈತಾ ವಿದ್ಯಾಃ ಸಂಕ್ಷೇಪ ವಿಸ್ತಾರ ವಿವಕ್ಷಯಾ ನವನವೀ ಭವಂತಿ, ತತ್ಕರ್ತೃಕಾಶ್ಚೋಚ್ಯಂತೇ'–ವಿದ್ಯೆಗಳೆಲ್ಲ ಅನಾದಿ, ಅವುಗಳನ್ನು ಸಂಕ್ಷೇಪಿಸಿ ಅಥವಾ ವಿಸ್ತರಿಸಿ ನಿರೂಪಿಸುವದರಿಂದ ಹೊಸವೆನಿಸುತ್ತವೆ ಮತ್ತು ಇದು ಈತನಕೃತಿ, ಅದು ಆತನ ಕೃತಿ, ಎನ್ನುತ್ತೇವೆ, ಎಂದು 'ಪ್ರಮಾಣಮೀಮಾಂಸೆ' ಎಂಬ ತನ್ನ ಗ್ರಂಥದಲ್ಲಿ ಸಮರ್ಥಿಸಿಕೊಂಡಿರುವನು.[3]

ಇನ್ನು ಭಾಷ್ಯಕಾರನ ವಿಚಾರ. ಈತನು ಜೈನ; ಹೇಮಚಂದ್ರನ ಸಮಕಾಲೀನ ಅಥವಾ ನಂತರದವ; ಆತನಲ್ಲಿ ಪೂಜ್ಯಭಾವನೆಯನ್ನು ತಳೆದವ; ಆತನ ಛಂದೋನುಶಾಸನದ ಪರಿಚಯವಿದ್ದವನೆಂಬುದರಲ್ಲಿ ಸಂದೇಹವಿಲ್ಲ. ಗಾಥೆ ಅಥವಾ ಗ್ರಂಥೋಕ್ತ ಲಕ್ಷಣಗಳಿಗೆ ಹೊಂದದಿರುವ ಪದ್ಯಗಳ ವಿಚಾರದಲ್ಲಿ ಇವನು ಉದಾಹರಿಸಿದ 'ಯುಧಿಷ್ಠಿರೋ ಧರ್ಮಮಯೋ' ಶ್ಲೋಕ ಹೇಮಚಂದ್ರನ ಛಂದೋನುಶಾಸನದಲ್ಲಿಯೂ ದೊರೆಯುತ್ತದೆ.[4] ಆದರೆ ಅಲ್ಲಿ ಇದು 'ಪರಜಾತಿ' ಅಂದರೆ ಬೇರೆಬೇರೆ ವೃತ್ತಗಳ ಪಾದಗಳಿಂದ (ಪಾದಾಕ್ಷರಗಳಲ್ಲಿ ಹೆಚ್ಚುಕಡಿಮೆ ಇದ್ದರೂ) ಸಿದ್ಧವಾದ ವೃತ್ತಗಳ ಲಕ್ಷ್ಯವಾಗಿದೆ. ಈ ಕಾರಣದಿಂದ ಮತ್ತು ಮಹಾಭಾರತದಂಥ ಪ್ರಾಚೀನ ಮತ್ತು ಸರ್ವಶ್ರುತ ಗ್ರಂಥದಲ್ಲಿಯ ಪದ್ಯವಿರುವದರಿಂದ ಇದೊಂದು ಆಕಸ್ಮಿಕ ಘಟನೆ ಎನ್ನಬಹುದು. ಹೀಗಿದ್ದರೆ ಇನ್ನೂ ಒಂದು ಉದಾಹರಣೆ ಇದೆ. ಛಂದಃಶಾಸ್ತ್ರದಲ್ಲಿ ಲಘು ಅಕ್ಷರದ ಮುಂದೆ ಒತ್ತಕ್ಷರವಿದ್ದರೆ ಆ ಲಘು, ಗುರುವಾಗುವದೆಂಬ ಸಾಮಾನ್ಯ ನಿಯಮವಿದೆ. ಆದರೆ ಒಮ್ಮೊಮ್ಮೆ ಅದು ಲಘುವಾಗಿಯೇ ಉಳಿಯುತ್ತದೆ. ರತ್ನಮಂಜೂಷೆಯಲ್ಲಿ ಇದನ್ನು ಕುರಿತಿರುವ ಸೂತ್ರಕ್ಕೆ ಭಾಷ್ಯಕಾರನು 'ಧನಂ ಪ್ರದಾನೇನ ಶ್ರುತೇನ ಕರ್ಣೌ....' ಎಂಬುದೊಂದು ನೀತಿಯನ್ನು ಉದಾಹರಿಸಿರುವನು.[5] ಇಲ್ಲಿ ಶ್ರುತೇನದ 'ಶ್ರು' ದ್ವಿತ್ವಾಕ್ಷರವಿದ್ದರೂ ಅದರ ಹಿಂದಣ ಪ್ರದಾನೇನದಲ್ಲಿಯ 'ನ' ಲಘುವಾಗಿಯೇ ಉಳಿದಿರುವದನ್ನು ತೋರಿಸಿರುವನು. ಹೇಮಚಂದ್ರನ ವಿವರಣೆ ಹೀಗೆಯೆ ಇದ್ದು ಇದೇ ಉದಾಹರಣೆ ಅಲ್ಲಿಯೂ ಇದೆ.[6]

---

1. ಜಯದಾಮನ್, ಮುನ್ನುಡಿ, ಪು. ೪೪.
2. ಹೇ. ಜೀ. ಚ. ಮುನ್ನುಡಿ, ಪು. ೧೫.
3. ಹೇ. ಕಾ. ಸಂ. ೨, ಪು. ೩೧೪.
4. ಹೇ. ಛಂ. ೨–೧೫೭೩
5. ರ. ಮಂ. ೧.೧೧
6. ಹೇ. ಛಂ. ೧–೭.೩

ಹೇಮಚಂದ್ರನು ಕುಶಲ ಸಂಗ್ರಹಕಾರನಿದ್ದುದರಿಂದ ಅವನೇ ಭಾಷ್ಯಕಾರನ ಈ ಉದಾಹರಣೆಗಳನ್ನು ಎತ್ತಿಕೊಂಡಿರಬಾರದೇಕೆ, ಎಂದು ಕೆಲವು ದೀರ್ಘದರ್ಶಿಗಳು ಪ್ರಶ್ನಿಸಬಹುದು. ಆದರೆ ಹೀಗಿರಲಾರದು. ಭಾಷ್ಯಕಾರನಿಗೆ ಹೇಮಚಂದ್ರನಲ್ಲಿ ಪೂಜ್ಯಬುದ್ಧಿ ಇದ್ದಿತು. ಜೈನಧರ್ಮದಲ್ಲಿ ಸರ್ವಜ್ಞಪದವು ಜಿನ ಅಥವಾ ತೀರ್ಥಂಕರರಿಗೆ ಅನ್ವಯಿಸುತ್ತದೆ. ಹೇಮಚಂದ್ರನನ್ನು 'ಕಲಿಕಾಲ ಸರ್ವಜ್ಞ' ಅಂದರೆ ಕಲಿಯುಗದ ಸರ್ವಜ್ಞ, ಜಿನ, ಅಥವಾ ಜಿನಸಮಾನ ಎಂದು ಜನ ಆತನಲ್ಲಿ ಪೂಜ್ಯಭಾವನೆಯನ್ನು ತಳೆದಿದ್ದಿತು. ಇವರಲ್ಲಿ ಭಾಷ್ಯಕಾರನೂ ಒಬ್ಬನೆಂಬುದು 'ಸ್ವಾಗತಾ' ವೃತ್ತಕ್ಕೆ ಆತನು ಉದಾಹರಿಸಿರುವ

> ಧರ್ಮ ತೀರ್ಥಕರ ಮುಖ್ಯ ನಮಸ್ತೇ ನಾಥ...ಭವಬೀಜ ನಮಸ್ತೆ।
> ಬುದ್ಧ ಸರ್ವಜನ ವೃತ್ತಸಮಸ್ತೇ ಹೇಮನಾಮ ಜಿನಮಾನ ನಮಸ್ತೇ॥ [1]

ಈ ಪದ್ಯದಿಂದ ಗೊತ್ತಾಗುತ್ತದೆ. ಒಂದೊಮ್ಮೆ ಹೇಮಚಂದ್ರನೇ ಭಾಷ್ಯಕಾರನಿಂದ ಮೇಲಿನ ಉದಾಹರಣೆಗಳನ್ನು ತೆಗೆದುಕೊಂಡಿದ್ದರೆ ಆತನು ಹೇಮಚಂದ್ರನಿಗಿಂತ ಮೊದಲಿನವನಾಗಬೇಕು. ಹೀಗಿದ್ದರೆ ಹೇಮಚಂದ್ರನ ಪ್ರತ್ಯಕ್ಷವಲ್ಲದಿದ್ದರೂ ಅಪ್ರತ್ಯಕ್ಷ ಸ್ತುತಿಯಿರುವ ಈ ಲಕ್ಷ್ಯ ಪದ್ಯಕ್ಕೆ ಅರ್ಥವಿಲ್ಲದಂತಾಗುವುದು. ಆದ್ದರಿಂದ ಅವನು ಹೇಮಚಂದ್ರನ ಸಮಕಾಲೀನ ಅಥವಾ ನಂತರದವ ಮತ್ತು ಆತನ ಛಂದೋನುಶಾಸನವನ್ನು ಬಲ್ಲವನೆಂದು ಭಾವಿಸುವದು ಸೂಕ್ತವಾಗುವದು.

ಸಮಕಾಲೀನನೆಂದು ಗ್ರಹಿಸಿ, ಇಮ್ಮಡಿ ನಾಗವರ್ಮ ಈ ಭಾಷ್ಯಕಾರನಿರಬಹುದೆಂಬ ಪ್ರತಿಪಾದನೆಗೆ ತೊಡಗುವ ಮೊದಲು ಇಮ್ಮಡಿ ನಾಗವರ್ಮ ಹೇಮಚಂದ್ರನ ಸಮಕಾಲೀನ, ಆತನ ಗ್ರಂಥಗಳ ಪರಿಚಯವಿದ್ದವನೆಂಬುದು ಸ್ಪಷ್ಟವಾಗಬೇಕು. ವಾದಗ್ರಸ್ತವಿರುವದರಿಂದ ಮೊದಲು ಈ ವಿಷಯದ ಚರ್ಚೆ ಅಗತ್ಯವಿದೆ.

ಹೇಮಚಂದ್ರನ ಕಾಲ ಕ್ರಿ.ಶ. ೧೦೮೯–೧೧೭೩.[2] ಗುಜರಾತ ಚಾಲುಕ್ಯ ವಂಶದ ಸಿದ್ಧರಾಜ–ಜಯಸಿಂಹ (ಕ್ರಿ.ಶ. ೧೦೯೪–೧೧೪೩)[3] ಮತ್ತು ಆತನ ನಂತರ ಪಟ್ಟಕ್ಕೆ ಬಂದ ಕುಮಾರಪಾಲನಿಗೆ (ಕ್ರಿ.ಶ. ೧೧೪೩–೧೧೭೩)[4] ಗುರುಸ್ಥಾನದಲ್ಲಿದ್ದನು. ಈತನ ಸಾಹಿತ್ಯಕ ಚಟುವಟಿಕೆಗಳಲ್ಲಿ ಸಿದ್ಧಹೇಮ, ಶಬ್ದಾನುಶಾಸನ ಮೊದಲಾದ ವ್ಯಾಕರಣ ಕೋಶಗ್ರಂಥಗಳು ಮೊದಲಿನವು. ಇವುಗಳ ರಚನೆ ಜಯಸಿಂಹನ ಆಳಿಕೆಯ ಕೊನೆಗೆ ಅಂದರೆ ಕ್ರಿ.ಶ. ೧೧೪೩ರ ಹೊತ್ತಿಗೆ ಮುಗಿದಿದ್ದಿತೆಂದು ತಿಳಿಯಲಾಗಿದೆ.[5]

---

1. ರ.ಮಂ. ೫.೩೦.
2. ಹೇ. ಕಾ. ಸಂ. ೧, ಮುನ್ನುಡಿ, ಪು. ೩೬, ೭೨.
3. ಅದೇ, ಪು. ೩೮ ಟಿಪ್ಪಣಿ, ೬೦.
4. ಅದೇ, ಪು. ೬೦, ೫೨.
5. ಅದೇ, ಪು. ೬೦.

ಆ ಮುಂದೆ ಕುಮಾರಪಾಲನು ಕ್ರಿ.ಶ. ೧೧೭೩ವರೆಗೆ ಆಳಿದನು. ಇವರೀರ್ವರ ಆಳಿಕೆ ಗುಜರಾತದ ಇತಿಹಾಸದಲ್ಲಿ ಉತ್ಕರ್ಷದ ಕಾಲವಿದ್ದಿತು. ಕುಮಾರಪಾಲನ ಆಳಿಕೆಯ ಪ್ರಾರಂಭದ ವರ್ಷಗಳಲ್ಲಿ ಕಾವ್ಯಾನುಶಾಸನ ಮತ್ತು ಛಂದೋನುಶಾಸನಗಳು ರಚಿತವಾದವು. ಇವುಗಳಲ್ಲಿ ಕಾವ್ಯಾನುಶಾಸನವು ಮೊದಲನೆಯದು.[1] ಅಂತೂ ಕ್ರಿ.ಶ. ೧೧೪೦-೪೪, ಈ ಗಡುವಿನಲ್ಲಿ ಆತನ ಕಾವ್ಯಾಂಗಚತುಷ್ಟಯದ ಎಲ್ಲ ಗ್ರಂಥಗಳರಚನೆಯಾಗಿತ್ತೆಂದು ಭಾವಿಸಬಹುದಾಗಿದೆ.

ಇಮ್ಮಡಿ ನಾಗವರ್ಮನ ಕಾಲ ಕ್ರಿ.ಶ. ೧೨ನೆಯ ಶತಮಾನದ ಉತ್ತರಾರ್ಧ ಅಂದರೆ ಸು. ೧೧೫೦-೧೨೦೦ ಎಂದು ಗ್ರಹಿಸಲಾಗಿದೆ. ಜನ್ನನು ತನ್ನ ಅನಂಥನಾಥ ಪುರಾಣದಲ್ಲಿ—

ಜನನಾಥಂ ಜಗದೇಕನಲ್ಲಿ ಕಟಕೋಪಾಧ್ಯಾಯನಾ ನಾಗವ
ರ್ಮನಿದಾನೀಂತನ ಶರ್ವವರ್ಮನೆ ಗಡಂ ಜನ್ನಂಗುಪಾಧ್ಯಾಯಂ ॥

—ಎಂಬೀ ಪದ್ಯದಲ್ಲಿ ನಾಗವರ್ಮನು ಜಗದೇಕಮಲ್ಲನೆಂಬುವನಿಗೆ ಕಟಕೋಪಾಧ್ಯಾಯನಿದ್ದನು, ಸುಪ್ರಸಿದ್ಧ ಕಾತಂತ್ರ ವ್ಯಾಕರಣಕಾರ ಶರ್ವನಷ್ಟೇ ಪರಿಣತನಾದ್ದರಿಂದ 'ಇದಾನೀಂತನ' ಅಂದರೆ 'ಅಭಿನವ ಶರ್ವವರ್ಮ'ನೆಂಬ ಬಿರುದು ಈತನಿಗಿದ್ದು ತನಗೆ (ಜನ್ನನಿಗೆ) ಉಪಾಧ್ಯಾಯನಾಗಿದ್ದನೆಂದಿರುವನು. ಈ ಜಗದೇಕನು ಕ್ರಿ.ಶ. ೧೧೩೮-೧೧೫೦ ವರೆಗೆ ಆಳಿದ ಜಗದೇಕ ಮಲ್ಲನೆಂದು ತಿಳಿದಿದೆ. ನಾಗವರ್ಮನು ಈತನಲ್ಲಿ ಸುಮಾರು ೧೧೪೫ರಲ್ಲಿ ಕಟಕೋಪಾಧ್ಯಾಯನಾಗಿರಬಹುದು ಮತ್ತು ಜಗದೇಕನ ನಂತರ ಬಹುದಿವಸ ಬದುಕಿದ್ದು ವಾರ್ಧಕದಲ್ಲಿ ಜನ್ನನಿಗೆ ಉಪಾಧ್ಯಾಯನಾಗಿರಬಹುದೆಂದು ಕವಿಚರಿತೆಕಾರರ ಅಭಿಪ್ರಾಯವಿದೆ.[2] ಗೋವಿಂದ ಪೈ ಈ ವಿಷಯವನ್ನು ಕೂಲಂಕಷವಾಗಿ ಚರ್ಚಿಸಿ, ನಾಗವರ್ಮನ ಕಾಲ ೧೧೨೦-೧೨೦೦, ಜನ್ನನ ಕಾಲ ೧೧೬೫-೧೨೪೫ ಎಂದು ತೀರ್ಮಾನಿಸಿರುವರು.[3]

ಹೇಮಚಂದ್ರನ ಕಾವ್ಯಾಂಗ ಚತುಷ್ಟಯದ ರಚನೆಯಕಾಲ (ಕ್ರಿ.ಶ. ೧೧೪೦-೧೧೪೮) ಮತ್ತು ಗೋವಿಂದಪೈ ನಿರ್ಧರಿಸಿದ ನಾಗವರ್ಮನ ಕಾಲ (ಕ್ರಿ.ಶ. ೧೧೨೦-೧೨೦೦) ವನ್ನು ಸಂಧಿಸಿನೋಡಿದರೆ ನಾಗವರ್ಮನು ಹೇಮಚಂದ್ರನ ಸಮಕಾಲೀನ ಮತ್ತು ಆತನ ಗ್ರಂಥಗಳನ್ನು ಪರಿಶೀಲಿಸಿ ಪ್ರಯೋಜನ ಪಡೆಯುವಷ್ಟು ಪ್ರಬುದ್ಧನಿದ್ದನೆಂಬುದು ಸ್ಪಷ್ಟವಾಗುವದು. ನಾಗವರ್ಮನ ಕಾಲದಬಗ್ಗೆ ಇರುವ ಕವಿಚರಿತೆಕಾರರ ಅಭಿಪ್ರಾಯ (ಕ್ರಿ.ಶ. ೧೧೪೫), ಈಚಿನವರಾದ ಮುಗಳಿ, ತೀ.ನಂ. ಶ್ರೀ. ಅವರ

1. ಹೇ. ಕಾ. ಸಂ. ೧, ಮುನ್ನುಡಿ, ಪು. ೮೨.
2. ಕ.ಕ.ಚ.ಸಂ. ೧, ಪು. ೧೪೫.
3. ಕ.ಸಾ.ಪ.ಸಂ. ೨೦-೨, ಪು. ೧೫೨-೧೬೭.

ಅಭಿಪ್ರಾಯಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸ ಕಂಡುಬರುತ್ತಿದ್ದರೂ, ಗೋವಿಂದಪೈ ನಿರ್ಧರಿಸಿದ ಗಡುವುಗಳಲ್ಲಿ ಇವು ಒಳಗೊಳ್ಳುತ್ತವೆ. ಮುಗಳಿ ಕ್ರಿ.ಶ. ೧೧೫೦ ಎಂದಿರುವರು.[1] ತೀ.ನಂ. ಶ್ರೀ ೧೨ ನೆಯ ಶತಮಾನದ ಮಧ್ಯ ಮತ್ತು ಉತ್ತರಾರ್ಧವೆಂದಿರುವರು.[2]

ಬಸವನಾಳ, ಕೇಪು ಸಂಪಾದಿಸಿದ ನಾಗವರ್ಮನ ಕಾವ್ಯಾವಲೋಕನದಲ್ಲಿ ಕವಿಸಮಯಕ್ಕಲ್ಲದೆ, ಗದ್ಯ, ಪದ್ಯ, ಮಿಶ್ರ, ಮೊದಲಾದ ಕಾವ್ಯಪ್ರಕಾರಗಳನ್ನು ಹೇಳುವಾಗ ಸಹ ಆತನು ಹೇಮಚಂದ್ರನನ್ನು ಅನುಸರಿಸಿರುವನೆಂದಿರುವರು.[3] ಕವಿ ಸಮಯವನ್ನು ವಿವೇಚಿಸಿದ ಗ್ರಂಥಗಳಲ್ಲಿ ರಾಜಶೇಖರನ (ಕ್ರಿ.ಶ. ೧೦ನೆಯ ಶತಮಾನ) ಕಾವ್ಯ ಮೀಮಾಂಸೆ ಮೊದಲಿನದಿದ್ದರೂ, ಕಾವ್ಯಾವಲೋಕನದ ವಿಷಯವಿವೇಚನಾ ಪದ್ಧತಿಯು ಹೇಮಚಂದ್ರನ ಅನುಸಾರವಾಗಿದೆ. ಆದ್ದರಿಂದ ಆತನು ಹೇಮಚಂದ್ರನ ಕಾವ್ಯಾನು ಶಾಸನವನ್ನೇ ಆಧಾರವಾಗಿಟ್ಟುಕೊಂಡಿದ್ದನೆಂದು ಹೇಳಬೇಕಾಗುವದು' ಎಂದಿರುವರು. ಸಂಸ್ಕೃತದಲ್ಲಿ ಕವಿ ಸಮಯವನ್ನು ಕುರಿತು ಬರೆದ ಅಮರಚಂದ್ರ, ವಾಗ್ಭಟ, ಮೊದಲಾದವರಲ್ಲಿ ನಾಗವರ್ಮನು ಅಮರ ಚಂದ್ರನ ಕಾವ್ಯಕಲ್ಪಲತೆಯ ಪ್ರಯೋಜನವನ್ನು ಪಡೆದಿರಬೇಕೆಂದು ಕವಿಚರಿತೆಕಾರರು ಪ್ರತಿಪಾದಿಸಿರುವರು[4] ಆದರೆ ಇತ್ತೀಚೆಯ ಶೋಧಗಳಿಂದ ಈ ಅಮರಚಂದ್ರ ನಾಗವರ್ಮನ ಅನಂತರದವನೆಂದು ಕಂಡುಬಂದಿದೆ, ಎಂದಿರುವರು ಬಸವನಾಳ—ಕೇಪು.[5]

ಕಾವ್ಯಾವಲೋಕನದ ಸೂತ್ರ ೨೪೮ರ ಕೆಳಗೆ ಬರುವ ಗದ್ಯಪದ್ಯಾದಿ ಕಾವ್ಯಭೇದಗಳನ್ನು ಕುರಿತಿರುವ ಟಿಪ್ಪಣಿಯಲ್ಲಿ ಭರತಮುನಿ ತನ್ನ ನಾಟ್ಯಶಾಸ್ತ್ರದಲ್ಲಿ, ನಾಟಕಗಳಲ್ಲಿ ಮುಖ, ಪ್ರತಿಮುಖ, ಅವಮರ್ಶ, ಗರ್ಭ, ನಿರ್ವಹಣವೆಂಬ ಐದು ಸಂಧಿಗಳಿರಬೇಕೆಂದಿರುವನು. ಮಹಾಕಾವ್ಯಕ್ಕಾದರೂ ಇವು ಬೇಕೆಂದು ಹೇಮಚಂದ್ರನ ಅಭಿಪ್ರಾಯವಿದ್ದು ನಾಗವರ್ಮನೂ ಇವುಗಳನ್ನು ಉಲ್ಲೇಖಿಸಿರುವನು, ಎಂದಿರುವರು, ಬಸವನಾಳ–ಕೇಪು.[6] ಮಹಾಕಾವ್ಯದ ವ್ಯಾಖ್ಯೆಯಲ್ಲಿ ಈ ಸಂಧಿಗಳ ಆವಶ್ಯಕತೆಯನ್ನು ಹೇಳಿರುವದು ಹೇಮಚಂದ್ರನ ವೈಶಿಷ್ಟ್ಯವೆಂದು ಆತನ ಕಾವ್ಯಾನುಶಾಸನವನ್ನು ಸಂಪಾದಿಸಿದ ಪಾರೀಖ ಕುಲಕರ್ಣಿ ಅಭಿಪ್ರಾಯಪಟ್ಟಿರುವರು.[7]

---

1. ಕ,ಸಾ.ಚ. ಪು. ೮೩.
2. ಭಾ. ಕಾ. ಮೀ. ಪು. ೪೭೪.
3. ಕಾ.ಲೋ. ೨. ಮುನ್ನುಡಿ, ಪು. ೬.
4. ಕಾ.ಲೋ. ೧, ಮುನ್ನುಡಿ, ಪು. ೩೪.
5. ಕಾ. ಲೋ. ೨, ಮುನ್ನುಡಿ, ಪು. ೬; ಗೋವಿಂದಪೈ, ಕ. ಸಾ. ಪ. ಸಂ. ೨೦೨, ಪು. ೧೬೮.
6. ಕಾ.ಲೋ. (೨), ಪು. ೩೫೧.
7. ಹೇ. ಕಾ. ಸಂ. ೨, ಪು. ೨೬೭.

ಸಂಸ್ಕೃತ ಕಾವ್ಯಗಳಲ್ಲಿ ಆಗಾಗ ದೇಶ—ಕಾಲ—ಕಲಾ—ಲೋಕ—ನ್ಯಾಯ—ಆಗಮಗಳಿಗೆ ವಿರುದ್ಧವಿರುವ ವರ್ಣನೆಗಳು ಬರುತ್ತವೆ. ರಾಜಶೇಖರನ ಪೂರ್ವಿಕರು ಎಂದರೆ ದಂಡಿ ಮೊದಲಾದವರು ಇವುಗಳನ್ನು ಕಾವ್ಯದೋಷಗಳಲ್ಲಿ ಎಣಿಸಿರುವರು. ಉದಾಹರಣೆಗಾಗಿ ಮುತ್ತುಗಳು ಹಲವೆಡೆಗಳಲ್ಲಿ ದೊರೆಯುತ್ತಿದ್ದರೂ ತಾಮ್ರಪರ್ಣಿ ನದಿಯಲ್ಲಿ ಮಾತ್ರ ದೊರೆಯುತ್ತವೆಂದು ಕವಿಗಳು ವರ್ಣಿಸುವುದುಂಟು. ಇದು ನಿಜಸ್ಥಿತಿಗೆ ವಿರುದ್ಧವಾಗಿದ್ದರೂ, ಈ ವರ್ಣನೆ ಪರಂಪರಾಗತವಿರುವುದರಿಂದ ಮತ್ತು ಯಾವುದೋ ಒಂದು ಕಾಲದಲ್ಲಿ ಇದೇ ನಿಜವಿರಬಹುದಾದ್ದರಿಂದ ಈ ವರ್ಣನೆ ಗ್ರಾಹ್ಯವೆಂದೆಣಿಸಬೇಕು; ದೋಷವೆನ್ನಲಾಗದು, ಎಂಬುದು ರಾಜಶೇಖರನ ಭೂಮಿಕೆ. ಈ ಬಗೆಯ ವರ್ಣನೆಗಳಿಗೆ ಕವಿಸಮಯಗಳೆಂದು ಹೆಸರಿಸಿ ತನ್ನ ಗ್ರಂಥದಲ್ಲಿ ವಿಸ್ತಾರವಾಗಿ ಚರ್ಚಿಸಿರುವನು. ವಿಷಯ ಪ್ರತಿಪಾದನೆಗಾಗಿ, ಸ್ವರ್ಗ್ಯ, ಭೌಮ, ಪಾತಾಲೀಯ ಎಂಬ ಮೂರು ವರ್ಗಗಳನ್ನು ಕಲ್ಪಿಸಿ, ಇವುಗಳಲ್ಲಿ ಭೌಮ ಅಥವಾ ಪೃಥ್ವಿಗೆ ಸಂಬಂಧಿಸಿದ ವರ್ಣನೆಗಳು ಮುಖ್ಯವೆಂದಿರುವನು. ಅನಂತರ ಪೃಥ್ವಿಗೆ ಸಂಬಂಧಿಸಿ ಜಾತಿ, ಗುಣ, ದ್ರವ್ಯ, ಕ್ರಿಯಾ (ಅರ್ಥವಶಾತ್) ಎಂಬ ನಾಲ್ಕು ಭಾಗಗಳನ್ನು ಮಾಡಿ ಪ್ರತಿಯೊಂದರ ಕೆಳಗೆ ಅಸತ್, ಸತ್, ನಿಯಮ ಎಂಬ ಮೂರು ಉಪಭಾಗಗಳನ್ನು ಮಾಡಿರುವನು ಮತ್ತು ಪ್ರತಿಯೊಂದು ಉಪವಿಭಾಗದ ಕೆಳಗೆ ಅದಕ್ಕೆ ಸಂಬಂಧಿಸಿದ ವಿವಿಧ ಕವಿಸಮಯಗಳನ್ನು ವರ್ಣಿಸಿರುವನು.[1] ಹೇಮಚಂದ್ರನು ಸ್ವರ್ಗಾದಿ ವರ್ಣನೆಗಳನ್ನು ಹೊಡೆದು ಹಾಕಿ, ಅಸತ್, ಸತ್, ಮತ್ತು ನಿಯಮ ಈ ಮೂರು ಉಪಭಾಗಗಳನ್ನು ಮುಖ್ಯವೆಂದೆಣಿಸಿ, ಇವುಗಳಲ್ಲಿಯೆ ಜಾತಿ, ಗುಣಾದಿಗಳು ಅಡಕವಾಗುತ್ತವೆಂದು ಹೇಳಿ, ಇದಕ್ಕನುಸಾರವಾಗಿ ಕವಿ ಸಮಯಗಳನ್ನು ನಿರೂಪಿಸಿರುವನು. ನಾಗವರ್ಮ ಸಹ ಇದೇ ಮಾರ್ಗವನ್ನು ಅನುಸರಿಸಿರುವನು. ಭೇದವಿಷ್ಟೇ–ನಾಗವರ್ಮನು ರಾಜಶೇಖರನಂತೆ ಇವುಗಳಿಗೆ ಒಂದು ಪ್ರತ್ಯೇಕ ಅಧ್ಯಾಯವನ್ನು ಮೀಸಲಾಗಿಸಿರುವನು; ಹೇಮಚಂದ್ರನು ಆನುಷಂಗಿಕವಾಗಿ ವಿವರಿಸಿರುವನು.

ಕವಿ ಸಮಯ ನಿರೂಪಣೆಗೆ ರಾಜಶೇಖರನು ಅನುಸರಿಸಿದ ರೀತಿ ತೊಡಕಿನದೆಂಬುದು ಸಾಮಾನ್ಯರಿಗೆ ಕೂಡ ಹೊಳೆಯುವಂತಿರುವುದರಿಂದ, ಹೇಮಚಂದ್ರನು ಅನುಸರಿಸಿದ ರೀತಿಯಲ್ಲಿ ಹೇಳಿಕೊಳ್ಳುವಂಥದೇನೂ ಇಲ್ಲ. ವಿಷಯ ಸಂಗ್ರಹಕ್ಕಾಗಿ ಅನ್ಯರು ಸಹ ಅವನ ನೆರವಿಲ್ಲದೆ ಹೀಗೆ ಮಾಡಬಹುದಾಗಿದೆ. ಆದ್ದರಿಂದ ಕವಿ ಸಮಯದ ನಿರೂಪಣೆಗಾಗಿ ನಾಗವರ್ಮನು ಹೇಮಚಂದ್ರನನ್ನು ಅನುಸರಿಸಿರುವನೆಂಬುದಕ್ಕೆ ಇದು ಸಬಲ ಕಾರಣವಾಗದು. ಮಹಾಕಾವ್ಯಗಳಲ್ಲೂ ನಾಟಕಗಳಲ್ಲಿರುವಂತೆ ಮುಖ ಪ್ರತಿಮುಖಾದಿಸಂಧಿಗಳ ಆವಶ್ಯಕತೆಯನ್ನು ಹೇಳಿರುವದು ಹೇಮಚಂದ್ರನ ವೈಶಿಷ್ಟ್ಯ; ನಾಗವರ್ಮನೂ ಹೀಗೆಯೆ ಮಾಡಿರುವನೆಂಬುವಲ್ಲಿಯೂ

1. ಕಾ. ಮೀ. ಅಧ್ಯಾಯ ೧೪.

ಅಷ್ಟೊಂದು ಬಲವಿಲ್ಲ. ಏಕೆಂದರೆ ಭಾಮಹ ದಂಡಿಗಳೂ ಇದನ್ನು ಹೇಳಿರುವರು. 'ವಾಮನನುಂ ರುದ್ರಟನುಂ ಭಾಮಹನುಂ ದಂಡಿಯುಂ ಮನಂಗೊಳೆ ಪೇಳ್ದಂತೀ ಮಹಿಗೆ' ಪದ್ಯದಲ್ಲಿ ಭಾಮಹಾದಿಗಳ ನೆರವು ಪಡೆದಿರುವದಾಗಿ ನಾಗವರ್ಮನೇ ಹೇಳಿರುವನು.[1]

ಮುಖಪ್ರತಿಮುಖಾದಿ ಸಂಧಿಗಳ ವಿಷಯದಲ್ಲಿ ಭಾಮಹ, ಮಹಾಕಾವ್ಯವು 'ಪಂಚಭಿಃ ಸಂಧಿಭಿರ್ಯುಕ್ತಂ' ಐದು ಸಂಧಿಗಳಿಂದ ಕೂಡಿರಬೇಕೆಂದಿರುವನು.[2] ದಂಡಿ 'ಸರ್ಗೈರನತಿ ವಿಸ್ತೀರ್ಣೈಃ ಶ್ರವ್ಯವೃತ್ತೈಃ ಸುಸಂಧಿಭಿಃ" ಎಂದಿರುವನು.[3]

ನಾಗವರ್ಮನು ಹೇಮಚಂದ್ರನನ್ನು ಅನುಸರಿಸುವನೆಂಬುದಕ್ಕೆ ಬಸವನಾಳ-ಕೇಪು ಇನ್ನೊಂದು ಕಾರಣವನ್ನು ಸೂಚಿಸಿರುವರು. ಕಾವ್ಯ ಪ್ರಕಾರಗಳಲ್ಲಿ ಮಹಾ ಕಾವ್ಯ, ಚಂಪು ಮೊದಲಾದುವುಗಳೊಡನೆ ಪಾಡು, ಪಾಡುಗಬ್ಬ, ಬಾಜನೆಗಬ್ಬ ಮೊದ ಲಾದ ಕನ್ನಡ ಗೇಯಬಂಧಗಳನ್ನು ನಾಗವರ್ಮನು ಉಲ್ಲೇಖಿಸಿರುವನೆಂಬುದು ಆ ಸೂಚನೆಯ ತಳಹದಿ. ಆದರೆ ವಸ್ತುಸ್ಥಿತಿ ಹೀಗಿಲ್ಲ. ಹೇಮಚಂದ್ರನು ಕಾವ್ಯವನ್ನು ದೃಶ್ಯ, ಶ್ರವ್ಯ ಎಂದು ವಿಭಜಿಸಿ, ದೃಶ್ಯದಲ್ಲಿ ಪಾಠ್ಯ, ಗೇಯ ಮತ್ತು ಶ್ರವ್ಯದಲ್ಲಿ ಮಹಾಕಾವ್ಯ, ಕಥಾ, ಆಖ್ಯಾಯಿಕಾ, ಚಂಪು, ಮುಕ್ತಕ, ಕುಲಕ ಮೊದಲಾದುವನ್ನು ಹೇಳಿರುವನು. ದೃಶ್ಯದಲ್ಲಿ ಕಲ್ಪಿಸಲಾದ ಪಾಠ್ಯವರ್ಗದಲ್ಲಿ ನಾಟಕಾದಿ ಸುಪರಿಚಿತ ದಶರೂಪಕಗಳನ್ನು ಹೆಸರಿಸಿರುವನು. ಗೇಯದಲ್ಲಿ ಡೋಂಬಿಕಾ ಮೊದಲಾದ ದೇಶಿ ರೂಪಕಗಳನ್ನು ಹೇಳಿರುವನು.[4] ನಾಗವರ್ಮನು ದೃಶ್ಯಕಾವ್ಯಗಳನ್ನು ಉಲ್ಲೇಖಿಸಿಲ್ಲ. ಆದರೂ ಡೋಂಬಿಕಾದಿಗಳು ರೂಪಕಗಳಿದ್ದರೂ ಗಾನಭೂಯಿಷ್ಠ ; ಪಾಡು ಮೊದ ಲಾದುವು ರೂಪಕಗಳಲ್ಲವಾದರೂ ಗೇಯಬಂಧ ಅಥವಾ ಗಾನಗಳು ; ಆದ್ದರಿಂದ ಇವೆ ರಡೂ ಒಂದಕ್ಕೊಂದು ಸಂಬಂಧಿಸಿವೆ, ಎಂದು.ಪ್ರತಿಪಾದಿಸಿ, ನಾಗವರ್ಮನು ಇಲ್ಲಿ ಹೇಮಚಂದ್ರನ ದಾರಿಯಲ್ಲಿ ಸಾಗಿರುವನು, ಎಂದು ಸೂಚಿಸಿರುವರು ಬಸವನಾಳ-ಕೇಪು.[5] ಆದರೆ ಇದು ಸಮಂಜಸವಾಗದು. ಒಂದು ರೂಪಕ ಅತ ಏವ ದೃಶ್ಯ ; ಇನ್ನೊಂದು ಕೇವಲ ಶ್ರವ್ಯ. ಎರಡರಲ್ಲೂ ದೇಶೀಗೇಯ ಬಂಧಗಳಿಗೆ ಪ್ರಾಧಾನ್ಯವಿದೆ ಯೆಂಬ ಒಂದೇ ಒಂದು ಕಾರಣದಿಂದ ಒಂದನ್ನು ಇನ್ನೊಂದರಲ್ಲಿ ಸೇರಿಸುವಂತಿಲ್ಲ. ಕನಿಷ್ಠ ಶಾಸ್ತ್ರದಮಟ್ಟಿಗಾದರೂ ಇದು ಅಗ್ರಾಹ್ಯ. ಕೇಶಿರಾಜನಿಗಿದ್ದ 'ಕರ್ನಾಟಕ ಲಕ್ಷಣ ಶಿಕ್ಷಾಚಾರ್ಯ'ನೆಂಬ ಬಿರುದನ್ನು ನಾಗವರ್ಮನಿಗೆ ಅನ್ವಯಿಸಿರುವರು, ತೀ.ನಂ.ಶ್ರೀ. ಇಂಥವನು ಹೀಗೆಂದಿಗೂ ಮಾಡಲಾರ.

---

1. ಕಾ. ಲೋ. ಪದ್ಯ ೯೬೧.
2. ಕಾವ್ಯಾಲಂಕಾರ, ೧.೨೦.
3. ಕಾವ್ಯಾದರ್ಶ, ೧.೧೮.
4. ಹೇ. ಕಾ. ಅಧ್ಯಾಯ ೮.
5. ಕಾ. ಲೋ. (೨) ಪು. ೩೫೦.

ನಾಗವರ್ಮನು ಹೇಮಚಂದ್ರನನ್ನು ಅನುಸರಿಸಿರುವನು; ಅತ ಏವ ಅವನು ಹೇಮಚಂದ್ರನ ಸಮಕಾಲೀನ; ಆತನ ಗ್ರಂಥಗಳ ನೆರವು ಪಡೆದವ ಎಂಬುದಕ್ಕೆ ಇವರಿರ್ವರ ಕವಿಸಮಯ ಮತ್ತು ಕಾವ್ಯಪ್ರಕಾರಗಳ ನಿರೂಪಣೆಯಲ್ಲಿರುವ ಹೋಲಿಕೆ ಏಕಮೇವಕಾರಣ, ಆದರ ಅವಸ್ಥೆಯೇ ಇಂತಿದ್ದ ಬಳಿಕ, ರತ್ನಮಂಜೂಷೆಯ ಭಾಷ್ಯಕಾರ ನಾಗವರ್ಮನಿರಬಹುದೆಂಬ ಈ ಪ್ರತಿಪಾದನೆಯ ಅಂಗವಾಗಿ ಇದನ್ನೇ ಸಾಧಿಸ ಹೊರಟ ಯತ್ನ ಇಲ್ಲಿಯೇ ಕುಸಿದುಬಿದ್ದಂತಾಯಿತು. ಆದ್ದರಿಂದ ಇನ್ನೂ ಒಳಹೊಕ್ಕು ನೋಡಬೇಕು.

ನಾಗವರ್ಮನು ಹೇಮಚಂದ್ರನ ಸಮಕಾಲೀನನೆಂಬುದನ್ನು ಅನ್ಯಕಾರಣಗಳಿಂದ ಈ ಮೊದಲೆ ವಿಶದಪಡಿಸಲಾಗಿದೆ. ಅವನು ಹೇಮಚಂದ್ರನಿಂದ ಸ್ಫೂರ್ತಿಯನ್ನು ಪಡೆದಿದ್ದನು; ಅವನ ಕಾವ್ಯಾವಲೋಕನಾದಿಗ್ರಂಥಗಳನ್ನು ಬಲ್ಲವನಿದ್ದನೆಂಬುವಲ್ಲಿ ಸಂದೇಹವಿಲ್ಲ. ನಾಗವರ್ಮನು ಹೇಮಚಂದ್ರನಿಂದ ಪಡೆದ ಸ್ಫೂರ್ತಿಸ್ಥಾನ ಆತನ ಗ್ರಂಥಗಳಲ್ಲಿಲ್ಲ. ಅದು ಆತನ ಖ್ಯಾತಿ ಮತ್ತು ಕಾವ್ಯಾಂಗ ಚತುಷ್ಟಯಕ್ಕೆ ಸಂಬಂಧಿಸಿ ಒಂದೊಂದು ಗ್ರಂಥವನ್ನು ರಚಿಸಬೇಕೆಂಬ ಆತನ ಸಂಕಲ್ಪದಲ್ಲಿ ಮತ್ತು ಆ ರೀತಿ ಕೃತಕೃತ್ಯನಾಗಿರುವದರಲ್ಲಿದೆ. 'ಕಲಿಕಾಲ ಸರ್ವಜ್ಞ' ನೆನಿಸಿಕೊಂಡ ಹೇಮಚಂದ್ರನ ಮಟ್ಟಕ್ಕೇರದಿದ್ದರೂ, ನಾಗವರ್ಮನು ತನ್ನ ಸುವಿಖ್ಯಾತ ಶಿಷ್ಯ ಜನ್ನನಿಂದ 'ಬಹುಜ್ಞ' ಎನಿಸಿಕೊಂಡಿರುವನು.[1] ಅರ್ಥವ್ಯಾಪ್ತಿಯಲ್ಲಿ 'ಸರ್ವಜ್ಞ' 'ಬಹುಜ್ಞ' ಗಳಲ್ಲಿ ಬಹಳ ಅಂತರವಿಲ್ಲೆಂಬುದನ್ನು ಬೇರೆ ಹೇಳಬೇಕಿಲ್ಲ. ಹೇಮಚಂದ್ರನಂತೆ ನಾಗವರ್ಮನೂ ಕಾವ್ಯಾಂಗ ಚತುಷ್ಟಯದ ಒಂದೊಂದು ಅಂಗವನ್ನು ಕುರಿತು ಒಂದೊಂದು ಗ್ರಂಥವನ್ನು ರಚಿಸಿ ಕೃತಕಾರ್ಯನಾಗಿರುವನು. ಸಂಸ್ಕೃತ ಮತ್ತು ಇತರ ಭಾರತೀಯ ಸಾಹಿತ್ಯ ಚರಿತ್ರೆಯಲ್ಲಿ ಈ ರೀತಿ ಗ್ರಂಥಗಳನ್ನು ರಚಿಸಿದವರು ಇವರಿಬ್ಬರೇ. ಈ ಸಂದರ್ಭದಲ್ಲಿ ಮುಗಳಿಯವರ 'ಕವಿರಾಜಮಾರ್ಗಕಾರನು ಬರೀ ಅಲಂಕಾರಶಾಸ್ತ್ರಕ್ಕೆ, ೧ನೆಯ ನಾಗವರ್ಮನು ಬರೀ ಛಂದಸ್ಸಿಗೆ ಆದ್ಯರಾಗಿ ಹೋದರು. ಆದರೆ ಕಾವ್ಯಾಂಗ ಪರವಾದ ಸಮಗ್ರ ಗ್ರಂಥ ರಚನೆಗೆ ವಿಶೇಷವಾಗಿ ವ್ಯಾಕರಣ ಶಾಸ್ತ್ರಕ್ಕೆ ೨ನೆಯ ನಾಗವರ್ಮ ಮೊದಲಿಗ' ನೆಂಬ ಉಕ್ತಿ ಯಥಾರ್ಥವಿದೆ.[2]

ನಾಗವರ್ಮನ ಕಾವ್ಯಾವಲೋಕನದ ಕವಿಸಮಯಾಧಿಕರಣದಲ್ಲಿ ಉದ್ಧೃತವಾದ ಪದ್ಯಗಳಲ್ಲಿ ಆರು ಪದ್ಯಗಳಿಗೆ ಮಾತೃಕೆ ಅಥವಾ ಸಂವಾದಿಯಾಗಿರುವ ಪದ್ಯಗಳು ಹೇಮಚಂದ್ರನ ಕಾವ್ಯಾನುಶಾಸನದಲ್ಲೂ ದೊರೆಯುತ್ತವೆ. ಇವುಗಳಲ್ಲಿ ೪ ರಾಜಶೇಖರನ ಕಾವ್ಯಮೀಮಾಂಸೆಯ ಇದೇ ಅಧಿಕರಣದಲ್ಲಿವೆ. ಹೇಮಚಂದ್ರ, ನಾಗವರ್ಮ ಇಬ್ಬರೂ ರಾಜಶೇಖರನ ನೆರವು ಪಡೆದಿರಬಹುದೆಂಬದೊಂದು ಅಭಿಪ್ರಾಯವಿದೆ.[3]

1. ಕ. ಕ. ಚ. ಸಂ, ೧, ಪು. ೧೪೪–ಜನ್ನನ ಅನಂತನಾಥ ಪುರಾಣದ ಉಪಕ್ರಮಣಿಕೆ
2. ಕ. ಸಾ. ಚ. ಪು. ೧೪೬
3. ಕ. ಸಾ. ಪ. ಸಂ. ೨೦-೨, ಪು. ೧೭೧–ಗೋವಿಂದಪೈ

ಆದ್ದರಿಂದ ಈ ನಾಲ್ಕು ಪದ್ಯಗಳು ಪ್ರಕೃತ ಪ್ರತಿಪಾದನೆಗೆ ಪೋಷಕವಾಗಲಾರವು. ಉಳಿದೆರಡು ಪದ್ಯಗಳು ಹೇಮಚಂದ್ರ ನಾಗವರ್ಮ ಇವರಿರ್ವರ ಕೃತಿಗಳಲ್ಲಿ ಮಾತ್ರ ದೊರೆಯುತ್ತವೆ. ಇವುಗಳಲ್ಲಿ ಒಂದನ್ನು ಅಂದರೆ ' ಯದಿಂದೋರನ್ವೇತಿ ' ಪದ್ಯವನ್ನು ಹೇಮಚಂದ್ರನು ಐಕ್ಯವೆಂಬ ಕವಿ ಸಮಯಕ್ಕೆ ಉದಾಹರಿಸಿರುವನು.[1] ಇದನ್ನೇ ನಾಗ ವರ್ಮನು ' ಪಾರಾವಾರಂ ತುಹಿನಕಿರಣಂ ' ಎಂದು ಮಂದಾಕ್ರಾಂತದಲ್ಲಿ ಕನ್ನಡಿಸಿ ಇದೇ ಸಂದರ್ಭದಲ್ಲಿ ಉದಾಹರಿಸಿರುವನು.[2] ಎರಡನೇ ಪದ್ಯ 'ಏಕೇ ನಾಕ್ಷ್ಣಾಪ್ರವಿತತ ತರುಷಾ' ಎಂಬ ಸುಭಾಷಿತ. ಇದನ್ನು ಹೇಮಚಂದ್ರನು ದೋಷಪ್ರಕರಣದಲ್ಲಿ ರಸಪ್ರಾತಿ ಕೂಲ್ಯವೆಂಬ ದೋಷಕ್ಕೆ ಉದಾಹರಣೆಯಾಗಿ ಕೊಟ್ಟಿರುವನು.[3] ನಾಗವರ್ಮನು ಇದನ್ನು ' ನೆರೆವನ್ನಂ ರವಿನಿಲ್ಲದಸ್ತಗಿರಿಯಂ' ಎಂದು ಮತ್ತೇಭವಿಕ್ರೀಡಿತದಲ್ಲಿ ಕನ್ನಡಿಸಿ ಅಸದಖ್ಯಾತಿ ಎಂಬ ಕವಿ ಸಮಯಕ್ಕೆ ಉದಾಹರಿಸಿರುವನು.[4] ಕವಿ ಸಮಯವಾದರೂ ಒಂದು ದೋಷ, ಆದರೆ ಗ್ರಾಹ್ಯದೋಷ ಮತ್ತು ಹೇಮಚಂದ್ರ ನಾಗವರ್ಮ ಉದಾ ಹರಣೆಯೆಂದು ಕೊಟ್ಟಿರುವ ಎರಡೂ ಸಂದರ್ಭಗಳಿಗೆ ಈ ಪದ್ಯ ಹೊಂದುತ್ತದೆಂಬುದನ್ನು ಇಲ್ಲಿ ಲಕ್ಷಿಸಬೇಕು.

ಮಹಾಕಾವ್ಯದಲ್ಲೂ ದೃಶ್ಯಕಾವ್ಯದಲ್ಲಿರುವಂತೆ ಮುಖ ಪ್ರತಿಮುಖಾದಿ ೫ ಸಂಧಿ ಗಳಿರಬೇಕೆಂದು ಹೇಳಿರುವದು ಹೇಮಚಂದ್ರನ ವೈಶಿಷ್ಟ. ನಾಗವರ್ಮನಾದರೂ ಹೀಗೆಯೆ ನಿರೂಪಿಸಿರುವನು, ಎನ್ನುವುದಕ್ಕೂ, ಒಂದು ಹಿನ್ನೆಲೆ ಇದೆ. ನಾಗವರ್ಮನು ಈ ಸಂಧಿಗಳೊಂದಿಗೆ ಬೀಜ, ಬಿಂದು, ಪತಾಕಾ, ಪ್ರಕರೀ, ಕಾರ್ಯವೆಂಬ ೫ ಸಂಧ್ಯಂಗ ಗಳನ್ನು ಹೇಳಿರುವನು. ಲಕ್ಷಣ ಗ್ರಂಥಗಳಲ್ಲಿ ಆತನ ಈ ಸಂಧ್ಯಂಗಗಳು ಅರ್ಥಪ್ರಕೃತಿ ಗಳೆಂದು ಉಕ್ತವಾಗಿವೆ. ಹೇಮಚಂದ್ರನು ಇವುಗಳನ್ನು ಪ್ರತ್ಯೇಕವಾಗಿ ಹೇಳಿಲ್ಲ.

ಸಾಮಾನ್ಯವಾಗಿ ಕಥೆ ಅಥವಾ ನಾಟಕದ ವಸ್ತುವಿನ ವಿಕಾಸದಲ್ಲಿ ೫ ಹಂತಗಳಿ ರುತ್ತವೆ. ಯಾವುದೊಂದು ಮೂಲಭೂತ ಘಟನೆ ಅಥವಾ ಅದರ ಸೂಚನೆಯೊಂದಿಗೆ ಕಥೆ ಅಥವಾ ನಾಟಕ ಪ್ರಾರಂಭವಾಗುತ್ತದೆ. ಲಾಕ್ಷಣಿಕರು ಇದಕ್ಕೆ ' ಬೀಜ ' ಎಂದಿ ರುವರು. ಮುಂದೆ ನೀರಿನ ಮೇಲೆ ಬಿದ್ದ ಎಣ್ಣೆಯತೊಟ್ಟಿನಂತೆ ಬೀಜರೂಪೀ ಕಥೆ ಹಬ್ಬುತ್ತದೆ. ಇದು ' ಬಿಂದು.' ಕಥೆ ಹಬ್ಬುತ್ತಿರುವಾಗ ಅದಕ್ಕೆ ಸಹಾಯಕವಾಗಿ ಬರುವ ಉಪಕಥೆ ಪ್ರಾಸಂಗಿಕ ವೃತ್ತಾಂತಗಳಿಗೆ ' ಪತಾಕಾ ' ' ಪ್ರಕರೀ ' ಎನ್ನು ವರು. ಕಥೆಯ ಪರಿಣಾಮ ಅಥವಾ ಫಲಕ್ಕೆ ' ಕಾರ್ಯ ' ಎನ್ನುವರು.

ಈ ೫ ಅರ್ಥ ಪ್ರಕೃತಿಗಳಿಗೆ ಹೊಂದಿಕೊಂಡು ಕಥಾನಾಯಕನು ಕಾರ್ಯ ಪ್ರವೃತ್ತನಾಗುತ್ತಾನೆ. ಇಲ್ಲಿಯೂ ೫ ಹಂತಗಳಿವೆ. ಇವುಗಳಿಗೆ ಅವಸ್ಥೆಗಳೆನ್ನುವರು.

---

1. ಹೇ. ಕಾ. ಪದ್ಯ ೧೦೭–ವಿವೇಕ
2. ಕಾ. ಲೋ. ಪದ್ಯ ೯೧೦
3. ಹೇ. ಕಾ. ಪದ್ಯ ೧೯೧–ವಿವೇಕ
4. ಕಾ. ಲೋ. ಪದ್ಯ ೮೫೭

'ಆರಂಭ' ವೆಂಬ ಮೊದಲನೆಯ ಅವಸ್ಥೆಯಲ್ಲಿ ನಾಯಕನು ಮುಖ್ಯ ಕಾರ್ಯ ಸಾಧನೆಯಲ್ಲಿ ತನಗಿರುವ ಆಸಕ್ತಿಯನ್ನು ತೋರಿಸುತ್ತಾನೆ. ಆ ಕಾರ್ಯ ಸಾಧನೆಗೆ ಉದ್ಯುಕ್ತನಾಗುವದು 'ಯತ್ನ' ವೆಂಬ ಎರಡನೆಯ ಅವಸ್ಥೆ. ಮೂರು ನಾಲ್ಕನೆಯ ಅವಸ್ಥೆಗಳಿಗೆ 'ಪ್ರಾಪ್ತ್ಯಾಶೆ' 'ನಿಯತಾಪ್ತಿ' ಎನ್ನುವರು. ಇಲ್ಲಿ ಫಲಪ್ರಾಪ್ತಿಯ ಸಂಭವ ಕಂಡುಬರುವದು ಮತ್ತು ಅದು ಹೆಚ್ಚು ದೃಢವಾಗವುದು. 'ಫಲಾಗಮ' ವೆಂಬ ಕೊನೆಯ ಅವಸ್ಥೆಯಲ್ಲಿ ಕಾರ್ಯಸಿದ್ಧಿಸುವುದು.

ಅರ್ಥ ಪ್ರಕೃತಿ ಮತ್ತು ಅವಸ್ಥೆಗಳು ಸೇರಿ ಮುಖಾದಿ ೫ ಸಂಧಿಗಳಾಗುತ್ತವೆ. ಮುಖಸಂಧಿಯಲ್ಲಿ ಕಥೆ ಇನ್ನೂ ಬೀಜರೂಪದಲ್ಲಿರುತ್ತದೆ. ನಾಯಕನು ಕಾರ್ಯ ಪ್ರವೃತ್ತನಾಗುತ್ತಾನೆ. ಪ್ರತಿಮುಖಸಂಧಿಯಲ್ಲಿ ಕಥೆ ಸ್ವಲ್ಪ ಬೆಳೆದು ನಾಯಕನು ಕಾರ್ಯಸಾಧನೆಗಾಗಿ ಯತ್ನಿಸುತ್ತಿರುತ್ತಾನೆ. ಗರ್ಭಸಂಧಿಯಲ್ಲಿ ಫಲಪ್ರಾಪ್ತಿಯ ಸೂಚನೆ ತೋರುತ್ತದೆ. ಅವಮರ್ಶ ಸಂಧಿಯಲ್ಲಿ ಫಲಪ್ರಾಪ್ತಿಯ ಬಗ್ಗೆ ನಿರಾಶೆಯೇ ಹೆಚ್ಚು ತೋರುವುದು. ಕೊನೆಯದಾದ ನಿರ್ವಹಣ ಸಂಧಿಯಲ್ಲಿ ಫಲಪ್ರಾಪ್ತಿಗೆ ಅನುಕೂಲ ಪರಿಸ್ಥಿತಿ ಉಂಟಾಗಿ ನಾಯಕನು ಕೃತಕಾರ್ಯನಾಗುತ್ತಾನೆ.[1]

ಅರ್ಥಪ್ರಕೃತಿ ಮತ್ತು ಅವಸ್ಥೆಗಳಿಂದ ಯುಕ್ತವಾದ ಈ ೫ ಸಂಧಿಗಳಿಗೆ ಉಪಕ್ಷೇಪಾದಿ ೬೪ ಸಂಧ್ಯಂಗಗಳಿರುತ್ತವೆ. ಮೊದಲನೆಯ ಸಂಧಿಯಲ್ಲಿ ಬೀಜಾರೋಪಣದ ಮೊದಲನೆಯ ಕಾರ್ಯಕ್ಕೆ ಉಪಕ್ಷೇಪವೆನ್ನುವರು. ಪ್ರವೇಶಕ, ವಿಷ್ಕಂಭಕ, ಮೊದಲಾದ ಅರ್ಥೋಪಕ್ಷೇಪಗಳೆಂಬ ಅಂಗಗಳಾದರೂ ಇದೇ ವರ್ಗದಲ್ಲಿ ಬರುತ್ತವೆ. ವಸ್ತುನಿರ್ದೇಶ, ಅನಿಷ್ಟ ವಿಷಯಗಳನ್ನು ಮರೆಮಾಡಲಿಕ್ಕೆ, ದೀರ್ಘ ಮತ್ತು ನೀರಸ ವಿಷಯಗಳನ್ನು ಸ್ವಲ್ಪದರಲ್ಲಿ ವಿವರಿಸಲಿಕ್ಕೆ ಇವುಗಳ ಯಥೋಚಿತ ಬಳಕೆಯಿಂದ ಕಥೆ ಕಳೆಕಟ್ಟುತ್ತದೆ.

ಭಾಮಹನು 'ಪಂಚಭಿಃ ಸಂಧಿಭಿಃ', ಎಂದಿರುವುದರಿಂದ, ದೃಶ್ಯಕಾವ್ಯಗಳಿಗನ್ವಯಿಸುವ ಮುಖ, ಪ್ರತಿಮುಖಾದಿ ೫ ಸಂಧಿಗಳು ಮಹಾಕಾವ್ಯಕ್ಕೂ ಬೇಕೆಂಬ ಅವನ ಅಭಿಪ್ರಾಯ ಸ್ಪಷ್ಟವಿದೆ. ದಂಡಿ 'ಸುಸಂಧಿಭಿಃ' ಎಂದಿಷ್ಟೇ ಹೇಳಿರುವುದರಿಂದ ಈ ಸುಸಂಧಿಗಳು ದೃಶ್ಯಕಾವ್ಯಗಳಿಗೆ ಅನ್ವಯಿಸುವ ಸಂಧಿಗಳೊ ಅಥವಾ ಶ್ರವ್ಯಕಾವ್ಯಗಳಲ್ಲಿರುವ ಸಂಧಿ ಅಥವಾ ಸರ್ಗಗಳು ಸುಸಂಬದ್ಧವಾಗಿರಬೇಕೆಂಬುದು ಅವನ ಆಶಯವೊ, ಎಂಬುದು ಸ್ಪಷ್ಟವಿಲ್ಲ. ಸರಸ್ವತೀಕಂಠಾಭರಣ, ಶೃಂಗಾರ ಪ್ರಕಾಶ, ಮೊದಲಾದ ಗ್ರಂಥಗಳ ಕರ್ತೃ ಭೋಜನು (ಕ್ರಿ. ಶ. ೧೧ನೆಯ ಶತಮಾನದ ಪೂರ್ವಾರ್ಧ) ದಂಡಿಯ ಈ ಉಕ್ತಿಯಿಂದುಂಟಾದ ಸಂದಿಗ್ಧ ಪರಿಸ್ಥಿತಿಯನ್ನ ನಿವಾರಿಸಿರುವನು. ಭೋಜನು—

1. ಸಂಸ್ಕೃತ-ನಾಟಕ, ಎ. ಆರ್. ಕೃಷ್ಣಶಾಸ್ತ್ರೀ, ಪುಟ. ೧೬-೧೭

ಏತೇತು ಸಂಧಯಃ ಕಾರ್ಯಾಃ ನಾಟಕೇಷು ಪ್ರಯೋಕ್ತೃಭಿಃ
ತಥಾ ಪ್ರಕರಣೇಷ್ವೇವಂ ಕಥಾಸ್ವಾಖ್ಯಾಯಿಕಾಸು ಚ।
ಮಹಾಕಾವ್ಯೇಷು ಚಂಪೂಷು ತ ಥೈವಾಖ್ಯಾನಕೇಷು ಚ॥

–ನಾಟಕ, ಪ್ರಕರಣಗಳಲ್ಲಿ ಮತ್ತು ಅದೇ ರೀತಿ ಕಥಾ, ಆಖ್ಯಾಯಿಕಾ, ಮಹಾಕಾವ್ಯ, ಚಂಪೂ, ಆಖ್ಯಾನಗಳಲ್ಲಿ ಈ ಸಂಧಿಗಳಿರಬೇಕೆಂದು ಹೇಳಿರುವನಲ್ಲದೆ—

ಸೈಷಾ ಸಂಧ್ಯಂಗ ಚತುಷ್ಷಷ್ಟಿ: ನಾಟಕಾದಿಷು
ಮಹಾಕಾವ್ಯಾದಿಷು ಚ ಪೂರ್ಣ ಸಂಧ್ಯಾದಿಷು
ನಿಬಂಧನೀಯಾನಿ ; ಪ್ರತಿ ಸಂಧಿಚಯಾನ್ಯಂಗಾನಿ......

—ಸಂಧಿಗಳೊಂದಿಗೆ ೬೪ ಸಂಧ್ಯಂಗಳೂ ಮಹಾಕಾವ್ಯಕ್ಕೆ ಅವಶ್ಯವೆಂದಿರುವನು.

ದಂಡಿಯ ಉಕ್ತಿಯಿಂದುಂಟಾದ ಸಂದಿಗ್ಧತೆಯನ್ನು ನಿವಾರಿಸಿದ ಭೋಜನ ಈ ಉಕ್ತಿ ಅನಂತರದ ಲಾಕ್ಷಣಿಕರಿಗೆ ಮತ್ತು ಸಾಹಿತಿಗಳಿಗೆ ಮತ್ತೊಂದು ತೊಡಕನ್ನುಂಟು ಮಾಡಿರಬೇಕು. ಚತುಷ್ಷಷ್ಟಿ ಸಂಧ್ಯಂಗಗಳ ಉಪಯೋಗ ನಾಟಕಾದಿ ದೃಶ್ಯ ಕಾವ್ಯಗಳ ವಿಷಯದಲ್ಲಿಯೇ ಐಚ್ಛಿಕವಿರುವಾಗ ಶ್ರವ್ಯಕಾವ್ಯಗಳಿಗೆ ಅವುಗಳ ಪ್ರಯೋಜನವೇನು? ಮೇಲಾಗಿ ಪ್ರವೇಶಕ, ವಿಷ್ಕಂಭಕ ಮೊದಲಾದುವು ಕೇವಲ ದೃಶ್ಯ ಕಾವ್ಯಗಳಿಗೆ ಅವಶ್ಯವೆಂಬುದು ಸ್ಪಷ್ಟವಿದೆ. ಭೋಜನ ಮನಸ್ಸಿನಲ್ಲಿ ಏನಿದ್ದಿತೋ ಏನೋ, ಕುಶಲ ಸಂಗ್ರಹಕಾರನಾದ ಹೇಮಚಂದ್ರನು ಮಾತ್ರ ಅನಾವಶ್ಯಕವೆನಿಸುವ ಭೋಜನ ವಿವರಗಳನ್ನು ತೊಡೆದು ಹಾಕಿ, ಮಹಾಕಾವ್ಯಕ್ಕೆ ಎಷ್ಟು ಬೇಕೊ ಅಷ್ಟು ಅಂದರೆ ೫ ಸಂಧಿಗಳನ್ನು ಮತ್ತು ಆನುಷಂಗಿಕವಾಗಿ ಬೀಜಾದಿ ೫ ಅರ್ಥಪ್ರಕೃತಿಗಳನ್ನು ಹೇಳಿರುವನು.[1] ಇದನ್ನೇ ನಾಗವರ್ಮನು ತನ್ನ ಕಾವ್ಯಾವಲೋಕನದ 'ಸವಸಂದ ಮುಖಂ' ಮತ್ತು 'ಉಪಯೋಗದೆ ಬೀಜಂ' ಸೂತ್ರಗಳಲ್ಲಿ ಸಂಗ್ರಹಿಸಿರುವನು.[2] ಮಹಾಕಾವ್ಯಗಳಲ್ಲಿ ಪಂಚ ಸಂಧಿಗಳನ್ನು ಹೇಳಿರುವುದು ಹೇಮಚಂದ್ರನ ವೈಶಿಷ್ಟ್ಯವೆಂಬುದರ ಮತ್ತು ನಾಗವರ್ಮನು ಇದನ್ನೇ ಸಂಗ್ರಹಿಸಿ ಹೇಳಿರುವುದರ ಹಿನ್ನೆಲೆ ಇದು.

ಹೇಮಚಂದ್ರನ ಡೋಂಬಿಕಾದಿ ದೇಶಿ ರೂಪಕಗಳಿಗೆ ಅನುಷಂಗಿಕವಾಗಿ ಪಾಡು, ಪಾಡುಗಬ್ಬಗಳನ್ನು ನಾಗವರ್ಮನು ಉಲ್ಲೇಖಿಸಿರಬಹುದೆಂಬ ಊಹೆ ಅಸಮರ್ಪಕವೆಂದು ಈ ಮೊದಲೆ ವಿಶದಪಡಿಸಿದೆ. ಹೀಗಿದ್ದರೆ ನಾಗವರ್ಮನು ಇವುಗಳನ್ನು ಉಲ್ಲೇಖಿಸಿರುವ ಔಚಿತ್ಯವೇನು? ಹೇಮಚಂದ್ರನನ್ನು ಅನುಸರಿಸಿ ಅವನು ಹೀಗೆ ಮಾಡಿರಬಹುದೆಂಬುದು ಸಮರ್ಪಕವಿದ್ದರೂ ಅದು ಈ ಕಾರಣದಿಂದಲ್ಲ. ಸಂಸ್ಕೃತದ ಮುಕ್ತಕ, ಕುಲಕ, ಮೊದಲಾದ ಕಾವ್ಯಪ್ರಕಾರಗಳು ಸುಪರಿಚಿತವಿದೆ. ಮುಕ್ತಕವೆಂದರೆ ಸ್ವಯಂ

1. ವಿ. ರಾಘವನ್, ಭೋಜನ ಶೃಂಗಾರ ಪ್ರಕಾಶ, ಪು. ೪೦೫, ೫೯೪.
2. ಕಾ. ಲೋ. ಸೂತ್ರ ೨೪೮, ೨೪೯.

ಪೂರ್ಣ ಅನಿಬದ್ಧ ಅಥವಾ ಬಿಡಿಪದ್ಯ. ಅರ್ಥಗ್ರಹಣಕ್ಕಾಗಿ ಇದಕ್ಕೆ ಪೂರ್ವಾಪರ ಪದ್ಯಗಳ ನೆರವು ಬೇಕಿಲ್ಲ. ಶತಕಗಳಲ್ಲಿ ಇಂಥ ಪದ್ಯಗಳನ್ನು ಕಾಣಬಹುದು. ಸರ್ವಜ್ಞನ ವಚನಗಳಾದರೂ ಮುಕ್ತಕಗಳೇ. ಎರಡು ಮುಕ್ತಕಗಳಿರುವ ಜೋಡಿಗೆ ಸಂದಾನಿತಕ ಎನ್ನುವರು, ಮೂರು ಇದ್ದರೆ ವಿಶೇಷಕ; ನಾಲ್ಕು ಇದ್ದರೆ ಕಲಾಪಕ, ಐದರಿಂದ ೧೪ರ ವರೆಗಿದ್ದರೆ ಕುಲಕ ಎನ್ನುವರು. ಮಹಾಕಾವ್ಯಗಳಲ್ಲಿಯ ಸೂರ್ಯೋದಯಾದಿ ವರ್ಣನಪರವಿರುವ ಇಂಥ ಪದ್ಯಗಳ ಮಾಲಿಕೆಗೆ ಪರ್ಯಾ ಎನ್ನುವರು. ಒಬ್ಬ ಕವಿಯ ಅಥವಾ ಹಲವು ಕವಿಗಳ ಇಂಥ ಪದ್ಯ ಸಂಗ್ರಹಕ್ಕೆ ಕೋಶವೆನ್ನುವರು. ಈ ವರ್ಗೀಕರಣ ಸಂಸ್ಕೃತ-ಪದ್ಯಗಳಿಗಿಷ್ಟೇ ಪರಿಮಿವಿದ್ದಿಲ್ಲೆಂಬುದು ಭಾಮುಹನ ಮುಕ್ತದ ವ್ಯಾಖ್ಯೆಯಿಂದ ಗೊತ್ತಾಗುವುದು. ಅದು ಹೀಗಿದೆ–

ಅನಿಬದ್ಧಂ ಪುನರ್ಗಾಥಾ ಶ್ಲೋಕಮಾತ್ರಾದಿ ತತ್ಪುನಃ।
ಯುಕ್ತಂ ವಕ್ರಸ್ವಭಾವೋಕ್ತ್ಯಾ ಸರ್ವಮೇವೈತದಿಷ್ಯತೇ॥[1]

–ಮುಕ್ತಕವು ವಕ್ರೋಕ್ತಿ ಸ್ವಭಾವೋಕ್ತಿಗಳಿಂದ ಕೂಡಿದ ಅನಿಬದ್ಧ ಗಾಥಾ ಇಲ್ಲವೇ ಶ್ಲೋಕ. ಗಾಥಾಪ್ರಾಕೃತ ವಿಶಿಷ್ಟ ಪದ್ಯವಿದ್ದರೆ ಶ್ಲೋಕ ಸಂಸ್ಕೃತಕ್ಕೆ ಸಂಬಂಧಿಸಿದೆ. ಹೇಮಚಂದ್ರನು ಗಾಥೆಯ ವ್ಯಾಪ್ತಿಯನ್ನು ವಿವರಿಸಿ 'ಏತಾನಿಚ' ಎಂದರೆ ಮುಕ್ತಕಾದಿಗಳು 'ವಿಶೇಷಾನಾಭಿದಾನತ್ ಸರ್ವಭಾಷಾಭಿರ್ಭವಂತಿ....ಏವಮನಂತೋ ನಿಬದ್ಧಗಣಃ' ಎಂದಿರುವನು.[2]

ನಾಗವರ್ಮನು 'ಇಡುಕುಂಗಬ್ಬ'ವೆಂದರೆ ಮುಕ್ತಕವೆಂದು ಹೇಳಿ ಸೂತ್ರ ೨೪೨ರಲ್ಲಿ ಕುಲಕ ಕೋಶಗಳನ್ನು ಹೇಳಿರುವನು. ಸೂತ್ರ ೨೪೩, ೨೪೪, ೨೪೫ರಲ್ಲಿ ಕಂದ-ವೃತ್ತ-ಜಾತಿಗಳನ್ನು ಘಟಕಗಳನ್ನಾಗಿಟ್ಟುಕೊಂಡು ಪದ, ಮೇಲ್ವಾಡು, ಪಾಡುಗಬ್ಬಗಳನ್ನೂ ಉಲ್ಲೇಖಿಸಿ, ಪಾಡುಗಬ್ಬವೇ ಬೇದಂಡೆ ಎಂದಿರುವನು. ಸೂತ್ರ ೨೪೭ರಲ್ಲಿ ಪದ್ಯವನ್ನು ಘಟಕವನ್ನಾಗಿಟ್ಟುಕೊಂಡಿರುವನು. 'ಪಲತೆರದ ಪದ್ಯದಿಂದಂ' ಎಂದಿರುವುದರಿಂದ ಇದರಲ್ಲೇ ಅವನು ಮುಕ್ತಕಕ್ಕಿಟ್ಟುಕೊಂಡ ಇಡುಕುಂಗಬ್ಬ, ಕಂದ, ವೃತ್ತ, ಜಾತಿಗಳು ಸಹ ಸೇರುತ್ತವೆಂದು ಧ್ವನಿತವಾಗುತ್ತದೆ. ಇಂಥ ಪದ್ಯಗಳು ಮತ್ತು 'ಲಲಿತ-ವಚೋ-ರಚನ-ನಿಚಯ ಪದ್ಧತಿಕೆ' ಗಳು ಇರುವ ಕಾವ್ಯಕ್ಕೆ 'ಬಾಜನೆಗಬ್ಬ' ಎಂದಿರುವನು. ಬಾಜನಗಬ್ಬವೆಂದರೆ ತಾಲಾನುಗ ಅಥವಾ ತಾಲಪ್ರಧಾನ ಗೀತ, ಪದ್ಧತಿಕೆಯು ಇಂಥದೊಂದು ಬಂಧ.

ಈ ರೀತಿ ಭಾಮುಹನ ಮುಕ್ತಕದಲ್ಲಿ ಅಡಕವಾದ ಪ್ರಾಕೃತ ಗಾಥೆ ಕಾಲಾನುಸಾರ ಇತರ ದೇಶೀ ಗೇಯ ಬಂಧಗಳಿಗೆ ಶ್ರವ್ಯಕಾವ್ಯಗಳ ವರ್ಗದಲ್ಲಿ ಎಡೆಮಾಡಿಕೊಟ್ಟಿತು. ನಾಗವರ್ಮನಾದರೂ ಭಾಮುಹ, ಹೇಮಚಂದ್ರಾದಿ ಸಂಸ್ಕೃತ ಲಾಕ್ಷಣಿಕರ ದಾರಿ

1. ಭಾಮುಹ, ಕಾವ್ಯಾಲಂಕಾರ, ೧-೩೦
2. ಹೇ. ಕಾ. ಅಧ್ಯಾಯ ೮, ಸೂ. ೧೦, ಮುಂಬೈ.

ಯಲ್ಲಿ ಸಾಗಿ ಪಾಡು ಮೊದಲಾದ ಕನ್ನಡಗೇಯ ಬಂಧಗಳಿಗೆ ಎಡೆಮಾಡಿಕೊಟ್ಟಿರುವುದರ ಔಚಿತ್ಯವಾದರೂ ಇದೇ. ಈ ವರ್ಗೀಕರಣದಲ್ಲಿ ದೃಶ್ಯಕಾವ್ಯಗಳ ಅತಏವ ಡೊಂಬಿಕಾದಿ ದೇಶೀ ಗೇಯ ರೂಪಕಗಳ ಸಂಪರ್ಕವಿಲ್ಲೆಂಬುದನ್ನು ಬೇರೆ ಹೇಳಬೇಕಿಲ್ಲ.

ಹೇಮಚಂದ್ರನಿಗೂ ನಾಗವರ್ಮನಿಗೂ ವಯಸ್ಸಿನಲ್ಲಿ ಬಹಳ ಅಂತರವಿರದ್ದರಿಂದ ಆ ಕಾಲದಲ್ಲಿ ಗ್ರಂಥಗಳ ಪ್ರತಿಗಳನ್ನು ತಯಾರಿಸುವ ಮತ್ತು ಸಾರಿಗೆ-ಸಂಪರ್ಕಗಳ ಸೌಲಭ್ಯಗಳನ್ನು ಅನುಲಕ್ಷಿಸಿ, ಹೇಮಚಂದ್ರನ ಗ್ರಂಥಗಳು ನಾಗವರ್ಮನ ಕೈಸೇರಿ ಅವನು ಅವುಗಳದ್ನು ಓದಿಕೊಂಡು ತನ್ನ ಗ್ರಂಥಗಳನ್ನು ರಚಿಸಿರಬಹುದೆಂಬುದು ಅಸಂಭವವಿರದಿದ್ದರೂ ದೂರದ ಮಾತೆನ್ನಬಹುದು. ವಾಸ್ತವತೆಗೆ ಹೊಂದಿಕೊಂಡಿರುವುದರಿಂದ ಇದು ವಿಚಾರಾರ್ಹ ಆಕ್ಷೇಪಣೆ. ಈಗಿನಂತೆ ಆಗ ಮುದ್ರಣ, ಅಂಚೆ ಸೌಕರ್ಯಗಳಿರದ್ದರಿಂದ ಸಾಕಷ್ಟು ಪ್ರತಿಗಳನ್ನು ತಯಾರಿಸಿ ಪೂರೈಸುವುದು ಸುಲಭವಿದ್ದಿಲ್ಲೆಂಬುದು ನಿಜ. ಆದರೆ ಹೇಮಚಂದ್ರನ ವಿಷಯದಲ್ಲಿ ಇದು ಅಷ್ಟೊಂದು ಕಠಿಣವಿದ್ದಿಲ್ಲ. ಆತನಿಗೆ ಸಿದ್ಧರಾಜ-ಜಯಸಿಂಹ ಮತ್ತು ಕುಮಾರಪಾಲರ ಪ್ರಬಲ ರಾಜಾಶ್ರಯವಿದ್ದಿತು. ಸಂಪ್ರತಿಕಾರರ ಒಂದು ಪಡೆಯು ಅವನ ಕೆಳಗೆ ಕೆಲಸ ಮಾಡುತ್ತಿದ್ದಿತು. ಆತನ ಗಣ್ಯಕೃತಿಗಳಲ್ಲಿ ಮೊದಲನೆಯದಾದ ಸಿದ್ಧ-ಹೇಮ ವ್ಯಾಕರಣವು ರಚಿತವಾದೊಡನೆ, ೩೦೦ ಸಂಪ್ರತಿಕಾರರನ್ನು ನಿಯೋಜಿಸಿ ತಯಾರಿಸಲಾದ ಅದರ ಪ್ರತಿಗಳನ್ನು ಭಾರತದ ಎಲ್ಲ ಭಾಗಗಳಿಗಿಷ್ಟೇ ಅಲ್ಲ, ಸಿಂಹಳ, ನೇಪಾಳ, ಇರಾಣ ದೇಶಗಳಿಗೂ ಕಳಿಸಲಾಯಿತೆಂದು ಅವನ ಜೀವನ ಚರಿತ್ರದ ವಿವರಗಳಿರುವ 'ಪ್ರಭಾವಕಚರಿತ್ರ'ದಿಂದ ಕಂಡುಬರುತ್ತದೆ. 'ಅಂಗವಂಗ-ಕಲಿಂಗೇಷು ಲಾಟ-ಕರ್ಣಾಟಕುಂತಣೇ, ಮಹಾರಾಷ್ಟ್ರ-ಸುರಾಷ್ಟ್ರಾಸು-ವತ್ಸೇ-ಕಚ್ಛೇಚ ಮಾಲವೇ' ಎಂಬ ಅದರಲ್ಲಿಯ ಒಂದು ಪದ್ಯದಿಂದ ಕರ್ಣಾಟಕಕ್ಕೂ ಕೆಲವು ಪ್ರತಿಗಳನ್ನು ಕಳಿಸಲಾಯಿತೆಂಬುದು ಕಂಡುಬರುತ್ತದೆ. ಹೇಮಚಂದ್ರನ ಗ್ರಂಥಗಳನ್ನು ಶ್ರೀತಾಲವೆಂಬ ವಿಶಿಷ್ಟ ಜಾತಿಯ ತಾಳೆಓಲೆಗಳ ಮೇಲೆ ಬರೆಯುತ್ತಿದ್ದರಂತೆ. ಒಮ್ಮೆ ಇವುಗಳ ಅತೀವ ಕೊರತೆಯಾಯಿತು. ಹೊಸ ಸಂಗ್ರಹ ಸಕಾಲದಲ್ಲಿ ಬರುವಂತಿರಲಿಲ್ಲ. ಇದನ್ನು ಕಂಡು ನೊಂದುಕೊಂಡ ಅವನ ಶಿಷ್ಯ ಕುಮಾರಪಾಲನು ತನ್ನ ಉದ್ಯಾನದಲ್ಲಿಯ ತಾಳೆಮರಗಳನ್ನು ಪೂಜಿಸಲು, ಆತನ ಗುರುಭಕ್ತಿಯ ಪ್ರಭಾವದಿಂದ ಬೆಳಗಾಗುವಷ್ಟರಲ್ಲಿ ಅವೆಲ್ಲ ಶ್ರೀತಾಲ ವೃಕ್ಷಗಳಾಗಿದ್ದವಂತೆ. ಈ ಕಥೆಯಾದರೂ ಪ್ರಭಾವಕ ಚರಿತ್ರೆಯಲ್ಲಿದೆ. ಕಥೆಯ ಸತ್ಯಾಂಶ ನಮಗೆ ಅಮುಖ್ಯ. ಆದರೆ ಹೇಮಚಂದ್ರನ ಗ್ರಂಥಗಳ ಪ್ರತಿಗಳನ್ನು ದೊಡ್ಡ ಪ್ರಮಾಣದಲ್ಲಿ ತಯಾರಿಸಿ ಪೂರೈಸುತ್ತಿದ್ದರೆಂಬುದಕ್ಕೆ ಇದೊಂದು ಉದಾಹರಣೆಯೆನ್ನಬಹುದಾಗಿದೆ.[1] ಗುಜರಾ

1. ಹೇ. ಜೀ. ಚಂ. ಪು. ೧೬, ೫೫, ೭೨.

ತದ ಚಾಲುಕ್ಯರಿಗೂ ಕರ್ಣಾಟಕದ ಪಶ್ಚಿಮ ಚಾಲುಕ್ಯರಿಗೂ ಮೊದಲಿನಿಂದ ಆಪ್ತತ್ವ ವಿದ್ದಿತು. ಸಿದ್ಧರಾಜ ಜಯಸಿಂಹನ ತಾಯಿ ಮೀನಲದೇವಿ ಮತ್ತು ಚಾಲುಕ್ಯ ೬ನೆಯ ವಿಕ್ರಮಾದಿತ್ಯನ ಅರಸಿ ಅಕ್ಕ ತಂಗಿಯರಿದ್ದರು. ಇಬ್ಬರೂ ಗೋವೆಯ ಕದಂಬ ಕುಲದ ರಾಜ ಕನ್ಯೆಯರು.[1] ನಾಗವರ್ಮ ಇದೇ ಪಶ್ಚಿಮ ಚಾಲುಕ್ಯವಂಶದ ಅಂದರೆ ೬ನೆಯ ವಿಕ್ರಮಾದಿತ್ಯನ ಮಮ್ಮಗ ಜಗದೇಕಮಲ್ಲನ ಕಟಕೋಪಾಧ್ಯಾಯ, ಜೈನ. ಆದ್ದರಿಂದ ಹೇಮಚಂದ್ರನಂಥ ಜೈನ ಮೇಧಾವಿಯ ಕೃತಿಗಳು ರಾಜಾಸ್ಥಾನಕ್ಕೆ ಬಂದರೆ ಅವು ನೇರವಾಗಿ ಆತನ ಕೈ ಸೇರುವುದು ಹೆಚ್ಚು ಸಂಭವನೀಯವಿದ್ದಿತು. ಮೇಲಾಗಿ ಹೇಮಚಂದ್ರನ ಖ್ಯಾತಿ ಭಾರತದಾದ್ಯಂತ ಪ್ರಸರಿಸಿತ್ತು. ಆತನಿರುವ ಅನಹಿಲ್ಲಪಟ್ಟಣ ಅಂದರೆ ಸಿದ್ಧರಾಜ–ಜಯಸಿಂಹ ಮತ್ತು ಕುಮಾರಪಾಲರ ರಾಜಧಾನಿ ಎಲ್ಲಬಗೆಯ ಎಲ್ಲ ಮತಗಳ ವಿದ್ವಾಂಸರಿಗೆ ಯಾತ್ರಾಸ್ಥಾನವಾಗಿದ್ದಿತು. ಆದ್ದರಿಂದ ಸ್ವತಃ ನಾಗವರ್ಮನೇ ಅಲ್ಲಿಗೆ ಹೋಗಿ ಹೇಮಚಂದ್ರನ ಸಹವಾಸದಲ್ಲಿ ಕೆಲಸಮಯ ಇದ್ದು ಆತನ ಗ್ರಂಥಗಳ ಪರಿಚಯ ಮಾಡಿಕೊಳ್ಳುವದಾದರೂ ಅಸಂಭವವಿಲ್ಲ. ಪ್ರಭಾವಕ ಚರಿತ್ರೆಯಲ್ಲಿ ಒಂದೆಡೆ ಹೇಮಚಂದ್ರನ ಆಸ್ಥಾನ— 'ಬ್ರಹ್ಮೋಲ್ಲಾಸ ನಿವಾಸೇತ್ರ ಭಾರತೀ ಪಿತೃಮಂದಿರೇ, ಶ್ರೀ ಹೇಮಚಂದ್ರ ಸೂರೀಣಾಮಾಸ್ಥಾನೇಸು ಸ್ಥಿತೋವಿದೇ',—ಬ್ರಹ್ಮೋಲ್ಲಾಸ ಎಂದರೆ ಭಾರತಿ (ವಾಗ್ದೇವಿ)ಯ ಪಿತೃಸ್ಥಾನ ದಂತಿದ್ದು, ಅಲ್ಲಿ ವಿದ್ವಾಂಸರ ಯೋಗಕ್ಷೇಮವನ್ನೂ ಚೆನ್ನಾಗಿ ನೋಡಿಕೊಳ್ಳಲಾಗು ತ್ತಿತ್ತು, ಎಂದಿದೆ.[2] ಈ ವರ್ಣನೆ ದೇವಬೋಧನೆಂಬ ಭಾಗವತ ಪಂಡಿತನು ಹೇಮ ಚಂದ್ರನ ಆಸ್ಥಾನವನ್ನು ಸಂದರ್ಶಿಸಿದ ಸಂದರ್ಭದಲ್ಲಿರುವದರಿಂದ, ಅಲ್ಲಿ ಮತೀಯ ಸಂಕುಚಿತಭಾವ ಇದ್ದಿಲ್ಲವೆಂಬುದು ವ್ಯಕ್ತವಾಗುತ್ತದೆ.

ಈವರೆಗೆ–(೧) ರತ್ನಮಂಜೂಷಾ ಗ್ರಂಥದ ಸ್ವರೂಪ, ಕಾಲ; (೨) ಅದರ- ಭಾಷ್ಯಕಾರನ ಕಾಲ, ಅವನಿಗೂ ಹೇಮಚಂದ್ರನಿಗೂ ಇದ್ದಿರಬಹುದಾದ ಸಂಬಂಧ; (೩) ಇಮ್ಮಡಿ ನಾಗವರ್ಮನ ಕಾಲ, ಅವನಿಗೂ ಹೇಮಚಂದ್ರನಿಗೂ ಇದ್ದಿರಬಹು ದಾದ ಸಂಬಂಧ, ಇವುಗಳನ್ನು ಕುರಿತು ಲಭ್ಯವಿರುವ ಸಾಧಕ–ಬಾಧಕ ವಿವರಗಳ ವಿವೇಚನೆಯಾಯಿತು. ಇದರೊಂದಿಗೆ ಇಮ್ಮಡಿ ನಾಗವರ್ಮನ ಛಂದೋವಿಚಿತಿಯ ಕೆಲಭಾಗಗಳು ಆದಿನಾಗವರ್ಮನ ಛಂದೋಂಬುಧಿಯಲ್ಲಿ ಸೇರಿರಬಹುದೆಂಬ ಸೂಚ ನೆಯ ಸಮಂಜಸತೆಯನ್ನು ಸಹ ಪರೀಕ್ಷಿಸಲಾಯಿತು. ಇವುಗಳಿಂದ ರತ್ನಮಂಜೂಷೆಯ ಭಾಷ್ಯಕಾರ ಹೇಮಚಂದ್ರನ ಸಮಕಾಲೀನ ಅಥವಾ ನಂತರದವ, ಆತನ ಛಂದೋನು ಶಾಸನದ ಪ್ರಯೋಜನ ಪಡೆದವ, ಆತನಲ್ಲಿ ಪೂಜ್ಯಭಾವವುಳ್ಳವ ಎಂಬುದೂ ಇಮ್ಮಡಿ ನಾಗವರ್ಮ ಸಹ ಹೇಮಚಂದ್ರನ ಸಮಕಾಲೀನ, ಆತನಿಂದ ಸ್ಫೂರ್ತಿ ಪಡೆದವ,

---

1. ಹೇ. ಕಾ. ಸಂ. ೨, ಮುನ್ನುಡಿ ಪು. ೧೫೪.
2. ಹೇ. ಕಾ. ಸಂ. ೨, ಮುನ್ನುಡಿ ಪು. ೩೦೦.

ತನ್ನ ಕಾವ್ಯಾವಲೋಕನಕ್ಕಾಗಿ ಭಾಮಹಾದಿಗಳ ಗ್ರಂಥಗಳೊಂದಿಗೆ ಆತನ ಕಾವ್ಯಾನುಶಾಸನವನ್ನು ಉಪಯೋಗಿಸಿಕೊಂಡವ, ಎಂಬುದೂ ವ್ಯಕ್ತವಾಗದಿರದು. ಪೂರ್ವಕವಿ ಸ್ಮರಣೆಯಲ್ಲಿ ಇಮ್ಮಡಿ ನಾಗವರ್ಮನು ಹೇಮಚಂದ್ರನನ್ನು ಸ್ಮರಿಸಿಲ್ಲವೆಂಬುದು ನಿಜ. ಆದರೆ ಪ್ರತಿಯೊಬ್ಬನು ತನಗೆ ಮೆಚ್ಚಿಗೆಯಾದ, ಶ್ರೇಷ್ಠರಾದ ಅಥವಾ ಅವರಿಂದ ನೆರವು ಪಡೆದ ಎಲ್ಲ ಪೂರ್ವಿಕರನ್ನೂ ಸ್ಮರಿಸುವನೆಂದಿಲ್ಲ. ಎಷ್ಟೋಸಲ ಈ ವಿಷಯ ಕವಿ ಆಯ್ದುಕೊಂಡ ಪ್ರಾಸ, ಛಂದಸ್ಸು ಮೊದಲಾದವನ್ನು ಅವಲಂಬಿಸಿರುತ್ತದೆ.[1] ಒಂದೊಮ್ಮೆ ಇಮ್ಮಡಿ ನಾಗವರ್ಮ ರತ್ನಮಂಜೂಷೆಯ ಭಾಷ್ಯಕಾರನಿದ್ದ ಪಕ್ಷದಲ್ಲಿ, ಈ ಮೊದಲು ಉದಾಹರಿಸಲಾದ, ಜಿನ ಅಥವಾ ಜಿನಸಮಾನನೆಂದು ಭಾಷ್ಯಕಾರನು ಹೇಮಚಂದ್ರನನ್ನು ವಂದಿಸಿರುವ ಶ್ಲೋಕ ಇಮ್ಮಡಿ ನಾಗವರ್ಮನದಾಗುವದೆಂಬುದನ್ನು ಇಲ್ಲಿ ನೆನೆಯಬಹುದಾಗಿದೆ.

ಇಮ್ಮಡಿ ನಾಗವರ್ಮ ರತ್ನಮಂಜೂಷೆಯ ಭಾಷ್ಯಕಾರನೆಂಬುದಕ್ಕೆ ಪೋಷಕವಿರುವ ಅಂಶಗಳಲ್ಲಿ ಈ ಗ್ರಂಥದ ಹಸ್ತಪ್ರತಿಗಳ ಲಿಪಿ ಒಂದು. ಎರಡು ಹಸ್ತಪ್ರತಿಗಳ ಆಧಾರದಿಂದ ವೇಲಣಕರ ಈ ಗ್ರಂಥವನ್ನು ಸಂಪಾದಿಸಿರುವರು. ಎರಡೂ ಕನ್ನಡ ಲಿಪಿಯಲ್ಲಿದ್ದವು. ಎರಡೂ ಮೈಸೂರು ಸರಕಾರದ ಪ್ರಾಚ್ಯಗ್ರಂಥ ಭಂಡಾರದಲ್ಲಿದ್ದವು. ಆ ಭಂಡಾರದ ಗ್ರಂಥಸೂಚಿಯಲ್ಲಿ ಇವುಗಳ ಕ್ರಮಾಂಕ ೮೭೧ ಮತ್ತು ೧೦೨೫ ಇದೆ[2] ಮತ್ತು ಇವುಗಳ ಬಗ್ಗೆ 'ರತ್ನಮಂಜೂಷಾ ಛಂದೋವಿಚಿತಿ–ಭಾಷ್ಯಂ–ಜೈನಾನಾಂ ಛಂದೋಗ್ರಂಥಃ' ಎಂದಿಷ್ಟೇ ಹೇಳಲಾಗಿದೆ.[3] ಹೆಚ್ಚಿನ ವಿವರಗಳಿಲ್ಲ, ಮುದ್ರಿತ ಗ್ರಂಥದ ಪ್ರಕರಣಾಂತ ಗದ್ಯದಲ್ಲಿ 'ಇತಿ ರತ್ನ ಮಂಜೂಷಾಯಾಂ ಛಂದೋವಿಚಿತ್ಯಾಂ ಭಾಷ್ಯತಃ....ಅಧ್ಯಾಯಃ' ಎಂದಿದೆ. ಇಮ್ಮಡಿ ನಾಗವರ್ಮನ ಕೃತಿನಿರ್ದೇಶಕ ಪದ್ಯದಲ್ಲಿಯ 'ಛಂದೋವಿಚಿತಿ', ಈ ಪ್ರಕರಣಾಂತ ಗದ್ಯದ 'ಛಂದೋವಿಚಿತಿ' ಮತ್ತು ಗ್ರಂಥ ಸಂಪಾದನೆಗೆ ಆಕರಗಳಾಗಿದ್ದ ಹಸ್ತಪ್ರತಿಗಳ ಲಿಪಿ ಇವು ಈ ಲೇಖಕ್ಕಿದ್ದ ಮೂಲ ಪ್ರಚೋದಕಗಳೆನ್ನಬಹುದು. ಉಳಿದ ವಿವರಗಳು ಇವುಗಳ ಜಾಡಿನಲ್ಲಿ ಬಂದಿವೆ. ಗ್ರಂಥಭಂಡಾರದ ಸೂಚಿಯಲ್ಲಿ ಕಾಣಿಸಿದ 'ರತ್ನಮಂಜೂಷಾ–ಛಂದೋವಿಚಿತಿ ಭಾಷ್ಯಂ' ಎಂಬುದು ಹಸ್ತಪ್ರತಿಗಳಲ್ಲಿ ಇದಕ್ಕಿರುವ ಹೆಸರಿದ್ದು, 'ಜೈನಾನಾಂ ಛಂದೋಗ್ರಂಥ; ಎಂಬುದು ಈ ಸೂಚಿಯನ್ನು ತಯಾರಿಸಿದವರಿಂದ ಅಥವಾ ಹಸ್ತಪ್ರತಿಗಳ ಸಂಪ್ರತಿಕಾರರಿಂದ ಸೇರಿಸಲ್ಪಟ್ಟಿರಬೇಕೆಂದು ತೋರುತ್ತದೆ. ಮುದ್ರಿತ ಪ್ರತಿಯಲ್ಲಿ 'ಸಭಾಷ್ಯಾ ರತ್ನಮಂಜೂಷಾ ಛಂದೋ ಗ್ರಂಥ:' ಎಂದಿದೆ. ಗ್ರಂಥಭಂಡಾ

1. ಕೆ. ವಿ. ರಾಘವಾಚಾರ, ಜನ್ನನ ಯಶೋಧರ ಚರಿತೆ, ಮುನ್ನುಡಿ, ಪು. ೧೧, ಅಡಿಟಿಪ್ಪಣಿ.

2. ರ. ಮಂ. ಮುನ್ನುಡಿ, ಪು. ೩

3. ವ್ಯ. ಗ. ಓ. ಲೈ. ಕೆ., ಸಂಸ್ಕೃತ ಗ್ರಂಥಗಳ ಹಸ್ತಪ್ರತಿಗಳು, ಪು. ೨೯೪

ರದ ಸೂಚಿಯಲ್ಲಿ ಕಾಣಿಸಿದ ಹೆಸರಿನಿಂದ ಮೂಲದಕ್ಕಿಂತ ಭಾಷ್ಯಕ್ಕೆ ಪ್ರಾಧಾನ್ಯವಿರುವಂತೆ ತೋರುತ್ತದೆ. ಗ್ರಂಥಕಾರನು ಪ್ರಾಚೀನನಿದ್ದು, ಗ್ರಂಥದಿಂದಾಗಲಿ ಪರಂಪರಾಗತವಾಗಲಿ ಆತನ ಹೆಸರು ತಿಳಿಯದೆ ಅದು ಕೇವಲ ಛಂದೋವಿಚಿತಿಯೆಂಬ ಸಾಮಾನ್ಯ ಹೆಸರಿನಿಂದ ಪರಿಚಿತವಿದ್ದರೂ ಇರಬಹುದು. ರತ್ನಮಂಜೂಷೆಯೆಂದು ನಾಗವರ್ಮನೇ ಅದನ್ನು ಹೆಸರಿಸಿರಬೇಕು. ತನ ಗ್ರಂಥಗಳ ಹೆಸರಿಗೆ ಆಭರಣ ಅಥವಾ ಅಲಂಕಾರ ಸೂಚಕ ಹೆಸರನ್ನು ಜೋಡಿಸುವತ್ತ ಆತನ ಒಲವಿದ್ದಿತೆಂಬುದು ಅವುಗಳ ಹೆಸರಿನಿಂದ ವ್ಯಕ್ತವಾಗುವುದು. ಕಾವ್ಯಾವಲೋಕನ 'ವಾಕ್-ಶ್ರೀ-ಸುಂದರಿ'ಗೆ ಆತನು ತೊಡಸಿದ ಒಂದು 'ಅಲಂಕೃತಿ' ವಸ್ತುಕೋಶ ವಸ್ತ್ರ-ಒಡವೆಗಳಲ್ಲಿಯ 'ವಸ್ತು' ಅಥವಾ ಬಳಿಕೆ ಮಾತಿನಲ್ಲಿಯ 'ವಸ್ತ', ಅಭಿಧಾನ ರತ್ನ ಮಾಲೆಯು 'ರತ್ನಮಾಲೆ', ಭಾಷಾ ಭೂಷಣವು 'ಭೂಷಣ'.

ರತ್ನಮಂಜೂಷೆ ಛಂದೋಗ್ರಂಥವಿರುವುದರಿಂದ ಅದರಲ್ಲಿಯ ಒಂದೊಂದು ಛಂದೋಬಂಧ ಒಂದೊಂದು ರತ್ನ ಮತ್ತು ಇವು ಬಿಡಿಬಿಡಿಯಾಗಿ ಇರುವದರಿಂದ ಇವುಗಳನ್ನು ಯಾವುದೊಂದು ರತ್ನ ಜಡಿತ ಅಥವಾ ಗ್ರಥಿತ ಆಭರಣಕ್ಕೆ ಹೋಲಿಸುವಂತಿಲ್ಲ. ಆದ್ದರಿಂದ ಈ ಗ್ರಂಥಕ್ಕೆ 'ರತ್ನಮಂಜೂಷಾ' ಎಂದರೆ 'ರತ್ನಗಳ ಪೆಟ್ಟಿಗೆ' ಎಂಬ ಹೆಸರು ಒಪ್ಪುವಂಥದಿದೆ. ರೂಢಿಯಲ್ಲಿ 'ರತ್ನ ಮಂಜೂಷಾ' 'ಭಾಷ್ಯ' ಪದಗಳು ಕಳಚಿಹೋಗಿ ಮತ್ತು ಮೊದಲಿನಿಂದಲೂ ಪ್ರಸಿದ್ಧವಿರಬಹುದಾದ ವಿಷಯಸೂಚಕ ಹೆಸರಿರುವ 'ಛಂದೋವಿಚಿತಿ' ಇಷ್ಟೇ ಉಳಿದಿರಬೇಕು ಮತ್ತು ಇದೇ ಆತನ ಕೃತಿನಿರ್ದೇಶಕ ಪದ್ಯದಲ್ಲಿ ಬಳಸಲ್ಪಟ್ಟಿರಬೇಕು. ಮೇಲಾಗಿ 'ಛಂದೋವಿಚಿತಿ' ಎಂಬುದು ಬಹಳ ಪ್ರಾಚೀನ ಹೆಸರು. ತಮ್ಮ ಗ್ರಂಥಗಳಿಗೆ ಈ ಹೆಸರನ್ನು ಕೊಟ್ಟವರಲ್ಲಿ ದಂಡಿ (ಕ್ರಿ. ಶ. ೭ ಶತಮಾನದ ಉತ್ತರಾರ್ಧ) ಕೊನೆಯವನೆಂದು ತೋರುತ್ತದೆ. ಛಂದೋವಿಚಿತಿ ಪದವು ಪಾಣಿನೀಯ ಗಣಪಾಠ, ಚಂದ್ರಗಣಪಾಠ, ಜೈನೇಂದ್ರ ಗಣಪಾಠ, ಗಣರತ್ನ ಮಹೋದಧಿ ಮೊದಲಾದ ಪ್ರಾಚೀನ ಗ್ರಂಥಗಳಲ್ಲಿ ಮತ್ತು ಕೌಟಿಲ್ಯ ಅರ್ಥಶಾಸ್ತ್ರದಲ್ಲಿ ಛಂದ:ಶಾಸ್ತ್ರವೆಂಬ ಅರ್ಥದಲ್ಲಿ ಪ್ರಯೋಗಿಸಲಾಗಿದೆಯೆಂದು ವಿದ್ವಾಂಸರು ಹೇಳುತ್ತಾರೆ. ಪಿಂಗಲನ ಛಂದ:ಶಾಸ್ತ್ರಕ್ಕೂ ಪಿಂಗಲಪ್ರೋಕ್ತ ಛಂದೋವಿಚಿತಿ ಎನ್ನುತ್ತಿದ್ದರು. ಪತಂಜಲಿ ಛಂದೋವಿಚಿತಿ, ಜನಾಶ್ರಯಿ ಛಂದೋವಿಚಿತಿ, ದಂಡಿಪ್ರೋಕ್ತ ಛಂದೋವಿಚಿತಿಗಳೂ ಪ್ರಸಿದ್ಧವಿವೆ.[1] ಇದರಿಂದ ರತ್ನ ಮಂಜೂಷಾಕಾರ ಪಿಂಗಲ ಪತಂಜಲಿಗಳಷ್ಟು ಪ್ರಾಚೀನನಿರದಿದ್ದರೂ ಜನಾಶ್ರಯಿ ದಂಡಿ ಮೊದಲಾದವರ ಕಾಲ-ಖಂಡದವದೆಂಬುದು (ಕ್ರಿ.ಶ. ೬೦೦-೯೦೦) ಮತ್ತು 'ಛಂದೋವಿಚಿತಿ' ಮೂಲದಲ್ಲಿ ಆತನ ಗ್ರಂಥಕ್ಕಿದ್ದ ಹೆಸರೆಂಬುದು ವ್ಯಕ್ತವಾಗುತ್ತದೆ. ಆದರೆ ಪಿಂಗಲಾದಿಗಳ ಗ್ರಂಥಗಳು ಅವರವರ ಹೆಸರಿನಿಂದ ಪ್ರಸಿದ್ಧವಿರುವಂತೆ ಇದಾದರೂ ಗ್ರಂಥಕರ್ತನ ನಿಜವಾದ

1. ವೈ. ಛಂ. ವಿ. ಪು. ೩೫-೩೬

ಹೆಸರಿನಿಂದ ಪ್ರಸಿದ್ಧವಿರಬೇಕಿತ್ತು. ರತ್ನಮಂಜೂಷೆಯೆಂಬುದು ಅವಾಂತರ ಆತಏವ ಅನ್ಯನೊಬ್ಬನು ಕೊಟ್ಟ ಹೆಸರಿನಂತೆ ತೋರುತ್ತಿದ್ದು, ಅದನ್ನು ಇಮ್ಮಡಿ ನಾಗವರ್ಮನೇ ಕೊಟ್ಟು ಭಾಷ್ಯ ಬರೆದಿರಬೇಕೆಂದಿನಿಸುತ್ತದೆ.

ಒಂದೊಮ್ಮೆ ಆದಿನಾಗವರ್ಮನಂತೆ ಈ ನಾಗವರ್ಮನಾದರೂ ಒಂದು ಸ್ವತಂತ್ರ ಛಂದೋಗ್ರಂಥವನ್ನು ಬರೆದಿದ್ದರೆ, ತನ್ನ ಒಲವಿಗನುಸರಿಸಿ ಅದಕ್ಕೆ 'ವೃತ್ತರತ್ನ-ಸಮುಚ್ಚಯ', 'ಛಂದೋರತ್ನಾಕರ' ಇಂಥ ಯಾವುದೊಂದು ಹೆಸರು ಕೊಡುತ್ತಿದ್ದನು. ಗ್ರಂಥಗಳ ನಾಮಕರಣದಲ್ಲಿ ಹೇಮಚಂದ್ರನಲ್ಲೂ ಈ ಬಗೆಯ ಒಲವನ್ನು ಕಾಣಬಹುದು. ಕಾವ್ಯಾಂಗ ಚತುಷ್ಟಯದ ಆತನ ಗ್ರಂಥಗಳೆಲ್ಲ ಶಬ್ದಾನುಶಾಸನ, ಕಾವ್ಯಾನುಶಾಶನ, ಛಂದೋನುಶಾಸನ, ಹೀಗೆ ಅನುಶಾಸನಪರಗಳಾಗಿವೆ.

ಇನ್ನು ಗ್ರಂಥಾಂತರ್ಗತವಿರುವ ಪೋಷಕ ಅಂಶಗಳನ್ನಿಷ್ಟು ನೋಡುವಾ. ಇವು ಸಮಾನಾರ್ಥಕ ಅಥವಾ ಸಂವಾದಿಯಾಗಿರುವ ಪದಪ್ರಯೋಗ, ಪದ್ಯ, ಮೊದಲಾದವುಗಳಿಗೆ ಸಂಬಂಧಿಸಿವೆ. ಇಂಥದೊಂದು ಉದಾಹರಣೆ ಕಾವ್ಯಾವಲೋಕನದ ಮತ್ತು ರತ್ನಮಂಜೂಷೆಯ ಮಂಗಲ ಪದ್ಯಗಳಲ್ಲಿಯೆ ದೊರೆಯುತ್ತದೆ. ಇದು ಕಾವ್ಯಾವಲೋಕನದ ಮಂಗಲ ಪದ್ಯ–

ಶ್ರೀವರ್ಧಮಾನನಾನತ
ದೇವಾಧಿಪ ಮಕುಟಕೋಟಿ ಘಟ್ಟಿತಚರಣಂ।
ಕೇವಲ ವಿಬೋಧಲೋಚನ
ನಾವಗಮೊಲ್ದೀಗೆ ಕಾವ್ಯದೊಳ್ ನಮಗರಿವಂ॥

ರತ್ನ ಮಂಜೂಷೆಯ ಮಂಗಲ ಪದ್ಯ ಹೀಗಿದೆ–

ಯೋಭೂತ ಭವ್ಯ ಭವದರ್ಥ ದೇವಾಸುರೇಂದ್ರ ಮುಕುಟಾರ್ಚಿತಪಾದಪದ್ಮಃ॥
ವಿದ್ಯಾನದೀ ಪ್ರಭವ ಪರ್ವತವಿಕ ಏವಕ ತಂಕ್ಷೀಣ ಕಲ್ಮಷಗಣಂಪ್ರಣಮಾಮಿ
ವೀರಂ॥

ಇಲ್ಲಿ ಕಾವ್ಯಾವಲೋಕನದ 'ದೇವಾಧಿಪ ಮಕುಟಕೋಟಿ ಘಟ್ಟಿತ ಚರಣಂ' ಮತ್ತು ರತ್ನ ಮಂಜೂಷೆಯ 'ದೇವಾಸುರೇಂದ್ರ ಮುಕುಟಾರ್ಚಿತ, ಪಾದ ಪದ್ಮಃ' ಪದಗಳನ್ನು ಹೋಲಿಸಿನೋಡಬೇಕು. ಒಂದು ಇನ್ನೊಂದರ ಪ್ರತಿಕೃತಿ ಇದ್ದಂತಿದೆ. ಕಾವ್ಯಾವಲೋಕನದಲ್ಲಿ ವರ್ಧಮಾನ ಜಿನೇಂದ್ರನಸ್ತುತಿ ಇದೆ. ರತ್ನ ಮಂಜೂಷೆಯಲ್ಲಿ 'ವೀರಂ' ಎಂದರೆ ಮಹಾವೀರನಸ್ತುತಿ, ಇದೆ. ವರ್ಧಮಾನ ಎಂಬುದು ಮಹಾವೀರನ ಹೆಸರು. ವಸ್ತುಕೋಶದಲ್ಲೂ ನಾಗವರ್ಮನು ಮಹಾವೀರನನ್ನು ವರ್ಧಮಾನನೆಂದೇ ಸ್ತುತಿಸಿರುವನು. ಕರ್ತೃತ್ವದ ವಿಷಯದಲ್ಲಿ ವಾದಾತೀತವಿರುವ ಇವೆರಡು ಗ್ರಂಥಗಳಲ್ಲಿ ಮಹಾವೀರನನ್ನು ವರ್ಧಮಾನ ಹೆಸರಿನಿಂದ ಸ್ತುತಿಸಿದಂತೆ ರತ್ನಮಂಜೂಷೆಯಲ್ಲೇಕೆ ಸ್ತುತಿಸಿಲ್ಲ? ಎಂದು ಪ್ರಶ್ನಿಸಬಹುದು, ಆದರೆ ಈ ಪ್ರಶ್ನೆಗೆ ಅಷ್ಟೊಂದು ಬಲವಿಲ್ಲ. ಏಕೆಂದರೆ ಕರ್ತೃತ್ವದ ವಿಷಯದಲ್ಲಿ ಇವುಗಳಷ್ಟೇ ವಾದಾತೀತವಿರುವ

ಭಾಷಾ ಭೂಷಣದಲ್ಲಿ ಯಾವುದೊಂದು ವಿಶಿಷ್ಟ ಹೆಸರಿರುವ ಜಿನಸ್ತುತಿಯಿಲ್ಲ. ಆದರೂ ರತ್ನಮಂಜೂಷೆಯ ಮಟ್ಟಿಗೆ ಒಂದು ಕಾರಣವನ್ನು ಸೂಚಿಸಬಹುದು. ಈ ಗ್ರಂಥದ ೪ ನೆಯ ಅಧ್ಯಾಯದಲ್ಲಿ 'ವರ್ಧಮಾನ' ಎಂಬ ವೃತ್ತವನ್ನು ಲಕ್ಷಿಸಲಾಗಿದೆ.[1] ಪರ್ಯಾಯದಿಂದ ಇದು ವರ್ಧಮಾನಜಿನನ ಉಲ್ಲೇಖ ಅತ ಏವ ಅತನ ಸ್ತುತಿಯೆಂದು ಭಾವಿಸಬಹುದಾಗಿದೆ. ಜಯದೇವ ಛಂದಸ್ಸಿನ ಕರ್ತ ಜಯದೇವ (ಕ್ರಿ. ಶ. ೬೦೦-೯೦೦ ಅಥವಾ ಅದಕ್ಕೂ ಮೊದಲು) ಜೈನನಿರಬಹುದೆಂಬುದಕ್ಕೆ ಈ ಗ್ರಂಥವನ್ನು ಸಂಪಾದಿಸಿದ ವೇಲಣಕರರು 'ಗಾಯತ್ರಂ ಛಂದಸಾಂ ಪೂರ್ವಂ ವರ್ಧಮಾನಾಕ್ಷರಂ ಪರಂ' ಎಂಬ ಆತನ ಮಂಗಲ ಶ್ಲೋಕವನ್ನು ಆಧಾರವಾಗಿ ಕೊಟ್ಟಿರುವರು. 'ಗಾಯತ್ರಿಯಿಂದ ಪ್ರಾರಂಭವಾಗಿ ಮುಂದೆ ಒಂದೊಂದು ಅಕ್ಷರದಿಂದ ವರ್ಧಿಸುವ' ಎಂಬುದು ಈ ಶ್ಲೋಕದ ಸರಳಾರ್ಥವಿದೆ. ಆದರೆ ಇಲ್ಲಿರುವ 'ವರ್ಧಮಾನ' ಪದವು ವರ್ಧಮಾನ ಜಿನನ ಆಚ್ಛಾದಿತ ಸ್ತುತಿಯೆಂದಿರುವರು, ವೇಲಣಕರ.[2] ವರ್ಧಮಾನ ವೃತ್ತವನ್ನು ಲಕ್ಷಿಸಿದ ಪ್ರಸಿದ್ಧ ಲಾಕ್ಷಣಿಕರಲ್ಲಿ ಪಿಂಗಲ ಕೇದಾರಭಟ್ಟ ಇಬ್ಬರನ್ನು ಬಿಟ್ಟು ಉಳಿದವರು ಜೈನರಿರುವರು.[3] ಇದರಿಂದಲೂ ಈ ವೃತ್ತದ ಹೆಸರಿನಲ್ಲಿ ಜೈನ ಲಾಕ್ಷಣಿಕರಿಗಿದ್ದ ಪೂಜ್ಯಬುದ್ಧಿ ಅಭಿಮಾನಗಳು ವ್ಯಕ್ತವಾಗುತ್ತವೆ.

ನಾಗವರ್ಮನ ಭಾಷಾಭೂಷಣದ ಮಂಗಲ ಪದ್ಯ ಮತ್ತು ರತ್ನ ಮಂಜೂಷೆಯಲ್ಲಿ ಮಾತ್ರಾ ಸಮಕ ಅಥವಾ ಷೋಡಶ ಮಾತ್ರಾವರ್ಗದ 'ಚಿತ್ರಾ' ಬಂಧದ ಲಕ್ಷ್ಯಪದ್ಯದಲ್ಲಿ ಸಹ ಪದಗಳ ಪರಸ್ಪರ ಪುನರಾವರ್ತಿಯನ್ನು ಕಾಣಬಹುದಾಗಿದೆ. ಇದು ಭಾಷಾಭೂಷಣದ ಮಂಗಲ ಶ್ಲೋಕ—

> ಸರ್ವಜ್ಞಂ ತದಹಂ ವಂದೇ ಪರಂಜ್ಯೋತಿಸ್ತಮೋಪಹಂ [
> ಪ್ರವೃತ್ತಾ ಯನ್ಮುಖಾದ್ದೇವೀ ಸರ್ವಭಾಷಾ ಸರಸ್ವತೀ ||

ರತ್ನಮಂಜೂಷೆಯಲ್ಲಿಯ 'ಚಿತ್ರಾ' ಬಂಧದ ಲಕ್ಷ್ಯ ಪದ್ಯ ಇದು—

> ಕುಜ್ಞಾನ ದೃಷ್ಟಿ ತಮೋ ನಿಹಂತ್ರೀ
> ನಾನಾ ಪ್ರಮಾಣನಯವರ ಚಿತ್ರಾ ।
> ವಾಣೀಜಿನವರ ಕಥಿತಾ ಶುದ್ಧಾ
> ಭಾತ್ಯಂಬರೇರ್ಕ ರುಚಿರಿವ ಚಿತ್ರಾ ||[4]

ಕೊನೆಯ ಪಾದದ ಕೊನೆಯಗಣ 'ಚಿತ್ರಾ' ಎಂಬುದು ಬಂಧದ ಹೆಸರು. ಎರಡನೆಯ ಪಾದದ ಕೊನೆಯ ಗಣದಲ್ಲೂ ಇದು ಬಂದಿದೆ. ಲಕ್ಷ್ಯಕ್ಕಾಗಿಯೆಂದೇ ರಚಿಸಲ್ಪಟ್ಟಿರುವದ

---

1. ರ. ಮಾ. ೪. ೫.
2. ಜಯದಾಮನ್, ಮುನ್ನುಡಿ ಪು.೩೩.
3. ಹೇ. ಛಂ. ಪು. ೩೧೪, ವರ್ಣ ವೃತ್ತ ವಿಷಯ ಚತುಷ್ಪದಿಗಳ ಸೂಚಿ.
4. ರ. ಮಂ ೩. ೧೫.

ರಿಂದ ಪದ್ಯದ ಕೃತ್ರಿಮತೆ ಒಡೆದು ಕಾಣುತ್ತದೆ. ಇದರಲ್ಲಿಯ 'ವಃಣೀಜಿನವರ ಕಥಿತಾ' ಪದವನ್ನೂ ಭಾಷಾಭೂಷಣದ 'ಪ್ರವೃತ್ತಾಯನ್ಮುಖಾದ್ದೇವೀ' ಪದವನ್ನೂ ಹೋಲಿಸಿ ನೋಡಬೇಕು. ಚಿತ್ರಾಬಂಧದ ಲಕ್ಷ್ಯವಾದರೂ ಮೂಲದಲ್ಲಿ ಸರಸ್ವತಿಯ ಸ್ತುತಿ ಇರುವಂತೆ ತೋರುತ್ತದೆ. ಭಾಷಾಭೂಷಣದ 'ತವೋಪಹಂ' ಮತ್ತು ರತ್ನ ಮಂಜೂಷೆಯ 'ಕುಜ್ಞಾನ ದೃಷ್ಟಿ ತವೋನಿಹಂತ್ರೀ' ಪದಗಳು ಸಮನಾರ್ಥಕವಿದ್ದರೂ ಒಂದು ಸರ್ವಜ್ಞನಿಗೆ ಅಂದರೆ ಜಿನನಿಗೆ ಮತ್ತು ಇನ್ನೊಂದು ಚಿತ್ರಾಬಂಧದ ಲಕ್ಷ್ಯದಲ್ಲಿ ವರ್ಣಿತವಾದ ಸ್ತ್ರೀ ವ್ಯಕ್ತಿಗೆ ಅನ್ವಯಿಸುವುದರಿಂದ ಇವುಗಳನ್ನೂ ಲೆಕ್ಕಕ್ಕೆ ತೆಗೆದುಕೊಂಡಿಲ್ಲ.

ಕಾವ್ಯಾವಲೋಕನವು 'ಶ್ರೀವೀತರಾಗಾಯನಮಃ' ಎಂಬ ವಂದನಾತ್ಮಕ ಒಕ್ಕಣಿಕೆಯಿಂದ ಪ್ರಾರಂಭವಾಗುತ್ತದೆ. ಅಭಿಧಾನ ವಸ್ತುಕೋಶ 'ನಮಃ ಸಿದ್ಧೇಭ್ಯಃ' ದಿಂದ ಪ್ರಾರಂಭವಾಗುತ್ತದೆ; ಮುಂದೆ ಪ್ರತಿಯೊಂದು ಕಾಂಡದ ಪ್ರಾರಂಭದಲ್ಲಿ 'ಶ್ರೀವೀತರಾಗಾಯನಮಃ' ಅಥವಾ 'ನಮಃ ಸಿದ್ಧೇಭ್ಯಃ' ಎಂದಿದೆ. ಅಭಿಧಾನ ರತ್ನಮಾಲೆ 'ಶ್ರೀವೀತರಾಗಾಯನಮಃ' ದಿಂದ ಪ್ರಾರಂಭವಾಗುತ್ತದೆ. ಇದರಿಂದ ನಾಗವರ್ಮ 'ವೀತರಾಗ' ಅಥವಾ 'ಸಿದ್ಧ'ನೆಂದು ಜಿನನನ್ನು ವಂದಿಸಿ ಗ್ರಂಥವನ್ನು ಪ್ರಾರಂಭಿಸುತ್ತಿದ್ದನೆಂಬುದು ವ್ಯಕ್ತವಾಗುವದು. ರತ್ನಮಂಜೂಷೆ ಸಹ 'ನಮಃ ಸಿದ್ಧೇಭ್ಯಃ' ದಿಂದ ಪ್ರಾರಂಭವಾಗುತ್ತದೆ. ಭಾಷಾಭೂಷಣದಲ್ಲೂ ಈ ಬಗೆಯ ಒಕ್ಕಣಿಕೆಗಳಿರಲಿಕ್ಕೆ ಸಾಕು. ಆದರೆ ಮುದ್ರಿತ ಪ್ರತಿಗಳಲ್ಲಿ ಸಂಪಾದಕರು ಇವುಗಳನ್ನು ಬಿಟ್ಟಿರುವಂತೆ ತೋರುತ್ತದೆ.

ವಸ್ತುಕೋಶದ ಪೀಠಿಕಾಪ್ರಕರಣದಲ್ಲಿ ವರರುಚಿ, ಹಲಾಯುಧ, ಭಾಗುರಿ, ಶಾಶ್ವತ, ಅಮರಸಿಂಹ, ಮೊದಲಾದ ವ್ಯಾಕರಣ, ಕೋಶಕಾರರನ್ನು ಸ್ಮರಿಸಿ ನಾಗವರ್ಮನು ಅವರಿಗೆ ಸಲ್ಲಬೇಕಿದ್ದ ಗ್ರಂಥಋಣವನ್ನು ಸಲ್ಲಿಸಿರುವನು.[1] ವರರುಚಿ ಅಸಮಾನ್ಯ ಪಂಡಿತ. ಇವನಿಗೆ 'ಏಕಶ್ರುತಧರ' ಎನ್ನುತ್ತಿದ್ದರು. ಒಮ್ಮೆ ಕೇಳಿದರೆ ಸಾಕು ಅದನ್ನು ಅಕ್ಷರಶಃ ತಿರುಗಿ ಒಪ್ಪಿಸುವವ ಅಥವಾ 'ಏಕಪಾಠಿ' ಎಂಬುದು ಈ ಹೆಸರಿನ ಅರ್ಥ. ಪಾಟಲಿಪುತ್ರದಲ್ಲಿ ಯೋಗನಂದನೆಂಬುವನಿಗೆ ಮಂತ್ರಿಯಾಗಿದ್ದನು. ಈತನ 'ಪ್ರಾಕೃತಪ್ರಕಾಶ' ಎಂಬ ಗ್ರಂಥವು ಪ್ರಸಿದ್ಧವಿದೆ.[2] ರತ್ನಮಂಜೂಷೆಯಲ್ಲಿ 'ಲಲನಾ' ವೃತ್ತಕ್ಕಿರುವ ಲಕ್ಷ್ಯ ಪದ್ಯದ ಕೊನೆಯಪಾದದಲ್ಲಿ 'ದ್ವಾರಿ ತಿಷ್ಠತಿ ತವ ವರರುಚಿರಿತಿ ಲಲನೇ' ಎಂದು ವರರುಚಿಯ ಹೆಸರು ಬಂದಿದೆ.[3] ಇದು ಯಾವುದೊಂದು ನಾಟಕದಲ್ಲಿಯ ಪದ್ಯವಿದ್ದು ವೃತ್ತದ ಹೆಸರಿರುವುದರಿಂದ (ಅಥವಾ ಅದನ್ನು ಸೇರಿಸಿ) ಲಕ್ಷ್ಯ

1. ವ. ಕೋ. ೧.೨.
2. ಕಥಾಮೃತ, ಎ. ಆರ್. ಕೃಷ್ಣಶಾಸ್ತ್ರೀ, ಮುನ್ನುಡಿ, ಪು.೨-೮.
3. ರ. ಮಂ. ೬-೨೯.

ಕ್ಕಾಗಿ ಬಳಸಿಕೊಂಡಿರಬೇಕೆಂದು ಸಂಪಾದಕ ವೇಲಣಕರರ ಅಭಿಪ್ರಾಯವಿದೆ.[1] ಈ ವೃತ್ತವನ್ನು ಜನಾಶ್ರಯಿ, ರತ್ನಮಂಜೂಷಾಕಾರ ಮತ್ತು ಹೇಮಚಂದ್ರ ಈ ಮೂವರೇ ಲಕ್ಷಿಸಿರುವರು. ವರರುಚಿಯ ಹೆಸರಿರುವ ಈ ಲಕ್ಷ್ಯವನ್ನು ರತ್ನಮಂಜೂಷೆಯ ಭಾಷ್ಯಕಾರನೊಬ್ಬನೇ ಕೊಟ್ಟಿರುವುದರಿಂದ ಇದರಲ್ಲಿ ನಾಗವರ್ಮನ ಛಾಯೆ ಕಂಡುಬರದಿರಲಾರದು.

ಅಲಂಕಾರಶಾಸ್ತ್ರವಿರಲಿ, ಛಂದಃಶಾಸ್ತ್ರವಿರಲಿ, ಇವುಗಳಲ್ಲಿರುವ ಉದಾಹರಣೆಗಳು ಸಾಮಾನ್ಯವಾಗಿ ಸ್ವಕೃತ, ಅನ್ಯಕೃತ, ಉಭಯ ಎಂದರೆ ಅಲಂಕಾರ ಅಥವಾ ಛಂದೋಬಂಧದ ಹೆಸರನ್ನು ಸೇರಿಸುವಮಟ್ಟಿಗೆ ಪರಿವರ್ತಿಸಿದ ಪದ್ಯಗಳಿರುತ್ತವೆ. ನಾಗವರ್ಮನಾದರೂ ಇದಕ್ಕೆ ಅಪವಾದವಾಗಿಲ್ಲ. ಕಾವ್ಯಾವಲೋಕನದಲ್ಲಿ ಉದಾಹೃತವಾದ ಪದ್ಯಗಳಿಗೆ ಅನೇಕ ಸಂಸ್ಕೃತ, ಪ್ರಾಕೃತ ಪದ್ಯಗಳು ಮಾತೃಕೆ ಅಥವಾ ಸಂವಾದಿಯಾಗಿವೆ. ಇವು ಗಳೊಂದಿಗೆ ಪಂಪ, ರನ್ನ, ಪೊನ್ನ ಮೊದಲಾದ ಕನ್ನಡಕವಿಗಳ ಪದ್ಯಗಳೂ ಇವೆ. 'ಕವಿತಾ ಗುಣೋದಯ'ನೆಂಬ ಬಿರುದುಳ್ಳವನಾದ್ದರಿಂದ ಸ್ವಕೃತ ಪದ್ಯಗಳೂ ಇರಬಹುದಾಗಿದೆ. ಈ ಉದಾಹರಣೆಗಳ ಸಂಕಲನ ಅಥವಾ ರಚನೆಯಲ್ಲಿ ಅವನದೊಂದು ವಿಶಿಷ್ಟ ಪ್ರವೃತ್ತಿಯನ್ನು ಕಾಣಬಹುದು. ಅದೆಂದರೆ ಕಾವ್ಯ, ಚಂಪೂ ಮೊದಲಾದ ಲಲಿತಸಾಹಿತ್ಯಕ್ಕೆ ಸಂಬಂಧಿಸಿದ ಸ್ವಕೃತ ಅಥವಾ ಅನ್ಯಕೃತ ಪದ್ಯಗಳೊಡನೆ, ಜಿನಸ್ತುತಿ, ಜೈನಧರ್ಮದ ಮೇಲ್ಮೆ, ವೈದ್ಯಶಾಸ್ತ್ರ, ಜೋತಿಷ, ಸಾಮುದ್ರಿಕ ಮೊದಲಾದವುಗಳಿಗೆ ಸಂಬಂಧಿಸಿದ ಪದ್ಯಗಳನ್ನು ಸೇರಿಸಿರುವದು. ಇದರಿಂದ ಅವನು ಕಾವ್ಯ, ಕಾವ್ಯಶಾಸ್ತ್ರ, ಶಾಸ್ತ್ರಕಾವ್ಯ ಮತ್ತು ಇತರ ವಿಷಯಗಳನ್ನು ಬಲ್ಲವ ಅಂದರೆ 'ಬಹುಜ್ಞ'ನಿದ್ದನೆಂಬುದು ವ್ಯಕ್ತವಾಗುತ್ತದೆ. ಕಾವ್ಯಾವಲೋಕನ ಕ್ರಮಾಂಕ ೩೮, ೮೩, ೮೯, ೧೧೧, ೨೬೦, ೩೬೯, ೪೫೮, ೫೭೩, ೮೮೭ನೆಯ ಪದ್ಯಗಳು ಜಿನಸ್ತುತಿ ಅಥವಾ ಜೈನಧರ್ಮಕ್ಕೆ ಸಂಬಂಧಿಸಿವೆ. ಇವುಗಳಲ್ಲಿ ಎರಡು ಆದಿಪಂಪನ ಮತ್ತು ಒಂದು ಪೊನ್ನನ ಪದ್ಯಗಳಿವೆ. ಮಿಕ್ಕವು ಸ್ವಕೃತವಿರಬಹುದು ಅನ್ಯಕೃತವಿರಬಹುದು. ಪದ್ಯ ೨೬೮, ೨೭೧, ೪೭೦ ವೈದ್ಯಶಾಸ್ತ್ರಕ್ಕೆ ಸಂಬಂಧಿಸಿವೆ. ಇವುಗಳಲ್ಲಿ ಒಂದರಲ್ಲಿ ಸರ್ಪದಂಶಕ್ಕೆ ಇನ್ನೊಂದರಲ್ಲಿ ಕುರುವಿಗೆ ಚಿಕಿತ್ಸೆ ಹೇಳಿದ್ದು, ಮೂರನೆಯದು ತ್ರಿದೋಷ ಅಂದರೆ ವಾತ, ಪಿತ್ತ, ಕಫ ವಿಕಾರಗಳಿಗೆ ಸಂಬಂಧಿಸಿದೆ. ಪದ್ಯ ೨೧೫ ಜ್ಯೋತಿಷಕ್ಕೆ, ೨೫೬ ಸಾಮುದ್ರಿಕಶಾಸ್ತ್ರಕ್ಕೆ, ೨೪೧ ಸೂಪಶಾಸ್ತ್ರಕ್ಕೆ ಸಂಬಂಧಿಸಿವೆ. ಮಿಕ್ಕವು ಸುಭಾಷಿತ ಮತ್ತು ಲಲಿತ ಸಾಹಿತ್ಯದಲ್ಲಿಯ ಪದ್ಯಗಳಿವೆ. ರತ್ನಮಂಜೂಷೆಯಲ್ಲಿ ಸಹ ಈ ಬಗೆಯ ಸಂಕಲನವನ್ನು ಕಾಣಬಹುದು. ಇಲ್ಲಿ ೧೬ ಉದಾಹೃತ ಪದ್ಯಗಳು ಜಿನಸ್ತುತಿ ಅಥವಾ ಜೈನಧರ್ಮಕ್ಕೆ ಸಂಬಂಧಿಸಿವೆ. ಬೇರೆ ಕೆಲವು ನೀತಿ, ವೈರಾಗ್ಯಪರವಿವೆ. ೨೫ ಸಾಮುದ್ರಿಕಶಾಸ್ತ್ರಕ್ಕೆ ಸಂಬಂಧಿಸಿವೆ. ಇವುಗಳೊಂದಿಗೆ ಕಾಲಿದಾಸನ ಶಾಕುಂತಲ ಮತ್ತು ಇತರ ಲಲಿತಸಾಹಿತ್ಯದಲ್ಲಿಯ ಪದ್ಯಗಳಿವೆ.

1. ಅದೇ, ಮುನ್ನುಡಿ, ಪು. ೧.

ರತ್ನಮಂಜೂಷೆಯಲ್ಲಿ ಕನ್ನಡ ವಿಶಿಷ್ಟ ಛಂದೋಬಂದಗಳಿಲ್ಲ. ನಾಗವರ್ಮನ ವಸ್ತುಕೋಶ, ಭಾಷಾಭೂಷಣ, ಕಾವ್ಯಾವಲೋಕನ, ಅಭಿದಾನರತ್ನಮಾಲೆ ಗ್ರಂಥಗಳು ಕನ್ನಡಭಾಷೆ ಸಾಹಿತ್ಯಗಳಿಗೆ ಸಂಬಂಧಿಸಿವೆ. ಭಾಷಾಭೂಷಣ ಸಂಸ್ಕೃತದಲ್ಲಿದ್ದರೂ ಅದರ ವಿಷಯ ಕನ್ನಡ ವ್ಯಾಕರಣ. ಅತಏವ ಆತನ ಛಂದೋವಿಚಿತಿ ಒಂದೊವ್ಮೆ ಸಂಸ್ಕೃತದಲ್ಲಿದ್ದರೂ ಕನ್ನಡಕ್ಕೆ ಸಂಬಂಧಿಸಿರಬೇಕು. ಆದ್ದರಿಂದ ಕನ್ನಡ ವಿಶಿಷ್ಟ ಛಂದೋಬಂಧಗಳು ಅಂದರೆ ಪಿರಿಯಕ್ಕರ ಮೊದಲಾದ ಕರ್ಣಾಟಕ ವಿಷಯ ಜಾತಿಗಳ ಉಲ್ಲೇಖ ಈ ಗ್ರಂಥದಲ್ಲಿರುವದು ಕ್ರಮಪ್ರಾಪ್ತವಿದೆ. ಇದು ವಿಚಾರಾರ್ಹ ಆಕ್ಷೇಪಣೆ. ಆದರೆ ಈ ಸಂದರ್ಭದಲ್ಲಿ ರತ್ನಮಂಜೂಷೆಯ ಗ್ರಂಥಕಾರ ಬೇರೆ ಭಾಷ್ಯಕಾರ ಬೇರೆ ಎಂಬುದನ್ನು ನೆನೆಯಬೇಕು. ಗ್ರಂಥಕಾರ ದಾಕ್ಷಿಣಾತ್ಯನೆಂದು ಊಹಿಸಲಾಗಿದ್ದರೂ ಕನ್ನಡಿಗನೆಂದು ಭಾವಿಸಲು ಯಾವುದೆ ಬಗೆಯ ಆಧಾರವಿಲ್ಲ. ಭಾಷ್ಯಕಾರ, ಅವನು, ಇಮ್ಮಡಿ ನಾಗವರ್ಮನಿರಲಿ ಅನ್ಯನಿರಲಿ, ಮೂಲದಲ್ಲಿರುವುದನ್ನು ವಿವರಿಸಿ ಹೇಳಬಲ್ಲನು, ಇಷ್ಟೇ.

ಅಲ್ಲದೆ ಕನ್ನಡ ವಿಶಿಷ್ಟ ಛಂದೋಬಂಧಗಳನ್ನು ಇಬ್ಬರೇ ಹೇಳಿರುವರು. ಒಬ್ಬನು ಆದಿನಾಗವರ್ಮ, ಇನ್ನೊಬ್ಬನು ಜಯಕೀರ್ತಿ. ತುಸು ಹೆಚ್ಚುಕಡಮೆ ಇಬ್ಬರೂ ಸಮಕಾಲೀನರು (ಕ್ರಿ. ವ. ೯೯೦–೧೦೦೦) ಕರ್ನಾಟಕ ವಿಷಯ ಜಾತಿಗಳ ಆಳಿಕೆ ಇವರ ಕಾಲದಲ್ಲಿಯೇ ಏಕೆ ಇವರಿಗಿಂತ ಎಷ್ಟೋ ಮೊದಲಿನವನಾದ ಕವಿರಾಜಮಾರ್ಗಕಾರನ ಕಾಲದಲ್ಲಿಯೇ ಇಳಿಮುಖವಾಗಿದ್ದಿತು. ನಾಲ್ಕಾರು ಗೀತಿಕೆಗಳನ್ನು ಬಿಟ್ಟರೆ ಕವಿರಾಜಮಾರ್ಗದಲ್ಲಿಯ ಉಳಿದ ಪದ್ಯಗಳು ಕಂದವೃತ್ತಗಳು. ಸ್ವತಃ ಆದಿನಾಗವರ್ಮನದೆನ್ನುವ ಕರ್ನಾಟಕ ಕಾದಂಬರಿಯಲ್ಲಿ ಸಹ ಒಂದೆರಡು ಪಿರಿಯಕ್ಕರಗಳನ್ನು ಬಿಟ್ಟರೆ ಮಿಕ್ಕವೆಲ್ಲ ಕಂದವೃತ್ತಗಳು. ಇಮ್ಮಡಿ ನಾಗವರ್ಮನ ಕಾವ್ಯಾವಲೋಕನ ವಸ್ತುಕೋಶಗಳಲ್ಲಿ ಸಹ ಅಲ್ಲೊಂದು ಇಲ್ಲೊಂದು ಗೀತಿಕೆ, ಪಿರಿಯಕ್ಕರ ತ್ರಿಪದಿ ಕಂಡುಬರುತ್ತವೆ. ಕರ್ನಾಟಕ ವಿಷಯ ಜಾತಿಗಳ ಸ್ಥಿತಿ ಹೀಗೇಕಾಯಿತು; ಇತರರಿರಲಿ, ಕನಿಷ್ಠ ಪಕ್ಷದಲ್ಲಿ ಕನ್ನಡ ಕವಿಗಳಾದರೂ ಇವುಗಳನ್ನೇಕೆ ಪುರಸ್ಕರಿಸಲಿಲ್ಲ ; ಇವುಗಳ ವ್ಯಾಪ್ತಿ ಈಗ ತಿಳಿದುಕೊಂಡಂತೆ ಕನ್ನಡ,ತೆಲುಗು, ತಮಿಳು ಭಾಷೆಗಳಿಗಿಷ್ಟೇ ಪರಿಮಿತವಿದ್ದಿತೇ ಅಥವಾ ಇತರೆಡೆಗಳಲ್ಲೂ ಪ್ರಸರಿಸಿದ್ದಿತೇ, ಇವೇ ಮೊದಲಾದ ವಿಷಯಗಳ ಚರ್ಚೆಗೆ ಬೇರೊಂದು ಪ್ರಬಂಧವೇ ಬೇಕು.

ಆದರೆ ಒಂದು ಮಾತನ್ನು ಹೇಳಬಹುದು. ಅದೆಂದರೆ ಇಮ್ಮಡಿ ನಾಗವರ್ಮನು ತನ್ನ ಛಂದೋವಿಚಿತಿಯನ್ನು ಕನ್ನಡಕ್ಕಾಗಿ ಕನ್ನಡದಲ್ಲಿಯೇ ಬರೆದಿದ್ದರೂ ಕೂಡ ಬಹುಶಃ ಅವನು ಅದರಲ್ಲಿ ಇವುಗಳಿಗೆ ಸ್ಥಾನ ಕೊಡುತ್ತಿದ್ದಿಲ್ಲವೆಂಬುದು. ಇದಕ್ಕೆ ಸ್ಥೂಲವಾಗಿ ಇಲ್ಲಿ ಒಂದು ಕಾರಣವನ್ನು ಕೊಡಬಹುದು. ಕರ್ಣಾಟಕ ವಿಷಯ ಜಾತಿಗಳು ಕಾವ್ಯೋಪಯೋಗಿ ಛಂದೋಬಂಧಗಳಲ್ಲವೆಂದು ಲಾಕ್ಷಣಿಕರು ಬಗೆದುದರಿಂದ ಅವುಗಳ ಬಳಕೆ ಕಡಿಮೆಯಾಗುತ್ತ ಕೊನೆಗೆ ಇಲ್ಲದಂತಾಯಿತೆಂದು ಹೇಳಬಹುದು. ಜಯಕೀರ್ತಿ ಈ ಬಂಧಗಳಲ್ಲಿ ರಚಿತವಾದ ಕರ್ಣಾಟೇಶ್ವರ ಕಥಾ ಕರ್ನಾಟಕ ಕುಮಾರ

ಸಂಭವ ಕಾವ್ಯ, ಚೂಡಾಮಣಿ ಮೊದಲಾದುವನ್ನು ಉಲ್ಲೇಖಿಸಿರುವನು. ಇವುಗಳಲ್ಲಿ ಕರ್ಣಾಟಕ ಕುಮಾರಸಂಭವ ಕಾವ್ಯ ಅಸಗನದೆಂದಿರುವನು.[1] ಅಸಗನ ಕಾಲ ಕ್ರಿ. ಶ. ೯೦೦ ಮತ್ತು ಚೂಡಾಮಣಿ ೧೦ ನೆಯ ಶತಮಾನದ್ದೆಂದು ಭಾವಿಸಲಾಗಿದೆ.[2] ಈ ಕಾಲವು ಆದಿನಾಗವರ್ಮ ಮತ್ತು ಜಯಕೀರ್ತಿಯ ಕಾಲದ ಸಮೀಪವರ್ತಿಯಾಗಿರುವ ದರಿಂದ, ಕವಿಗಳಲ್ಲಿ ಅಸಗಾದಿಗಳದೊಂದು ಪಕ್ಷ ಮತ್ತು ಇವು ಕಾವ್ಯೋಪಯೋಗಿ ಬಂಧಗಳಲ್ಲವೆಂದು ಬಗೆದವರ ಇನ್ನೊಂದು ಪಕ್ಷ, ಹೀಗೆ ಎರಡು ಪಕ್ಷಗಳಿದ್ದು ಸಾಕಷ್ಟು ಪ್ರೋತ್ಸಾಹವಿಲ್ಲದೆ ಅಸಗ ಪಕ್ಷ ಹಿಂದೆ ಬಿದ್ದು, ಇವುಗಳ ಬಳಕೆ ಕ್ರಮೇಣ ಇಲ್ಲದಂತಾ ಯಿತೆಂದು ಭಾವಿಸಬಹುದಾಗಿದೆ.'

ಮೇಲಾಗಿ ಅಚ್ಚಗನ್ನಡ ಛಂದೋಬಂಧಗಳೆಂದು ಇವುಗಳಲ್ಲಿ ಅಭಿಮಾನ ತಳೆ ದವರು ಈಗಿನವರಾದ ನಾವು. ಕವಿರಾಜಮಾರ್ಗಕಾರನಾಗಲಿ ಆದಿನಾಗವರ್ಮ ಮತ್ತು ಆತನ ನಂತರದವರಾಗಲಿ ಹೆಚ್ಚೇಕೆ ಇಮ್ಮಡಿ ನಾಗವರ್ಮ ಸಹ ಈರೀತಿ ಅಭಿಮಾನ ತಳೆದಿದ್ದಿಲ್ಲವೆಂಬುದು ಅವರ ಗ್ರಂಥಗಳಿಂದಲೇ ಗೊತ್ತಾಗುವುದು. ಇತ್ತ ವರ್ಣಛಂದಸ್ಸು ಗಳು ವೈದಿಕ ಛಂದಸ್ಸುಗಳಂತೆ ಅಕ್ಷರನಿಯತವಿದ್ದುದರಿಂದ ಅವುಗಳಿಂದಲೇ ಹುಟ್ಟಿ ಬಂದಂಥವು, ವ್ಯಾಸ ವಾಲ್ಮೀಕಿಗಳಂಥವರು ಬಳಸಿರುವದರಿಂದ ವೈದಿಕ ಛಂದಸ್ಸು ಗಳಷ್ಟೇ ಪವಿತ್ರ, ದೇವತಾದಿಸ್ತೋತ್ರ, ಶಾಸ್ತ್ರಾದಿಗಳ ನಿರೂಪಣೆಗೆ ಯೋಗ್ಯವಾ ದಂಥವು, ಎಂಬ ಭಾವನೆ ನಾಟ್ಯಶಾಸ್ತ್ರಕಾರ ಭರತನಿಂದಲೂ ಬೆಳೆದುಬಂದಿತ್ತು. 'ಗಾಯತ್ರ್ಯಾದಿ ತ್ರಿಷ್ಟುಪ್ಪರ್ಯಂತಂ ಯದಾರ್ಷಂ ಛಂದೋ ಜಾತಂ ವೈದಿಕೇ ವ್ಯಾಖ್ಯಾತಂ, ಲೌಕಿಕೇಚ ತತ್ತಥೈವ ದ್ರಷ್ಟವ್ಯಮ್ ಕಿಂಚತದಾರ್ಷಂ ? ಚತುರ್ವಿಂಶ ತ್ಯಕ್ಷರಾ ಗಾಯತ್ರೀ, ಅಷ್ಟಾವಿಂಶತ್ಯಕ್ಷರೋಷ್ಣಿಕ್....ಏಷಾಂಛಂದಸಾಂ ವೈದಿಕತ್ವ ಮೇವ....ಆರ್ಯಾದಿನಾಂ ಚೂಲಿಕಾಪರ್ಯಂತಾನಾಂ ಲೌಕಿಕತ್ವಮೇವ ಸಮಾನ್ಯಾ ದೀನಾಮುತ್ಕೃತಿ ಪರ್ಯಂತಾನಾಂ ವೈದಿಕತ್ವಂ ಲೌಕಿಕತ್ವಂಚ, ಎಂದು ವಿವರಿಸಿರು ವದು, ಪಿಂಗಲನ ಭಾಷ್ಯಕಾರ ಹಲಾಯುಧ. 'ದಿವ್ಯೋ ದಿವ್ಯೇತರಶ್ಚೈವ ದಿವ್ಯ ಮಾನುಷ ಏವಚ' ಎಂಬ ಭರತೋಕ್ತಿಗೆ ಆತನ ವ್ಯಾಖ್ಯಾಕಾರ ಅಭಿನವಗುಪ್ತ ದಿವ್ಯ ಎಂದರೆ ಸ್ತೋತ್ರ ಶಾಸ್ತ್ರಾದಿಗಳಿಗೆ ಗಾಯತ್ರಿಯಿಂದ ಜಗತೀವರೆಗಿನ ಪ್ರಥಮ ಸಪ್ತಕದಲ್ಲಿಯ ಛಂದೋಬಂಧಗಳನ್ನು ದಿವ್ಯೇತರ ಅಂದರೆ ಮಾನವರ ಸಂಬಂಧದಲ್ಲಿ ಅತಿಜಗತಿಯಿಂದ ಅತಿಧೃತಿವರೆಗಿನ ದ್ವಿತೀಯ ಸಪ್ತಕದ ಛಂದೋಬಂಧಗಳನ್ನು ಮತ್ತು ದಿವ್ಯಮಾನುಷ ಅಂದರೆ ರಾಮಾದಿ ನರಪತಿಗಳಿಗೆ ಸಂಬಂಧದಲ್ಲಿ ಕೃತಿಯಿಂದ ಉತ್ಕೃತಿವರೆಗಿನ ತೃತೀಯ ಸಪ್ತಕಗಳ ಛಂದೋಬಂಧಗಳನ್ನು ಬಳಸಬೇಕೆಂದು ವಿವರಿ ಸಿರುವನು.[3]

---

1. ಜಿಯಮಾಮುನ್ ಪು. ೬೬, (ಜ. ಕೀ. ಛಂ. ಅಧಿಕರಣ ೭)
2. ಕ. ಸಾ. ಚ. ಪು. ೩೦.
3. ವೈ. ಛಂ. ಮೀ. ಪು. ೯೨-೯೩.

ಈ ರೀತಿ 'ಶಿಷ್ಟ' ಕಾವ್ಯಗಳಿಗೆ ಬಳಸಲು ಇವು 'ಶಿಷ್ಟ' ಛಂದೋಬಂಧಗಳೆಂದು ಪರಿಗಣಿಸಲ್ಪಟ್ಟವು. ಇದು ಸಂಸ್ಕೃತ ಕಾವ್ಯಪರಂಪರೆಗೆ ಸಂಬಂಧಿಸಿದ್ದರೂ ಸಂಸ್ಕೃತವನ್ನೇ ಆದರ್ಶವಾಗಿಟ್ಟುಕೊಂಡ ಪ್ರಾಕೃತಾದಿ ದೇಶೀ ಭಾಷೆಗಳಲ್ಲಿಯ ಕವಿಗಳಾದರೂ ಇದೇ ದಾರಿಯಲ್ಲಿ ಸಾಗಿದರು. ಈ ಪ್ರವೃತ್ತಿ ಇಮ್ಮಡಿ ನಾಗವರ್ಮನಷ್ಟೊತ್ತಿಗೆ ಪರಮಾವಧಿಗೇರಿತ್ತೆಂಬುದು ಆತನಿಂದ ಮುಂದೆ ೫೦ ವರ್ಷಗಳನಂತರ ಆಗಿಹೋದ ಆಂಡಯ್ಯನು (ಕ್ರಿ. ವ. ೧೨೩೫) ಸಂಸ್ಕೃತದ ಅತೀವ ಪ್ರಾಬಲ್ಯದಿಂದ ಬೇಸತ್ತು ಸಂಸ್ಕೃತ ಬೆರಸದೆ ಕನ್ನಡ ಬರೆಯುವ ಪಣತೊಟ್ಟು ಬರೆದ 'ಕಬ್ಬಿಗರ ಕಾವ'ವೇ ಸಾಕ್ಷಿ. ಅವನು ಸಹ ಪದಪ್ರಯೋಗದಲ್ಲಿ ತನ್ನ ಪ್ರತಿಜ್ಞೆಯನ್ನು ಪಾಲಿಸಿರುವನಲ್ಲದೆ ಛಂದಸ್ಸಿನ ವಿಷಯದಲ್ಲಿ ಪೂರ್ವಿಕರ ದಾರಿಯನ್ನೇ ತುಳಿದಿರುವನು. ಆದಿನಾಗವರ್ಮ ಸಹ ಛಂದೋಂಬುಧಿಯ ಅಲ್ಪ ಭಾಗವನ್ನು ಮಾತ್ರ ಅಚ್ಚಗನ್ನಡ ಛಂದಸ್ಸಿಗೆ ವಿನಿಯೋಗಿಸಿರುವುದರಿಂದ ಸಂಸ್ಕೃತ ಛಂದಸ್ಸು ಕನ್ನಡದಲ್ಲಿ ಪ್ರಧಾನವೆಂದೂ, 'ಕನ್ನಡ ಛಂದಸ್ಸು ಅತಿವಿರಳವೆಂದೂ ಕಡೆಗೆ ಅದು ಉಂಟೊ ಇಲ್ಲವೊ, ಇದ್ದರೂ ಮಹತ್ತಿನದಲ್ಲವೆಂದೂ ಬುದ್ಧಿಗೆ ಭಾಸವಾಗುತ್ತದೆ' ಎಂಬ ಕನ್ನಡಕೈಪಿಡಿಕಾರರ ಮಾತುಗಳು ಇಲ್ಲಿ ಸಂದರ್ಭೋಚಿತವಾಗಿವೆ.[1]

ಈ ಆಭಾಸ ಆದಿನಾಗವರ್ಮನ ಮಟ್ಟಿಗೆ ಪರಿಮಿತವಲ್ಲ. ಇದು ಹೀಗೆಯೆ ಮುಂದರಿದು ಇಮ್ಮಡಿ ನಾಗವರ್ಮನ ನಂತರ ಹರಿಹರ ರಾಘವಾಂಕಾದಿಗಳ ಪರಿಶ್ರಮದಿಂದ ರಗಳೆ, ಷಟ್ಪದಿ ಮೊದಲಾದ ದೇಶೀ ಬಂಧಗಳು ಸಾಕಷ್ಟು ಲೋಕಪ್ರಿಯವಾದರೂ ಕನ್ನಡದಲ್ಲಿ ಕನ್ನಡದ್ದು ಎಂಬುದೇನೂ ಇಲ್ಲವೆಂಬ ಭಾವನೆ ೧೯ನೆಯ ಶತಮಾನದ ಕೊನೆವರೆಗೆ (ಕನ್ನಡ ಸಾಹಿತ್ಯದ ವರ್ತಮಾನಯುಗದವರೆಗೆ ಎಂದರೂ ಸಲ್ಲುವದು) ಸಾಗಿ ಬಂದಿರುವುದನ್ನು ಈ ಕೆಳಗಿನ ಕಂದದಲ್ಲಿ ಕಾಣಬಹುದು–

> ಕನ್ನಡದಿ ಪೇಳ್ವುದೆಲ್ಲವು
> ಮುನ್ನದಿ ಸಕ್ಕದದಲಿರ್ದುದರಿಂ ಪೆರತೇಂ।
> ಇನ್ನೊರೆವರಾರು ಮದನೇ
> ಚೆನ್ನಾಗಿಯೆ ನೋಡೆ ಕನ್ನಡವು ಕನ್ನಡಿಯೆ ॥

ಈ ಪದ್ಯ ಚನ್ನಪಟ್ಟಣದ ಚಾವಲಿರಾಮಸ್ವಾಮಿ ಎಂಬಾತನ 'ಕರ್ಣಾಟ ಛಂದೋಲಂಕಾರ ಸಾಹಿತ್ಯಲಕ್ಷಣ ಸಂಗ್ರಹ' ಗ್ರಂಥದಲ್ಲಿ (ಕ್ರಿ.ವ. ೧೮೮೫) ದೆಯೆಂದು ತಿಳಿಸಿ, ತೀ.ನಂ.ಶ್ರೀ. ಒಂದು ಹೆಜ್ಜೆ ಮುಂದೆಹೋಗಿ, ಚಾವಲಿಶಾಸ್ತ್ರಿ ಇದನ್ನು ಹೇಳಿರುವದು ಛಂದಸ್ಸಿನ ವಿಷಯದಲ್ಲಿ, ಆದರೆ ಅಲ್ಲಿಗಿಂತ ಅಲಂಕಾರಶಾಸ್ತ್ರಕ್ಕೆ ಹೆಚ್ಚು ಒಪ್ಪುತ್ತದೆ, ಎಂದಿರುವರು.[2] ಚಾವಲಿಶಾಸ್ತ್ರಿಯ ಈ ಪದ್ಯಕ್ಕೆ ಸಂವಾದಿಯಾಗಿರುವ ಇನ್ನೊಂದು ಪದ್ಯ ಇದು–

1. ಕನ್ನಡ ಕೈಪಿಡಿ, ಸಂ. ೧, ಪು. ೧೧೭
2. ಭಾ. ಕಾ. ಮೀ. ಪು. ೫೦೮

ಕನ್ನಡದ ನುಡಿಯೆಂದುಪೇಕ್ಷಿಸ
ಲಿನ್ನು ಹಿರಿಯರಿಗುಚಿತನಲ್ಲದು
ಕನ್ನಡಿಯೆ ದರ್ಪಣವದಲ್ಲದೆ ಭೇದವೇನಿದಕೆ।

ಈ ಷಟ್ಪದಿಯರ್ಥವನ್ನು ಭಾಮಿನೀಷಟ್ಪದಿಗೆ ಲಕ್ಷ್ಯವೆಂದು ಕ್ಯಾಪ್ಟನ್ ಜೆ. ಎಸ್. ಎಫ್. ಮೆಕೆಂಝಿ ಎಂಬಾತನು ಚಾವಲಿಶಾಸ್ತ್ರಿಗಿಂತ ಮೊದಲು ೧೨ ವರ್ಷ ಅಂದರೆ ೧೮೭೩ರಲ್ಲಿ ಕನ್ನಡ ಛಂದಸ್ಸನ್ನು ಕುರಿತಿರುವ ಲೇಖದಲ್ಲಿ ಕೊಟ್ಟಿರುವನು.[1]

೧೯ನೆಯ ಶತಮಾನದ ಕೊನೆಯಲ್ಲಿ ಸಹ ಕನ್ನಡದ ವಿಷಯದಲ್ಲಿ ಕಂಡುಬರುತ್ತಿದ್ದ ಈ ಬಗೆಯ ಭಾವನೆ ಇಮ್ಮಡಿ ನಾಗವರ್ಮನ ಕಾಲದಲ್ಲಿ ಇನ್ನೂ ಹೆಚ್ಚು ದೃಢವಾಗಿದ್ದಿತೆಂಬುದು ಅತಿಶಯೋಕ್ತಿ ಅಥವಾ ಅಚ್ಚರಿಯ ವಿಷಯವಾಗದು. ಇದು ಮತ್ತು ಇನ್ನಿತರ ಕಾರಣಗಳಿಂದ ಬಹುಶಃ ಆತನಿಗೆ ಕನ್ನಡ ಛಂದಸ್ಸಿಗೊಂದು ಸಂಸ್ಕೃತದಲ್ಲಾಗಲಿ ಕನ್ನಡದಲ್ಲಾಗಲಿ ಪ್ರತ್ಯೇಕ ಗ್ರಂಥದ ಅಗತ್ಯವೆನಿಸಿರಲಿಕ್ಕಿಲ್ಲ. ಅತಏವ ಉಪಲಬ್ಧವಿದ್ದ ಈ ಪ್ರಾಚೀನ ಛಂದೋಗ್ರಂಥಕ್ಕೆ–'ಛಂದೋವಿಚಿತಿ'ಗೆ 'ರತ್ನಮಂಜೂಷಾ' ಎಂದು ಹೆಸರಿಸಿ 'ಹಲಾಯುಧನ ಅಭಿಧಾನ ರತ್ನಮಾಲೆಗೆ ಟೀಕೆ ಬರೆದಂತೆ, ಭಾಷ್ಯಬರೆದಿರಬೇಕೆನಿಸುತ್ತದೆ; ಮತ್ತು ಈ ರೀತಿ ಹೇಮಚಂದ್ರನಂತೆ ಕಾವ್ಯಾಂಗಚತುಷ್ಟಯಕ್ಕೆ ಸಂಬಂಧಿಸಿ ತಾನೂ ಒಂದೊಂದು ಗ್ರಂಥವನ್ನು ಬರೆಯಬೇಕೆಂಬ ಸಂಕಲ್ಪವನ್ನು ಪೂರ್ತಿಗೊಳಿಸಿರಬೇಕೆನಿಸುತ್ತದೆ.

ಯತಿ ವಿಷಯದಲ್ಲಿ ಕಂಡುಬರುವ ರತ್ನಮಂಜೂಷೆಯ ಭಾಷ್ಯಕಾರನ 'ಕನ್ನಡತನ' ಅವನು ಇಮ್ಮಡಿ ನಾಗವರ್ಮನಿರಬಹುದೆಂಬುದಕ್ಕೆ ಇನ್ನೊಂದು ಪೋಷಕ ಅಂಶವೆನ್ನಬಹುದು. ಕನ್ನಡದಲ್ಲಿ, ಗ್ರಂಥೋಕ್ತವಿರುವಂತೆ ಯತಿಯನ್ನು ಪಾಲಿಸಿ ಪದ್ಯವನ್ನು ಓದಿದರೆ, ಸಾಮಾನ್ಯರಿರಲಿ ಮಹಾಕವಿಗಳ ಪದ್ಯಗಳಲ್ಲಿ ಸಹ ಅರ್ಥಸ್ಫೂರ್ತಿ ಕೆಡುವದೆಂಬುದು ಗೊತ್ತಿದ್ದ ವಿಷಯ. ಆದ್ದರಿಂದ ವಿದ್ವಾಂಸರು ಕನ್ನಡದಲ್ಲಿ ಯತಿಯು ಐಚ್ಛಿಕವಾಗಿರುವದೆ ಹೊರತು ನಿಯತವಾಗಿಲ್ಲೆಂಬ ನಿಲುಗಡೆಗೆ ಬಂದಿರುವರು.[2] ರತ್ನಮಂಜೂಷಾಕಾರನು ಯತಿಯನ್ನು 'ಛೇದಃ' ಎಂದು ಒಂದೇ ಒಂದು ಶಬ್ದವಿರುವ ಸೂತ್ರದಿಂದ ನಿರೂಪಿಸಿರುವನು. ಭಾಷ್ಯಕಾರ ಸಹ 'ಶ್ರುತಿ-ಸುಭಗ-ಸ್ಥಿತಿಃ' ಎಂದು ಒಂದೇ ಒಂದು ಶಬ್ದದಿಂದ ಅದನ್ನು ವಿವರಿಸಿರುವನು.[3] ಯತಿಪಾಲನೆಯಲ್ಲಿ, ಶ್ರವ್ಯತೆ ಮತ್ತು ಅರ್ಥಸ್ಫೂರ್ತಿ ಎರಡೂ ಸರಾಗವಾಗಿ ಹೊಂದಿಕೊಂಡಿದ್ದರೆ ಮಾತ್ರ ಭಾಷ್ಯಕಾರನು ಹೇಳಿದ 'ಶ್ರುತಿ-ಸುಭಗ-ಸ್ಥಿತಿ' ಉಂಟಾಗುವುದೆಂಬುದನ್ನು ಬೇರೆ ಹೇಳಬೇಕಿಲ್ಲ. ಭಾಷ್ಯಕಾರನು ಈ ವಿವರಣೆಯಿಂದ ಕನ್ನಡದಲ್ಲಿ ಯತಿ ವಿಷಯದಲ್ಲಿ ಶಾಸ್ತ್ರ ಮತ್ತು ಪ್ರಯೋಗದಲ್ಲಿ ಕಂಡುಬರುವ ವ್ಯತ್ಯಾಸವನ್ನು ಗ್ರಂಥೋಕ್ತಯತಿ ಎಲ್ಲಿಯೆ ಇದ್ದರೂ

---

1. ಇ. ಎಂ. ಸಂ. ೨, ಪು. ೧೧೨.
2. ಕನ್ನಡ ಕೈಪಿಡಿ ಸಂ. ೧, ಪು. ೬೬
3. ರ. ಮಂ. ೧, ೧೮

'ಶ್ರುತಿ-ಸುಭಗ-ಸ್ಥಿತಿ' ಉಂಟಾಗುವಂತೆ ಯತಿಯನ್ನು ಪಾಲಿಸಬೇಕೆಂದು ಹೇಳಿ ಸಮರ್ಥಿಸಿಕೊಂಡಿರುವನು. ಆತನ ಈ ವಿವರಣೆ ಸಂಸ್ಕೃತ ಛಂದೋಬಂಧಗಳನ್ನು ಕುರಿತಿದ್ದರೂ, ಕನ್ನಡದಲ್ಲಿ ಯತಿ ವಿಲಂಘನೆಯ ಸಂದರ್ಭಗಳು ಹೆಚ್ಚಾಗಿರುವುದರಿಂದ ಸಂಸ್ಕೃತಕ್ಕಿಂತ ಕನ್ನಡಕ್ಕೆ ಹೆಚ್ಚು ಅನ್ವಯಿಸುವಂತಿದೆ.

ಸಮಗ್ರ ಭಾರತದಲ್ಲಿ ಕಾವ್ಯಾಂಗ ಚತುಷ್ಟಯಕ್ಕೆ ಸಂಬಂಧಿಸಿ ಒಂದೊಂದು ಗ್ರಂಥವನ್ನು ರಚಿಸಿದ ಇಬ್ಬರೇ ಇಬ್ಬರಲ್ಲಿ ಈತನೊಬ್ಬನಿದ್ದರೂ ಶಿಷ್ಯನಾದ ಪ್ರಖ್ಯಾತ ಕವಿ ಜನ್ನನಿಂದ 'ಬಹುಜ್ಞ'ನೆಂದು ಹೊಗಳಿಸಿಕೊಂಡಿದ್ದರೂ ಈ ಗ್ರಂಥಗಳ ಕರ್ತೃತ್ವದ ಶ್ರೇಯಸ್ಸನ್ನು ಸಂಶೋಧಕರು ಆದಿನಾಗವರ್ಮನ ಉಡಿಯಲ್ಲಿ ಕಟ್ಟಿದ ಕಾಲವೊಂದಿತ್ತು. ಈ ಪ್ರಮಾಥವನ್ನು ದೂರೀಕರಿಸಿದವರಲ್ಲಿ ಕವಿಚರಿತೆಕಾರರು ಮೊದಲಿಗರು. ಛಂದೋಬುಧಿ ಕಾದಂಬರಿಗಳ ಕರ್ತ ನಾಗವರ್ಮ ಬೇರೆ, ಛಂದೋವಿಚಿತಿ ಕಾವ್ಯಾವಲೋಕನಾದಿ ಗ್ರಂಥಗಳ ಕರ್ತ ನಾಗವರ್ಮ ಬೇರೆ ಎಂದು ಅವರು ತೋರಿಸಿಕೊಟ್ಟರು.[1] ಅನಂತರ ಪ್ರಕಟವಾದ ತಮ್ಮ ಕವಿ ಚರಿತೆಯಲ್ಲೂ ಅವರು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಕವಿಚರಿತೆಯು ಬೆಳಕು ಕಂಡ ನಂತರ 'ಕೆಲವು ಕನ್ನಡ ಕವಿಗಳ ಜೀವನ ಕಾಲ ವಿಚಾರ' ಎಂಬ ತಮ್ಮ ಗ್ರಂಥದಲ್ಲಿ ಎ. ವೆಂಕಟಸುಬ್ಬಯ್ಯನವರು ಭಿನ್ನಭಿಪ್ರಾಯವನ್ನು ವ್ಯಕ್ತಪಡಿಸಿ, ನಾಗವರ್ಮನೆಂಬುವನು ಒಬ್ಬನೇ, ಅವನೇ ಛಂದೋಂಬುಧಿ, ಕಾದಂಬರಿ, ಕಾವ್ಯಾವಲೋಕನಾದಿ ಗ್ರಂಥಗಳ ಕರ್ತ! ಛಂದೋಂಬುಧಿ ಛಂದೋವಿಚಿತಿ ಇವು ಭಿನ್ನಗ್ರಂಥಗಳಿರದೆ ಒಂದೇ ಗ್ರಂಥದ ಎರಡು ಹೆಸರುಗಳೆಂದು ಪ್ರತಿಪಾದಿಸಿದರು.[2] ಅವರ ಈ ಪ್ರತಿಪಾದನೆಯು ಕನ್ನಡ ಸಾಹಿತ್ಯದಲ್ಲಿ ಬರುವ ನಾಗವರ್ಮವರೆಷ್ಟು ಅವರು ಆವಾವ ಕಾಲದಲ್ಲಿದ್ದರು, ಆವಾವ ಗ್ರಂಥಗಳನ್ನು ರಚಿಸಿದರು ಎಂಬುದರ ಬಗ್ಗೆ ವಿದ್ವಜ್ಜನರ ಕುತೂಹಲವನ್ನು ಕೆರಳಿಸಿತು. ಈ ವಿಷಯವನ್ನೆತ್ತಿಕೊಂಡು ಗೋವಿಂದಪೈ (೧) ಛಂದೋಂಬುಧಿ ಕಾದಂಬರಿಗಳನ್ನು ರಚಿಸಿದ ನಾಗವರ್ಮ ಒಬ್ಬ, ಆತನ ಕಾಲ ಕ್ರಿ. ಶ. ೯೫೦ರಿಂದ ೧೦೧೦-೧೫ (೨) ಛಂದೋವಿಚಿತಿ ಕಾವ್ಯಾವಲೋಕನಾದಿಗಳ ಕರ್ತ ನಾಗವರ್ಮ ಇನ್ನೊಬ್ಬ ಈತನ ಕಾಲ ಕ್ರಿ. ಶ. ೧೧೨೦-೧೨೦೦, (೩) ಚಂದ್ರಚೂಡಾಮಣಿ ಶತಕವನ್ನು ಬರೆದ ನಾಗವರ್ಮ ಮಗದೊಬ್ಬ ಆತನ ಕಾಲ ಕ್ರಿ.ಶ. ೧೧೨೦, ಎಂಬ ನಿರ್ಧಾರಕ್ಕೆ ಬಂದರು.[3]

ಸ್ವತಃ ಕವಿಚರಿತಕಾರರೆ ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿತ್ತ ಉಪನ್ಯಾಸಗಳಲ್ಲಿ ವೆಂಕಟಸುಬ್ಬಯ್ಯನವರ ವಾದವನ್ನು ಖಂಡಿಸಿ, ಮೊದಲಿನಿಂದಲೂ ತಳೆದ ತಮ್ಮ ಅಭಿಪ್ರಾಯವನ್ನು ಪುನಃ ದೃಢೀಕರಿಸಿದರು. ಈ ಸಂದರ್ಭದಲ್ಲಿ, ಕವಿಚರಿತೆಯಲ್ಲಿ ಕಾವ್ಯಾವಲೋಕನಕಾರ ನಾಗವರ್ಮನ ಕೃತಿಗಳಲ್ಲಿ ಉಲ್ಲೇಖಿಸದೆ

1. ಕಾ. ಲೋ. (೧), ಮುನ್ನುಡಿ; ಪು. ೧ ಮುಂದೆ
2. ಕೆ. ಕ. ಜೀ. ಪು. ೧೫೨, ಮುಂದೆ
3. ಕ. ಸಾ. ಪ. ಸಂ. ೨೯-೬೨; ೧೪೯-೭೧

ಉಳಿದ ಛಂದೋವಿಚಿತಿಯನ್ನು ಅವರು ಉಲ್ಲೇಖಿಸಿರುವರು.[1] ಮದ್ರಾಸ ವಿಶ್ವವಿದ್ಯಾಲಯದ ಎಚ್. ಶೇಷಯ್ಯಂಗಾರರು 'ನಾಗವರ್ಮಕವಿಗಳು ಎಷ್ಟುಮಂದಿ' ಎಂಬ ತಮ್ಮ ಲೇಖನದಲ್ಲಿ ಕವಿಚರಿತೆಕಾರರ ಅಭಿಪ್ರಾಯವನ್ನು ಪುರಸ್ಕರಿಸಿ, ಈ ಮೇಲಿನ ಮೂವರು ನಾಗವರ್ಮರಲ್ಲದೆ ನಾಲ್ಕನೆಯ ಇನ್ನೊಬ್ಬ ನಾಗವರ್ಮನ ಅಸ್ತಿತ್ವದತ್ತ ಸಂಶೋಧಕರ ಗಮನವನ್ನು ಸೆಳೆದಿರುವರು.[2] ಈ ನಾಗವರ್ಮನು ವರ್ಧಮಾನಪುರಾಣವನ್ನು ಬರೆದಿದ್ದು, ಛಂದೋಂಬುಧಿಕಾರ ನಾಗವರ್ಮನಿಗಿಂತಲೂ ಪೂರ್ವಿಕನೆಂದು ಊಹಿಸಲು ಅವಕಾಶವಿದೆ, ಎಂದಿರುವರು.

ಈ ರೀತಿ ಛಂದೋಂಬುಧಿಕಾರ ನಾಗವರ್ಮ ಬೇರೆ, ಛಂದೋವಿಚಿತಿ ಕಾವ್ಯಾವಲೋಕನಾದಿಗಳ ನಾಗವರ್ಮ ಬೇರೆ, ಎಂಬ ಕವಿಚರಿತೆಕಾರರ ಅಭಿಪ್ರಾಯಕ್ಕೆ ವಿದ್ವಾಂಸರ ಮನ್ನಣೆ ದೊರೆತು, ಇಂದು ಇದೆ ಸಾರ್ವತ್ರಿಕವಾಗಿ ಛಂದೋಂಬುಧಿಕಾರ ನಾಗವರ್ಮನನ್ನು ಆದಿನಾಗವರ್ಮ, ಛಂದೋವಿಚಿತಿ ಕಾವ್ಯಾವಲೋಕನಾದಿಗಳ ನಾಗವರ್ಮನನ್ನು ಇಮ್ಮಡಿ ನಾಗವರ್ಮ, ಎಂದು ಬೇರ್ಪಡಿಸಿ ಹೆಸರಿಸಲಾಗುತ್ತಿದೆ.

ಛಂದೋವಿಚಿತಿಯು ಇಮ್ಮಡಿ ನಾಗವರ್ಮನದೆ ಎಂದಿದ್ದರೂ ಅದಾವುದೆಂಬುದನ್ನು ಗುರುತಿಸಲು ಊಹಾಸಂಭವರು (ಸಂಶೋಧಕರಿಗೆ ಬೇಂದ್ರೆ ಇತ್ತ ಪದವಿ)[3] ತಮ್ಮ ಕುದುರೆಗಳನ್ನು ಓಡಿಸಿರಲಿಲ್ಲ. ಈ ಗ್ರಂಥದ ಕೆಲವು ಭಾಗಗಳು ಆದಿನಾಗವರ್ಮನ ಛಂದೋಂಬುಧಿಯಲ್ಲಿ ಸೇರಿರಬೇಕೆಂದು ಸೂಚಿಸಿ, ವಸ್ತುಕೋಶದ ಸಂಪಾದಕರು ಈ ದಿಸೆಯಲ್ಲಿ ಒಂದು ಕುದುರೆಯನ್ನು ಬಿಟ್ಟರು. ರತ್ನಮಂಜೂಷೆಯೆ ಇಮ್ಮಡಿ ನಾಗವರ್ಮನ ಛಂದೋವಿಚಿತಿ. ಅದರೆ ಆತ ಗ್ರಂಥಕಾರನಲ್ಲ, ಅದಕ್ಕೆ ಭಾಷ್ಯ ಬರೆದವನೆಂದು ಪ್ರತಿಪಾದಿಸ ಹೊರಟಿರುವ ಈ ಕುದುರೆ ಎರಡನೆಯದು. ಇದರಲ್ಲಿಯ ಗುಣದೋಷಗಳೊಡನೆ ತಮಗೆ ಗೋಚರವಾಗಬಹುದಾದ ಇತರ ಅಂಶ ಆಧಾರಗಳನ್ನು ಸೇರಿಸಿ ಈ ವಿಷಯವನ್ನು ಒಂದು ನಿಲುಗಡೆಗೆ ತರುವುದು ವಿದ್ವಾಂಸರನ್ನು ಕೂಡಿದೆ.

1. ಕ. ಸಾ. ಇ. ಪು. ೪೫-೪೭.
2. ಎ. ಓ. ಆರ್. ಸಂ. ೭, ಭಾಗ, ೧, (ಕನ್ನಡ ವಿಭಾಗ), ೧೯೪೪.
3. ಸಾಹಿತ್ಯ ಸಂಶೋಧನ, ಪು, ೩.

ಗೀತಿಕಾ ಛಂದಸ್ಸು

ಪಿರಿಯಕ್ಕರಾದಿ ಕರ್ಣಾಟಕ ವಿಷಯ ಜಾತಿ ಛಂದಸ್ಸುಗಳಲ್ಲಿ ಗೀತಿಕೆಯೂ ಒಂದು. ಅರ್ಥ ಸಮುಚತುಷ್ಪದಿ, ನೃಪತುಂಗನ ಕವಿರಾಜಮಾರ್ಗದಲ್ಲಿ ಮತ್ತು ಇಮ್ಮಡಿ ನಾಗವರ್ಮನ ಕಾವ್ಯಾವಲೋಕನದಲ್ಲಿ ಅಲ್ಲಲ್ಲಿ ಬಳಸಲ್ಪಟ್ಟಿದೆ. ಆದರೂ ಅದರ ಛಂದಸ್ಸಿನ ಸ್ವರೂಪ ಇಂದಿಗೂ ಅನಿಶ್ಚಿತವಾಗಿ ಉಳಿದಿದೆ. ಕಿಟೆಲ್ ಸಂಪಾದಿತ ನಾಗವರ್ಮನ ಛಂದೋಽಂಬುಧಿಯಲ್ಲಿ ಗೀತಿಕೆಯ ಲಕ್ಷಣ ಇಂತಿದೆ—

ಎರಡಱೊ | ಳಾಱೆಂಬ | ಸಂಖ್ಯೆಯೊಳ್
ᴗᴗᴗᴗ | — — ᴗ | — ᴗ —
ವಿ | ವಿ | ವಿ

ದಿಠೆಪದ್ಮ | ಛವನುಳಿ | ದವು ಮೆ | ಚ್ಚುವ ತೆಱದಿಂ — |
ᴗᴗ—ᴗ | ᴗᴗᴗᴗ | ᴗᴗ — | ᴗ ᴗ ᴗᴗ —
ವಿ | ವಿ | ಬ್ರ | ರು

ದಿರೆ ಬಳಿ | ಕಿನ್ನರಡುಂ | ಮುನ್ನಿನಂತೆ
ᴗᴗ ᴗᴗ | —ᴗᴗ— | —ᴗ—ᴗ
ವಿ | ರು | ರು

ಕರಮೆಸೆ | ದೊಪ್ಪು ಗೀ | ತಗಣಂ ॥
ᴗᴗᴗᴗ | —ᴗ— | ᴗᴗ—
ವಿ | ವಿ | ಬ್ರ

—ಮೊದಲನೆಯ ಪಾದದಲ್ಲಿರುವ 'ಎರಡಱೊಳಾಱೆಂಬ ಸಂಖ್ಯೆಯೊಳ್' ಪದಗಳಿಗೆ 'ಎರಡನೆಯ ಪಾದದಲ್ಲಿಯ ೬ ನೆಯ ಗಣ' ಎಂದು ಅರ್ಥಮಾಡಿ ಕಿಟೆಲ್ ಪದ್ಯದ ಪ್ರಥಮಾರ್ಧದಲ್ಲಿ ೨ ನೆಯ ಪಾದದಲ್ಲಿಯ ೬ ನೆಯ ಗಣ ಬ್ರಹ್ಮ, ಮಿಕ್ಕವು ಐಚ್ಛಿಕ ಅಂದರೆ ಬ್ರಹ್ಮ, ವಿಷ್ಣು, ರುದ್ರ ಇವುಗಳಲ್ಲಿ ಯಾವವೆ ಇರಬಹುದು; ದ್ವಿತೀಯಾರ್ಧ ಅಂದರೆ ೩ ಮತ್ತು ೪ ನೆಯ ಪಾದಗಳಲ್ಲಿ ಕೂಡ ಹೀಗೆಯೆ, ಎಂದು ಗೀತಿಕೆಯ ಲಕ್ಷಣವನ್ನು ವಿವರಿಸಿರುವರು. ಪ್ರಸ್ತಾರದಲ್ಲಿ ಪ್ರಥಮಾರ್ಧದಲ್ಲಿ ೭ ಗಣಗಳಿದ್ದರೂ ದ್ವಿತೀಯಾರ್ಧದಲ್ಲಿ ೬ ಗಣಗಳಿರುವದನ್ನು ಗಮನಿಸಬೇಕು- ಇದರ ಜೊತೆಗಿರುವ ಇನ್ನೊಂದು ಲಕ್ಷಣದ ಎರಡೂ ಅರ್ಧಗಳಲ್ಲಿ ೭ ಗಣಗಳು ಇರುವದರಿಂದ ಇದು ವಿಕಲ್ಪದಿಂದ ಎನ್ನಬಹುದು.[1]

---

1. ಈ ಎರಡನೆಯ ಲಕ್ಷಣ—ಲಕ್ಷ್ಯ ಪದ್ಯದಲ್ಲಿ ನಿರ್ದಿಷ್ಟ ಸ್ಥಳದಲ್ಲಿ ಇರಬೇಕಿದ್ದ ಬ್ರಹ್ಮ ಗಣಗಳನ್ನು ಬಿಟ್ಟು ಉಳಿದೆಲ್ಲ ವಿಷ್ಣು ಇರಬೇಕೆಂದಿದೆ. ಪ್ರಸ್ತಾರದಲ್ಲಿ ೨ ಮತ್ತು ೬ ನೆಯ ಗಣಗಳು ಬ್ರಹ್ಮ ಮಿಕ್ಕವು ವಿಷ್ಣು ಇವೆ. ಗೀತಿಕೆಯ ಇಂಥ ಉದಾಹರಣೆಗಳು ಈ ವರೆಗೆ ದೊರೆತಿಲ್ಲ.

ರಾಮಾನುಜ ಅಯ್ಯಂಗಾರ ಸಂಪಾದಿತ ಕರ್ಣಾಟಕ ಕಾವ್ಯಕಲಾನಿಧಿ ಛಂದೋಂಬುಧಿಯಲ್ಲಿ ಗೀತಿಕೆಯ ಲಕ್ಷಣವು —

ಎರಡಱಿೊಳಾ । ರೆಂಬ । ಸಂಖ್ಯೆಯೊಳ್
∪∪∪ ∪ – । – ∪ । – ∪ –
ರು । ಬ್ರ । ವಿ

ಬರೆಪದ್ಮ । ಭವನುೞಿ ದುವು ಮೆ । ಚ್ಚುವ ತೆಱದಿಂ- ।
∪∪–∪ । ∪∪∪∪ । ∪∪ – । ∪ ∪ ∪∪ –
ವಿ । ವಿ । ಬ್ರ । ರು

ದಿರೆ ಮುಂದ । ಣ ಪದಂ । ಮುನ್ನಿ ನಂ-
∪∪ – ∪ । ∪∪ – । – ∪ –
ವಿ । ಬ್ರ । ವಿ

ತಿರೆ ಕರಂ । ಗೀತಿಕೆ । ಯಿಂ ತ । ಕ್ಕಂ ಸಖೀ ॥
∪∪ ∪– । – ∪∪ । – ∪ । – ∪ –
ವಿ । ವಿ । ಬ್ರ । ವಿ

—ಇಂತಿದ್ದು, ಟಿಪ್ಪಣಿಯಲ್ಲಿ ಅವರು ಎರಡೂ ಅರ್ಧಗಳಲ್ಲಿ ೨ ಮತ್ತು ೬ ನೆಯ ಗಣಗಳು ಬ್ರಹ್ಮ; ಮಿಕ್ಕವು ಐಚ್ಛಿಕ, ಎಂದಿರುವರು. ಪ್ರಸ್ತಾರದಲ್ಲಿ ಪ್ರತಿ ಅರ್ಧದಲ್ಲಿ ೭ ಗಣಗಳು ಹೊರಡುವದರಿಂದ ಮತ್ತು ಈ ಸಂಖ್ಯೆ ಸಂಸ್ಕೃತ ಆರ್ಯಾಗತಿಗೆ ಸರಿ ಹೋಗುವದರಿಂದ ಇಲ್ಲಿ ಕೂಡ ಏಳೇ ಗಣಗಳೆಂದು ಅಭಿಪ್ರಾಯ ಪಟ್ಟಿರುವರು.

ಸಂಸ್ಕೃತದಲ್ಲಿರುವ ಜಯಕೀರ್ತಿಯ ಛಂದೋನುಶಾಸನದಲ್ಲಿ ಗೀತಿಕೆಯ ಲಕ್ಷಣ ಹೀಗಿದೆ—

ರಗಣೋದ್ವಿ । ತೀಯೋ । ಷಷ್ಠೇಚ
∪∪ – ∪ । – – । – – ∪
ವಿ । ಬ್ರ । ವಿ

ಲಗಣೋಥಗ । ಣೋವಾನ್ಯತ್ರ । ಪಂಚ । ಸ್ವರ್ಧಯೋಶ್ಚ ।
∪∪ – ∪∪ । – – – ∪ । – ∪ । – ∩ – ∪
ರು । ರು । ಬ್ರ । ರು

ತ್ರಿಗಣೋऽಯುಕ್ । ಸಮಪಾ । ದೋऽಬ್ಧಿಗಣೋ
∪∪ – – । ∪∪ – । – ∪∪ –
ವಿ । ಬ್ರ । ರು

ನಿಗದಿತಾ । ಗೀತಿಕಾಲಂ । ಕಾರೇ । ಪ್ರಭುಸೇನೀಯೈ: ॥
∪∪∪ – । – ∪ – – । – – । ∪∪ – – –
ವಿ । ರು । ಬ್ರ । ರು

—ಈತನ ಮೇರೆಗೆ ಗೀತಿಕೆಯ ಪ್ರತಿ ಅರ್ಧದಲ್ಲಿ ೭ ಗಣಗಳು—ಮೊದಲನೆಯ ಪಾದದಲ್ಲಿ ೩, ಎರಡನೆಯದರಲ್ಲಿ ೪; ೨ ಮತ್ತು ೬ ನೆಯ ಗಣಗಳು ಬ್ರಹ್ಮ (ರ–ಗಣ);

ಮಿಕ್ಕವು ಬ್ರಹ್ಮ (ರ-ಗಣ), ವಿಷ್ಣು (ಲ-ಗಣ), ರುದ್ರ (ಥ-ಗಣ)—ಇವುಗಳಲ್ಲಿ ಯಾವವೇ ಇರಬಹುದು.

ಜಯಕೀರ್ತಿಯ ವಿವರಣೆಗೂ ರಾಮಾನುಜ ಅಯ್ಯಂಗಾರರ ವಿವರಣೆಗೂ ವ್ಯತ್ಯಾಸವಿಲ್ಲ. ಆದರೂ ಜಯಕೀರ್ತಿಯ 'ನಿಗದಿತಾ....ಪ್ರಭುಸೇನೀಯೈ:' ಅಂದರೆ 'ಪ್ರಭುಸೇನನ ಪ್ರಣಾಲಿಯವರಿಂದ ವಿವರಿಸಲ್ಪಟ್ಟಂತೆ' ಮಾತಿನಿಂದ ಗೀತಿಕೆಯ ಒಂದಕ್ಕಿಂತ ಹೆಚ್ಚು ಭೇದಗಳಿದ್ದು ಅವುಗಳಲ್ಲಿ ಇದೊಂದು ಎಂಬ ಸಂದೇಹ ಮೂಡುವದು.

ಕಿಟೆಲ್, ರಾಮಾನುಜ ಅಯ್ಯಂಗಾರ್, ಜಯಕೀರ್ತಿ,—ಮೂವರ ವಿವರಣೆಗಳನ್ನು ಲಭ್ಯವಿರುವ ಉದಾಹರಣೆಗಳೊಂದಿಗೆ ಹೊಂದಿಸಿ ನೋಡಿದಾಗ ಎರಡೂ ಬಗೆಯ ಗೀತಿಕೆಗಳು ದೊರೆಯುತ್ತವೆ. ವಿಕಲ್ಪದಿಂದ ದ್ವಿತೀಯಾರ್ಧದಲ್ಲಿ ೬ ಗಣಗಳಿರುವ ಗೀತಿಕೆಗಳಾದರೂ ಇಲ್ಲದಿಲ್ಲ. ಪರಾಂಬರಿಸಿರಿ—

(೧) ಭಾವೆಯುಂನು | ಸುಳು ಮುಪ್ಪ | ಷ್ಪಾಕ್ಷರವು
- ∪ – ∪ | ∪ ∪ – – | – ∪ ∪ ∪
ರು | ವಿ | ರು
ಮಾವರ್ಣ | ವ್ಯತ್ಯಯ | ಮುಂಬಿಂ | ದುಚ್ಯುತಿಯುಂ |
– – ∪ | – ∪ ∪ | – – | – ∪ ∪ –
ವಿ | ವಿ | ಬ್ರ | ರು
ಭಾವಿಸಿ ದೊ | ನ್ಸರ್ಡಿಯುಂ ವ | ರ್ಣಚ್ಯುತ ಮುಂ
– ∪∪ – | ∪ ∪ – – | – ∪ ∪ –
ರು | ವಿ | ರು
ಕೇವಲಮು | ವರ ಭೇದಮುಂ | ಸುಸಮು | ಸ್ತಕಮುಂ ‖ ಕ. ರಾ. ಮಾರ್ಗ,
– ∪∪∪ | ∪∪ – ∪ – | ∪∪ – | ∪∪ – ೨/೧೪೪
ರು | ರು | ಬ್ರ | ಬ್ರ

—ಇಲ್ಲಿ ಎರಡೂ ಅರ್ಧಗಳ ಮೊದಲನೆಯ ಪಾದದಲ್ಲಿಯ ೨ ನೆಯ ಗಣವನ್ನು ಜಯಕೀರ್ತಿರಾಮಾನುಜ ಅಯ್ಯಂಗಾರರ ವಿವರಣೆಗೆ ಕಟ್ಟುಬಿದ್ದು ಬ್ರಹ್ಮವಾಗಿಸುವದು ಸಾಧ್ಯವಾಗದು. ಬದಲಾಗಿ ಎರಡೂ ಅರ್ಧಗಳ ೨ ನೆಯ ಪಾದದಲ್ಲಿರುವ ೬ ನೆಯ ಗಣ ಬ್ರಹ್ಮ, ಮಿಕ್ಕವು ಐಚ್ಛಿಕ, ಎಂಬ ಕಿಟೆಲ್ ವಿವರಣೆಯೇ ಸರಿಹೋಗುವದು.

(೨) ಇಂತು | ಕಾರ | ಕಂಗೊಳೊ—
– ∪ | – ∪ | – ∪ ∪
ಬ್ರ | ಬ್ರ | ವಿ
ಳ್ಪಂತಮು | ಱಿಯೆ ಪೇೞ್ದ | ಗುಣಮುಂ | ದೋಷಮುಮುಂ |
– ∪∪ | ∪∪ – ∪ | ∪∪ – | – ∪ ∪ –
ವಿ | ವಿ | ಬ್ರ | ರು

ಚಿಂತಿಸಿಪೆ | ಜವುವಿ | ನ್ನಪ್ಪುವಂ
– ∪ ∪ ∪ | ∪ ∪ – | ∪ ∪ –
ರು | ಬ್ರ | ಬ್ರ
ಭ್ರಾಂತಿಲ್ಲದ | ಜೂದು ಕೊಳ್ಗೆ | ಕವಿಗಳ್ | ಕೃತಿಗಳೊಳ್ ‖ ಕ. ರಾ. ಮಾರ್ಗ
– – ∪ ∪ | ∪ ∪ – ∪ | ∪ ∪ – | ∪ ∪ ∪ – ೧/೧೨೫
ರು | ವಿ | ಬ್ರ | ವಿ

—ಇಲ್ಲಿ ಜಯಕೀರ್ತಿ ರಾಮಾನುಜ ಅಯ್ಯಂಗಾರರ ಅಭಿಪ್ರಾಯವು ಸಾರ್ಥಕವಾಗಿದೆ. ೨ ಮತ್ತು ೬ ನೆಯ ಸ್ಥಾನಗಳಲ್ಲಿ ಬ್ರಹ್ಮಗಣಗಳಿವೆ. ಕಿಟೆಲ್ ಅಭಿಪ್ರಾಯದಲ್ಲಿ ಬ್ರಹ್ಮಗಣದ ನಿರ್ಬಂಧ ೬ನೆಯ ಸ್ಥಾನಕ್ಕೆ ಮಾತ್ರ ಸಂಬಂಧಿಸಿದ್ದರಿಂದ ಅದು ಕೂಡ ಸರಿಹೋಗುವುದು.

(೩) ತಾರಾಪತಿ | ವಕ್ತ್ರೀ | ರ್ತಿ ವಿಹಾರಾ
– – ∪ ∪ | – – | ∪ ∪ – –
ರು | ಬ್ರ | ವಿ
ಹಾರ | ಪ್ರಭಯಾನಿ | ಜತನು ಪೂರಾ |
– – | ∪ ∪ – ∪ | ∪ ∪ ∪ | – –
ಬ್ರ | ವಿ | ಬ್ರ | ಬ್ರ
ಪೂರಾಶ್ರಿತ | ಹೃಕ್ಲೇ | ಶ ವಿದೂರಾ
– – ∪ ∪ | – – | ∪ ∪ – –
ರು | ಬ್ರ | ವಿ
ದೂರೀಕೃತ | ಬಲವಿ | ಸ್ತಾರಾ ‖ ಕ. ರಾ. ಮಾರ್ಗ, 3/೨೩೬
– – ∪ ∪ | ∪ ∪ – | – –
ರು | ಬ್ರ | ಬ್ರ

—ಇಲ್ಲಿ ದ್ವಿತೀಯಾರ್ಧದಲ್ಲಿ ೬ ಗಣಗಳು ಮತ್ತು ೬ ನೆಯದು ಬ್ರಹ್ಮ ಗಣ ಇವೆ. ಕವಿರಾಜಮಾರ್ಗ ೧|೨೪೭ನೆಯ ' ನೆಟ್ಟನೆ ತಾಂ ಸವಿಯೊಳೊಂದಿರೆ 'ಗೀತಿಕೆಯಲ್ಲಿ ಕೂಡ ಹೀಗೆಯೇ ಅಂದರೆ ದ್ವಿತೀಯಾರ್ಧದಲ್ಲಿ ೬ಗಣಗಳಿದ್ದು ೬ನೆಯದು ಬ್ರಹ್ಮ ಗಣವಿದೆ.

ಉಪರೋಕ್ತ ಉದಾಹರಣೆಗಳಿಂದ ಗೀತಿಕೆಯಲ್ಲಿ ಮೂರು ಭೇದಗಳಿದ್ದು ಅವುಗಳ ಮೇರೆಗೆ ಅದರ ಲಕ್ಷಣದಲ್ಲಿ ಕೂಡ ಮೂರು ಭೇದಗಳಾಗಿರುವುದು ಸ್ಪಷ್ಟವಾಗದಿರದು.[1] ಅದು ಹೀಗೆ—

1. ಈ ಮೂರರೊಂದಿಗೆ ಪ್ರತಿ ಅರ್ಧದಲ್ಲಿ ೨ಮತ್ತು ೬ ಬ್ರಹ್ಮ, ಮಿಕ್ಕವು ವಿಷ್ಣು ಎಂಬ ಕಿಟೆಲ್ ಸಂಪಾದಿತ ಛಂದೋಂಬುಧಿಯಲ್ಲಿರುವ ಗೀತಿಕೆಯ ವಿಶೇಷ ಲಕ್ಷಣವನ್ನು ಸೇರಿಸಿಕೊಳ್ಳುವುದು ಅಯುಕ್ತವಾಗದು. ಪ್ರಯೋಗದಲ್ಲಿ ಈ ಲಕ್ಷಣಕ್ಕೆ ಹೊಂದುವ ಉದಾಹರಣೆಗಳು ದೊರೆತಿಲ್ಲವಾದರೂ ಶಾಸ್ತ್ರದ ಮಟ್ಟಿಗೆ ಇದನ್ನು ಉಪೇಕ್ಷಿಸುವಂತಿಲ್ಲ. ಛಂದೋಂಬುಧಿಯ ಇತರ ಸಂಸ್ಕರಣಗಳಲ್ಲಿ ಕೂಡ ಪಾಠಾಂತರ ಪಟ್ಟಿಯಲ್ಲಿ ಇದು ಉಕ್ತವಾಗಿದೆ.

(೧) ಪ್ರತಿ ಅರ್ಧದಲ್ಲಿ ೭ ಗಣಗಳು, ಮೊದಲನೆಯ ಪಾದದಲ್ಲಿ ೩, ಎರಡನೆಯ ಪಾದದಲ್ಲಿ ೪; ೬ನೆಯ ಗಣ ಬ್ರಹ್ಮ; ಮಿಕ್ಕವು ಐಚ್ಛಿಕ ಅಂದರೆ ಬ್ರಹ್ಮ, ವಿಷ್ಣು, ರುದ್ರ–ಇವುಗಳಲ್ಲಿ ಯಾವನೇ ಇರಬಹುದು.

(೨) ಮೇಲಿನಂತೆ, ಆದರೆ ಪ್ರತಿ ಅರ್ಧದಲ್ಲಿ ೨ ಮತ್ತು ೬ನೆಯ ಗಣಗಳು ಬ್ರಹ್ಮ (ಪ್ರಭುಸೇನೀಯ ಮತ)

(೩) ವಿಕಲ್ಪದಿಂದ ೬ನೆಯ ಗಣ ಬ್ರಹ್ಮ; ಉಳಿದ ಲಕ್ಷಣಗಳು ಮೇಲಿನಂತೆ ಅಂದರೆ ೧ ಅಥವಾ ೨ನೆಯದರಂತೆ.

ಆದರೆ ಇಷ್ಟಕ್ಕೇ ಮುಗಿಯಲಿಲ್ಲ. ಕೆಲವು ಗೀತಿಕೆಗಳನ್ನು ಏನು ಮಾಡಿದರೂ ನೇರವಾಗಿ ಇವುಗಳಲ್ಲಿ ಯಾವುದೊಂದರ ಲಕ್ಷಣಗಳಿಗೆ ಹೊಂದಿಸಲು ಸಾಧ್ಯವಾಗುವುದಿಲ್ಲ. ಗೀತಿಕಾ ಛಂದಸ್ಸಿನ ಮುಖ್ಯ ತೊಡಕು ಇದೇ. ಆದರೂ ಇದಕ್ಕೆ ಪರಿಹಾರ ಇಲ್ಲದಿಲ್ಲ. ಕವಿರಾಜಮಾರ್ಗದಲ್ಲಿ ಇಂಥ ಕೆಲವು ಗೀತಿಕೆಗಳಿವೆ. ಅವುಗಳಲ್ಲಿ ಇದೊಂದು. ಪರಿಹಾರ ಹೀಗಿದೆ—

```
[illegible] | ೨ | ೩
ಸೊಗಯಿಪುಗು | ಮಿಂದ್ರ ನೀಲ | ಮಣಿಸನ್ನಿಭದೊಳ್
∪ ∪ ∪ ∪ ∪ | – ∪ – ∪ | ∪ ∪ – ∪ ∪ –
ರು | ರು | ರು

೪ | ೫ | ೬
ಮಿಗೆಜಳನಿಧಿಯೊಳ | ಗುದಿತ | ದಿಂದಿ | ರದವೊಳ್ |
∪ ∪ ∪ ∪ ∪ ∪ ∪ ∪ | ∪ ∪ ∪ | – ∪ | ∪ ∪ –
ರು | ಬ್ರ | ಬ್ರ | ಬ್ರ

೧ | ೨ | ೩
ನೆಗೆದತಿಧವಳ | ಮೂರ್ತಿಗೆ ಘನ | ಪಳಯ ಸದಗ್ಧ
∪ ∪ ∪ ∪ ∪ ∪ | – ∪ – ∪ ∪ | ∪ ∪ ∪ ∪ – ∪
ರು | ವಿ | ರು

[illegible] | ೫ ೬ | ೭
ಗಗನದೊಳುಜ್ಜು | ಜ್ವಳಿದು ವಿ | ಶಾಲಿ | ತಾರಾವಳಯುಂ ॥೨/೨೪೯
∪ ∪ ∪ ∪ ∪ | ∪ ∪ ∪ ∪ | – ∪ | – – ∪ ∪ –
ರು | ವಿ | ಬ್ರ | ರು
```

ಇಲ್ಲಿ ಗೀತಿಕೆಯ ಪ್ರಥಮ ಲಕ್ಷಣಕ್ಕೆ ಅನುಸರಿಸಿ ಪ್ರತಿ ಅರ್ಧದಲ್ಲಿ ೭ ಗಣಗಳು. ಮೊದಲನೆಯ ಪಾದದಲ್ಲಿ ೩, ಎರಡನೆಯದರಲ್ಲಿ ೪ ; ೬ ನೆಯ ಗಣ ಬ್ರಹ್ಮ ಮಿಕ್ಕವು

ಬ್ರಹ್ಮ, ವಿಷ್ಣು, ರುದ್ರಗಳಲ್ಲಿ ಯಾವುದೊಂದು ಇದ್ದರೂ ಪ್ರಥಮಾರ್ಧದ ೩ (ರು), ೪ (ರು), ದ್ವಿತೀಯಾರ್ಧದ ೧ (ರು), ೨ (ವಿ), ೩ (ರು), ೪ (ರು), ೭ (ರು) ಗಣಗಳಿಗೂ ಪ್ರಸಿದ್ಧವಿರುವ ವಿಷ್ಣು ರುದ್ರ ಗಣಗಳಿಗೂ ಹೊಂದಿಕೆ ಇಲ್ಲ. ಅವುಗಳಲ್ಲಿಯ ಎರಡೆರಡು ಲಘುಗಳಿಗೆ ಒದೊಂದು ಗುರು ಎಂದು ಗ್ರಹಿಸಿ ಆಯಾ ಗಣಗಳ ಪ್ರಸಿದ್ಧ ರೂಪಗಳಿಗೆ ಹೊಂದಿಸಲಾಗಿದೆ.

ಇದು ಲಾಕ್ಷಣಿಕ ಸಮ್ಮತ ವಿಧಾನ. ಕೆಲವು ಛಂದೋಬಂಧಗಳ ವಿಷಯದಲ್ಲಿ ಕವಿಗಳಿಗೆ ಇಷ್ಟಾನುಸಾರ ಒಂದು ಗುರುವಿನ ಬದಲು ಎರಡು ಲಘುಗಳನ್ನು ಇಡುವ ರಿಯಾಯಿತಿ ಇದೆ. ಸಂಗೀತ ರತ್ನಾಕರದಲ್ಲಿ ಶಾರ್ಙ್ಗದೇವ ಏಳೆ, ಕಂದ ಮತ್ತು ಆರ್ಯೆಗಳ ವಿಷಯದಲ್ಲಿ ಈ ರಿಯಾಯಿತಿಯನ್ನು ಉಲ್ಲೇಖಿಸಿರುವನು. ಇದಕ್ಕೆ 'ಗುರುಭಂಗ' ಎಂಬ ಪಾರಿಭಾಷಿಕ ಹೆಸರಿಟ್ಟು, 'ಗುರೋರ್ಭಂಗೋ ನಾಮ ಲಘುದ್ವಯ ಕರಣಂ' ಎಂದು ಟೀಕಾಕಾರ ಕಲ್ಲಿನಾಥ ಗುರುಭಂಗದ ಅರ್ಥವನ್ನು ಹೇಳಿರುವನು. ಕರ್ಣಾಟಕ ವಿಷಯ ಜಾತಿಗಳಲ್ಲಿ ಒಂದಿರುವ ಉತ್ಸಾಹ ವೃತ್ತದ ವಿಷಯದಲ್ಲಿ ಜಯಕೀರ್ತಿ ಈ ರಿಯಾಯಿತಿಯನ್ನು ಉಲ್ಲೇಖಿಸಿರುವನು. ಉತ್ಸಾಹ ವೃತ್ತದ ಪ್ರತಿ ಪಾದದಲ್ಲಿ ಗಲ (– ᴗ) ರೂಪದ ೭ ಬ್ರಹ್ಮ ಗಣಗಳು ಕೊನೆಗೆ ಒಂದು ಗುರು (–) ಇರುತ್ತದೆ. ಜಯಕೀರ್ತಿ ಕವಿ ಇಷ್ಟಾನುಸಾರ 'ಗಲ' ದಲ್ಲಿಯ 'ಗ' ಬದಲು ಎರಡು 'ಲ' ಗಳನ್ನು ಬಳಸಬಹುದು, ಎಂದಿರುವನು. ಆಗ ಗಲ (– ᴗ) ಗಣದ ರೂಪ ಲಲಲ (ᴗᴗᴗ) ದಲ್ಲಿ ಮಾರ್ಪಾಟಾಗುವದು. ಛಂದೋಬುಧಿಯಲ್ಲಿರುವ ಈ ವೃತ್ತದ ಲಕ್ಷಣ ಲಕ್ಷ್ಯ ಪದ್ಯವು ಇಂತಾದ ಕೆಲವು ಗಣಗಳಿಂದ ಯುಕ್ತವಾಗಿದೆ. ಎಲ್ಲಕ್ಕೂ ಹೆಚ್ಚಾಗಿ ಗುಣಚಂದ್ರ ಈ ರಿಯಾಯಿತಿಯನ್ನು ತ್ರಿಮೂರ್ತಿ-ಗಣ-ಘಟಿತ-ಅಂದರೆ ಬ್ರಹ್ಮ-ವಿಷ್ಣು-ರುದ್ರ ಗಣಗಳಿಂದಾದ ಎಲ್ಲ ಛಂದೋಬಂಧಗಳಿಗೆ ಅನ್ವಯಿಸಿರುವನು. ಇವುಗಳಲ್ಲಿ ಗೀತಿಕೆಯೂ ಬರುವುದು. ಇದು ಆತನ ನಿರೂಪಣೆ–

ಕಂ ॥ ಗುರುವೆರಡಾಗಿರೆ ದರ್ಶನ
ಮೂರಾಗಲ್ ಬೋಧ ನಾಲ್ಕು ಮಾಗಲು ಚರಿತ |
ಗುರುವೊಂದ ಕೆರಡು ಲಘುವುಂ
ಪರಿಗಣನೆಗೆ ತರುವದಿಂತು ಗಣಮಂ-ವಿಬುದರ್ ॥ ಛಂದಸ್ಸಾರ

ಬ್ರಹ್ಮ, ವಿಷ್ಣು, ರುದ್ರ ಗಣಗಳಿಗೆ ಗುಣಚಂದ್ರ ಕ್ರಮದಿಂದ ದರ್ಶನ, ಬೋಧ ಚರಿತ ಎಂದಿರುವನು. ತ್ರಿಮೂರ್ತಿ ಗಣಗಳ ಮೂಲ (ಬ್ರಹ್ಮ....ವಿಷ್ಣು....ರುದ್ರ....) ಮತ್ತು ತ ಜ್ಜನ್ಯ ಗಣಗಳ ಸ್ವರೂಪವು ನಾಗವರ್ಮನ ಕಾಲದಿಂದ ಪ್ರಸಿದ್ಧವಿರುವಾಗ ಒಂದು ಗುರುವಿಗೆ ಎರಡು ಲಘು ಎಂಬ ಲೆಕ್ಕ ಮಕ್ಕಳಿಗೂ ಕೂಡ ಗೊತ್ತಿರುವಾಗ ಗುಣಚಂದ್ರನ 'ಗುರುವೊಂದಕೆರಡು ಲಘುವುಂ ಪರಿಗಣನೆಗೆ ತರುವದು' ಮಾತು ಸಂಸ್ಕೃತ ಲಾಕ್ಷಣಿಕರ 'ಗುರುಭಂಗ' ವಿಧಾನಕ್ಕೆ ಅನ್ವಯಿಸಬಲ್ಲದೆ ಹೊರ್ತು ಬೇರೊಂದಕ್ಕಲ್ಲ.

ಕವಿರಾಜಮಾರ್ಗದಲ್ಲಿರುವ ಉಪರೋಕ್ತ ಮತ್ತು ಇನ್ನಿತರ ಕೆಲವು ಗೀತಿಕೆಗಳಲ್ಲಿ ಗುರುಭಂಗ ವಿಧಾನದ ಯಥೇಚ್ಛ ಬಳಕೆಯಾಗಿದೆ. ಆ ಮೂಲಕ ಗಣಗಳಸ್ವರೂಪದಲ್ಲಿ ಉಂಟಾದ ವ್ಯತ್ಯಾಸದಿಂದ ಗೀತಿಕೆ ಎಂದು ಉಕ್ತವಾಗಿದ್ದರೂ ಆ ಪದ್ಯಗಳನ್ನು ಗೀತಿಕೆಯ ಉಕ್ತಲಕ್ಷಣಗಳಿಗೆ ಹೊಂದಿಸಲು ಬರದಂತಾಗಿದೆ. ಇಮ್ಮಡಿ ನಾಗವರ್ಮನ ಕಾವ್ಯಾವ ಲೋಕನದಲ್ಲೂ ಒಂದೆರಡು ಇಂಥ ಉದಾಹರಣೆಗಳಿವೆ. ಸಂಗೀತ ರತ್ನಾಕರ ಮತ್ತು ಗುಣಚಂದ್ರನ ಛಂದಸ್ಸಾರಾದಿ ಲಕ್ಷಣ ಗ್ರಂಥಗಳಲ್ಲಿ ಉಕ್ತವಾದ ಗುರುಭಂಗ ವಿಧಾನವು ಈವರೆಗೆ ವಿದ್ವಾಂಸರ ಕಣ್ಣು ತಪ್ಪಿಸಿ ಕುಳಿತಿರುವುದೇ ಇದಕ್ಕಿರುವ ಮುಖ್ಯ ಕಾರಣ ಎನ್ನಬಹುದು.

ದಿವಂಗತ ಡಿ. ಎಲ್. ನರಸಿಂಹಾಚಾರರು ಒಂದೆಡೆ ಕವಿರಾಜಮಾರ್ಗ ಕಾವ್ಯಾವಲೋಕನಗಳಲ್ಲಿ ಗೀತಿಕೆಗಳಿದ್ದರೂ ಅವುಗಳಿಗೆ ಗ್ರಂಥೋಕ್ತ ಲಕ್ಷಣಗಳನ್ನು ಅನ್ವಯಿಸುವುದು ಕಷ್ಟವಾಗಿದೆ; ಈ ದಿಸೆಯಲ್ಲಿ ಇನ್ನೂ ಸ್ವಲ್ಪ ಕೆಲಸ ನಡೆಯಬೇಕು, ಎಂದಿರುವರು. ಇದೊಂದು ಇಂಥ ಯತ್ನ.

ಜನ್ನನ ಜನ್ಮದಿನ

ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಕೃಷಿಮಾಡಿ ಕೃತಾರ್ಥರಾದ ಪ್ರಖ್ಯಾತ ಕವಿಗಳಲ್ಲಿ ಜನ್ನನೊಬ್ಬ. ಜೈನ. ಪ್ರಾರಂಭದಲ್ಲಿ ಹಲವು ಶಾಸನಗಳನ್ನು ಬರೆದು ಕ್ರಿ. ೧೨೦೯ ರಲ್ಲಿ ಯಶೋಧರ ಚರಿತೆಯನ್ನು ೧೨೩೦ ರಲ್ಲಿ ಅನಂತನಾಥ ಪುರಾಣವನ್ನು ರಚಿಸಿದನು. ಅನುಭವಮುಕುರ ಅಥವಾ ಸ್ಮರತಂತ್ರ ಎಂಬ ಚಿಕ್ಕ ಶಾಸ್ತ್ರ ಕಾವ್ಯವನ್ನು ಬರೆದಿರುವನು.

ಇವು ಜನ್ನನು ಬರೆದ ಶಾಸನ ಮತ್ತು ಕೃತಿಗಳಿಂದ ಅವನ ವಿಷಯದಲ್ಲಿ ದೊರೆಯುವ ವಿವರಗಳು—

ಗೋತ್ರ–ಕಾಶ್ಯಪ

ಜನ್ಮದಿನ- ?

ತಾಯಿ–ಗಂಗಾದೇವಿ

ತಂದೆ–ಶಂಕರ. ದ್ವಾರಸಮುದ್ರದ ಹೊಯ್ಸಳ ನಾರಸಿಂಹ (ವೀರಬಲ್ಲಾಳ)ನಲ್ಲಿ (ಕ್ರಿ. ೧೧೭೩-೧೨೨೩) ಕಟಕೋಪಧ್ಯಾಯನಿದ್ದ ಈತನಿಗೆ ಕವಿ ಸುಮನೋಬಾಣನೆಂಬ ಬಿರುದು ಇತ್ತು.

ಪತ್ನಿ–ಲಕುಮಾದೇವಿ

ಗುರು–ಪಶ್ಚಿಮ ಚಾಲುಕ್ಯ ದೊರೆ ಜಗದೇಕಮಲ್ಲನಲ್ಲಿ (೧೧೩೮-೧೧೫೦) ಕಟಕೋಪಾಧ್ಯಾಯನಿದ್ದ ಮತ್ತು ಭಾಷಾಭೂಷಣ ಕಾವ್ಯಾವಲೋಕನಾದಿ ಗ್ರಂಥಗಳ ಕರ್ತನೆಂದು ಪ್ರಸಿದ್ಧನಿರುವ ಇಮ್ಮಡಿ ನಾಗವರ್ಮ.

ರಾಜಾಶ್ರಯ–ಉಪರೋಕ್ತ ಹೊಯ್ಸಳ ನಾರಸಿಂಹ. ಜನ್ನ ಅವನಿಂದ ಕವಿ ಚಕ್ರವರ್ತಿ, ನಾಟ್ಯಪ್ರಭು ಎಂಬ ಬಿರುದುಗಳನ್ನು ಪಡೆದಿದ್ದ. ಆಸ್ಥಾನ ಕವಿಯಲ್ಲದೆ ಜನ್ನ ತನ್ನ ದೊರೆಯ ದಂಡಾಧೀಶ ಮಂತ್ರಿ ಪದಗಳನ್ನು ಕೂಡ ಅಲಂಕರಿಸಿದ್ದ.

ಅನಂತನಾಥ ಪುರಾಣದಲ್ಲಿ ಜನ್ನ ಅನಂತನಾಥ ಜಿನೇಂದ್ರನ ಜನ್ಮ ಸಮಯವನ್ನು—

ಶಶಿಸೂರ್ಯಾದಿ ನವಗ್ರಹಂಗಳಿರೆ ತಂ ತಮ್ಮುಚ್ಚದೊಳ್ ಶುದ್ಧಲ
ಗ್ನ ಶುಭಶ್ರೀಗಗನಂತರಾಲವಲಯಂ ನಿಷ್ಕಲ್ಮಷಂ ಮಾಡೆ ಕೂ
ಡೆ ಶಿವಾಖ್ಯಾನ ಯೋಗಮೆಸೆದಿರ್ದಾಷಾಢಕೃಷ್ಣತ್ರಯೋ
ದಶಿಯೊಳ್ ರೇವತಿಯೊಳ್ ಜಗತ್ರಿತಯ ಲಕ್ಷ್ಮೀವಲ್ಲಭಂ ಪುಟ್ಟಿದಂ ॥ ೪/೧೩೬

—ಶಶಿ ಸೂರ್ಯಾದಿ ನವಗ್ರಹಗಳು ಉಚ್ಚಸ್ಥಾನಗಳಲ್ಲಿ ಇರುವಾಗ ಶುಭ ಲಗ್ನದಲ್ಲಿ ಆಷಾಢ ಕೃಷ್ಣ ೧೩, ರೇವತೀ ನಕ್ಷತ್ರ, ಶಿವಯೋಗದಲ್ಲಿ, ಲಕ್ಷ್ಮೀವಲ್ಲಭನು

ಅಂದರೆ ಅನಂತನಾಥ ಜಿನೇಂದ್ರನು ಜನ್ಮಿಸಿದನು, ಎಂದು ಬಣ್ಣಿಸಿರುವನು.

ಇದರ ಮುಂದಣ ಪದ್ಯದಲ್ಲಿ ಜನ್ನ ತನ್ನ ತಾಯಿ ತಂದೆಗಳ (ಗಂಗೆ-ಶಂಕರ) ಹೆಸರುಗಳನ್ನು ಉಲ್ಲೆಖಿಸಿರುವನು. ಅವನ ಪತ್ನಿಯ ಹೆಸರು ಲಕುಮಾದೇವಿ. 'ಲಕ್ಷ್ಮೀವಲ್ಲಭಂ ಪುಟ್ಟಿದಂ' ಎನ್ನುವಲ್ಲಿ ಜನ್ನನ ಜನ್ಮದಿನವಾದರೂ ಅದೇ ಅಂದರೆ ಅನಂತನಾಥನ ಜನ್ಮದಿನ ಆಷಾಢಕೃಷ್ಣ ೧೩, ರೇವತೀ ನಕ್ಷತ್ರ, ಶಿವಯೋಗ ಎಂದು ಸೂಚಿತವಾಗುವುದರಿಂದ ಸದ್ಯ ಅದೇ ಸ್ವೀಕೃತವಾಗಿದೆ. ಯಾವ ವರ್ಷ ಎಂಬುದು ಗೊತ್ತಿಲ್ಲ. ಆದರೆ ಅನಂತನಾಥನ ಮತ್ತು ತನ್ನ ಗೋತ್ರ, ಜನ್ಮಮಾಸಾದಿಗಳಲ್ಲಿರುವ ಹೊಂದಾಣಿಕೆಯನ್ನು ವಿವರಿಸಿದ ಪದ್ಯದೊಂದಿಗೆ ಹೋಲಿಸಿ ನೋಡುವಾಗ ಇದು ಸರಿಯೆನಿಸದು. ಈ ಪದ್ಯದಲ್ಲಿ ಜನ್ನ—

> ಕ್ರಮದಿಂ ಕಾಶ್ಯಪ ಗೋತ್ರದಿಂ ಜನಯಿಪಂದಾಷಾಢಮುಂ ಕೃಷ್ಣಪ-
> ಕ್ಷಮುಮಾ ರೇವತಿಯುಂ ಜನಾರ್ದನಕವೀದ್ರಂಗಂ ಜಿನೇಂದ್ರಂಗಮಿಂ-।
> ದಮದೊರ್ಂದಾದುದು ಮುಂತೆಕೂಡುವದನೆಂತುಂ ಪೇೞ್ವುದೆಸ್ಪಷ್ಟಮು-
> ಷ್ಟಮ ಲೋಕಾದಿನಿವಾಸನೃತ್ಯಪದವೀಮಾಂಗಲ್ಯಸಾಕಲ್ಯದೊಳ್ ॥೧೪/೭೫

—ಅನಂತನಾಥನ ಮತ್ತು ತನ್ನ ಗೋತ್ರ ಒಂದೆ ಅಂದರೆ ಕಾಶ್ಯಪ; ಅದೇ ಮೇರೆಗೆ ಜನ್ಮಮಾಸ, ಪಕ್ಷ ಮತ್ತು ನಕ್ಷತ್ರಗಳಾದರೂ ಒಂದೇ, ಎಂದಿರುವನು. ಇಲ್ಲಿ ತಿಥಿ ಮತ್ತು ಯೋಗ(ತ್ರಯೋದಶಿ, ಶಿವಯೋಗ)ಗಳ ಉಲ್ಲೇಖವಿಲ್ಲ.

ಹಾಗೆ ನೋಡಿದರೆ ಅನಂತನಾಥನ ಜನ್ಮ ತಿಥಿಯ ವಿಷಯದಲ್ಲಿ ಒಮ್ಮತವಿಲ್ಲ. ಶ್ವೇತಾಂಬರ ಪಂಥೀಯರು ವೈಶಾಖ ಕೃ. ೧೩ ರೇವತೀ ನಕ್ಷತ್ರ ಎಂದು ಬಗೆದಿದ್ದರೆ ದಿಗಂಬರರು ಜೇಷ್ಠ ಕೃ. ೧೨ ರೇವತೀ ನಕ್ಷತ್ರ ಎಂದು ಬಗೆದಿರುವರು. ಎರಡೂ ಪರಂಪರಗತವಾಗಿ ಬಂದಿವೆ. ಇವಕ್ಕೂ ಜ್ಯೋತಿಷ್ಯ ಶಾಸ್ತ್ರದ ಲೆಕ್ಕಕ್ಕೂ ಹೊಂದಿಕೆಯಾಗುವುದಿಲ್ಲ. ಜನ್ನ ಆಷಾಢ ಕೃ: ೧೩ ರೇವತೀ ನಕ್ಷತ್ರ ಎಂದಿರುವುದು ಕೂಡದಿ ಗಂಬರರಲ್ಲಿ ರೂಢವಿದ್ದಿರಬಹುದಾದ ಇನ್ನೊಂದು ಪರಂಪರೆ ಎಂದು ಭಾವಿಸಬಹುದು, ಇಷ್ಟೇ.[1]

ಅನಂತನಾಥನು ಜನ್ಮಿಸಿದಾಗ ಶಶಿಸೂರ್ಯಾದಿ ಗ್ರಹಗಳು ಉಚ್ಚಸ್ಥಾನದಲ್ಲಿದ್ದವು. ಅಂದು ಶಿವಯೋಗವಿದ್ದಿತು ಎಂಬ ಜನ್ನನ ಬಣ್ಣನೆ ಕವಿವ್ಯಾಪಾರ ಮಾತ್ರ.

---

1. ದಿಗಂಬರ ಸಂಪ್ರದಾಯದಲ್ಲಿ ಅನಂತನಾಥನ ಜನ್ಮ ಜೇಷ್ಟ ಕೃ. ೧೨ ಇದ್ದರೂ ಗರ್ಭಾವತರಣ ದಿನ ಕಾರ್ತೀಕ ಶು. ೧ ಎಂದಿದೆ. ಅಂದಿನಿಂದ ಜೇಷ್ಠ ಕೃ. ೧೨ಕ್ಕೆ ತುಸು ಹೆಚ್ಚು ಕಡಿಮೆ ೮ ತಿಂಗಳಾಗುವುವು. ಬಹುಶಃ ಇದನ್ನೂ ಇತರತ್ರ ಮಾಸ ಬೇರೊಂದಿದ್ದರೂ ತಿಥಿ ಕೃ. ೧೩ ಇರುವುದನ್ನೂ ಅನಂತನಾಥ ಜನ್ಮಪೂರ್ಣ ಒಂಬತ್ತು ತಿಂಗಳನಂತರ ಆಯಿತೆಂಬುದನ್ನೂ ಅನುಲಕ್ಷಿಸಿ ಸರಿಯಾದ ಜನ್ಮ ದಿನ ಆಷಾಡ ಕೃ. ೧೩ ಎಂಬ ಅಭಿಪ್ರಾಯ ಹುಟ್ಟಿಕೊಂಡಿರಬೇಕು. ಹೀಗಿದ್ದರೆ ಜನ್ನನ ಶಿವಯೋಗವು ಕೂಡಿ ಬರುವದು. ಮಹಾಶಿವರಾತ್ರಿ ಮತ್ತು ಪ್ರತಿ ತಿಂಗಳು ಬರುವ ಮಾಸ ಶಿವರಾತ್ರಿಗಳಿಗೆ ಶಿವಯೋಗ ಎನ್ನುವುದುಂಟು. ವಿಷ್ಕಂಭಕಾದಿ ೨೭ ಯೋಗಗಳಲ್ಲಿರುವ ಶಿವಯೋಗದಿಂದ ಭಿನ್ನವಿರುವ ಈ ಶಿವಯೋಗಗಳು ಪ್ರತಿ ತಿಂಗಳು ಸಾಮಾನ್ಯವಾಗಿ ಕೃಷ್ಣ ೧೩/೧೪ ರಂದು ಬರುತ್ತವೆ.

ಸೂರ್ಯನು ಉಚ್ಚ ಸ್ಥಾನದಲ್ಲಿರುವುದು ಮೇಷದಲ್ಲಿ. ಆ ಸಮಯ ಚೈತ್ರ ವೈಶಾಖದಲ್ಲಿ ಬರುವದು. ಆಷಾಢದಲ್ಲಿ ಶಿವಯೋಗವು[1] ಯಾವಾಗಲೂ ಶುಕ್ಲ ಪಕ್ಷದಲ್ಲಿಬರುವದು. ರೇವತೀ ನಕ್ಷತ್ರವು ಕೃಷ್ಣಪಕ್ಷದಲ್ಲಿ ಬಂದರೂ ಅದು ಷಷ್ಠಿ, ಸಪ್ತಮಿ ಒಮ್ಮೊಮ್ಮೆ ಅಷ್ಟಮಿ ತಿಥಿಯೆಂದು ಬರುವುದು. ಈ ಅಂಶಗಳನ್ನು ಗಮನಿಸಿದಾಗ ಜನ್ನನ ಜನ್ಮವಾದದ್ದು ಆಷಾಢಮಾಸ ಕೃಷ್ಣ ಪಕ್ಷದಲ್ಲಿ ರೇವತೀ ನಕ್ಷತ್ರವಿರುವ ಯಾವುದೊ ಒಂದು (೬, ೭, ೮) ತಿಥಿ. ಅಂತೆಯೆ ಅನಂತನಾಥನಿಗೂ ತನಗೂ ಹೊಂದಾಣಿಕೆ ಇರುವುದು ಕ್ರಮದಿಂದ ಗೋತ್ರ, ಜನ್ಮ ಮಾಸ, ಪಕ್ಷ, ನಕ್ಷತ್ರ ಇಷ್ಟುಮಟ್ಟಿಗೆ ಎಂದು ಆತ ಎತ್ತಿ ಹೇಳಿರುವನೆಂಬುದು ಸ್ಪಷವಾಗದಿರದು.

ಪುನರ್ವಿಮರ್ಶೆ

ಜನ್ನನು ಜನ್ಮಿಸಿದ್ದು ಆಷಾಢ ಕೃಷ್ಣ ರೇವತೀ ನಕ್ಷತ್ರವಿರುವ ೬, ೭, ೮ ಇವುಗಳಲ್ಲಿ ಯಾವುದೊ ಒಂದು ತಿಥಿ ಎಂಬುದು ಸ್ಪಷ್ಟವಿದ್ದರೂ ಇಷ್ಟರಿಂದ ಅವನು ಹುಟ್ಟಿದ ವರ್ಷ ಮತ್ತು ದಿನವನ್ನು ಊಹಿಸುವದು ಸಾಧ್ಯವಿಲ್ಲ. ಇವು ಪ್ರತಿ ವರ್ಷ ಬರುವವು. ಆದರೂ ಲಭ್ಯವಿರುವ ಇತರ ಆಧಾರಗಳನ್ನೂ ಈ ದಿಸೆಯಲ್ಲಿ ಪರಿಶ್ರಮಿಸಿದ ವಿದ್ವಾಂಸರ ಅಭಿಪ್ರಾಯಗಳನ್ನೂ ಮತ್ತೊಮ್ಮೆ ನಿರುಕಿಸಿದಾಗ ಎಲ್ಲಿಗೆ ಮುಟ್ಟಬಹುದೆಂಬುದು ೧೦೦% ನಿರರ್ಥಕ ಪ್ರಯತ್ನವಾಗದು. ಇದೊಂದು ಇಂಥ ಪ್ರಯತ್ನ.

ಈ ದಿಸೆಯಲ್ಲಿ ಇಮ್ಮಡಿ ನಾಗವರ್ಮನ ಕಾಲವು ಕೆಳಗಣ ಮತ್ತು ಜನ್ನಲಿಖಿತ ಶಾಸನ ಹಾಗು ಕೃತಿಗಳು ಮೇಲಿನ ಗಡುವಾಗುವವು. ಇಮ್ಮಡಿ ನಾಗವರ್ಮನ ವಿಚಾರದಲ್ಲಿ ಕವಿ ಚರಿತೆಕಾರರು ಆತ ಸುಮಾರು ೧೧೪೫ರಲ್ಲಿ ಪಶ್ಚಿಮ ಚಾಲುಕ್ಯ ದೊರೆ ಜಗದೇಕಮಲ್ಲನ (೧೧೩೮-೧೧೫೦) ಕಟಕೋಪಾಧ್ಯಾಯನಿರಬಹುದು; ಜಗದೇಕನ ನಂತರ ಬಹುದಿವಸ ಬದುಕಿದ್ದು ವಾರ್ಧಕದಲ್ಲಿ ಜನ್ನನಿಗೆ ಉಪಾಧ್ಯಾಯ ಆಗಿರಬಹುದು ಎಂದು ಅಭಿಪ್ರಾಯ ಪಟ್ಟಿರುವರು.[2] ಗೋವಿಂದ ಪೈ ನಾಗವರ್ಮನ ಕಾಲ ೧೧೨೦-೧೨೦೦, ಜನ್ನನ ಕಾಲ ೧೧೬೫-೧೨೪೫ ಎಂದು ತೀರ್ಮಾನಿಸಿರುವರು.[3] ಅವರ ಅಭಿಪ್ರಾಯದಲ್ಲಿ ಜಗದೇಕಮಲ್ಲ ಬೇರೊಬ್ಬ; ನಾಗವರ್ಮ ಜನ್ನ ಇಬ್ಬರೂ ೮೦ ವರ್ಷ ಬದುಕಿರಬೇಕು ಎಂದಿದೆ. ಜನ್ನನ ಜನ್ಮವರ್ಷಕ್ಕಾಗಿ ಅವರು ಜನ್ನ ಲಿಖಿತ ಚನ್ನರಾಯಪಟ್ಟಣದ ಶಾಸನವನ್ನು ಆಧಾರವಾಗಿ ಇಟ್ಟುಕೊಂಡಿರುವರು. ಈ ಶಾಸನವು ೧೧೯೧ ರಲ್ಲಿ (ಗೋವಿಂದ ಪೈ ಮೇರೆಗೆ ೧೧೯೦) ಬರೆಯಲ್ಪಟ್ಟಿದೆ. ಆಗ ಅಂದರೆ ೧೧೯೦ ರಲ್ಲಿ ಜನ್ನನಿಗೆ ೨೫ ವರ್ಷಗಳಿರಬಹುದು ಎಂದು ಗ್ರಹಿಸಿ ಆತನ ಜನ್ಮ ವರ್ಷವನ್ನು ೧೧೬೫ ಎಂದು ಊಹಿಸಿರುವರು.

---

1. ಈ ಶಿವಯೋಗವು ವಿಷ್ಕಂಭಕಾದಿ ೨೭ ಯೋಗಗಳಲ್ಲಿ ಒಂದು.
2. ಕ. ಚ. ಸಂ. ೧/೧೪೦.
3. ಕ. ಸಾ. ಪ. ಸಂ ೨೦, ಪು. ೧೫೨-೧೬೭.

ಸಾಮಾನ್ಯವಾಗಿ ಪ್ರಾಚೀನ ಕಾಲದಲ್ಲಿ ಮಕ್ಕಳ ವಿದ್ಯಾಭ್ಯಾಸವು ೮ ನೆಯ ವಯಸ್ಸಿನಲ್ಲಿ ಪ್ರಾರಂಭವಾಗಿ ಮುಂದೆ ೧೨ ವರ್ಷಗಳವರೆಗೆ ಅಂದರೆ ಅವರ ೨೦ ನೆಯ ವಯಸ್ಸಿಗೆ ಮುಗಿಯುತ್ತಿತ್ತು. ಗೋವಿಂದ ಪೈ ಊಹಿಸಿದ ಮೇರೆಗೆ ಜನ್ನನ ಜನ್ಮ ವರ್ಷ ೧೧೬೪ ಎಂದು ಗ್ರಹಿಸಿ ಲೆಕ್ಕ ಹಾಕಿದರೆ ಈ ರೀತಿ ಅವನ ವಿದ್ಯಾಭ್ಯಾಸವು ೧೧೮೪ ರಲ್ಲಿ ಮುಗಿಯುವದು. ಆಗ ಇಮ್ಮಡಿ ನಾಗವರ್ಮನ ವಯಸ್ಸು ಅವರೆಣಿಕೆ ಯಂತೆ ೬೪ ಆಗುವುದು. ಇಮ್ಮಡಿ ನಾಗವರ್ಮ ಪಶ್ಚಿಮ ಚಾಲುಕ್ಯ ಜಗದೇಕನ ಕಟ ಕೋಪಾಧ್ಯಾಯನಿದ್ದ ಎಂಬುದಕ್ಕೆ ಗೋವಿಂದ ಪೈ ಒಪ್ಪಿಲ್ಲ. ಆ ಪದವಿಗೆ ಅವ ಚಿಕ್ಕವ ನಾಗುವ ಎಂದು ಅವರು ಬಗೆದಿರುವರು. ಆದರೆ ಉಪಾಧ್ಯಾಯ ಪದವಿಗೆ ವಯಸ್ಸಿನ ಗಿಂತ ಕುಲ, ಶೀಲ, ವಿದ್ವತ್ತೆಗಳಿಗೆ ಪ್ರಾಮುಖ್ಯತೆ ಇರುವುದನ್ನು ಗಮನಿಸಿದಾಗ ಅವರ ಈ ಕಾರಣಕ್ಕೆ ಅಷ್ಟೊಂದು ಪುಷ್ಟಿ ದೊರೆಯದು. ಅಲ್ಲದೆ ಅವರ ಲೆಕ್ಕದ ಮೇರೆಗೆ ನಾಗವರ್ಮನ ಜನ್ಮ ೧೧೨೦ ಎಂದಿಟ್ಟುಕೊಂಡರೂ ಜಗದೇಕನ ಆಳಿಕೆಯ ಕೊನೆಯ ವರ್ಷ ೧೧೫೦ ಕ್ಕೆ ಅವನ ವಯಸ್ಸು ೩೦ ಆಗುವದು. ಅದು ಅಸಂಭವ ಎನ್ನುವಷ್ಟು ಚಿಕ್ಕ ವಯಸ್ಸಾಗದು. ಶಿಷ್ಯನೆಂದು ಜನ್ನ ಅವನಲ್ಲಿ ಎಂದಿನಿಂದ ಮತ್ತು ಎಷ್ಟು ಕಾಲ ಓದಿದನೆಂಬುದು ತಿಳಿಯದು. ಜನ್ನನ ವಿದ್ಯಾಭ್ಯಾಸ ಕಾಲದ ದ್ವಿತಿಯಾರ್ಧ ಅಂದರೆ ೧೧೭೯-೧೧೮೪ ಅವಧಿಯಲ್ಲಿ ಅವನು ನಾಗವರ್ಮನ ಶಿಷ್ಯನಿದ್ದನೆಂದು ಇಟ್ಟುಕೊಂಡರೂ ಆಗ ನಾಗವರ್ಮನ ವಯಸ್ಸು ೫೯-೬೪ ಆಗುವದು. ಉಪಾಧ್ಯಾಯನಾಗಲು ಅದು ತೀರ ವೃದ್ಧಾಪ್ಯದ ಕಾಲ ಎನ್ನುವಂತಿಲ್ಲ.

ಆದರೂ ಜಗದೇಕನ ನಂತರ ಅಂದರೆ ೧೧೫೧ ರಿಂದ ಜನ್ನನ ವಿದ್ಯಾಭ್ಯಾಸದ ಕೊನೆಯ ವರ್ಷ ೧೧೮೪ ವರೆಗಿನ ಪರಮಾವಧಿ ಗಡುವುಗಳಲ್ಲಿಯ ಯಾವುದೊಂದು ವರ್ಷದಲ್ಲಿ ಅವನು ಜನ್ಮಿಸಿರಬೇಕೆಂದು ಗ್ರಹಿಸಿ ಆ ವರ್ಷವನ್ನು ಕಂಡು ಹಿಡಿಯಲು ಯತ್ನಿಸುವುದು ಲೇಸು. ಪ್ರಾಚೀನ ಕವಿಗಳು ಸ್ವವಿಷಯವನ್ನು ಪರ್ಯಾಯದಿಂದ ಇಲ್ಲವೆ ಸಾಂಕೇತಿಕವಾಗಿ ಸೂಚಿಸುವದುಂಟು. ಛಂದೋಂಬುಧಿಯ ನಾಗವರ್ಮ 'ಜಯ ದೇವಾಕ್ಷರ ಧವಳ' ಪದ್ಯದಲ್ಲಿ ಸ್ಮರಿಸಿದ ಸುಪ್ರಸಿದ್ಧ ಲಾಕ್ಷಣಿಕ ಜಯದೇವ ಜೈನನೆಂಬು ದಕ್ಕೆ ಅವನ ಗ್ರಂಥ ಜಯದೇವ ಛಂದಸ್ಸನ್ನು ಸಂಪಾದಿಸಿದ ವೇಲಣಕರ ಅದರಲ್ಲಿಯ ' ಗಾಯತ್ರ್ಯಂ ಛಂದಸಾಂ ಪೂರ್ವಂ ವರ್ಧಮಾನಾಕ್ಷರಂ ಪರಂ ' ಮಂಗಲ ಶ್ಲೋಕ ವನ್ನು ಆಧಾರವಾಗಿ ಕೊಟ್ಟಿರುವರು. ' ಗಾಯಿತ್ರಿಯಿಂದ ಪ್ರಾರಂಭವಾಗಿ ಮುಂದೆ ಒಂದೊಂದು ಅಕ್ಷರದಿಂದ ವರ್ಧಿಸುವ' ಎಂಬುದು ಈ ಪದಗಳ ಸರಳಾರ್ಥ. ಆದರೆ ಇಲ್ಲಿ ರುವ 'ವರ್ಧಮಾನ' ಪದ ವರ್ಧಮಾನ ಜಿನನ ಪ್ರಚ್ಛನ್ನ ಸ್ತುತಿ ಎಂದಿರುವರು ವೇಲಣ ಕರ. ಸ್ವತಃ ಜನ್ನನೇ ಅನಂತನಾಥನ ಜನ್ಮ ಸಂದರ್ಭದಲ್ಲಿ 'ಲಕ್ಷ್ಮೀವಲ್ಲಭಂ ಪುಟ್ಟಿದಂ' ಎನ್ನುವಾಗ ಪರ್ಯಾಯದಿಂದ ಅದನ್ನು ತನಗೂ ಅನ್ವಯಿಸಿಕೊಂಡಿರುವನು. ಇದೇ ಬಗೆಯಲ್ಲಿ ಅನಂತನಾಥ ಮತ್ತು ತನ್ನ ಗೋತ್ರಾದಿಗಳ ಹೊಂದಾಣಿಕೆಯನ್ನು ವಿವರಿ ಸುವ ಉಪರೋಕ್ತ ' ಕ್ರಮದಿಂ ಕಾಶ್ಯಪ ಗೋತ್ರದಿಂ ' ಪದ್ಯದಲ್ಲಿ ಜನ್ನ ತನ್ನ ಜನ್ಮ

ವರ್ಷವನ್ನು ಗುರುತಿಸಲು ಸಹಾಯವಾಗಬಹುದಾದ ಪದಗಳನ್ನು ಬಳಸಿರಬಹುದೇ ಎಂಬುದೊಂದು ಕುತೂಹಲಾತ್ಮಕ ಪ್ರಶ್ನೆ. ಅನಂತನಾಥ ಮತ್ತು ತನ್ನ ಗೋತ್ರಾದಿಗಳಲ್ಲಿರುವ ಹೊಂದಾಣಿಕೆಯನ್ನು ಉಲ್ಲೇಖಿಸಿ ಮುಂದಣ ಹೊಂದಾಣಿಕೆಯನ್ನು ಕುರಿತು ಜನ್ನ ಈ ಪದ್ಯದಲ್ಲಿ—

......ಮುಂತೆಕೂಡುವದನೆಂತುಂ ಪೇೞ್ವುದೆ ಸ್ಪಷ್ಟಮು—
ಷ್ಟಮು ಲೋಕಾದಿ ನಿವಾಸ ನೃತ್ಯ ಪದವೀ ಮಾಂಗಲ್ಯ ಸಾಕಲ್ಯದೊಳ್ ||

—ಎಂದಿರುವನು. ಸರಿಯಾದ ಅರ್ಥ ಏನೇ ಇದ್ದರೂ ಇದೊಂದು ಜೈನ ಮುಮುಕ್ಷುವಿನ ಸದಾಕಾಂಕ್ಷೆ ಎಂಬಲ್ಲಿ ಸಂದೇಹವಿಲ್ಲ. ಅನಂತನಾಥನನ್ನು 'ಲಕ್ಷ್ಮೀವಲ್ಲಭಂ' ಎಂದು ಉಲ್ಲೇಖಿಸುವಲ್ಲಿ ಪರ್ಯಾಯದಿಂದ ಅದನ್ನು ತನಗೂ ಅನ್ವಯಿಸಿಕೊಂಡಂತೆ ಜನ್ನ ಇಲ್ಲಿರುವ 'ಅಷ್ಟಮು' ಪದದಲ್ಲಿ ಪರ್ಯಾಯದಿಂದ ತನ್ನ ಜನ್ಮತಿಥಿ ಅಷ್ಟಮಿ ಮತ್ತು 'ಮಾಂಗಲ್ಯ' ಪದದಲ್ಲಿ ಮಂಗಳವಾರ ಎಂದು ಸೂಚಿಸಿರಬಹುದೇ ಎಂಬ ಸಂದೇಹ ಮೂಡುವಂತಿದೆ. ಹೀಗೆಯೆ ಇರಬಹುದೆಂದು ಗ್ರಹಿಸಿ ಕಾಲಸೂಚಕ ಗ್ರಂಥ (ಎಫೆಮೆರಿಸ್) ದಲ್ಲಿ ೧೧೫೧–೧೧೮೫ ಕಾಲಖಂಡದಲ್ಲಿಯ ವರ್ಷಗಳನ್ನು ನಿರುಕಿಸಿದಾಗ ಆಷಾಢ ಕೃಷ್ಣ ೮, ಮಂಗಳವಾರ, ರೇವತೀ ನಕ್ಷತ್ರವಿರುವ ಈ ಕೆಳಗಿನ ನಾಲ್ಕು ದಿನಗಳು ದೊರೆಯುತ್ತವೆ.—

(೧) ೨೮–೬–೧೧೬೦, ಶ. ೧೦೮೨, ವಿಕ್ರಮ ಸಂವತ್ಸರ
(೨) ೨೫–೬–೧೧೬೩, ಶ. ೧೦೮೫, ಸುಭಾನು ಸಂವತ್ಸರ
(೩) ೨೭–೬–೧೧೭೭, ಶ. ೧೦೯೯, ಹೇವಲಂಬಿ ಸಂವತ್ಸರ
(೪) ೧೭–೬–೧೧೮೦, ಶ. ೧೧೦೨, ಶಾರ್ವರಿ ಸಂವತ್ಸರ

ಇವುಗಳಲ್ಲಿ ಕೊನೆಯ ಎರಡನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕಿಲ್ಲ. ೧೧೭೭ ರ ಲೆಕ್ಕದಿಂದ ೧೧೯೧ ನೆಯ ಚನ್ನರಾಯ ಪಟ್ಟಣದ ಶಾಸನವನ್ನು ಬರೆದ ಸಮಯದಲ್ಲಿ ಜನ್ನನ ವಯಸ್ಸು ಕೇವಲ ೧೪; ೧೧೮೦ ರ ಲೆಕ್ಕದಿಂದ ೧೧ ಆಗುವದು. ಎರಡೂ ಅವನ ವಿದ್ಯಾಭ್ಯಾಸದ ಸಮಯಕ್ಕೆ ಸರಿಹೋಗುವಂಥವು. ೧೧೬೦ ಮತ್ತು ೧೧೬೩ ರ ಲೆಕ್ಕದಿಂದ ಈ ಶಾಸನವನ್ನು ಬರೆದ ಸಮಯಕ್ಕೆ ಮತ್ತು ಮುಂದೆ ಯಶೋಧರ ಚರಿತೆ ಮತ್ತು ಅನಂತನಾಥ ಪುರಾಣಗಳನ್ನು ಬರೆದ ಸಮಯಕ್ಕೆ ಅವನ ವಯಸ್ಸು ಇಂತಾಗುವದು.—

ಜನ್ಮ ವರ್ಷ	ಚ.ಪ. ಶಾಸನ (೧೧೯೧)	ಯಶೋಧರ ಚರಿತೆ (೧೨೦೯)	ಅನಂತನಾಥ ಪುರಾಣ (೧೨೩೦)
೧೧೬೦	೩೧	೪೯	೭೦
೧೧೬೩	೨೮	೪೬	೬೭

ಇವೆರಡರಲ್ಲಿ ಕೇವಲ ಮೂರು ವರ್ಷಗಳ ಅಂತರ ಇರುವುದರಿಂದ ಯಾವುದೊಂದನ್ನು ಇದೇ ಜನ್ನನ ಜನ್ಮವರ್ಷವೆಂದು ಹೇಳುವದು ದುಸ್ತರವಿದೆ. ಆದರೂ ಕೃತಿ

ರಚನೆಯು ಅದರಲ್ಲೂ ಅನಂತನಾಥ ಪುರಾಣವನ್ನು ರಚಿಸಿದ ಸಮಯದಲ್ಲಿ ಅವನ ವಯಸ್ಸು ಸಾಧ್ಯವಿದ್ದಷ್ಟು ಕಡಿಮೆ ಇರುವದು ಇಷ್ಟವಿರುವದರಿಂದ ನಿಶ್ಚಿತ ಆಧಾರಗಳು ದೊರೆವನಕ ೨೫-೬-೧೧೬೩ (ಶಕ ೧೦೮೫, ಸುಭಾನು ಸಂವತ್ಸರ, ಆಷಾಢ ಕೃ. ೮, ಮಂಗಳವಾರ, ರೇವತೀ ನಕ್ಷತ್ರ) ಅವನ ಜನ್ಮದಿನವೆಂದು ಇಟ್ಟುಕೊಳ್ಳಬಹುದಾಗಿದೆ. ಗೋವಿಂದ ಪೈ ಮೇರೆಗೆ ಅಂದರೆ ೧೧೬೫ ರ ಲೆಕ್ಕದಿಂದ ಅನಂತನಾಥ ಪುರಾಣವನ್ನು ಬರೆದ ಸಮಯದಲ್ಲಿ ಜನ್ನನ ವಯಸ್ಸು ೬೩ ಆಗುವದು. ಅವರು ಅದರ ರಚನಾಕಾಲ ೧೨೨೮ ಎಂದು ಬರೆದಿದುವರು. ೧೨೩೦ ರ ಲೆಕ್ಕದಿಂದ ೬೫ ಆಗುವದು. ಯಶೋಧರ ಚರಿತೆಯನ್ನು ಸಂಪಾದಿಸಿದ ಕೆ. ವಿ. ರಾಘವಾಚಾರ್ಯರು ಅನಂತನಾಥ ಪುರಾಣವನ್ನು ಬರೆದ ಸಮಯದಲ್ಲಿ ಜನ್ನನಿಗೆ ಅರವತ್ತರೊಸಗೆ ಅಥವಾ ಷಷ್ಟಿಪೂರ್ತಿ ಆಗಿರಬೇಕೆಂದು ಭಾವಿಸಿರುವರು. ಜನ್ಮವರ್ಷ ೧೧೬೩ ಎಂದಿಟ್ಟುಕೊಂಡಾಗ ಬರುವ ವಯಸ್ಸು ೬೭ ಇವರೀರ್ವರ ಅಭಿಪ್ರಾಯಕ್ಕೆ ಸಮೀಪವಾಗಿರುವದು ಗಮನಾರ್ಹ ಅಂಶ.

ಕಬ್ಬಿಗರ ಕಾವ ಸಮಸ್ಯೆಗಳು

ಯಾವುದೊಂದು ಕಾರ್ಯವನ್ನು ಪ್ರಾರಂಭಿಸುವಾಗ ಮೊದಲು ಗಣೇಶನನ್ನು ಸ್ಮರಿಸುವಂತೆ, ಆಂಡಯ್ಯನ ಕಬ್ಬಿಗರ ಕಾವ ವಿಷಯದಲ್ಲಿ ಹಿರಿಯ ಸಾಹಿತಿ ದಿ. ಮುಳಿಯ ತಿಮ್ಮಪ್ಪಯ್ಯರನ್ನು ಸ್ಮರಿಸಿ ಮುಂದಡಿ ಇಡಬೇಕು. ಪಂಪ ರನ್ನರ ಕೃತಿಗಳ ಮಾದರಿಯಲ್ಲಿ ಅದಾದರೂ ಕನ್ನಡನಾಡಿನ ದೊರೆಯೊಬ್ಬನ ಗುಪ್ತ ಗುಣ ಕೀರ್ತನ ಎಂಬುದನ್ನು ಕಂಡುಹಿಡಿದವರಲ್ಲಿ ಅವರು ಮೊದಲಿಗರು. ಆ ಮೊದಲು ಅದೊಂದು ಸಂಸ್ಕೃತ ಪದಗಳನ್ನು ಬೆರಸದೆ ಅಚ್ಚಗನ್ನಡದಲ್ಲಿ ರಚಿಸಿದ ವೈಶಿಷ್ಟ್ಯ ಪೂರ್ಣಕೃತಿ ಎಂದಿಷ್ಟೇ ಪ್ರಸಿದ್ಧವಿದ್ದಿತು. ಮುಳಿಯರ ನಂತರ ಅವರ ಜಾಡಿನಲ್ಲಿ ಬೇರೆ ಕೆಲವು ವಿದ್ವಾಂಸರು ಸಂಶೋಧನೆಯನ್ನು ಮುಂದುವರಿಸಿರುವರು. ಜೊತೆಗೆ ನಾಡಕವಿ ಬೇಂದ್ರೆಯವರ–ಕಾಮ-ರತಿ, ಶಿವ-ಶಕ್ತಿ, ಶ್ರವಣ-ವಿರಕ್ತಿ ಈ ತ್ರಿಕೂಟ ದ್ವಂದ್ವದ ಕಾವ್ಯವು ಕಬ್ಬಿಗರ ಕಾವದಲ್ಲಿ ನಿರೂಪಿತವಾಗಿದೆ; ಇಲ್ಲಿಯ ರೂಪಕಕ್ಕೆ ಜೈನ ತತ್ತ್ವದ ಕವಚವಿಲ್ಲದಿಲ್ಲ; ಆದರೆ ಅದು ವಿಲಾಸಕ್ಕೆ ಹೊದಿಸಿದ ಮೇಲುದದಂತೆ, ಶೋಭಿಸುವಂತಿದೆ; ಕೆಚ್ಚಿನಲ್ಲಿ ಕಥೆಯು ಯಾವ ಮತಕ್ಕೂ ವಿರೋಧವಾಗಿಲ್ಲ, ಎಂಬ ಉಪಸಂಹಾರಾತ್ಮಕ ವಿಮರ್ಶೆ ಇದೆ.

ವೃತ್ತಿಯಲ್ಲಿ ಆಂಡಯ್ಯ ಲೆಕ್ಕಿಗರ ಪಿರಿಯ (ಹಿರಿಯ ಕರಣಿಕ). ಜೈನ. ಸುಪ್ರಸಿದ್ಧ ಕನ್ನಡ ಕವಿ ಜನ್ನನ (ಕ್ರಿ.೧೨೩೦)ಗಿಂತ ಸ್ವಲ್ಪ ಈಚೆಯವ. ಪಂಪ, ರನ್ನ, ಜನ್ನರಂತೆ ಸ್ಪಷ್ಟವಾಗಿ ಹೇಳಿಲ್ಲವಾದರೂ ಆಂಡಯ್ಯ ಹಾನಗಲ್ಲ ಶಾಖೆಯ ಕದಂಬ ವಂಶದ ಕಾಮದೇವನೆಂಬ ಒಬ್ಬ ಅರಸನ ಆಶ್ರಿತನಿದ್ದು ಅವನ ಕಬ್ಬಿಗರ ಕಾವವು ಆ ಕಾಮದೇವನ ಪ್ರಚ್ಛನ್ನ ಪ್ರಶಸ್ತಿ ಎಂಬುದು ಇಂದು ನಿಚ್ಚಳವಾಗಿದೆ.[1] ಜನ್ನನಂತೆ ಆಂಡಯ್ಯನದೂ ತುಂಬು ಬಾಳು ಎನ್ನುವಂತಿದೆ. ಜನ್ನ, ಸೊಬಗಿನ ಭೋಗವಿಳಾಸೋದಯದಿಂದೆ ಸಂದ ಜನ್ನಮರಸನ್, ಅಭಿನವ ಮದನನ್, ಪರಮ ಶ್ರೀ ಜಿನ ಪಾದ ಪಲ್ಲವ ನಿತಾಂತಂ, ಎಂದು ತನ್ನ ರೂಪ ಐಶ್ವರ್ಯ ಜಿನಭಕ್ತಿಗಳನ್ನು ಬಣ್ಣಿಸಿಕೊಂಡಿದ್ದರೆ ಆಂಡಯ್ಯ ತನ್ನ ಚಲುವಿಗೆ ಮರುಳಾಗಿ ಪ್ರಾಯದ ಹೆಂಗಳೆಯರು ತನ್ನನ್ನೆತ್ತಿ ದೊಡ್ಡವದನ್ನಾಗಿಸಿದರು, ಅರುಹಂತನ ಪಾದಕಮಲಗಳಲ್ಲಿ ಇರಿಸಿದ ನಿಶ್ಚಲ ಭಕ್ತಿಯಿಂದಾಗಿ ಕಮಲವೇ ಆವಾಸ ಸ್ಥಾನವಾದ ಲಕ್ಷ್ಮಿಯು ತನ್ನಲ್ಲಿ ಸ್ಥಿರವಾಗಿ ನಿಂತಿರುವಳು, ಎಂದು ಬಣ್ಣಿಸಿಕೊಂಡಿರುವನು.[2]

---

1. ಆಂಡಯ್ಯ ಕಾಮದೇವನ ಆಶ್ರಿತನಿದ್ದನೊ ಇಲ್ಲವೊ ಎಂಬುದು ಅಷ್ಟು ಸ್ಪಷ್ಟವಿಲ್ಲ. ಇಲ್ಲದಿದ್ದರೂ ಅವನ ಈ ಕೃತಿ ಅದಕ್ಕೆ ನಾಂದಿಯಾಗಿರಲು ಸಾಕು.

2. ಕ.ಕಾ. ೧೨-೧೩.

ದೇಶೀಭಾಷೆಗಳ ಸ್ವರೂಪ

ಆಧುನಿಕ ಭಾಷಾವಿಜ್ಞಾನಿಗಳ ಅಭಿಪ್ರಾಯದಲ್ಲಿ ಬೇರೆ ಬೇರೆ ಭಾರತೀಯ ಭಾಷೆಗಳ ಉಗಮ ವಿಕಾಸಗಳು ಎಂತಿದ್ದರೂ ಶಾಸ್ತ್ರದ ಮಟ್ಟಿಗೆ ಪ್ರಾಚೀನರು ಸಂಸ್ಕೃತ ಒಂದನ್ನು ಬಿಟ್ಟು ಉಳಿದ ಭಾಷೆಗಳನ್ನು ಅಪಭ್ರಂಶಗಳೆಂದು ಗಣಿಸುತ್ತಿದ್ದರು. 'ಶಾಸ್ತ್ರೇತು ಸಂಸ್ಕೃತಾದನ್ಯದಪಭ್ರಂಶತಯೋದಿತಂ' ಎಂದಿರುವನು ದಂಡಿ, ತನ್ನ ಕಾವ್ಯಾದರ್ಶದಲ್ಲಿ. ದಂಡಿಯ ಅಪಭ್ರಂಶಗಳ ಸ್ವರೂಪವನ್ನು ವಿವರಿಸುತ್ತ, ರಾಷ್ಟ್ರಕೂಟರಾಶ್ರಿತ ರತ್ನಶ್ರೀಜ್ಞಾನನೆಂಬ ಸಿಂಹಳೀಯ ಬೌದ್ಧ ವ್ಯಾಖ್ಯಾಕಾರನು (ಕ್ರಿ. ೯೩೫) 'ಶಬ್ದಭವಂ ಶಬ್ದಸಮಂ ದೇಶೀಯಂ ಸರ್ವಶಬ್ದಸಾಮಾನ್ಯಂ' ಎಂದಿರುವನು. ಕನ್ನಡದ ಶಬ್ದ ಸಂಪತ್ತಾದರೂ ಇದರಿಂದ ಭಿನ್ನವಿಲ್ಲ. ತತ್ಸಮ, ತದ್ಭವ ದೇಶ್ಯಗಳ ಈ ತ್ರಿವೇಣಿ ಸಂಗಮದ ಮೂಲಕ ಪ್ರಯೋಗದಲ್ಲಿ ಉಚಿತವೆನಿಸಿದ ಯಾವವೇ (ತತ್ಸಮ, ತದ್ಭವ, ದೇಶ್ಯ) ಶಬ್ದಗಳನ್ನು ಯಥೇಷ್ಟ ಬಳಸಲು ಎಲ್ಲರಿಗೂ ಇಂಬಿದ್ದಿತು. ಇಂದಿಗೂ ಇದೆ. ಕನ್ನಡದ ಮಟ್ಟಿಗೆ ಕವಿಗಳು, ಲಾಕ್ಷಣಿಕರು, ವಿದ್ವಾಂಸರು ಈ ಮೂರರ ಹಿತ ಮಿತ ಬಳಕೆಯನ್ನು ಪುರಸ್ಕರಿಸುತ್ತ ಬಂದಿದ್ದರೂ ಅರಿತೊ ಅರಿಯದೆಯೊ ತತ್ಸಮ ಅಂದರೆ ಸಂಸ್ಕೃತ ಶಬ್ದಗಳ ಬಳಕೆ ಅತೀವ ಹೆಚ್ಚಿತು. ಇದೊಂದು ಇಂಥ ಪದ್ಯ. ಮೊದಲನೆಯ ಗುಣವರ್ಮನದು. ದೇ. ಜ. ಸಂಪಾದಿತ ಕಬ್ಬಿಗರ ಕಾವದಲ್ಲಿ ಉದಾಹೃತವಾಗಿದೆ—

ಗಂಭೀರಸ್ಫಾರ ವೇಲಾಬಹುಲ ಪರಿವೃತೋಲ್ಲೋಲ ಕಲ್ಲೋಲಮಾಲಾ
ರಂಭ ಪ್ರೊಡ್ಡೀನ ಫೇನ ಪ್ರಬಲ ಜಲಚರೋಲ್ಲೂಠ ಪಾಠೀನ ಶುಂಭ ।
ತ್ಕುಂಭೀರಾಭೀಳನಕ್ರ ಪ್ರಕರ ಮುಕರ ನೀರೇಭ ರತ್ನ ಪ್ರವಾಳೋ
ಜ್ಜೃಂಭತ್ತ್ರೋದ್ಭಾಸಿ ವೀಚೀ ನಿಚಯ ಘನಘನಾರಾವ ರೌದ್ರಂ ಸಮುದ್ರಂ ॥

ಇದು ಸಮುದ್ರ ವರ್ಣನೆಯ ಪದ್ಯ. ಕನ್ನಡದ್ದೆಂಬ ಒಂದಾದರೂ ಶಬ್ದ ಇದರಲ್ಲಿಲ್ಲ. ಕನ್ನಡದ ಹೆಸರಿನಲ್ಲಿ ರಚಿತವಾಗುತ್ತಿದ್ದ ಈ ಬಗೆಯ ಕಾವ್ಯ ನಿರ್ಮಿತಿಯಿಂದ ಜುಗುಪ್ಸೆಗೊಂಡ ಸಹೃದಯ ವಿದ್ವಾಂಸರು ಸಂಸ್ಕೃತವನ್ನು ಬೆರಸದೆ ಆಡು ನುಡಿಯ ಅಂದ ಚಂದಗಳಿಗೆ ಇಂಬುಗೊಟ್ಟು ಕಾವ್ಯವನ್ನು ರಚಿಸುವುದಾದರೆ ಅದು ಆಂಡಯ್ಯ ಒಬ್ಬನಿಂದ ಸಾಧ್ಯ ಎಂಬ ಪ್ರಶಂಸಾಪರ ಮಾತುಗಳನ್ನಾಡಿದರು: ಅವರ ಬಯಕೆಯನ್ನು ಪೂರೈಸಲು ತಾನು ಈ ಕಾವ್ಯವನ್ನು ಬರೆದುದಾಗಿ ಅವನೇ ಹೇಳಿಕೊಂಡಿರುವನು.[1]

ಕೇವಲ ಸಂಸ್ಕೃತ ಪದಗಳ ಬದಲು ಕನ್ನಡ ಪದಗಳನ್ನಿಟ್ಟರೆ ಕಾವ್ಯವಾಗದು. ಅದಕ್ಕೊಂದು ವಸ್ತು ಬೇಕು. ವಸ್ತುವಿಗೆ ಒಪ್ಪುವಂಥ ರಸವ್ಯಂಜಕ ವರ್ಣನೆಗಳು ಬೇಕು. ವರ್ಣನೆಗಳು ಹೃದಯಂಗಮವಾಗಲು ಬಗೆಬಗೆಯ ಅಲಂಕಾರಗಳು,

1. ಕ.ಕಾ. ೧೫-೧೬.

ಕೊಂಕುನುಡಿ (ವಕ್ರೋಕ್ತಿ), ಜಾಣ್ನುಡಿ (ಕಿರಿದರೊಳು ಪಿರಿದರ್ಥವ ಕೊಡುವ ಮಾತು) ಗಳು ಬೇಕು. ನವರಸಗಳಲ್ಲಿ ಪ್ರಾಧಾನ್ಯವಿರುವದು ಶೃಂಗಾರಕ್ಕೆ. ರಸರಾಜ ಎನಿಸಿಕೊಂಡಿದೆ ಅದು. ಕಾಮ ಶೃಂಗಾರದ ಮೈವೆತ್ತ ಮೂರ್ತಿ. ವಸಂತ, ಚಂದ್ರ, ಮಂದಮಾರುತರು ಅವನ ಆಪ್ತ ಮಿತ್ರರು. ದುಂಬಿ, ಚಿಗರಿ, ಗಿಳಿ, ನವಿಲು, ಫಲ, ಪುಷ್ಪ, ಪಲ್ಲವ, ಮೊದಲಾದವು ಅವನ ಸಹಕಾರಿಗಳು. ಆತನ ಸತಿ ರತಿದೇವಿ ಶೃಂಗಾರದ ಸಾಫಲ್ಯ ಮೂರ್ತಿ. ಇಂಥ ಕಾಮುನನ್ನೇ ಕಥಾನಾಯಕನನ್ನಾಗಿಸಿ ಉಪರೋಕ್ತ ಕಾವ್ಯಲಕ್ಷಣಗಳೊಂದಿಗೆ ಅಚ್ಚಗನ್ನಡದಲ್ಲಿ ತನ್ನ ಕೃತಿಯನ್ನು ರಚಿಸಿರುವೆ, ಎಂದಿರುವನು ಆಂಡಯ್ಯ. ಜೊತೆಗೆ ಕಥಾನಾಯಕನೊಂದಿಗೆ ತನ್ನ ಪೋಷಕನನ್ನು ಸಂದಿಸಿ ಅವನ ವಿಕ್ರಮುವನ್ನು ಬಣ್ಣಿಸುವೆ (ನನೆವಿಲ್ಲನ ಬೀರಮುನೊಲ್ದು ಪೇೞ್ವೆನಾಂ) ಎಂದಿರುವನು.[1]

ಪ್ರಕೃತ ವಿವೇಚನೆಯ ವ್ಯಾಪ್ತಿ

ಕೃತಿ ವೈಶಿಷ್ಟ್ಯಗಳನ್ನು ಕುರಿತಿರುವ ಆಂಡಯ್ಯನ ಮಾತುಗಳು ಕಾವ್ಯಶಾಸ್ತ್ರ ಭಾಷಾಶಾಸ್ತ್ರಗಳಿಗೆ ಸಂಬಂದಿಸಿದ್ದರಿಂದ ಅವುಗಳ ವಿಮರ್ಶೆಯಲ್ಲಿ ಸಂಶೋಧಕರ ಊಹಾಶ್ವಗಳ ಓಡಾಟಕ್ಕೆ ಇಂಬಿಲ್ಲ. ಆದರೆ ಕನ್ನಡಕ್ಕೆ ಪರಕೀಯವೆನಿಸುವ ಆಂಡಯ್ಯನೆಂಬ ಹೆಸರು, ಕಾವ್ಯಸಮಾಪ್ತಿ ಗದ್ಯದಲ್ಲಿ 'ಕಾವನ ಗೆಲ್ಲಂ' ಎಂದಿದ್ದರೂ ಅವನ ಈ ಕೃತಿ 'ಕಬ್ಬಿಗರ ಕಾವಂ' ಎಂದು ಹೆಸರುಪಡೆದಿರುವದು, ವಸ್ತು ರಚನೆಗಾಗಿ ಮೂಲ ಪೌರಾಣಿಕ ಕಥೆಯಲ್ಲಿ ಅವನು ಮಾಡಿಕೊಂಡ ವ್ಯತ್ಯಾಸಗಳು, ದೇವಾಧಿದೇವ ಮಹಾದೇವನ ಮೇಲೆ ದಂಡೆತ್ತಿಹೋದಾಗ ಮಾನವಮಾತ್ರನಾದ ಜೈನ ಸವಣನಿಗೆ ಬೆದರಿ ತಾನು ಅವನನ್ನು ವಂದಿಸಿ ಮುಂದೆ ಸಾಗಿದ ಸನ್ನಿವೇಶದಿಂದ ವ್ಯಕ್ತವಾಗಬಹುದಾದ ಆಂಡಯ್ಯನ ಮತೀಯ ಭಾವನೆ, ಕಥೆಯಲ್ಲಡಗಿದ ಚಾರಿತ್ರಿಕ ಅಂಶಗಳು, ಇವೇ ಮೊದಲಾದ ವಿಷಯಗಳಲ್ಲಿ ಅವು ಸಾಕಷ್ಟು ಓಡಾಡಿವೆ.

ಕಾವ್ಯಶಾಸ್ತ್ರ ಭಾಷಾಶಾಸ್ತ್ರಗಳಿಗೆ ಸಂಬಂಧಿಸಿದ ವಿಷಯಗಳನ್ನು ಅವುಗಳಲ್ಲಿ ಆಸಕ್ತಿಯುಳ್ಳವರಿಗೆ ಬಿಟ್ಟು, ಸಂಶೋಧಕರ ಊಹಾಶ್ವಗಳ ಓಡಾಟದಲ್ಲಿ ಕಂಡುಬಂದ ಫಲಿತಾಂಶಗಳ ಪುನರ್ವಿಮರ್ಶೆಯನ್ನಿಷ್ಟೇ ಇಲ್ಲಿ ಎತ್ತಿಕೊಂಡಿದೆ.

ಆಂಡಯ್ಯ ಮತ್ತು ಅವನ ಕೃತಿಯ ವಿಷಯದಲ್ಲಿ ದೊರೆತ ನಿಶ್ಚಿತ ಅಂಶ ಆಧಾರಗಳು ತೀರ ಸ್ವಲ್ಪ. ಅವುಗಳನ್ನೂ ಮತ್ತು ಲಭ್ಯವಿರುವ ಇತರ ಅಂಶ ಆಧಾರಗಳನ್ನೂ ಮೇಳೈಸಿ ಈ ವಿಷಯದಲ್ಲಿ ಪರಿಶ್ರಮಿಸಿದ ವಿದ್ವಾಂಸರು ತಮ್ಮ ಅಭಿಪ್ರಾಯಗಳನ್ನು ಮಂಡಿಸಿರುವರು. ಅವುಗಳನ್ನು ಪುನರ್ವಿಮರ್ಶಿಸುವಾಗ ಭಿನ್ನಾಭಿಪ್ರಾಯವಿರುವಲ್ಲಿ ಅವರ ಅಭಿಪ್ರಾಯಗಳನ್ನು, ಅದೂ ನಿಶ್ಚಿತ ಹೊಸ ಅಂಶ ಆಧಾರಗಳಿಲ್ಲದಾಗ, ಅಲ್ಲಗಳೆಯುವುದು ಧಾರ್ಷ್ಟ್ಯದ ಮಾತಾದೀತು. ಆದ್ದರಿಂದ ಆ ದಾರಿಗೆ

1. ಕ. ಕಾ. ೧೭.

ಹೋಗದೆ ಇದೂ ಒಂದು ದೃಷ್ಟಿಕೋನ, ಯುಕ್ತವೆನಿಸಿದರೆ ಹೀಗೂ ನೋಡಬಹುದು, ಎಂಬ ಭಾವನೆಯಿಂದ ಬೇರೊಂದು ಅಭಿಪ್ರಾಯವನ್ನು ಮಂಡಿಸಿದೆ.

ಕವಿಯ ಹೆಸರು–ಆಂಡಯ್ಯ ಹೆಸರು ಕನ್ನಡಕ್ಕೆ ಅಪೂರ್ವ ; ಕಬ್ಬಿಗರ ಕಾವದ ಒಂದು ಹಸ್ತಪ್ರತಿಯಲ್ಲಿ ಅಂಡಯ್ಯ ಎಂದು ಉಕ್ತವಾಗಿದ್ದರಿಂದ ಅದರ ಸ್ವರೂಪ ಅರ್ಥ ಮೊದಲಾದವು ಊಹೆಯ ವಿಷಯವಾಗಿವೆ. ಹೀಗೆ—

(೧) ತಮಿಳಿನಲ್ಲಿ ಆಂಡಯ್ಯ (ಆಂಡ+ಅಯ್ಯ) ಹೆಸರಿದ್ದು ಅದಕ್ಕೆ ಆಳಿದ ಸ್ವಾಮಿ ಎಂಬರ್ಥವಿದೆ. ಜೈನರಲ್ಲಿ ಈ ಅರ್ಥದ ಹೆಸರುಗಳು ರೂಢವಿಲ್ಲ.* ಸಂಸ್ಕೃತ ದಲ್ಲಿ ಅಂಡ ಶಬ್ದವಿದ್ದು ಅದಕ್ಕೆ ಬ್ರಹ್ಮ, ಶಿವ ಅರ್ಥಗಳಿವೆ. ಕಬ್ಬಿಗರ ಕಾವದ ಒಂದು ಹಸ್ತಪ್ರತಿಯಲ್ಲಿ ಅಂಡಯ್ಯ ಎಂದಿರುವುದರಿಂದ ಮೂಲ ಹೆಸರು ಅಂಡ ಇದ್ದು ಸನ್ಮಾನಸೂಚಕ ಅಯ್ಯ ಪದ ಸೇರಿ ಅಂಡಯ್ಯ, ಆಂಡಯ್ಯ ಆಗಿರಬಹುದು.

(೨) ಮೂಲ ಹೆಸರು ಅಂಡಾರ್ಯ (ಅಂಡ+ಆರ್ಯ) ಎಂದೇ ಇರಬೇಕು. ಆರ್ಯದ ತದ್ಭವ ಅಯ್ಯ ಪದವನ್ನು ಜೋಡಿಸುವಾಗ ಉಂಟಾಗುವ ಅರಿಸಮಾಸ ದೋಷವನ್ನು ತಪ್ಪಿಸಲು ' ಕನ್ನಡದ ಕೈವಾರಿ 'ಯಾದ ಕವಿ ಅದನ್ನು ಆಂಡಯ್ಯ ಎಂದು ಮಾರ್ಪಡಿಸಿರಬೇಕು.

(೩) ಜೈನರು ತಮಗಿರುವ ಸಂಸ್ಕೃತ ಹೆಸರುಗಳ ವಿಕೃತ ರೂಪಗಳನ್ನು ಬಳಸು ವುದುಂಟು. ಆದಿನಾಥ ಹೆಸರು ಆದಯ್ಯ, ಆಡಯ್ಯ, ಆಂಡಯ್ಯ ಎಂದು ಮಾರ್ಪಾ ಟಾಗಿರಬೇಕು.

ಆಂಡಯ್ಯ ಹೆಸರಿಗೆ ಆಳಿದ ಸ್ವಾಮಿ ಎಂಬ ಭೂತಕಾಲ ಸೂಚಕ ಅರ್ಥ ಹೇಗೆ ಬಂದಿತೊ ತಿಳಿಯದು. ಹಸ್ತಪ್ರತಿಯಲ್ಲಿದ್ದ ಅಂಡಯ್ಯರೂಪ ಎಲ್ಲಿ ಮತ್ತು ಎಷ್ಟುಸಲ ಬಂದಿದೆ ಎಂಬುದರ ವಿವರಗಳಿಲ್ಲ. ಗ್ರಂಥಗರ್ಭದಲ್ಲಿ ಕವಿಯೇ ಅದು ತನ್ನ ಮತ್ತು ತನ್ನ ಅಜ್ಜನ ಹೆಸರೆಂದು ಎರಡುಸಲ ಉಲ್ಲೇಖಿಸಿದ್ದರೂ (ಪದ್ಯ ೯, ೧೧), ಅದರಿಂದ ಮೂಲರೂಪ ಅಂಡಯ್ಯವೊ ಆಂಡಯ್ಯವೊ ಎಂಬುದನ್ನು ನಿರ್ಣಯಿಸಲು ಸಹಾಯ ವಾಗುವಂತಿಲ್ಲ. ದೊರೆ, ಯಜಮಾನ, ಎಂದು ಅರ್ಥವಿರುವ ತಮಿಳು ಶಬ್ದ ಆಂಡಾರ್ (ಸನ್ಮಾನಾರ್ಥ ಬಹುವಚನ) ಆಂಡಾರಿ ಎಂದು ಕಿಟೆಲ್ ಕೋಶದಲ್ಲಿ ಇದೇ ಅರ್ಥದಲ್ಲಿ ಉಕ್ತವಾಗಿದೆ. ಜೊತೆಗೆ ಆಂಡಿ ಶಬ್ದವೂ ಇದೆ. ಇದರರ್ಥ ಶೈವ ಭಿಕ್ಷು. ಇದಾದರೂ ತಮಿಳಿನಿಂದ ಕನ್ನಡಕ್ಕೆ ಬಂದದ್ದು. ಹರಿಹರನ ಅರಿವಾಳ್ತಾಂಡ, ಇಹಃ ಪಗೆಯಾಂಡ ಇಳೆಯಾಂಡ ಗುಡಿಮಾರ, ಒಲಘಾಂಡಮೂರ್ತಿ, ಚಿಟುತ್ತೊಣೆಯಾಂಡ, ಪಗಲ್ತೊಣೆ ಯಾಂಡ, ಪೂಸಲೆಯಾಂಡ ಹೆಸರುಗಳಿರುವ ಶಿವಭಕ್ತರ ರಗಳೆಗಳಿವೆ. ಇಲ್ಲಿ ಆಂಡ ಪದವು ದೊರೆಯೆಂಬರ್ಥದಲ್ಲಿ ಸನ್ಮಾನ ಸೂಚಕವಾಗಿ ಬಂದಿದೆ. ಇವಲ್ಲದೆ ಸಂಸ್ಕೃತ

* ಕರ್ನಾಟಕಕ್ಕೆ ಬಂದು ನೆಲೆಸುವ ಮೊದಲು ಆಂಡಯ್ಯನ ಪೂರ್ವಿಕರು ತಮಿಳುನಾಡಿ ನವರಿದ್ದು ಆ ಮೂಲಕ ಅಂಡಯ್ಯ ಹೆಸರು ಅವರ ಮನೆತನದಲ್ಲಿ ನಡೆದುಬಂದಿರುವ ಸಂಭಾ ವ್ಯತೆಯನ್ನು ಉಪೇಕ್ಷಿಸುವಂತಿಲ್ಲ.

(ತತ್ಸಮ) ಹೆಸರುಗಳಿಗೆ ತದ್ಭವ ಸನ್ಮಾನ ಸೂಚಕಪದ, ದೇಶಿ ಹೆಸರುಗಳಿಗೆ ಸಂಸ್ಕೃತ ಸನ್ಮಾನ ಸೂಚಕಪದ ಸೇರಿರುವ ರಾಮಯ್ಯ, ಶಿವಯ್ಯ, ದೊರೆಸ್ವಾಮಿ, ಮುರಗೇಂದ್ರ ಮೊದಲಾದ ಹೆಸರುಗಳು ನಿತ್ಯಬಳಕೆಯಲ್ಲಿವೆ. ವಸ್ತು ಸ್ಥಿತಿ ಇಂತಿರುವಾಗ ಅಂಕಿತನಾಮಗಳ ವಿಷಯದಲ್ಲಿ ಅರಿಸಮಾಸ ದೋಷವೆಣಿಸುವದು ಎಷ್ಟರ ಮಟ್ಟಿಗೆ ಸಮಂಜಸವಾದೀತೊ ತಿಳಿಯದು.

ರಾಜನಲ್ಲದಿದ್ದರೂ ರಾಜಯ್ಯ ಹೆಸರು ಎಲ್ಲ ಮತೀಯರಲ್ಲಿ ಬಳಕೆಯಲ್ಲಿರುವಂತೆ ದೊರೆ ಅರ್ಥದಲ್ಲಿ ಆಂಡಯ್ಯ ಹೆಸರಾದರೂ ಬಳಕೆಯಲ್ಲಿರುವದು ಅಸಂಭವವಿಲ್ಲ. ಆಂಡಿ ಹೆಸರಾದರೂ ಇಂಥದೆ. ಜೈನರಲ್ಲಿ ಕೂಡ ಶಿವಾರ್ಯ (ಶಿವಕೋಟಿ), ಜನ್ನ (ಜನಾರ್ದನ), ಬ್ರಹ್ಮಶಿವ ಮೊದಲಾದ ಹೆಸರುಗಳು ಸುಪರಿಚಿತವಿವೆ. ಕವಿಯ ಹೆಸರು ಮೂಲದಲ್ಲಿ ಆಂಡಿ ಇದ್ದು ಆಂಡಿ + ಅಯ್ಯ = ಆಂಡಿಯಯ್ಯ, ಆಂಡೆಯ್ಯ, ಆಂಡಯ್ಯ ಆಗಿರುವದು ಕೂಡ ಅಶಕ್ಯವಿಲ್ಲ. ಕಬ್ಬಿಗರ ಕಾವದ ಒಂದು ಹಸ್ತಪ್ರತಿಯಲ್ಲಿ ಕಾವ್ಯ ಸಮಾಪ್ತಿ ಗದ್ಯದ ಕೊನೆಗೆ 'ಆಂಡೆಯನ ಕಾವ್ಯಂ ಸಮಾಪ್ತಂ ಮಂಗಳ ಮಹಾಶ್ರೀಶ್ರೀ' ಒಕ್ಕಣಿಕೆ ಇದೆ.[1] ಇಲ್ಲಿರುವ ಆಂಡೇಯ ಆಂಡೆಯಗಳಲ್ಲಿಯ 'ಡೆ' ಅಕ್ಷರದಿಂದ ಕವಿಯ ಹೆಸರಿನ ಮೂಲರೂಪ ಆಂಡಿ ಇದ್ದು ಸನ್ಮಾನಾರ್ಥ ಅಯ್ಯದೊಂದಿಗೆ ಆಂಡಿಯಯ್ಯ, ಆಂಡೆಯ್ಯ, ಆಂಡಯ್ಯ ಆದಂತಿದೆ. ಆಂಡ + ಅಯ್ಯ = ಆಂಡಯ್ಯ ಎಂತಲೂ ಆಗಿರಬಹುದು. ಮೂಲರೂಪ ಅಂಡ ಇದ್ದು ಅರಿಸಮಾಸ ದೋಷ ತಪ್ಪಿಸಲು ಕವಿಯೇ ಅದನ್ನು ಆಂಡ ಎಂದಾಗಿಸಿದ ಸಂಭವ ಕಡಿಮೆ. ಆದಯ್ಯ ಆಂಡಯ್ಯದಲ್ಲಿ ರೂಪಾಂತರ ಹೊಂದಿರಬೇಕೆಂಬ ಊಹೆಯ ವಿಷಯವಾದರೂ ಇಷ್ಟೇ.

ಕಾವ್ಯದ ಹೆಸರು —ಕಾವ್ಯಾಂತ ಗದ್ಯದಲ್ಲಿರುವ 'ಕಾವನ ಗೆಲ್ಲಂ' ಹೆಸರಿನಿಂದ ಅದೇ ಕವಿದತ್ತ ಹೆಸರೆಂದು ಬಗೆಯುವುದು ಸಹಜ ಮತ್ತು ಕ್ರಮಪ್ರಾಪ್ತ. ಆದರೂ ಅದರಲ್ಲಿಯ ಕೆಲವು ಪದ್ಯಗಳನ್ನು ತನ್ನ ಕಾವ್ಯಸಾರದಲ್ಲಿ ಉದಾಹರಿಸಿದ ಅಭಿನವವಾದಿ ವಿದ್ಯಾನಂದ (ಕ್ರಿ. ೧೫೩೩) ಅವು ಕಬ್ಬಿಗರ ಕಾವದಲ್ಲಿಯವು ಎಂದಿರುವದು ಮತ್ತು ಎಂದಿನಿಂದಲೂ ಅದು ಇದೇ ಹೆಸರಿನಿಂದ ಪ್ರಸಿದ್ಧವಿರವದು ಸಂಶೋಧಕರ ಕುತೂಹಲವನ್ನು ಕೆರಳಿಸಿದೆ. ಇವು ಈ ಸಂದರ್ಭದಲ್ಲಿರುವ ಊಹೆಗಳು—

(೧) '**ಕಬ್ಬಿಗರ ಕಾವ**' ಎಂಬುದು ಆಂಡಯ್ಯ ತನ್ನ ಕೃತಿರಚನೆಯದೆ ಉದ್ದೇಶವನ್ನು ನಿರೂಪಿಸಿದ ಪದ್ಯ (೧೬) ದಲ್ಲಿಯ 'ಕಬ್ಬಿಗರ ಕಾವನೊಲವಿಂದೊರೆದೆಂ(ದಂ)' ಪದಸಮೂಹದಲ್ಲಿಯದು. ಕಬ್ಬಿಗರಕಾವ ಎಂದರೆ ಕವಿಗಳ ರಕ್ಷಕ ಪೋಷಕ. ಅಚ್ಚಗನ್ನಡದಲ್ಲಿ ಕಾವ್ಯವನ್ನು ಬರೆದು ಕನ್ನಡ ಕವಿಗಳ ಮಾನವನ್ನು ಕಾಪಾಡಿದ ಆಂಡಯ್ಯನಿಗೆ ಕವಿಗಳ ರಕ್ಷಕ ಎಂಬರ್ಥದಲ್ಲಿ ಅದು ಬಿರುದಾಗಿ ಬಂದಿರಬೇಕು, ಮತ್ತು ಮುಂದೆ ಅದರಿಂದಲೇ ಆತ ಪ್ರಸಿದ್ಧನಾಗಿರಬೇಕು. ಸಂಸ್ಕೃತ ಕವಿ ಮಾಘನ ಶಿಶುಪಾಲವಧವು

1. ದೇ. ಜ. ಸಂಪಾದಿತ ಕ. ಕಾ. (ಟಿ. ಪ್ರತಿ)

ಮಾಘ ಎಂದು ರೂಢಿ ಪಡೆದಂತೆ. ಆಂಡಯ್ಯನ ಕಾವನಗೆಲ್ಲವು ಕಬ್ಬಿಗರ ಕಾವ ಎಂದು ಪ್ರಸಿದ್ಧಿ ಪಡೆದಿರಬೇಕು. ಕವಿಯ ಉಪರೋಕ್ತ 'ಕಬ್ಬಿಗರ ಕಾವನೊಲವಿಂದೊರೆದೆಂ' ಪದಗಳನ್ನು 'ಕಬ್ಬಿಗರ ಕಾವನ ಒಲವಿಂದ ಒರೆದೆಂ' ಎಂದು ಸಹ ವಿಂಗಡಿಸಬಹುದು. ಆಗ 'ಕಬ್ಬಿಗರ ಕಾವನೆಂಬುವನ ಒಲವಿಂದ ಈ ಕಾವ್ಯವನ್ನು ರಚಿಸಿದೆನು' ಎಂಬರ್ಥ ಹೊರಡುವುದು. ಹೀಗಿದ್ದರೂ ಗ್ರಂಥಾಂತ್ಯದಲ್ಲಿರುವ 'ಕಾವನಗೆಲ್ಲ' ಹೆಸರೇ ಕಾವ್ಯದ ನಿಜವಾದ ಮತ್ತು ಕವಿದತ್ತ ಹೆಸರಾಗ ಬಲ್ಲದು.

(೨) ಕಾವ್ಯಕ್ಕೆ ಎರಡು ಹೆಸರುಗಳು- (೧) ಕಬ್ಬಿಗರ ಕಾವ, (೨) ಕಾವನ ಗೆಲ್ಲ. ಮೊದಲನೆಯದರಲ್ಲಿ ಶ್ಲೇಷೆಯಿಂದ ಕವಿಯ ಬಿರುದು ಧ್ವನಿತವಾಗಿದೆ. ಅದು ಸ್ವದತ್ತ ಬಿರುದು. ಕಬ್ಬಿಗರಕಾವ ಹೆಸರನ್ನು ಸುಲಭದಿಂದ ತಳ್ಳಿ ಹಾಕುವಂತಿಲ್ಲ. ಅಭಿನವವಾದಿ ವಿದ್ಯಾನಂದ ತನ್ನ ಕಾವ್ಯಸಾರದಲ್ಲಿ ಆಂಡಯ್ಯನ ಈ ಕಾವ್ಯದಲ್ಲಿಯ ಪದ್ಯಗಳನ್ನು ನಾಲ್ಕಾರು ಸಲ ಬೇರೆ ಬೇರೆ ಸಂಧರ್ಭಗಳಲ್ಲಿ ಉದಾಹರಿಸಿದ್ದು ಎಲ್ಲೆಡೆ ಅವು ಕಬ್ಬಿಗರ ಕಾವದಲ್ಲಿಯವು ಎಂದಿರುವನು.

(೩) ಕಾವನ ಗೆಲ್ಲವೇ ಕಾವ್ಯದ ಹೆಸರಾಗ ಬಲ್ಲದು. ಅದು ಕವಿಯು ಸಂತೋಷದಿಂದ ಉದ್ದೇಶ ಪೂರ್ವಕವಾಗಿ ಕೊಟ್ಟ ಹೆಸರು. ನೇರವೂ ಸುಸ್ಪಷ್ಟವೂ ರಮ್ಯವೂ ಆಗಿದೆ. ಈ ವಿಷಯದಲ್ಲಿ ಹೆಚ್ಚಿನ ಉಹಾಪೋಹ ಅನಗತ್ಯ. ಕಾವ್ಯದ ವಸ್ತುಹಾನುಂಗಲ್ಲಿನ ಕದಂಬ ಕಾಮದೇವನ ಪ್ರಚ್ಛನ ಪ್ರಶಸ್ತಿ ಎಂಬುದು ವಿದ್ವನ್ಮಾನ್ಯವಾಗಿದೆ. ಆ ಕಾಮದೇವನೇ 'ಕಬ್ಬಿಗರ ಕಾವನ್' ಕವಿಗಳ ಪೋಷಕ. ಅವನ ಒಲವಿಂದ ತಾನು ಕಾವ್ಯವನ್ನು ಬರೆದುದಾಗಿ ಕವಿಯೇ ಹೇಳಿಕೊಂಡಿರುವನು. ಬಹುಶಃ ಲಿಪಿಕಾರರ ಅಜ್ಞಾನದಿಂದ ಕಾಮದೇವನ ಪರವಾಗಿ ಬಂದಿರುವ ಕಬ್ಬಿಗರಕಾವ ಹೆಸರೇ ಕಾವ್ಯದ ಹೆಸರಾಗಿ ನುಸುಳಿಕೊಂಡಿದೆ. ಆದರೂ ತಲೆಮಾರುಗಳಿಂದ ನಡೆದು ಬಂದು ನೆಲೆ ನಿಂತಿರುವ ಆ ಹೆಸರನ್ನೇ ಉಳಿಸಿಕೊಳ್ಳುವುದು ಲೇಸು.

ಆಂಡಯ್ಯನ ಕಾವ್ಯವು ಕಾಮನ ಕಥೆ. ಕದಂಬ, ಕಾಮದೇವನಅಪ್ರತ್ಯಕ್ಷ ಗುಣ ಕೀರ್ತನ. ಆತ ಕಬ್ಬಿಗರಕಾವನೂ (ಕವಿಗಳ ರಕ್ಷಕ ಪೋಷಕ) ಇರಲಿಕ್ಕೆ ಸಾಕು. ತನ್ನ ಕಾವ್ಯವು ರಾರಯನ (ಪೋಷಕ ಅರಸನ) 'ಗೋಸಣೆ' ಮೀರುವನಕ ಬಾಳುವುದು. 'ನಿಚ್ಚಮಂ' ಎಂಬ ಆಂಡಯ್ಯನ ಹಾರೈಕೆಯಿಂದ ಇದು ಸ್ಪಷ್ಟವಾಗಿದೆ. ಅಭಿನ್ನವಿದ್ದರೂ ಪೌರಾಣಿಕ ಕಾಮನಿಗೂ ಆಂಡಯ್ಯನ ಕಾಮನಿಗೂ ವ್ಯತ್ಯಾಸವಿದೆ. ಪೌರಾಣಿಕ ಕಾಮನ ಅಂತದುರಂತ. ಆಂಡಯ್ಯನ ಕಾಮ ಕಬ್ಬಿಗರ ಕಾಮ. ಶಿವ-ಕಾಮರ ಘರ್ಷಣೆಯಲ್ಲಿ ಗೆಲವುಅವನದು. ಶೃಂಗಾರದ ಸಾಕಾರ ಮೂರ್ತಿ. ಅವನ ಬಗೆಬಗೆಯ ಲೀಲಾ ವಿಲಾಸಗಳ ಬಣ್ಣನೆಯಲ್ಲಿಯೆ ಕವಿಗಳಿಗೆ ಪ್ರೀತಿ, ಆಸಕ್ತಿ. ಶಿವನನ್ನು ಕೆಣಕಿ ಸುಟ್ಟು ಭಸ್ಮನಾದ ಪೌರಾಣಿಕ ಕಾಮ ಅವರಿಗೆ ಬೇಡ. ಭವನಾಶಕನಾದ ಶಿವನಿಗಿಂತ ಅವನನ್ನು ಅರೆವೆಣ್ಣಾಗಿಸಿದ ಅಂದರೆ ಪಾರ್ವತಿಯೊಡನೆ ಮದುವೆಯಾಗಿಸಿದ ಭವಸಾರನಾದ ಕಾಮನೇ ನಮಗೆ ಇಷ್ಟ ಎಂದಿರುವನು ನೇಮಿಚಂದ್ರ, ಲೀಲಾವತಿಯಲ್ಲಿ. ಆಂಡಯ್ಯನ

ಕಾಮ ಇಂಥವ. ಕಬ್ಬಿಗರ ಕಾವ ಹೆಸರಿನಲ್ಲಿ ಕವಿಗಳ ಪೋಷಕ,ಕವಿಜನಪ್ರಿಯ ಎರಡೂ ಅರ್ಥಗಳು ಹೊರಡುವಂತಿವೆ. ಜೊತೆಗೆ ಶ್ಲೇಷೆಯಿಂದ ಆಂಡಯ್ಯನ ಸ್ವದತ್ತ/ಪರದತ್ತ ಬಿರುದು ಇಲ್ಲವೆ ಅಂಕಿತಕ್ಕೆ ಕೂಡ ಸರಿಹೋಗುವಂತಿದೆ. ಕಾವನ ಗೆಲ್ಲ ಹೆಸರಿನಲ್ಲಿ ಈ ಬಗೆಯ ಅರ್ಥ ಸೌಂದರ್ಯವಿಲ್ಲ. ಕವಿದತ್ತ ಹೆಸರಿದ್ದರೂ ಕಾವ್ಯ ವಸ್ತುವಿಗೆ ಅದು ಸರಿ ಹೋಗುತ್ತಿದ್ದರೂ ಬಹುಶಃ ಈ ಕಾರಣದಿಂದ ಅದು ಹಿಂದೆ ಬಿದ್ದಂತಿದೆ.

ಕಾವನಗೆಲ್ಲ ಬದಲು ಕಬ್ಬಿಗರ ಕಾವ ಹೆಸರು ಯಾರಿಂದ ಮತ್ತು ಎಂದು ಸೇರಿಸಲ್ಪಟ್ಟಿತು ಎಂಬುದನ್ನು ಊಹಿಸುವದು ಕಷ್ಟ. ತನ್ನದು 'ತಪ್ಪೊಂದುಂ ತಲೆದೋರದಂತೆ ಪಲರೆಲ್ಲರ್ ತಿದ್ದಿದ ಕಬ್ಬ' ಎಂದಿರುವನು ಆಂಡಯ್ಯ. ಎಲ್ಲ ಮಾತೃಕೆಗಳಲ್ಲಿ ಕಾವನಗೆಲ್ಲ ಹೆಸರು ಕಾವ್ಯಾಂತ ಗದ್ಯದಲ್ಲಿ ಮಾತ್ರ ಬಂದಿದೆ. ತನ್ನ ಕಬ್ಬವನ್ನು ತಿದ್ದಿದ ಪಲರೆಲ್ಲರ ಸೂಚನೆಯನ್ನು ಮನ್ನಿಸಿ ಅಥವಾ ತಾನಾಗಿಯೆ ಆಂಡಯ್ಯ ಕಬ್ಬಿಗರ ಕಾವ ಎಂಬುದು ಹೆಚ್ಚು ಸುಂದರ ಮತ್ತು ಅರ್ಥಗರ್ಭಿತ ಎಂದು ಬಗೆದು ಅದನ್ನೇ ಕಾವ್ಯದ ಹೆಸರನ್ನಾಗಿಸಿ ಜೊತೆಗೆ ಕಥಾವಸ್ತುವಿಗೆ ಸರಿಹೋಗುವ ಕಾವ್ಯಾಂತ ಗದ್ಯದಲ್ಲಿಯ ಕಾವನಗೆಲ್ಲ ಹೆಸರನ್ನು ಕೂಡ ಉಳಿಸಿಕೊಂಡಿರುವದು ಅಸಂಭವವಿಲ್ಲ.

ಮಾಘನ ಶಿಶುಪಾಲ ವಧವು ಮಾಘವೆಂದು ರೂಢಿಪಡೆದಿರುವದು ರೂಢಿಯಲ್ಲಿ ಮಾತ್ರ. ಮಾಘನೊಬ್ಬನೇ ಏಕೆ ಇನ್ನೂ ಹಲವು ಇಂಥ ಉದಾಹರಣೆಗಳನ್ನು ಕೊಡಬಹುದು. ಚಾಮುಂಡರಾಯನ ತ್ರಿಷಷ್ಟಿ ಲಕ್ಷಣ ಮಹಾ ಪುರಾಣವು ಚಾಮುಂಡರಾಯ ಪುರಾಣವೆಂದು ಪ್ರಸಿದ್ಧವಿದೆ. ಅವರವರ ಗ್ರಂಥಗಳಲ್ಲಿ ಅವುಗಳ ಹೆಸರುಗಳೊಂದಿಗೆ ಕರ್ತೃಗಳೆಂದೇ ಎಲ್ಲರೂ ಉಕ್ತರಾಗಿರುವರು. ಕಬ್ಬಿಗರ ಕಾವದ ವಿಷಯ ಹೀಗಿಲ್ಲ. ಕಾವ್ಯನಾಮವೆಂದು ಕಬ್ಬಿಗರಕಾವ ಹೆಸರಿನಿಂದ ಕವಿಜನಪ್ರಿಯ/ಪೋಷಕಕಾಮ ಪರ್ಯಾಯದಿಂದ ಕದಂಬ ಕಾಮ ಎಂದು ಬೋಧವಾಗುವದು. ಶ್ಲೇಷೆಯಿಂದ ಬಿರುದು ಅಥವಾ ಅಂಕಿತವೆಂದು ಆಂಡಯ್ಯನಿಗೂ ಅನ್ವಯಿಸುವುದರಿಂದ ಅದರ ಅರ್ಥ ಸೌಂದರ್ಯ ಮತ್ತಷ್ಟು ಹೆಚ್ಚುವದು.

ಕಾವ್ಯಕ್ಕೆ ಒಂದಕ್ಕಿಂತ ಹೆಚ್ಚು ಹೆಸರುಗಳಿರುವದು ಅಂಥದೇನು ಮಹಾವಿಷಯವಲ್ಲ. ಆಂಡಯ್ಯನ ಕಾವ್ಯಕ್ಕೇನೆ ಕಬ್ಬಿಗರಕಾವ ಮತ್ತು ಅವನೇ ಹೇಳಿರುವ ಮೇರೆಗೆ ಸೊಬಗಿನ ಸುಗ್ಗಿ, ಮದನವಿಜಯ, ಕಾವನಗೆಲ್ಲ ಹೆಸರುಗಳೊಂದಿಗೆ ಅದಕ್ಕೆ ಸಂಸ್ಕೃತದ ಸಹೋದರಿ ಎಂಬ ಇನ್ನೊಂದು ಹೆಸರಿರುವದು ಕವಿಚರಿತೆಯಲ್ಲಿ ಉಕ್ತವಾಗಿದೆ. ರನ್ನನ ಗದಾಯುದ್ಧಕ್ಕೆ ಕವಿದತ್ತ ಹೆಸರು ಸಾಹಸ ಭೀಮವಿಜಯ ಎಂದಿದ್ದರೂ ಅದು ಗದಾಯುದ್ಧ ಎಂದೇ ಪ್ರಸಿದ್ಧವಿದೆ. ಅಭಿನವವಾದಿ ವಿದ್ಯಾನಂದ ಅದನ್ನು ಈ ಹೆಸರಿನಿಂದಲೇ ಉಲ್ಲೇಖಿಸಿರುವನು. ಕಬ್ಬಿಗರ ಕಾವ ಹೆಸರು 'ಕಬ್ಬಿಗರ ಕಾವನೊಲವಿಂದೊರೆದೆಂ' ಪದಸಮೂಹದಲ್ಲಿದ್ದರೆ ಗದಾಯುದ್ಧ ಹೆಸರು 'ಅನಿಲಜನೊಳ್ಪೋಲಿಸಿ ಪೇೞ್ದ ನೀ ಗದಾಯುದ್ಧಮಂ' (೧/೩೧), 'ಕೃತಿ ನೆಗೞ್ದ ಗದಾಯುದ್ಧಂ' (೧/೩೨) ಪದ ಸಮೂಹಗಳಲ್ಲಿದೆ. ಕಬ್ಬಿಗರ ಕಾವದ ವಿಷಯವಾದರೂ ಇಷ್ಟೇ.

ಕಬ್ಬಿಗರ ಕಾವ ಕಥಾಸಾರ

ಕನ್ನಡ ನಾಡಿನಲ್ಲಿ ಪೂವಿನ ಪೊಳಲೆಂಬ ಪಟ್ಟಣವಿದ್ದಿತು. ನನೆಯೆಂಬ (ಕಾಮ) ಅದರ ಅರಸು. ಬೆಳಗಿನ ಜಾವದಲ್ಲಿ ಅವನೊಮ್ಮೆ ಕನಸಿನಲ್ಲಿ ಒಬ್ಬ ಅಪ್ರತಿಮ ಸುಂದರಿಯನ್ನು ಕಂಡ. ಕನಸಿನ ವೃತ್ತಾಂತವನ್ನು ಕೇಳಿ ಅವನ ಗೆಳೆಯ ನಗೆಗಾರ,– ಅದೊಂದು ಶುಭ ಸೂಚನೆ. ಇಷ್ಟರಲ್ಲಿಯೆ ಚೆನ್ನೆಯೊಬ್ಬಳು ನಿನ್ನ ವಶವಾಗುವಳು ಎಂದ. ಇಬ್ಬರೂ ಅರಮನೆಯ ಕೆಲದಲ್ಲಿದ್ದ ಉಪವನದ ಸೊಬಗನ್ನು ನೋಡ ಹೊರಟರು. ಅಲ್ಲಿ ಅವರಿಗೆ ಓರ್ವ ಅಚ್ಚರಸಿ (ಅಪ್ಸರೆ) ಕಾಣಿಸಿಕೊಂಡಳು. ಅದೇಕೊ ಅಂದು ನನೆಯಂಬನಿಗೆ ಅಂಥ ಉಪವನವನ್ನು ಹಿಂದೊಮ್ಮೆ ಎಲ್ಲಿಯೋ ನೋಡಿದಂತೆ ಎನಿಸುತ್ತಿತ್ತು. ಹಾಗೇಕೆಂಬುದು ಗೊತ್ತಿದ್ದರೆ ತಿಳಿಸಬೇಕಾಗಿ ಆತ ಅವಳನ್ನು ಕೇಳಿ ಕೊಂಡ. ಅವಳು—

ಕಂಪಿನಪೊಳಲೆಂಬ ಪಟ್ಟಣ. ಕರ್ವುವಿಲ್ಲ (ಕಾಮ) ಎಂಬುವನು ಅದರರಸು. ಇಚ್ಛೆಗಾರ್ತಿ (ರತಿ) ಅವನ ಅರಸಿ. ಒಂದು ದಿನ ಗಿಳಿ ಮೊದಲಾದ ಅವನ ಪರಿವಾರ ಪಕ್ಷಿಗಳಲ್ಲಿ ಒಂದಾದ ಜೊನ್ನವಕ್ಕಿ (ಚಕೋರ) ಬಂದು ಚಂದ್ರಕಿರಣಗಳನ್ನು ಕಾಣಿಕೆ ಕೊಟ್ಟು[1] ಮಂಜುವೆಟ್ಟದಲ್ಲಿ (ಹಿಮಾಲಯ) ಶಿವ ಬಂದು ನೆಲೆಸಿರುವನು; ನಿನ್ನ ಸಾಮ್ರಾಜ್ಯಕ್ಕೆ (ಶೃಂಗಾರ ವಿಲಾಸಗಳಿಗೆ) ಎಡೆ ಇಲ್ಲದಂತೆ ಮಾಡಿರುವನು; ಇದೀಗ ನಿನ್ನ ಆಪ್ತಮಿತ್ರ ಚಂದ್ರನನ್ನು ಸೆರೆ ಹಿಡಿದಿರುವನು, ಎಂದು ಗೋಳಿಟ್ಟಿತು. ಅದನ್ನು ಕೇಳಿ ಉರಿದೆದ್ದ ಕರ್ವುವಿಲ್ಲ ಶಿವನನ್ನು ದಂಡಿಸಲು ವಸಂತ, ಮಂದಮಾರುತ, ಗಿಳಿ, ಕೋಗಿಲೆ, ದುಂಬಿ ಮೊದಲಾದವುಗಳಿಂದ ಕೂಡಿದ ಸೈನ್ಯದೊಂದಿಗೆ ಮಂಜುವೆಟ್ಟಕ್ಕೆ ಸಾಗಿದನು. ವಸಂತ ಸೊಬಗಿನ ಸುಗ್ಗಿಯನ್ನು ಬೀರಿದ. ಮಂದಮಾರುತನ ಸುಳಿದಾಟ ಪ್ರಾರಂಭವಾಯಿತು. ಕಾಮ ಅಂಕುರಿಸಿತು. ಲೋಕದ ಚಿತ್ತ ಹೊಯ್ದಾಡ ತೊಡಗಿತು. ತಪೋನಿರತ ಮುನಿಗಳು ಹೇಗೋ ಸೈರಿಸಿಕೊಂಡು ಪಲಾಯನ ಬೆಳಸಿ ದರು. ಧ್ಯಾನಾಸಕ್ತ ಸವಣನೊಬ್ಬ ತನ್ನ ಪ್ರಭಾವದಿಂದ ನಿರ್ಲಿಪ್ತನಾಗಿ ನಿಂತಿರು ವದನ್ನು ಕಂಡು ಕಾಮ ಅವನ ಮೇಲೇರಿ ಹೋದ. ಅರಿಷಡ್ವರ್ಗಗಳನ್ನು ಗೆದ್ದ ಆ ವಿರಕ್ತ ಜೀವಿಯ ಮೇಲೆ ಕೈಮಾಡುವದಕ್ಕಿಂತ ಶಿವನೆದುರು ನಿನ್ನ ಪೌರುಷವನ್ನು ತೋರಿಸೆಂದು ವಸಂತ ಬುದ್ಧಿ ಹೇಳಿದ. ಶಿವನ ಮೇಲೆ ದಂಡೆತ್ತಿ ಸಾಗಿದಾಗ ಕಾರಣ ವಿಲ್ಲದೆ ಕೆಣಕಿ ಸವಣನ ದ್ರೋಹವನ್ನು ಕಟ್ಟಿಕೊಂಡು ಇಲ್ಲದ ವಿಪತ್ತಿಗೆ ಈಡಾಗುವದು ಬೇಡ ಎಂದು ಕಾಮ ಅವನನ್ನು ವಂದಿಸಿ ಮುಂದೆ ಸಾಗಿದ.

ಇತ್ತ ಶಿವ ವೀರಭದ್ರನನ್ನು ಕರೆದು ಸೈನ್ಯ ಸಮೇತನಾಗಿ ಕಾಮನನ್ನು ಎದುರಿ ಸಲು ಆಜ್ಞಾಪಿಸಿದ. ಇಕ್ಕಡೆಯಲ್ಲಿ ಬಿಕ್ಕಟ್ಟಿನ ಕಾಳೆಗವಾಯಿತು. ಶಿವನ ಸೈನ್ಯ ತತ್ತರಿಸಿತು. ಕೊನೆಗೆ ಕಾಮ ಶಿವ ಒಬ್ಬರನ್ನೊಬ್ಬರು ಎದುರಿಸಿದರು. ಕಾಮನ ಬಾಣ

1. ಚಕೋರಕ್ಕೆ ಚಂದ್ರಿಕಾ ಪಾನವೇ ಆಹಾರ ಎಂಬುದೊಂದು ಕವಿಸಮಯ.

ಗಳಿಂದ ಶಿವ ಅರೆವೆಣ್ಣಾದ. ಕ್ರೋಧಾವಿಷ್ಟನಾದ ಶಿವ: ಹಿರಿಯರೆಂಬುದನ್ನು ಲೆಕ್ಕಿಸದೆ ನನ್ನೊಡನೆ ಸೊಕ್ಕಿನಿಂದ ಕಾದಿದ ನಿನಗೆ ನೀನಾರೆಂಬ ಅರಿವಿಲ್ಲದಾಗಲಿ, ನಿನ್ನ ಪ್ರಿಯೆ ಯಿಂದಗಲಿ ಎಲ್ಲಿಯಾದರೂ ತಲೆಮರೆಸಿಕೊಂಡಿರು, ಎಂದು ಕರ್ವುವಿಲ್ಲನಿಗೆ (ಕಾಮ ನಿಗೆ) ಶಾಪವಿತ್ತ. ಆ ಶಾಪಗ್ರಸ್ತ ಕರ್ವುವಿಲ್ಲನೇ ನೀನು. ಈ ಪರಿಸರವೆಲ್ಲ ನಿನ್ನ ದಿದ್ದರೂ ಶಾಪದ ಮೂಲಕ ನಿನಗೆ ಅದರ ಯಥಾರ್ಥ ಅರಿವಿಲ್ಲದಾಗಿದೆ. ಈಗ ನಿನ್ನ ಶಾಪ ಹರಿಯಿತು ಎಂದು ಹೇಳಿ ಅಚ್ಚರಸಿ ಅಲ್ಲಿಂದ ಹಾರಿಹೋದಳು.

ಇತ್ತ ಕಂಪಿನ ಪೊಳಲಲ್ಲಿ ಪ್ರಿಯನಿಂದಗಲಿದ ಇಚ್ಚೆಗಾರ್ತಿ ಶೋಕಿಸುತ್ತಿದ್ದಳು. ಅಚ್ಚರಸಿ ಹೇಳಿದ ವೃತ್ತಾಂತವನ್ನು ಕೇಳಿದ ಗಿಳಿಯೊಂದು ಕಂಪಿನ ಪೊಳಲಲ್ಲಿದ್ದ ವಸಂತನಿಗೆ ಅದನ್ನು ತಿಳಿಸಿತು. ಅನಂತರ ಎಲ್ಲರೂ ಸೇರಿ ಕರ್ವುವಿಲ್ಲ ಅರ್ಥಾತ್ ನನೆಯೆಂಬ ಅರ್ಥಾತ್ ಕಾಮನನ್ನು ಎದುರುಗೊಂಡು ಕಂಪಿನ ಪೊಳಲಿಗೆ ಮರಳಿ ಸುಖದಿಂದಿದ್ದರು.

ಕಾವ್ಯ ಪುರಾಣಗಳಲ್ಲಿಯ ಕಾಮ

ಪುರಾಣಗಳಲ್ಲಿ ಕಾಲಿದಾಸನ ಕುಮಾರಸಂಭವ, ಹರಿಹರ, ಕನಕದಾಸರ ಗಿರಿಜಾ ಕಲ್ಯಾಣ, ಮೋಹನತರಂಗಿಣಿ ಕಾವ್ಯಗಳಲ್ಲಿ ಕಾಮನ ಕಥೆ ಬಂದಿದೆ. ಅಲ್ಲಲ್ಲಿ ವ್ಯತ್ಯಾಸಗಳು ಕಂಡುಬಂದರೂ ಕಥೆ ಒಂದೇ ಆಗಿದೆ. ಬ್ರಹ್ಮನ ವರದಿಂದ ಉನ್ಮತ್ತ ನಾದ ತಾರಕಾಸುರ ಲೋಕಕಂಟಕನಾಗಿದ್ದ. ಅವನ ಪೀಡೆಯನ್ನು ಸಹಿಸಲಾಗದೆ ಇಂದ್ರಾದಿ ದೇವತೆಗಳು ಪಿತಾಮಹನಲ್ಲಿ ತಮ್ಮ ದುಸ್ಥಿತಿಯನ್ನು ತೋಡಿಕೊಂಡರು. ಶಿವ ಪಾರ್ವತಿಯರಿಂದ ಜನಿಸಿದ ಕುಮಾರನಿಂದ ಮಾತ್ರ ತಾರಕನ ವಧೆ ಸಾಧ್ಯ. ಆದ್ದರಿಂದ ಮೊದಲು ಅವರೀರ್ವರ ಮದುವೆಯಾಗಬೇಕು. ಅದಕ್ಕಾಗಿ ಯತ್ನಿಸಿರಿ ಎಂದು ಬ್ರಹ್ಮ ಸಲಹೆ ಇತ್ತ.

ದಾಕ್ಷಾಯಣಿಯ ದುರಂತ ಮರಣದಿಂದ ಶೋಕಗ್ರಸ್ತನಾದ ಶಿವ ಆಗ ಹಿಮಾ ಲಯದಲ್ಲಿ ಉಗ್ರ ತಪಸ್ಸಿನಲ್ಲಿದ್ದ. ಅಂಥ ಶಿವನನ್ನು ಅರೆವೆಣ್ಣಾಗುವಂತೆ ಅಂದರೆ ಪಾರ್ವತಿ ಯತ್ತ ಆಕರ್ಷಿತನಾಗುವಂತೆ ಮಾಡಿ ಅವರೀರ್ವರ ಮದುವೆಗೆ ಇಂಬುಮಾಡಿ ಕೊಡು ವುದು ಇಂದ್ರಾದಿ ದೇವತೆಗಳಿಗೆ ಅನಿವಾರ್ಯವಿದ್ದಿತು. ಕಾಮನನ್ನು ಹುರಿದುಂಬಿಸಿ ಇಂದ್ರ ಅವನನ್ನು ಆ ಕಾರ್ಯಕ್ಕೆ ಅಣಿಗೊಳಿಸಿದ. ಕಾಮ ತನ್ನ ಮಿತ್ರನಾದ ವಸಂತನೊಂ ದಿಗೆ ಶಿವನ ತಪೋವನಕ್ಕೆ ಹೊರಟ. ಅಕಾಲಿಕ ವಸಂತೋದಯದಿಂದ ಕಾಮಸಂಚಾರಕ್ಕೆ ಇಂಬು ದೊರೆತು ಲೋಕವೆಲ್ಲ ಹುಚ್ಚೆದ್ದು ಕುಣಿಯತೊಡಗಿತು. ತಪೋನಿರತ ಮುನಿ ಗಳಿಗೆ, ಶಿವಗಣಗಳಿಗೆ ಕೂಡ ಬಾಧೆ ತಪ್ಪಲಿಲ್ಲ. ಮುನಿಗಳು ಹೇಗೊ ಸೈರಿಸಿಕೊಂಡರು. ನಂದಿ ಸಕಾಲದಲ್ಲಿ ಎಚ್ಚರಿಸಿ ಶಿವಗಣಗಳನ್ನು ಹಿಡಿತದಲ್ಲಿ ಇಟ್ಟುಕೊಂಡ.[1] ನಂದಿಯ

---

1. ಬ್ರಹ್ಮಪುರಾಣದಲ್ಲಿ ನಂದಿಯ ಬದಲು ವೀರಭದ್ರನ ಹೆಸರಿದೆ. ಅದರಲ್ಲಿಯ:—
ಕೋಕಿಲಾ ಸೈನ್ಯಸಂಯುಕ್ತೋ ಹಿಮಾದ್ರಿಂ ಪ್ರಯಯೌಸ್ಮರಃ ।

ಕಣ್ಣುತಪ್ಪಿಸಿ ಶಿವನ ಬಳಿಗೈತಂದು ಕಾಮ ತನ್ನ ಬಾಣಗಳನ್ನು ಪ್ರಯೋಗಿಸಿದ. ಆದರೆ ಅವನ ಆಟ ಸಾಗಲಿಲ್ಲ. ಅಷ್ಟರಲ್ಲಿ ಬಗೆ ಬಗೆಯ ಪುಷ್ಪಗಳಿಂದ ಅಲಂಕೃತಳಾದ ಪಾರ್ವತಿ ಶಿವನ ಸೇವೆಗಾಗಿ ಅಲ್ಲಿಗೆ ಬಂದಳು. ಶಿವನ ಸಮಾಧಿ ಇಳಿಯತೊಡಗಿತ್ತು. ಇದೇ ಸಮಯವೆಂದು ಕಾಮ ಅವರೀರ್ವರ ಮೇಲೆ ತನ್ನ ಬಾಣಗಳನ್ನೆಸೆದ. ಶಿವ-ಪಾರ್ವತಿಯರ ದೃಷ್ಟಿ ಒಂದಾಯಿತು. ಶಿವನ ಚಿತ್ತ ಚಂಚಲವಾಯಿತು. ಹೀಗೇಕಾಯಿತೆಂದು ಸುತ್ತಲೂ ದೃಷ್ಟಿಯನ್ನು ಬೀರಿದಾಗ ಕಾಮ ಶಿವನ ಕಣ್ಣಿಗೆ ಬಿದ್ದ. ಶಿವನ ದೃಷ್ಟಿಗೆ ಬೀಳುವುದೊಂದೇ ತಡ ಕಾಮ ಸುಟ್ಟು ಭಸ್ಮನಾದ. ಜುಗುಪ್ಸೆಗೊಂಡ ಶಿವ ಅಲ್ಲಿಂದ ಹೊರಟು ಹೋದ.

ಜೊತೆಯಲ್ಲಿದ್ದ ಕಾಮನ ಸತಿ ರತಿದೇವಿಯ ಶೋಕಕ್ಕೆ ಮಿತಿ ಉಳಿಯಲಿಲ್ಲ. ತಾನೂ ಕೂಡ ಸುಟ್ಟುಕೊಂಡು ಭಸ್ಮವಾಗಲು ಆಕೆ ಹಟ ಹಿಡಿದಳು. ಆಗ,—ನಿನಗೆ ವೈಧವ್ಯವಿಲ್ಲ; ಸುಟ್ಟು ಭಸ್ಮವಾದದ್ದು ಕಾಮನ ದೇಹ; ಆತ ಅನಂಗನಾಗಿ ಜೀವಿಸಿರುವನು; ಶಿವ-ಪಾರ್ವತಿಯರ ಮದುವೆಯಾದ ಬಳಿಕ ಸಾಂಗನಾಗುವನು; ನೀವಿಬ್ಬರೂ ಒಂದಾಗುವಿರಿ, ಎಂದು ಆಕಾಶವಾಣಿಯಾಯಿತು. ಇದ್ದದರಲ್ಲಿ ರತಿ ಸಮಾಧಾನ ಹೊಂದಿದಳು. ನಡೆದು ಹೋದ ದುರಂತದಿಂದ ವ್ಯಥಿತಳಾದ ಪಾರ್ವತಿ ತಪಸ್ಸಿಗೆ ನಿಂತಳು. ಸತ್ವ ಪರೀಕ್ಷೆಯಲ್ಲಿ ಶಿವನಿಗೆ ಅವಳದು ಪರಿಶುದ್ಧ ಪ್ರೇಮವೆಂದು ಮನವರಿಕೆಯಾಯಿತು. ಅವರೀರ್ವರ ಮದುವೆಯಾಯಿತು. ಕುಮಾರ ಜನನ, ತಾರಕವಧೆ, ತತ್ಪರಿಣಾಮವಾಗಿ ಉಂಟಾದ ಲೋಕ ಸಂತುಷ್ಟಿ ಮುಂದಣ ಘಟನೆಗಳು.

ಆಂಡಯ್ಯ ಮಾಡಿಕೊಂಡ ವ್ಯತ್ಯಾಸಗಳು

ಆಂಡಯ್ಯನ ಕಾಮನಿಗೆ ಪೌರಾಣಿಕ ಕಾಮನ ಕವಚವಿಲ್ಲ. ಕಾಮ ಶಿವನ ಮೇಲೆ ಸಾಗಿಹೋಗಿರುವುದನ್ನಷ್ಟೇ ಆತ ತನಗಾಗಿ ಬಳಸಿಕೊಂಡಿರುವನು. ಪ್ರಾಚೀನ ಭಾರತೀಯ ಸಾಹಿತ್ಯದಲ್ಲಿ ಕಥೆ ಯಾವಾಗಲೂ ಸುಖಾಂತವಾಗಬೇಕು. ಆಂಡಯ್ಯನ ಕೃತಿ ಅವನ ಪೋಷಕನ ಪ್ರಚ್ಛನ್ನ ಪ್ರಶಸ್ತಿ ಇರುವುದರಿಂದ ಸುಖಾಂತವಾಗುವುದರೊಂದಿಗೆ ಶಿವ-ಕಾಮರ ಘರ್ಷಣೆಯಲ್ಲಿ ಗೆಲವು ಕೂಡ ಕಾಮನದೇ ಆಗಬೇಕು. ಅತ ಏವ ಆಂಡಯ್ಯ ತನ್ನ ಕಾಮನಿಗೆ ಪೌರಾಣಿಕ ಕಾಮನಿಗಾದ ದುರಂತವನ್ನು ತಪ್ಪಿಸಿ ಅದರ ಬದಲು

ತತ್ರಾಪಶ್ಯತ್ರಿನೇತ್ರಸ್ಯ ವೀರಭದ್ರಂ ಮಹಾಬಲಮ್ ।
ಯಥಾ ಸಾಕ್ಷಾನ್ಮಹೇಶಾನಾಂ ಗಣಾಂಶ್ಚಾಯುತಶೋಽಶ್ಯಚ ॥

—ಬಣ್ಣನೆಯನ್ನು ಆಧರಿಸಿ ಆಂಡಯ್ಯ ತನ್ನ ಕಾವ್ಯದಲ್ಲಿ ನಂದಿಯ ಬದಲು ವೀರಭದ್ರನನ್ನು ಸೇರಿಸಿ ಕಾಮನು ಶಿವನ ತಪೋಭೂಮಿಗೆ ತೆರಳಿದ ಸನ್ನಿವೇಶಕ್ಕೆ ಜೈತ್ರಯಾತ್ರೆಯ ಸ್ವರೂಪವನ್ನು ಕೊಟ್ಟಂತಿದೆ.

ಶಿವನಿಂದ ಶಾಪವನ್ನು ಕೊಡಿಸಿರುವನು.[1] ಆ ಶಾಪದಿಂದ ಮುಕ್ತನಾಗಿ ಸ್ವಜನರನ್ನು ಕೂಡುವವರೆಗೆ ಕಥೆಯನ್ನು ಮುಂದರಿಸಿರುವನು. ಶಾಪವಾಣಿಯಲ್ಲಿ ಶಿವನ : 'ಮುಂದೆ ನಿಂದು ಪಿರಿಯರೆಂಬುದಂ ಬಗೆಯದುರ್ಕಿಂದೆನ್ನೊಳ್ ಕಾದಿದೆ' ಮಾತಿನಲ್ಲಿ,-ಕಾಮ ತನ್ನನ್ನು ಅರೆವೆಣ್ಣಾಗಿಸಿದುದು ತಾರುಣ್ಯದ ಹುಮ್ಮಸದಲ್ಲಿ ತಿಳಿಯದೆ ಹಿರಿಯರನ್ನು ಕೆಣಕಿದ ಮಕ್ಕಳಾಟ, ದುಡುಕು, ಇಲ್ಲವಾದರೆ ಕ್ಷಣಾರ್ಧದಲ್ಲಿ ಅವನನ್ನು ಸುಟ್ಟು ಹಾಕಬಹುದಿತ್ತು, ಎಂಬ ಅರ್ಥವನ್ನು ತುಂಬಿ ಶಿವನ ಘನತೆ ಸಾಮರ್ಥ್ಯಗಳಿಗೆ ಚ್ಯುತಿಬಾರದಂತೆ ನೋಡಿಕೊಂಡಿರುವನು.

ತನ್ನ ಕಾವ್ಯದಲ್ಲಿ ಶೃಂಗಾರದ ಸೊಬಗಿದೆ, ಕಥಾನಾಯಕನ ವೀರಕ್ಕೆ ಪ್ರಾಧಾನ್ಯ ವಿದೆ, ಎಂಬ ಪ್ರತಿಜ್ಞೆಗನುಸರಿಸಿ ಆಂಡಯ್ಯ ಕನ್ನಡನಾಡಿನ ಸೌಂದರ್ಯ, ವಸಂತೋ ದಯ, ಶೃಂಗಾರ ವಿರಹಾದಿಗಳ ವರ್ಣನೆಗೆ ಸಾಕಷ್ಟು ಇಂಬುಗೊಟ್ಟಿರುವನು. ವೀರಕ್ಕಾಗಿ ಶಿವಕಾಮರ ಯುದ್ಧವನ್ನು ಸೃಷ್ಟಿಸಿರುವನು. ಕಾಮ ಶಿವನಿದ್ದ ತಪೋ ಭೂಮಿಗೆ ತೆರಳಿದ ಸನ್ನಿವೇಶವನ್ನು ಅವನ ಜೈತ್ರಯಾತ್ರೆಯಲ್ಲಿ ಮಾರ್ಪಡಿಸಿರುವನು.[2] ಕಾಮನ ಪ್ರಭಾವದಿಂದ ಉಂಟಾದ ಶಿವನ ಚಿತ್ತಕ್ಷೋಭೆಯನ್ನು ಅವರೀರ್ವರ ಯುದ್ಧದಲ್ಲಿ ರೂಪಾಂತರಿಸಿರುವನು. ಶಿವನನ್ನು ಅರೆತಿಣ್ಣಾಗಿಸಿ ಗೆಲವು ಕಾಮನ ದಾಗಿಸಿರುವನು. ತಪೋನಿರತ ಶಿವನ ಮನಸ್ಸನ್ನು ಪಾರ್ವತಿಯತ್ತ ಆಕರ್ಷಿತ ವಾಗುವಂತೆ ಮಾಡುವದು ಪೌರಾಣಿಕ ಕಾಮನ ಉದ್ದೇಶವಿದ್ದಿತು. ಆಂಡಯ್ಯನ ಕಾಮನಿಗೆ ಆ ಹಿನ್ನೆಲೆ ಇಲ್ಲದ್ದರಿಂದ ಅದರೊಂದಿಗೆ ಆ ಉದ್ದೇಶವೂ ಇಲ್ಲದಂತಾಯಿತು ಬದಲಾಗಿ ಶಿವಚಂದ್ರಮೌಳಿ, ಕಾಮನ ಆಪ್ತಮಿತ್ರರಲ್ಲಿ ಒಬ್ಬ, ಎಂಬುದನ್ನು ಮನ ದಂದು, ಚಂದ್ರನನ್ನು ಶಿವನ ಸೆರೆಯಯಳಾಗಿಸಿ, ಶಿವನ ಮೇಲೆ ಸಾಗಿ ಹೋಗಲು ಅವನ ವಿಮೋಚನೆಯನ್ನು ನಿಮಿತ್ತವಾಗಿಸಿರುವನು.[3] ಕಾಮನ ದುರಂತದಿಂದಾದ ರತಿ ವಿಲಾಪವನ್ನು ಇಚ್ಛೆಗಾರ್ತಿಯ ಶಾಪಗ್ರಸ್ತಕರ್ಪುವಿಲ್ಲನ ವಿರಹ ವ್ಯಥೆಯಲ್ಲಿ ಮಾರ್ಪ

---

1. ಈ ಶಾಪದ ಕಲ್ಪನೆ ಕಾಳಿದಾಸನ ಕುಮಾರಸಂಭವದಲ್ಲಿಯದು. ಮಗಳಾದ ಸರಸ್ವತಿಯ ವಿಷಯದಲ್ಲಿ ಅನುಚಿತ ಅಭಿಲಾಷೆಯನ್ನು ಹುಟ್ಟಿಸಿದ್ದರಿಂದ ಕಾಮ ಸುಟ್ಟು ಭಸ್ಮನಾ ಗೆಂಬ ಬ್ರಹ್ಮನ ಶಾಪಕ್ಕೆ ಗುರಿಯಾಗಿದ್ದ. ಸುಟ್ಟು ಭಸ್ಮನಾಗಿ ಅನಂಗನಾದ ಕಾಮನನ್ನು ಶಾಪ ದಿಂದ ಮುಕ್ತಗೊಳಿಸಬೇಕೆಂಬ ಕಾಮನ ತಂದೆ ಧರ್ಮನ ಪ್ರಾರ್ಥನೆಯನ್ನು ಮನ್ನಿಸಿ ಶಿವ-ಪಾರ್ವ ತಿಯರ ಮದುವೆಯ ನಂತರ ಅವನು ಶಾಪ ಮುಕ್ತನಾಗುವನೆಂದು ಬ್ರಹ್ಮ ಅಭಯವನ್ನಿತ್ತಿದ್ದ.

ಆಂಡಯ್ಯನ ಕೃತಿಯಲ್ಲಿ ಬ್ರಹ್ಮನ ಬದಲು ಶಿವ ಶಾಪವನ್ನು ಕೊಟ್ಟಿರುವನು. ಸುಟ್ಟು ಅನಂಗನಾಗುವ ಬದಲು ಕಾಮ ತನ್ನನ್ನು ತಾನೇ ಮರೆತಿರುವನು. ಅಚ್ಚರಸಿಯ ವೃತ್ತಾಂತದಿಂದ ಶಾಪಮುಕ್ತನಾಗಿರುವನು.

2. ಹರಿಹರ ಕನಕದಾಸರು ಕೂಡ ಈ ಸನ್ನಿವೇಶವನ್ನು ಹೀಗೆಯೆ ಬಣ್ಣಿಸಿರುವರು.

3. ಕುಮಾರಸಂಭವದಲ್ಲಿ ತಾರಕಾಸುರನಿಂದ ಒದಗಿದ ಕಷ್ಟ ಕೋಟಲೆಗಳ ಬಣ್ಣನೆ ಯಲ್ಲಿ ಶಿವನ ಮೇಲಿನ ಭಕ್ತಿಯಿಂದಲೊ ಅಥವಾ ಭಯದಿಂದಲೊ ಅವನ ಮಸ್ತಕವನ್ನು ಅಲಂಕ ರಿಸಿದ ಚಂದ್ರನೊಬ್ಬನಿಗೆ ತಾರಕನ ಬಾಧೆ ತಟ್ಟಲ್ಲ, ಎಂಬ ಮಾತು ಬರುತ್ತದೆ.

ಡಿಸಿರುವನು.

ಅರವೆಣ್ಣು ಪದದ ವಿಚಾರ

ಅರೆವೆಣ್ಣೆಂಬುದು ಸಂಸ್ಕೃತ ಅರ್ಧನಾರಿ ಪದದ ಅಚ್ಚಗನ್ನಡ ರೂಪವಿದ್ದರೂ ಯುದ್ಧದಲ್ಲಿ ಶಿವ ಸೋತು ಅರೆವೆಣ್ಣಾದ ಎಂಬ ಕನ್ನಡ ಮಾತಿನಲ್ಲಿಯ ಸ್ವಾರಸ್ಯ ಅರ್ಧ ನಾರಿಯಾದ ಎನ್ನುವಲ್ಲಿಲ್ಲ. ಆಂಡಯ್ಯನ ಕಾವ್ಯದಲ್ಲಿ ಪಾರ್ವತಿಯ (ಅವಳದೇ ಮೂಲ ರೂಪವಾದ ಶಕ್ತಿಯ) ಸೊಲ್ಲಿಲ್ಲದಿದ್ದರೂ ಶಿವ ಅರೆವೆಣ್ಣಾದ ಎಂಬ ಅದೊಂದು ಮಾತಿನಲ್ಲಿ ಪರ್ಯಾಯದಿಂದ ಬೇಂದ್ರೆಪ್ರೋಕ್ತ ಶಿವಶಕ್ತಿ ಕಾಮ-ರತಿ ತತ್ವಗಳ ಪಡಿನೆಳಲನ್ನು ಕಾಣಬಹುದಾಗಿದೆ.

ಅರ್ಧನಾರಿ ಪದಕ್ಕೂ ಶಿವನಿಗೂ ನಂಟು ಬಂದಿರುವದು ಶಿವಪುರಾಣ, ಕಾಲಿದಾಸನ ಕುಮಾರ ಸಂಭವ ಮತ್ತು ಇತರ ಕೆಲವು ಶಿವಪಾರಮ್ಯ ಗ್ರಂಥಗಳಲ್ಲಿ. ವಾಯು ಪುರಾಣದಲ್ಲಿ ಅರ್ಧ ಪುರುಷ ದೇಹ ಅರ್ಧ ಸ್ತ್ರೀದೇಹ ಎಂಬರ್ಥದಲ್ಲಿ ಅರ್ಧನಾರಿ ಹೆಸರು ಬಂದಿದ್ದರೂ ಅದು ಸ್ವಾಯಂಭುವಿಗೆ ಸಂಬಂಧಿಸಿದೆ. ಹುಟ್ಟಿದಾಗ ಸ್ವಾಯಂಭುವಿನ ದೇಹ ಹೀಗಿದ್ದಿತು. ಬ್ರಹ್ಮ ಅದನ್ನು ಪುರುಷ ದೇಹ, ಸ್ತ್ರೀದೇಹ ಎಂದು ಎರಡು ದೇಹಗಳಲ್ಲಿ ವಿಂಗಡಿಸಿದನು. ಕಾಳಿದಾಸನ ಕುಮಾರಸಂಭವಕ್ಕೆ ಶಿವಪುರಾಣ ಆಕರವೊ ಅಥವಾ ಗಿರಿಜಾ ಕಲ್ಯಾಣ ಕುಮಾರಸಂಭವ ಕಥೆಗಳಿಗೆ ಸಂಬಂಧಿಸಿದ ಅದರಲ್ಲಿಯ ಶ್ಲೋಕಗಳು ಕಾಲಿದಾಸನ ಈ ಕಾವ್ಯವನ್ನು ಆಧರಿಸಿವೆಯೊ ಎಂಬುದು ವಿದ್ವಾಂಸರಲ್ಲಿ ಚರ್ಚೆಯ ವಿಷಯವಾಗಿದೆ. ಕುಮಾರಸಂಭವದಲ್ಲಿ ನಾರದ ಪರ್ವತರಾಜನಲ್ಲಿ ಬಂದಾಗ ಪಾರ್ವತಿಯು ಶಿವನನ್ನು ವರಿಸುವಳು ; ಕೇವಲ ತನ್ನ ಪ್ರೇಮದ ಬಲದಿಂದ ಅವನ ಅರ್ಧ ಶರೀರವನ್ನು ತನ್ನದಾಗಿಸಿಕೊಳ್ಳುವಳು (ಪ್ರೇಮ್ಣಾ ಶರೀರಾರ್ಧ ಹರಾಂ ಹರಸ್ಯ, ೧/೫೦) ಎಂದು ಭವಿಷ್ಯ ನುಡಿಯುವನು. ಶಿವಪುರಾಣದಲ್ಲಿ 'ಕ್ರಮೇಣ ಯಾಮರ್ಧ ಶರೀರ ಸಂಸ್ಥಿತಾಂ ಚಕಾರ' ಎಂದಿದೆ. ಹರಿಹರ ನಾರದನ ಈ ಮಾತನ್ನು 'ಶಂಕರನರ್ಧಮಂಕವದರ್ಧ ಕೊಳ್ವತ್ಯಂತ ರೂಪಾನ್ವಿತೇ' ಎಂದು ಕನ್ನಡಿಸಿ ಪಾರ್ವತಿ ಜನನ ಸಂದರ್ಭದಲ್ಲಿ ಜಾಣೆಯರು ಹಾಡಿದ ಜೋಗುಳ ಪದ್ಯದಲ್ಲಿ ಅಳವಡಿಸಿರುವನು.

ಶಿವಕಾಮರ ಘರ್ಷಣೆಯಲ್ಲಿ ಶಿವ ಅರೆವೆಣ್ಣಾದ ಅಥವಾ ಗೆಲವು ಕಾಮನದು ಎಂಬುದಕ್ಕೆ ವೈದಿಕ ಮತೀಯರ ಒಪ್ಪಿಗೆ ಇಲ್ಲದಿದ್ದರೂ ಅದೊಂದು ಕವಿ ವ್ಯಾಪಾರ ಜನ್ಯ ಜಾಣ್ನುಡಿ ಎಂಬುದಕ್ಕೆ ಅವರ ಆಕ್ಷೇಪಣೆ ಇಲ್ಲ. ರಾಘವಾಂಕನ ಸಿದ್ಧರಾಮಚರಿತ್ರೆಯಲ್ಲಿ ಸಿದ್ಧರಾಮನೆದುರು ಹರಿಹರ–ಬ್ರಹ್ಮಾದಿಗಳನ್ನು ಸೋಲಿಸಿದ ಕಾಮನ ಆಟ ಸಾಗಲಿಲ್ಲೆಂಬ ಕಥೆ ಬರುತ್ತದೆ. ಅದಕ್ಕೆ ಪೀಠಿಕೆಯಂತೆ ಬಂದಿರುವ ಮಾತುಗಳಲ್ಲಿ ನಾರದ ಶಿವನನ್ನು 'ಅರೆವೆಣ್ಣನೀಶ', ಬ್ರಹ್ಮನನ್ನು 'ಪುತ್ರೀವರಂ ಬ್ರಹ್ಮಂ', ವಿಷ್ಣುವನ್ನು 'ಸತಿಯರಿರ್ರೆಂಟು ಸಾಸಿರದ ಹರಳಿಗನು ಹರಿ' ಎಂದಿರುವನು (೪/೬೨). ಷಡಕ್ಷರಿಯ ರಾಜಶೇಖರ ವಿಳಾಸದಲ್ಲಿರುವ ಮೇರು ಪರ್ವತದ ಬಣ್ಣನೆಯಲ್ಲಿ ಇಚ್ಛೆಗಾರ್ತಿ ಪಚ್ಚೆ

ವಿಲ್ಲರು (ರತಿ–ಕಾಮರು) ರಾಜ ಶುಕನಿಂದ ‘ ಮದನ ವಿಜಯಮೆಂಬ ಸರಸ ಕಾವ್ಯಮಂ’ ಕೇಳಿದರೆಂಬ ಮಾತಿದೆ.[1] ರಾಘವಾಂಕ ಷಡಕ್ಷರಿ ಈರ್ವರೂ ಶೈವರು. ನಾರದ ಕಲಹಪ್ರಿಯ, ವಿನೋದಶೀಲ ಎಂಬುದು ಲೋಕ ಪ್ರಸಿದ್ಧವಿದೆ. ರಾಘವಾಂಕನ ಕಾವ್ಯದಲ್ಲಿ ನಾರದ ಶಿವನನ್ನು ಅರೆವೆಣ್ಣನೀಶ, ಬ್ರಹ್ಮನನ್ನು ಮಗಳನ್ನು ಮೋಹಿಸಿದವ, ವಿಷ್ಣುವನ್ನು ೧೬೦೦೦ ಹೆಂಡಂದಿರನ್ನು ಮದುವೆ ಮಾಡಿಕೊಂಡವ ಎಂದಿರುವದು ಅವನ ಸ್ವಭಾವಕ್ಕೆ ಅನುಗುಣವಾಗಿ ಬಂದಿದೆ. ಷಡಕ್ಷರಿಯ ಬಣ್ಣನೆ ರತಿ–ಮದನರ ವಿಲಾಸಕ್ಕೆ ಸಂಬಂಧಿಸಿದೆ.

ಸವಣ ಸನ್ನಿವೇಶ

ಸವಣ ಸನ್ನಿವೇಶ ಕಥೆಗೆ ಅನಗತ್ಯ. ಆದರೂ ಅದನ್ನು ಸೇರಿಸಿ ಜೈನನಿದ್ದ ಆಂಡಯ್ಯ ಶಿವನಗಿಂತ ಸವಣ ಶ್ರೇಷ್ಠ, ಪರ್ಯಾಯದಿಂದ ವೈದಿಕ ಮತಕ್ಕಿಂತ ಜಿನ ಮತ ಶ್ರೇಷ್ಠ ಎಂದು ಸಾರಲು ಹೊರಟಿದ್ದಾನೆಂಬ ಅಭಿಪ್ರಾಯಕ್ಕೆ ಎಡೆ ದೊರೆತಿದೆ ಇದಕ್ಕೆ ಪೂರಕವಾಗಿ ಆ ಕಾಲದಲ್ಲಿ ತಲೆದೋರಿದ ಮತಮತಗಳಲ್ಲಿಯ ಸ್ಪರ್ಧೆ, ಜೈನ ವೈದಿಕ ಮತಗಳಲ್ಲಿ ಶಿವಕಾಮರಿಗಿದ್ದ ಸ್ಥಾನ ಇವೇ ಮೊದಲಾದ ದಿಸೆಗಳಲ್ಲಿ ಸಂಶೋಧಕರ ಊಹಾಶ್ವಗಳು ಓಡಾಡಿವೆ. ಆದರೆ ಇಷ್ಟೊಂದು ದೂರ ಹೋಗುವದು ಅನಗತ್ಯ ಎನ್ನಬಹುದು. ಆಂಡಯ್ಯ ಜೈನನಿದ್ದರೂ ಅವನ ಪ್ರಚ್ಛನ್ನ ಕಥಾನಾಯಕ ಕದಂಬ ಕಾಮದೇವ ವೈದಿಕನಿದ್ದ, ಶೈವನಿದ್ದ. ಗ್ರಂಥಾರಂಭದಲ್ಲಿ ಆಂಡಯ್ಯ ತನ್ನ ಕಥಾನಾಯಕ ಕಾಮ ಪರ್ಯಾಯದಿಂದ ಕದಂಬಕಾಮ ಎಂಬುದನ್ನು ತಿಳಿಸಿ, ಹರಿಹರ-ಬ್ರಹ್ಮರನ್ನು ವಂದಿಸಿ, ಮುಂದಡಿ ಇಟ್ಟಿರುವನು. ಇಂಥವ ಸವಣ ಸನ್ನಿವೇಶದಲ್ಲಿ ಮತೀಯ ಸ್ಪರ್ಧೆಗೆ ಇಳಿದನೆಂಬುದು ಸಹೃದಯತೆಗೆ ಒಪ್ಪುವಂಥ ಮಾತಾಗದು. ಬದಲಾಗಿ ಬೇಂದ್ರೆ ಬಗೆದಿರುವಂತೆ ಅದು ವಿಲಾಸಕ್ಕೆ ಹೊದಿಸಿದ ಮೇಲುದದಂತೆ ಶೋಭಿಸುವಂತಿದೆ; ಕೆಚ್ಚಿನಲ್ಲಿ ಕಥೆ ಯಾವ ಮತಕ್ಕೂ ವಿರೋಧವಾಗಿಲ್ಲ, ಎಂದು ಭಾವಿಸುವದು ಹೆಚ್ಚು ಸೂಕ್ತವಾದೀತು.

ಶೈವರಿದ್ದರೂ ಕದಂಬರಿಗೆ ಜಿನಮತದಲ್ಲಿ ಅಷ್ಟೇ ಭಕ್ತಿಗೌರವಗಳಿದ್ದವು. ಕಾಮದೇವನ ಪೂರ್ವಿಕ ಕೀರ್ತಿವರ್ಮ (ಕ್ರಿ. ೧೦೭೫-೧೧೧೬) ಅನೇಕ ಮಿಶ್ರ ಅಂದರೆ ಬ್ರಾಹ್ಮಣ ಜೈನ ಎರಡೂ ಸಮಾಜಗಳಿರುವ ಸಂಯುಕ್ತ ಅಗ್ರಹಾರಗಳನ್ನು ಸ್ಥಾಪಿಸಿದನೆಂಬ ಖ್ಯಾತಿ ಇದೆ. ಆತನ ಅರಸಿ ಮಾಳಲದೇವಿ ಕಟ್ಟಿಸಿದ ಪಾರ್ಶ್ವ ಜಿನಾಲಯದ ಮೂರ್ತಿ ಪ್ರತಿಷ್ಠಾಪನೆಯು ಪದ್ಮಣಂದಿ ಸಿದ್ಧಾಂತದೇವ ಎಂಬುವನಿಂದ ಜರುಗಿಸಲ್ಪಟ್ಟಿತು; ಆ ಸಮಯದಲ್ಲಿ ಬನವಾಸಿಯ ಮಧುಕೇಶ್ವರ ದೇವಾಲಯದ ಪ್ರಧಾನಾರ್ಚಕ ಮತ್ತು ಕೋಟೀಶ್ವರ ಮೂಲಸ್ಥಾನದ ಬ್ರಾಹ್ಮಣರು ಉಪಸ್ಥಿತರಿದ್ದು

1. ಪರ್ಯಾಯದಿಂದ ಇದು ಆಂಡಯ್ಯನ ಕಾವನಗೆಲ್ಲದ (ಮದನ ವಿಜಯದ) ಬಣ್ಣನೆಯೆಂದು ವಿದ್ವಾಂಸರ ಅಭಿಪ್ರಾಯವಿದೆ.

ಸಕ್ರಿಯ ಸಹಕಾರವನ್ನು ನೀಡಿದರು; ಆ ಜಿನಾಲಯವನ್ನು ಅವರು ಬ್ರಹ್ಮ-ಜಿನಾಲಯ ಎಂದು ಹೆಸರಿಸಿದರು, ಎಂದಿದೆ ಒಂದು ಶಾಸನದಲ್ಲಿ. ಸವಣಸನ್ನಿವೇಶದಲ್ಲಿ ಒಂದೊಮ್ಮೆ ಮತೀಯ ಸ್ಪರ್ಧೆಯ ಸುಳುವಿದ್ದರೂ ಅದು ಇಂಥ ಪರಿಸರದಲ್ಲಿ ವಿಲಾಸಕ್ಕೆ ಹೊದಿಸಿದ ಮೇಲುದವಲ್ಲದೆ ಬೇರೊಂದಾಗದು.

ಅಲ್ಲದೆ ಆಂಡಯ್ಯನ ಈ ಸವಣಸನ್ನಿವೇಶದಲ್ಲಿ ಅಂಥ ಹೊಸ ಮಾತುಗಳಿಲ್ಲ. ಕಾಮನ ಪ್ರಭಾವದಿಂದ ಮುನಿಗಳು ತತ್ತರಿಸಿದರೆಂಬ ಮಾತು, ತೀರ್ಥಂಕರರು ಜಿತ ಕಾಮರೆಂಬ ಮಾತು, ಆಯಾ ಮತಗಳ ಕಥೆ ಪುರಾಣಗಳಲ್ಲಿ ಘಂಟಾಘೋಷವಾಗಿ ಬಂದಿವೆ. ಆಂಡಯ್ಯನ ಸವಣ ತೀರ್ಥಂಕರನಲ್ಲದಿದ್ದರೂ ಅವನೊಬ್ಬ ಮಹಾ ತಪಸ್ವಿ; ಜೇಂದ್ರೆಯವರ ಮಾತಿನಲ್ಲಿ ಶಿವ ವಿಷ್ಣುಗಳಿಗೆ ಸೃಷ್ಟಿ ಅವರ ಲೀಲಾವಿನೋದವಾಗಿದ್ದರೆ ಸವಣನದು ವಿರಕ್ತಜೀವ, ಸೃಷ್ಟಿಯಿಂದ ಹೊರಬೀಳಲು ತವಕಿಸುವ ಜೀವ. ಅಂಥವ ನೊಡನೆ ಸೆಣಸುವದಕ್ಕಿಂತ ಶಿವನೆದುರು ನಿನ್ನ ಪೌರುಷವನ್ನು ತೋರಿಸೆಂಬ ವಸಂತನ ಬುದ್ಧಿವಾದದಲ್ಲಿ ಯಾವದೆ ಮತದ ಹೊಗಳಿಕೆ ತೆಗಳಿಕೆಗಳಿಲ್ಲ. ಯತಿದ್ರೋಹ ಅನಿಷ್ಟ ಎಂಬುದು ಸರ್ವೇಸಾಮಾನ್ಯ. ವೈದಿಕ ಮತದಲ್ಲಿ ಅದು ಸರ್ವತ್ರ ರೂಢವಿದೆ. ಸವಣ ನನ್ನು ವಂದಿಸಿ ಕಾಮ ಮುಂದೆ ಸಾಗಿದನೆಂಬುದು ಅವನು ತನಗೆ ಅಜೇಯನೆಂಬ ಭಾವನೆಯಿಂದ ಎನ್ನುವದಕ್ಕಿಂತ ಯತಿದ್ರೋಹದಿಂದ ಅನಿರೀಕ್ಷಿತ ವಿಘ್ನಗಳು ಒದಗಿ ತನ್ನ ಕಾರ್ಯ ಕೆಟ್ಟೀತೆಂಬ ಭಯದಿಂದ ಎನ್ನುವದು ಹೆಚ್ಚು ಸಮಂಜಸವಾದೀತು.

ಚಾರಿತ್ರಿಕ ಹಿನ್ನೆಲೆ

ಕನ್ನಡ ನಾಡನ್ನಾಳಿದ ಪ್ರಮುಖ ಮತ್ತು ಪ್ರಾಚೀನ ಅರಸು ಮನೆತನಗಳಲ್ಲಿ ಕದಂಬರದೊಂದು. ಪಶ್ಚಿಮ ಕರಾವಳಿಗೆ ಹೊಂದಿದ ಮಲೆನಾಡು ಪ್ರದೇಶದಲ್ಲಿರುವ ಬನವಾಸಿ ಅವರ ನೆಲೆವೀಡು. ಕಾಲವಶದಿಂದ ಸಾರ್ವಭೌಮತ್ವವು ಅಳಿದು ಶಾಖೋಪ ಶಾಖೆಗಳಲ್ಲಿ ಒಡೆದ ಅವರ ವಂಶಜರು ಬೇರೆ ಬೇರೆ ಕಾಲಗಳಲ್ಲಿ ಹಾನಗಲ್ಲು, ಗೋವೆ; ಹಲಸಿ, ಮೊದಲಾದ ಭಾಗಗಳಲ್ಲಿ ಚಾಲುಕ್ಯ, ಕಲಚೂರ್ಯ, ಯಾದವರ ಮಾಂಡಲಿಕ ರಾಗಿದ್ದರು. ಕೆಲವರು ತತ್ಕಾಲೀನ ರಾಜಕೀಯ ಏರುಪೇರುಗಳ ಲಾಭವನ್ನು ಪಡೆದು ಸ್ವತಂತ್ರರಾಗಿದ್ದರು. ಅವರಲ್ಲಿ ಹಾನಗಲ್ಲ ಕದಂಬರು ಪ್ರಸಿದ್ಧರು. ಕ್ರಿ. ೯೬೭ ರಿಂದ ೧೩೪೭ ವರೆಗೆ ಆ ಮನೆತನದ ೧೬ ಅರಸರು ಆಳಿ ಕಣ್ಮರೆಯಾದರು. ಸಾಮಾನ್ಯವಾಗಿ ಅವರ ರಾಜ್ಯವಿಸ್ತಾರವು ಹಾನಗಲ್ಲ ೫೦೦, ಬನವಾಸಿ ೧೨೦೦೦, ಲಕ್ಷ್ಮೇಶ್ವರ ೩೦೦ ಸೀಮೆಗಳನ್ನು ಒಳಗೊಂಡಿತ್ತು. ಹಾನಗಲ್ಲು ಬನವಾಸಿ ಅವರ ನೆಲೆವೀಡುಗಳಿದ್ದರೂ ಬನವಾಸಿಯಲ್ಲಿ ಅವರ ಸಾರ್ವಭೌಮರ ಪ್ರತಿನಿಧಿಗಳು ಇರುತ್ತಿದ್ದರು.

ದ್ವಾರಸಮುದ್ರದ ಹೊಯ್ಸಳರು ಕದಂಬರ ಆನುವಂಶಿಕ ಶತ್ರುಗಳು. ಹೊಯ್ಸಳ, ಚಾಲುಕ್ಯ, ಕಲಚೂರ್ಯ, ಯಾದವರಲ್ಲಿ ನಡೆಯುತ್ತಿದ್ದ ಕಾಳಗಗಳಲ್ಲಿ ಹಾನಗಲ್ಲ ಕದಂಬರು ತಮ್ಮ ಸಾರ್ವಭೌಮರ ಬೆಂಬಲಿಗರಾಗಿ ನಿಲ್ಲುತ್ತಿದ್ದರು. ಅವರಲ್ಲಿ ಕ್ರಿ.ಶ.

೧೧೮೦-೧೨೧೭ ವರೆಗೆ ಆಳಿದ ಕಾಮದೇವ ತುಂಬ ಹೆಸರುವಾಸಿ. ಅವನೇ ಆಂಡಯ್ಯನ ಪ್ರಚ್ಛನ್ನ ಕಥಾನಾಯಕನೆಂಬುದು ಇಂದು ಸಾಮಾನ್ಯವಾಗಿದೆ. ಪ್ರಾರಂಭದಲ್ಲಿ ಮಾಂಡಲಿಕನಿದ್ದರೂ, ಕ್ರಿ.ಶ. ೧೧೯೧ ಸುಮಾರಿನಲ್ಲಿ ಚಕ್ರವರ್ತಿ ಎಂದು ಉಕ್ತನಾಗಿರುವದರಿಂದ ಅಷ್ಟೊತ್ತಿಗೆ ಅವನು ಸ್ವತಂತ್ರನಾಗಿರಬೇಕು. ಕ್ರಿ.ಶ. ೧೧೯೪-೯೬ರ ವೀರಗಲ್ಲುಗಳ ಮೇರೆಗೆ ಉಧರೆಯ ಕಾಳೆಗವಾಗಿ ಹೊಯ್ಸಳ ವೀರಬಲ್ಲಾಳ (ಕ್ರಿ.ಶ. ೧೧೭೩-೧೨೨೦) ಹಾನಗಲ್ಲ ಕೋಟೆಗೆ ಮುತ್ತಿಗೆ ಹಾಕಿರಲು ಸಾಹಣಿ ಸೇನಾಪತಿಯ ನೇತೃತ್ವದಲ್ಲಿ ಕದಂಬ ಸೈನ್ಯವು ಅವನನ್ನು ಸೋಲಿಸಿ ಹಿಂದಟ್ಟಿತು. ೧೨೦೩ರಲ್ಲಿ ಬಲ್ಲಾಳನು ಮತ್ತೊಮ್ಮೆ ಮುತ್ತಿಗೆ ಹಾಕಿದಂತಿದೆ. ಆಗ ಸಹ ಅವನ ಆಟ ನಡೆದಂತಿಲ್ಲ. ಮುಂದೆ ೧೨೧೧ ರ ವರೆಗೆ ಕಾಮದೇವ ಸತತವಾಗಿ ಹೋರಾಡಿ ಹಾನಗಲ್ಲ, ಬನವಾಸಿ ಸೀಮೆಗಳಿಂದ ಹೊಯ್ಸಳರನ್ನು ಹೊಡೆದಟ್ಟಿ ಅವರ ಸೇನೆಯಲ್ಲಿ ಕೂಡ ನುಗ್ಗಿದನು. ವೀರಬಲ್ಲಾಳನಿಗೆ ಸರಿಕ ಇದಿರಾಳಾಗಿ ಮೆರೆದನು.

ಚಾರಿತ್ರಿಕ ಅಂಶಗಳ ಹೊಂದಾಣಿಕೆಗೆ ಮೊದಲು ಆಂಡಯ್ಯನ ಕಾಲವು ನಿಶ್ಚಿತವಾಗಬೇಕು. ತನ್ನ ಕಾವ್ಯದ ವೈಶಿಷ್ಟ್ಯವನ್ನು ಹೇಳಿಕೊಳ್ಳುವಾಗ ' ಜನ್ನಿಗನಜಸಂ' ಎಂದು ಜನ್ನನನ್ನು ಸ್ತುತಿಸಿರುವುದರಿಂದ ಆಂಡಯ್ಯ ಜನ್ನನ ಸಮಕಾಲೀನ (೧೨೩೦), ಇಲ್ಲವೆ ಈಚೆಯವ ಎಂಬುದು ಸ್ಪಷ್ಟವಿದೆ. ಮಲ್ಲಿಕಾರ್ಜುನನ (೧೨೪೫) ಸೂಕ್ತಿಸುಧಾರ್ಣವದ ಒಂದು ಪ್ರತಿಯಲ್ಲಿದ್ದ ಕಬ್ಬಿಗರ ಕಾವದ ಪದ್ಯಗಳನ್ನು ಗಮನಿಸಿ ಕವಿಚರಿತೆಕಾರರು ಆಂಡಯ್ಯನ ಕಾಲದ ಮೇಲಿನ ಗಡುವನ್ನು ೧೨೪೫ ; ಸುಮಾರು ೧೨೩೫ರಲ್ಲಿ ಅವನು ಜೀವಿಸಿರಬಹುದೆಂಬ ಅಭಿಪ್ರಾಯವನ್ನು ಮಂಡಿಸಿದರು. ಅನಂತರ ಪ್ರಸಿದ್ಧವಾದ (೧೯೪೭) ಸೂಕ್ತಿ ಸುಧಾರ್ಣವದ ಸಂಪಾದಕರು—ಶುದ್ಧವಾದ ಅದರ ಹಸ್ತಪ್ರತಿಗಳಲ್ಲಿ ಕಬ್ಬಿಗರ ಕಾವದಲ್ಲಿಯ ಪದ್ಯಗಳಿಲ್ಲ; ಅತಏವ ಅದು ಹಿಂದಿನಿಂದ ಹುಟ್ಟಿರಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.[1] ಆ ಮೂಲಕ ಆಂಡಯ್ಯನ ಕಾಲನಿರ್ಣಯಕ್ಕೆ ನಿಶ್ಚಿತವೆಂದು ಬಗೆದ ಮೇಲಿನ ಗಡುವು ೧೨೪೫ ಎಂಬುದು ಇಲ್ಲದಂತಾಯಿತು. ಅಭಿನವವಾದಿ ವಿದ್ಯಾನಂದನ ಕಾವ್ಯಸಾರದಲ್ಲಿ ಆಂಡಯ್ಯನ ಪದ್ಯಗಳಿವೆ. ಅಭಿನವವಾದಿ ವಿದ್ಯಾನಂದನ ಕಾಲ ೧೫೩೩. ಸದ್ಯ ಅದೇ ಅಂದರೆ ಜನ್ನನ ಕಾಲದಿಂದ ೧೫೩೩ ರ ವರೆಗಿನ ಯಾವುದೊಂದು ಕಾಲಖಂಡದಲ್ಲಿ ಆಂಡಯ್ಯ ಇದ್ದಿರಬಹುದಾಗಿದೆ. ಸುಮಾರು ೩೦೦ ವರ್ಷಗಳ ಈ ಅವಧಿಯಲ್ಲಿ ಇಬ್ಬರು ಕಾಮದೇವರು ಆಗಿ ಹೋಗಿರುವರು. ಒಬ್ಬ ಉಪರೋಕ್ತ ಕಾಮದೇವ. ಇನ್ನೊಬ್ಬ ಅವನ ಮೊಮ್ಮಗ ಕಾಮದೇವ (೧೨೬೦-೧೩೧೫). ಮೊದಲಿನವ ಹೆಚ್ಚಾಗಿ ಕಾಮದೇವ ಎಂದು ಉಕ್ತನಾಗಿದ್ದರೆ ಎರಡನೆಯವ ಕಾವದೇವ ಎಂಬ ಅಚ್ಚಗನ್ನಡ ಹೆಸರಿನಿಂದ ಉಕ್ತ

1 ಇದನ್ನು ಒಪ್ಪದವರು ಸೂಕ್ತಿಸುಧಾರ್ಣವದಲ್ಲಿ ತತ್ಪೂರ್ವದ ಎಲ್ಲ ಕವಿಗಳ ಪದ್ಯಗಳಿಲ್ಲ. ಅವರಲ್ಲಿ ಆಂಡಯ್ಯನೂ ಒಬ್ಬನಿರಬಹುದು, ಎಂದು ವಾದಿಸಿರುವರು.

ನಾಗಿರುವನು. ಅಜ್ಜನಷ್ಟು ಇಲ್ಲದಿದ್ದರೂ ಸಾಕಷ್ಟು ಹೆಸರು ಪಡೆದಿರುವನು. ಇವರಿಬ್ಬರಲ್ಲಿ ಆಂಡಯ್ಯನ ಕಥಾನಾಯಕ ಯಾರೆಂಬುದೊಂದು ಹೊಸ ಪ್ರಶ್ನೆ.

ಗ್ರಾಹ್ಯ ಅಂಶಗಳು

ಕಬ್ಬಿಗರಕಾವದಲ್ಲಿ ಚಾರಿತ್ರಿಕ ಅಂಶಗಳು ಓತಪ್ರೋತವಾಗಿ ಹರಿದಿವೆಂಬ ಮಾತಿದ್ದರೂ ಗ್ರಾಹ್ಯವೆನಿಸುವಂಥವು ಇವು ನಾಲ್ಕು—

(೧) ಕನ್ನಡಮೆನಿಪ್ಪಾನಾಡು ಮತ್ತು ಅಲ್ಲಿಯ ನಿಸರ್ಗದ ಸೊಬಗು.

(೨) ಕಂಪಿನ ಪೊಳಲು.

(೩) ಕಥಾನಾಯಕ ಕಾವ (ಕಾಮ); ಗ್ರಂಥಾರಂಬದಲ್ಲಿ 'ನನೆವಿಲ್ಲಬಲ್ಲಹ' ಎಂದು ಅರಸನೆಂಬ ಅರ್ಥದಲ್ಲಿ ಕೂಡ ಆತ ಉಕ್ತನಾಗಿರುವದು.

(೪) ತನ್ನ ಕಾವ್ಯವು ರಾಯನ (ರಾಜನ) 'ಗೋಸಣೆ' ಮೀರುವನಕ ಬಾಳುವದು 'ನಿಚ್ಚಮುಂ' ಎಂಬ ಕವಿಯ ಹಾರೈಕೆ.

ಕಥೆ ಕಾಮುನದಿದ್ದರೂ ಆಂಡಯ್ಯ ಬಣ್ಣಿಸಿದ ಕಾಮನು ಆಳುತ್ತಿದ್ದ ಕನ್ನಡಮೆನಿಪ್ಪಾನಾಡು ಈಗಿನ ದಕ್ಷಿಣೋತ್ತರ ಕನ್ನಡ ಜಿಲ್ಹೆಗಳಿರುವ ಬನವಾಸಿ ಸೀಮೆಯೆ ಆಗಿದೆ. ಬತ್ತದ ಗದ್ದೆ, ಕೌಂಗು, ತೆಂಗು, ಬೆಟ್ಟದಸಾಲು, ದಟ್ಟಕಾಡು, ಬೆಂಗಡೆಯ ಕರಾವಳಿ ಪ್ರದೇಶ ಆ ಸೀಮೆಯ ವೈಶಿಷ್ಟ್ಯಗಳಾಗಿವೆ. ಅದಕ್ಕೆ ಹೊಂದಿಕೊಂಡು ಸ್ವಲ್ಪ ಕೆಳಗೆ ಪೂರ್ವಕ್ಕೆ ಹಾನಗಲ್ಲ ಸೀಮೆ ಇದೆ. ಅದಾದರೂ ಮಲೆನಾಡು. ಕಥಾನಾಯಕ ಕರ್ವುವಿಲ್ಲನ (ಕಾಮನ) ರಾಜಧಾನಿ ಕಂಪಿನಪೊಳಲು ಬನವಾಸಿಯ (ಬನ-ವಾಸ) ಅಚ್ಚಗನ್ನಡ ರೂಪವಲ್ಲದೆ ಬೇರೊಂದಾಗದು. ಶಾಪದ ಅವಧಿಯಲ್ಲಿ ಅವನು ಆಳುತ್ತಿದ್ದ ಪೂವಿನ ಪೊಳಲು ಪೌರಾಣಿಕ ಕಾಮನ ರಾಜಧಾನಿಯೆಂದು ತೋರುವುದು. ಪೂವಿನಪೊಳಲು ಕುಸುಮಪುರದ ಅಚ್ಚಗನ್ನಡರೂಪ. ಕುಸುಮಪುರ ಪೌರಾಣಿಕ ಕಾಮನ ನೆಲೆವೀಡೆಂದು ಕನಕದಾಸರ ಮೋಹನತರಂಗಿಣಿಯಲ್ಲಿ ಬಂದಿದೆ.

ತನ್ನ ಕಾವ್ಯವನ್ನು ಕುರಿತಿರುವ ಆಂಡಯ್ಯನ ಹಾರೈಕೆಯಲ್ಲಿ ಉಕ್ತನಾದ ರಾಯ ಲೌಕಿಕ ರಾಯನೆಂಬಲ್ಲಿ ಸಂದೇಹವಿಲ್ಲ. ಅವನನ್ನೂ, ಕಥಾನಾಯಕ ಕಾಮನನ್ನೂ, ಆಂಡಯ್ಯನ ಸಂಭಾವ್ಯ ಕಾಲವನ್ನೂ ಮತ್ತು ಆಗ ಕನ್ನಡಮೆನಿಪ್ಪಾನಾಡನ್ನು ಆಳುತ್ತಿದ್ದ ಅರಸನ ಹೆಸರನ್ನೂ ಸಂದಿಸಿ ನೋಡಿದಾಗ ಆ ರಾಯ ಹಾನಗಲ್ಲ ಕದಂಬ ಮನೆತನದ ಕಾಮದೇವ ಎಂಬುದು ಸ್ಪಷ್ಟವಾಗಿ ಒಡಮೂಡುವುದು. ಆದರೆ ಈ ಅಂಶಗಳು ಈರ್ವರೂ ಕಾಮದೇವರಿಗೆ ಅನ್ವಯಿಸುವವು.

ಮುಳಿಯರು ತಮ್ಮ ಸಂಶೋಧನೆಯನ್ನು ಮಂಡಿಸಿದಾಗ (೧೯೨೭) ಕದಂಬರ ಇತಿಹಾಸವು ಉಪರೋಕ್ತ ಮೊದಲನೆಯ ಕಾಮದೇವನ ವರೆಗೆ ತಿಳಿದಿದ್ದಿತೆಂದು ತೋರುವುದು. ಆಗ ಅವನ ಆಳಿಕೆಯ ಕಾಲ ೧೧೮೦-೧೨೦೩ ಎಂದಿದ್ದಿತು. ಮುಳಿಯರು ಮತ್ತು ಆ ಸಮಯದಲ್ಲಿ ಅವನನ್ನು ಉಲ್ಲೇಖಿಸಿದ ಇತರರು ಇದೇ ಕಾಲವನ್ನು

ಹಿಡಿದಿರುವರು. ೧೨೧೭ ವರೆಗೆ ಅದು ಮುಂದರಿದದ್ದು ಅನಂತರ ಪ್ರಸಿದ್ಧವಾದ (೧೯೩೧) ಮೊರೇಸರ 'ಕದಂಬಕುಲ' ಗ್ರಂಥದಲ್ಲಿ. ಆಂಡಯ್ಯನ ಕೃತಿರಚನೆಯ ಕಾಲವು ಮುಂದೆ ಸರಿದದ್ದು (೧೨೧೭ಕ್ಕೆ) ಕೂಡ ಮುಳಿಯರ ಸಂಶೋಧನೆಯ ನಂತರ.

ಮೊದಲನೆಯ ಕಾಮದೇವನ ಪ್ರತಿಸ್ಪರ್ಧಿ ವೀರ ಬಲ್ಲಾಳ ಹೊಯ್ಸಳರಲ್ಲಿ ಖ್ಯಾತಿವೆತ್ತ ಅರಸು. ಜನ್ನ ಅವನ ಮತ್ತು ಅವನ ಮಗ ಎರಡನೆಯ ನರಸಿಂಹನ (೧೨೨೦-೧೨೩೪) ಆಸ್ಥಾನ ಕವಿ. ೧೨೦೯ರಲ್ಲಿ ರಚಿತವಾದ ಯಶೋಧರ ಚರಿತೆ ಯಿಂದ ಕೀರ್ತಿ ಶಿಖರಕ್ಕೇರಿದ ಅವನಿಗೆ ಕವಿ ಚಕ್ರವರ್ತಿ ಬಿರುದನ್ನು ವೀರಬಲ್ಲಾಳ ಅದನ್ನು ಓದಿಸಿ ಕೇಳಿ ಕೊಟ್ಟಿರಬೇಕೆಂಬ ಅಭಿಪ್ರಾಯವಿದೆ.[1] ಇದಾದರೂ ಮುಳಿ ಯರ ಸಂಶೋಧನೆಯ ನಂತರ ಪ್ರಕಟವಾಗಿದೆ.

ಮುಳಿಯರು ಆಂಡಯ್ಯನ 'ಜನ್ನಿಗನ ಜಸಂ' ಮಾತಿಗೆ ಜನ್ನ ಲಿಖಿತ ಚನ ರಾಯಪಟ್ಟಣದ ೧೧೯೧ ಮತ್ತು ತರೀಕೆರೆಯ ೧೧೯೭ ನೆಯ ಶಾಸನಗಳಲ್ಲಿರುವ ಸ್ವಪ್ರ ಶಂಸೆಯ ಮಾತುಗಳನ್ನು ಹೊಂದಿಸಿಕೊಂಡು ಮುಂದರಿದಿರುವರು. ಇದು ಅವರಿಗೆ ಅನಿವಾರ್ಯವಿದ್ದಿತು. ೧೧೮೨ ರಲ್ಲಿ ಕಾಮದೇವನೆಂದು ಪ್ರಸಿದ್ಧನಿದ್ದ ಉಚ್ಚಂಗಿಯ ವೀರಪಾಂಡ್ಯನನ್ನು ಕಾಳಗದಲ್ಲಿ ಸಂಹರಿಸಿದ್ದು ವೀರಬಲ್ಲಾಳನ ಮಹತ್ವದ ವಿಜಯ. ಜಗನ್ನಾಥ ವಿಜಯದಲ್ಲಿ ರುದ್ರಭಟ್ಟ ಈ ಘಟನೆಯನ್ನು ಶಿವಕಾಮರ ಯುದ್ಧಕ್ಕೆ ಹೋಲಿಸಿ ವೀರಬಲ್ಲಾಳನನ್ನು ಅರಿಕಾಮಧ್ವಂಸಿ, ಮುಕ್ಕಣ್ಣ ಎಂದು ಸ್ತುತಿಸಿರುವನು. ರುದ್ರಭಟ್ಟನಾದರೂ ವೀರಬಲ್ಲಾಳನ ಆಸ್ಥಾನ ಕವಿ. ಜಗನ್ನಾಥ ವಿಜಯವನ್ನು ಆತ ೧೨೧೮ ರಲ್ಲಿ ಬರೆದಿರಬೇಕೆಂಬ ಅಭಿಪ್ರಾಯವಿದೆ. ಈ ಅಭಿಪ್ರಾಯದ ಪುರಸ್ಕರ್ತರು ಎ. ವೆಂಕಟಸುಬ್ಬಯ್ಯನವರು. ಈ ಸಂದರ್ಭದಲ್ಲಿ ಅವರು ಅರಿಕಾಮಧ್ವಂಸಿ ಪದದಲ್ಲಿ ಉಥರೆಯ ಕಾಳಗದಲ್ಲಾದ ಕದಂಬ ಕಾಮದೇವನ ಪರಾಭವವೂ ಧ್ವನಿತವಾಗಿದೆ. ಎಂದಿರುವರು. ಅವರ ಈ ಅಭಿಪ್ರಾಯವನ್ನು ಪುರಸ್ಕರಿಸಿ ಮುಳಿಯರು ಆಂಡಯ್ಯನ ಶಿವನಲ್ಲಿ ಹೊಯ್ಸಳ ವೀರಬಲ್ಲಾಳನನ್ನು, ತಿಂಗಳ (ಚಂದ್ರ) ಸೆರೆಯಲ್ಲಿ ಹಂಗಳ (ಹಾನಗಲ್ಲು) ಮುತ್ತಿಗೆಯನ್ನು ಗುರುತಿಸಿರುವರು.[2] ಶಿವನ ಶಾಪದಲ್ಲಿ ಅವರು ವೀರಬಲ್ಲಾಳನಿಂದ ಕಾಮದೇವನ ಸೋಲನ್ನು ಕಂಡಿರುವರು.

ಶಿವನ ಶಾಪವು ಪೌರಾಣಿಕ ಕಾಮನಿಗಾದ ದುರಂತವನ್ನು ತಪ್ಪಿಸಲು ಆಂಡಯ್ಯ ಯೋಜಿಸಿದ ತಂತ್ರವೆಂಬುದು ಸ್ಪಷ್ಟವಿದ್ದರೂ ಇನ್ನೊಬ್ಬ ವಿದ್ವಾಂಸರು-ವೀರಬಲ್ಲಾಳ

---

1. ಯಶೋಧರ ಚರಿತೆಯಲ್ಲಿ 'ಕನ್ನರನಾಪರರದಿಂಕುಡೆ ಹೊನ್ನಂ .. ಮನ್ನಿಸಿ ಬಲ್ಲಾಳಂ ಜನ್ನಂ ಕವಿ ಚಕ್ರವರ್ತಿ ಪೆಸರಂ ಪಡೆದಿರ್' ಪದ್ಯವಿದ್ದರೂ ಅದು ಸಂದೇಹಾತ್ಮಕ ಎಂದು ಬಗೆ ಯಲಾಗಿದೆ. (ಯ. ಚ. ಪು. ೫ ಮು.)

2. ಹಂಗಳವು ಇಂಗ್ಲೀಷಿನಲ್ಲಿ ರೂಢವಾದ Hangal-ದ ಕನ್ನಡ ರೂಪ. ಈ ಸಂದರ್ಭ ದಲ್ಲಿ ಮುಳಿಯರು ಉದಾಹರಿಸಿದ ಗಣಪತಿರಾವ ಐಗಳ ದಕ್ಷಿಣ ಕನ್ನಡದ ಪ್ರಾಚೀನ ಇತಿಹಾಸ ದಲ್ಲಿಯ ಅವತರಣಿಕೆಯಲ್ಲಿ ಹಂಗಳ ಎಂದಿದ್ದು ಮುಳಿಯರು ಅದನ್ನೇ ಬಳಸಿರುವರು.

ಕದಂಬ ವಂಶದ ಕನ್ನಿಕೆಯೊಬ್ಬಳನ್ನು ಮದುವೆಯಾಗಿರಬೇಕು; ಆ ಕಾರಣದಿಂದ ಆತ ಪರಾಜಿತನಾದ ಕಾಮದೇವನನ್ನು ಕೊಲ್ಲದೆ ಎಲ್ಲಿಯಾದರೂ ತಲೆ ತಪ್ಪಿಸಿಕೊಳ್ಳಲು ಆಸ್ಪದ ಕಲ್ಪಿಸಿರಬೇಕು ಎಂದಿರುವರು. ಮುಂದರಿದು ಸವಣಸನ್ನಿವೇಶದ ಸವಣನಲ್ಲಿ ಹೊಯ್ಸಳ ರಾಜಗುರು ಸಮುದಾಯದ ಮಾಘಣಂದಿಯನ್ನು ಕಂಡಿರುವರು. ಇಷ್ಟೊತ್ತಿಗೆ ಮೊರೇಸರ ಕದಂಬಕುಲ ಪ್ರಸಿದ್ಧವಾಗಿತ್ತು. 'ಜನ್ನಿಗನಜಸಂ' ಮಾತಿಗೆ ೧೨೩೦ ರಲ್ಲಿ ರಚಿತವಾದ ಅವನ ಅನಂತನಾಥ ಪುರಾಣವು ನಿಶ್ಚಿತ ಆಧಾರ. ಕವಿಚಕ್ರವರ್ತಿ ಎಂದು ಅವನು ಹೇಳಿಕೊಂಡಿರುವದು ಅದರಲ್ಲಿ. ಆದರೂ ೧೨೦೯ ರಲ್ಲಿ ರಚಿತವಾದ ಯಶೋಧರ ಚರಿತೆಯೆ ಅವನ ಜಸದ ಅಡಿಗಲ್ಲೆಂಬಲ್ಲಿ ಎರಡು ಅಭಿಪ್ರಾಯಗಳಿಲ್ಲ. ಮುಳಿಯರ ಸಂಶೋಧನ ಸಮಯದಲ್ಲಿ ಕಾಮದೇವನ ಆಳಿಕೆ ೧೨೦೩ ರ ವರೆಗೆ ಎಂದು ಇದ್ದಿತಾದ್ದರಿಂದ ಅವರು ಜನ್ನಲಿಖಿತ ಶಾಸನಗಳನ್ನು ಆಧಾರವಾಗಿಸಿಕೊಂಡು ತಮ್ಮ ಸಂಶೋಧನೆಯನ್ನು ಸಮರ್ಥಿಸಿಕೊಂಡರು. ಮೊರೇಸ ಗ್ರಂಥದಲ್ಲಿ ಕಾಮದೇವನ ಆಳಿಕೆಯು ೧೨೧೭ ವರೆಗೆ ಮುಂದರಿದದ್ದು ಶಾಸನಗಳ ಬದಲು ಸರ್ವಸಮ್ಮತವಿರುವ ಯಶೋಧರ ಚರಿತೆಯನ್ನು ಆಧಾರವಾಗಿಸಿಕೊಳ್ಳಲು ಅನುಕೂಲವಾಯಿತು. ತತ್ಪರಿಣಾಮವಾಗಿ ಮುಳಿಯರ ಸಂಶೋಧನ ಸಮಯದಲ್ಲಿ ಇದ್ದಿರಬಹುದಾದ ಕಬ್ಬಿಗರ ಕಾವದ ರಚನಾ ಕಾಲವನ್ನು (೧೧೯೭–೧೨೦೩) ೧೨೦೯–೧೨೧೭ ಕ್ಕೆ ಮುಂದರಿಸಬೇಕಾಯಿತು. ಹಾಗೆ ಮುಂದರಿಸಿದ್ದೂ ಆಯಿತು. ಆಂಡಯ್ಯ ತನ್ನ ಕೃತಿಗೆ ಹರಿಹರನ ಗಿರಿಜಾ ಕಲ್ಯಾಣದಲ್ಲಿಯ ಕಾಮದಹನ ವಸ್ತುವನ್ನು ಆರಿಸಿಕೊಂಡು ಅದರೊಳಗೆ ಅಡಕವಾದ ಶಿವಸರ್ವೋತ್ತಮ ತತ್ವವನ್ನು ಖಂಡಿಸಿ ಕಾಮ ವಿಜಯವನ್ನು ಪ್ರಸ್ಥಾಪಿಸಿರಬೇಕು; ಪ್ರತಿಯಾಗಿ ಹರಿಹರನ ಶಿಷ್ಯ ರಾಘವಾಂಕನು ಸಿದ್ಧರಾಮಚರಿತೆಯಲ್ಲಿ ಆಂಡಯ್ಯನ ಕಥೆಯನ್ನು ಖಂಡಿಸಿರಬೇಕೆಂಬ ಊಹೆಯನ್ನು ಮಂಡಿಸಿ, ಜೊತೆಗೆ ಗಿರಿಜಾ ಕಲ್ಯಾಣದ ರಚನೆ ೧೨೧೬ ಕ್ಕೆ ಮೊದಲು ಎಂಬ ಅಭಿಪ್ರಾಯವನ್ನು ಮುಂದೊಡ್ಡಿ ಕಬ್ಬಿಗರ ಕಾವದ ರಚನಾಕಾಲ ೧೨೧೭ ಎಂದು ಪ್ರತಿಪಾದಿಸಲಾಯಿತು. ಸದ್ಯ ಇದೇ ಸರಿಯೆಂದು ಬಗೆಯಲಾಗಿದೆ.[1]

ಕಬ್ಬಿಗರ ಕಾವದಲ್ಲಿ ಕಾಣುವ ನಿಶ್ಚಿತ ಚಾರಿತ್ರಿಕ ಅಂಶಗಳು ಅಲ್ಪವಿದ್ದು ಅವುಗಳಿಂದ ಅದೊಂದು ಬನವಾಸಿ ಸೀಮೆ ಮತ್ತು ಅದನ್ನಾಳುತ್ತಿದ್ದ ಕಾಮನೆಂಬ ಅರಸನಿಗೆ ಸಂಬಂಧಿಸಿದ ಕಾವ್ಯ ಇಷ್ಟಕ್ಕಿಂತ ಹೆಚ್ಚು ಗ್ರಹಿಸುವಂತಿಲ್ಲ. ಆದ್ದರಿಂದ ಅವು

---

1. ಇತ್ತೀಚೆಗೆ ಪ್ರಸಿದ್ಧವಾದ ನಂದೀಮಠ ಸಂಪಾದಿತ ಹರಿಹರನ ಗಿರಿಜಾಕಲ್ಯಾಣದಲ್ಲಿ ಅವನ ಕಾಲವನ್ನು ಕುರಿತು ವಿಸ್ತೃತ ಚರ್ಚೆ ಇದ್ದು, ಅದರಲ್ಲಿ ಅವರು ಹರಿಹರ ರಾಘವಾಂಕರು ಕ್ರಿ. ೧೧೮೦-೧೨೫೦ ಅವಧಿಯಲ್ಲಿ ಕ್ರಿಯಾಶೀಲರಾಗಿ ಬಾಳಿರಬಹುದೆಂಬ ನಿಲುವೆಗೆ ಬಂದಿರುವರು. ಚರ್ಚೆಯಲ್ಲಿ ಅವರು ಹರಿಹರನ ಕಾಲ ೧೨೧೬ ಎಂಬ ಅಭಿಪ್ರಾಯವನ್ನೂ ಇತರ ವಿದ್ವಾಂಸರು ಊಹಿಸಿದ ಅನ್ಯ ಕಾಲಾವಧಿಗಳನ್ನೂ ಗಮನಿಸಿರುವರು. ಇಂಥ ಪರಿಸ್ಥಿತಿಯಲ್ಲಿ ಗಿರಿಜಾ ಕಲ್ಯಾಣದ ರಚನೆ ೧೨೧೬ ಕ್ಕೆ ಮೊದಲು ಎಂದು ನಿಶ್ಚಿತವಾಗಿ ಗ್ರಹಿಸುವದೆಂತು ?

ಗಳಿಗೆ ಸಂಭಾವ್ಯವೆನಿಸುವ ಐತಿಹಾಸಿಕ ಅಂಶಗಳನ್ನು ಹೊಂದಿಸಿ ಮಂಡಿಸಿದ ಊಹೆಗಳಲ್ಲಿ ಲೋಪದೋಷಗಳು ಕಾಣುವದು ಸಹಜ. ಅವುಗಳ ಯುಕ್ತಾಯುಕ್ತತೆಯ ಚರ್ಚೆಯಿಂದ ಯಾವುದೆ ಬಗೆಯ ವಿಧಾಯಕ ಪ್ರಯೋಜನವಿಲ್ಲ. ಬದಲಾಗಿ ಬೇರೊಂದು ದಿಸೆಯಿಂದ ಸಂಶೋಧನೆಯನ್ನು ಮುಂದರಿಸುವದು ಲೇಸು.

ಹೊಸ ಸನ್ನಿವೇಶ

ಸೂಕ್ತಿ ಸುಧಾರ್ಣವದ ಆಧಾರದಿಂದ ಕವಿಚರಿತೆಯಲ್ಲಿ ನಿರ್ಧರಿಸಿದ ಆಂಡಯ್ಯನ ಕಾಲವು ಸ್ಥಿರವಾಗಿ ನಿಂತಿದ್ದರೆ ಸಂಶೋಧನೆಯ ಈವರೆಗಿನ ಫಲಿತಾಂಶಗಳನ್ನು ಒಮ್ಮನಸಿನಿಂದ ಒಪ್ಪಬಹುದಿತ್ತು. ಆದರೆ ಪರಿಸ್ಥಿತಿ ಬದಲಿಸಿದೆ. ಕಾಮದೇವನ ಆಳಿಕೆ ೧೨೧೭ ವರೆಗೆ ಬೆಳೆದಿದೆ. ಆಂಡಯ್ಯನ ಕಾಲಕ್ಕಿದ್ದ ಮೇಲಿನ ಗಡುವು ಅಭಿನವ ವಾದಿ ವಿದ್ಯಾನಂದನ ಕಾಲಕ್ಕೆ ಅಂದರೆ ೧೫೩೩ ಕ್ಕೆ ಸರಿದಿದೆ. ಇನ್ನೊಬ್ಬ ಕಾಮ ದೇವನ ಪ್ರಶ್ನೆ ಉದ್ಭವಿಸಿದೆ. ಇದರ ಇತ್ಯರ್ಥವಾಗದೆ ಹೊಯ್ಸಳ ವೀರಬಲ್ಲಾಳನ ಪ್ರತಿಸ್ಪರ್ಧಿ ಮೊದಲನೆಯ ಕಾಮದೇವ, ಆಂಡಯ್ಯನ ಪ್ರಚ್ಛನ್ನ ಕಥಾನಾಯಕ ಎಂದು ಬಗೆಯುವದು ದುಸ್ತರವಾಗಿದೆ.

ಈ ಹೊಸ ಸನ್ನಿವೇಶದ ಪರಿಶೀಲನಗೆ ತೊಡಗುವ ಮೊದಲು ಎರಡನೆಯ ಕಾಮ ದೇವನ ವಿಷಯವನ್ನು ಅರಿತುಕೊಳ್ಳಬೇಕು. ಈತ ಮೊದಲನೆಯ ಕಾಮದೇವನ ಮುಮ್ಮಗ. ಮೊದಲನೆಯ ಕಾಮದೇವನ ಮಗ ಮಲ್ಲಿದೇವ ೧೨೧೭-೧೨೫೨ ವರೆಗೆ ರಾಜ್ಯವಾಳಿದ. ಮಲ್ಲಿದೇವನ ಅನಂತರ ಅವನ ತಮ್ಮನೆಂದು ಭಾವಿಸಲಾದ ರಾಮ ದೇವರಸ ಎಂಟು ವರ್ಷ (೧೨೫೨-೧೨೬೦) ರಾಜ್ಯಭಾರ ವಹಿಸಿದ್ದ. ಎರಡನೆಯ ಕಾಮದೇವನ ೫೫ ವರ್ಷಗಳಿಗೆ ಮೇಲ್ಪಟ್ಟ (೧೨೬೦-೧೩೧೫ ?) ಸುದೀರ್ಘ ಆಳಿಕೆಯನ್ನು ಗಮನಿಸಿ ಮಲ್ಲಿದೇವ ತೀರಿಕೊಂಡಾಗ ಅವನು ತೀರ ಚಿಕ್ಕವನಿರಬೇಕು ; ಆ ಸಮಯದಲ್ಲಿ ಅವನ ಕಕ್ಕ ರಾಮದೇವ ರಾಜ್ಯವಾಳಿರಬೇಕು ಎಂದು ಭಾವಿಸಲಾಗಿದೆ.

ಮಲ್ಲಿದೇವನ ಕಾಲದಲ್ಲಿ ಯಾದವರು ತಲೆಯೆತ್ತಿದ್ದರು. ಅವನ ಕೆಲವು ಪ್ರದೇಶಗಳು ಹೊಯ್ಸಳರ ವಶವಾಗಿದ್ದವು. ಪ್ರಾರಂಭದಲ್ಲಿ ಆತ ಯಾದವರೊಡನೆ ಸೆಣಸಿದರೂ ಹಿಂದಿನಿಂದ ಅವರ ಮಾಂಡಲಿಕನಾದ. ರಾಮದೇವರಸನ ವಿಷಯ ತಿಳಿದಿಲ್ಲ. ೧೨೬೬ ರಲ್ಲಿ ಜರುಗಿದ ಯಾದವ-ಹೊಯ್ಸಳ ಕಾಳೆಗದಲ್ಲಿ ಕಾಮದೇವ ಯಾದವರ ಭುಜಕ್ಕೆ ಭುಜ ಹೊಂದಿಸಿ ಹೊಯ್ಸಳರೊಡನೆ ಕಾದಿದ್ದರಿಂದ ತಂದೆಯ ಕಾಲದಲ್ಲಿ ಕೈಬಿಟ್ಟು ಹೋದ ಪ್ರದೇಶಗಳು ಮರಳಿ ಅವನಿಗೆ ದೊರೆತವೆಂಬ ಐತಿಹ್ಯವಿದೆ. ೧೨೮೦ ರ ಒಂದು ವೀರಗಲ್ಲಿನಲ್ಲಿ ಆತ ಮಹಾಮಂಡಲೇಶ್ವರ ವೀರಕಾವದೇವರಸ ಎಂದು ಉಕ್ತನಾಗಿದ್ದು ಸುಖಸಂಕಥಾ ವಿನೋದದಿಂದ ರಾಜ್ಯವಾಳುತ್ತಿದ್ದ ಎಂದಿದೆ. ಇದು ಅವನ ಯಶಸ್ಸಿನ ಪ್ರಥಮ ಸೋಪಾನದಂತಿದ್ದು ತಂದೆಯ ಕಾಲದಿಂದ ಮೋಡ ಕವಿದು ಮಸಕಾಗಿದ್ದ ಕದಂಬಸೂರ್ಯ ಮತ್ತೆ ಬೆಳಗತೊಡಗಿದ ಎನ್ನುವಂತಿದೆ.

ಒಂದೊಮ್ಮೆ ಆಂಡಯ್ಯನ ಪ್ರಚ್ಛನ್ನ ಕಥಾನಾಯಕ ಇವನೇ ಆಗಿದ್ದರೆ ಕಬ್ಬಿಗರ ಕಾವ ರಚನೆಗೆ ಇದೇ ಸರಿಯಾದ ಕಾಲ (೧೨೮೦), ಆಂಡಯ್ಯನ ಕಾಲವಾದರೂ ಇದೇ ಎನ್ನುವಂತಿದೆ. ಮುಂದೆ ಕಾಮದೇವ ಸ್ವತಂತ್ರನಾಗಿ ಚಕ್ರವರ್ತಿ ಮೊದಲಾದ ಕದಂಬರ ಎಲ್ಲ ಬಿರುದಾವಳಿಗಳನ್ನು ಧರಿಸಿ ರಾಜ್ಯವಾಳಿದ. ಮಧ್ಯಂತರದಲ್ಲಿ ಅವನ ಕೆಲವು ಪ್ರದೇಶಗಳು ಹೊಯ್ಸಳರ ಕೈಸೇರಿದರೂ ಯಾದವರ ನೆರವಿನಿಂದ ಅವುಗಳನ್ನು ಗೆದ್ದು ಕೊಂಡನಲ್ಲದೆ ಹೊಯ್ಸಳರು ಮತ್ತೆ ತಲೆಯೆತ್ತದಂತೆ ಮಾಡಿದ. ೧೩೧೨ ವರೆಗೆ ಬನವಾಸಿ ನೆಲೆವೀಡಿನ ಅವನ ಶಾಸನಗಳು ದೊರೆತಿರುವುದರಿಂದ ಆವರೆಗೆ ಬಹುಶಃ ೧೩೧೫ ವರೆಗೆ ಆತ ರಾಜ್ಯವಾಳಿರಬೇಕೆಂಬ ಗ್ರಹಿಕೆ ಇದೆ.

ಚಾರಿತ್ರಿಕ ಅಂಶಗಳ ಹೊಂದಾಣಿಕೆ

ಪೌರಾಣಿಕ ಕಾಮ ನಿತ್ಯ ತರುಣ. ಸ್ಫುರದ್ರೂಪಿ. ಇಂಥವನೊಂದಿಗೆ ಅಭೇದವನ್ನು ಕಲ್ಪಿಸಿ ಆಂಡಯ್ಯ ತನ್ನ ಪೋಷಕ ಕಾಮದೇವನನ್ನು ಕೂಡ 'ಆವನ ಗಾಡಿ ನೋಡಿದವರಂ ಸಲೆ ಸೋಲಿಸುತಿರ್ಪುದು' ಎಂದು ಬಣ್ಣಿಸಿರುವನು. ಅತ ಏವ ಔಚಿತ್ಯದ ದೃಷ್ಟಿಯಿಂದ ಆತ ತಕ್ಕಮಟ್ಟಿಗಾದರೂ ಹಾಗಿರುವುದು ಕ್ರಮಪ್ರಾಪ್ತವಿದೆ. ರೂಪದ ವಿಷಯದಲ್ಲಿ ಆಂಡಯ್ಯನ ಬಣ್ಣನೆಯೊಂದೇ ಆಧಾರ ಇದ್ದುದರಿಂದ ಅವನ ಕಾಮದೇವ ಈರ್ವರಲ್ಲಿ ಯಾರೇ ಇದ್ದರೂ ಆತ ಸಾಕಷ್ಟು ರೂಪವಂತನೆಂದು ಗ್ರಹಿಸಲೇ ಬೇಕಾಗಿದೆ. ಹೀಗೆ ಗ್ರಹಿಸಿದರೂ ನಷ್ಟವಿಲ್ಲ. ತಾರುಣ್ಯದ ದೃಷ್ಟಿಯಿಂದ ನೋಡಿದಾಗ ಮೊದಲನೆಯ ಕಾಮದೇವನಿಗೆ ಅವನ ಆಳಿಕೆ ೧೨೦೩ ಕ್ಕೆ ಮಿತವಾಗಿದ್ದರೆ ಆಂಡಯ್ಯನ ಈ ಬಣ್ಣನೆ ತಕ್ಕಮಟ್ಟಿಗೆ ಹೊಂದುತ್ತಿತ್ತು. ಆದರೆ ಅವನ ಆಳಿಕೆಯ ಕಾಲ ೧೨೧೭ ಕ್ಕೆ ಮುಂದರಿದಿದೆ. ಕಬ್ಬಿಗರಕಾವ ಕೂಡ ಅದೇ ವರ್ಷ ರಚಿತವಾಗಿರಬೇಕೆಂಬ ಅಭಿಪ್ರಾಯವಿದೆ. ಅಷ್ಟೊತ್ತಿಗೆ ಹಂಗಳದ ಮುತ್ತಿಗೆ ಹಳೆಯ ಮಾತಾಗಿದೆ. ಅಲ್ಲದೆ ಪಟ್ಟಕ್ಕೆ ಬಂದಾಗ ಮೊದಲನೆಯ ಕಾಮ ಚಿಕ್ಕವನಿದ್ದವನೆಂಬ ವದಂತಿ ಇಲ್ಲ. ಆಗ ಆತ ೨೫ ವರ್ಷದವ ಎಂದು ಹಿಡಿದರೂ ೧೨೧೭ರಲ್ಲಿ ಆವನು ೬೨ ವರ್ಷದವನಾಗುವನು. ಅಂಥವನ 'ಗಾಡಿ' ನೋಡಿದವರನ್ನು ಸೋಲಿಸುತ್ತಿತ್ತು ಎಂಬ ಬಣ್ಣನೆ ಔಚಿತ್ಯದ ದೃಷ್ಟಿಯಿಂದ ವಿಸಂಗತವೆನಿಸುವುದು. ಅಲ್ಲದೆ ಆತ ಕಬ್ಬಿಗರಕಾವ (ಕವಿಗಳ ಪೋಷಕ) ಇದ್ದನೆಂಬ ಖ್ಯಾತಿಯೂ ಇಲ್ಲ. ಒಂದು ಶಾಸನದಲ್ಲಿ ಅವನು 'ಸರಸಸಂಗೀತ ಗೋಷ್ಠಿಪ್ರಸಂಗ' ಎಂದು ಉಕ್ತನಾಗಿದ್ದರೂ ಅದರಿಂದ ಅವನೊಬ್ಬ ರಸಿಕ, ಸಾಹಿತ್ಯ ಸಂಗೀತಾದಿ ಕಲೆಗಳಲ್ಲಿ ಅಭಿರುಚಿ ಉಳ್ಳವ ಎಂದು ಗ್ರಹಿಸಬಹುದೆ ಹೊರತು 'ಕಬ್ಬಿಗರಕಾವ' ಎಂಬ ಬಿರುದಿಗೆ ಅಷ್ಟು ಸಾಲದು.

ಎರಡನೆಯ ಕಾಮನ ವೈಶಿಷ್ಟ್ಯ

ಇನ್ನು ಅವನ ಮೊಮ್ಮಗ ಎರಡನೆಯ ಕಾಮನ ವಿಷಯ. ಹೆಸರು ಒಂದೇ ಆಗಿದ್ದರೂ ಆತ ಕಾಮ, ಈತ ಕಾವ. ಕಾವದೇವರಸ ವೀರಕಾವದೇವರಸ ಎಂದು ಸಹ

ಪ್ರಸಿದ್ಧನಿರುವನು. ಮೊದಲನೆಯ ಕಾಮು ಕೂಡ ಒಂದೆಡೆ ಕದಂಬ ಚಕ್ರೇಶ್ವರ ಕಾವ ದೇವರಸ ಎಂದು ಉಕ್ತನಾಗಿದ್ದರೂ ಅದು ಅಪವಾದಾತ್ಮಕ ಎನ್ನುವಂತಿದೆ. ಹೊಯ್ಸಳ ವೀರಬಲ್ಲಾಳನಿಂದ ಹತನಾದ ಉಚ್ಚಂಗಿಯ ವೀರಪಾಂಡ್ಯ ಕಾಮನೆಂದು ಪ್ರಸಿದ್ಧನಿದ್ದ. ಹೈವೆಯ ಪಾಂಡ್ಯ ವಂಶೀಯರಲ್ಲಿ ಇಬ್ಬರು ಕಾಮರಿರುವರು. ಗೋವೆಯ ಕದಂಬರಲ್ಲಿ ಒಬ್ಬ ಕಾಮನಿರುವನು. ಇವರೆಲ್ಲರೂ 'ಕಾಮ' ಎಂದು ಉಕ್ತರಾಗಿರುವಾಗ ಈತ ಅದರ ಅಚ್ಚಗನ್ನಡ ರೂಪ 'ಕಾವ' ಎಂದು ಉಕ್ತನಾಗಿರುವದು ಕುತೂಹಲದ ವಿಷಯ.

ತಂದೆ ತೀರಿಕೊಂಡಾಗ ಕಾವ ತೀರ ಚಿಕ್ಕವನಿದ್ದ. ಮಧ್ಯಂತರದಲ್ಲಿ ಆಳಿದ ಅವನ ಕಕ್ಕ ರಾಮದೇವನ ನಂತರ ೧೨೬೨ ರಲ್ಲಿ ಪಟ್ಟಕ್ಕೆ ಬಂದಾಗ ಅವನ ಪ್ರಾಯ ೧೮-೨೦ ಎಂದಿಟ್ಟುಕೊಂಡರೂ ೧೨೮೦ ರಲ್ಲಿ ಅಂದರೆ ತಂದೆಯ ಕಾಲದಲ್ಲಿ ಹೊಯ್ಸಳರ ಕೈ ಸೇರಿದ ಕದಂಬ ಪ್ರದೇಶಗಳನ್ನು ಮರಳಿ ಪಡೆದು ಉದಯೋನ್ಮುಖನಾದಾಗ ೩೬-೩೮ ವರ್ಷದವನಾಗುವನು. ವಯೋಮಾನವನ್ನು ಇನ್ನೂ ಕೆಳಗಿಳಿಸಲು ಅವಕಾಶವಿರುವುದರಿಂದ ಅವನ 'ಗಾಡಿ' ನೋಡಿದವರನ್ನು ಸೋಲಿಸುತ್ತಿತ್ತೆಂಬ ಆಂಡಯ್ಯನ ಬಣ್ಣನೆಗೆ ಪೂರ್ಣವಿಲ್ಲದಿದ್ದರೂ ತಕ್ಕ ಮಟ್ಟಿಗಾದರೂ ಅದು ಹೊಂದಿಕೊಳ್ಳುವಂತಿದೆ.

ರೂಪ, ಪರಾಕ್ರಮ, ವಯೋಮಾನಗಳ ತಕ್ಕಮಟ್ಟಿಗೆಯ ಹೊಂದಾಣಿಕೆಯೊಂದಿಗೆ ಕಾವದೇವ ಕಬ್ಬಿಗರ ಕಾವ (ಕವಿಗಳ ಪೋಷಕ) ಕೂಡ ಆಗಬೇಕು. ಇದಕ್ಕೆ ಕನ್ನಡ ಗ್ರಂಥಗಳಲ್ಲಿ ಇಲ್ಲವೆ ಶಾಸನಗಳಲ್ಲಿ ಆಧಾರವಿಲ್ಲ. ಸಂಸ್ಕೃತದಲ್ಲಿ ಕವಿರಾಜಕೃತ ರಾಘವಪಾಂಡವೀಯ ಎಂಬುದೊಂದು ಗ್ರಂಥವಿದೆ. ಇದೊಂದು ಚಿತ್ರಕಾವ್ಯ. ತೋರಿಕೆಗೆ ರಾಮಾಯಣದಂತೆ ಕಂಡರೂ ಶ್ಲೇಷ ಸಂಧಿ ಸಮಾಸಗಳ ವಿಂಗಡನೆಯಿಂದ ಭಾರತವೂ ಆಗುವುದು. ದುರ್ಗಸಿಂಹನ ಪಂಚತಂತ್ರದಲ್ಲಿ ಧನಂಜಯನೆಂಬ ಜೈನ ಕವಿಯ ರಾಘವ ಪಾಂಡವೀಯದ ಉಲ್ಲೇಖವಿದೆ. ಅದು ಬೇರೆ, ಇದು ಬೇರೆ. ಈ ಕವಿರಾಜ ಬ್ರಾಹ್ಮಣ. ಈತನ ತಂದೆ ಕೀರ್ತಿನಾರಾಯಣ ಬನವಾಸಿ ಕದಂಬರಲ್ಲಿ ಸೈನ್ಯಾಧಿಕಾರಿ ಇದ್ದ. ಗದಾಯುದ್ಧದಲ್ಲಿ ರನ್ನ 'ಚಾಲುಕ್ಯ ಕಂಠೀರವ' ಎಂದು ತನ್ನ ಆಶ್ರಯದಾತನ ಅಂಕಿತವನ್ನು ಬಳಸಿರುವಂತೆ ಕವಿರಾಜ 'ಕಾಮದೇವ' ಎಂದು ತನ್ನ ಆಶ್ರಯದಾತನ ಅಂಕಿತವನ್ನು ಬಳಸಿರುವನು.[1] ಸುಬಂಧು, ಬಾಣ, ತಾನು ಮೂವರನ್ನು ಬಿಟ್ಟರೆ ವಕ್ರೋಕ್ತಿಗಳ ಬಳಕೆಯಲ್ಲಿ ನಾಲ್ಕನೆಯವನಿಲ್ಲ ಎಂದು ಹೆಮ್ಮೆಯಿಂದ ಹೇಳಿಕೊಂಡಿರುವನು. ಕವಿರಾಜನ ಕಾಲ ನಿಜವಾದ ಹೆಸರು ಊಹಾತ್ಮಕವಿವೆ. ಆ ಸಮಯದಲ್ಲಿ ಮೊದಲನೆಯ ಕಾಮದೇವನ ನಂತರ ಕದಂಬರ ಇತಿಹಾಸವು ಸ್ಪಷ್ಟವಿಲ್ಲದರಿಂದ ಕವಿರಾಜನಾದರೂ ಆತನ ಆಶ್ರಿತನೆಂದು ಗಣಿಸಲ್ಪಟ್ಟಿರುವನು. ಕಾಲಾಂತರದಲ್ಲಿ ಕದಂಬರ ಇತಿಹಾಸವು ವಿಸ್ತೃತವಾದರೂ ಕವಿರಾಜನ ವಿಷಯ ಅಷ್ಟಕ್ಕೇ ನಿಂತಿದೆ. ಆದರೆ ಗ್ರಂಥಾಂತ

1. ಗ್ರಂಥ ಸಂಸ್ಕೃತದಲ್ಲಿ ಇರುವದರಿಂದ ಕಾಮದೇವ ಎಂದಿರುವನು.

ಗದ್ಯದಲ್ಲಿ 'ಕಾದಂಬ ಕುಲತಿಲಕ ಚಕ್ರವರ್ತಿ ವೀರಕಾಮದೇವ ಪ್ರೋತ್ಸಾಹಿತ ಕವಿರಾಜ ಪಂಡಿತ ವಿರಚಿತೇ ರಾಘವ ಪಾಂಡವೀಯೇ' ಎಂದಿರುವುದರಿಂದ ಆತನ ವೀರಕಾಮ ಮೊದಲನೆಯ ಕಾಮದೇವನ ಮೊಮ್ಮಗ ವೀರಕಾವದೇವ ಎಂಬುದು ಸ್ಪಷ್ಟವಿದೆ. ರೂಪ, ಪ್ರತಾಪ, ವಯೋಮಾನಗಳೊಂದಿಗೆ ಆತ ಕಬ್ಬಿಗರ ಕಾವನೂ ಇದ್ದನೆಂಬುದಕ್ಕೆ ಪೋಷಕವಾಗಿದೆ.

ಆಂಡಯ್ಯನ ಪ್ರಚ್ಛನ್ನ ಕಥಾನಾಯಕ ಈ ವೀರಕಾವ ಎಂಬುದಕ್ಕೆ ಇದಿನ್ನೊಂದು ಪೋಷಕ ಅಂಶವಾಗುವಂತಿದೆ. ಶಿವ-ಕಾಮರ ಯುದ್ಧ ಸಂದರ್ಭದಲ್ಲಿ ಕಾಮನ ರಾವುತರು—

ಝಾರೇ (ಜಾರೇ), ಜಝಾರೇ (ಜಾಜಾರೇ), ಹಳುರೇ, ಹೋ ಹೋ, ಮಝಾ (ಮಾಝಾ) ಎಂಬ ಮರಾಠಿ ಮಾತುಗಳನ್ನು ಬಳಸುತ್ತಾರೆ. ಕಾವದೇವನ ಸೈನ್ಯದಲ್ಲಿ ಮರಾಠಿ ಭಾಷಿಕ ರಾವುತರಿದ್ದು ರಂಜನಾರ್ಥವಾಗಿ ಆಂಡಯ್ಯ ಇಲ್ಲಿ ಅವರ ಈ ಮಾತುಗಳನ್ನು ಬಳಸಿದಂತಿದೆ. ಕಾವದೇವ ಮತ್ತು ಆತನ ತಂದೆ ಮಲ್ಲಿದೇವ ಇಬ್ಬರೂ ಯಾದವರ ಮಾಂಡಲಿಕರಿದ್ದರು. ೧೨೩೯ ರಲ್ಲಿ ನಡೆದ ಮಲ್ಲಿದೇವ—ಯಾದವ ಸಿಂಘಣದೇವ ಕಾಳೆಗದಲ್ಲಿ ಮಲ್ಲಿದೇವ ಸೋತು ಯಾದವರ ಮಾಂಡಲಿಕನಾದ. ಆ ಕಾಳೆಗದಲ್ಲಿ ಸಿಂಘಣದೇವ ೩೦,೦೦೦ ರಾವುತರೊಂದಿಗೆ ಕಾದಿದನೆಂದಿದೆ. ಕಾವದೇವ ಕೂಡ ಹೊಯ್ಸಳರ ಕೈವಶವಾದ ತನ್ನ ಪ್ರದೇಶಗಳನ್ನು ಮರಳಿ ದೊರಕಿಸಿದ್ದು ಯಾದವರ ನೆರವಿನಿಂದ. ಅವರಿಗೆ ಸಲ್ಲಿಸಿದ ಸಕ್ರಿಯ ಸಹಾಯದ ಮೂಲಕ. ಈ ಕಾಳಗ ಯಾದವ ಸೇನಾಪತಿ ಸಾಳುವ ತಿಕ್ಕಮನ ನೇತೃತ್ವದಲ್ಲಿ ನಡೆಯಿತು. ಯಾದವರ ಒಂದು ಶಾಸನದಲ್ಲಿ ಸಾಳುವ ತಿಕ್ಕಮ ಕದಂಬರಾಜ್ಯ ಪ್ರತಿಷ್ಠಾಪಕ ಎಂದುಕೂಡ ಉಕ್ತನಾಗಿರುವನು. ಯಾದವರದು ಮರಾಠಿ ಪ್ರಚುರ ದ್ವಿಭಾಷಿಕ ರಾಜ್ಯವಿದ್ದಿತು. ಮೊದಲನೆಯ ಕಾಮನ ಸಮಯದಲ್ಲಿ ಕೂಡ ಹೊಯ್ಸಳ-ಯಾದವ ಕಾಳೆಗಗಳಾಗಿದ್ದರೂ ಅದರಲ್ಲಿ ಕದಂಬರ ಭಾಗವಿದ್ದಿಲ್ಲ. ಆಗ ಅವರು ಚಾಲುಕ್ಯರ ನಂತರ ಕಲಚೂರ್ಯರ ಮಾಂಡಲಿಕರಿದ್ದರು. ಕದಂಬ ರಾಜ್ಯದಲ್ಲಿ ಯಾದವರು ಪ್ರವೇಶಿಸಿದ್ದು ಮೊದಲನೆಯ ಕಾಮದೇವನ ನಂತರ.

ಈ ದೃಷ್ಟಿಯಿಂದ ನೋಡಿದಾಗ ಕಬ್ಬಿಗರ ಕಾವದಲ್ಲಿಯ ಮರಾಠಿ ಮಾತುಗಳು ಆಂಡಯ್ಯನ ಪ್ರಚ್ಛನ್ನ ಕಥಾನಾಯಕ ಎರಡನೆಯ ಕಾಮನೆಂಬುದನ್ನು ಸಮರ್ಥಿಸುವಂತಿವೆ.

ಕನ್ನಡ ಕವಿಗಳಿಗೆ ಕಾವನ ಆಹ್ವಾನ (?)

ತನ್ನ ಅಜ್ಜ ಮತ್ತು ನೆರೆಹೊರೆಯ ಒಬ್ಬಿಬ್ಬರು ಕಾಮದೇವರೆಂದು ಪ್ರಸಿದ್ಧರಿರುವಾಗ ಎರಡನೆಯ ಕಾಮದೇವ ಕಾವದೇವನೆಂದು ಪ್ರಸಿದ್ಧನಾಗಲು ಅವನ ಸ್ವಭಾಷಾಪ್ರೇಮವನ್ನು ಬಿಟ್ಟರೆ ಸದ್ಯ ಬೇರೊಂದು ಕಾರಣವು ಹೊಳೆಯದಂತಾಗಿದೆ.

ಕವಿಗಳ ಪೋಷಕನಿದ್ದ ಆತ ಕನ್ನಡ ಕವಿಗಳನ್ನು ಕುರಿತು,—ಅಲ್ಲೊಂದು ಇಲ್ಲೊಂದು ಕನ್ನಡ ಶಬ್ದವನ್ನೊ ಪ್ರತ್ಯಯವನ್ನೊ ಸೇರಿಸಿ ಕನ್ನಡದ ಹೆಸರಿನಲ್ಲಿ ಸಂಸ್ಕೃತವನ್ನು ಇಳಿಸುವದಕ್ಕಿಂತ ಬರೆಯುವದಾದರೆ ಅಚ್ಚಕನ್ನಡದಲ್ಲಿ ಬರೆಯಿರಿ, ಎಂದು ಆಹ್ವಾನಿಸಿರ ಬೇಕು. ಅಂಥ ಕಾವ್ಯರಚನೆ ಆಂಡಯ್ಯ ಒಬ್ಬನಿಗೇನೆ ಸಾಧ್ಯ ಎಂಬ ಸರಿಕರ ಮಾತು ಗಳನ್ನು ಕೇಳಿ ಆತ ಆ ಆಹ್ವಾನೆಯನ್ನು ಸ್ವೀಕರಿಸಿ ತನ್ನ ಈ ಕಾವ್ಯವನ್ನು ರಚಿಸಿರ ಬೇಕು.[1] ಆಳರಸರ ಭಾಷಾಭಿಮಾನದ ಉದಾಹರಣೆಗಳು ರಾಜಶೇಖರನ ಕಾವ್ಯ ಮೀಮಾಂಸೆಯಲ್ಲಿವೆ. ಉಜ್ಜಯನಿಯ ಸಾಹಸಾಂಕನೆಂಬ ಅರಸು ತನ್ನ ರಾಣೀವಾಸ ದವರೆಲ್ಲ ಸಂಸ್ಕೃತವನ್ನು ಮಾತ್ರ ಬಳಸಬೇಕೆಂದು ಕಟ್ಟುಮಾಡಿದ್ದನಂತೆ. ಈತ ಕವಿಗಳ ಆಶ್ರಯದಾತ ಮತ್ತು ಸ್ವಯಂಕವಿ ಇದ್ದ. ಕುಂತಳದ ಸಾತವಾಹನನ (ಹಾಲ) ಅಂತಃ ಪುರದವರೆಲ್ಲ ಪ್ರಾಕೃತವೊಂದನ್ನೇ ಬಳಸಬೇಕೆಂಬ ನಿಯಮವಿದ್ದಿತಂತೆ. ಮಗಧದ ಶಿಶು ನಾಗನೆಂಬುವ ಉಚ್ಚಾರಕ್ಕೆ ಕ್ಲಿಷ್ಟವಿರುವ ಟ, ಠ, ಡ, ಢ, ಶ, ಷ, ಹ, ಕ್ಷ ಅಕ್ಷರಗಳ ಬಳಕೆಯನ್ನು ನಿಷೇಧಿಸಿದ್ದರೆ ಶೂರಸೇನದ ಕುವಿಂದ ಸಂಯುಕ್ತಾಕ್ಷರಗಳ ಬಳಕೆಯನ್ನು ನಿಷೇಧಿಸಿದ್ದನಂತೆ. ಅಚ್ಚಗನ್ನಡದಲ್ಲಿ ಬರೆಯಬೇಕೆಂಬ ಕದಂಬಕಾವನ ಆಹ್ವಾನ ವಾದರೂ ಇದೇ ಬಗೆಯದು. ಈ ಬಗೆಯ ಅಪ್ಪಣೆ ಆಹ್ವಾನಗಳು ವ್ಯಾವಹಾರಿಕ ವಾಗವೆಂಬುದು ಸ್ಪಷ್ಟವಿದೆ. ಅಂತೆಯೆ ಆಂಡಯ್ಯ ವಾಡಿಕೆಗನುಸರಿಸಿ ತನ್ನ ಕಾವ್ಯವು ಆಚಂದ್ರಾರ್ಕವಾಗಿ ಬಾಳಲಿ ಎಂದು ಹಾರೈಸುವ ಬದಲು ಅದು ತನ್ನ ರಾಯನ 'ಗೋಸಣೆ' ಮೀರುವನಕ ಬಾಳುವದು 'ನಿಚ್ಚಮುಂ' ಎಂದಿಷ್ಟೇ ಹಾರೈಸಿದಂತಿದೆ. ಇಲ್ಲವಾದರೆ ಈ ಬಗೆಯ ವಿಚಿತ್ರ ಹಾರೈಕೆಗೆ ಸಮಂಜಸವೆನಿಸುವ ಬೇರೊಂದು ಕಾರಣ ತೋರುವದಿಲ್ಲ.

ಪುನರ್ವಿಮರ್ಶೆಯ ಫಲಿತಾಂಶಗಳು

ಇದಿಷ್ಟು ಆಂಡಯ್ಯ ಮತ್ತು ಅವನ ಕೃತಿಯ ವಿಷಯದಲ್ಲಿರುವ ಈವರೆಗಿನ ಸಂಶೋಧನ ಫಲಿತಾಂಶಗಳ ಪುನರ್ವಿಮರ್ಶೆ. ಇದರಲ್ಲಿ ಕಂಡುಬಂದ ಫಲಿತಾಂಶಗಳನ್ನು ಹೀಗೆ ಸಂಗ್ರಹಿಸಬಹುದು. ಇವುಗಳಲ್ಲಿ ಕೆಲವು ಪೂರ್ವದವು ಕೆಲವು ಹೊಸವು—

ಕೃತಿಯ ಉದ್ದೇಶ—ದ್ವಿವಿಧ—(೧) ಅಚ್ಚಗನ್ನಡದಲ್ಲಿ ಕಾವ್ಯರಚನೆ, (೨) ಕಥಾನಾಯಕನೊಡನೆ ಪೋಷಕ ಅರಸನನ್ನು ಸಂದಿಸಿ ಅವನ ಪ್ರಚ್ಛನ್ನ ಪ್ರಶಸ್ತಿ.

ಕವಿಯ ಹೆಸರು—ಮೂಲರೂಪ ಆಂಡ ಅಥವಾ ಆಂಡಿ. ಗೌರವ ಸೂಚಕ ಪದ ಅಯ್ಯ ಸೇರಿ ಆಂಡಯ್ಯ ಆಗಿದೆ. ಮೂಲರೂಪ ಅಂಡ ಇದ್ದು ಅರಿಸಮಾಸ

---

1. ಪಂಪಭಾರತದಲ್ಲಿ ವರ್ಣಿಸವಿದ್ದ ಭಾರತವನ್ನು ಮೆಯ್ಗೆಡಿಸದೆ ವಸ್ತುಕದಲ್ಲಿ ಮಾರ್ಪ ಡಿಸುವದಾದರೆ ಅದು ಪಂಪನೋರ್ವನಿಂದಲೇ ಸಾಧ್ಯ ಎಂಬ ಆಹ್ವಾನೆಯ ಮಾತಿದೆ. ವಿವರಗಳಿ ಗಾಗಿ ಇದೇ ಹೊತ್ತಿಗೆಯಲ್ಲಿರುವ "ಪಂಪರನ್ನರ ವಸ್ತುವಿಸಂಗತಿಗಳು" ಲೇಖವನ್ನು ನೋಡ ಬಹುದು.

ದೋಷ ತಪ್ಪಿಸಲು ಕವಿಯೇ ಅದನ್ನು ಆಂಡವಾಗಿಸಿದ ಸಂಭವ ಕಡಿಮೆ.

ಕಾವ್ಯದ ಹೆಸರು—ಕಬ್ಬಿಗರ ಕಾವ. ಕವಿದತ್ತವಿದ್ದರೂ ಕಾಮುನಗೆಲ್ಲ ಹೆಸರು ಉಪೇಕ್ಷಣೀಯ. ಕಬ್ಬಿಗರ ಕಾವ ಹೆಸರು ಕೂಡ ಕವಿದತ್ತವಿರುವದು ಅಸಂಭವವಿಲ್ಲ.

ಕಾವ್ಯವಸ್ತು—ಶಿವಪುರಾಣ, ಕಾಲಿದಾಸನ ಕುಮಾರಸಂಭವ ಮೊದಲಾದ ಶಿವಪಾರಮ್ಯ ಗ್ರಂಥಗಳಲ್ಲಿಯ ಶಿವ-ಕಾಮರ ಸಂಘರ್ಷಣೆ. ಕಬ್ಬಿಗರಕಾವದಲ್ಲಿ ಪೌರಾಣಿಕ ಹಿನ್ನೆಲೆ ಇಲ್ಲ. ಕಥೆಯನ್ನು ಸುಖಾಂತವಾಗಿಸಲು ಕವಿ ತನ್ನ ಕಾಮುನಿಗೆ ಪೌರಾಣಿಕ ಕಾಮುನಿಗಾದ ದುರಂತವನ್ನು ತಪ್ಪಿಸಿರುವನು. ಅದರ ಬದಲು ಕಾಮುನಿಗೆ ಶಿವನಿಂದ ಶಾಪಕೊಡಿಸಿ ಶಾಪಮುಕ್ತನಾಗಿ ಅವನು ಸ್ವಜನರನ್ನು ಸೇರುವವರೆಗೆ ಕಥೆಯನ್ನು ಮುಂದರಿಸಿರುವನು. ಶಿವ-ಚಂದ್ರ ಮತ್ತು ಚಂದ್ರ-ಕಾಮರ ಲೋಕಪ್ರಸಿದ್ಧ ಅವಿಭಾಜ್ಯ ಸಂಬಂಧವನ್ನು ಗಮನಿಸಿ, ಚಂದ್ರನನ್ನು ಶಿವನ ಸೆರೆಯೊಳಾಗಿಸಿ, ಶಿವನ ಮೇಲೆ ಸಾಗಿ ಹೋಗಲು ಕಾಮುನಿಗೆ ಅವನ ವಿಮೋಚನೆಯನ್ನು ನಿಮಿತ್ತವಾಗಿಸಿರುವನು. ಕಥಾನಾಯಕನ 'ಬೀರಮನೊಲ್ದು ಪೇಟಿಪ್ಪೆನಾಂ' ಎಂಬ ಪ್ರತಿಜ್ಞೆಗನುಸರಿಸಿ ಗೆಲವು ಕಾಮುನದಾಗಿಸಿ ತನ್ಮೂಲಕ ಪೋಷಕ ದೊರೆಯ ಪರಾಕ್ರಮ ಪ್ರಶಂಸೆಗೆ ಇಂಬು ಮಾಡಿಕೊಂಡಿರುವನು. ಆದರೂ ಅದೊಂದು ಮಕ್ಕಳಾಟ, ತಾರುಣ್ಯದ ಹುಮ್ಮಸಿನಲ್ಲಾದ ದುಡುಕಿನ ಕೃತಿ ಎನ್ನುವಂತೆ ಚಿತ್ರಿಸಿ ಶಿವನ ಘನತೆ ಗಾಂಭೀರ್ಯಗಳನ್ನು ಗೌರವಿಸಿರುವನು. ಸವಣ ಸನ್ನಿವೇಶ ಕಥೆಗೆ ಅನಗತ್ಯ. ಅದರಲ್ಲಿ ಮತಾಭಿಮಾನದ ಸುಳುವಿದ್ದರೂ ಅದನ್ನು ಅನ್ಯರ ಮನಸ್ಸಿಗೆ ನೋವಾಗದಂತೆ ವ್ಯಕ್ತಪಡಿಸಿರುವನು.

ಚಾರಿತ್ರಿಕ ಹಿನ್ನೆಲೆ— ಕಾವ್ಯವಸ್ತು ಶಿವಕಾಮರ ಘರ್ಷಣೆಗೆ ಸಂಬಂಧಿಸಿದ್ದರೂ ಅದು ನಡೆದದ್ದು ಪಶ್ಚಿಮ ಕರಾವಳಿಗೆ ಹೊಂದಿಕೊಂಡಿರುವ ಮಲೆನಾಡಿನ ಬನವಾಸಿ ಮತ್ತು ಸುತ್ತಲಿನ ಸೀಮೆಯಲ್ಲಿ. ಕಂಪಿನಪೊಳಲು ಬನವಾಸಿಯ ಅಚ್ಚಗನ್ನಡ ರೂಪ. ಪೂವಿನಪೊಳಲು ಕಾಲ್ಪನಿಕ ನಗರ. ಅದು ಕುಸುಮಪುರದ ಅಚ್ಚಗನ್ನಡ ರೂಪ. ಇಂದ್ರನ ಅಮರಾವತಿ ಕುಬೇರನ ಅಲಕಾವತಿ ಇರುವಂತೆ ಕುಸುಮಪುರ ಪೌರಾಣಿಕ ಕಾಮನ ನೆಲೆವೀಡು.

ಆಂಡಯ್ಯ ಜನ್ನನ (೧೨೩೦) ಸಮಕಾಲೀನ, ೧೨೪೫ ಕ್ಕೆ ಮೊದಲಿನವ ಎಂಬ ತಿಳಿವಳಿಕೆ ಇದ್ದಿತು. ಇದಕ್ಕಿದ್ದ ಆಧಾರವು ಇಲ್ಲದಂತಾದ್ದರಿಂದ ಸದ್ಯ ಅವನ ಕಾಲಕ್ಕಿರುವ ನಿಶ್ಚಿತ ಮೇಲಿನ ಗಡುವು ೧೫೩೩ ಕ್ಕೆ ಸರಿದಿದೆ. ನಿರ್ವಿವಾದ ಆಧಾರಗಳಿಲ್ಲದೆ ಕಾಲ ಮಿತಿಯಲ್ಲಾದ ಈ ವ್ಯತ್ಯಾಸವನ್ನು ಕಡೆಗಣಿಸುವಂತಿಲ್ಲ. ೩೦೦ ವರ್ಷಗಳ ಈ ಕಾಲಖಂಡದಲ್ಲಿ ಬನವಾಸಿ ಸೀಮೆಯನ್ನು ಹಾನಗಲ್ಲ ಶಾಖೆಯ ಕದಂಬರು ಆಳುತ್ತಿದ್ದರು. ಅವರಲ್ಲಿ ಇಬ್ಬರು ಕಾಮರಿರುವರು. ಒಬ್ಬನ ಆಳಿಕೆ ೧೧೮೦-೧೨೧೭, ಇನ್ನೊಬ್ಬನದು ೧೨೬೦-೧೩೧೫. ಇವರೀರ್ವರಲ್ಲಿ ಒಬ್ಬನು ಆಂಡಯ್ಯನ ಪ್ರಚ್ಛನ್ನ ಕಥಾನಾಯಕ ಇದ್ದಿರಬಹುದಾಗಿದೆ. ಸದ್ಯ ಮೊದಲನೆಯ ಕಾಮ ಆಂಡಯ್ಯನ ಪ್ರಚ್ಛನ್ನ ಕಥಾನಾಯಕ ಎಂಬುದು ಸಾಮಾನ್ಯವಾಗಿದೆ. ಈ ಪುನರ್ವಿಮರ್ಶೆಯಲ್ಲಿ

ಆತ ಎರಡನೆಯ ಕಾಮ (ಕಾವ) ಇರುವದು ಹೆಚ್ಚು ಸಂಭವನೀಯ ಎಂಬ ಅನುಮಾನಕ್ಕೆ ಆಸ್ಪದ ದೊರೆತಿದೆ.

ತಾತ್ವಿಕ ವಿಚಾರ—ಕಾಮ–ರತಿ, ಶಿವ–ಶಕ್ತಿ, ಶ್ರವಣ–ವಿರಕ್ತಿ ಈ ತ್ರಿಕೂಟ ದ್ವಂದ್ವದ ಕಾವ್ಯವು ಕಬ್ಬಿಗರ ಕಾವದಲ್ಲಿ ನಿರೂಪಿತವಾಗಿದೆಂಬ ಬೇಂದ್ರೆಯವರ ಉಪಸಂಹಾರಾತ್ಮಕ ವಿಮರ್ಶೆ.

ಕುತೂಹಲಾತ್ಮಕ ಕಾವ್ಯ

ಕಬ್ಬಿಗರ ಕಾವವು ೨೭೨ ಪದ್ಯಗಳ ಚಿಕ್ಕಕಾವ್ಯ. ಸಂಸ್ಕೃತ ಬೆರಸದೆ ಕನ್ನಡದಲ್ಲಿ ಕಾವ್ಯ ರಚಿಸುವ ಕವಿಗಳಿಲ್ಲೆಂಬ ಮಾತನ್ನು ಸಟೆಯಾಗಿಸಲು ಹಟತೊಟ್ಟು ಪ್ರಯತ್ನಪೂರ್ವಕವಾಗಿ ರಚಿಸಿದ ಕೃತಿ. ಆತ ಏವ ಅದರಲ್ಲಿ ಕವಿಯ ಸಹಜ ಪ್ರತಿಭೆ ಸಾಮರ್ಥ್ಯಗಳ ನಿರರ್ಗಳ ಅಭಿವ್ಯಕ್ತಿಗೆ ಅಷ್ಟೊಂದು ಅವಕಾಶ ದೊರೆತಿಲ್ಲ. ಆದರೂ ಅತ್ಯುಜ್ವಲ ಕೃತಿ ಎನಿಸಿಕೊಳ್ಳದಿದ್ದರೂ ಚೊಕ್ಕ ಕಾವ್ಯವೆಂಬ ಬಿರುದಿಗೆ ಪಾತ್ರವಾಗಿದೆ. ಜೊತೆಗೆ ಕವಿಯ ಹೆಸರು, ಕಾಲ, ಕಾವ್ಯದ ಹೆಸರು, ಕಾವ್ಯವಸ್ತು, ಮತೀಯ ಸ್ಪರ್ಧೆ, ತತ್ವಪ್ರತಿಪಾದನೆ, ಚಾರಿತ್ರಿಕ ಹಿನ್ನೆಲೆ, ಇತ್ಯಾದಿ ವಿಷಯಗಳಲ್ಲಿ ಸಂಶೋಧಕರ ಕುತೂಹಲವನ್ನು ಕೆರಳಿಸಿದೆ; ಅವರ ಊಹಾಶ್ವಗಳ ಓಡಾಟಕ್ಕೆ ಸಾಕಷ್ಟು ಇಂಬುಗೊಟ್ಟಿದೆ.

ಪ್ರಖ್ಯಾತ ಸಂಸ್ಕೃತ ಕಾವ್ಯತತ್ವಜ್ಞ ಅಭಿನವಗುಪ್ತ ಸಂದರ್ಭ ಬಂದಾಗ ಕವಿಗಳ ಸರಳ ಸುಂದರ ಮಾತುಗಳಿಗೆ ಕೂಡ ಗಹನ ಗಂಭೀರಾರ್ಥಗಳನ್ನು ಆರೋಪಿಸುವದನ್ನು ಗಮನಿಸಿ—

One's mind is irreverently invaded by an image of Kalidasa sitting politely bored, listening to Abinavagupta explain to him the deeper significance of his plays, his ears really attuned to the joyous shouts of the spring festival taking place outside.

—ತನ್ನ ನಾಟಕಗಳಲ್ಲಿ ಹುದುಗಿದ ಗಹನ ಗಂಭೀರಾರ್ಥಗಳನ್ನು ಕುರಿತು ಅಭಿನವಗುಪ್ತನ ವಿವರಣೆಯನ್ನು ಮನಸ್ಸಿಲ್ಲದೆ ದಾಕ್ಷಿಣ್ಯಕ್ಕಾಗಿ ಕೇಳುತ್ತ ಕುಳಿತ, ಆದರೆ ನಿಜವಾಗಿಯೂ ಹೊರಗಣ ವಸಂತೋತ್ಸವದ ಹರ್ಷೋದ್ಗಾರಗಳಿಗೆ ಕಿವಿ ನೀಡಿದ ಕಾಳಿದಾಸನ ಮೂರ್ತಿ ಬೇಡವೆಂದರೂ ಮನದಲ್ಲಿ ಮೂಡುವದೆಂಬ ಮಾತಿದೆ. ಎಳೆ ಸಿಕ್ಕರೆ ಹಚ್ಚಡ ನುಂಗುವ ಸಂಶೋಧಕರ ನೀರಸ ಮಾತುಗಳಿಂದ ಬೇಸತ್ತ ಆಂಡಯ್ಯ ಕೂಡ ಕಾಳಿದಾಸನ ಪರಿಯಲ್ಲಿ ಹೊರಗೆ ಕಾಣುತ್ತಿದ್ದ ತನ್ನ ಕನ್ನಡಮೆನಿಪ್ಪಾ ನಾಡಿನ ಸೊಬಗಿನ ಸುಗ್ಗಿಯನ್ನು ಸವಿಯುವದರಲ್ಲಿ ಮಗ್ನನಾಗಿರಬಹುದೇ, ಎನಿಸುವದು. ಇದು ಸಂಶೋಧಕರು ಗಮನಿಸಬೇಕಾದ ಮಾತು. ಇದೇ ಕ್ಷೇತ್ರದಲ್ಲಿ ತಡವರಿಸುತ್ತಿರುವ ನಾನು ಸಹ.

ವಚನ, ಉಗಾಭೋಗ, ಸುಳಾದಿ*

ಶಿವಶರಣರ ವಚನ ಹರಿದಾಸರ ಉಗಾಭೋಗ ಸುಳಾದಿಗಳ ಮೂಲ ಮತ್ತು ರಚನೆಯ ಸ್ವರೂಪಗಳ ವಿಷಯದಲ್ಲಿ ಆಗಾಗ ಚರ್ಚೆ ನಡೆಯುತ್ತಲಿದೆ. ವಚನಗಳ ಕುರಿತಿರುವ ಚರ್ಚೆ ಅವು ಗದ್ಯವೊ ಪದ್ಯವೊ ಎಂಬುದಕ್ಕೆ ಸಂಬಂಧಿಸಿದೆ. ಗದ್ಯವಾದಿಗಳು: ವಚನ ಶಬ್ದವು ಸಂಸ್ಕೃತದ ವಚ್ ಧಾತುವಿನಿಂದ ಉಂಟಾದ ನಾಮಪದ. ವಚನವೆಂದರೆ ಮಾತು, ನುಡಿ. ಹೇಳುವಾಗ ಅಥವಾ ಓದುವಾಗ ಯಾವುದೊಂದು ಲಯಕ್ಕೆ ಹೊಂದಿಕೊಳ್ಳುವಂತೆ ತೋರುತ್ತಿದ್ದರೂ ನಿಯತ ಛಂದಸ್ಸಿನ ಇಲ್ಲವೆ ತಾಳ-ಲಯದ ಯೋಜನೆ ಅವುಗಳಲ್ಲಿಲ್ಲ, ಎನ್ನುತ್ತಿರುವರು.

ಪದ್ಯವಾದಿಗಳು : ಬಸವೇಶ್ವರಾದಿಗಳು "ಆನು ಒಲಿದಂತೆ ಹಾಡುವೆ". "ಅರವತ್ತೆಂಟು ಸಹಸ್ರ ವಚನಗಳ ಹಾಡಿ ಹಾಡಿ ಸೋತಿತೆನ್ನ ಮನ ನೋಡಯ್ಯ", ಎಂದಿರುವರು. ಕೆಲವು ವಚನಗಳನ್ನು ತ್ರಿಪದಿ, ಚೌಪದಿ, ಮೊದಲಾದ ಛಂದಸ್ಸುಗಳಲ್ಲಿ ವಿಂಗಡಿಸಬಹುದಾಗಿದೆ. ಕೆಲವುಗಳಲ್ಲಿ ನಿಯತ ಸಂಖ್ಯೆಯ ಮಾತ್ರಾಗಣಗಳ ಓಟವಿದೆ" ಎಲ್ಲ ವಚನಗಳಲ್ಲಿ ಒಂದು ಬಗೆಯ ಲಯವಿದ್ದು ಅವು ಇಂದಿನ ಮುಕ್ತಛಂದಸ್ಸಿನ (ಬ್ಲ್ಯಾಂಕ ವ್ಹರ್ಸ) ಪೂರ್ವಭಾವಿಯಾಗಿವೆ, ಎಂದು ಪ್ರತಿಪಾದಿಸುತ್ತಿರುವರು.

ಉಗಾಭೋಗವು ಸಂಗೀತಶಾಸ್ತ್ರದಲ್ಲಿ ಬರುವ ಉದ್ಗ್ರಾಹ ಆಭೋಗ ಎಂಬ ಪಾರಿಭಾಷಿಕ ಶಬ್ದಗಳ ಸಂಯುಕ್ತ ಅಪಭ್ರಂಶರೂಪ. ಸುಳಾದಿಯ ಮೂಲವನ್ನು ಸೂಡಾಲಿ ಇಲ್ಲವೆ ಸುಲಭ ಹಾದಿಯಲ್ಲಿ ಕಾಣಬಹುದೆಂದು ಕೆಲವರ ಅಭಿಪ್ರಾಯವಿದ್ದರೆ ಉಳಿದವರು ಅದನ್ನು ಒಪ್ಪುತ್ತಿಲ್ಲ.

ಹಾಗೂ ಇರಬಹುದು, ಹೀಗೂ ಇರಬಹುದು, ಎಂಬ ದೆಹಲಿ– ಪ್ರದೀಪ ನ್ಯಾಯವನ್ನು ಅನುಸರಿಸಿದ ಮಧ್ಯವರ್ತಿ ಅಭಿಪ್ರಾಯವಾದರೂ ಇಲ್ಲದಿಲ್ಲ. ವಚನಗಳ ವಿಷಯದಲ್ಲಿ, ಅವು ಲಯಯುಕ್ತ ಗದ್ಯವೂ ಅಲ್ಲ ಪದ್ಯವೂ ಅಲ್ಲ. ಅವುಗಳಲ್ಲಿರುವದು ಶಬ್ದ-ಲಯ. ಅವು ಅವೇ (ಸೂಯಿ ಜೆನೇರಿಸ್) ಎಂದು ಹೇಳಿ ಚರ್ಚೆಯನ್ನು ಮುಕ್ತಾಯಗೊಳಿಸಬಯಸುವ ಅಭಿಪ್ರಾಯವೊಂದು ಇತ್ತೀಚೆಗೆ ವ್ಯಕ್ತವಾಗಿದೆ.

ವಚನಗಳು ಗದ್ಯವೆಂಬಲ್ಲಿ ಸಂದೇಹವಿಲ್ಲ. ಲಯದ ಅಸ್ತಿತ್ವ, ಪದ್ಯಾಭಾಸ ಒಮ್ಮೊಮ್ಮೆ ಪದ್ಯವೇ ಇದ್ದರೂ ಇವು ವಚನಗಳು ಪದ್ಯಜನ್ಯವೆಂಬುದಕ್ಕೆ ಪೋಷಕವಾಗವು. "ಛಂದೋಹೀನ ಪದಕದಂಬಕಂ ಗದ್ಯಮಿತ್ಯುಚ್ಯತೇ" ಎಂಬುದು ಗದ್ಯದ ಸಾಮಾನ್ಯ ವ್ಯಾಖ್ಯೆ ಇದ್ದರೂ ನೃಪತುಂಗನು "ಸದಮಲ ಸಮಸಂಸ್ಕೃತ ವಾಕ್ಯದ

* ಕರ್ನಾಟಕ ಭಾರತಿ, ಸಂ. ೨ ಸಂ. ೧.

ಹೃದಯಂ" ಎಂದು ಕವಿರಾಜಮಾರ್ಗದಲ್ಲಿ ಬಾಣನ ಶೈಲಿಯನ್ನು ಬಣ್ಣಿಸುವಾಗ ಗದ್ಯದ ಲಯಬದ್ಧತೆಯನ್ನು ಸೂಚಿಸಿರುವನು. ಇಲ್ಲಿ ಸಮಸಂಸ್ಕೃತ ಪದದ ಅರ್ಥ ತನ್ನದೇ ಆದ ಒಂದು ಲಯದೊಂದಿಗೆ ಗಂಗಾ ಪ್ರವಾಹದಂತೆ ಗಂಭೀರವಾಗಿ ಹರಿವ ಗದ್ಯವೆಂದಲ್ಲದೆ ಬೇರೊಂದಾಗದು. ಅಲ್ಲದೆ ಭಾಷೆ ಯಾವುದೆ ಇದ್ದರೂ ಪ್ರಾಚೀನ ಗದ್ಯ ಲಯಬದ್ಧವಿದ್ದುದು ಸುಪರಿಚಿತವಿದೆ. ಪರಾಂಬರಿಸಿರಿ—

ರನ್ನ

....ಭಾರದ್ವಾಜಗೋತ್ರನುಂ ಕುಂಭಸಂಭವನುಮುಭಯಬಲಪ್ರಧಾನೋಪಾಧ್ಯಾಯನುಂ ತ್ರೈಲೋಕ್ಯಧನುರ್ಧರನುಂ ರುದ್ರಾವತಾರಜನಕನುಂ ಚಾಪಸಾಮರ್ಥ್ಯಸಂಪನ್ನನುಂ ··· ಕನಕಕಲಶಧ್ವಜನುಮೆನಿಸಿದಬಿಲ್ಲಜಾಣಂ ದ್ರೋಣನಳವಿನೊಳಂ....

(ಗಧಾಯುದ್ಧ)

ಹರಿಹರ

"....ಎಲೆ ಮಗನೆ ಬಸವ, ಬಸವಣ್ಣ, ಬಸವದೇವ, ನಿನ್ನಂ ಮಹೀತಳದೊಳು ಮೆರೆದಪೆವು. ನೀಂ ಬಿಜ್ಜಳರಾಯನಿಪ್ಪ ಮಂಗಳವಾಡಕ್ಕೆ ಪೋಗು," ಎನಲು, ನಿದ್ರೆ ತಿಳಿದು ಕಣ್ದೆರೆದು ಕೆಲಬಲನಂ ನೋಡಿ, ಬೆಚ್ಚಿ ಬೆಗಡುಗೊಂಡು, ಅನುತಾಪವೇರಿ ವಿರಹಂ ಹೊಮ್ಮಿ....ಗುರುವೆ, ಪರಮಬಂಧುವೆ, ಪ್ರಾಣವೆ, ಬೆಳದಿಂಗಳೇಕೆ ಬಿಸಿಲೇಕೆ, ಅಮೃತವೇಕೆ ವಿಷವೇಕೆ, ಬೆಳಗೇಕೆ ತಮವೇಕೆ, ನಿನಗೆ ಈ ನುಡಿಯೇಕೆ....ಸಾರ್ದರಂ ಸೈರಿಸೆಂಬರೆ, ನಂಬಿದವರ ಗೋಣಂ ಕೊಯ್ವರೆ....ಎನ್ನಂ ಬಿಡುವರೆ...."

(ಬಸವರಾಜದೇವರ ರಗಳೆ)

ದುರ್ಗಸಿಂಹ

"ಸಾವಂಗೆ ಸಮುದ್ರಂ ಮೊಳಕಾಲುದ್ದಂ" ಎಂಬಂತೆ, "ಕಿಚ್ಚಿನೊಳ್ ಬಿಳ್ವಂಗೆ ಸಾವು ತಪ್ಪದು" ಎಂಬಂತೆ, ತನಗೆ ಸಾವು ತಪ್ಪದು. ಅವಂ ಮುನಿದು ಇರ್ಮುಡಿಸಿ ಕೊಂದಪೆನೊ ? ಭಯಮೇಕೆನಗಿಲ್ಲ ?

(ಪಂಚತಂತ್ರ)

ಇವು ಒಂದರಿಂದೊಂದು ಭಿನ್ನವಿದ್ದರೂ ಪ್ರತಿಯೊಂದರಲ್ಲಿ ಅದರದೆ ಆದ ಲಯವು ಸ್ಪಷ್ಟಗೋಚರವಿದೆ—ರನ್ನನದು ಕಾವ್ಯಗದ್ಯ, ಹರಿಹರನದು ಕಥಾಗದ್ಯ, ದುರ್ಗಸಿಂಹನದು ಪ್ರವಚನಗದ್ಯವೆನ್ನಬಹುದು. ಲಾಕ್ಷಣಿಕರು ಪಂಚತಂತ್ರದಂಥ ಕೃತಿಗಳನ್ನು ನಿದರ್ಶನ, ಉಪದೇಶಪರ ಕಾವ್ಯಗಳೆಂದು ವರ್ಗೀಕರಿಸಿರುವರು. ದುರ್ಗಸಿಂಹನ ಗದ್ಯಕ್ಕೂ ವಚನಗಳ ಗದ್ಯಕ್ಕೂ ಕಂಡುಬರುವ ಸಾಮೀಪ್ಯವು ಗಮನಾರ್ಹವಿದೆ. ಈ

ಬಗೆಯ ಗದ್ಯ ನಮ್ಮಲ್ಲಿ ಉಪನಿಷತ್ಕಾಲದಿಂದಲೂ ನಡೆದುಬಂದಿದೆ. ತೈತ್ತಿರೀಯಉಪನಿಷತ್ತಿನಲ್ಲಿಯ—

> ಸ್ಯಂ ವದ । ಧರ್ಮಂ ಚರ ಸ್ವಾಧ್ಯಾಯಾನ್ಮಾ ಪ್ರಮದಃ । ಸತ್ಯಾನ್ನಪ್ರಮಾದಿತವ್ಯಂ । ಕುಶಲಾನ್ನಪ್ರಮಾದಿತವ್ಯಂ ಮಾತೃದೇವೋ ಭವ ಪಿತೃದೇವೋ ಭವ ಆಚಾರ್ಯ ದೇವೋಭವ ಅತಿಥಿದೇವೋ ಭವ ಯಾನ್ಯನವದ್ಯಾನಿ ಕರ್ಮಾಣಿ ತಾನಿ ಸೇವಿತವ್ಯಾನಿ। ನೋ ಇತರಾಣಿ ॥...

ಈ ವಾಕ್ಯಗಳನ್ನೂ ಬೌದ್ಧ ಪ್ರಾರ್ಥನೆಯಲ್ಲಿಯ ಸುಪರಿಚಿತವಿರುವ—

> ಬುದ್ಧಂ ಸರಣಂ ಗಚ್ಛಾಮಿ ! ಧಮ್ಮಂ ಸರಣಂ ಗಚ್ಛಾಮಿ । ಸಂಘಂ ಸರಣಂ ಗಚ್ಛಾಮಿ।

ಈ ವಾಕ್ಯಗಳನ್ನೂ ನೂರಾರು ಶಿಷ್ಯರು ಸ್ನಾತಕರು ಒಕ್ಕೊರಲಿನಿಂದ ಗಂಭೀರ ಧ್ವನಿಯಲ್ಲಿ ಹೇಳುವಾಗ ಇವು ಗದ್ಯವಲ್ಲ ಪದ್ಯ ಎನ್ನಬೇಕಾಗುವುದು.

ವಚನಗಳ ಗದ್ಯ ಈ ಬಗೆಯದು. ನಮ್ಮ ಪ್ರಾಚೀನ ಸಾಹಿತ್ಯವು ಪದ್ಯಮಯ ವೆಂಬುದು ಗೊತ್ತಿದ್ದ ವಿಷಯ. ಜ್ಞಾನಾರ್ಜನೆ ಜ್ಞಾನದಾನಗಳಿಗೆ ಪದ್ಯವೆ ಮುಖ್ಯ ಮಾಧ್ಯಮವಿದ್ದುದರಿಂದ ಜನರ ಒಲವೆಲ್ಲ ಪದ್ಯದಲ್ಲಿದ್ದಿತು. ಏನಿಲ್ಲದಿದ್ದರೂ ಕನಿಷ್ಟ ನೂರು ಶ್ಲೋಕಗಳನ್ನು ಕಟ್ಟಬಲ್ಲವನಿದ್ದರೆ ಸಾಕು, ಆತ ಪಂಡಿತ; ಎಂಬ ಮಾತಿನ ಹೊಲಬಾದರೂ ಇದನ್ನೆ ಸೂಚಿಸುತ್ತದೆ. ಇಂಥ ಪರಿಸರ ಪರಂಪರೆಗಳಲ್ಲಿ ಭಕ್ತಿ, ಸ್ಫೂರ್ತಿ, ಅನುಭವ, ಸಾಕ್ಷಾತ್ಕಾರಗಳ ಸಂಗಮದೊಂದಿಗೆ ಉಕ್ಕಿಬಂದ ನುಡಿಗಳು ಗದ್ಯದಲ್ಲಿದ್ದರೂ ಪದ್ಯದ ಪರಿಮಳದಿಂದ ಕೂಡಿ, ಒಮ್ಮೊಮ್ಮೆ ಪದ್ಯವಾಗಿಯೆ ಹರಿದು ಬಂದಿದ್ದರೆ ಅದರಲ್ಲಿ ಆಶ್ಚರ್ಯ ಅಥವಾ ಅಸ್ವಾಭಾವಿಕವೆಂಬುದಿಲ್ಲ. ಆದರೂ ಅದು ಗದ್ಯ.

ವಚನಗಳು ಗದ್ಯವಿದ್ದರೂ ಸಾಮಾನ್ಯ ಗದ್ಯವಲ್ಲ. ಅವು ಗದ್ಯಪ್ರಬಂಧಗಳು. ಉಗಾಭೋಗ ಸುಳಾದಿಗಳಾದರೂ ಪ್ರಬಂಧಗಳೆ. ಪ್ರಬಂಧವೆಂದರೆ ಸಾಮಾನ್ಯವಾಗಿ ಯಾವುದೊಂದು ಸಾಹಿತ್ಯಿಕ ಕೃತಿಯೆಂದಿದೆ. ಸಂಗೀತಶಾಸ್ತ್ರದಲ್ಲಿ ಅವು ಗಾನ, ಗೀತ ಗಳೆನಿಸಿಕೊಂಡಿವೆ. ಪ್ರಬಂಧಗಳಲ್ಲಿ ನಿಬದ್ಧ ಅನಿಬದ್ಧವೆಂಬ ಎರಡು ಭೇದಗಳಿವೆ. ನಿಬದ್ಧ ಪ್ರಬಂಧಗಳು ನಿರ್ದಿಷ್ಟ ಧಾತು, ಅಂಗ, ಛಂದಸ್ಸಾದಿಗಳಿಂದ ಕೂಡಿರುತ್ತವೆ. ಅನಿಬದ್ಧಗಳಿಗೆ ಈ ಬಗೆಯ ನಿರ್ಬಂಧವಿಲ್ಲ.

ಧಾತುಗಳು ನಾಲ್ಕು— (೧) ಉದ್ಗ್ರಾಹ— ಪ್ರಬಂಧ ಅಥವಾ ಗೀತದ ಪ್ರಾರಂಭದ ಭಾಗ, (೨) ಮೇಲಾಪಕ– ಗೀತದ ಮಧ್ಯಭಾಗ, (೩) ಧ್ರುವ– ಗೀತಕ್ಕೆ ಸ್ಥಿರತ್ವವನ್ನು ಕೊಡುವ ಭಾಗ, (೪) ಆಭೋಗ– ಗೀತದ ಕೊನೆಯ ಬಾಗ. ಕರ್ತೃವು ಇಷ್ಟಾನುಸಾರ ಇದರಲ್ಲಿ ಮುದ್ರಿಕೆ ಅಂದರೆ ತನ್ನ ಇಷ್ಟದೇವತೆ, ಗುರು, ಆಶ್ರಯದಾತ ಇಲ್ಲವೆ ಸ್ವಂತ ಅಂಕಿತವನ್ನು ಸೇರಿಸಬಹುದಾಗಿದೆ. ಮೇಲಾಪಕವು ಉದ್ಗ್ರಾಹ ಧ್ರುವಗಳ ನಡುವಣ ಕೊಂಡೆಯಂತಿರುತ್ತದೆ. ಈ ನಾಲ್ಕು ಧಾತುಗಳಲ್ಲದೆ ಅಂತರ ವೆಂಬ ಐದನೆಯ ಧಾತುವಿದೆ. ಇದು ಸಾಲಗ ಅಥವಾ ಛಾಯಾಲಗ ಸೂಡಗಳಲ್ಲಿ

ಮಾತ್ರ ಕಂಡುಬರುತ್ತದೆ. ಇದಕ್ಕೂ ಮೇಲಾಪಕಕ್ಕೂ ವಿಶೇಷ ವ್ಯತ್ಯಾಸವಿಲ್ಲ. ಇಂದಿನ ಪರಿಭಾಷೆಯಲ್ಲಿ ಇವುಗಳನ್ನು ಹೀಗೆ ಹೇಳಬಹುದು—

	ಹಿಂದುಸ್ತಾನಿ	ಕರ್ನಾಟಕಿ (ದಕ್ಷಿಣಾದಿ)
ಧ್ರುವ (ಉದ್ಗ್ರಾಹಯುಕ್ತ)	ಸ್ಥಾಯಿ/ಅಸ್ಥಾಯಿ	ಪಲ್ಲವಿ/ಅನುಪಲ್ಲವಿ
ಮೇಲಾಪಕ/ಅಂತರ	ಅಂತರಾ/ಸಂಚಾರಿ	ಚರಣ/ನುಡಿ
ಆಭೋಗ	ಆಭೋಗ	ಆಭೋಗ

ಅಂಗಗಳು ಆರು—(೧) ಸ್ವರ–ಸರಿಗಮಾದಿಗಳು, (೨) ಬಿರುದು–ಭಕ್ತವತ್ಸಲ ವೀರಾಗ್ರಣಿ ಇತ್ಯಾದಿ, (೩) ಪದ–ಶಬ್ದ ಸಾಹಿತ್ಯ, (೪) ತೇನಕ– ಓಂ ಮೊದಲಾದ ಮಂಗಲಸೂಚಕ ಶಬ್ದಗಳು, (೫) ಪಾಟ– ಧೀಂ ಧಿನ್ನಾಂ ಮೊದಲಾದ ವಾದ್ಯಾಕ್ಷರಗಳು, (೬) ತಾಲ– ಧ್ರುವ, ಮಟ್ಟ, ಮೊದಲಾದವು.

ಉದ್ಗ್ರಾಹಾದಿ ಧಾತುಗಳಲ್ಲಿ ಉದ್ಗ್ರಾಹ ಮತ್ತು ಧ್ರುವ ಎಲ್ಲ ಪ್ರಬಂಧಗಳಲ್ಲಿ ಇರಲೇಬೇಕು. ಇವು ವಾಕ್ಯದಲ್ಲಿಯ ಕರ್ತೃ ಕ್ರಿಯಾಪದಗಳಿದ್ದಂತೆ. ಮಿಕ್ಕವು ಐಚ್ಛಿಕ. ಧಾತು ಅಂಗಗಳ ಸಂಖ್ಯೆಯ ಮೇರೆಗೆ ಪ್ರಬಂಧಗಳಲ್ಲಿ ಬೇರೆ ಬೇರೆ ಜಾತಿಗಳಾಗುತ್ತವೆ. ಕನ್ನಡ ಸಾಹಿತ್ಯದಲ್ಲಿ ಈವರೆಗೆ ಆರೂ ಅಂಗಗಳಿರುವ ಒಂದೇ ಒಂದು ಪ್ರಬಂಧವು ದೊರೆತಿದೆ. ಅದೆಂದರೆ ಪುರಂದರದಾಸರ 'ಆಡಿದನೋ ರಂಗ ಅದ್ಭುತ ದಿಂದಲಿ' ಪದ. ಅದಿಂತಿದೆ—

ರಾಗ–ಆರಭಿ ತಾ-ಆದಿ

ಆಡಿದನೊ ರಂಗ ಅದ್ಭುತದಿಂದಲಿ।
ಕಾಳಿಂಗನ ಫಣೆಯಲಿ—ಆಡಿದನೊ ॥ಪ॥

ಪಾಡಿದವರಿಗೆ ಬೇಡಿದ ವರಗಳ।
ನೀಡುತಲಿ–ದಯಮಾಡುತಲಿ–ನಲಿನಲಿ-
ದಾಡುತಲಿ–ಬೆಣ್ಣೆ ಬೇಡುತಲಿ–ಕೃಷ್ಣ ॥ಅ. ಪ.॥
ಅಂಬುರುಹೋದ್ಭವ ಅಖಿಳಸುರರು ಕೂಡಿ।
ಅಂಬರದಲಿ ನಿಂತವರು ಸ್ತುತಿಸೆ।
ರಂಭೆ ಊರ್ವಸಿ ರಮಣಿಯರೆಲ್ಲರು।
ಚಂದದಿಂ ಭರತನಾಟ್ಯವ ನಟಿಸೆ।
ಝುಂತತ ತಕಧಿಮಿ ತಧಿಗಣ ತೋಂ ಎಂದು।
ಝುಂಪೆತಾಳದಿ ತುಂಬುರನೊಪ್ಪಿಸೆ।
ಧಾಪಮಪದಸರಿ ಎಂದು ಧ್ವನಿಯಿಂದ।
ನಾರದತುಂಬುರು ಗಾನವ ಮಾಡಲು।
ನಂದಿಯು ಚಂದದಿ ಮದ್ದಲೆ ಹಾಕಲು ॥೧॥

....

....

ಚಿಕ್ಕವನಿವನಲ್ಲ ಪುರಂದರವಿಟ್ಠಲ।
ವೆಂಕಟರಮಣನ ಬೇಗ ಯಶೋದೆ।
ಬಿಂಕದೊಳೆತ್ತಿ ಮುದ್ದಾಡೆ ಶ್ರೀಕೃಷ್ಣನ ।೩॥

ಇದರಲ್ಲಿ ಧಾತುಗಳು ಮೂರು— (೧) ಧ್ರುವ (ಉದ್ಗ್ರಾಹಸಂಯುಕ್ತ)–ಪಲ್ಲವಿ, ಅನುಪಲ್ಲವಿ; (೨) ಅಂತರ/ನುಡಿ– ಒಟ್ಟು ಮೂರು ನುಡಿಗಳಿವೆ; (೩) ಆಭೋಗ–ದಾಸರ ಅಂಕಿತವಿರುವ ಕೊನೆಯ ಮೂರು ಪಾದಗಳು. ಅಂಗಗಳು ಆರು: (೧) ಸ್ವರ–ಪದವು ಆರಭಿರಾಗದಲ್ಲಿರುವದರಿಂದ ಆ ರಾಗಕ್ಕನ್ವಯಿಸುವ ಸ್ವರಗಳು ಮತ್ತು ಧಾಪ ಮಪಧಸರಿ ಸ್ವರಾಕ್ಷರಗಳ ಸ್ಪಷ್ಟನಿರ್ದೇಶ, (೨) ಬಿರುದು– ಪಾಡಿದವರಿಗೆ ಬೇಡಿದ ವರಗಳ ನೀಡುವವ, ಇತ್ಯಾದಿ, (೩) ಪದ– ಪದ್ಯದ ಸಮಗ್ರ ಶಬ್ದಸಾಹಿತ್ಯ, (೪) ಪಾಟ–ಝುಂತಕ ತಕಧಿಮಿ ಮೊದಲಾದ ವಾದ್ಯಾಕ್ಷರಗಳು, (೫) ತಾಲ– ಪದ್ಯವು ಆದಿತಾಲದಲ್ಲಿದೆ ಮತ್ತು ಝುಂಪೆ ತಾಲದ ಉಲ್ಲೇಖವಿದೆ. (೬) ತೇನಕ– ಕೆಲವು ಪ್ರಬಂಧಗಳು ಓಂ ಮುಂತಾದ ಮಂಗಲಾರ್ಥಕಪ್ರಕಾಶಕ ಶಬ್ದಗಳಿಂದ ಪ್ರಾರಂಭವಾಗುತ್ತವೆ. ಮಿಕ್ಕವುಗಳಲ್ಲಿ ಅದು ಅಧ್ಯಾಹೃತವಿರುತ್ತದೆ ಅಂದರೆ ಗಾಯಕರು ಅದನ್ನು ಉಚ್ಚರಿಸಿ ಅಥವಾ ಇಷ್ಟದೇವತೆಯನ್ನು ಸ್ಮರಿಸಿ ಗಾನವನ್ನು ಪ್ರಾರಂಭಿಸುವರು. ಪ್ರಬಂಧದ ಜಾತಿ–ಧಾತುಗಳನ್ವಯ–ಸಾಲಗಸೂಡ. ಅಂಗಗಳ ಸಂಖ್ಯೆಗನುಸರಿಸಿ–ಮೇದಿನಿ.

ಪ್ರಬಂಧಗಳನ್ನು ಸೂಡ (ಶುದ್ಧ), ಆಲಿ, ವಿಪ್ರಕೀರ್ಣ ಎಂಬ ಮೂರು ಬಗೆಗಳಲ್ಲಿ ವಿವರಿಸಿರುವನು ಸಂಗೀತರತ್ನಾಕರಕಾರ ಶಾರ್ಙ್ಗದೇವ. ಇವಲ್ಲದೆ ಸಾಲಗ/ಛಾಯಾಲಗ(ಶುದ್ಧ ಸದೃಶ)ಸೂಡ ಎಂಬ ನಾಲ್ಕನೆಯ ವರ್ಗವಿದೆ. ಸೂಡವೆಂದರೆ ಕನ್ನಡದ ಸೂಡು ಅಥವಾ ಕಟ್ಟು. ‘ಸೂಡ ಇತಿ ಗೀತವಿಶೇಷ ಸಮೂಹವಾಚೀ ದೇಶೀಶಬ್ದಃ’ ಎಂದು ವ್ಯಾಖ್ಯೆ ಇದೆ ಇದಕ್ಕೆ. ಸೂಡಪ್ರಬಂಧಗಳಲ್ಲಿ ಏಳೆ, ಢೇಂಕಿ, ಮೊದಲಾದ ಎಂಟು ಬಗೆಗಳಿವೆ. ಆಲಿಗಳಲ್ಲಿ ಆರ್ಯಾ, ಗಾಥಾ, ದ್ವಿಪದಿ, ಕನ್ನಡದಲ್ಲಿ ಎಲ್ಲೆಡೆಗಳಲ್ಲಿ ವ್ಯಾಪಿಸಿದ ಕಂದ ಮೊದಲಾದ ೨೪ ಬಗೆಯ ಪ್ರಬಂಧಗಳಿವೆ. ವಚನಗಳಿಗೆ ಸಂಬಂಧಿಸಿದ ಗದ್ಯಪ್ರಬಂಧವು ಇವುಗಳಲ್ಲಿ ಸೇರಿದೆ. ವಿಪ್ರಕೀರ್ಣಗಳಲ್ಲಿ ಕನ್ನಡ ಛಂದೋಗಂಗೆಯ ಗಂಗೋತ್ರಿಯೆಂದು ಹೆಸರು ಗಳಿಸಿದ ತ್ರಿಪದಿ, ಅಷ್ಟೇ ಲೋಕಪ್ರಿಯವಿದ್ದ ಚೌಪದಿ, ಷಟ್ಪದಿ, ರಾಹಡಿ (ರಗಳೆ), ಮಹಾರಾಷ್ಟ್ರದಲ್ಲಿ ಮೆಚ್ಚಿಗೆಪಡೆದ ಓವಿ, ಕನ್ನಡ ಯಕ್ಷಗಾನಗಳಲ್ಲಿ ಕಂಡುಬರುವ ಧವಲ (ಧವಳಾರ) ಮೊದಲಾದ ೩೬ ಬಗೆಯ ಪ್ರಬಂಧಗಳಿವೆ. ಇನ್ನೂ ಅನೇಕ ಬಗೆಯ ಪ್ರಬಂಧಗಳುಂಟು. ಅವುಗಳಿಗೆ ಲೆಕ್ಕವಿಲ್ಲೆಂದು ಹೇಳಿರುವರು ಲಾಕ್ಷಣಿಕರು.

ಸಾಲಗಸೂಡ ಪ್ರಬಂಧಗಳು “ಧ್ರುವಾಭೋಗಾಂತರೇ ಜಾತೋ” ಅಂದರೆ ಧ್ರುವ, ಅಂತರ, ಆಭೋಗ ಧಾತುಗಳಿಂದ ಯುಕ್ತವಿವೆ. ಅಂತರವು ಈ ಜಾತಿಯ ಪ್ರಬಂಧಗಳಲ್ಲಿ ಮಾತ್ರ (ಸಾಲಗಸೂಡಸ್ಥ ರೂಪಕೇಷ್ವೇವ ದೃಶ್ಯತೇ) ಕಾಣಿಸಿಕೊಳ್ಳು

ತ್ತದೆ. ಇವೇ ಇಂದು ನಮ್ಮ ಸಂಗೀತ ಪ್ರಪಂಚವನ್ನಾಳುತ್ತಿವೆ ಎಂದರೆ ಅತಿಶಯೋಕ್ತಿಯಾಗದು. ಲಕ್ಷಣದಲ್ಲಿ ಉದ್ಗ್ರಾಹದ ನಿರ್ದೇಶವಿಲ್ಲದಿದ್ದರೂ ಅದು ಅವಶ್ಯಕ ಧಾತು ಇರುವದರಿಂದ "ಏತಾವತೋದ್ಗ್ರಾಹೇ ಜಾತೇ ಧ್ರುವಃ ಕರ್ತವ್ಯಃ" ಎಂಬ ಶಾಸ್ತ್ರ ವಚನಕ್ಕನುಸರಿಸಿ ಧ್ರುವಪದವನ್ನು ಒಡೆದು ಮೊದಲಿನ ಭಾಗವನ್ನು ಉದ್ಗ್ರಾಹ, ಎರಡನೆಯದನ್ನು ಧ್ರುವವೆಂದು ಕಲ್ಪಿಸಿಕೊಳ್ಳಬೇಕು. ಇದೆಂತೆಂಬುದನ್ನು ಮೇಲೆ ಉದಾಹರಿಸಿದ ಪುರಂದರದಾಸರ "ಆಡಿದನೊ ರಂಗ" ಪದ್ಯದ ವಿವರಗಳಲ್ಲಿ ಕಾಣಬಹುದು. ಕೆಲವು ಪ್ರಬಂಧಗಳಲ್ಲಿ ಪಲ್ಲವಿಯೊಂದೆ ಇರುತ್ತದೆ. ಇಂಥ ಸಂದರ್ಭಗಳಲ್ಲಿ ಪಲ್ಲವಿಯನ್ನೆ ಒಡೆದು ಒಂದು ಭಾಗವನ್ನು ಉದ್ಗ್ರಾಹ ಇನ್ನೊಂದನ್ನು ಧ್ರುವ ಎಂದು ಗ್ರಹಿಸಬೇಕು. ಉದಾಹರಣೆಗಾಗಿ "ರಾಮಕೃಷ್ಣರು ಮನೆಗೆ ಬಂದರು ಬಾಗಿಲ ತೆರೆಯಿರೊ| ಕಾಮಧೇನು ಬಂದಂತಾಯಿತು ಸುಖವ ಸುರಿಯಿರೊ" ಪಲ್ಲವಿಯಲ್ಲಿ ಮೊದಲನೆಯದು ಉದ್ಗ್ರಾಹ, ಎರಡನೆಯದು ಧ್ರುವ. ಸಾಲಗಸೂಡ ಗೀತಗಳು ಧ್ರುವ (ಉದ್ಗ್ರಾಹಯುಕ್ತ)/ಪಲ್ಲವಿಯಿಂದ ಪ್ರಾರಂಭವಾಗುವದರಿಂದ ಅವುಗಳಿಗೆ ಉತ್ತರದಲ್ಲಿ ಧ್ರುಪದ ದಕ್ಷಿಣದಲ್ಲಿ ಕೃತಿ/ಪದ ಎನ್ನುತ್ತಾರೆ.

ಸಾಲಗಸೂಡ ಪ್ರಬಂಧಗಳನ್ನು ಕ್ರಮದಿಂದ ಧ್ರುವ, ಮಂಠ, ಪ್ರತಿಮಂಠ, ನಿಸಾರುಕ, ಅಡ್ಡತಾಲ, ರಾಸ, ಏಕತಾಲಗಳಲ್ಲಿ ರಚಿಸುತ್ತಿದ್ದರು. ಕಾಲಾಂತರದಲ್ಲಿ ಇವುಗಳ ಸ್ಥಳದಲ್ಲಿ ಸದ್ಯ ಪ್ರಚಾರದಲ್ಲಿರುವ ಧ್ರುವ, ಮಟ್ಟ, ಝಂಪಾ, ರೂಪಕ, ತ್ರಿಪುಟ, ಅಟ್ಟ, ಏಕತಾಲಗಳು ಬಂದವು. ಸಾಮಾನ್ಯವಾಗಿ ಲಾಕ್ಷಣಿಕರು ದಿಗ್ದರ್ಶನವನ್ನು ಮಾಡಿ ಮಿಕ್ಕದನ್ನು ವಾಗ್ಗೇಯಕಾರರ (ಸಂಗೀತ ನಿಪುಣ ಕವಿಗಳ) ಪ್ರತಿಭೆ, ಅಭಿರುಚಿ, ಸೌಂದರ್ಯ, ರಸ, ಔಚಿತ್ಯಾದಿಗಳ ದೃಷ್ಟಿಗೆ ಬಿಟ್ಟುಕೊಡುವದರಿಂದ ಪ್ರಾರಂಭದಲ್ಲಿ ಧ್ರುವಪದ/ಪಲ್ಲವಿಯನ್ನಿರಿಸಿ ಅಂತರ/ನುಡಿ ಆಭೋಗಗಳೊಂದಿಗೆ ಕ್ರಮದಿಂದ ಧ್ರುವಾದಿ ಸಪ್ತತಾಲಗಳಲ್ಲಿ, ಇವುಗಳಲ್ಲಿಯ ಒಂದೇ ತಾಲದಲ್ಲಿ, ಅನೇಕ ತಾಲಗಳಲ್ಲಿ ರಚಿತವಾದ ಅಸಂಖ್ಯ ಪ್ರಬಂಧಗಳು ಹುಟ್ಟಿಕೊಂಡಿವೆ, ಇಂದೂ ಹುಟ್ಟುತ್ತಿವೆ.

ವಚನವು ಗದ್ಯವಿರುವುದರಿಂದ ಅದು ಆಲಿಪ್ರಬಂಧಗಳಲ್ಲಿ ಬರುವದು. "ಗದ್ಯಂ ನಿಗದ್ಯತೇ ಛಂದೋಹೀನಂ ಪದಕದಂಬಕಂ" ಎಂದು ಗದ್ಯದ ವ್ಯಾಖ್ಯೆಯನ್ನು ಹೇಳಿ ಶಾರ್ಙ್ಗದೇವನು ೧೫ ಶ್ಲೋಕಗಳಲ್ಲಿ ಗದ್ಯಪ್ರಬಂಧವನ್ನು ವಿವರಿಸಿರುವನು. ಗದ್ಯದಲ್ಲಿ ಆತ ಉತ್ಕಲಿಕಾ, ಚೂರ್ಣಕ, ಲಲಿತ, ವೃತ್ತಗಂಧಿ, ಖಂಡ, ಚಿತ್ರ, ಎಂಬ ಆರು ಮುಖ್ಯ ಜಾತಿಗಳನ್ನು ಹೇಳಿರುವನು. ಜೊತೆಗೆ ರಸಪೋಷಣೆಗೆ ಅವಶ್ಯವಿರುವ ರೀತಿ (ವೈದರ್ಭಿ, ಗೌಡಿ), ವೃತ್ತಿ (ಭಾರತಿ, ಕೈಶಿಕಿ, ಸಾತ್ವತಿ, ಆರಭಟಿ), ಗತಿ(ದ್ರುತ, ಮಧ್ಯ, ವಿಲಂಬಿತಗಳನ್ನು ವಿವರಿಸಿರುವನು). ಪ್ರಯೋಗಸಮಯದಲ್ಲಿ ತಾಲಕ್ಕನುಸರಿಸಿ ಇಲ್ಲವೆ ತಾಲವಿಲ್ಲದೆ ಕೇವಲ ಗಮಕ ಪದ್ಧತಿಯಿಂದ ಹೇಳುವ ಸಂದರ್ಭಗಳನ್ನೂ ನಿರೂಪಿಸಿರುವನು. ಮಿಕ್ಕ ಪ್ರಬಂಧಗಳಲ್ಲಿರುವಂತೆ ಗದ್ಯಪ್ರಬಂಧಗಳಲ್ಲೂ ಉದ್ಗ್ರಾಹ ಧ್ರುವಗಳಿರಲೇಬೇಕು. ತಾಲವು ಐಚ್ಛಿಕವಿದೆ. ಆದ್ದರಿಂದ ಛಂದೋಹೀನತೆ, ಅನಿಯತ

ಪಾದ ಸಂಖ್ಯೆ ಮತ್ತು ಅಭೋಗ (ಇದಾದರೂ ಐಚ್ಛಿಕ) ಇವುಗಳ ವೈಶಿಷ್ಟ್ಯವೆನ್ನ ಬಹುದು. ಮಣಿಗಳಲ್ಲಿಯ ಸೂತ್ರದಂತೆ ಲಯ ಗದ್ಯಪದ್ಯ ಎರಡರಲ್ಲೂ ಇರುವದರಿಂದ ಲಾಕ್ಷಣಿಕರು ಅದನ್ನು ಪ್ರತ್ಯೇಕವಾಗಿ ಹೇಳಿಲ್ಲ. ಒಂದರ ಲಯ ಅನಿಯತ, ಇನ್ನೊಂದ ರದು ನಿಯತ ಇಷ್ಟೇ ಭೇದ. ಪಶ್ಚಿಮ ಚಾಲುಕ್ಯದೊರೆ ಜಗದೇಕಮಲ್ಲನು (೧೧೩೮–೧೧೫೦) ಸತಾಲ ಗದ್ಯಪ್ರಬಂಧಗಳಿಗೆ ೫ ಮಾತ್ರೆಗಳ ತಾಲವನ್ನು ಹೇಳಿರುವನು. ಕಾವ್ಯಾವಲೋಕನದಕರ್ತೃ ಇಮ್ಮಡಿನಾಗವರ್ಮ ಈತನಕಟಕೋಪಾಧ್ಯಾಯನಿದ್ದನು.

ವಚನಗಳನ್ನು ಚೂರ್ಣಕ ಪ್ರಬಂಧಗಳಲ್ಲಿ ಸೇರಿಸಬಹುದು. ಅಲ್ಪ ಸಮಾಸ ಗಳಿರುವ ಸುಲಭವೇದ್ಯ ಗದ್ಯಕ್ಕೆ ಚೂರ್ಣಕವೆನ್ನುವರು. ಲಾಕ್ಷಣಿಕರು ಶಾಂತರಸನಿರೂ ಪಣೆಗೆ ವೈದರ್ಭಿರೀತಿ, ಸಾತ್ವತಿವೃತ್ತಿ ಮತ್ತು ವಿಲಂಬಿತಗತಿಗಳಿಂದ ಯುಕ್ತವಿರುವ ಚೂರ್ಣಿಕೆಯನ್ನು ಯೋಜಿಸಬೇಕೆಂದಿರುವರು. ನೃಪತುಂಗನು "ಸತತಂ ದಕ್ಷಿಣ ಮಾರ್ಗೋದಿತೋಕ್ತಿಭೇದಕಗುಣಂ ಸ್ವಭಾವಾಖ್ಯಾನಂ" ಎಂದು ವೈದರ್ಭಿಯ (ದಕ್ಷಿಣಮಾರ್ಗ) ಲಕ್ಷಣವನ್ನು ತಿಳಿಸಿ, ಶಾಂತಕ್ಕೆ "ಪ್ರಸನ್ನತರ ಗಂಭೀರೋಕ್ತಿ"ಗಳು ತಕ್ಕವೆಂಬ ಮಾತಿನಲ್ಲಿ ಸಾತ್ವತಿಯ ಲಕ್ಷಣವನ್ನು ಹೇಳಿರುವನು. ವಚನಗಳಾದರೂ ಈ ಲಕ್ಷಣಗಳಿಂದ ಭಿನ್ನವಾಗಿಲ್ಲ.

ಗದ್ಯ ಪ್ರಬಂಧವನ್ನು ಪಾಠ್ಯವೆಂದು ಯಾವ ಲಾಕ್ಷಣಿಕನೂ ಹೇಳಿಲ್ಲ. ಎಲ್ಲರೂ ಅದನ್ನು ಗೇಯವೆಂದೆ ವರ್ಣಿಸಿರುವರು. ಶಾರ್ಙ್ಗದೇವ ಪ್ರಣವ ಎಂದರೆ ಓಂಕಾರದಿಂದ ಪ್ರಾರಂಭಿಸಿ, ಕೆಲವೆಡೆ ಗಮಕದಿಂದ, ಕೆಲವೆಡೆ ತಾಲದಿಂದ ಹಾಡಿಕೊಂಡು ವಿಲಂಬಿ ತಾಲದಿಂದ ಅದಕ್ಕೆ (ಗೀತ್ವಾ ವಿಲಂಬಿತಾಲೇನನ್ಯಾಸೋ) ಮುಕ್ತಾಯವನ್ನು ಕೊಡ ಬೇಕೆಂದಿರುವನು. ಭರತನ ಅನಂತರ ಪ್ರಾಚೀನತಮನಿರುವ ಮತಂಗನು (೮೫೦) "ಗೀಯತೇ ಯತ್ ತದತ್ರಾಹುರ್ಗದ್ಯಂ ಗೀತವಿಶಾರದಾಃ| ತಾಲಯುಕ್ತಾಂ ಸ್ವರೋ ಪೇತಂ ಮಧ್ಯೇ ಪಾಟವಿರಾಜಿತಂ" ಎಂದು ತನ್ನ ಕಾಲದ ಗದ್ಯಪ್ರಬಂಧದ ಹಾಡು ಗಾರಿಕೆಯನ್ನು ವರ್ಣಿಸಿರುವನು. ಪಶ್ಚಿಮ ಚಾಲುಕ್ಯ ಅರಸು ಸೋಮೇಶ್ವರ (೧೧೩೨ ಜಗದೇಕಮಲ್ಲನ ತಂದೆ) "ತದ್ಗದ್ಯಂ ಸ್ವರಸಂಯುಕ್ತಂ ತಾಲೇನ ಚ ವಿವರ್ಜಿತಂ | ವರ್ಣನೀಯಸ್ಯ ನಾಮ್ನಾಯತ್ ಪ್ರಾಂತತಾಲೇನ ಗೀಯತೇ" ಎಂದಿರುವನು. ಬಸವೇಶ್ವರಾದಿಗಳು "ಆನುಒಲಿದಂತೆ ಹಾಡುವೆ," "ಹಾಡಿ ಹಾಡಿ ಸೋತಿತೆನ್ನಮನ ನೋಡಯ್ಯ" ಎಂದಿರುವದಾದರೂ ವಚನವು ಕೇವಲ ಗದ್ಯವಲ್ಲ, ಅದು ಗದ್ಯಪ್ರಬಂಧ, ಗೇಯಕೃತಿ, ಎಂಬ ಕಾರಣದಿಂದಲೆ.

ಉಗಾಭೋಗ—ಉದ್ಗ್ರಾಹ-ಆಭೋಗಗಳ ಕೂಡಿಕೆಯಿಂದ ಉಂಟಾದ ಅಪಭ್ರಂಶ ರೂಪವೆ ಉಗಾಭೋಗ. ಪ್ರಬಂಧ ಯಾವುದೆ ಇರಲಿ ಅದು ಉದ್ಗ್ರಾಹ ಧ್ರುವಗಳಿಂದ ಕೂಡಿರಬೇಕಾದ್ದರಿಂದ ಧ್ರುವದ ಸೂಚನೆಯಿರದ ಉಗಾಭೋಗದ ಈ ವ್ಯುತ್ಪತ್ತಿಯು ಕೆಲವರಿಗೆ ಗ್ರಾಹ್ಯವಿಲ್ಲ. ಹೀಗಿದ್ದರೆ ಸಾಲಗಸೂಡ ಪ್ರಬಂಧಗಳ ಲಕ್ಷಣ ದಲ್ಲಿ ಉದ್ಗ್ರಾಹದ ನಿರ್ದೇಶವೆಲ್ಲಿದೆ? ಅಲ್ಲಿ ಧ್ರುವವನ್ನು ಇಬ್ಭಾಗಿಸಿ ಮೊದಲಿನದನ್ನು

ಉದ್ಗ್ರಾಹ, ಎರಡನೆಯದನ್ನು ಧ್ರುವವೆಂದು ಗ್ರಹಿಸುವಂತೆ ಉಗಾಭೋಗಗಳ ವಿಷಯದಲ್ಲಿ "ಧ್ರುವಸ್ಯಾಭೋಗಕರಣಾದಾಭೋಗ ಇತಿ ಕೇಚನ" ಉಕ್ತಿಗನುಸರಿಸಿ ಆಭೋಗವನ್ನೇ ಧ್ರುವವೆಂದು ಭಾವಿಸಬೇಕಾಗುವದು. ವಸ್ತುಸ್ಥಿತಿಯಾದರೂ ಹೀಗೆಯೆ ಇರುವದನ್ನು ಈ ಉದಾಹರಣೆಗಳಲ್ಲಿ ನೋಡಿರಿ—

ಒಂದು ಕಾಲದಲಿ ಆನೆಕುದುರೆ ಮೇಲ್ಮೆರೆಸುವಿ
ಒಂದು ಕಾಲದಲಿ ಬರಿಗಾಲಲಿ ನಡೆಸುವಿ।
ಒಂದು ಕಾಲದಲಿ ಅಮೃತಾನ್ನ ಉಣಿಸುವಿ।
ಒಂದು ಕಾಲದಲಿ ಉಪವಾಸವಿರಿಸುವಿ।
ನಿನ್ನ ಮಹಿಮೆಯ ನೀನೇ ಬಲ್ಲೆಯೊ ದೇವ।
ಪನ್ನಂಗಶಯನ ಶ್ರೀ ಪುರಂದರವಿಠ್ಠಲ॥

—ಇಲ್ಲಿ ಮೊದಲಿನ ನಾಲ್ಕು ಪಾದಗಳು ಉದ್ಗ್ರಾಹ, ಕೊನೆಯವೆರಡು ಆಭೋಗ ಮತ್ತು ಅವುಗಳಲ್ಲಿಯೆ ಧ್ರುವವು ಅಡಕವಾಗಿದೆ. ಉದ್ಗ್ರಾಹದ ನಾಲ್ಕು ಪಾದಗಳನ್ನಷ್ಟೆ ಹೇಳಿ ಮುಕ್ತಾಯಗೊಳಿಸಿದರೆ ಯಾವುದೆ ಬಗೆಯ ನಿಶ್ಚಿತಾರ್ಥ ಹೊರಡುವದಿಲ್ಲ. ಆಭೋಗದ ಕೊನೆಯವೆರಡು ಪಾದಗಳನ್ನು ಹೇಳಿದಾಗಲೆ ಪ್ರಬಂಧಕ್ಕೆ ಸ್ಥಿರತೆ ಬರುವದು, ಅರ್ಥ ಸ್ಪಷ್ಟವಾಗುವುದು. ಆದ್ದರಿಂದ ಅದೇ ಧ್ರುವ. ಆಭೋಗವೂ ಹೌದು. ದಾಸರ ಅಂಕಿತವು ಅದರಲ್ಲಿಯೆ ಇದೆ. ಇವಾದರೂ ಉಗಾಭೋಗಗಳೆ—

ಎರಗಿ ಭಜಿಪೆನೊ ನಿನ್ನ ಚರಣಸನ್ನಿಧಿಗೆ।
ಕರುಣದಿಂದಲಿ ನಿನ್ನ ಸ್ಮರಣೆಯನು ಎನಗಿತ್ತು ।–ಉ
ಮರೆಯದೆ ಸಲಹೊ ಶ್ರಿ ಪುರಂದರವಿಠ್ಠಲ । ಧ್ರು/ಆ
    ದೇವರ ದೇವ ಜಗತ್ರಯಂಗಳ ಕಾವ।–ಉ
    ಭಾವಜಪಿತ ನಮ್ಮ ಪುರಂದರವಿಠ್ಠಲ॥ ಧ್ರು/ಆ
ಸಕಲ ಶ್ರುತಿಪುರಾಣಗಳಲದಾವನ ಮಹಿಮೆ।
ಸುಖಪೂರ್ಣ ಸುರವರಾರ್ಚಿತಪಾದ।
ಶಕಟಮರ್ದನ ಶಾರದೇಂದುವಕ್ತ್ರ। ರುಚಿಕರ ಕಲ್ಯಾಣರಂಗ।–ಉ
ರುಕ್ಮಿಣಿರಮಣ ಪರಿಪೂರ್ಣ ನಮ್ಮ ಪುರಂದರವಿಠ್ಠಲ॥ ಧ್ರು/ಆ

ಉಗಾಭೋಗವು ಪದ್ಯಜಾತಿಗೆ ಸೇರಿದೆ. ಉಗಾಭೋಗವೆಂಬ ಹೆಸರು ದಾಸಸಾಹಿತ್ಯದಲ್ಲಷ್ಟೆ ಕಂಡುಬಂದರೂ ಅದರ ಹೊಳಹನ್ನು ಮತಂಗನ ಸಮಯದಲ್ಲಿ ಆತನ ಪೂರ್ವದಲ್ಲಿ ಸಹ, ಅಸ್ತಿತ್ವದಲ್ಲಿದ್ದ ಬ್ರಹ್ಮನಿರ್ಮಿತವೆಂದು ಗಣಿಸಲಾದ ಮಾರ್ಗಗೀತಗಳಲ್ಲಿ ಕಾಣಬಹುದು. ಈ ಗೀತಗಳಿಗೆ ರಾಗಗಳನ್ನು ಸಹ ಹೇಳಿರುವರು.

ಬೃಹದುದರ ವಿಕಟಗಮನ ಜಠರ ವಿಭಕ್ತಂ।
ಸುವಿಪುಲ ಪೀನಾಂಗಂ ಅರಿದಮನ ವಿಷಮಲೋಚನಂ।–ಉ
ಸುರನಮಿತಂ ವಿನಾಯಕಂ ವಂದೇ॥ ಧ್ರು/ಆ

ಭಿನ್ನಕೈಶಿಕಿ ಮಧ್ಯಮ ರಾಗ

ಉದಯಗಿರಿ ಶಿಖರ ಶೇಖರ। ತುರಗ ಖುರಕ್ಷ್ವ ವಿಭಿನ್ನ
ಘನತಿಮಿರಃ |–ಉ

ಗಗನತಲ ಸಕಲ ವಿಲುಲಿತ ಸಹಸ್ರಕಿರಣೋ ಜಯತು ಭಾನುಃ ॥
ಧ್ರು/ಆ, ಶುದ್ಧಸಾಧಾರಿತ

ಭಸ್ಮಾಂಗವಿಭೂಷಿತ ದೇಹಂ। ಸುರವರಮುನಿಸಹಿತಂ।
ಭೀಮಭುಜಂಗಮವೇಷ್ಟಿತ ಬಾಹುಂ। ಸುರವರ ನಮಿತ ಪದಂ।
ಚಂದ್ರಕಲಾಕರಸಂತತಿ ಧವಲ ಸುರಸರಿದಂಬುಧರಂ। ಪ್ರಣಮತ
ಸತತ ನಿಷ್ಕಲಂ।– ಉ
ಸಕಲ ಪರಮಶಿವಮಜೇಯಂ ॥ ಧ್ರು/ಆ, ಗೌಡಕೈಶಿಕಿ.

ರಚನೆಯಲ್ಲಿ ವಚನ ಉಗಾಭೋಗಗಳು ಒಂದನ್ನೊಂದು ಹೋಲುತ್ತಿದ್ದರೂ ಶಾಸ್ತ್ರದ ದೃಷ್ಟಿಯಿಂದ ಅದು ಬೇರೆ ಇದು ಬೇರೆ. ಎಲ್ಲ ಉಗಾಭೋಗಗಳನ್ನು ಗದ್ಯ ಪ್ರಬಂಧಗಳೆಂದು ಭಾವಿಸಿ ವಚನಗಳೆಂದು ಗಣಿಸಬಹುದಾದರೂ ಎಲ್ಲ ವಚನಗಳನ್ನು ಉಗಾಭೋಗಗಳಲ್ಲಿ ಸೇರಿಸುವಂತಿಲ್ಲ, ಪರಾಂಬರಿಸಿರಿ—

ಕಲ್ಲದೇವರು ದೇವರಲ್ಲ। ಮಣ್ಣ ದೇವರು ದೇವರಲ್ಲ।
ಮರದ ದೇವರು ದೇವರಲ್ಲ। ಪಂಚಲೋಹದಲ್ಲಿ ಮಾಡುವ ದೇವರು
ದೇವರಲ್ಲ। ಸೇತು ರಾಮೇಶ್ವರ ಗೋಕರ್ಣ ಕಾಶಿ ಕೇದಾರ ಮೊದಲಾದ
ಅಷ್ಟಾಷಷ್ಟಿಕೋಟಿಪುಣ್ಯತೀರ್ಥಂಗಳು ಪುಣ್ಯಕ್ಷೇತ್ರಂಗಳಲಿ
ಇಹ ದೇವರು ದೇವರಲ್ಲ। ತನ್ನ ತಾನರಿದು ತಾನಾರೆಂದು ತಿಳಿದಡೆ
ತಾನೇ ದೇವ ನೋಡಾ। ಅಪ್ರಮಾಣ ಕೂಡಲಸಂಗಮದೇವಾ ॥

—ಇಲ್ಲಿ ಮೂರು ಧಾತುಗಳು ಅಂದರೆ ಉದ್ಗ್ರಾಹ, ಧ್ರುವ, ಆಭೋಗ ಸ್ಪಷ್ಟವಾಗಿವೆ. "ಕಲ್ಲದೇವರು ದೇವರಲ್ಲ" ದಿಂದ "ಪುಣ್ಯಕ್ಷೇತ್ರಂಗಳಲಿ ಇಹ ದೇವರು ದೇವರಲ್ಲ"ವರೆಗಿನ ಪದಸಮೂಹವು ಉದ್ಗ್ರಾಹ, "ತನ್ನ ತಾನರಿದು ತಾನಾರೆಂದು ತಿಳಿದಡೆ ತಾನೇ ದೇವನು ನೋಡಾ" ಧ್ರುವ, "ಅಪ್ರಮಾಣ ಕೂಡಲಸಂಗಮದೇವಾ" ಆಭೋಗ. ವಿಷಯ ನಿರೂಪಣೆ, ಹೇಳುವ ಶೈಲಿ, ಮುಂತಾದ ದೃಷ್ಟಿಯಿಂದ ಇದಕ್ಕೂ ಉಗಾಭೋಗಕ್ಕೂ ಸಾಮ್ಯವಿದ್ದರೂ ಉದ್ಗ್ರಾಹಾದಿ ಮೂರೂ ಧಾತುಗಳು ಸ್ಪಷ್ಟ ಗೋಚರವಿರುವದರಿಂದ ಮತ್ತು ಉಗಾಭೋಗಗಳಲ್ಲಿ ಉದ್ಗ್ರಾಹ ಅಭೋಗ (ಧ್ರುವ ಯುಕ್ತ) ಎರಡೆ ಧಾತುಗಳು ಇರಬೇಕಾದುದರಿಂದ ಶಾಸ್ತ್ರದ ಮೇರೆಗೆ ಈ ವಚನವು ಉಗಾಭೋಗವಾಗದು. ಆದರೆ

ವಚನದಲಿ ನಾಮಾಮೃತ ತುಂಬಿ। ನಯನದಲಿ ಮೂರುತಿ ತುಂಬಿ।
ಮನದಲಿ ನಿಮ್ಮ ನೆನಹು ತುಂಬಿ। ಕಿವಿಯಲಿ ನಿಮ್ಮ ಕೀರ್ತಿಯ ತುಂಬಿ।
ಕೂಡಲಸಂಗಮದೇವಾ। ನಿಮ್ಮ ಚರಣಕಮಲದೊಳು ಸೊಗದ
ಬಂಡನುಂಬ ತುಂಬಿಯಾಗಿರ್ಪೆನು ॥

ಅಳಿಸಂಕುಳವೆ, ಮಾಮರನೆ, ಬೆಳದಿಂಗಳೆ, ಕೋಗಿಲೆಯೆ,
ನಿಮ್ಮೆಲ್ಲರನು ಒಂದು ಬೇಡುವೆನು ಎನ್ನೊಡೆಯ ಚೆನ್ನ-
ಮಲ್ಲಿಕಾರ್ಜುನದೇವರ ಕಂಡರೆ ಕರೆದು ತೋರಿರೆ ॥

ಇವುಗಳಲ್ಲಿ ಮೊದಲಿನದರಲ್ಲಿ "ವಚನದಲಿ ನಾಮಾಮೃತ ತುಂಬಿ" ಯಿಂದ "ಕೀರ್ತಿಯ ತುಂಬಿ"ವರೆಗೆ, ಎರಡನೆಯದರಲ್ಲಿ "ಅಳಿಸಂಕುಳವೆ"ಯಿಂದ "ಬೇಡು-ವೆನು" ವರೆಗಿನ ಪದ ಸಮೂಹಗಳು ಉದ್ಗ್ರಾಹ. ಮುಂದಣವು ಆಭೋಗ. ಧ್ರುವವೂ ಹೌದು. ರಚನೆಯಲ್ಲಿ ಇವಕ್ಕೂ ಉಗಾಭೋಗಗಳಿಗೂ ವ್ಯತ್ಯಾಸವಿಲ್ಲ. ಆದರೆ ವಚನಕಾರರು ಇವುಗಳನ್ನು ವಚನಗಳೆಂದೆ ರಚಿಸಿರುವದರಿಂದ ವಚನಗಳೆಂದು ಗದ್ಯಪ್ರಬಂಧಗಳೆಂದು ಗಣಿಸಿ ಆ ರೀತಿ ವರ್ಗೀಕರಿಸಬೇಕಾಗುವದು. ಇಂಥ ಸಂದರ್ಭ ಗಳಲ್ಲಿ ವರ್ಗೀಕರಣಕ್ಕಾಗಿ ಅನ್ಯಸಾಧನಗಳಿರದ್ದರಿಂದ ಕರ್ತೃವಿನ ಉದ್ದೇಶವೇ ಮಾನ ದಂಡವಾಗುವದು. ಇದೇ ಮೇರೆಗೆ ದಾಸಸಾಹಿತ್ಯದಲ್ಲಿ ಉಗಾಭೋಗದಂತಿರುವ, ಆದರೆ ಅದರ ವ್ಯಾಖ್ಯೆಗೆ ಹೊಂದಿಕೊಳ್ಳದ ರಚನೆಗಳನ್ನು ಅಪವಾದಾತ್ಮಕವೆಂದು ಉಗಾಭೋಗಗಳಲ್ಲಿ ಗಣಿಸಬೇಕಾಗುವದು. ವೈದಿಕ ಛಂದಸ್ಸುಗಳಲ್ಲಿ ಈ ಬಗೆಯ ಪ್ರಮೇಯ ಒದಗಿದಾಗ ಮಂತ್ರದಲ್ಲಿ ಸ್ತುತಿಸಲ್ಪಟ್ಟ ದೇವತೆಯು ಯಾವ ಛಂದಸ್ಸಿನ ಅಧಿದೇವತೆ ಇರುವನೋ ಅದೆ ಆ ಮಂತ್ರದ ಛಂದಸ್ಸೆಂದು ಗ್ರಹಿಸುವ ಸಂಪ್ರದಾಯ ವಿದೆ. ವಚನಗಳು ಯಾವುವೆ ಇರಲಿ ಅವು ಗದ್ಯ. ಉಗಾಭೋಗಗಳು ಯಾವವೆ ಇರಲಿ ಅವು ಪದ್ಯ ಎನ್ನುವುದು ಈ ದೃಷ್ಟಿಯಿಂದ.

ಉಗಾಭೋಗಗಳನ್ನು ಹಿಂದುಸ್ತಾನಿ ಸಂಗೀತದಲ್ಲಿ ಲೋಕಪ್ರಿಯವಿರುವ ಖಯಾಲ ಪದ್ಧತಿಯಿಂದ ಹಾಡಬಹುದೆಂದು ಸಂಗೀತಜ್ಞರೊಬ್ಬರು ಅಭಿಪ್ರಾಯಪಟ್ಟಿ ರುವರು. ಇದಕ್ಕೆ ಪೂರಕವೆಂದು ವಚನಗಳನ್ನು ಹೆಚ್ಚಾಗಿ ಈ ರೀತಿ ಹಾಡುತ್ತಿರು ವದನ್ನು ಉಲ್ಲೇಖಿಸಿರುವರು. ಇನ್ನೊಬ್ಬರು ಇದನ್ನು ಪ್ರತಿಭಟಿಸಿರುವರು. ವಚನ ಉಗಾಭೋಗಗಳನ್ನು ಅವುಗಳ ಲಿಖಿತ ರೂಪದಲ್ಲಿರುವಂತೆ ಹಾಡಿದರೆ ಪಾಠಾಂತರ ಪಾಠದೋಷ ಮೊದಲಾದವುಗಳ ಮೂಲಕ ಅಡೆತಡೆಯಾಗುವದುಂಟು. ಇಂಥ ಸಂದರ್ಭ ಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳನ್ನು ಮಾಡಿಕೊಳ್ಳುವ ಅವಕಾಶ ಗಾಯಕರಿಗೆ ವೇದ ಕಾಲದಿಂದಲೂ ಇದೆ. ಸಾಮಗಾನಗಳಲ್ಲಿ ಸ್ತೋಭ (ಅ, ಏ, ಈ, ಊ, ಇತ್ಯಾದಿ) ಗಳನ್ನು ಸೇರಿಸಿ ಅವುಗಳನ್ನು ಎಳೆದು, ಪುನರುಚ್ಚರಿಸಿ ಅಕ್ಷರಗಳ ಲೋಪವನ್ನು ತುಂಬಿ ಕೊಂಡು ಛಂದಸ್ಸಿಗೆ, ಧಾಟಿಗೆ ತೂಗುವಂತೆ ಹೇಳುವರು. ಅಕ್ಷರಗಳು ಹೆಚ್ಚಾಗಿದ್ದರೆ ಯುಕ್ತ ರೀತಿಯಿಂದ ಅವುಗಳನ್ನು ಕಡಿಮೆ ಮಾಡಿಕೊಳ್ಳುವರು. (ಉದಾ: ಅಗ ಆಯಾಹೀ-ಓಗ್ನಾಹೀ).

ಉಗಾಭೋಗ ವಚನಗಳನ್ನು ಖಯಾಲ ಪದ್ಧತಿಯಲ್ಲಿ ಹಾಡಬಹುದೆಂಬ ಅಭಿ ಪ್ರಾಯವನ್ನು ಅಲ್ಲಗಳೆಯುವ ಮೊದಲು, ಮಡಿವಂತಿಕೆಯನ್ನು ಬಿಟ್ಟು ಅವುಗಳಿಗೂ ಮೇಲೆ ಉದಾಹರಿಸಿದ ರಾಗ-ತಾಲಯುಕ್ತ ಮಾರ್ಗಗೀತಗಳಿಗೂ ಇರುವ ಸಾಮ್ಯ,

ವಚನ ಉಗಾಭೋಗಗಳಲ್ಲಿರುವ ಸಾಮ್ಯ, ವಚನಗಳನ್ನು ಹಿಂದುಸ್ತಾನಿ ಪದ್ಧತಿಯಲ್ಲಿ ಹಾಡುತ್ತಿರುವುದರ ಕಾರಣ, ಅನಿವಾರ್ಯ ಪ್ರಸಂಗಗಳಲ್ಲಿ ಮೂಲಕೃತಿಗಳಲ್ಲಿ ಗಾಯಕರಿಗಿರುವ ಅಲ್ಪಸ್ವಲ್ಪ ವ್ಯತ್ಯಾಸಗಳನ್ನು ಮಾಡಿಕೊಳ್ಳುವ ಅವಕಾಶ, ಇವುಗಳನ್ನು ಮುಂದಿರಿಸಿಕೊಂಡು, ಪ್ರಯೋಗಗಳಿಂದ ಮನಗಂಡು, ಯಾವುದೊಂದು ನಿಶ್ಚಿತ ಅಭಿಪ್ರಾಯವನ್ನು ವ್ಯಕ್ತಪಡಿಸುವದು ಹೆಚ್ಚು ಶ್ರೇಯಸ್ಕರ. ಒಂದೊಮ್ಮೆ ಈ ಪ್ರಯೋಗಗಳಿಂದ ವಚನ ಉಗಾಭೋಗಗಳನ್ನು ಖಯಾಲ ಪದ್ಧತಿಯಲ್ಲಿ ತೃಪ್ತಿಕರವಾಗಿ ಹಾಡಬಹುದೆಂದು ಕಂಡುಬಂದರೆ, ಇಂದು ಹಿಂದುಸ್ತಾನಿ 'ಚೀಜ'ಗಳನ್ನು ಹಾಡಿ ಅವುಗಳಿಂದಲೆ ತೃಪ್ತಿಪಡೆಯುತ್ತಿರುವ ಕರ್ನಾಟಕದ ಗಾಯಕರಿಗೂ ಶ್ರೋತೃಗಳಿಗೂ ಕನ್ನಡದಲ್ಲಿಯೆ ಇರುವ ಇಂಥ ಕೃತಿಗಳ ಭಾಂಡಾರವನ್ನೆ ತೆರೆದಿರಿಸಿದಂತಾಗುವದು.

ಖಯಾಲ ಹಾಡುಗಾರಿಕೆಯು ದಕ್ಷಿಣದ ಮೇಲೆ ದಂಡೆತ್ತಿ ಬಂದ ಮುಸ್ಲಿಮರಲ್ಲಿ ಮೊದಲಿಗನಾದ ಸುಲ್ತಾನ ಅಲ್ಲಾವುದ್ದೀನ ಖಿಲಜಿಯ (೧೩ ಶ.)ಮಂತ್ರಿ ಅಮೀರ ಖುಸ್ರುವಿನಿಂದ ಪ್ರಚಾರದಲ್ಲಿ ತರಲ್ಪಟ್ಟಿತೆಂಬ ಪ್ರತೀತಿ ಇದೆ. ಇವನೊಬ್ಬ ಪ್ರಖ್ಯಾತ ಫಾರ್ಸಿ ಸಂಗೀತಜ್ಞನಿದ್ದನು. ಉತ್ತರಕ್ಕೆ ಮರಳುವಾಗ ತನ್ನ ಸಂಗಡ ದಕ್ಷಿಣದ ಸುಪ್ರಸಿದ್ಧ ವಾಗ್ಗೇಯಕಾರ ಗೋಪಾಲನಾಯಕನನ್ನು ಕರೆದುಕೊಂಡುಹೋದನು. ಉತ್ತರದಲ್ಲಿ ಧ್ರುಪದ ಗೀತಗಳ ಹಾಡುಗಾರಿಕೆಯು ಈ ಗೋಪಾಲನಾಯಕನಿಂದ ಮತ್ತು ಮುಂದೆ ಗ್ವಾಲೇರದ ರಾಜಾ ಮಾನಸಿಂಗ (೧೬ ಶ.)ನಿಂದ ಪ್ರಚಾರಗೊಳಿಸಲ್ಪಟ್ಟಿತು. ವಿಜಾಪುರದ ೨ನೆಯ ಇಬ್ರಾಹಿಮ ಆದಿಲಶಹನೂ ಧ್ರುಪದ ಹಾಡುಗಾರಿಕೆಯ ಪ್ರವರ್ತಕರಲ್ಲಿ ಒಬ್ಬನಿದ್ದನು. ಸ್ವಾಮಿ ಪ್ರಜ್ಞಾನಂದ, ಜಯದೇವ ಠಾಕೂರ, ಪಂಡಿತ ರತಂಜನಕರಾದಿ ಸಂಗೀತಜ್ಞರು ಖಯಾಲ ಹಾಡುಗಾರಿಕೆಯ ಉಗಮವನ್ನು ಮೇಲೆ ಉಲ್ಲೇಖಿಸಿದ ಮಾರ್ಗಗೀತಗಳಲ್ಲಿ, ಶಾರ್ಙ್ಗದೇವನು ಬಣ್ಣಿಸಿದ ರೂಪಕ ಪ್ರಬಂಧದ ಹಾಡುಗಾರಿಕೆಯಲ್ಲಿ ಗುರುತಿಸಿರುವರು. ಹೆಚ್ಚಿನ ವಿವರಗಳಿಗಾಗಿ ಸ್ವಾಮಿ ಪ್ರಜ್ಞಾನಂದರ ಭಾರತೀಯ ಸಂಗೀತದ ಐತಿಹಾಸಿಕ ಅಭ್ಯಾಸವೆಂಬ ಗ್ರಂಥ (ಇಂಗ್ಲಿಷ)ವನ್ನು ನೋಡಬಹುದು.

ಖಯಾಲ ಅಂದರೆ ಕಲ್ಪನೆ. ಕಲ್ಪನಾವಿಲಾಸವೆಂದರೂ ಸಲ್ಲುವದು. ಹಾಡುಗಾರಿಕೆಯ ನಿಷ್ಠುರನಿಯಮಗಳಿಂದ ಮುಕ್ತವಿರುವದರಿಂದ ಗಾಯಕನಿಗೆ ತನ್ನ ಕೌಶಲ್ಯವನ್ನು ತೋರಿಸಲು ವಿಶೇಷ ಅವಕಾಶವಿರುವದು. ಖಯಾಲ ಹಾಡುಗಾರಿಕೆಗೆ ಕಡಿಮೆ ಅಕ್ಷರಗಳಿರುವ ಚಿಕ್ಕ ಕೃತಿಗಳು ಬೇಕು. ಮೇಲೆ ಉದಾಹರಿಸಿದ ಕೆಲವು ವಚನ ಉಗಾಭೋಗಗಳು ಈ ಬಗೆಯ ಕೃತಿಗಳಿರುವುದನ್ನು ಇಲ್ಲಿ ನೆನೆಯಬಹುದು. ಉಪಲಬ್ಧವಿರುವ ಎಲ್ಲ ವಚನ ಉಗಾಭೋಗಗಳು ಈ ಬಗೆಯ ಹಾಡುಗಾರಿಕೆಗೆ ಒಗ್ಗಲಾರವೆಂಬದು ಸ್ಪಷ್ಟವಿದೆ. ಕೆಲವು ಗಮಕ ಪದ್ಧತಿಯಿಂದ, ಕೆಲವು ಕೇವಲ ಪಾಠ್ಯವೆಂದು, ಕೆಲವು ಖಯಾಲ ಹುಡುಗಾರಿಕೆಗೆ ಹೊಂದಿಕೊಳ್ಳುವಂತಿವೆ. ಸಂಶೋಧನ ಪ್ರಯೋಗಗಳು ಈ ಬಗೆಯ ವರ್ಗೀಕರಣದೊಂದಿಗೆ ಸಾಗುವದು ಅಗತ್ಯವಿದೆ. ಖಯಾಲ

ಪದ್ಧತಿ ಮತ್ತು ದಕ್ಷಿಣಾದಿ ಪಲ್ಲವಿ ಹಾಡುಗಾರಿಕೆಯಲ್ಲಿ ವ್ಯತ್ಯಾಸವಿಲ್ಲವೆಂಬ ಅಭಿಪ್ರಾಯವಾದರೂ ಆ ಸಂದರ್ಭದಲ್ಲಿ ಗಮನಾರ್ಹವಿದೆ.

ಸುಳಾದಿಗಳು—ಗೀತ, ವಾದ್ಯ ನೃತ್ಯಗಳಿಂದ ಕೂಡಿದ ಸಂಗೀತವೆ ನಿಜವಾದ ಸಂಗೀತ. ತೌರ್ಯತ್ರಯವೆನ್ನುವುದು ಇದಕ್ಕೇನೆ. ನರ್ತನವು ಭಾವಾಧಿಕ್ಯದ ಪರಮೋಚ್ಚ ಮೆಟ್ಟಲು. ಭಕ್ತನಿಗೆ "ಮಲಗಿ ಪರಮಾದರದಿ ಪಾಡಲು ಕುಳಿತು ಕೇಳುವೆ" ಎಂದು ಹೇಳಿದ ಪರಮಾತ್ಮನು "ನಲಿದರೆ ಒಲಿವೆ" ಎಂದಿರುವದರಿಂದ ಭಕ್ತಿಸಾಹಿತ್ಯದಲ್ಲಿ ನರ್ತನಕ್ಕೆ ಮೇಲ್ಮಟ್ಟದ ಸ್ಥಾನವಿದೆ. ಶಾಸ್ತ್ರ ಒಂದೇ ಇದ್ದರೂ ಕಚೇರಿಸಂಗೀತಕ್ಕೂ ನರ್ತನಸಂಗೀತಕ್ಕೂ ಅಂತರವಿದೆ. ಕಚೇರಿಸಂಗೀತದಲ್ಲಿ ಹಾಡುಗಾರಿಕೆಯ ನಯ ನಾಜೂಕುಳಿಗೆ ಪ್ರಾಧಾನ್ಯವಿರುತ್ತದೆ. ಅಲ್ಲಿ ತಾಲ ನವವಧುವಿನಂತೆ ಗೀತವನ್ನು ಅನುಸರಿಸಿ ಸಾಗುತ್ತದೆ. ನರ್ತನದಲ್ಲಿ ತಾಲಕ್ಕೆ ಪ್ರಾಧಾನ್ಯ. ಗೀತವು ತಾಲಾನುಗವಿರುತ್ತದೆ. ಅಲಂಕಾರ ಆಲಾಪಗಳಿಗೆ ಅವಕಾಶ ತೀರ ಕಡಿಮೆ. ಸುಳಾದಿ ಗೀತಗಳು ಈ ಬಗೆಯವು.

ಸುಲಭ-ಹಾದಿ ಸುಳಾದಿ ಎಂದು ಸುಳಾದಿಯ ವ್ಯುತ್ಪತ್ತಿಯನ್ನು ಹೇಳುವದುಂಟು. ಸೂಡಾಲಿಯ ಕೊನೆಯವೆರಡು ಅಕ್ಷರಗಳ ಸ್ಥಾನಪಲ್ಲಟನೆಯಿಂದ ಸುಳಾದಿಯಾಗಿದೆಯೆಂಬ ಇನ್ನೊಂದು ಊಹೆ ಇದೆ. ಸುಲಭವಾದ ಹಾದಿಯೆ ಸುಳಾದಿಯೆಂಬುದು ಕಲ್ಪಕತೆಯ ಕುರುಹಾಗಬಹುದೆ ಹೊರತು ಆ ರೀತಿ ಸುಳಾದಿಯ ವ್ಯುತ್ಪತ್ತಿಯನ್ನು ಸಾಧಿಸುವುದು ಸುಲಭವಲ್ಲ. ಪ್ರಬಂಧಗಳಲ್ಲಿ ಆಲಿಯೆಂಬ ಜಾತಿ ಇದ್ದಿತಾದ್ದರಿಂದ ಸೂಡಾಲಿಯು ಸೂಡ ಮತ್ತು ಆಲಿಗಳ ಕೂಡಿಕೆಯಿಂದಾಗಿರಬಹುದಾಗಿದೆ? ಹೀಗಿದ್ದರೆ ಈ ಸೂಡ ಏಳೆ ಮೊದಲಾದ ಎಂಟು ಶುದ್ಧ ಪ್ರಬಂಧಗಳಿಗೆ ಸಂಬಂಧಿಸುವುದು. ಇವುಗಳೊಂದಿಗೆ ಆಲಿಪ್ರಬಂಧಗಳನ್ನು ಸೇರಿಸಿ ಹಾಡುವ ಸಂಪ್ರದಾಯವಿದ್ದಿತು. ಸುಳಾದಿಗಳು ಇಂಥವಲ್ಲ. ಸೂಳ್ ಎಂದರೆ ಕ್ರಮ. ಸುಳಾದಿ ತಾಳಗಳಿಗೆ ಕ್ರಮವಿದೆ. ಆದಿಗೆ ತಜ್ಜನ್ಯ, ತತ್ಸಮ ಮುಂತಾದವು ಎಂಬರ್ಥಗಳಿವೆ. ಹಿಂದುಸ್ತಾನಿ ದಕ್ಷಿಣಾದಿ ಎನ್ನುವಾಗ ಅದಕ್ಕೆ ರೀತಿ, ಪದ್ಧತಿ ಎಂಬ ಅರ್ಥ ಬರುತ್ತದೆ. ಸೂಳ್-ಗೆ ಆದಿ ಸೇರಿ ಸುಳಾದಿಯಾಗಿರಬಹುದೇ? ಇದಾದರೂ ಸರಿಯೆನಿಸದು. ಸೂಡಕ್ಕೆ ವಿಶಿಷ್ಟ ಜಾತಿಯ ಪ್ರಬಂಧಗಳ ಕಟ್ಟು ಅಥವಾ ಗುಂಪು ಎಂಬರ್ಥವಿದೆ. ಸೂಳ್-ಗೆ ಈ ಅರ್ಥವಿಲ್ಲ. ತಾಲ ಸೂಚಕ ಅರ್ಥವೂ ಇಲ್ಲ.

ಸುಳಾದಿಯು ಸೂಡ (ಸಾಲಗ) ಆದಿಗಳ ಕೂಡಿಕೆಯಿಂದಾಗಿದೆ. ಸೂಡ+ಆದಿ ಸೂಡಾದಿ-ಸುಳಾದಿ, ಹೀಗೆ. ಕನ್ನಡದಲ್ಲಿ ಡಕಾರಕ್ಕೆ ಳಕಾರದೇಶವಾಗುವದುಂಟು. ಉದಾಹರಣೆಗಾಗಿ ಕಾಡುಕಿಚ್ಚು-ಕಾಳ್ಕಿಚ್ಚು, ಕೋಡುಕುಟ್ಟು-ಕೋಳ್ಕುಟ್ಟು, ದಾಡಿಮ-ದಾಳಿಂಬ, ಕೂಷ್ಮಾಂಡ-ಕುಂಬಳ, ಝುಗಡೆ-ಝುಗಳೆ ಶಬ್ದಗಳನ್ನು ನೋಡಬಹುದು. ಸೂಡಾದಿಯು ಸುಳಾದಿಯಾಗಿರುವದು ಈ ರೀತಿಯಲ್ಲಿ.

ದಾಸಸಾಹಿತ್ಯದಲ್ಲಿಯ ಸುಳಾದಿಗೀತಗಳಿಗೂ ಸಾಲಗಸೂಡಗೀತಗಳಿಗೂ ಇರುವ

ಸಂಬಂಧ ತಾಲಗಳ ಮಟ್ಟಿಗೆ. ತಾಲಗಳಿಗೆ ಇಂತಿಷ್ಟೆ ಎಂಬ ಮಿತಿಯಿಲ್ಲ. ಲಾಕ್ಷಣಿಕರು ಮಾರ್ಗದೇಶಿಯೆಂಬ ಎರಡು ಬಗೆಯ ತಾಲಗಳನ್ನು ಹೇಳಿರುವರು. ಮಾರ್ಗಸಂಗೀತದೊಡನೆ ಮಾರ್ಗತಾಲಗಳು ಲುಪ್ತವಾದವು. ಶಾರ್ಙ್ಗದೇವನು ೧೨೦ ಬಗೆಯ ದೇಶೀ ತಾಲಗಳನ್ನು ಹೇಳಿರುವನು. ಇತರರು ಚಚ್ಚತ್ಪುಟಾದಿ ೫ ಮಾರ್ಗತಾಲಗಳನ್ನು ಸೇರಿಸಿ ೧೦೮ ತಾಲಗಳನ್ನು ಹೇಳಿರುವರು. ಶಾರ್ಙ್ಗದೇವಾದಿ ಪ್ರಾಚೀನ ಲಾಕ್ಷಣಿಕರು (ಸಾಲಗ) ಸೂಡಗೀತಗಳಿಗೆ ಹೇಳಿರುವ ತಾಳಗಳು ಇವುಗಳಲ್ಲಿಯವು. ಇವುಗಳ ಸ್ಥಳದಲ್ಲಿ ಹಿಂದಿನಿಂದ ಬಂದ ಮತ್ತು ಸದ್ಯ ಪ್ರಚಾರದಲ್ಲಿರುವ ಧ್ರುವ, ಮಟ್ಟ, ರೂಪಕಾದಿ ಸಪ್ತತಾಲಗಳ ಉಲ್ಲೇಖ ೧೬ನೆಯ ಶತಮಾನದ ಪ್ರಾರಂಭದಲ್ಲಿ ಆಗಿಹೋದ ಪುಂಡರೀಕವಿಠಲನೆಂಬ ಲಾಕ್ಷಣಿಕನ ನರ್ತನನಿರ್ಣಯವೆಂಬ ಗ್ರಂಥದಲ್ಲಿ ಮೊದಲು ಸಲ ಕಂಡು ಬರುತ್ತದೆ. ಸಾಲಗಸೂಡ (ಸೂಡಾದಿ/ಸುಳಾದಿ) ಗೀತಗಳಿಗೆ ಕಡ್ಡಾಯವಾಗಿ ಬಳಸಬೇಕಾದುದರಿಂದ ಇವುಗಳಿಗೆ ಸುಳಾದಿ ತಾಳಗಳೆಂಬ ಹೆಸರುಂಟಾಯಿತು. ಕಾಲಾಂತರದಲ್ಲಿ ಪ್ರಚಾರದಲ್ಲಿದ್ದ ಇತರ ತಾಳಗಳು ಲುಪ್ತವಾಗಲು ಅವುಗಳಿಂದ ಬೇರ್ಪಡಿಸಿ ಹೇಳುವ ಅವಶ್ಯಕತೆ ಇಲ್ಲದಂತಾಗಿ ಇವುಗಳಿಗೆ ಅಂಟಿಸಿದ ಸುಳಾದಿ ಪೂರ್ವಪದವು ಇಲ್ಲದಂತಾಯಿತು.

ಸುಳಾದಿ ತಾಳಗಳೊಂದಿಗೆ ಮಾರ್ಗ ಮತ್ತು ಇತರ ದೇಶಿ ತಾಳಗಳು ೧೭ ನೆಯ ಶತಮಾನದಲ್ಲಿ ಸಹ ಬಳಕೆಯಲ್ಲಿದ್ದವೆಂಬುದನ್ನು "ಚಚ್ಚತ್ಪುಟಾದ್ಯೈ....ಹರಿನಂದನ ನಂದಿನಂದನಾದ್ಯೈರಪಿ ಸೂಲಾದಿರನ್ಯಕೈಶ್ಚ ತಾಲೈಃ" ಈ ಅವತರಣಿಕೆಯಲ್ಲಿ ಕಾಣಬಹುದು. ಇದು ರಾಮಭದ್ರಾಂಬೆಯ ರಘುನಾಥಾಭ್ಯುದಯ ಕಾವ್ಯದಲ್ಲಿ ನರ್ತನ ಪ್ರಸಂಗವನ್ನು ಬಣ್ಣಿಸುವ ಪದ್ಯಗಳಲ್ಲಿಯದು. ಇದು ಸಂಗೀತಸುಧಾಕಾರ ತಂಜಾವರದ ಅರಸು ರಘುನಾಥನಾಯಕನ (೧೬೧೪–೨೮) ಚರಿತ್ರಕಾವ್ಯ. ರಾಮಭದ್ರಾಂಬೆ ಆತನ ಉಪಪತ್ನಿ. ಲೋಕಪ್ರಿಯವಿರುವ ಕೂಚಿಪುಡಿ ನೃತ್ಯದ ಪ್ರವರ್ತಕರಲ್ಲಿ ಇವಳೊಬ್ಬಳು. ಚಚ್ಚತ್ಪುಟಾದಿಗಳು ಮಾರ್ಗತಾಲಗಳು. ಹರಿನಂದನಾದಿಗಳು ದೇಶಿತಾಳಗಳು. ಇವೆರಡರಿಂದ ಬೇರ್ಪಡಿಸಿ ಸುಳಾದಿತಾಳಗಳನ್ನು ಉಲ್ಲೇಖಿಸಿರುವಳು, ಆಕೆ.

ದಾಸಸಾಹಿತ್ಯದಲ್ಲಿಯ ಸುಳಾದಿ ಗೀತಗಳು ಸಾಲಗಸೂಡಗೀತಗಳಿಗೆ ಹೇಳಿದ ಕ್ರಮವಿಶಿಷ್ಟ ತಾಲಗಳನ್ನು ಅನುಸರಿಸಿರುವದರಿಂದ ಅವುಗಳಿಗೆ ಸುಳಾದಿ ತಾಳಗೀತ ಅಥವಾ ಸಂಕ್ಷೇಪವಾಗಿ ಸುಳಾದಿಗಳೆಂಬ ಹೆಸರುಂಟಾಗಿರಲಿಕ್ಕೆ ಸಾಕು. ಸಾಲಗಸೂಡ ಗೀತಗಳು ಇವೇ ತಾಲಗಳಲ್ಲಿದ್ದರೂ ರಚನೆಯಲ್ಲಿ ಇವು ಬೇರೆ, ಸುಳಾದಿಗೀತಗಳು ಬೇರೆ. ಪ್ರಾರಂಭದಲ್ಲಿ ಧ್ರುವಪದ/ಪಲ್ಲವಿ, ಅಂತರ/ನುಡಿ. ಆಭೋಗ ಮತ್ತು ಧ್ರುವ-ಮಟ್ಟಾದಿ ಸುಳಾದಿ ಸಪ್ತ ತಾಳಗಳಲ್ಲಿ, ಇವುಗಳಲ್ಲಿಯ ಒಂದೆ ತಾಳದಲ್ಲಿ, ಹಲವು ತಾಳಗಳಲ್ಲಿ ಸಾಲಗಸೂಡಗೀತಗಳ ರಚನೆ ಇರುತ್ತದೆ. ದಾಸಸಾಹಿತ್ಯದಲ್ಲಿಯ ಸುಳಾದಿ ತಾಳಗೀತಗಳಲ್ಲಿ ಒಂದೊಂದು ಖಂಡವು ಒಂದೊಂದು ತಾಳದಲ್ಲಿರುತ್ತದೆ. ಉದ್ಗ್ರಾಹ, ಧ್ರುವ, ಆಭೋಗ ಇಲ್ಲವೆ ಉಗಾಭೋಗಗಳಲ್ಲಿರುವಂತೆ ಉದ್ಗ್ರಾಹ ಆಭೋಗ(ಧ್ರುವಯುಕ್ತ)

ಗಳಿಂದ ಕೂಡಿರುತ್ತದೆ. ಮುಕ್ತಕದಂತೆ ಸ್ವತಂತ್ರವಿರುತ್ತದೆ. ಅಂದರೆ ಅರ್ಥಗ್ರಹಣಕ್ಕೆ ಪೂರ್ವಾಪರ ಖಂಡಗಳ ಅವಶ್ಯಕತೆ ಇರುವುದಿಲ್ಲ. ಮೊದಲನೆಯ ಖಂಡವು ಧ್ರುವ ತಾಲದಿಂದ ಪ್ರಾರಂಭವಾಗಿ ಮುಂದಿನ ಖಂಡಗಳು ಕ್ರಮೇಣ ಮಟ್ಟ, ಅಟ, ರೂಪಕ, ಝಂಪೆ, ಆದಿ, ಏಕತಾಲಗಳಲ್ಲಿರುತ್ತವೆ. ಕೊನೆಗೆ ಎರಡು ಪಾದಗಳ ಜತೆ ಇರುತ್ತದೆ. ಜತೆಗೆ ತಾಲನಿರ್ದೇಶವಿರುವುದಿಲ್ಲ. ತಾಲಗಳ ಸಂಖ್ಯೆ ಮತ್ತು ಕ್ರಮದಲ್ಲಿ ಅಲ್ಲಲ್ಲಿ ವ್ಯತ್ಯಾಸಗಳು ಕಂಡುಬರುವುವು. ಆದರೆ ಮೊದಲಿನವೆರಡು ಖಂಡಗಳು ಧ್ರುವ-ಮಟ್ಟ ಗಳಲ್ಲಿರುತ್ತವೆ. ಖಂಡಗಳಲ್ಲಿಯ ಪಾದಗಳಿಗೆ ಇಂತಿಷ್ಟೆಯೆಂಬ ಮಿತಿಯಿಲ್ಲ. ಸಾಮಾನ್ಯ ವಾಗಿ ಒಂದು ಖಂಡದಲ್ಲಿ ೫ರಿಂದ ೧೦ವರೆಗೆ ಪಾದಗಳಿರುತ್ತವೆ.

ತಾಲ/ನರ್ತನ ಗೀತಗಳು ತಾಲ ಛಂದಸ್ಸನ್ನು ಅಂದರೆ ತಾಲದ ಆವರ್ತದಲ್ಲಿಯ ಮಾತ್ರೆ ಮತ್ತು ಅವುಗಳ ವಿಭಾಗಗಳನ್ನು ಅನುಸರಿಸುತ್ತವೆ. ಆ ರೀತಿ ನರ್ತಕನ ಹೆಜ್ಜೆಗಳು ಬೀಳಬೇಕು, ಅಂಗಾಂಗಗಳ ವಿನ್ಯಾಸವಾಗಬೇಕು ಮತ್ತು ಗೀತಗಳಲ್ಲಿಯ ಪದಗಳ ಉಚ್ಚಾರಣೆಯಾಗಬೇಕು. ಈ ಬಗೆಯ ಗೀತಗಳಲ್ಲಿ ಹಲವು ಕೇವಲ ಪಾಟಾ ಕ್ಷರ (ಬೋಲ/ಗತ್ತು) ಅಂದರೆ ತಾಲಗಳಲ್ಲಿ ಬಳಸಲಾಗುತ್ತಿದ್ದ ತೈಧಿತ್ತಾಂ ತೈ ಧಿತ್ತಾಂ ಮೊದಲಾದ ಅರ್ಥಹೀನ ಶಬ್ದಗಳಿಂದ ಕೂಡಿರುತ್ತವೆ. ಕೆಲವು ಅರ್ಥಯುಕ್ತ ಮತ್ತು ಇಂಥ ಅರ್ಥಹೀನ ಶಬ್ದಗಳಿಂದ ಕೂಡಿರುತ್ತವೆ. ಇದೊಂದು ಎರಡನೆಯ ಬಗೆಯ ಗೀತದ ಉದಾಹರಣೆ, ಯಕ್ಷಗಾನ ಆಟಗಳಲ್ಲಿ ಬರುತ್ತದೆ—

> ತತ್ತೋ ತಕ್‌ಡ್‌ಕಡ್ತಧಿಕ್ಡ್‌ತಕ। ಅರುದಿನ ಮರುಮಗ ವಿಘ್ನವಿನಾಯಕ।
> ಎನಕಿಟ ಆರಳುವ ಗಣಪತಿ ಝೋ ಝೋ ಜಿಕ್ಕಿಟ ಉದಕಿರಣಂ . ॥

ಇದಿನ್ನೊಂದು, ಉತ್ತರ ಭಾರತದಲ್ಲಿ ಪ್ರಚಾರದಲ್ಲಿದೆ—

> ಯಸ್ತ್ರಂ ದೇವಾ ನಮಾಮಿ ಸಿರಸಾ ಹತ ಹತ ಕುಕು।
> ತಹ ತಹ ಕುಕು ಕುಕು ವಿದ್ಯಾರಂಭೇ ಹರತು ವಿಘ್ನಂ...॥

ತಾಲವೈಚಿತ್ರ್ಯ, ಗತಿವೈಚಿತ್ರ್ಯ, ಇದಕ್ಕನುಗುಣವಾದ ಗೀತ, ವಾದ್ಯ, ನರ್ತ ಕನ ಪಾದವಿನ್ಯಾಸ, ಹಸ್ತವಿನ್ಯಾಸ, ದೃಷ್ಟಿವಿನ್ಯಾಸ, ಇತ್ಯಾದಿಗಳ ಮಧುರ ಮಿಲ ನವು ಪ್ರೇಕ್ಷಕ ವರ್ಗಕ್ಕೆ ಒಂದು ಬಗೆಯ ಅನಿರ್ವಚನೀಯ ಆನಂದವನ್ನುಂಟುಮಾಡು ವುದು. ಸುಳಾದಿಗಳು ಇಂಥವು. ದಾಸರು ಹತ ಹತ ಕುಕು ಕುಕು ಮೊದಲಾದ ಅರ್ಥ ಹೀನ ಶಬ್ದಗಳನ್ನು ತೆಗೆದುಹಾಕಿ ಅವುಗಳ ಸ್ಥಳದಲ್ಲಿ ಅರ್ಥಯುಕ್ತ ಭಗವಂತನ ಸ್ತೋತ್ರಪರ ಶಬ್ದಗಳನ್ನು ಸೇರಿಸಿರುವರು. ಇದೇ ಅವುಗಳ ವೈಶಿಷ್ಟ್ಯ. ಜತೆ ಪಾದ ಗಳಿಗೆ ತಾಳವನ್ನು ಹೇಳಿಲ್ಲ. ಅವು ಮುಗಿತಾಯ ಸೂಚಕವಿದ್ದು ಏರಿಕೆಯ ಸ್ವರದಲ್ಲಿ (ಕೆ ಸೆಂಡೊ) ಹಾಡಿಕೊಂಡು ಗೀತವನ್ನು ಮತ್ತು ಅದರೊಂದಿಗೆ ನರ್ತನವನ್ನು ಮುಗಿಸುತ್ತಿದ್ದರೆಂದು ತೋರುತ್ತದೆ. ಸುಳಾದಿಗಳ ಇದೊಂದು ಉದಾಹರಣೆ. ಐದು ತಾಳಗಳಲ್ಲಿದೆ—

ಧ್ರುವತಾಳ

ಎಲೆ ಎಲೆ ಸಿಡಿಲೆ, ಮಿಂಚೆ, ಗರ್ಜಿಸದಿರಿ ನೀವು।
ಎಲೆ ಎಲೆ ಮೇಘರಾಜಾ, ಮಳೆಗರೆಯದಿರು।
ಎಲೆ ಎಲೆ ಭೂದೇವಿ, ನವರತುನಗಳಿಂದ:
ನೆಲೆಕಟ್ಟು ಕಟ್ಟಿಕೊಂಡು ಥಳಥಳಿಸುತಲಿರು।
ಹುಲಿಯುಗುರು ಅರಳೆಲೆ ಮಾಗಾಯಿ ಕಸಕಣ।
ಘುಲು ಘುಲು ಘುಲುಕೆಂಬ ಕಾಲಪೆಂಡೆಯನಿಟ್ಟು।
ಬಲರಾಮನ್ನಪುರಂದರವಿಠಲ ಗೋಪಾಲಕೃಷ್ಣ।
ನಲಿಯುತ ಅಂಬೆಗಾಲನಿಕ್ಕುತಬರುತಾರೆ ॥೧॥

ಮುಂದಣ ಮೂರು ಖಂಡಗಳು ಕ್ರಮದಿಂದ ಮಟ್ಟ, ತ್ರಿಪುಟ, ಆದಿತಾಳ ಗಳಲ್ಲಿದ್ದು, ನಂತರ—

ರೂಪಕತಾಳ

ನೀಲಮೇಘಶ್ಯಾಮ ಕೋಮಲನೆ।
ಹಾಲು ಕುಡಿಯಬಾರೊ ಹಸಿದೆಯ್ಯ ರಂಗಯ್ಯ।
ಹಾಲು ಮೊಸರು ಬೆಣ್ಣೆ ಹಾವಳಿಗಾರನೊ।
ಶ್ರೀಲೋಲ ಪುರಂದರವಿಠಲ ಗೋಪಾಲಕೃಷ್ಣ ॥೫॥

ಜತೆ

ಅನುದಿನ ಬಾಲಗೋಪಾಲ ಕೃಷ್ಣನೇ ನಿನ್ನ।
ನೆನೆವಂತೆ ಮಾಡೆನ್ನ ಪುರಂದರವಿಠಲ॥

ನರ್ತನವು ಸಂಗೀತದ ಒಂದು ಪ್ರಮುಖ ಅಂಗವಿದ್ದುದರಿಂದ ಮತ್ತು ಅದಿಲ್ಲದೆ ಸಂಗೀತಸೇವೆಯು ಪೂರ್ಣವಾಗದೆಂಬ ಭಾವನೆ ಇದ್ದುದರಿಂದ ದಾಸರು ಧ್ರುವ, ಮಟ್ಟ, ರೂಪಕಾದಿ, ಸುಳಾದಿ ಸಪ್ತತಾಳಗಳ ಗಣನೆಗೆ ಒಡಂಬಡುವ ಈ ಗೀತಗಳನ್ನು ರಚಿಸಿ ನರ್ತನಕ್ಕೂ ಒಂದು ಸ್ಥಾನವನ್ನು ಕಲ್ಪಿಸಿಕೊಟ್ಟಿರುವರು. ದಾಮೋದರ ಪ್ರಣೀತ ಸಂಗೀತದರ್ಪಣದಲ್ಲಿ ಸುಳಾದಿ ನರ್ತನದ ವಿವರಗಳಿದ್ದು, ಅದರಲ್ಲಿ ಧ್ರುವತಾಲದಿಂದ ಏಕತಾಲದ ಪರ್ಯಂತ ಪ್ರತಿಯೊಂದು ಖಂಡದಲ್ಲಿ ಪ್ರದರ್ಶಿಸಬೇಕಿದ್ದ ಅಂಗಾಂಗಗಳ ವಿನ್ಯಾಸ, ಭಾವಪ್ರಕಟನೆ, ಇತ್ಯಾದಿ ವಿವರಗಳಿವೆ. ಈ ದಾಮೋದರನು ಮೊಗಲ ಬಾದಶಹ ಜಹಾಂಗೀರನ ಆಶ್ರಿತನಿದ್ದನು. ಈತನ ತಂದೆ ಲಕ್ಷ್ಮೀಧರನು ವಿಜಯ ನಗರದ ಅರಸು ತಿರುಮಲರಾಯನ (೧೫೭೦–೭೨) ಆಸ್ಥಾನಪಂಡಿತ ಮತ್ತು ಸಂಗೀತ ವಿದ್ವಾಂಸನಿದ್ದನು. ಜಯದೇವನ ಗೀತಗೋವಿಂದಕ್ಕೆ ಟೀಕೆಯನ್ನು ಬರೆದಿರುವನು. ಸ್ವತಃ ದಾಮೋದರನಿಗೆ ಚತುರನೆಂಬ ಬಿರುದಿದ್ದಿತು. ಕವಿಗಳಲ್ಲಿ ಕವಿಚಕ್ರವರ್ತಿ ಹೇಗೊ ಹಾಗೆ ಸಂಗೀತಜ್ಞರಲ್ಲಿ ಚತುರ ಬಿರುದಿದ್ದಿತು. ನರ್ತನಕ್ಷೇತ್ರದಲ್ಲಿ ದಾಮೋ ದರನ ಅಭಿಪ್ರಾಯಗಳಿಗೆ ಇಂದಿಗೂ ಮನ್ನಣೆಯಿದೆ.

ಶೈವಭಕ್ತಿಸಂಪ್ರದಾಯದಲ್ಲಿ ಸುಳಾದಿಗಳಿದ್ದವೆಂಬುದು ಈ ಕೆಳಗಿನ ಅವತರಣಿಕೆಯಿಂದ ವ್ಯಕ್ತವಾಗುವದು—

ಹರನಾಗ ಪ್ರಭುವ ಕರೆದೀ ಮರ್ತ್ಯಲೋಕದಿ ।
ಕರವೂಃ ಸುಜ್ಞಾನಿ ನಿರಹಂಕಾರರು ನಿನ್ನ ।
ಚರಣಕಮಲಗಳನು ಹಾಡಿಕೊಂಡಿರ್ಪರು ।
ನಿರುತದಿಂದವರ್ಗೆ ಪ್ರಸನ್ನನಾಗುತೆ ನೀನು ।
ದೊರೆಪಟ್ಟಗಳನಾಳಿ ಮುಕ್ತಿಮಾರ್ಗವ ಪೇಳಿ ।
ಶರಣಜಾಲವ ಮಾಡಿ ಮಾಯೆಯನೀಡಾಡಿ ।

—ಇತ್ಯಾದಿ, ಮರಿರಾಚವಟ್ಟೇಶನ (೧೬೫೦) ಪ್ರಭುನಟನ ತಾರಾವಳಿ (೨೭ ಪದ್ಯಗಳಿರುವ ಕೃತಿ)ಯಲ್ಲಿದೆ. ಗ್ರಂಥಕರ್ತನು ಇದಕ್ಕೆ "ಪ್ರಭುದೇವನು ನಟಿಸಿದ ಶೃಂಗಾರದ ನುಡಿ" ಎಂದಿರುವನು. ಹಾಡಿನ ರೂಪದಲ್ಲಿರುವದರಿಂದ ಮತ್ತು ನರ್ತನಕ್ಕೆ ಸಂಬಂಧಿಸಿರುವದರಿಂದ ಈ ಪದ್ಯಗಳಾದರೂ ಸುಳಾದಿಗಳಿಗೆ ಸೇರಿದ ಗೀತಜಾತಿಗಳೆಂದೆ ಹೇಳಬೇಕಾಗುವದು.

ಇದಿಷ್ಟು ವಚನ, ಉಗಾಭೋಗ, ಸುಳಾದಿಗಳ ಮೂಲ ಮತ್ತು ರಚನೆಯ ಹಿನ್ನೆಲೆ. ವಚನ ಉಗಾಭೋಗಗಳನ್ನು ಹಿಂದುಸ್ತಾನಿ ಖಯಾಲ ಪದ್ಧತಿಯಲ್ಲಿ ಹಾಡಬಹುದೆಂಬ ಸೂಚನೆಯು ಸಂಗೀತದಲ್ಲಿ ಪರಿಶ್ರಮವಿರುವ ಸಂಶೋಧಕರಿಗೆ ಒಂದು ಗಮನಾರ್ಹ ವಿಷಯವಿರುವಂತೆ ನರ್ತನದಲ್ಲಿ ಆಸ್ಥೆಯುಳ್ಳವರು ಸುಳಾದಿಗಳನ್ನು ಕುರಿತು ಸಂಶೋಧನ ನಡೆಸಿ ಯುಕ್ತವೆಂದು ಕಂಡುಬಂದವುಗಳನ್ನು ತಮ್ಮ ಕಾರ್ಯಕ್ರಮಗಳಲ್ಲಿ ಸೇರಿಸಿಕೊಳ್ಳಬಹುದಾಗಿದೆ. ಪ್ರತಿಭಾವಂತ ಕವಿಗಳು ಈ ಬಗೆಯ ಕೃತಿಗಳನ್ನು ರಚಿಸಿ ಕನ್ನಡದ ಗೀತಸಂಪತ್ತನ್ನು ಅಭಿವೃದ್ಧಿಗೊಳಿಸಬಹುದಾಗಿದೆ. ವಚನಗಳ ಮಟ್ಟಿಗೆ "ಕರುಳಿನ ವಚನಗಳನ್ನು" ರಚಿಸಿ ನಾಡಕವಿ ಬೇಂದ್ರೆ ಈಗಾಗಲೆ ಈ ದಿಸೆಯಲ್ಲಿ ಶ್ರೀಕಾರವನ್ನು ಹಾಕಿರುವರು. ಕರ್ನಾಟಕದ ನಿಜವಾದ ಮತ್ತು ವೈಶಿಷ್ಟ್ಯಪೂರ್ಣ ಸಂಸ್ಕೃತಿಯ ಏಳ್ಗೆಗೆ ಈ ಬಗೆಯ ಸಂಶೋಧನೆ ಪ್ರಯತ್ನಗಳ ಅಗತ್ಯವಿದೆ.

ಯಕ್ಷಗಾನ ಆಟದ ಮೂಲ ಮತ್ತು ಸ್ವರೂಪ*

ಯಕ್ಷಗಾನ ಆಟದ ಮೂಲ ಮತ್ತು ಸ್ವರೂಪಗಳನ್ನು ಕುರಿತು ಕನ್ನಡ ಸಾಹಿತ್ಯ ಗಗನದಲ್ಲಿ ನಕ್ಷತ್ರಗಳಂತೆ ಬೆಳಗಿದ, ಬೆಳಗುತ್ತಿರುವ, ಮುಳಿಯ ಕಾರಂತಾದಿ ಪ್ರಭೃತಿಗಳೂ ಇತರರೂ ತಮ್ಮ ಜ್ಞಾನ ಅನುಭವಗಳೊಂದಿಗೆ ಸಾಕಷ್ಟು ಪರಿಶ್ರಮಿಸಿದ್ದರೂ ಈ ಪ್ರಶ್ನೆ ಇಂದಿಗೂ 'ಯಕ್ಷಪ್ರಶ್ನೆ' ಆಗಿಯೆ ಉಳಿದಿದೆ. ಈ ದಿಸೆಯಲ್ಲಿ ಮುಂದೊಡ್ಡಿದ ಊಹೆ ಆಧಾರಗಳು ಇದನ್ನು ಮತ್ತಿಷ್ಟು ತೊಡಕಾಗಿಸಿವೆ. ಯಕ್ಷ-ಗಂಧರ್ವರಿಂದ ತೊಡಗಿ ಕಾವ್ಯ, ನಾಟಕ, ಸಂಗೀತ, ಮಾರ್ಗ, ದೇಶೀ ಜಾನಪದ, ಪೌರ, ಆರ್ಯ, ದ್ರಾವಿಡ, ಹೀಗೆ ಹತ್ತಾರು ವಿಷಯಗಳನ್ನು ಆಧರಿಸಿದ ತರ್ಕ-ವಿತರ್ಕಗಳು ಇದರಲ್ಲಿ ಸೇರಿಕೊಂಡಿವೆ.

ಈ ವಿಷಯಕ್ಕೆ ಸಂಬಂಧಿಸಿದ ಸಾಹಿತ್ಯದಲ್ಲಿ ಕಾರಂತರ 'ಯಕ್ಷಗಾನ ಬಯಲಾಟ' ಗ್ರಂಥ ತೀರ ಈಚೆಯದು. ನಾಟ್ಯಶಾಸ್ತ್ರಕಾರ ಭರತ ಮತ್ತು ಇತರರು ನಿರೂಪಿಸಿದ ಲಕ್ಷಣಗಳು ಇದರಲ್ಲಿ ಕಂಡುಬರುತ್ತಿದ್ದರೂ ಇದು ಜಾನಪದ ಕಲೆ; ಕರ್ನಾಟಕ ಅದರಲ್ಲೂ ಪಶ್ಚಿಮ ಕರಾವಳಿಯ ಉತ್ತರ-ದಕ್ಷಿಣ ಕನ್ನಡ ಮತ್ತು ಶಿವಮೊಗ್ಗಾ ಜಿಲ್ಲೆಗಳಿರುವ ಮಲೆನಾಡು ಇದರ ಜನ್ಮಸ್ಥಳ; ಇಲ್ಲಿಂದಲೆ ಈ ಕಲೆಯು ಕರ್ನಾಟಕದ ಇತರ ಭಾಗಗಳಿಗೆ, ಕರ್ನಾಟಕದ ಹೊರಗೆ ಸಹ ಚಾಚಿಕೊಂಡಿರಬೇಕು, ಎಂದು ಅವರು ಪ್ರತಿಪಾದಿಸಿರುವರು. ಕೃಷ್ಣ ಭಂಡಾರಿ ಕೃತ 'ಯಕ್ಷಗಾನ ಕೈಪಿಡಿ' ಇನ್ನೊಂದು ಗ್ರಂಥ. ಅವರು ಯಕ್ಷಗಾನದ ಹುಟ್ಟು ಹಬ್ಬುಗೆಗಳನ್ನು ಚರ್ಚಿಸಿಲ್ಲ. ತಮ್ಮ ಈ ಕೃತಿಗೆ ಮೂಲಾಧಾರವಾದ ಭರತಶಾಸ್ತ್ರದ ಹಾಗೂ ಪರಂಪರೆಯಿಂದ ಬಂದ ರೀತಿ ಅನುಭವಗಳ ವಿವೇಚನೆ ಎಂದಿರುವರು. ಯಕ್ಷಗಾನವನ್ನು ಕುರಿತಿರುವ ಇನ್ನಿತರ ಸಾಹಿತ್ಯ ಇವೆರಡರ ಮಧ್ಯವರ್ತಿಯಾಗಿದೆ.

ಯಕ್ಷಗಾನ ಆಟವಾದರೂ ಭರತಾದಿ ಲಾಕ್ಷಣಿಕರ ನಿರೂಪಣೆಗನುಸರಿಸಿ ಬೆಳೆದು ಬಂದ ಶಾಸ್ತ್ರೀಯ ಕಲೆ; ಕಾಲ ಪ್ರಭಾವದಿಂದ ಇಂದು ಜಾನಪದವಾಗಿದೆ; ಅತಏವ ಅದರ ಪುನರುಜ್ಜೀವನವಾದರೂ ಅದು ಬೆಳೆದುಬಂದ ರೀತಿಯಲ್ಲಿಯೆ ಆಗಬೇಕೆಂಬುದು ಈ ಲೇಖದ ಸಾರ.

ಇಂದು ಯಕ್ಷಗಾನವೆಂಬುದು ಗಾನ, ನರ್ತನ ಮತ್ತು ಆಂಗಿಕ, ವಾಚಿಕ ಅಭಿನಯಗಳಿಂದ ಕೂಡಿದ ಬಯಲಾಟ. ಸಂಸ್ಕೃತ ಅಥವಾ ಅಭಿಜಾತ 'ನಾಟಕ'ದಿಂದ ಬೇರ್ಪಡಿಸಿ ಹೇಳಲು ಇದಕ್ಕೆ ಮತ್ತು ತುಸು ಹೆಚ್ಚು ಕಡಿಮೆ ಈ ಜಾತಿಗೆ ಸೇರುವ ರೂಪಕಗಳಿಗೆ 'ಆಟ' ಎಂಬ ಹೆಸರು ಬಂದಿರಲಿಕ್ಕೆ ಸಾಕು. ಬಯಲಿನಲ್ಲಿ

* ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸಂ. ೫೫, ಸಂ. ೧-೨.

ಆಡುವದರಿಂದ ಬಯಲಾಟ, ಅಟ್ಟ (ಪ್ಲಾಟ್‌ಫಾರ್ಮ್) ಕಟ್ಟಿ ಆಡುವದರಿಂದ ಅಟ್ಟದಾಟ, ಕಥನಕಗಳು ಹೆಚ್ಚಾಗಿ ವಿಷ್ಣುವಿನ ದಶಾವತಾರಗಳಿಗೆ ಸಂಬಂಧಿಸಿರುವದರಿಂದ (?) ದಶಾವತಾರ ಆಟ, ಭಾಗವತ (ಸೂತ್ರಧಾರ) ನಿಗೆ ಪ್ರಮುಖ ಸ್ಥಾನವಿರುವದರಿಂದ ಭಾಗವತರಾಟಗಳೆಂಬ ಹೆಸರುಗಳಿವೆ. ಯಕ್ಷಗಾನ ಬಯಲಾಟ ಎನ್ನುವದರ ಬದಲು ಯಕ್ಷಗಾನ, ಯಕ್ಷಗಾನ ಪ್ರಬಂಧ, ಯಕ್ಷಗಾನ ಪ್ರಸಂಗ ಎನ್ನುವದುಂಟು. ಇವುಗಳಲ್ಲಿ ಮೊದಲನೆಯದು ಸಂದರ್ಭಾನುಸಾರ ಯಕ್ಷಗಾನ ಆಟಗಳಲ್ಲಿಯ ಗಾನಶೈಲಿ ಅಥವಾ ಸಮಗ್ರ ಆಟವನ್ನು ಸೂಚಿಸುತ್ತದೆ. ಪ್ರಬಂಧವೆಂದರೆ ಯಾವುದೊಂದು ಸಾಹಿತ್ಯಿಕಕೃತಿ. ಸಂಗೀತದಲ್ಲಿ ಗೇಯಕವನಗಳಿಗೆ ಈ ಹೆಸರಿದೆ. ಪ್ರಸಂಗವು ಇತಿಹಾಸ ಪುರಾಣಗಳಲ್ಲಿಯ ಯಾವುದೊಂದು ಘಟನೆಯನ್ನು ಸೂಚಿಸುತ್ತದೆ-ಅಂಗದ ಸಂಧಾನ, ಸುಭದ್ರಾಹರಣ, ಇತ್ಯಾದಿ. ಯಕ್ಷಗಾನ ಪರಿಭಾಷೆಯಲ್ಲಿ ಇದಕ್ಕೆ ಇನ್ನೊಂದು ವಿಶಿಷ್ಟಾರ್ಥ ಬಂದಿದೆ. ವೇಷ ಭೂಷಣ, ನರ್ತನಾದಿಗಳಿಲ್ಲದೆ ಕುಳಿತಲ್ಲಿಯೆ ಪಾತ್ರಧಾರಿಗಳು ರಸ-ಭಾವ ವಿನ್ಯಾಸಗಳೊಂದಿಗೆ ಪದ್ಯಕ್ಕೆ ತಕ್ಕ ಅರ್ಥ ಹೇಳಿ ಯಾವುದೊಂದು ಆಖ್ಯಾನವನ್ನು ಪ್ರದರ್ಶಿಸುವದುಂಟು. ಇದಕ್ಕೆ ಪ್ರಸಂಗ ಅಥವಾ ತಾಳ-ಮದ್ದಲೆ ಎನ್ನುವರು.

ಎರಡು ಭಾಗಗಳು

ಯಕ್ಷಗಾನ ಆಟದಲ್ಲಿ ಎರಡು ಭಾಗಗಳಿವೆ. ಮೊದಲನೆಯದಕ್ಕೆ ಪೂರ್ವರಂಗ; ಸಭಾಲಕ್ಷಣ, ಸಭಾವಂದನೆ, ಎನ್ನುವರು. ಎರಡನೆಯದು ಅಂದಿನ ಕಥೆ. ಪೂರ್ವರಂಗದಲ್ಲಿ ದೇವತಾಪೂಜೆ, ವಾದ್ಯಾದಿಗಳಪೂಜೆ, ಆರತಿ ಮೊದಲಾದವು ಆಗುವವು. ಇವೆಲ್ಲ ನೇಪಥ್ಯಗ್ರಹ(ಗ್ರೀನರೂಮ್)ದಲ್ಲಿ ಜರಗುವವು. ಬಯಲಾಟದ ರಂಗಸ್ಥಳವು ಪ್ರದರ್ಶನದ ಮಟ್ಟಿಗೆ ಮಿತವಿರುವುದರಿಂದ ಸಮೀಪದ್ದೊಂದು ಮನೆಯಲ್ಲಿ ಇವು ನಡೆಯುವವು. ಯಕ್ಷಗಾನ ಆಟದಲ್ಲಿ ಭಾಗವತನಿಗೆ ಮತ್ತು ಹಾಸ್ಯಗಾರನಿಗೆ (ಹನುಮನಾಯಕನಿಗೆ) ಪ್ರಾಧಾನ್ಯವಿದೆ. ಭಾಗವತನೇ ಇಲ್ಲಿನ ಸೂತ್ರಧಾರ. ನಾಟಕದಲ್ಲಿಯ ಸೂತ್ರಧಾರನಂತೆ ಈತ ಪ್ರಾರಂಭದಲ್ಲಿಷ್ಟೆ ಕಾಣಿಸಿಕೊಳ್ಳುವದಿಲ್ಲ. ಗ್ರೀನ ರೂಮಿನಲ್ಲಿಯ ಪೂಜೆಯಿಂದ ಪ್ರಾರಂಭಿಸಿ, ಕೊನೆಗೆ ಮಂಗಲವನ್ನು ಹಾಡಿ, ಮೇಳದವರನ್ನು ಮರಳಿ ಗ್ರೀನರೂಮಿಗೆ ಮುಟ್ಟಿಸುವವರೆಗೆ ಇವನಿರಲೇಬೇಕು. ಸಭೆಯ ಸನ್ಮಾನ, ಕಥಾನಿರೂಪಣೆ, ದಿಗ್ದರ್ಶನ, ಪಾತ್ರಪರಿಚಯ, ಇವೇ ಮೊದಲಾದ ಕಾರ್ಯಗಳ ಹೊಣೆ ಇವನಿಗೆ ಸೇರಿದೆ, ಹಾಸ್ಯಗಾರನು ಭಾಗವತನ ಬಲಗೈಯಂತಿರುವನು. ಕಥೆ ಪ್ರಾರಂಭವಾಗುವ ಮೊದಲು ಅನಂತರ ಪ್ರೇಕ್ಷಕರನ್ನು ನಗಿಸುವ ಹೊಣೆ ಈತನದು. ಪಾತ್ರಗಳೊಡನೆ ಭಾಗವತನನ್ನೂ ಪ್ರೇಕ್ಷಕರನ್ನು ಸಹ ತನ್ನ ಹಾಸ್ಯಕ್ಕೀಡು ಮಾಡುವನು. ನಾಟಕದಲ್ಲಿಯ ವಿದೂಷಕನಿಗೆ ಈ ಸ್ವಾತಂತ್ರವಿಲ್ಲ. ಸಾಮಾನ್ಯವಾಗಿ ಆತ ನಾಯಕನ ಮಿತ್ರನಾಗಿ ಕಾಣಿಸಿಕೊಳ್ಳುವನು.

ಗ್ರೀನರೂಮಿನ ವಿಧಿ ವಿಧಾನಗಳನ್ನು ಮುಗಿಸಿಕೊಂಡು ಭಾಗವತನೂ, ವಾದ್ಯ ವೃಂದದವರೂ, ಹಾಸ್ಯಗಾರನೂ ರಂಗವೇದಿಕೆಗೆ ಬರುವರು. ಆಗ ಶುಷ್ಕವಾದ್ಯವನ್ನು ಬಾರಿಸುವ ಸಂಪ್ರದಾಯವನ್ನು ಕೃಷ್ಣಭಂಡಾರಿ ನಿರ್ದೇಶಿಸಿರುವರು.[1] ಇದು ಗ್ರಂಥೋಕ್ತ ಸಂಪ್ರದಾಯ. ಗಾನನರ್ತನಗಳಿಲ್ಲದಿರುವ ಕೇವಲ ವಾದ್ಯವಾದನಕ್ಕೆ ಶುಷ್ಕ ವಾದ್ಯವೆನ್ನುವರು- ಭೂತಾಸುರರ ಉಚ್ಚಾಟನೆ, ವಿಘ್ನ ಶಾಂತಿಗಳಿಗಾಗಿ ಇದನ್ನು ಬಾಜಿಸುವರು. ಉದ್ದೇಶಕ್ಕನುಸರಿಸಿ ಕಿವಿಗಡಚಿಕ್ಕುವಂತೆ ಬಾರಿಸುವರು. ನಂತರ ಭಾಗವತನು ವಿನಾಯಕನ ಸ್ತುತಿ, ಇಷ್ಟ ದೇವತಾ ಸ್ತುತಿ, ಇತರ ದೇವತಾ ಸ್ತುತಿ ಸಭಾಪತಿಯ ಲಕ್ಷಣ, ಸಭಿಕರ ಲಕ್ಷಣ, ಮೊದಲಾದವನ್ನು ವಿವರಿಸುವನು. ಭಾಗವತ ಹಾಸ್ಯಗಾರರ ಸಂವಾದವಾಗುವದು. ಬಾಲಗೋಪಾಲರ ಕುಣಿತವಾಗುವದು ಸ್ತ್ರೀ ವೇಷಗಳ ನರ್ತನವಾಗುವದು. ಅನಂತರ ಭಾಗವತನು ಅಂದಿನ ಕಥಾನಕವನ್ನು ಪ್ರಸ್ತಾಪಿಸುವನು. ಇಲ್ಲಿಗೆ ಪೂರ್ವರಂಗ ಕೊನೆಗೊಂಡು ಆಟ ಪ್ರಾರಂಭವಾಗುವದು.

ಯಕ್ಷಗಾನ—ನಾಟಕ

ಸಂಸ್ಕೃತದ ದಶರೂಪಕಗಳಲ್ಲಿ ಇಂದು ನಮಗೆ ಹೆಚ್ಚಾಗಿ ನಾಟಕವೊಂದೆ ಪರಿಚಿತವಿದೆ. ಆದ್ದರಿಂದ ಯಕ್ಷಗಾನವನ್ನು ನಾಟಕದೊಂದಿಗೆ ಹೋಲಿಸುವುದುಂಟು. ಶಾಸ್ತ್ರೋಕ್ತವಿದ್ದರೂ ಲಕ್ಷಣಗಳಲ್ಲಿ ಎರಡೂ ಭಿನ್ನವಿವೆ. ನಾಟಕವು ದಶರೂಪಕಗಳಲ್ಲಿ ಶ್ರೇಷ್ಠವೆಂಬ ಮನ್ನಣೆ ಪಡೆದು ಕಾವ್ಯಶಾಸ್ತ್ರದ ಅಂಗವಾಗಿ ಬೆಳೆದಿದೆ. ಕವಿಗಳು ಹೆಚ್ಚಾಗಿ ನಾಟಕಗಳನ್ನೇ ಬರೆದಿರುವರು. ಯಕ್ಷಗಾನ ಆಟವು ರೂಪಕವಿದ್ದರೂ ಸಂಗೀತಶಾಸ್ತ್ರದ ಅಂಗವಾಗಿ ಗೇಯ|ಗೇಯ-ನರ್ತನ ಪ್ರಬಂಧವೆಂದು ಬೆಳೆದಿದೆ. ನರ್ತನ ಕಾರ್ಯಕ್ರಮದ ಪೂರ್ವರಂಗವೆ ಯಕ್ಷಗಾನ ಆಟದ ಪೂರ್ವರಂಗ. ಅಲ್ಲಿಯ ನಾಟ್ಯಾಚಾರ್ಯನೇ ಇಲ್ಲಿಯ ಭಾಗವತ. ಅಲ್ಲಿಯ ಹಾಸ್ಯಗಾರನೇ (ಆತನಿಗೆ ಪೇರಣಿ ಎನ್ನುತ್ತಿದ್ದರು) ಇಲ್ಲಿಯ ಹಾಸ್ಯಗಾರ, ಹನುಮನಾಯಕ, ಸಾರಥಿ. ನರ್ತಕರೆ ಪಾತ್ರಧಾರಿಗಳು. ನಾಟಕದಲ್ಲಿ ಕಥೆಯು ಪಾತ್ರಧಾರಿಗಳ ಮುಖಾಂತರ ಮುಂದುವರಿಯುತ್ತಿದ್ದರೆ ಯಕ್ಷಗಾನ ಆಟದಲ್ಲಿ ಭಾಗವತನ ನೇತೃತ್ವದಲ್ಲಿ ಮುಂದುವರಿಯುತ್ತದೆ.

ಕನ್ನಡದಲ್ಲಾಗಲಿ ಇತರ ಭಾರತೀಯ ಭಾಷೆಗಳಲ್ಲಾಗಲಿ ನಾಟಕವು ತಡವಾಗಿ ಹುಟ್ಟಿಕೊಂಡಿತು. ಇದಕ್ಕೆ ನಾಟಕದಲ್ಲಿ ಪಾತ್ರಗಳು ಅವರವರ ಸ್ಥಾನಮಾನಗಳಿಗೆ ಅನುಸರಿಸಿ ಸಂಸ್ಕೃತ, ಪ್ರಾಕೃತ ಮತ್ತು ಅದರ ಉಪಭೇದಗಳನ್ನು ಬಳಸಬೇಕೆಂಬ ಭರತೋಕ್ತಿಯೆ ಮುಖ್ಯ ಕಾರಣವಿದೆ. ಮಹಾಕಾವ್ಯ ಮತ್ತು ಇತರ ಕಾವ್ಯಗಳು ಉಕ್ತಲಕ್ಷಣಗಳೊಡನೆ ದೇಶಭಾಷೆಗಳಲ್ಲೂ ಇರಬಹುದೆಂದಿದೆ. ನಾಟಕಗಳ ವಿಷಯದಲ್ಲಿ ಈ ರಿಯಾಯಿತಿ ಇಲ್ಲ. ದಶರೂಪಕಗಳಲ್ಲಿ ಒಂದಾದ ಸಟ್ಟಕವು ಪ್ರಾಕೃತದಲ್ಲಿ

1. ಯಕ್ಷಗಾನ ಕೈಪಿಡಿ ಪು. ೩೨

ಇರಬಹುದಿದ್ದರೂ ನಾಟಕವೆ ಅವುಗಳಲ್ಲಿ ಶ್ರೇಷ್ಠರೂಪಕ. ಕಾಳಿದಾಸಾದಿಗಳ ಸರಿಸಮಾನ, ಅವರನ್ನು ಮೀರಿಸಿದವರೆಂದು ಹೇಳಿಕೊಂಡ ನಮ್ಮ ಪ್ರಾಚೀನ ಕವಿಗಳಿಗೆ ನಾಟಕ ರಚನೆ ಅಸಾಧ್ಯವಿರಲಿಲ್ಲ. ಅದರಲ್ಲಿ ಅಭಿರುಚಿ ಇಲ್ಲದಿರಲಿಲ್ಲ. ಬರೆದರೆ ಕಾಲಿದಾಸಾದಿಗಳಂತೆ ನಾಟಕವನ್ನು ಬರೆಯಬೇಕು, ಇಲ್ಲವಾದರೆ ಆ ವಿಷಯವೇ ಬೇಡವೆಂದು ಅವರು ಬರೆದಿದ್ದರೆ ಅದರಲ್ಲಿ ಆಶ್ಚರ್ಯ ಅಥವಾ ಅಸ್ವಾಭಾವಿಕವೆಂಬುದಿಲ್ಲ. ಆದರೆ ಹಾಗೆ ಮಾಡಲು ಅವರಿಗೆ ಭಾಷಾನಿಯಮ ಅಡ್ಡ ಬರುತ್ತಿತ್ತು. ಕಾಲಿದಾಸಾದಿಗಳ ನಂತರ ಸಂಸ್ಕೃತ ನಾಟಕಗಳ ಬೆಲೆ ತಗ್ಗಿದರೂ ಆ ಭಾಷೆಯಲ್ಲಿ ನಾಟಕ ರಚನೆ ಅವಿಚ್ಛಿನ್ನವಾಗಿ ಸಾಗಿ ಬಂದಿರುವುದೂ, ಕನ್ನಡದಲ್ಲಿ ಮತ್ತು ಇತರ ದೇಶ ಭಾಷೆಗಳಲ್ಲಿ ನಾಟಕಗಳು ತಡವಾಗಿ ಹುಟ್ಟಿಬಂದಿರುವದೂ ಇದನ್ನೇ ಸಮರ್ಥಿಸುತ್ತವೆ.

ದಶರೂಪಕಗಳ ಜೊತೆಗೆ ಉಪರೂಪಕಗಳಿದ್ದವು. ಇವುಗಳಿಗೆ ಭಾಷೆಯ ಕಟ್ಟುನಿಟ್ಟುಗಳಿದ್ದಿಲ್ಲ. ಇವು ಗಾನ-ನರ್ತನ ಭೂಯಿಷ್ಟ. ಗುಜರಾತದ ಪ್ರಖ್ಯಾತ ಜೈನ ಲಾಕ್ಷಣಿಕ ಆಚಾರ್ಯ ಹೇಮಚಂದ್ರ ನಾಟಕಾದಿ ದೃಶ್ಯಕಾವ್ಯಗಳನ್ನು ಪಾಠ್ಯ ಮತ್ತು ಗೇಯವೆಂದು ವಿಂಗಡಿಸಿ ಇವುಗಳನ್ನು ಗೇಯದಲ್ಲಿ ಸೇರಿಸಿರುವನು.[2] ಈ ಗೇಯ ರೂಪಕ/ಪ್ರಬಂಧಗಳಲ್ಲಿ ಕ್ರಮೇಣ ಲಿಖಿತ ಭಾಷಣ, ನಾಟಕದ ಇತರ ಲಕ್ಷಣಗಳು ಸೇರಿ ಇಂದಿನ ನಾಟಕವು ಮೈದಾಳಿತು. ಪ್ರಾರಂಭದಲ್ಲಿ ಇವುಗಳಿಗೆ ನಾಟಕ-ಪ್ರಬಂಧ ಅಥವಾ ಪ್ರಬಂಧ ನಾಟಕಗಳೆನ್ನುತ್ತಿದ್ದರು. ನಾಟಕ, ಪ್ರಬಂಧ ಎಂಬ ಬಿಡಿ ಹೆಸರುಗಳೂ ರೂಢಿಯಲ್ಲಿದ್ದವು.[3] ಬರಬರುತ್ತ ನಾಟಕದ ಲಕ್ಷಣಗಳು ಹೆಚ್ಚಿ, ಪ್ರಬಂಧದ ಲಕ್ಷಣಗಳು ಪ್ರಾಸಂಗಿಕ ಗಾನ ನರ್ತನಗಳಿಗೆ ಮಿತಗೊಂಡು, ನಾಟಕ ಎಂಬ ಹೆಸರಿಷ್ಟೇ ಉಳಿದುಕೊಂಡಿತು ಮತ್ತು ಅದೇ ಇಂದಿಗೂ ನಡೆದುಬಂದಿದೆ.

ಕನ್ನಡದಲ್ಲಿ ಸಿಂಗರಾರ್ಯನ (ಕ್ರಿ. ೧೭೦೦) ಮಿತ್ರವಿಂದ-ಗೋವಿಂದವೇ ಈವರೆಗೆ ದೊರೆತ ನಾಟಕಗಳಲ್ಲಿ ಮೊದಲನೆಯದು. ಮೇವಾಡದ ಮಹಾರಾಣಾ ಕುಂಭನು (೧೪೩೩-೧೪೬೮) ಸಂಸ್ಕೃತ, ಕನ್ನಡ, ಮರಾಠಿ ಮತ್ತು ತೆಲುಗು ಭಾಷೆಗಳಲ್ಲಿ ಒಂದೊಂದು ನಾಟಕವನ್ನು ಬರೆದಿದ್ದನೆಂದು ಚಿತ್ತೋಡ ಜಯಸ್ತಂಭದಲ್ಲಿ ಕೆತ್ತಿದ ಶಿಲಾಲೇಖದಲ್ಲಿದೆ.[4] ಈತ ಸಂಗೀತರಾಜ ಎಂಬ ಸಂಗೀತ ಗ್ರಂಥವನ್ನೂ ಜಯದೇವನ ಗೀತಗೋವಿಂದಕ್ಕೆ 'ರಸಿಕ ಪ್ರಿಯಾ' ಎಂಬ ಟೀಕೆಯನ್ನೂ ಬರೆದಿರುವನು. ಕುಂಭನ ಈ ನಾಟಕಗಳು ದೊರೆತಿಲ್ಲ. ಆದ್ದರಿಂದ ಸಿಂಗರಾರ್ಯನ ಮಿತ್ರವಿಂದ ಗೋವಿಂದವೇ ನಮಗೆ ಕನ್ನಡದ ಅಭಿಜಾತ ನಾಟಕಗಳ ಮೊದಲನೆಯ ಮೈಲುಗಲ್ಲಾಗುವದು.

---

2. ಹೇಮಚಂದ್ರ : ಕಾವ್ಯಾನುಶಾಸನ ೮-೧ (ಸಂ) ಪಾರೀಖ ಮತ್ತು ಕುಲಕರ್ಣಿ.

3. ರಾಮಕೃಷ್ಣಶಾಸ್ತ್ರೀ : ಆಂಧ್ರದ ಪ್ರಾಚೀನ ರಂಗಭೂಮಿ. (ಅನಲ್ಸ್ ಆಫ್ ಓರಿಯೆಂಟಲ್ ರಿಸರ್ಚ್, ಮದ್ರಾಸ್ ವಿಶ್ವವಿದ್ಯಾನಿಲಯ, ಸಂ. ೧೩)

4. ಮಹಾರಾಜಾ ಕುಂಭಕರ್ಣ : ಸಂಗೀತರಾಜ, ಮುನ್ನುಡಿ, ಪು. ೫೨.

ಸಿಂಗರಾರ್ಯನ ಮೊದಲು ಕನಿಷ್ಠ ೨೦೦ ವರ್ಷಗಳ ಅವಧಿಯಲ್ಲಿ ಯಕ್ಷಗಾನ ಆಟವೆ ಮನರಂಜನೆಯ ಅತ್ಯಂತ ಲೋಕಪ್ರಿಯ ಸಾಧನವಿರಲಿಕ್ಕೆ ಸಾಕು. ಅದಕ್ಕೆ ಮೊದಲು ಗಾನ, ನರ್ತನ, ಕಥಾಕಾಲಕ್ಷೇಪ, ನರ್ತನದ ಅಂಗವಾಗಿ ಪಂಪಾದಿಗಳ ಕೃತಿಗಳಲ್ಲಿರುವ ನೀಲಾಂಜನೆ ನರ್ತನದ ಬಗೆಯ ಸನ್ನಿವೇಶ ನರ್ತನ (ಥೀಮ್‌ಡಾನ್ಸ) ಗಳು ಪ್ರಚಾರದಲ್ಲಿರಬೇಕು. ಆದರೆ ಅಭಿಜಾತ ನಾಟಕಗಳಾಗಲಿ ಯಕ್ಷಗಾನ ಆಟ ಗಳಾಗಲಿ ಇದ್ದಿಲ್ಲ.

ಯಕ್ಷಗಾನ ಆಟದ ಕಾಲ ನಿರ್ಣಯ

ಯಕ್ಷಗಾನ ಆಟದ ಕಾಲ ನಿರ್ಣಯಕ್ಕಾಗಿ ಪಶ್ಚಿಮ ಚಾಲುಕ್ಯ ದೊರೆ ಸೋಮೇಶ್ವರನ ಕಾಲ (೧೨ನೆಯ ಶ. ಪ್ರಾರಂಭ) ಮತ್ತು ಸಿಂಗರಾರ್ಯನ ಕಾಲ (೧೮ನೆಯ ಶ. ಪ್ರಾರಂಭ)ಗಳನ್ನು ಕೆಳಗಿನ ಮತ್ತು ಮೇಲಿನ ಗಡುವುಗಳೆಂದು ಇಟ್ಟು ಕೊಳ್ಳಬಹುದು. ಈ ಸೋಮೇಶ್ವರನ ಮಾನಸೋಲ್ಲಾಸ ಅಥವಾ ಅಭಿಲಷಿತಾರ್ಥ ಚಿಂತಾಮಣಿ ಗ್ರಂಥದಿಂದ ಆತನ ಸಮಯದಲ್ಲಿ ಕನ್ನಡದಲ್ಲಿ ಅಭಿಜಾತ ನಾಟಕಗಳಾಗಲಿ ಯಕ್ಷಗಾನ ಆಟಗಳಾಗಲಿ ಜನ್ಮಿಸಿದ್ದಿಲ್ಲವೆಂದು ಕಂಡುಬರುವದು. ಆತನ ಈ ಗ್ರಂಥವು ಅರಸು ಮಕ್ಕಳ ಶಿಕ್ಷಣಾರ್ಥವಾಗಿ ರಚಿಸಲ್ಪಟ್ಟಿದೆ. ಅರಸನಾಗುವವನು ತಿಳಿದಿರ ಬೇಕಾದ ಎಲ್ಲ ವಿಷಯಗಳು ಇದರಲ್ಲಿವೆ. ಇದರಲ್ಲಿಯ 'ವಿನೋದ ವಿಂಶತಿ' ಎಂಬ ೨೦ ಅಧ್ಯಾಯಗಳಲ್ಲಿ ಮನರಂಜನೆಯ ವಿವಿಧ ಸಾಧನಗಳನ್ನು ಅವುಗಳ ರೀತಿ ನೀತಿಗಳೊಂದಿಗೆ ವರ್ಣಿಸಿದೆ. ಸಂಗೀತ ಅಂದರೆ ಗೀತ, ವಾದ್ಯ, ನೃತ್ಯಗಳಲ್ಲಿ ಆತ ನೊಬ್ಬ ಮಹಾನ್ ಆಚಾರ್ಯನಿದ್ದನೆಂದು ವಿದ್ವಾಂಸರ ಅಭಿಪ್ರಾಯವಿದೆ. ಮನರಂಜ ನೆಯ ವಿವಿಧ ಸಾಧನಗಳನ್ನೂ ಅವುಗಳ ಅಂಗವಾಗಿ ಗೀತ, ವಾದ್ಯ, ನರ್ತನ, ಕಥಾ ಕಾಲಕ್ಷೇಪಾದಿಗಳನ್ನೂ ನಿರೂಪಿಸುವಾಗ ಆತ ಶಿಷ್ಟ ಜಾನಪದಗಳೆಂಬ ಭೇದವನ್ನೆಣಿ ಸಿಲ್ಲ. ಇಂದು ಸಂಪೂರ್ಣ ಜಾನಪದವಾಗಿರುವ ಹುಂಜಗಳ ಕಾಳಗ, ಪಾರಿವಾಳಗಳ ಆಟ, ಟಗರುಗಳ ಕಾಳಗ, ಮೊದಲಾದವುಗಳನ್ನು ಅವುಗಳ ರೀತಿ-ನೀತಿಗಳೊಂದಿಗೆ ವಿವರಿಸಿರುವನು. ನಾಟಕವನ್ನು ವರ್ಣಿಸಿರುವನು. ಆದರೆ ಅದು 'ಶಾಸ್ತ್ರ ವಿನೋದ' ದಲ್ಲಿ ಪಂಡಿತರೊಂದಿಗೆ ಚರ್ಚಿಸುವ ವಿಷಯವಾಗಿ ಬಂದಿದೆ. ಪಾತ್ರಗಳಿಗೆ ಸಂಸ್ಕೃತ ಪ್ರಾಕೃತಾದಿ ಭಾಷಾನಿಯಮವನ್ನು ಹೇಳಿರುವದರಿಂದ ಅದು ಸಂಸ್ಕೃತ ನಾಟಕಗಳಿಗಿಷ್ಟೆ ಮಿತವಾಗಿದ್ದಿತೆನ್ನಬಹುದು. ಕನ್ನಡ ಅಥವಾ ಇತರ ದೇಶೀನಾಟಕಗಳ ಉಲ್ಲೇಖವಿಲ್ಲ. ಗೀತ, ನೃತ್ಯ, ವಾದ್ಯ, ಕಥಾಕಾಲಕ್ಷೇಪಗಳ ನಿರೂಪಣೆ ಹೀಗಿಲ್ಲ. ಅವುಗಳ ಶಾಸ್ತ್ರೀಯ ಲಕ್ಷಣಗಳೊಂದಿಗೆ ಪ್ರದರ್ಶನದ ರೀತಿ ನೀತಿಗಳನ್ನು ಹೇಳಿರುವನು. ಆತನ ಇನ್ನೊಂದು ಗ್ರಂಥದಲ್ಲಿ ಯಕ್ಷಗಾನಕ್ಕಿದ್ದ ಬೇರೊಂದು ಹೆಸರು ಬಂದಿದೆ. ಆದರೆ ಯಕ್ಷಗಾನ ಆಟದ ಉಲ್ಲೇಖವಿಲ್ಲ.

ಸೋಮೇಶ್ವರನ ಕಾಲದಲ್ಲಿ ಇಂದು ನಮಗೆ ಪರಿಚಿತವಿರುವ ಬಗೆಯ ಯಕ್ಷಗಾನ

ಆಟವು ವ್ಯೈದಾಳಿರದಿದ್ದರೂ ನರ್ತನದ ಪೂರ್ವರಂಗದ ಅಂಗವಾಗಿ ಆತ ಪ್ರಾರಂಭಿಸಿದ ಪದ್ಧತಿ ಪರಂಪರೆಗಳು ಇಂದಿನ ಯಕ್ಷಗಾನ ಆಟದ ಪೂರ್ವರಂಗದಲ್ಲಿ ಕಂಡುಬರುವದರಿಂದ ಅವನನ್ನು ಯಕ್ಷಗಾನ ಆಟದ ಆದ್ಯಪ್ರವರ್ತಕರಲ್ಲಿ ಒಬ್ಬನೆಂದು ಗಣಿಸಬಹುದಾಗಿದೆ. ವರಂಗಲ್ಲಿನ ಜಾಯ ಸೇನಾಪತಿಯು (ಕ್ರಿ. ೧೨೪೯) ನೃತ್ಯ ರತ್ನಾವಲಿ ಎಂಬ ಗ್ರಂಥವನ್ನು ಬರೆದಿರುವನು. ಅದರಲ್ಲಿ 'ಗೋಂಡಲಿ' ನೃತ್ಯದ ಉಲ್ಲೇಖವಿದೆ. ಗೋಂಡಲಿ ಎಂದರೆ ಭಿಲ್ಲ ಅಥವಾ ಭಿಲ್ಲಣಿ. ಭೂತಮಾತ್ರೋತ್ಸವದಂಥ[೫] ಸಾರ್ವಜನಿಕ ಉತ್ಸವದಲ್ಲಿ ಚಿತ್ರ ವಿಚಿತ್ರ ವೇಷಭೂಷಣಗಳನ್ನು ಧರಿಸಿದ ಭಿಲ್ಲಣಿಯರು ನರ್ತಿಸುತ್ತಿದ್ದರಂತೆ. ಸೋಮೇಶ್ವರನು ಅವರ ನರ್ತನವನ್ನು ಮೆಚ್ಚಿಕೊಂಡು ಅದನ್ನು ಸಂಸ್ಕರಿಸಿ ಶಾಸ್ತ್ರದಲ್ಲಿ ಸೇರಿಸಿದನೆಂದಿರುವನು, ಜಾಯ ಸೇನಾಪತಿ.[೬] ಆಗಿನಿಂದ ಸೋಮೇಶ್ವರನ ಈ ಗೋಂಡಲಿ ನೃತ್ಯವು ಶುದ್ಧ ಮತ್ತು ಪೇರಣಿ ಪದ್ಧತಿಗಳೊಂದಿಗೆ ನರ್ತನದ ಪೂರ್ವರಂಗದಲ್ಲಿ ಸೇರಿಕೊಂಡಿತು. ಇವುಗಳ ವಿವರ ಮುಂದೆ ಬರುವದು. ಇಂದು ಯಕ್ಷಗಾನ ಆಟಗಳ ಪೂರ್ವರಂಗದಲ್ಲಿ ಬರುವ ಸ್ತ್ರೀವೇಷಗಳು ಈ ಗೋಂಡಲಿ ನರ್ತಕಿಯರ ಪ್ರತಿನಿಧಿಗಳೆನ್ನಬಹುದು.

ಸೋಮೇಶ್ವರನ ಕಾಲದಲ್ಲಿ ಹೀಗೆ ಯಕ್ಷಗಾನ ಆಟದ ಮುಂಗುರುತುಗಳನ್ನು ಕಾಣಬಹುದಾಗಿದ್ದರೂ ಅದು ಇಂದು ನಮಗೆ ಪರಿಚಿತವಿರುವ ರೀತಿಯಲ್ಲಿ ರೂಪಗೊಳ್ಳಲು ಹೆಚ್ಚಿಗೆ ಎರಡು ಶತಮಾನಗಳು ಕಳೆದವು. ಈ ಅವಧಿಯು ಭಾರತದ ಸಾಂಸ್ಕೃತಿಕ ಇತಿಹಾಸದಲ್ಲಿ ಕತ್ತಲೆಯ ಕಾಲವಿದ್ದಿತು.[೭] ಮುಸಲ್ಮಾನರ ದಾಳಿಯಿಂದ ತೊಡಗಿದ ಈ ಕಾಲ ವಿಜಯನಗರ ಸಾಮ್ರಾಜ್ಯದ ಏಳ್ಗೆಯವರೆಗೆ ಮುಂದರಿದಿದೆ. ಆಗ ಉಂಟಾದ ರಾಜಕೀಯ ಅಲ್ಲೋಲಕಲ್ಲೋಲದಲ್ಲಿ ಗ್ರಂಥಸ್ಥ ಮತ್ತು ಗುರು ಪರಂಪರಾಗತವಿದ್ದ ಎಷ್ಟೋ ಕಲೆಗಳು ನಷ್ಟವಾದುವು. ಯೋಗ್ಯ ಮಾರ್ಗದರ್ಶನವಿಲ್ಲದೆ ಕೆಲವು ವಿಕೃತಗೊಂಡವು. ಕೆಲವು ಮೂಲರೂಪದಲ್ಲಿ ಅಲ್ಲಲ್ಲಿ ಉಸಿರಾಡಿಸಿಕೊಂಡಿದ್ದವು. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾದ ಬಳಿಕ ವಿದ್ಯಾರಣ್ಯರು ಸಾಯಣಾಚಾರ್ಯ ಮೊದಲಾದ ಮಹಾಪ್ರಭೃತಿಗಳ ನೆರವಿನಿಂದ ಸಾಂಸ್ಕೃತಿಕ ಪುನರ್ರಚನೆಯ ಕಾರ್ಯವನ್ನೆತ್ತಿಕೊಂಡರು. ಸಂಸ್ಕೃತಿಯ ವಿವಿಧ ಕ್ಷೇತ್ರಗಳಲ್ಲಿ ಅವರು ಸಾಧಿಸಿದ ಕಾರ್ಯ ಅಷ್ಟಿಷ್ಟಲ್ಲ. ಒಂದೇ ಮಾತಿನಲ್ಲಿ ಹೇಳುವದಾದರೆ ಕುಸಿದುಹೋದ ಭಾರತೀಯ ಸಂಸ್ಕೃತಿಯನ್ನು ಮೇಲಕ್ಕೆತ್ತಿ, ಆಯಾ ಕ್ಷೇತ್ರಗಳಲ್ಲಿ ಪಳಗಿದ ಪಂಡಿತರ ನೆರವಿನಿಂದ, ಪುನಃ ತನ್ನ ಕಾಲಮೇಲೆ ತಾನು ನಿಲ್ಲುವಂತೆ ಅದನ್ನು ಬಲಪಡಿಸಿದರು. ಭಾರತೀಯ ಸಂಸ್ಕೃತಿಗೆ ಕರ್ನಾಟಕವು ಸಲ್ಲಿಸಿದ ನಿಜವಾದ ಅಮೌಲ್ಯ, ಅದ್ವಿತೀಯ

---

5. ಅಶ್ವೀನ ಪೌರ್ಣಿಮೆಯಂದು ಇದನ್ನು ಆಚರಿಸಲಾಗುತ್ತಿತ್ತು.

6. ರಾಮಕೃಷ್ಣ ಕವಿ : ಭರತಕೋಶ, ಶ್ರೀ ವೆಂಕಟೇಶ್ವರ ಪ್ರಾಚ್ಯ ಗ್ರಂಥಮಾಲೆ.

7. ಕೆ. ವಾಸುದೇವಶಾಸ್ತ್ರೀ : ಶಾಸ್ತ್ರೀಯ ನೃತ್ಯದ ಸಾಹಿತ್ಯಿಕ ಮತ್ತು ಇತರ ಆಧಾರಗಳು ತಂಜಾವರ ಸರಸ್ವತಿ ಮಹಲ್ ಲೈಬ್ರರಿ ಪತ್ರಿಕೆ ಸಂಪುಟ ೧೨. ಸಂ. ೨

ಕಾಣಿಕೆ ಇದು. ಪುನರ್‍ರಚನೆಯ ಈ ಕಾರ್ಯಕ್ರಮದಲ್ಲಿ ವಿದ್ಯಾರಣ್ಯರು ಕನ್ನಡ ಮತ್ತು ಇತರ ದೇಶಭಾಷೆಗಳನ್ನು ಮರೆಯಲಿಲ್ಲ. ಮಿಕ್ಕವರು ಈ ಭಾಷೆಗಳಲ್ಲಿ ಗ್ರಂಥಗಳನ್ನು ರಚಿಸುತ್ತಿದ್ದರೂ ಬ್ರಾಹ್ಮಣರು ಸಂಪ್ರದಾಯಕ್ಕೆ ಕಟ್ಟುಬಿದ್ದು ಈ ದಿಸೆಯಲ್ಲಿ ಅಷ್ಟೊಂದು ಮುಂದರಿದಿದ್ದಿಲ್ಲ. ವೇದಾಧಿಕಾರವಿಲ್ಲದವರ ಕಲ್ಯಾಣಕ್ಕಾಗಿ ಮಹಾಭಾರತ ಮತ್ತು ಪುರಾಣಗಳು ಹುಟ್ಟಿಕೊಂಡವೆಂಬುದು ಸರ್ವಶ್ರುತವಿದೆ. ವಿದ್ಯಾರಣ್ಯರು ಒಂದು ಹೆಜ್ಜೆ ಮುಂದೆ ಹೋಗಿ ಅಂಥವರಿಗೆ ಸಹ ಅವರವರ ಭಾಷೆಯಲ್ಲಿ ತತ್ವಾಭ್ಯಾಸವನ್ನು ಕೈಕೊಳ್ಳುವ ಅಧಿಕಾರವಿದೆ (ತೇಷಾಮಪಿ ಸ್ವದೇಶ ಭಾಷಾಯೈವ ತತ್ವವಿದ್ಯಾಯಾಮಧಿಕಾರಃ)[8] ಎಂದು ಸಾರಿ, ಬ್ರಾಹ್ಮಣರಿಗೂ ದೇಶಭಾಷೆಗಳಲ್ಲಿ ಪಾಠ-ಪ್ರವಚನ ಗ್ರಂಥರಚನ ಕೈಕೊಳ್ಳಲು ಆದೇಶವನ್ನಿತ್ತರು. ತತ್ಪರಿಣಾಮವಾಗಿ ದೇಶಭಾಷೆಗಳಲ್ಲಿ ಧಾರ್ಮಿಕ ವಾಙ್ಮಯವು ವಿಪುಲವಾಗಿ ಹುಟ್ಟಿಕೊಂಡಿತು. ಇದರ ಅಂಗವಾದ ಭಾಗವತ ಸಾಹಿತ್ಯದ ಒಂದು ವಿಶಿಷ್ಟ ಶಾಖೆಯಾಗಿ ನೊಳೆತ ದಾಸಸಾಹಿತ್ಯವು ಸಮೃದ್ಧವಾಗಿ ಬೆಳೆಯಿತು.[9]

ಸ್ವತಃ ವಿದ್ಯಾರಣ್ಯರೇ ಸಂಗೀತಸಾರ ಎಂಬ ಗ್ರಂಥವನ್ನು ರಚಿಸಿರುವರು. ತಂಜಾವರದ ಅರಸು, ಸಂಗೀತ ಸುಧಾಕಾರ, ರಘುನಾಥ ನಾಯಕ (ಕ್ರಿ. ೧೬೧೪) ಅವರನ್ನು ತನ್ನ ಗ್ರಂಥದಲ್ಲಿ ಮೇಲಿಂದ ಮೇಲೆ ಸ್ಮರಿಸಿರುವನು. 'ರುಕ್ಮಿಣೀಕೃಷ್ಣ ವಿವಾಹ' ಎಂಬ ಯಕ್ಷಗಾನ ಪ್ರಬಂಧವನ್ನು ಈತ ಬರೆದಿರುವನೆಂಬ ಉಲ್ಲೇಖವಾದರೂ ಇದೇ ಗ್ರಂಥದಲ್ಲಿದೆ. ಇದರಿಂದ ೧೭ನೆಯ ಶತಮಾನದ ಪ್ರಾರಂಭದ ಹೊತ್ತಿಗೆ ಯಕ್ಷಗಾನ ಆಟವು ಸಾಕಷ್ಟು ಲೋಕಪ್ರಿಯವಾಗಿತ್ತೆಂಬುದು ಸ್ಪಷ್ಟವಾಗುತ್ತದೆ. ಯಕ್ಷಗಾನ ಆಟಗಳಲ್ಲಿ ಭಾಗವತನಿಗಿರುವ ಪ್ರಾಧಾನ್ಯವನ್ನು ಲಕ್ಷಿಸಿ, ಭಕ್ತಿಪಂಥ ಅದರಲ್ಲೂ ಭಾಗವತ ಸಂಪ್ರದಾಯ ಮತ್ತು ದಾಸಸಾಹಿತ್ಯದ ಹುಟ್ಟು ಬೆಳವಣಿಗೆಗಳಲ್ಲಿ ಅದರ ಉಗಮಗಳನ್ನು ಕಾಣಬಹುದಾಗಿದೆ. ಸ್ವತಃ ಪುರಂದರ ದಾಸರು ಅನಸೂಯೆಯ ಕಥೆ ಮತ್ತು ಅವರ ಮಗ ಮಧ್ವಪತಿದಾಸರು ಅಭಿಮನ್ಯು ಕಾಳಗ, ಇಂದ್ರಜಿತು ಕಾಳಗ, ಉದ್ದಾಲೀಕನ ಕಥೆ, ಐರಾವತ, ಕಂಸವಧೆ, ಎಂಬ ಯಕ್ಷಗಾನ ಪ್ರಬಂಧಗಳನ್ನು ರಚಿಸಿರಬೇಕೆಂಬ ಊಹೆಗೆ ಅವಕಾಶವಿದೆ.[10] ಆದ್ದರಿಂದ ತುಸು ಹೆಚ್ಚು ಕಡಿಮೆ ಯಕ್ಷಗಾನ ಆಟವು ೧೫ನೆಯ ಶತಮಾನದಲ್ಲಿ ರೂಪಗೊಂಡು, ೧೬ನೆಯ ಶತಮಾನದಲ್ಲಿ ಬೆಳೆದು ೧೭ನೆಯ ಶತಮಾನದಲ್ಲಿ ಪೂರ್ಣಪರಿಣತಿ ಹೊಂದಿ ೧೮ನೆಯ ಶತಮಾನದಲ್ಲಿ ಇಂದಿನ ನಾಟಕ ಪ್ರಪಂಚಕ್ಕೆ ಎಡೆಮಾಡಿ ಕೊಟ್ಟು ಹಿಂದೆ

8. ಡಾ. ಎಸ್. ಶ್ರೀಕಂಠಶಾಸ್ತ್ರೀ: ವಿಜಯನಗರ ಕಾಲೀನ ಸಂಸ್ಕೃತ ಸಾಹಿತ್ಯ. ವಿಜಯನಗರ ಷಟ್‍ಶತ ಸಾಂವತ್ಸರಿಕ ಸ್ಮರಣಿಕೆ, ೧೯೩೬.

9. ರಂ. ಶ್ರೀ. ಮುಗಳಿ: ಕನ್ನಡ ಸಾಹಿತ್ಯ ಚರಿತ್ರೆ, ಪು. ೨೫೧.

10. ಡಾ. ಕೆ. ಎಂ. ಕೃಷ್ಣರಾವ್: ಯಕ್ಷಗಾನ ಸಾಹಿತ್ಯ ಪು. ೯೦; ಇಲ್ಲಿ ಕೃತಿ ಮತ್ತು ಕವಿಯ ಹೆಸರು ಇಷ್ಟೇ ದೊರೆಯುತ್ತವೆ. ಕೆಲವಕ್ಕೆ ಕಾಲ ನಿರ್ದೇಶನವಿದೆ. ಇವುಗಳಿಗಿಲ್ಲ.

ಸರಿಯಿತೆಂದು ಹೇಳಬಹುದು. ಯಕ್ಷಗಾನ ಆಟವು ಇಂದಿನ ಕನ್ನಡ ನಾಟಕಗಳ ತಾಯಿ ಬೇರೆಂಬುದನ್ನು ಕರ್ನಾಟಕ ನಾಟಕ ಪಿತಾಮಹ ಶಾಂತಕವಿಗಳು (ಬಾಳಾಚಾರ್ಯ ಸಕ್ಕರಿ) ಹೀಗೆ ವರ್ಣಿಸಿರುವರು—

ಗಂಡುಡಿಗೆ ಗಂಡುಗಾಯನ ಗಂಡುಧಿಗಣಗಳು
ಗುಂಡುಗುಣಿತಂ ಗುಂಡುಗೇಕೆ ಹಾರಿಕೆ ಲಾಲಿ
ಗಂಡು ನಿರ್ಣಯ ಮರ್ದಳ ವಾದ್ಯ ಗುಂಡುಜಾಂಗಟೆ ಪುಂಡಿಕಟ್ಟಿಗೆಗಳ—।
ಪೆಂಡೆಗಳ ಬೊಂಬಾಳ ಪಂಜುಗಳೊಡನೆ ಧರ್ಮ—
ಮಂಡನ ಪುರಾಣ ಕಥೆಯಾಟಗಳನಾಡಿ ಬುಧ—
ಮಂಡಳಿಯ ಮೆಚ್ಚಿಸಿದ ಘಟ್ಟದ ಬುಡದ ಭಾಗವತರಾದ್ಯರು ನಟರಿಗೆ॥ [11]

ವಿಜಯನಗರ ಸಾಮ್ರಾಜ್ಯವು ನಷ್ಟವಾದ ಬಳಿಕ ತಂಜಾವರವು ಕರ್ನಾಟಕ ಸಂಗೀತ ನೃತ್ಯ ಕಲೆಗಳ ಕೇಂದ್ರವಾಯಿತು. ಅಲ್ಲಿಯ ನಾಯಕ ಅರಸರು ಮತ್ತು ಅವರ ನಂತರ ಆಳಿದ ಮರಾಠಾ ಅರಸರು ಅವುಗಳನ್ನು ತಮ್ಮವಾಗಿಸಿಕೊಂಡು ಚೆನ್ನಾಗಿ ಪೋಷಿಸಿ ಬೆಳೆಸಿದರು. ಸ್ವತಃ ತಾವೇ ಯಕ್ಷಗಾನ ಪ್ರಬಂಧಗಳನ್ನೂ, ಸಂಸ್ಕೃತ ನಾಟಕಗಳಲ್ಲಿಯ ಲಕ್ಷಣಗಳನ್ನು ಈ ಬಗೆಯ ಪ್ರಬಂಧಗಳಲ್ಲಿ ಅಳವಡಿಸಿಕೊಳ್ಳುವ ಪ್ರಯೋಗಗಳನ್ನೂ ಸಂಗೀತ ಶಾಸ್ತ್ರವನ್ನು ಕುರಿತು ಪ್ರಮಾಣಭೂತ ಗ್ರಂಥಗಳನ್ನೂ ರಚಿಸಿದರು. ಕರ್ನಾಟಕದಲ್ಲಿ ಕೆಳದಿಯ ಅರಸರು ಮತ್ತು ಮೈಸೂರರಸರು ಈ ಕಲೆಯನ್ನು ಪೋಷಿಸಿಕೊಂಡು ಬಂದರು. ಯಕ್ಷಗಾನಾಚಾರ್ಯ ಎನಿಸಿಕೊಂಡ ಅಜಪುರದ ವೆಂಕಯ್ಯಾತ್ಮಜ ಸುಬ್ಬ (ಈ ಮೊದಲು ಪಾರ್ತಿಸುಬ್ಬ) ಕೆಳದಿಯ ಹಿರಿಬಸಪ್ಪ ನಾಯಕನ (ಕ್ರಿ. ೧೭೩೯–೧೭೫೪) ಆಶ್ರಿತನಿದ್ದನು.[12] ಮೈಸೂರರಸರಲ್ಲಿ ಮುಮ್ಮಡಿ ಕೃಷ್ಣರಾಜನು (ಕ್ರಿ. ೧೭೯೪–೧೮೬೮) ಭಾಮಾಕಥೆಯನ್ನೂ ಮತ್ತು ಈ ಮನೆತನಕ್ಕೆ ಸೇರಿದ ಅಳಿಯ ಲಿಂಗರಾಜನು (೧೮೨೩–೧೮೭೪) ನರಪತಿ ಚರಿತೆ ಎಂಬ ಅಲಂಕಾರ ಗ್ರಂಥವನ್ನೂ ಗಿರಿಜಾಕಲ್ಯಾಣ, ತ್ರಿಪುರದಹನ, ಕೃಷ್ಣಾರ್ಜುನ ಕಾಳಗ ಮೊದಲಾದ ಯಕ್ಷಗಾನ ಪ್ರಬಂಧಗಳನ್ನೂ ರಚಿಸಿರುವನು.[13] ಯಕ್ಷಗಾನ ಕೃತಿಗಳನ್ನು ರಚಿಸಿದ ಪ್ರಮುಖ ಸಾಹಿತಿಗಳಲ್ಲಿ ಮುದ್ದಣನೊಬ್ಬನು. ಇತರರಿಗಂತೂ ಲೆಕ್ಕವಿಲ್ಲ.

ಭಕ್ತಿ ಪಂಥದ ಅಂಗವಾಗಿ ಹುಟ್ಟಿಕೊಂಡ ಭಾಗವತ ಸಂಪ್ರದಾಯವು ಕರ್ನಾಟಕಕ್ಕೆ ಪರಿಮಿತವಿರಲಿಲ್ಲ. ಭಕ್ತಿಮಾರ್ಗದ ಜನ್ಮ ಕರ್ನಾಟಕದಲ್ಲಿ, ಭಾರತೀಯ ಸಂಗೀತದ ಬಹುಭಾಗವು ಕರ್ನಾಟಕದ ಕೊಡುಗೆ, ಎಂಬ ಮಾತುಗಳನ್ನು ನೆನೆದರೆ ಈ ಸಂಪ್ರದಾಯದೊಂದಿಗೆ ಯಕ್ಷಗಾನ ಕಲೆಯಾದರೂ ಭಾರತದ ಇತರೆಡೆಗಳಿಗೆ

11. ಪ್ರಭಾತ-ಮಾರ್ಚ್, ೧೯೧೩ (ಕರ್ನಾಟಕ ರಂಗಭೂಮಿಯಿಂದ)
12. ಶಿವರಾಮ ಕಾರಂತ: ಯಕ್ಷಗಾನ ಬಯಲಾಟ, ಪು. ೧೧೮.
13. ಯಕ್ಷಗಾನ ಸಾಹಿಸ್ಯ ಪು. ೧೦೨–೧೦೩.

ಹಬ್ಬಿರಬೇಕೆಂಬುದು ವೃಥಾಭಿಮಾನದ ಮಾತಾಗದು. ಇಲ್ಲವಾದರೆ ಬಂಗಾಲದ ಯಾತ್ರಾ, ಆಸಾಮದ ಆಂಖಿಯಾ, ತಮಿಳಿನ ತೆರಕೂಟ ಮತ್ತು ಇತರೆಡೆಗಳಲ್ಲಿಯ ಯಕ್ಷಗಾನವನ್ನು ಹೋಲುವ ರೂಪಕಗಳ ಉಗಮ-ವಿಕಾಸಗಳನ್ನು ಗುರುತಿಸುವದು ದುರಾಪಾಸ್ತವಾಗುವದು.

ಯಕ್ಷಗಾನದ ಮೂಲ

ಯಕ್ಷಗಾನದಲ್ಲಿಯ ಯಕ್ಷ ಮತ್ತು ಗಾನ ಶಬ್ದಗಳು ಸಂಶೋಧಕರ ಊಹೆಯ ಕುದುರೆಗಳನ್ನು ಯಕ್ಷ, ಗಂಧರ್ವ, ರಾವಣ, ಕುಬೇರ, ಆರ್ಯ, ದ್ರಾವಿಡ, ಪ್ರಾಚೀನ ಕನ್ನಡ ಕಾವ್ಯ ಪ್ರಕಾರಗಳಾದ ಬೆದಂಡೆ, ಚತ್ತಾಣ (ಜತ್ತಾಣ), ಸಂಗೀತ ಶಾಸ್ತ್ರದಲ್ಲಿ ಬರುವ ಷಟ್ಜ, ಮಧ್ಯಮ, ಗಾಂಧಾರ ಗ್ರಾಮ (ಸ್ವರ–ಸಪ್ತಕ), ಪ್ರಾಚೀನ ಕನ್ನಡ ಸಾಹಿತ್ಯ ಗ್ರಂಥಗಳಲ್ಲಿ ಬರುವ ಯಕ್ಕಲಗಾಣ, ಯಕ್ಕಡಿಗ ಪದ, ಜಕ್ಕರಿ ನೃತ್ಯ, ಹೀಗೆ ಹತ್ತಾರು ದಿಸೆಗಳಲ್ಲಿ ಓಡಾಡಿಸಿವೆ.[14] ಇವುಗಳಲ್ಲಿ ಜತ್ತಾಣ ಒಂದನ್ನು ಬಿಟ್ಟು ಮಿಕ್ಕವುಗಳಲ್ಲಿ ಆಧಾರಕ್ಕಿಂತ ಕಲ್ಪನಾವಿಲಾಸವೇ ಅಧಿಕವೆನ್ನಬಹುದು.

ಯಕ್ಷಗಾನದಲ್ಲಿಯ ಯಕ್ಷವು ತಾಲಕ್ಕೆ ಸಮಾನಾರ್ಥಕವಿದ್ದ ಸಂಸ್ಕೃತೀಕರಿಸಲ್ಪಟ್ಟ ದೇಶೀಶಬ್ದ. ಅತ ಏವ ಪುರಾಣೋಕ್ತ ಯಕ್ಷ, ಗಂಧರ್ವ, ರಾವಣ, ಕುಬೇರಾದಿ ಮತ್ತು ಇವರ ಜಾಡಿನಲ್ಲಿ ಬಂದ ಆರ್ಯ ದ್ರಾವಿಡರಿಗೂ ಯಕ್ಷಗಾನದಲ್ಲಿಯ ಯಕ್ಷ ಶಬ್ದಕ್ಕೂ ಪಂಪ ಭಾರತದಲ್ಲಿಯ ಯಕ್ಷಾಂದೋಲಕ್ಕೂ ಯಾವುದೇ ಬಗೆಯ ಸಂಬಂಧವಿಲ್ಲ.

ಸಂಗೀತ ಶಾಸ್ತ್ರದಲ್ಲಿ ಒಂದೊಮ್ಮೆ ಷಟ್ಜ, ಮಧ್ಯಮ ಮತ್ತು ಗಾಂಧಾರವೆಂಬ ಮೂರು ಸ್ವರ-ಸಪ್ತಕ (ಓಕ್ಟೇವ್) ಗಳಿದ್ದವು. ಕಾಲಾಂತರದಲ್ಲಿ ಮಧ್ಯಮಗಾಂಧಾರ ಗ್ರಾಮಗಳು ಷಟ್ಜದ ಅವಸ್ಥಾಂತರಗಳೆಂದು ತಿಳಿದು ಬರಲು ಅವು ನಷ್ಟವಾಗಿ ಷಟ್ಜ ಒಂದೇ ಉಳಿದುಕೊಂಡಿತು.[15] ಗಾಂಧಾರ-ಗ್ರಾಮ ಸಪ್ತಕಗಾಂಧಾರದಿಂದ ಅಂದರೆ ಗಮಪದನಿಸರಿಯಿಂದ ತೊಡಗುವದೆಂಬ ತಿಳಿವಳಿಕೆ ಇದ್ದಿತು. ಇಂದು ಸಹ ಇಲ್ಲದಿಲ್ಲ. ಅತ ಏವ ಈ ಸಪ್ತಕದಲ್ಲಿ ಹಾಡುವದು ಕೊರಳಿಗೆ ತೀರ ಏರಾಗುವದು ಸ್ವಾಭಾವಿಕ. ಆದರೂ ಯಕ್ಷಗಾನವನ್ನು ಕೂಡ ಗಾಂಧಾರಕ್ಕೆ ಹೊಂದಿಸಿ ಹಾಡಬೇಕೆಂಬ ಮಾತಿಗೆ ಕಟ್ಟು ಬಿದ್ದು ಅಪಸ್ವರಗಳ ಕಂತೆಯನ್ನು ಹೊರಡಿಸುವದನ್ನು ಉದಾಹರಿಸಿ ಯಕ್ಷಗಾನದ ಮೂಲವನ್ನು ಗಾಂಧಾರಗ್ರಾಮಕ್ಕೆ ಜೋಡಿಸಿರುವದುಂಟು.[16] ಈ ಜೋಡಣೆಯ ಯುಕ್ತಾಯುಕ್ತತೆಯನ್ನು ಸಂಗೀತ ಶಾಸ್ತ್ರಜ್ಞರೇ ನಿರ್ಣಯಿಸಬಲ್ಲರು. ಆದರೆ ಗಾಂಧಾ

---

14 ಮುಳಿಯ ತಿಮ್ಮಪ್ಪಯ್ಯ: ಪಾರ್ತಿಸುಬ್ಬ, ಪು. ೨೮, ೪೨; ಎಚ್. ಕೆ. ರಂಗನಾಥ: ಕರ್ನಾಟಕ ರಂಗಭೂಮಿ, ಪು. ೨೪. ಯಕ್ಷಗಾನ ಬಯಲಾಟ, ಪು. ೯೨.

15. ಪಿ. ಸಾಂಬಮೂರ್ತಿ ದಕ್ಷಿಣಾದಿ ಸಂಗೀತ, ಪು. ೭೨

16. ಯಕ್ಷಗಾನ ಬಯಲಾಟ, ಪು. ೭೨

—ಗ್ರಾಮದ ವಿಷಯದಲ್ಲಿ ಅವರಲ್ಲಿಯೆ ಮತೈಕ್ಯವಿಲ್ಲ. ಸ್ವಾಮಿ ಪ್ರಜ್ಞಾನಂದರು ತಮ್ಮ ಭಾರತೀಯ ಸಂಗೀತದ ಐತಿಹಾಸಿಕ ಅಧ್ಯಯನವೆಂಬ ಇಂಗ್ಲೀಷ ಗ್ರಂಥದಲ್ಲಿ ಈ ವಿಷಯವನ್ನು ಚರ್ಚಿಸಿ ಗಾಂಧಾರ-ಗ್ರಾಮದ ಹಾಡುಗಾರಿಕೆ ಗ-ಸ್ವರ ದಿಂದ (ಗಮಪದನಿಸರಿ) ಪ್ರಾರಂಭವಾಗುವದೆಂಬುದು ತಪ್ಪು ತಿಳಿವಳಿಕೆಯೆಂದು ತೋರಿಸಿಕೊಟ್ಟಿರುವರು.[17] ಎಸ್. ಎಸ್. ರಾಮಚಂದ್ರನ್ ತಮ್ಮ ಕರ್ನಾಟಕ ಸಂಗೀತದಲ್ಲಿಯ ರಾಗಗಳೆಂಬ ಇಂಗ್ಲೀಷ ಗ್ರಂಥದಲ್ಲಿ-ಸಂಗೀತಜ್ಞರಲ್ಲಿ ಕೆಲವರಿಗೆ ತಮ್ಮ ಸ್ವಚ್ಛಂದ ಶಾಸ್ತ್ರಪ್ರಣಾಲಿಯನ್ನು ನಿರೂಪಿಸಲು ಎಂದೋ ನಾಮಶೇಷವಾದ ಗಾಂಧಾರಗ್ರಾಮವು ಒಂದು ಅನುಕೂಲ ಸಾಧನವಾಗಿದೆ, ಎಂದು ಮೂದಲಿಸಿರುವರು.[18] ನಾಟ್ಯಶಾಸ್ತ್ರಕಾರ ಭರತನಿಗಿಂತ ಮೊದಲೆ ಲುಪ್ತವಾದ ಗಾಂಧಾರ ಗ್ರಾಮದ ಯಥಾರ್ಥ ಕಲ್ಪನೆ ಇಲ್ಲದಿರುವಾಗ,ಸಂಗೀತ ರತ್ನಾಕರಕಾರ ಶಾರ್ಙ್ಗದೇವ (ಕ್ರಿ.ಶ. ೧೨೧೦-೧೨೨೪)ನಂಥವರು 'ಗಾಂಧಾರ-ಗ್ರಾಮಸ್ಯ ಕ್ಷಿತಿತಲೇಽನುಪಯೋಗೇತಿ ಶಾಸ್ತ್ರಸ್ಯ ಸರ್ವ ವಿಷಯತ್ವಾತ್ತಲ್ಲಕ್ಷಣಂಕಥಯತಿ '.[19] ಅಂದರೆ ಗಾಂಧಾರಗ್ರಾಮವು ಭೂತಲದಲ್ಲಿ ಅನುಪಯುಕ್ತವಿದೆ; ಆದರೂ ಶಾಸ್ತ್ರದ ಪೂರ್ತಿಗಾಗಿ ಅದರ ಲಕ್ಷಣವನ್ನು ವಿವರಿಸುವೆನೆಂದು ಹೇಳಿ ಈ ರೀತಿ ಮಾಡಿರುವಾಗ, ಯಕ್ಷಗಾನದ ಮೂಲವನ್ನು ಗಾಂಧಾರ-ಗ್ರಾಮದಲ್ಲಿ ಅರಸುವದು ಕುರುಡನ ಆಲೆದಾಟವೇ ಸರಿ.

ಯಕ್ಕಲಗಾಣನೆಂದರೆ ಸಾಥಿದಾರ, ವಾದ್ಯವೃಂದ, ಮೊದಲಾದ ಹಿಮ್ಮೇಳವಿಲ್ಲದೆ ಒಬ್ಬೊಂಟಿಗನಾಗಿ ಹಾಡುವ ಸಮರ್ಥ ಗಾಯಕ. ಸಂಸ್ಕೃತದಲ್ಲಿ ಇವನಿಗೆ 'ಏಕಲ ಗಾಯಕ' ಎಂದಿದೆ. ಪರಸ್ಪರ ಸಹಕಾರದಿಂದ ಇಬ್ಬರು ಈ ರೀತಿ ಹಾಡುತ್ತಿದ್ದರೆ ಅವರಿಗೆ 'ಯಮಳ' ಎನ್ನುತ್ತಿದ್ದರು. ಸಾಥಿದಾರ ಮತ್ತು ಇತರ ಹಿಮ್ಮೇಳದ ನೆರವಿನಿಂದ ಹಾಡುವವನಿಗೆ 'ವೃಂದಗಾಯಕ' ಎನ್ನುತ್ತಿದ್ದರು. ಸ್ಥಾನಮಾನಗಳಲ್ಲಿ ಏಕಲಗಾಯಕ (ಯಕ್ಕಲಗಾಣ) ಶ್ರೇಷ್ಠ, ನಂತರ ಯಮಳರು, ನಂತರ ವೃಂದ ಗಾಯಕ.[20] ಯಕ್ಕಡಿಗನೆಂದರೆ ತಾಳಧಾರಿ. ಇದರಲ್ಲಿಯ 'ಯಕ್ಕ' ಯಕ್ಷಗಾನದಲ್ಲಿಯ ಯಕ್ಷದ ತದ್ಭವ. ತದ್ಭವ ಎನ್ನುವದಕ್ಕಿಂತ ಮೂಲ ಎನ್ನಬಹುದು.

ಜಕ್ಕರಿ ನೃತ್ಯ ಯವನರಿಗೆ ಸೇರಿದೆ. 'ಕೋಮಲಾಂಗ್ಯೈರ್ಯದಾ ನೃತ್ಯಂ ಭ್ರಮರ್ಯಾದಿ ವಿರಾಜಿತಂ ತನ್ನೃತ್ಯಂ ಜಕ್ಕರೀರ್ನುತಾ' ಎಂದು ಈ ನೃತ್ಯದ ಲಕ್ಷಣವನ್ನು ಹೇಳಿ 'ಯವನ್ಯಾಭಾಷಯಾಯುಕ್ತಂ, ಯುವನಾನಾಮತಿಪ್ರಿಯಃ',

17. ಸ್ವಾಮಿ ಪ್ರಜ್ಞಾನಂದ: ಭಾರತೀಯ ಸಂಗೀತದ ಐತಿಹಾಸಿಕ ಅಭ್ಯಾಸ, ಪು.೨೫-೩೦

18. ಎಸ್. ಎಸ್. ರಾಮಚಂದ್ರನ್ ಕರ್ನಾಟಕ ಸಂಗೀತದಲ್ಲಿಯ ರಾಗಗಳು

19. ಶಾರ್ಙ್ಗದೇವ: ಸಂಗೀತ ರತ್ನಾಕರ, ಸಂ. ೧-೪ (ಶ್ಲೋ. ೪-೫)ಮತ್ತು ವ್ಯಾಖ್ಯೆ

20. ಮಾನಸೋಲ್ಲಾಸ, ಗೀತ ವಿನೋದ, ೫೪-೫೫ ಮತ್ತು ಇತರ ಸಂಗೀತ ಗ್ರಂಥಗಳು

ಎಂದಿರುವರು ಲಾಕ್ಷಣಿಕರು [೨೧].

ಯಕ್ಷಗಾನ ತಾಲಗೀತಗಳ ಒಂದು ಜಾತಿ

ನಾಟ್ಯಶಾಸ್ತ್ರಕಾರ ಭರತನು ಗೀತಗಳಲ್ಲಿ ಅತಾಲ ಸತಾಲ ಎಂಬ ಎರಡು ಭೇದಗಳನ್ನು ಮಾಡಿರುವನು. ' ನಿಯತಾಕ್ಷರ ಸಂಬಂಧಂ ಛಂದೋಯತಿ ಸಮನ್ವಿತಂ, ನಿಬದ್ಧಂತು ಪದಂಜ್ಞೇಯಂ ಸತಾಲ ಪತನಾತ್ಮಕಂ ' ಎಂದು ಸತಾಲ ಗೀತಗಳ ಲಕ್ಷಣವನ್ನು ಹೇಳಿರುವನು, ಆತ.[೨೨] ಸತಾಲ ಗೀತಗಳಲ್ಲಿ ಗೀತಕ್ಕೆ ಪ್ರಾಧಾನ್ಯವಿರುವಾಗ ತಾಲವು ನವವಧುವಿನಂತೆ ಗೀತವನ್ನು ಅನುಸರಿಸಿ ಸಾಗುತ್ತದೆ. ಇಂಥ ಗೀತಗಳಲ್ಲಿ ಸಾಹಿತ್ಯ ಅಂದರೆ ಅಕ್ಷರಗಳು ಕಡಿಮೆ ಇರುತ್ತವೆ. ಆದ್ದರಿಂದ ಗಾಯಕನಿಗೆ ವಿವಿಧ ಆಲಾಪ ಅಲಂಕಾರಗಳನ್ನು ಜೋಡಿಸಿ ತನ್ನ ಕೌಶಲ್ಯವನ್ನು ತೋರಿಸಲು ಅವಕಾಶವಿರುತ್ತದೆ. ತಾಲಕ್ಕೆ ಪ್ರಾಧಾನ್ಯವಿರುವಾಗ ಅಂದರೆ ಗೀತವು ತಾಲಾನುಗವಿರುವಾಗ ಆಲಾಪ ಅಲಂಕಾರಗಳಿಗೆ ಅಷ್ಟೊಂದು ಅವಕಾಶವಿರುವುದಿಲ್ಲ. ತಾಲಕ್ಕೆ ಹೊಂದಿಕೊಂಡು ನಿರ್ದಿಷ್ಟರಾಗದ ಚೌಕಟ್ಟಿನಲ್ಲಿ ಗೀತ ಮುಂವರಿಯುತ್ತದೆ. ಅರ್ಥಸ್ಫೂರ್ತಿಯು ಹಾಡುಗಾರನನ್ನು ಅವಲಂಬಿಸಿರುತ್ತದೆ. ಆತ ಅರ್ಥದ ಮರ್ಮವನ್ನರಿತು ಹಾಡಿದರೆ ಹೆಚ್ಚು ಸೊಬಗುಂಟಾಗುತ್ತದೆ.

ಈ ಬಗೆಯ ಗೀತಗಳೇ ಯಕ್ಷಗಾನಗಳು. ಈ ಬಗೆಯ ಹಾಡುಗಾರಿಕೆಯೇ ಯಕ್ಷಗಾನ ಶೈಲಿ.

ಕಾವ್ಯದಲ್ಲೂ ಸತಾಲ ಛಂದೋಬಂಧಗಳಿವೆ. ಇಲ್ಲಿ ೩, ೪, ೫ ಹೀಗೆ ಕ್ಲುಪ್ತ ಮಾತ್ರೆಗಳ ಗಣಗಳಿರುತ್ತವೆ. ತಾಲ ತೀರ ಪ್ರಾಥಮಿಕ ಸ್ವರೂಪದ್ದಿರುತ್ತದೆ. ಗಣಗಳ ಮಾತ್ರಾಸಂಖ್ಯೆಗನುಸರಿಸಿ ತಾಳ ಹಾಕಿದರೆ ಸಾಕು. ನೃಪತುಂಗನ ಜತ್ತಾಣ, ಆದಿ ನಾಗವರ್ಮನ ತಾಲವೃತ್ತ, ರಘಟಾ (ರಗಳೆ), ಇಮ್ಮಡಿ ನಾಗವರ್ಮನ ಬಾಜನೆಗಬ್ಬ ಈ ವರ್ಗದಲ್ಲಿ ಬರುತ್ತವೆ. ಕರ್ನಾಟಕದ ಬಹುರೂಪಿಗಳಿಗೆ, ಅಂದರೆ ವೇಷಭೂಷಣಗಳೊಂದಿಗೆ ಹಾಡಿ-ಕುಣಿದು ಮನರಂಜನೆ ಒದಗಿಸುವ ಪಂಗಡಕ್ಕೆ ಇರುವ ' ಜಾತಿಗಾರ ' ಎಂಬ ಹೆಸರು ಸಹ ಈ ಜತ್ತಾಣ (ಜತೆಗಾಣ) ದಿಂದ ಬಂದಿರಬೇಕು. ಸಂಸ್ಕೃತದಲ್ಲಿ ಯತಿ, ಕನ್ನಡದಲ್ಲಿ ಜತಿ ಶಬ್ದಗಳು ತಾಲಕ್ರಿಯೆ ಅಥವಾ ತಾಲಕ್ಕೆ ಸಮಾನಾರ್ಥದಲ್ಲಿ ಬಳಸಲ್ಪಟ್ಟಿವೆ. ಚಾಲುಕ್ಯ ಸೋಮೇಶ್ವರ ' ತಾಲಪಾತ ಸಮಾನ್ಯೈಃ' ಎಂದು ತಾಲ ಯತಿಯನ್ನು ವರ್ಣಿಸಿರುವನು.[೨೩] ರಾಜಶೇಖರ ವಿಳಾಸದಲ್ಲಿ ಷಡಕ್ಷರಿ ' ಪದನಖಮಯೂರಕ್ಕೆ ಜತಿಗುಡೆ; ಜತಿಗುಡುವ ತಂಬಟದ ಬೆಂಬಳಿವಿಡಿದು ' ಎಂದು

---

21. ಭರತ ಕೋಶ
22. ಭರತ ನಾಟ್ಯಶಾಸ್ತ್ರ, ಪು. ೩೨. ೨೯
23. ಮಾನಸೋಲ್ಲಾಸ, ವಾದ್ಯವಿನೋದ-ಶ್ಲೋ. ೮.

ಜತಿಗುಡು ಶಬ್ದದಿಂದ ತಾಲಕ್ರಿಯೆಯನ್ನು ಸೂಚಿಸಿರುವನು.[24] ಸಂಸ್ಕೃತದಲ್ಲಿ ತಾಲಾನುಗ ಗೀತಗಳಿಗೆ ಯತಿಗೀತ ಎನ್ನುತ್ತಿದ್ದರು. ಇವೇ ಕನ್ನಡದ ಜತಿಗಾಣ/ಜತ್ತಾಣ/ಬಾಜನೆಗಬ್ಬಗಳು.

ಜತ್ತಾಣ ಬಾಜನೆಗಬ್ಬಗಳ ಹಾಡುಗಾರಿಕೆ ತಿಳಿಯದ ವಿಷಯವೆಂಬ ಮಾತಿದೆ. ಆದರೆ ಇವು ಪದ್ಯಪ್ರಕಾರಗಳಲ್ಲ, ಕಾವ್ಯಪ್ರಕಾರಗಳು. ಕಂದ, ವೃತ್ತ, ಅಕ್ಕರ, ಚೌಪದಿ, ಗೀತಿಕೆ, ತಿವದಿ (ತ್ರಿಪದಿ)ಗಳಿಂದ ಕೂಡಿದ ಪದ್ಯ ಪ್ರಬಂಧವು ಚತ್ತಾಣ ಅಥವಾ ಜತ್ತಾಣ.[25] ಪದ್ಯ ಅಂದರೆ ಮೇಲಿನ ಕಂದ ವೃತ್ತಾದಿಗಳಿಂದ ಮತ್ತು ಪದ್ಧತಿಕೆಗಳಿಂದ ಕೂಡಿರುವ ಪ್ರಬಂಧ ಬಾಜನೆಗಬ್ಬ.[26] ಇವುಗಳಲ್ಲಿ ಪದ್ಧತಿಕೆ ರಗಳೆಯ ಜಾತಿಗೆ ಸೇರಿದೆ. ಅತ ಏವ ಸತಾಲ ಬಂಧ. ಮಿಕ್ಕವು ಸತಾಲವೂ ಇರಬಹುದು ಅತಾಲವೂ ಇರಬಹುದು. ಚಾಲುಕ್ಯ ಸೋಮೇಶ್ವರನ ಮಗ ಜಗದೇಕಮಲ್ಲ (ಕ್ರಿ. ೧೧೩೮-೧೧೫೦) ತನ್ನ ಸಂಗೀತ ಚೂಡಾಮಣಿ ಗ್ರಂಥದಲ್ಲಿ ಕಂದ ಗದ್ಯಗಳಿಗೆ ಸಹ ವಿಶಿಷ್ಟ ತಾಳಗಳನ್ನು ಹೇಳಿ ಅವುಗಳ ಪ್ರಸ್ತಾರವನ್ನು ಕೊಟ್ಟಿರುವನು.[27] ಚತ್ತಾಣ ಬಾಜನೆಗಬ್ಬಗಳಲ್ಲಿ ಅಡಕವಾದ ಕಂದ, ವೃತ್ತ, ಅಕ್ಕರ, ಚೌಪದಿ, ಗೀತಿಕಾದಿಗಳು ಇಂದಿನ ಯಕ್ಷಗಾನ ಪ್ರಬಂಧಗಳಲ್ಲಿವೆ.[28] ಭಾಗವತರು ಇವುಗಳನ್ನು ಲೋಕ ಪ್ರಸಿದ್ಧ ಅಥವಾ ತಮಗುಚಿತವೆನಿಸಿದ ರೀತಿಯಲ್ಲಿ ಹಾಡುತ್ತಿರುವರು. ವಸ್ತುಸ್ಥಿತಿ ಇಂತಿರುವಾಗ ಚತ್ತಾಣ ಬಾಜನೆಗಬ್ಬಗಳ ಹಾಡುಗಾರಿಕೆ ತಿಳಿಯದೆಂಬುದು ಸಮಂಜಸವಾಗದು.

ಸಂಸ್ಕೃತ ಯತಿ ಮತ್ತು ಕನ್ನಡ ಜತಿಗೆ ಸಮಾನಾರ್ಥಕವಿದ್ದ 'ಜಕ್ಕ' ಎಂಬ ಇನ್ನೊಂದು ಶಬ್ದವಿದ್ದಿತು. ನರ್ತನದ ಪೂರ್ವರಂಗದಲ್ಲಿ ಬರುವ ಗೋಂಡಲಿ ನರ್ತನದ ವಿವರಣೆಯಲ್ಲಿ 'ಸಕಲಂಧ್ರುವಕಂ ಗೀತ್ವಾ ಜಕ್ಕಯಾ ವಾದ್ಯಮಾನಾ', ಎಂದಿರುವನು ಶಾರ್ಙ್ಗದೇವ. ಆತನ ಈ ಉಕ್ತಿಯಲ್ಲಿಯ ಜಕ್ಕಪದಕ್ಕೆ ವ್ಯಾಖ್ಯಾಕಾರ ಕಲ್ಲಿನಾಥ 'ಜಕ್ಕಾನಾಮ ಯತಿರೇವೋಚ್ಯತೇ', ಎಂದು ಅರ್ಥ ಹೇಳಿರುವನು. ಇನ್ನೊಂದೆಡೆ ಯತಿಪ್ರಬಂಧದ ವಿಷಯದಲ್ಲಿ 'ಜಕ್ಕೇತಿ ಯತಿಃ ಸಂಜ್ಞಾಂತರಮಿತ್ಯರ್ಥಃ' ಎಂದು ಅದನ್ನೆ ಪುನರುಚ್ಚರಿಸಿರುವನು.[29] ಇದರಿಂದ ಸಂಸ್ಕೃತದ ಯತಿಯು ಜತಿ ಆಗಿ, ಜತಿಗಾಣ, ಜತ್ತಾಣ, ಜಾತಿಗ, ಜತಿಗುಡು, ಮೊದಲಾದ ಶಬ್ದಗಳಲ್ಲಿ ಬಳಕೆಯಾಗಿರುವಂತೆ, ಅದೇ ಯತಿಗೆ ಸಮಾನಾರ್ಥಕವಿರುವ ದೇಶೀ 'ಜಕ್ಕ'ವು

---

24. ಷಡಕ್ಷರಿ: ರಾಜಶೇಖರ ವಿಳಾಸ, ೪-೧೪, ೯-೧೧೨ ನಂತರ ಬರುವ ವಚನಗಳು.
25. ಕವಿರಾಜಮಾರ್ಗ, ೧-೩೫
26. ಇಮ್ಮಡಿ ನಾಗವರ್ಮ,: ಕಾವ್ಯಾವಲೋಕನ, ಪು. ೯೫೫
27. ಜಗದೇಕಮಲ್ಲ: ಸಂಗೀತ ಚೂಡಾಮಣಿ, ಪ್ರಬಂಧತಾಲಗಳು.
28. ಕೆ. ಎಂ. ಕೃಷ್ಣರಾವ್: ಯಕ್ಷಗಾನ ಕೃತಿಗಳ ಛಂದಸ್ಸು; ಅಭಿನಂದನೆ, ಪು. ೨೨೨-೨೩೦
29. ಸಂಗೀತ ರತ್ನಾಕರ, ೯-೯೫೪, ೭-೧೨೮೭

ಸಂಸ್ಕೃತದಲ್ಲಿ 'ಯಕ್ಷ'ವಾಗಿ 'ಗಾನ'ದೊಡನೆ ಸೇರಿ 'ಯಕ್ಷಗಾನ'ವಾಗಿರಬೇಕೆಂಬುದು ಕಂಡು ಬರದಿರಲಾರದು. ರತ್ನಾಕರವರ್ಣಿಯ ಯಕ್ಕಡಿಗ, ಜಕ್ಕಲು (ಆಂಧ್ರದ ಜಾತಿಗರು) ಪದಗಳಾದರೂ ಇದೇ ಜಾಡಿನಲ್ಲಿ ಹುಟ್ಟಿಕೊಂಡಿರಬೇಕು. ಸಂಸ್ಕೃತದಲ್ಲಿ ಯತಿಗೀತವು ಎಂದಿನಿಂದಲೂ ಬಳಕೆಯಲ್ಲಿದ್ದುದರಿಂದ ಲಾಕ್ಷಣಿಕರು ಅದನ್ನೇ ಬಳಸುತ್ತಾ ಬಂದಿರುವರು. ಯಕ್ಷ ಮತ್ತು ಗಾನ ಸಂಸ್ಕೃತ ಶಬ್ದಗಳಿದ್ದರೂ ಅವುಗಳಿಂದ ಉಂಟಾದ ಯಕ್ಷಗಾನ ಸಂಸ್ಕೃತ ಸಾಹಿತ್ಯದಲ್ಲಿ ದೊರೆಯದಂತಾಗಿದೆ ಎಂಬ ಡಾ. ರಾಘವನ್‌ರ ಮಾತಾದರೂ[೩೦] ಅದು ದೇಶೀ ಶಬ್ದ ಜಕ್ಕದ ಸಂಸ್ಕೃತೀಕರಣ ಮತ್ತು ಅವಾಂತರದಲ್ಲಿ ಹುಟ್ಟಿಕೊಂಡ ಪಂಡಿತದತ್ತ ಶಬ್ದವೆಂಬುದನ್ನು ಸೂಚಿಸುತ್ತದೆ.

ಯಕ್ಷಗಾನದ ಸ್ವರೂಪ

ಯಕ್ಷಗಾನ ಶಾಸ್ತ್ರೀಯ ಸಂಗೀತದ ಒಂದು ಕವಲು. ರಾಗ ಪ್ರಧಾನವಿರುವ ಇಂದಿನ ಕಚೇರಿ ಸಂಗೀತವನ್ನು ಗಂಧರ್ವಗಾನವೆಂದಿಟ್ಟುಕೊಂಡರೆ ತಾಲಪ್ರಧಾನ ಸಂಗೀತವನ್ನು ಅದರಿಂದ ಬೇರ್ಪಡಿಸಿ ಹೇಳಲು ಯಕ್ಷಗಾನ ಪದವನ್ನು ಬಳಸಬಹುದು. ಲಾಕ್ಷಣಿಕರು ಅದರ ಇನ್ನೊಂದು ಹೆಸರನ್ನು ಅಂದರೆ 'ಯತಿಗೀತ' ಪದವನ್ನು ಬಳಸಿರುವರು. ಶಾಸ್ತ್ರ ಇತಿಹಾಸಗಳ ದೃಷ್ಟಿಯಿಂದ ನೋಡಿದರೆ ಯಕ್ಷಗಾನ ಕಲೆಯು ಜಾನಪದವೆಂಬುದಕ್ಕೆ ಆದಿಂದು ಗ್ರಾಮಾಂತರ ಪ್ರದೇಶಗಳಲ್ಲಿ ಅಸ್ತಿತ್ವದಲ್ಲಿರುವುದು ಮುಖ್ಯ ಕಾರಣವೆನಿಸುವುದು. ಇದಕ್ಕೂ ಅಭಿಜಾತ ನಾಟಕಕ್ಕೂ ಇರುವ ವ್ಯತ್ಯಾಸ ಹಾಡುಗಾರಿಕೆ, ನೃತ್ಯ, ವೇಷಭೂಷಣ, ವಾದ್ಯಾದಿಗಳ ವೈಶಿಷ್ಟ್ಯ, ಬಯಲಾಟವೆಂದು ಇದಕ್ಕಿರುವ ಹೆಸರು, ಕಥಾನಕಗಳ ಸ್ವರೂಪ ಮತ್ತು ಅವುಗಳಲ್ಲಿ ಕಾಳಗಕ್ಕಿರುವ ಪ್ರಾಧಾನ್ಯ, ಇವೇ ಮೊದಲಾದವು ಈ ಬಗೆಯ ತಿಳಿವಳಿಕೆಗೆ ಸಂವಾದಿಯಾಗಿವೆ. ಆದರೆ ಹಳ್ಳಿಗಳಲ್ಲಿ ಹುಟ್ಟಿ, ಅಲ್ಲಿಯೆ ಬೆಳೆದು, ಅಲ್ಲಿಯೆ ಸ್ಥಾಯಿಯಾದ ಕಲೆ ಇದಲ್ಲ. ಭರತಾದಿ ಲಾಕ್ಷಣಿಕರು ನಿರ್ದೇಶಿಸಿದ ಆದರೆ ಆಯಾ ಪ್ರದೇಶಗಳ ನೆಲ-ನೀರುಗಳಿಂದ ರಂಜಿತವಾಗಿ ಬೆಳೆದು ಬಂದಿರುವ ಕಲೆ ಇದು. ಚಾಲುಕ್ಯ ಸೋಮೇಶ್ವರ ಮತ್ತು ಆತನ ಪೂರ್ವದಲ್ಲಿ ಅಸ್ತಿತ್ವದಲ್ಲಿದ್ದ ಗಾನ, ನರ್ತನ, ಕಥಾಕಾಲಕ್ಷೇಪ ಮೊದಲಾದ ಮನರಂಜನೆಯ ಮಾಧ್ಯಮಗಳಲ್ಲಿ ಇದರ ಕುರುಹುಗಳನ್ನು ಕಾಣಬಹುದು. ಕರ್ನಾಟಕ ಸಂಗೀತ ಪಿತಾಮಹರೆನಿಸಿಕೊಂಡ ಪುರಂದರದಾಸರಿಂದ (?) ಪ್ರಾರಂಭಿಸಿ ಸಂಗೀತ ಶಾಸ್ತ್ರದಲ್ಲಿ ಪ್ರಮಾಣಭೂತ ಗ್ರಂಥಗಳನ್ನು ರಚಿಸಿದ ತಂಜಾವರದ ಅರಸರು, ಅಷ್ಟೇ ಖ್ಯಾತಿವಂತರಾದ ಮೈಸೂರಿನ ಮುಮ್ಮಡಿ ಕೃಷ್ಣರಾಜ, ಅಳಿಯ ಲಿಂಗರಾಜ, ಸಾಹಿತ್ಯದಲ್ಲಿ ಗಣ್ಯ ಸ್ಥಾನವನ್ನು ಗಳಿಸಿದ ಮುದ್ದಣಾದಿಗಳು ಇದರಲ್ಲಿ ಆಸ್ಥೆ ವಹಿಸಿ ಕೃಷಿ ಮಾಡಿರುವಾಗ ಇದನ್ನು ಶುದ್ಧ ಜಾನಪದ ಕಲೆಯೆಂದು ಭಾವಿಸುವುದೆಂತು?

30. ಡಾ. ವಿ. ರಾಘವನ್: ಯಕ್ಷಗಾನ; ತ್ರಿವೇಣಿ, ಸಂ. ೭, ಸಂಚಿಕೆ ೬.

ಬದಲಾಗಿ ಒಂದೊಮ್ಮೆ ಇದು ಅರಸನಿಂದ ಆಳಿನವರೆಗೆ, ಪಂಡಿತರಿಂದ ಪಾಮರರವರೆಗೆ, ಪಟ್ಟಣಗಳಿಂದ ಹಳ್ಳಿಗಳವರೆಗೆ, ಎಲ್ಲರಿಗೂ ಪ್ರಿಯವಾದ ಅಭಿಜಾತ ಕಲೆ ಇದ್ದಿತು, ಕಾಲಪ್ರಭಾವದಿಂದ ವಿಕೃತಗೊಂಡು ಇಂದು ಹಳ್ಳಿಗಳಲ್ಲಿ ಜೀವ ಹಿಡಿದುಕೊಂಡಿದೆ, ಎನ್ನುವುದು ಹೆಚ್ಚು ಸಮಂಜಸವಾದೀತು.

ಬಯಲಾಟವೇಕೆ ?

ಯಕ್ಷಗಾನ ಕಲೆಯು ಬಯಲಾಟವೇಕಾಗಿ ಉಳಿಯತೆಂಬುದಕ್ಕೂ ಒಂದು ಹಿನ್ನೆಲೆ ಇದೆ. ಅರಮನೆ ಮತ್ತು ತತ್ಸಮ ಕಟ್ಟಡಗಳ ಅಂಗವಾಗಿ ನಾಟ್ಯಶಾಲೆಗಳನ್ನು ಕಟ್ಟುವ ಪರಂಪರೆ ಪುರಾಣ ಕಾಲದಿಂದಲೂ ಬಂದಿದೆ. ಭೀಮನು ಕೀಚಕನನ್ನು ವಧಿಸಿದ್ದು ವಿರಾಟನ ನಾಟ್ಯ ಶಾಲೆಯಲ್ಲಿ. ಆದರೆ ಇತರೆಡೆಗಳಲ್ಲಿ ಕಾಯಂ ಸ್ವರೂಪದ ನಾಟ್ಯ ಶಾಲೆಗಳನ್ನು ಕಟ್ಟಿಸಲು ನಿರ್ಬಂಧವಿದ್ದಿತೆಂಬುದು ಕೌಟಿಲ್ಯನ ಅರ್ಥಶಾಸ್ತ್ರದಿಂದ ಕಂಡುಬರುವದು. ಕೌಟಿಲ್ಯನ ಕಾಲ ಕ್ರಿ. ಪೂ. ೪ ನೆಯ ಶತಮಾನವೆನ್ನುವರು. ಕೆಲವು ಸಂಶೋಧಕರು ಕ್ರಿ.ಶ. ೩ ನೆಯ ಶತಮಾನವೆನ್ನುವರು. ಕೌಟಿಲ್ಯನ ಸಮಯದಲ್ಲಿ ಸಹ ಊರೂರು ಸುತ್ತುವ ಮನರಂಜನೆಯ ಮೇಳಗಳಿದ್ದವು. ಅವರಿಗೆ ರಂಗೋಪಜೀವಿಗಳೆನ್ನುತ್ತಿದ್ದರು. ಕೌಟಿಲ್ಯನು ಹೊಲಗೆಲಸಗಳ ಹಂಗಾಮಿನಲ್ಲಿ ಅವರು ಒಂದೆಡೆ ನೆಲೆಸಿ ನಿಲ್ಲುವಂತೆ ಏರ್ಪಾಡು ಮಾಡಬೇಕೆಂದು ವಿಧಿಸಿರುವನು. ಮಿಕ್ಕ ಸಮಯದಲ್ಲಿ ಅವರನ್ನು ಬರಮಾಡಿಕೊಂಡು ಕಾರ್ಯಕ್ರಮಗಳನ್ನು ಜರುಗಿಸಬೇಕೆಂದಿರುವನು. ಕಾರ್ಯಕ್ರಮಗಳ ಮತ್ತು ಮೇಳದವರ ಖರ್ಚುವೆಚ್ಚಕ್ಕಾಗಿ ಊರವರೆಲ್ಲರೂ ವಂತಿಗೆ ಸಲ್ಲಿಸಬೇಕೆಂದಿರುವನು. ವಂತಿಗೆ ಸಲ್ಲಿಸಿದವರೂ ಅವರ ಪರಿವಾರದವರೂ ಕಾರ್ಯಕ್ರಮಗಳನ್ನು ನೋಡಲು ಅರ್ಹರೆಂದಿರುವನು. ವಂತಿಗೆ ಸಲ್ಲಿಸಲು ನಿರಾಕರಿಸಿದವರನ್ನು ದಂಡಿಸಬೇಕೆಂದಿರುವನು.[31] ಆದ್ದರಿಂದ ಈ ಕಾರ್ಯಕ್ರಮಗಳು ಹೆಚ್ಚಾಗಿ ಬಯಲಿನಲ್ಲಾಗಲಿ ಗುಡಿಗಳ ಆವಾರದಲ್ಲಾಗಲಿ ನಿರ್ಮಿಸಿದ ತಾತ್ಪೂರ್ತಿಕ ರಂಗಭೂಮಿಯ ಮೇಲೆ ನಡೆಯುತ್ತಿದ್ದವು. ಕಾಯಂ ಸ್ವರೂಪದ ಥಿಯೇಟರುಗಳನ್ನು ಕಟ್ಟಿಸಿ ಟಿಕೀಟಿಟ್ಟು ನಾಟಕಗಳನ್ನಾಡುವದು ಇತ್ತೀಚೆಯ ಪರಿಪಾಠ ಇದಕ್ಕೆ ಮೊದಲು ಸಾರ್ವಜನಿಕ ಕಾರ್ಯಕ್ರಮಗಳು ಬಯಲಿನಲ್ಲಿಯೆ ನಡೆಯುತ್ತಿರುವದಕ್ಕೆ ಕೌಟಿಲ್ಯನಿಂದ ಸಾಗಿಬಂದ ಈ ಪರಂಪರೆಯೆ ಕಾರಣವಿರಬೇಕು ಮತ್ತು ಬಳಕೆಯ ಮಾತುಗಳಲ್ಲಿ ಇವುಗಳಿಗೆ ಬಯಲಾಟಗಳೆಂಬ ಹೆಸರು ಬಂದಿರಬೇಕು.

ಮಾರ್ಗ–ದೇಶೀ

ಗಂಧರ್ವಗಾನವು ಮಾರ್ಗ ಸಂಗೀತ; ಯಕ್ಷಗಾನ ತದ್ಭಿನ್ನ. ಅದು ದೇಶೀ

31. ಕೌಟಿಲ್ಯ: ಅರ್ಥಶಾಸ್ತ್ರ, ಪುಟ ೧೬೨.

ಜಾನಪದ ಜನ್ಯ; ಎನ್ನುವದುಂಟು. ಅತ ಏವ ಶಾಸ್ತ್ರದ ದೃಷ್ಟಿಯಿಂದ ಯಾವುದು ಮಾರ್ಗ, ಯಾವುದು ದೇಶಿ, ಯಾವುದು ಜಾನಪದ ಮತ್ತು ಈ ವರ್ಗೀಕರಣದಲ್ಲಿ ಯಕ್ಷಗಾನದ ಸ್ಥಾನವೆಲ್ಲಿ ಬರುವದು ಎಂಬುದನ್ನಿಷ್ಟು ನೋಡೋಣ. ಸಂಗೀತದ ವಿಷಯದಲ್ಲಿ ಪಶುಪಕ್ಷಿಗಳ ಕೂಗು ಕುಣಿತಗಳಿಂದ, ಭಾವಾವೇಶದಲ್ಲಿರುವಾಗ ಆಡುವ ತನ್ನ ಮಾತು, ಉದ್ಗಾರಗಳಿಂದ, ಅಂಗಾಂಗಗಳ ಚಲನವಲನಗಳಿಂದ, ಆದಿಮಾನವನು ಗಾನ ನರ್ತನಗಳನ್ನು ಕಲಿತುಕೊಂಡಿರಬೇಕೆನ್ನುವರು; ಇರಬಹುದು. ಸ್ವಸಂರಕ್ಷಣೆಗಾಗಿ ತಾನು ಜರುಗಿಸುತ್ತಿದ್ದ ದೇವತಾರಾಧನ ಭೂತಾರಾಧನಗಳಲ್ಲಿ ಇವುಗಳನ್ನು ಬಳಸಿಕೊಂಡನೆನ್ನುವರು. ಇದಾದರೂ ಸ್ವಾಭಾವಿಕವಾದದ್ದೆ. ಆದರೆ ಹೀಗೆ ಕಲಿತುಕೊಂಡ ಗೀತ ನೃತ್ಯಾದಿ ಕಲೆಗಳು ಕಾಲಕ್ರಮದಲ್ಲಿ ವಿಕಾಸಗೊಂಡು ಇಂದಿನ ರೂಪದಲ್ಲಿ ಕಂಡುಬರುತ್ತವೆಂಬುದು ಸರಿಯಾಗಲಾರದು. ಈ ಬಗೆಯ ವಿಕಾಸವು ಅರಣ್ಯದಲ್ಲಿ ಹೇಗೋ ಹುಟ್ಟಿ ಹೇಗೋ ಬೆಳೆದು ಫಲಿಸುವ ವೃಕ್ಷದ ವಿಕಾಸದಂತಿದೆ. ಮಾನವೀಯ ಸಂಸ್ಕೃತಿಯು ಮೇಲಿನಂತೆ ಜನ್ಮಿಸಿರಬಹುದಾದರೂ ಅದರ ವಿಕಾಸ ಹೀಗಾಗಿಲ್ಲ. ಸಂಸ್ಕೃತಿಯ ಯಾವ ಕ್ಷೇತ್ರವನ್ನು ತೆಗೆದುಕೊಂಡರೂ ಆ ಕ್ಷೇತ್ರದಲ್ಲಿ ಕೆಲವು ಮಹಾವ್ಯಕ್ತಿಗಳಾಗಿ ಹೋಗಿರುವದನ್ನು ಎಲ್ಲ ದೇಶಗಳಲ್ಲಿ ಕಾಣಬಹುದು. ಅವರು ತಮ್ಮ ಸಮಯದಲ್ಲಿ ಆ ಕ್ಷೇತ್ರದಲ್ಲಿ ಕಂಡುಬಂದ ವೈಶಿಷ್ಟ್ಯ, ಪರಂಪರೆ, ರೀತಿ ನೀತಿಗಳನ್ನು ಸಂಗ್ರಹಿಸಿ, ಸಂಸ್ಕರಿಸಿ, ಅವುಗಳಿಗೆ ತಮ್ಮ ಬುದ್ಧಿ-ಪ್ರತಿಭೆಗಳ ಮೆರಗು ಕೊಟ್ಟು ಲೋಕೋಪಕಾರಾರ್ಥವಾಗಿ ಶಾಸ್ತ್ರದ ರೂಪದಲ್ಲಿ ನಿರೂಪಿಸಿರುವರು. ಅವರ ಈ ನಿರೂಪಣೆಯೆ ಮುಂದಿನವರಿಗೆ ಮಾನದಂಡಗಳಾಗಿವೆ.[32]

ಸಂಗೀತ ನಾಟ್ಯಶಾಸ್ತ್ರಗಳ ಮಟ್ಟಿಗೆ ಇಂದು ನಮಗೆ ಭರತನೇ ಆದ್ಯಪ್ರವರ್ತಕ. ಆತನ ಮತ್ತು ಅನಂತರದ ಆಚಾರ್ಯರ ನಿರೂಪಣೆಯು ಈ ವಿಷಯದಲ್ಲಿ ಮಾನದಂಡವಾಗ ಬಲ್ಲದು. ಮೊದಲು ಕಲೆ, ಅನಂತರ ಶಾಸ್ತ್ರ, ಮೊದಲು ಭಾಷೆ, ಅನಂತರ ವ್ಯಾಕರಣ, ಎಂಬ ಮಾತುಗಳು ಭರತ ಪಾಣಿನಿಯರು ಹುಟ್ಟುವ ಮೊದಲು ಇದ್ದಿರಬಹುದಾದ ಈ ವಿಷಯಗಳ ವಿಕಾಸದ ಒಂದು ಹಂತವನ್ನು ಸೂಚಿಸುತ್ತವೆ. ನಾಟ್ಯಶಾಸ್ತ್ರ, ವ್ಯಾಕರಣಶಾಸ್ತ್ರ ಅಥವಾ ಇತರ ಯಾವುದೆ ಶಾಸ್ತ್ರ ಹುಟ್ಟಿದನಂತರ ಅದನ್ನು ಬದಿಗೆ ಸರಿಸಿ ಆ ಮೊದಲಿನ ಪರಿಸ್ಥಿತಿಯನ್ನು ತಳಹದಿಯಾಗಿಟ್ಟುಕೊಂಡು ಪ್ರತಿಪಾದಿಸಲೆತ್ನಿಸುವದು ವಿಕಾಸದ ಒಂದು ಮಹತ್ವದ ಕೊಂಡೆಯನ್ನು ಕತ್ತರಿಸಿದಂತಾಗುವದು. ನಮ್ಮ ಯಾವುದೆ ಕಲೆ, ಸಂಸ್ಕೃತಿ, ಶಾಸ್ತ್ರ ದೇವರಿಂದಲೋ ಋಷಿಗಳಿಂದಲೋ ಬಂದಿದೆಯೆಂಬ ನಂಬಿಕೆ ಐತಿಹಾಸಿಕ ಪರಿಜ್ಞಾನಕ್ಕೆ ತೊಡಕು ತರುವದೆಂದು ಹೇಳುವದುಂಟು. ಸಾಮಾನ್ಯವಾಗಿ ಈ ಬಗೆಯ ಸಂಬಂಧ ಶಾಸ್ತ್ರದ ಉಗಮ ಮತ್ತು ಭರತನಂಥ ಗ್ರಂಥಕರ್ತರಿಗೆ ಸಂಬಂಧಿಸಿರುತ್ತದೆ. ಬೇಡಾದಪರು

---

32. ಕೆ. ವಾಸುದೇವಶಾಸ್ತ್ರಿ (ಸಂ): ನಾಟ್ಯಶಾಸ್ತ್ರ ಸಂಗ್ರಹ, ಸಂ. ೨. ಮುನ್ನುಡಿ

ಈ ಭಾಗವನ್ನು ಬಿಟ್ಟುಬಿಡಬಹುದು. ದೇವ ಋಷಿಗಳಲ್ಲಿ ನಮ್ಮವರು ದೃಢವಾಗಿ ನಂಬಿದ್ದರು. ಇತರರೂ ನಂಬಿದ್ದರು. ಈ ನಂಬಿಕೆಯ ಮೂಲಕವೆ ಇತರ ಯಾವುದೇ ಕಾಯದೆ ಕಾನೂನುಗಳ ಒತ್ತಾಯವಿಲ್ಲದೆ ಅವು ಇಂದಿಗೂ ಬದುಕಿ ಉಳಿದಿವೆಯೆಂಬುದನ್ನು ಕಡೆಗಣಿಸುವಂತಿಲ್ಲ. ಕಾಲಪ್ರಭಾವದಿಂದ ಅವುಗಳಲ್ಲಿಯ ಕೆಲವು ವಿವರಗಳು ಇಂದು ತಿಳಿಯದಾಗಿವೆ. ತಿಳಿಯುವಂಥ ವಿವರಗಳಿಗೂ ಕಡಿಮೆ ಇಲ್ಲ. ಇಷ್ಟಾಗಿಯೂ ಅಲ್ಲಿ ಸರಿಯಾದ ಮಾರ್ಗದರ್ಶನ ದೊರೆಯದಿದ್ದರೆ ಅಥವಾ ಶಾಸ್ತ್ರ ಪ್ರಯೋಗಗಳಲ್ಲಿ ಪೂರ್ವಪಶ್ಚಿಮಗಳಷ್ಟು ಅಂತರವಿದ್ದರೆ ಶಾಸ್ತ್ರಕ್ಕಿಂತ ರೂಢಿಗೆ ಪ್ರಾಶಸ್ತ್ಯವೆಂಬ ಉಕ್ತಿಗನುಸರಿಸಿ ಆ ರೀತಿ ಮುಂದಡಿ ಇಡಬಹುದಾಗಿದೆ.

ಯಕ್ಷಗಾನವು ದೇಶಿ ಎಂಬುವಾಗ ನಮ್ಮ ಲಾಕ್ಷಣಿಕರು ಯಾವುದಕ್ಕೆ ಮಾರ್ಗ ಯಾವುದಕ್ಕೆ ದೇಶಿ ಎನ್ನುತಿದ್ದರೆಂಬುದನ್ನು ನೋಡಬೇಕು. ಭಾರತೀಯ ಸಂಗೀತದ ಅತ್ಯಂತ ಪ್ರಾಚೀನ ಮಾದರಿಗಳೆಂದರೆ ಸಾಮಗೀತಗಳು. ಇವುಗಳಿಗೆ ಸಂವಾದಿಯಾಗಿ ಕೆಲವು ಸ್ತೋತ್ರ ಗೀತಗಳು ಹುಟ್ಟಿಕೊಂಡವು. ಭಾರತೀಯ ಸಂಗೀತದಲ್ಲಿ ಈ ಸ್ತೋತ್ರಗೀತಗಳ ಹುಟ್ಟು ಎರಡನೆಯ ಹೆಜ್ಜೆ. ಶಿವನನ್ನು ಕುರಿತಿರುವದರಿಂದ ಇವುಗಳಿಗೆ ಶಿವಗೀತಗಳೆನ್ನುತ್ತಿದ್ದರು. ಇವಾದರೂ ಸಾಮಗೀತಗಳಷ್ಟೇ ಪವಿತ್ರ ಬ್ರಹ್ಮ ರಚಿತ ಎಂಬ ಭಾವನೆ ಇದ್ದಿತು. ವಿಶಿಷ್ಟ ಧಾಟಿ, ತಾಳಕ್ಕನುಸರಿಸಿ ಇವುಗಳನ್ನು ಹಾಡುತ್ತಿದ್ದರು. ನರ್ತನಕ್ಕೂ ಒಗ್ಗಿಸಿಕೊಂಡಿದ್ದರು. ಇದೇ ಮಾರ್ಗ ಸಂಗೀತ. ಇದಕ್ಕೇನೆ ಗಾಂಧರ್ವ ಸಂಗೀತವೆನ್ನುತ್ತಿದ್ದರು. ಈ ಗೀತಗಳ ಸಾಹಿತ್ಯ ಸ್ವರ ಪ್ರಸ್ತಾರಗಳು ಭರತನ ನಾಟ್ಯಶಾಸ್ತ್ರ, ಸಂಗೀತ ರತ್ನಾಕರ ಮಹಾರಾಣಾಕುಂಭನ ಸಂಗೀತರಾಜದಲ್ಲಿ ದೊರೆಯುತ್ತವೆ[33] ಮುಂದೆ ಮತಂಗ (ಕ್ರಿ. ಲ೫೦ ಈತನೊಬ್ಬ ಋಷಿ) ಬೇರೆ ಬೇರೆ ಪ್ರದೇಶಗಳಲ್ಲಿಯ ಬೇರೆ ಬೇರೆ ಭಾಷೆಗಳಲ್ಲಿಯ ಹಾಡುಗಳ ಧಾಟಿಗಳನ್ನು ಸಂಗ್ರಹಿಸಿ, ಸಂಸ್ಕರಿಸಿ, ಅವುಗಳಿಗೆ ರಾಗಗಳೆಂಬ ಹೆಸರು ಕೊಟ್ಟು ಸಂಗೀತ ಶಾಸ್ತ್ರದಲ್ಲಿ ಅಳವಡಿಸಿಕೊಂಡನು. ಅವರೆಗೆ ಸಂಗೀತದಲ್ಲಿ ರಾಗಗಳೆಂಬ ಹೆಸರಿದ್ದಿಲ್ಲ. ಮತಂಗನ ಗ್ರಂಥಕ್ಕೆ ಬೃಹದ್ದೇಶೀ ಎಂಬ ಹೆಸರಿದೆ. ದೇಶೀ ಧಾಟಿಗಳನ್ನು ಕುರಿತಿರುವ ಆತನ ವ್ಯಾಖ್ಯೆಯೆ ದೇಶಿಯನ್ನು ಗುರುತಿಸುವ ಸರಿಯಾದ ವ್ಯಾಖ್ಯೆ ಎನ್ನಬಹುದು. ಅದು ಹೀಗಿದೆ.

> ಅಬಲಾಬಾಲಗೋಪಾಲೈ: ಕ್ಷಿತಿಪಾಲೈರ್ನಿಜೇಚ್ಛಯಾ ।
> ಗೀಯತೇ ಸಾನುರಾಗೇಣ ಸ್ವದೇಶೇ ದೇಶಿರುಚ್ಯತೇ ॥

ಎಂದರೆ ಹೆಣ್ಣುಮಕ್ಕಳು, ಹುಡುಗರು, ದನಗಾಹಿಗಳು, ಅರಸರು ಎಲ್ಲರೂ ಮುಕ್ತ ಕಂಠದಿಂದ ತಮ್ಮ ಭಾಷೆಯಲ್ಲಿ ಹಾಡುವ ಗೀತ ಧಾಟಿಯೇ ದೇಶಿ, ಎಂದಿರುವನು,

---

33. ಡಾ. ವಿ. ರಾಘವನ್: ಭಾರತೀಯ ಸಂಗೀತದ ಸಾಹಿತ್ಯಿಕ ಇತಿಹಾಸ; ಮದ್ರಾಸ್ ಮ್ಯೂಜಿಕ್ ಅಕೆಡೆಮಿ ಪತ್ರಿಕೆ, ಸಂ. ೨೨.

ಆತ.[34] ಇತ್ತೀಚೆಗೆ ಭಾರತೀಯ ಸಂಗೀತದ ಅಂಗವಾಗಿ ಜಾನಪದ ಗೀತಗಳ ಲಕ್ಷಣ ಗಳನ್ನು ಕುರಿತು ಆಧುನಿಕ ಪದ್ಧತಿಯ ಮೇರೆಗೆ ಸಂಶೋಧನವನ್ನು ಕೈಕೊಂಡವರಲ್ಲಿ ಜಿ. ಎಚ್. ರಾನಡೆ ಒಬ್ಬರು. ಅವರು ಜಾನಪದ ಗೀತಗಳಲ್ಲಿ ಯಾವುದೊಂದು ಶಾಸ್ತ್ರೋಕ್ತ ರಾಗ ಅಥವಾ ರಾಗಗಳ ಛಾಯೆ ಕಂಡುಬರುವದು. ಪರೀಕ್ಷಿಸಿ ನೋಡಿ ದಾಗ ಎರಡರಲ್ಲೂ ಅನೇಕ ವ್ಯತ್ಯಾಸಗಳು ಕಂಡುಬರುತ್ತವೆ, ಎಂದಿರುವರು.[35] ಅವರ ಸಂಶೋಧನೆಯ ಫಲಿತಾಂಶಕ್ಕೂ ಮತಂಗನು ಸಂಸ್ಕರಣಕ್ಕಾಗಿ ಆಯ್ದುಕೊಂಡ ದೇಶೀ ಗೀತ ಧಾಟಿಗಳಿಗೂ ವ್ಯತ್ಯಾಸವಿಲ್ಲೆಂಬದು ಕಂಡುಬರದಿರಲಾರದು.

ಒಂದೊಮ್ಮೆ ಯಕ್ಷಗಾನಗಳು ದೇಶೀ ಜಾನಪದ ಇದ್ದರೆ ಅವು ಮತಂಗನು ಸಂಸ್ಕರಣಕ್ಕಾಗಿ ಆಯ್ದುಕೊಂಡ ಗೀತಗಳಿಗಿದ್ದಿರಬಹುದಾದ ಅಥವಾ ರಾನಡೆ ಸಂಶೋ ಧಿಸಿ ನಿರೂಪಿಸಿದ ಜಾನಪದ ಗೀತ ಲಕ್ಷಣಗಳಿಗೆ ಹೋಲುತ್ತಿದ್ದವು. ಆದರೆ ವಸ್ತು ಸ್ಥಿತಿ ಹೀಗಿಲ್ಲ. ಯಕ್ಷಗಾನದ ಪ್ರತಿಯೊಂದು ಹಾಡಿಗೆ ಶಾಸ್ತ್ರೀಯ ರಾಗತಾಳಗಳ ನಿರ್ದೇಶವಿರುತ್ತದೆ.[36]

ಮತಂಗನ ತರುವಾಯ ಮಾರ್ಗ ಹಾಗು ಆತ ಶೋಧಿಸಿ ಸಂಸ್ಕರಿಸಿದ ದೇಶೀ ಎರಡೂ ಗೀತ ಪದ್ಧತಿಗಳು ಬಳಕೆಯಲ್ಲಿದ್ದವು. ಆದ್ದರಿಂದ ಸಂಗೀತ ರತ್ನಾಕರಕಾರ

---

34. ಮತಂಗ: ಬೃಹದ್ದೇಶೀ, ಪು. ೧೩.

35. ಜಿ. ಎಚ್. ರಾನಡೆ: ಹಿಂದೂಸ್ತಾನಿ ಸಂಗೀತ, ಪು. ೧೪.

36. ಯಕ್ಷಗಾನಗಳಿಗೆ ರಾಗತಾಳಗಳ ನಿರ್ದೇಶವಿದ್ದರೂ ಆ ರಾಗತಾಳಗಳಿಗೆ ಹೊಂದಿಸಿ ಹಾಡಿದರೆ ಸ್ವಾರಸ್ಯ ಬರುವುದಿಲ್ಲ. ಅಲ್ಲದೆ ಕೆಲವು ರಾಗಗಳು ಯಕ್ಷಗಾನಗಳಲ್ಲಿಷ್ಟೇ ಕಂಡು ಬರುತ್ತವೆಂಬ ಮಾತುಗಳಿಂದ ಯಕ್ಷಗಾನಗಳ ದೇಶೀತ್ವವನ್ನು ಎತ್ತಿ ತೋರಿಸಲಾಗಿದೆ (ಯ.ಗಾ. ಕ. ವೈಶಿಷ್ಟ್ಯ; ಯ. ಗಾ. ಬ. ಪು. ೭೪). ಇದು ಸರಿಯೆನಿಸದು. ಪ್ರತಿಯೊಂದು ಹಾಡಿಗೆ ಅದಕ್ಕೆ ನಿರ್ದೇಶಿಸಿದ ರಾಗತಾಳಗಳಿಗೆ ಹೊಂದಿಕೊಂಡಿರುವ ಪರಂಪರಾಗತ ಧಾಟಿ ಇರುತ್ತದೆ. ಶ್ರೋತೃಗಳ ಕಿವಿಗಳು ಆ ಧಾಟಿಗೆ ಒಲಿದಿರುತ್ತವೆ. ರಸಭಾವಗಳನ್ನು ಗಮನಿಸಿ ಆ ಧಾಟಿಯಲ್ಲಿ ಹಾಡಿದರೆ ಮಾತ್ರ ಅದು ರಂಜಕವಾಗುವದು. ಹಾಡುಗಳ ರಾಗ, ತಾಳ, ಛಂದಸ್ಸು ಒಂದೇ ಇದ್ದರೂ, ಛಂದಸ್ಸಿನಲ್ಲಿಯ ಲಘು ಗುರುಮಾತ್ರೆಗಳ ಉಚಿತ ವಿನ್ಯಾಸ, ಮೃದು ಸ್ಫುಟ ಅಕ್ಷರ ಗಳ ಯೋಜನೆ, ದ್ರುತವಿಲಂಬಿತಾದಿ ಗತಿಗಳ ಮೂಲಕ ಅವುಗಳನ್ನು ಕರುಣ, ರೌದ್ರ ಮೊದ ಲಾದ ರಸಾಭಿವ್ಯಕ್ತಿಗೆ ಹೊಂದಿಸಿಕೊಳ್ಳಲಾಗುತ್ತಿದೆ. ಯಕ್ಷಗಾನ ವಿಶಿಷ್ಟವೆಂದು ಉಲ್ಲೇಖಿಸಿದ ಸುಮಾರು ೨೦ ರಾಗಗಳಲ್ಲಿ ಮೂರು ಅಂದರೆ ಮಾಧವಿ, ದ್ವಿಜಾವಂತಿ, ಘಂಟಾರವಗಳು ಗೋವಿಂದಾಚಾರ್ಯನ ಸಂಗ್ರಹ ಚೂಡಾಮಣಿ ಎಂಬ ಲಕ್ಷಣ ಗ್ರಂಥದಲ್ಲಿ ಸ್ವರಪ್ರಸ್ತಾರ ದೊಂದಿಗೆ ದೊರೆಯುತ್ತವೆ. ಇತರ ಕೆಲವು ಗ್ರಂಥಗಳಲ್ಲಿ ದೊರೆಯುತ್ತವೆ. ಊರವಿ ಎಂಬುದು ಕುರಂಜಿಯ ತದ್ಭವವೆನಿಸುತ್ತದೆ. ಇದಾದರೂ ಗೋವಿಂದಾಚಾರ್ಯನ ಈ ಗ್ರಂಥದಲ್ಲಿದೆ. ಇನ್ನೂ ಶೋಧಿಸಿದರೆ ಉಳಿದ ರಾಗಗಳೂ ದೊರೆಯುವಲ್ಲಿ ಸಂದೇಹವಿಲ್ಲ. ಹೀಗೆ ಮಾಡುವಾಗ ಒಂದು ವಿಷಯವನ್ನು ಗಮನಿಸಬೇಕು. ಅದೆಂದರೆ ಛಂದಸ್ಸಿನಲ್ಲಿ ಒಂದೇ ವೃತ್ತಕ್ಕೆ ಎರಡು ಮೂರು ಹೆಸರುಗಳಿರುವಂತೆ ರಾಗಗಳಿಗೂ ಇರುವದುಂಟು. ಆದ್ದರಿಂದ ಹೆಸರು ಯಾವುದೇ ಇದ್ದರೂ ಆ ರಾಗದ ಸ್ವರಪ್ರಸ್ತಾರವನ್ನು ಆಧರಿಸಿ ಶೋಧಿಸಬೇಕಾಗುವದು.

ಶಾರ್ಙ್ಗದೇವ :

> ರಂಜಕೋಽಸ್ವರಸಂದರ್ಭೋ ಗೀತಮಿತ್ಯಭಿಧೀಯತೇ ।
> ಗಾಂಧರ್ವಂ ಗಾನಮಿತ್ಯಸ್ಯ ಭೇದದ್ವಯ ಮುದರೀತಮ್ ॥37

ಶ್ರೋತೃಗಳ ಚಿತ್ತರಂಜಕವಾದ ಸ್ವರ ಸಾಹಿತ್ಯಗಳಿಂದ ಕೂಡಿರುವ ರಚನೆಗೆ ಗೀತ ವೆನ್ನುವರು ಮತ್ತು ಈ ಗೀತದಲ್ಲಿ ಎರಡು ಭೇದಗಳಿವೆ, ಎಂದು ವಿವರಿಸಿ,—ಅನಾದಿ ಸಂಪ್ರದಾಯದಿಂದ ಬಂದ 'ಗೀತ'ಗಳು ಅಂದರೆ ಮೇಲೆ ಉಲ್ಲೇಖಿಸಿದ ಶಿವಗೀತಗಳು ಗಾಂಧರ್ವ ಅಥವಾ ಮಾರ್ಗ ಗೀತಗಳು ; ಜನರಂಜನಾರ್ಥವಾಗಿ ವಾಗ್ಗೇಯಕಾರ ರಿಂದ ಅಂದರೆ ಸಂಗೀತಕೋವಿದರಿಂದ ಮತಂಗನ ನಿರೂಪಣೆಯನ್ನು ಆಧರಿಸಿ ರಚಿಸಿದ ಗೀತಗಳು ' ಗಾನ 'ಗಳು ಅಥವಾ ದೇಶೀ ಗೀತಗಳೆಂದು ಸ್ಪಷ್ಟೀಕರಿಸಿರುವನು. ಮಾರ್ಗ ಸಂಗೀತವನ್ನಿಷ್ಟೇ ಬಲ್ಲವನಿಗೆ ' ಸ್ವರಾದಿ ', ಮಾರ್ಗ-ದೇಶೀ ಎರಡೂ ಬಲ್ಲ ವನಿಗೆ ' ಗಾಂಧರ್ವ ' ಎನ್ನುವರೆಂದು ಹೇಳಿರುವನು.[38] ಕಾಲಾಂತರದಲ್ಲಿ ಮಾರ್ಗ ಸಂಗೀತವು ಲುಪ್ತವಾಗಿ ಮತಂಗ ಪ್ರಣೀತ ದೇಶಿಯೆ ಗಾಂಧರ್ವವಾಯಿತು. ಅದೇ ಮುಂದೆ ದೇಶ-ಕಾಲ-ಪ್ರಭಾವಗಳಿಂದ ರಂಜಿತವಾಗಿ ಹಲವು ಬಗೆಯ ಮಾರ್ಪಾಟು ಗಳನ್ನು ಹೊಂದಿ ಇಂದಿನ ನಮ್ಮ ಭಾರತೀಯ ಸಂಗೀತವಾಗಿ ಹರಿದುಬಂದಿದೆ. ಇದನ್ನೆ ನಾವು ಮಾರ್ಗವೆಂದಿಟ್ಟುಕೊಂಡರೆ ದೇಶೀ ಎಂಬುದು ರಾನಡೆ ನಿರೂಪಿಸಿದ ಅಸಂಸ್ಕರಿತ ಜಾನಪದ ಹಾಡುಗಾರಿಕೆಯಾಗುವದು. ಯಕ್ಷಗಾನವು ಈ ವರ್ಗಕ್ಕೆ ಸೇರಲಾರದೆಂಬುದನ್ನು ಈ ಮೊದಲು ಹೇಳಲಾಗಿದೆ. ಗಾಂಧರ್ವ/ಮಾರ್ಗ/ ಇಂದಿನ ಕಚೇರಿ ಸಂಗೀತವನ್ನು ಶಿಷ್ಟವೆಂದು ಬಗೆದು ಯಕ್ಷಗಾನವನ್ನು ದೇಶೀ ಎಂದು ಹೀಯಾ ಳಿಸುವದನ್ನು ಯಕ್ಷಗಾನ ಅಭಿಮಾನಿಗಳು ಪ್ರತಿಭಟಿಸಿರುವರು.[39] ಆದರೆ ವಿಚಾರಿಸಿ ನೋಡಿದಾಗ, ಈಗ ಇರುವದೆಲ್ಲವೂ ದೇಶಿಯೆ; ಆದ್ದರಿಂದ ಹೀಗೆ ಯಾರಾದರೂ ಯಕ್ಷಗಾನವನ್ನು ಕಡೆಗಣಿಸಿ ನುಡಿದಿದ್ದರೆ, ನುಡಿಯುತ್ತಿದ್ದರೆ, ಅದು ಮಾರ್ಗ-ದೇಶಿ ಗಳ ಕುರಿತಿರುವ ಅವರ ಅಜ್ಞಾನದ ಮೂಲಕವೆಂದು ಹೇಳಬಹುದು. ನಾಟ್ಯಶಾಸ್ತ್ರ ಕಾರ ಭರತನಿಂದ ಇಂದಿನವರೆಗೆ ಆಗಿಹೋದ ಒಬ್ಬ ಲಾಕ್ಷಣಿಕನಾದರೂ ಹೀಗೆ ಹೇಳಿಲ್ಲ.

ಹಾಡುಗಾರಿಕೆಯ ಶೈಲಿಗಳು

ಸಂಗೀತವು ಎಲ್ಲರಿಗೂ ಬೇಕು, ' ಶಿಶುರ್ವೇತ್ತಿ ಪಶುರ್ವೇತ್ತಿ ವೇತ್ತಿಗಾನ ರಸಂಫಣೀ ' ಎಂದಿರುವರು ಪೂರ್ವಾಚಾರ್ಯರು. ಆದರೆ ಎಲ್ಲರಿಗೂ ಒಂದೇ ಬಗೆಯ

---

37. ಸಂಗೀತ ರತ್ನಾಕರ, ೪-೧ ಮುಂದೆ.
38. ಅದೇ.
39. ಯಕ್ಷಗಾನ ಬಯಲಾಟ, ಪು. ೬೨

ಹಾಡುಗಾರಿಕೆ ರುಚಿಸುವದಿಲ್ಲ. ಒಂದೇ ಬಗೆಯ ಗೀತಗಳು ರುಚಿಸುವುದಿಲ್ಲ. ಪಾರ್ಶ್ವ ದೇವನೆಂಬ ಲಾಕ್ಷಣಿಕನು (ಕ್ರಿ. ೧೩೦೦) ಸಂಗೀತ ಸಮಯಸಾರವೆಂಬ ತನ್ನ ಗ್ರಂಥ ದಲ್ಲಿ ಯಾರಾರಿಗೆ ಯಾವ ಬಗೆಯ ಗೀತಗಳು ರುಚಿಸುತ್ತವೆಂಬುದನ್ನೂ ಹಾಡುಗಾರಿ-ಕೆಯ ಶೈಲಿಗಳನ್ನೂ ವಿವರಿಸಿರುವನು. ಶ್ರೋತೃಗಳನ್ನು ಆಚಾರ್ಯ, ಪಂಡಿತ, ಸ್ತ್ರೀ, ಮತ್ತು ಇತರರು ಹೀಗೆ ನಾಲ್ಕು ಮುಖ್ಯವರ್ಗಗಳಲ್ಲಿ ವಿಂಗಡಿಸಿ—

> ಆಚಾರ್ಯಾಃ ಸಮಮಿಚ್ಛಂತಿವ್ಯಕ್ತಮಿಚ್ಛಂತಿ ಪಂಡಿತಾಃ
> ಸ್ತ್ರೀಯೋಮಧುರ ಮಿಚ್ಛಂತಿ ವಿಕೃಷ್ಟಮಿತರೇಜನಾಃ ॥

ಆಚಾರ್ಯರಿಗೆ ರಾಗ, ತಾಲ ಮತ್ತು ಅಕ್ಲಿಷ್ಟ ಪದಗಳಿರುವ ಗೀತಗಳು, ಪಂಡಿತರಿಗೆ ಇದೇ ಬಗೆಯ ಸ್ಪಷ್ಟಸ್ವರಗಳಿಂದ ಕೂಡಿದ ಗೀತಗಳು, ಸ್ತ್ರೀಯರಿಗೆ ಲಲಿತ, ಶೃಂಗಾರ ರಂಜಿತ ಮತ್ತು ಆಕರ್ಷಕಧಾಟಿಯ ಗೀತಗಳು, ಸಾಮಾನ್ಯರಿಗೆ ಇಂಥವೆ ಆದರೆ ಉಚ್ಚಸ್ವರದಲ್ಲಿ ಹಾಡಲ್ಪಡುವ ಗೀತಗಳು ರುಚಿಸುವವೆಂದಿರುವನು.[40] ಶೈಲಿಗಳ ವಿಷಯ ದಲ್ಲಿ ಚೋಕ್ಷ ಅಂದರೆ ಸ್ಪಷ್ಟ, ಯೋಗಿ, ಮಲಿನ, ಸ್ತ್ರೀವಿಶಿಷ್ಟ, ಪೇರಣಿ (ಹಾಸ್ಯಪೂರಿತ) ಮತ್ತು ಕಥಕ ಹೀಗೆ ಆರು ಶೈಲಿಗಳನ್ನು ಹೇಳಿರುವನು.[41] ಯಕ್ಷಗಾನವಾದರೂ ಲೋಕರಂಜನ ಪ್ರಧಾನ ಗೀತ, ಕಚೇರಿ ಸಂಗೀತದ ನಯ-ನಾಜೂಕು ಅಲಾಪಾದಿ ಗಳಿಗೆ ಅಷ್ಟೊಂದು ಎಡೆಯಿರದ, ಆದರೆ ರಸ, ಭಾವ, ತಾಲಗಳಿಗೆ ಪ್ರಾಶಸ್ತ್ಯವಿರುವ ಕಥಾಕಾಲಕ್ಷೇಪ, ಕಥಕ್ಕಲಿ, ಕೂಚುಪುಡಿ, ಭರತನಾಟ್ಯಾದಿಗಳಲ್ಲಿಯ ಹಾಡುಗಾರಿ ಕೆಗೂ ಯಕ್ಷಗಾನದ ಹಾಡುಗಾರಿಕೆಗೂ ತೀರ ಸಮಿಾಪದ ಬಾಂಧವ್ಯವಿದೆ.[42]

ಹಾಡುಗಾರರಲ್ಲಿ ಸಹ ವಾಗ್ಗೇಯಕಾರ, ಭಾವುಕ, ರಂಜಕ, ರಸಿಕ, ಕುಟ್ಟ ಕಾರರೆಂಬ ಬೇಧಗಳಿದ್ದವು. ಇವರಲ್ಲಿ ವಾಗ್ಗೇಯಕಾರ ಶ್ರೇಷ್ಠ. ಈತ ಕವಿ, ಭಾಷಾ ಕೋವಿದ, ಸಂಗೀತಗಾರ ಅಂದರೆ ಮಾರ್ಗ, ದೇಶೀ ಎರಡೂ ಪದ್ಧತಿಗಳ ಶಾಸ್ತ್ರ ಪ್ರಯೋಗಗಳಲ್ಲಿ ಪ್ರವೀಣನಿದ್ದನು. ಗೀತದ ರಸಭಾವಗಳಿಗೆ ಮಹತ್ವವನ್ನಿತ್ತು ಹಾಡುವವ ಭಾವುಕ; ಶ್ರೋತೃಗಳ ಅಭಿರುಚಿಯ ಮೇರೆಗೆ ಹಾಡುವವ ರಂಜಕ; ಸ್ವಸಂತೋಷಕ್ಕಾಗಿ ಹಾಡುವವ ರಸಿಕ; ಅನ್ಯರನ್ನು ಅನುಕರಿಸುವವ ಕುಟ್ಟಕಾರ. ಈತ ಎಲ್ಲರಿಗಿಂತ ಕನಿಷ್ಠ. ರತ್ನಾಕರವರ್ಣಿಯ ಭರತೇಶ ವೈಭವದಲ್ಲಿಯ 'ಗಣಿಕೆಯ ರೆಕ್ಕಡಿಗರು ನಾಟ್ಯಶಾಸ್ತ್ರ ಲಕ್ಷಣಿಕರು ಭಾವರಂಜಕರು' ಪದ್ಯದಲ್ಲಿಯ ಭಾವ

---

40. ಸಂಗೀತ ರತ್ನಾಕರ. ೪ (ಪಾರ್ಶ್ವದೇವನ ಈ ವಿವರಣೆ ಅಚ್ಚಾದ ಆತನ ಈ ಗ್ರಂಥ ದಲ್ಲಿಲ್ಲ. ಆತನದೆಂದು ಸಿಂಹಭೂಪಾಲನು ಸಂಗೀತ ರತ್ನಾಕರದ ತನ್ನ ವ್ಯಾಖ್ಯೆಯಲ್ಲಿ ಉದಾ ಹರಿಸಿರುವನು).

41. ಪಾರ್ಶ್ವದೇವ: ಸಂಗೀತ ಸಮಯಸಾರ, ಪು. ೪೦.

42. ಆರ್. ಶ್ರೀನಿವಾಸನ್: ಕಥಾಕಾಲಕ್ಷೇಪಮ್, ಪು. ೧೨: ಡಾ. ವಿ. ರಾಘವನ್: ಯಕ್ಷಗಾನ ಪು. ೧೮೬ ಮುಂದೆ; ಭವಾನರಾವ ಪಿಂಗಳೆ: ಭಾರತೀಯ ನೃತ್ಯಸಂಗೀತ ಪು. ೬೮, ೧೬೮; ಭಾರತೀಯ ನೃತ್ಯಸಂಗೀತ ಪು. ೫೩.

ರಂಜಕರು ಇವರೇ.[43] ರತ್ನಾಕರವರ್ಣಿಯ ಪೂರ್ವನಾಟಕ ಸಂಧಿಯಲ್ಲಿಯ ನರ್ತನ ಕಾರ್ಯಕ್ರಮದ ಬಣ್ಣನೆ ಯಕ್ಷಗಾನ ಆಟದ ಸರಿಸಮಾನ ಬಣ್ಣನೆಯೆಂದು ಎಲ್ಲರೂ ಒಪ್ಪಿಕೊಂಡಿರುವರು. ಗಾಯಕರಲ್ಲಿ ಶ್ರೇಷ್ಠನಿದ್ದ ವಾಗ್ಗೇಯಕಾರನನ್ನು ಬಿಟ್ಟು ಆತ ಭಾವರಂಜಕರನ್ನು ಉಲ್ಲೇಖಿಸಿರುವದು ಯಕ್ಷಗಾನ ಹಾಡುಗಾರಕೆಯ ಬಗೆಯನ್ನು ಎತ್ತಿತೋರಿಸುವದು. ಯಕ್ಷಗಾನಕ್ಕೆ ಅವಶ್ಯವಿರುವ ರಸ, ಭಾವ, ರಂಜಕತ್ವಗಳನ್ನು ಗಮನಿಸಿ ಆತ ವಾಗ್ಗೇಯಕಾರನನ್ನು ಬಿಟ್ಟು ಈ ಬಗೆಯ ಹಾಡುಗಾರಿಕೆಯಲ್ಲಿ ನಿಷ್ಣಾತರಿದ್ದ ಭಾವರಂಜಕರನ್ನು ಉಲ್ಲೇಖಿಸಿರುವದು ಸಹೇತುಕವಿದ್ದು ಇವರು ಜಾನಪದ ಹಾಡುಗಾರರಲ್ಲೆಂಬುದು ಸ್ಪಷ್ಟವಿದೆ.

ಯಕ್ಷಗಾನದ ವೈಶಿಷ್ಟ್ಯ

ಯಕ್ಷಗಾನದ ವೈಶಿಷ್ಟ್ಯವನ್ನು ತಂಜಾವರದ ಅರಸು ರಘುನಾಥನಾಯಕನ (ಕ್ರಿ. ೧೬೩೪) ಉಪಪತ್ನಿಯೂ ಮತ್ತು ಇಂದು ಲೋಕಪ್ರಿಯವಿರುವ ಕೂಚಿಪುಡಿ ನೃತ್ಯದ ಪ್ರವರ್ತಕರಲ್ಲಿ ಒಬ್ಬಳೂ ಆದ ರಾಮಭದ್ರಾಂಬೆಯು ಸಂಸ್ಕೃತದಲ್ಲಿ ರಚಿಸಿದ ರಘುನಾಥಾಭ್ಯುದಯ ಎಂಬ ತನ್ನ ವಲ್ಲಭನ ಚರಿತ್ರ ಕಾವ್ಯದಲ್ಲಿ ಹೀಗೆ ವರ್ಣಿಸಿರುವಳು—

> ಅನೇಕಧಾ ರಾವಣಹಸ್ತಪೂರ್ವಕ ಪ್ರಸಿದ್ಧಯಂತ್ರ ಸ್ವನರಕ್ತಿ ಪಾಟವಂ
> ಯಥಾಕ್ರಮಪ್ರಾಂಚಿತ ಯಕ್ಷಗಾನ ಸತತ್ಪದಾದ್ಯದ್ವಿಪದಪ್ರಪಂಚಂ ||[44]

ರಾಮಭದ್ರಾಂಬೆಯ ಈ ಪದ್ಯವು ಆಕೆಯ ವಲ್ಲಭ ರಘುನಾಥನಾಯಕನು ದಿನದ ಕಾರ್ಯಗಳನ್ನು ತೀರಿಸಿಕೊಂಡು ರಾಣೀವಾಸವನ್ನು ಪ್ರವೇಶಿಸಿದಾಗ ಅಲ್ಲಿ ಆತನ ಕಣ್ಣಿಗೆ ಬಿದ್ದ ಅಂತಃಪುರದ ಸ್ತ್ರೀಯರ ವಿವಿಧ ವಿಲಾಸಗಳ ಬಣ್ಣನೆಯಲ್ಲಿ ಬರುತ್ತದೆ. ರಾವಣಹಸ್ತವೆಂಬ ವಿಶಿಷ್ಟವಾದ ವೀಣೆಗೆ ಹೊಂದಿಸಿಕೊಂಡು ದ್ವಿಪದಪ್ರಪಂಚವ ಅಂದರೆ ದ್ವಿಪದ ಭೂಯಿಷ್ಟ ಯಕ್ಷಗಾನಗಳನ್ನು ಹಾಡುತ್ತಿದ್ದ ಸ್ತ್ರೀಯರನ್ನು ಆತ ಕಂಡನೆಂಬುದು ಈ ಪದ್ಯದ ಸಾರಾಂಶ. ರಾವಣಹಸ್ತವೆಂಬುದು ಇಂದಿನ ಸಾರಂಗಿ.[45] ತಂತಿಗಳನ್ನು ಬಿಗಿದು ಅಥವಾ ಸಡಿಲಿಸಿ ಶ್ರುತಿಗೊಳಿಸಲು ಅದಕ್ಕೆ ಹಸ್ತಾಕೃತಿಯ ೨೦ ಕಿವಿಗಳಿದ್ದುದರಿಂದ ರಾವಣ ಹಸ್ತವೆನ್ನುತ್ತಿದ್ದರು. ಕನ್ನಡದ ರಗಳೆಗಳಾದರೂ ದ್ವಿಪದಗಳೇ. ರಗಳೆಯ (ರಘಟಾ) ಪಾದದ ದ್ವಿತೀಯಾರ್ಧವನ್ನು ತಾಲಕ್ಕನುಗುಣವಾಗಿ ಕತ್ತರಿಸಿ ಯಕ್ಷಗಾನವನ್ನು ರಚಿಸುತ್ತಿದ್ದರೆಂಬ ಮಾತನ್ನು ಡಾ. ರಾಘವನ ಉಲ್ಲೇಖಿಸಿರುವರು.[46] ಯಕ್ಷಗಾನವನ್ನು ಕುರಿತಿರುವ ರಾಮಭದ್ರಾಂಬೆಯ ವಿವರಣೆಗ

---

43. ರತ್ನಾಕರವರ್ಣಿ: ಭರತೇಶವೈಭವ, ಸಂಧಿ ೨೯.
44. ರಾಮಭದ್ರಾಂಬಾ: ರಘುನಾಥಾಭ್ಯುದಯ, ೧೧-೨೭.
45. ಸವಾಯಿ ಪ್ರತಾಪದೇವ: ರಾಧಾಗೋವಿಂದ ಸಂಗೀತಸಾರ, ನರ್ತನಾಧ್ಯಾಯ.
46. ಯಕ್ಷಗಾನ ಪುಟ ೧೮೬ ಮುಂದೆ.

ರಾಘವನ್‌ರ ಉಲ್ಲೇಖಕ್ಕೂ ಇರುವ ಸಾಮೀಪ್ಯವು ಸ್ಪಷ್ಟವಿದೆ. ಕನ್ನಡ ತೆಲುಗುಗಳಲ್ಲಿ ರಗಳೆಗಳ ಪ್ರಭೇದಗಳೆಷ್ಟು, ಅವುಗಳನ್ನು ಯಕ್ಷಗಾನಗಳಲ್ಲಿ ಹೇಗೆ ಮಾರ್ಪಡಿಸಿಕೊಳ್ಳ ಲಾಗಿದೆಂಬುದನ್ನು ಗುರುತಿಸುವದು ಈ ಕ್ಷೇತ್ರದಲ್ಲಿಯ ಸಂಶೋಧಕರ ಮುಂದಿನ ಕಾರ್ಯ. ಸದ್ಯಕ್ಕೆ ಸ್ಥೂಲವಾಗಿ ಯಕ್ಷಗಾನವೆಂಬುದು ತಾಲಾನುಗ/ತಾಲ-ನೃತ್ಯಾನುಗ ಮತ್ತು ಕಚೇರಿ ಸಂಗೀತದ ನಯ-ನಾಜೂಕು ಆಲಾಪಾದಿಗಳಿಗೆ ಮಾರುಹೋಗದೆ ರಸಭಾವಗಳಿಗೆ ಪ್ರಾಧಾನ್ಯವಿತ್ತು ಹಾಡಬೇಕಿದ್ದ ಗೀತವೆಂದು ತಿಳಿಸಿದರೆ ಸಾಕು.

ವಾದ್ಯಾಕ್ಷರಗಳನ್ನು ಅಂದರೆ ತಾಳದಲ್ಲಿ ಬರುವ ಧೇ-ಧಿತ್ತಾಂ ಮೊದಲಾದ ಅರ್ಥಹೀನ ಅಕ್ಷರಗಳನ್ನು ನುಡಿಯುವ ಅಥವಾ ಅವುಗಳ ಬದಲು ನಡುನಡುವೆ ಕೆಲವು ಸಾರ್ಥ ಶಬ್ದಗಳನ್ನು ಸೇರಿಸಿ ಅಥವಾ ಅರ್ಥಹೀನ ಅಕ್ಷರಗಳ ಬದಲು ಅವುಗಳಿಗೆ ಹೊಂದಿಕೊಳ್ಳುವ ಅರ್ಥಯುಕ್ತ ಪದಗಳನ್ನು ಸೇರಿಸಿ ರಚಿಸಿರುವ ಗೀತ ಗಳು ತಾಲಗೀತಗಳ ಇನ್ನೊಂದು ಮಾದರಿ. ಇಂಥ ಗೀತಗಳಾದರೂ ಯಕ್ಷಗಾನ ಗಳಲ್ಲಿ ಸೇರಿಕೊಂಡಿವೆ. ಇದೊಂದು ಉದಾಹರಣೆ—

ತತ್ತೋ ತಕ್‌ಡ್‌ಕಡ್ತ ಧೀಕ್‌ಡ್ತಕ। ಅರುದಿನ ಮರುಮಗ ವಿಘ್ನವಿನಾಯಕ।
ಎನಕಿಟ ಅರಳುವ ಗಣಪತಿ ಝೇಝೊ ಜಕ್ಕಿಟ ಉದಕಿರಣಂ॥ 47

ಇದಿನ್ನೊಂದು ಉದಾಹರಣೆ. ಇದಾದರೂ ಗಣಪತಿ ಸ್ತೋತ್ರ. ಉತ್ತರ ಭಾರತದಲ್ಲಿ ಪ್ರಚಾರದಲ್ಲಿದೆ—

ಯಸ್ತಂ ದೇವಾ ನಮಾಮಿ ಸಿರಸಾ ಹತಹತ ಕುಕು ಕುಕು।
ತಹ ತಹ ಕುಕು ಕುಕು ವಿದ್ಯಾರಂಭೇ ಹರತು ವಿಘ್ನಂ . . . 48

ಇದು ಮತ್ತೊಂದು. ಓಡಿಸಾ ಭಾಗದಲ್ಲಿ ಪ್ರಚಾರದಲ್ಲಿದೆ. ಗೀತಪ್ರಕಾಶಕಾರ ಕೃಷ್ಣದಾಸನಿಂದ ರಚಿತವಾಗಿದೆ—

ದ್ವಾರಾವತಿ ಪುರಮನುಬಲ ಸಂಯುತ। ಉದ್ಧವಸಹಿತೋ ನಿಯತಮಯಾ।
ಅಕ್ರೂರೋತ್ತಮ ಸಚಿವೋನಂದಕ ನಿರುಪಮ। ಸಮಿತಿತಿ ಆಇ ಆಇ ರೇ॥ 49

ಈ ಬಗೆಯ ಗೀತಗಳಲ್ಲಿ ಆಲಾಪಕ್ಕೆ ಹೆಚ್ಚು ಎಡೆ ಇರುವುದಿಲ್ಲ. ದಾಸ ಸಾಹಿತ್ಯದಲ್ಲಿಯ ಸುಳಾದಿಗಳಾದರೂ ಇದೇ ಜಾತಿಯವು. ಇಲ್ಲಿ ತಾಲಕ್ಕನುಸರಿಸಿ ನರ್ತಕನ ಹೆಜ್ಜೆಗಳು ಬೀಳಬೇಕು ಮತ್ತು ಇವುಗಳಿಗೆ ಹೊಂದಿಕೊಂಡ ಗೀತದಲ್ಲಿಯ ಪದಗಳ ಉಚ್ಚಾರಣೆಯಾಗಬೇಕು. ಶ್ರೋತೃಗಳು ಆ ರೀತಿ ತಲೆ ಅಲ್ಲಾಡಿಸಬೇಕು, ತಾಳ ಹಾಕಬೇಕು. ಇಷ್ಟೇ ಉದ್ದೇಶ.

ಯಕ್ಷಗಾನಗಳಲ್ಲಿ ಇನ್ನೊಂದು ವೈಶಿಷ್ಟ್ಯವಿದೆ. ತಾಲಾನುಗ ಗೀತವಿದ್ದರೂ

47. ಯಕ್ಷಗಾನ ಬಯಲಾಟ, ಪು. ೪೩.
48. ರಾಧಾಗೋವಿಂದ ಸಂಗೀತಸಾರ, ನರ್ತನಾಧ್ಯಾಯ.
49. ಕರ್ನಾಟಕ ಸಂಗೀತದಲ್ಲಿಯ ರಾಗಗಳು, ಪು. ೬೯.

ಮಿಕ್ಕ ತಾಲಾನುಗ ಗೀತಗಳಿಂದ ಅದನ್ನು ಬೇರ್ಪಡಿಸುವುದಾದರೂ ಇದರಿಂದಲೇ. ಯಕ್ಷಗಾನದಲ್ಲಿಯ ಗೀತದ ಪ್ರಾರಂಭ, ಮಧ್ಯ ಮತ್ತು ಮುಕ್ತಾಯಗಳಿಗನುಸರಿಸಿ ತಾಲದಲ್ಲಿ ವ್ಯತ್ಯಾಸ ಮಾಡಿಕೊಳ್ಳುತ್ತಿರುವದೇ ಈ ವೈಶಿಷ್ಟ್ಯ. ಈ ಬಗೆಯ ವ್ಯತ್ಯಾಸಕ್ಕೆ ಗತ್ತುಗಳೆನ್ನಬಹುದು. ಉಡುಪಿಯ ಸಭಾಲಕ್ಷಣ ಗ್ರಂಥದಲ್ಲಿ ದಸ್ತೆಗಳೆಂದಿರುವರು. ಸಂಗೀತಶಾಸ್ತ್ರದಲ್ಲಿ ಗೀತಪ್ರಬಂಧ ಮತ್ತು ವಾದ್ಯಪ್ರಬಂಧಗಳೆಂಬ ಎರಡು ಭೇದಗಳಿವೆ. ಗೀತದ ಪ್ರಾರಂಭ, ಮಧ್ಯ, ಮುಕ್ತಾಯಗಳಿಗನುಸರಿಸಿ ವಾದ್ಯ ಪ್ರಬಂಧದಲ್ಲೂ ಲಹರಿ, ಎಡಪು, ಮುಕ್ತಾಯಗಳೆಂಬ ಮೂರು ಹಂತಗಳನ್ನು ಮಾಡಿರುವರು.[50] ಆಯಾ ಹಂತಕ್ಕನುಸರಿಸಿ ತಾಲದ ಗತಿ ಬದಲಿಸುವದು. ಈ ಹೊಂದಾಣಿಕೆಗೆ ಅನುಸರಿಸಿ ರಚಿಸಿರುವ ಗೀತಗಳು ಯಕ್ಷಗಾನಗಳ ಇನ್ನೊಂದು ಬಗೆ. ಇವೇ ನಿಜವಾದ ಯಕ್ಷಗಾನಗಳೆನ್ನಬಹುದು. ಶಾರ್ಙ್ಗಧರನು ಯತಿ, ಜಾತಾ, ರಿಗೋಣಿ, ಉಟ್ಟವಣಿ ಮೊದಲಾದ ೪೩ ಬಗೆಯ ವಾದ್ಯ ಪ್ರಬಂಧಗಳನ್ನು ಹೇಳಿರುವನು.[51] ಯತಿ ಪ್ರಬಂಧದಿಂದ ಪ್ರಾರಂಭವಾಗುವದರಿಂದ ಇವುಗಳಿಗೆ ಯತ್ಯಾದಿ ಪ್ರಬಂಧಗಳೆನ್ನುವರು. ಇವುಗಳಿಗನುಸರಿಸಿ ಕಟ್ಟಿದ ಗೀತಗಳೇ ಯತಿಗೀತಗಳು ಅಥವಾ ಯಕ್ಷಗೀತಗಳು ಕನ್ನಡದಲ್ಲಿ ಜತಿಗಾಣ (ಜತ್ತಾಣ), ಜಕ್ಕಗಾಣ (ಯಕ್ಷಗಾನ) ಗಳು. ಕವಿರಾಜಮಾರ್ಗದಲ್ಲಿಯ ಜತ್ತಾಣದ ವ್ಯಾಪ್ತಿ ಅಲ್ಲಿ ಉಲ್ಲೇಖಿಸಿದ ಪದ್ಯಪ್ರಕಾರಗಳಿಗೆ ಮಿತವಾಗಿದ್ದರೂ, ವ್ಯಾಪಕಾರ್ಥದಲ್ಲಿ ಅದು ಎಲ್ಲ ಬಗೆಯ ತಾಲಾನುಗ ಗೀತಗಳನ್ನು ಒಳಗೊಳ್ಳುವದೆಂಬುದಕ್ಕೆ ಜತ್ತಾಣವೆಂಬ ಹೆಸರಿಷ್ಟೇ ಸಾಕು.

ಯತಿ ಪ್ರಬಂಧ (ವಾದ್ಯ)ಕ್ಕೆ ಹೊಂದಿಕೊಂಡಿದ್ದ ಯತಿಗೀತವೆಂಬ ವಿಶಿಷ್ಟ ಗೀತವಿದ್ದಿತು. ನೃತ್ಯವೂ ಇದ್ದಿತು. ಸಂಗೀತದರ್ಪಣಕಾರನಾದ ದಾಮೋದರ 'ಯತಿ ಗೀತೇ ಏಕತಾಲ್ಯಾಯತ್ಯಾಯತ್ರ ನೃತ್ಯತೇ' ಎಂದು ಇವೆರಡನ್ನೂ ಉಲ್ಲೇಖಿಸಿರುವನು.[52] ಚಾಲುಕ್ಯ ಸೋಮೇಶ್ವರ 'ವಿವಿಧ ಯತಿ ರೀತಿ ರಚಿತಂ' ಎಂದು ಯತಿ ಅಥವಾ ತಾಲಾನುಗಗೀತಗಳನ್ನು ಉಲ್ಲೇಖಿಸಿರುವನು.[53] ಕಾಲಕ್ರಮದಲ್ಲಿ ಶಾರ್ಙ್ಗಧರನ ೪೩ ವಾದ್ಯಪ್ರಬಂಧಗಳು ನಾಮಾವಶೇಷವಾದುವು. ಅವುಗಳಿಗೆ ತಳಹದಿಯಾದ ವಿವಿಧ ತಾಳಗಳೂ ನಾಮಾವಶೇಷವಾದುವು. ಆತನ ೧೨೦ ದೇಶೀ ತಾಳಗಳ ಬದಲು ಸದ್ಯ ಪ್ರಚಾರದಲ್ಲಿರುವ ಧ್ರುವ, ಮಠ್ಯ, ಮೊದಲಾದ ಸುಳಾದಿ ಸಪ್ತ ತಾಳಗಳೂ ಮತ್ತು ಅವುಗಳ ಅಂಗವಾಗಿ ಚತುರಶ್ರ, ತ್ರಿಶ್ರ, ಮಿಶ್ರ, ಖಂಡ, ಸಂಕೀರ್ಣವೆಂಬ ಭೇದಗಳೂ ಅಸ್ತಿತ್ವದಲ್ಲಿ ಬಂದವು. ಇಲ್ಲಿ ಸಹ ಚತುರಶ್ರ, ತ್ರಿಶ್ರ ಎರಡೇ ಬಳಕೆಯಲ್ಲಿವೆ. ಮಿಕ್ಕವುಗಳ ಪ್ರಯೋಗ ದುಸ್ಸಾಧ್ಯವಿರುವದರಿಂದ ಅವುಗಳನ್ನು ಬಿಟ್ಟುಕೊಟ್ಟ

50. ಸಂಗೀತ ರತ್ನಾಕರ, ವಾದ್ಯಾಧ್ಯಾಯ, ಪು. ೯೪೪-೯೫೧.
51. ಅದೇ, ವಾದ್ಯಾಧ್ಯಾಯ.
52. ಸಂಗೀತ ದರ್ಪಣ, ನರ್ತನಾಧ್ಯಾಯ, ೨೧೬.
53. ಸೋಮೇಶ್ವರ: ವಿಕ್ರಮಾಂಕಾಭ್ಯುದಯ, ಪು. ೨೫.

ರುವರು.[54] ಈ ತಾಳಗಳಲ್ಲಿಯೆ ಶಾರ್ಙ್ಗಧರನ ಲಹರಿ, ಎಡಪು, ಮುಕ್ತಾಯಗಳಿಗೆ ೧ನೆಯ ಕಾಲ ೨ನೆಯ ಕಾಲ, ಮುಕ್ತಾಯಗಳೆಂಬ ಗತ್ತುಗಳನ್ನು ನಿರ್ಮಿಸಿಕೊಂಡು ಇಂದಿನ ಯಕ್ಷಗಾನಗಳಲ್ಲಿ ಬಳಸುತ್ತಿರುವರು. ಈ ಗತ್ತು ಅಥವಾ ದಸ್ತೆಗಳ ವಾದ್ಯಾಕ್ಷರ ವಿವರಗಳು ಉಡುಪಿಯ ಯಕ್ಷಗಾನ ಸಭಾಲಕ್ಷಣ ಮತ್ತು ಪ್ರಸಂಗ ಪೀಠಿಕೆ ಎಂಬ ಗ್ರಂಥದಲ್ಲಿ ದೊರೆಯುತ್ತವೆ.[55]

ಒಟ್ಟಿನಲ್ಲಿ ಇಂದಿನ ನಮ್ಮ ಗಂಧರ್ವಗಾನ (ಕಚೇರಿ ಸಂಗೀತ) ಮತ್ತು ಯಕ್ಷಗಾನಗಳಲ್ಲಿಯ ಭೇದವನ್ನು ಕಿನ್ನರಿ ವಿದ್ವಾನ್ ಹುಲುಗೂರು ಕೃಷ್ಣಾಚಾರ್ಯರ ಮಾತುಗಳಲ್ಲಿ ತುಸು ಹೆಚ್ಚು ಕಡಿಮೆ ಹೀಗೆ ವಿವರಿಸಬಹುದು—

ಗೀತ, ಪದ ಅಥವಾ ಗಾನಗಳು ಅನೇಕ ವಿಧವಾದ ಲಕ್ಷಣಗಳಿಂದ ರಚಿಸಲ್ಪಟ್ಟಿವೆ. ಅವುಗಳಲ್ಲಿ ಮುಖ್ಯವಾಗಿ ಎರಡು ಭೇದಗಳನ್ನು ಮಾಡಬಹುದು. (೧)ಗಂಧರ್ವ ಗೀತ, (೨) ಯಕ್ಷಗೀತ. ಗಂಧರ್ವಗೀತಗಳು ತಾಲಯುಕ್ತವಿದ್ದರೂ ರಾಗ ಪ್ರಧಾನವಿರುತ್ತವೆ. ಅವುಗಳಲ್ಲಿ ಸಾಹಿತ್ಯ (ಅಕ್ಷರಗಳು) ಕಡಿಮೆ ಇರುತ್ತದೆ. ಯಕ್ಷಗೀತಗಳು ತಾಲಾನುಗ/ತಾಲ ನೃತ್ಯಾನುಗವಿರುತ್ತವೆ. ಆದ್ದರಿಂದ ಅವು ನರ್ತನ ಕೌಶಲ್ಯವನ್ನು ಪ್ರದರ್ಶಿಸಲಕ್ಕೆ ಅನುಕೂಲವಾಗಿರುತ್ತವೆ. ಕಥಕ್ಕಲಿ ಕೂಚಿಪುಡಿ, ಯಕ್ಷಗಾನ ಆಟ, ಗೊಂಬೆಯಾಟ ಮೊದಲಾದವುಗಳಲ್ಲಿಯ ಹಾಡುಗಾರಿಕೆಯು ಯಕ್ಷಗಾನ ಶೈಲಿಯಲ್ಲಿ ಎಂಬ ಮಾತಾದರೂ ಇದನ್ನೇ ಸೂಚಿಸುತ್ತದೆ. ದಾಸಸಾಹಿತ್ಯದಲ್ಲಿಯ ಸುಳಾದಿಗಳಾದರೂ ಇದೇ ಜಾತಿಯವು. ಆದರೆ ಇವುಗಳ ಒಂದೊಂದು ನುಡಿಗೆ ಒಂದೊಂದು ತಾಳವಿರುತ್ತದೆ. ಯಕ್ಷಗೀತಗಳು ಹೀಗಿರುವುದಿಲ್ಲ. ಇವುಗಳನ್ನು ಕೆಲವೆಡೆ ಲೋಪದಿಂದ, ಕೆಲವೆಡೆ ಪುನರುಕ್ತಿಯಿಂದ, ಕೆಲವೆಡೆ ಪರ್ಯಾಯ ಶಬ್ದಗಳಿಂದ ಹೇಳುವದು ಪ್ರಾಚೀನ ಕಾಲದಿಂದ ನಡೆದುಬಂದಿದೆ. ಗಂಧರ್ವ ಗೀತಗಳಲ್ಲಿ ಅಕ್ಷರಗಳು ಕಡಿಮೆ ಇರುವದರಿಂದ ಆ ಸ್ಥಾನಗಳಲ್ಲಿ ಗಮಕಾಲಂಕಾರಗಳನ್ನು ಜೋಡಿಸಲಿಕ್ಕೆ ಅನುಕೂಲವಾಗುವದು. ಗಮಕಾಲಂಕಾರಗಳಿರದೆ ಅದು ರಾಗ ಪ್ರಧಾನವಾಗದು. ಹೆಚ್ಚು ಅಕ್ಷರಗಳಿದ್ದರೆ ಅವುಗಳನ್ನು ಆಯಾ ಸ್ವರಗಳಲ್ಲಿ ಕ್ಲುಪ್ತವಾಗಿ ನುಡಿಯಲೇಬೇಕಾಗುವದು. ಆಲಾಪಕ್ಕೆ ಅವಕಾಶ ಉಳಿಯದೆ ಉದ್ದಕ್ಕೂ ಸಾಹಿತ್ಯವನ್ನು ಹಾಡಿಕೊಂಡು ಹೋಗಬೇಕಾಗುವದು.

ಗಂಧರ್ವಗೀತಗಳ ರಚನೆ ವಿಲಂಬಿತ ಮಧ್ಯಲಯಗಳಲ್ಲಿರುತ್ತದೆ. ಯಕ್ಷಗೀತಗಳು ಮಧ್ಯದ್ರುತದಲ್ಲಿರುತ್ತವೆ. ಗಂಧರ್ವಗೀತವನ್ನು ಯಾವುದೊಂದು ತಾಲಕ್ಕೆ ಅನ್ವಯಿಸಿ ಹಾಡುವರು. ಯಕ್ಷಗೀತಗಳಲ್ಲಿ ಆ ತಾಲದ ಒಂದು ಗತ್ತಿನಲ್ಲಿ ಪಲ್ಲವಿ, ಇನ್ನೊಂದರಲ್ಲಿ ನುಡಿ, ಮತ್ತೊಂದರಲ್ಲಿ ಮುಕ್ತಾಯ, ಹೀಗೆ ಅವು ತಾಳ ವೈಚಿತ್ರ್ಯ

54. ಹೆಚ್. ಕೃಷ್ಣಾಚಾರ್ಯ: ಕರ್ನಾಟಕ ಸಂಗೀತವೂ ದಾಸಕೂಟವೂ, ಪು. ೧೦೨.

55. ಯಕ್ಷಗಾನ ಸಭಾಲಕ್ಷಣ ಮತ್ತು ಪ್ರಸಂಗಪೀಠಿಕೆ, ತಾಳದಸ್ತೆ. ಪಾವಂಜೆ ಪ್ರಕಟನೆ ಉಡುಪಿ.

ದಿಂದಲೂ ಲಯವೈಚಿತ್ರ್ಯದಿಂದಲೂ ಹಾಡಲ್ಪಡುತ್ತವೆ. ಈ ಶೈಲಿಯು ನರ್ತನಕ್ಕೆ ಮತ್ತು ಅವನದ್ಧ ವಾದ್ಯಗಳಿಗೆ ಅಂದರೆ ಮೃದಂಗಾದಿಗಳಿಗೆ ಬಹಳ ಅನುಕೂಲವಾಗಿರುವದರಿಂದ ಗಾಯನ, ವಾದನ, ನರ್ತನ, ಸಾಹಿತ್ಯಗಳ ವೈವಿಧ್ಯಯುಕ್ತ ಪ್ರಯೋಗವು ಶ್ರೋತೃವೃಂದಕ್ಕೆ ಬಹು ಮನೋರಂಜಕವಾಗಿರುತ್ತದೆ.[56]

ನಿಜವಾದ ಕರ್ನಾಟಕ ಶೈಲಿಯು ಏಕವೇಂವ ಎಳೆ

ಯಕ್ಷಗಾನವು ಜಾನಪದಕಲೆಯಲ್ಲ; ಅದೊಂದು ಪರಂಪರಾಗತವಾಗಿ ಬಂದ ಭಾರತೀಯ ಸಂಗೀತದ ಕವಲೆಂಬುದು ಈ ಪ್ರತಿಪಾದನೆಯ ಮುಖ್ಯಶ್ರುತಿ ಇದ್ದರೂ ಅದರ ಹಾಡುಗಾರಿಕೆಯ ವೈಶಿಷ್ಟ್ಯವನ್ನು ಅಲ್ಲಗಳೆಯುವಂತಿಲ್ಲ. ಯಾವುದೊಂದು ಪದವನ್ನು ಉಕ್ತರಾಗ ತಾಳಗಳಲ್ಲಿ ಹಾಡಿದರೆ ಸಾಲದು. ಆ ರಾಗ ತಾಳಗಳ ಚೌಕಟ್ಟಿನಲ್ಲಿ ಅದಕ್ಕೊಂದು ಪರಂಪರಾಗತ ಮತ್ತು ಲೋಕಪ್ರಸಿದ್ಧ ಧಾಟಿ ಇರುತ್ತದೆ. ವಿಶಿಷ್ಟ ರಚನೆ ಇರುತ್ತದೆ. ಸಂದರ್ಭ, ಸನ್ನಿವೇಶ, ರಸ, ಭಾವಗಳ ಜೋಡಣೆ ಇರುತ್ತದೆ. ಇವೆಲ್ಲವುಗಳನ್ನು ಗಮನಿಸಿ ಹಾಡಿದಾಗ ಮಾತ್ರ ಅದು ಹೃದಯಸ್ಪರ್ಶಿಯಾಗಬಲ್ಲದು. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಅಡಿಗೆಗೆ ಎಲ್ಲರೂ ಅವೇ ಪದಾರ್ಥಗಳನ್ನು ಅಂದರೆ ಉಪ್ಪು, ಕಾರ, ಹುಳಿ, ಬೆಲ್ಲ, ಮೊದಲಾದವನ್ನು ಬಳಸುತ್ತಿದ್ದರೂ ಕರ್ನಾಟಕದ ಅಡಿಗೆಯ ರುಚಿಯೇ ಬೇರೆ ಇತರ ಪ್ರದೇಶಗಳ ಅಡಿಗೆಯ ರುಚಿಯೇ ಬೇರೆ. ಹೆಚ್ಚೇಕೆ ಅದೇ ಪ್ರದೇಶದಲ್ಲಿ ಮನೆ ಮನೆಗೆ, ಅದೇ ಮನೆಯಲ್ಲಿ ಅಡಿಗೆ ಮಾಡಿದ ಕೈಗೆ ಅನುಸರಿಸಿ ರುಚಿ ಬದಲಿಸುತ್ತದೆ. ಈ ಅರ್ಥದಲ್ಲಿ ಕಾರಂತರು ಯಕ್ಷಗಾನ ಶೈಲಿಯನ್ನು (ಅಂದರೆ ರಸಭಾವಗಳನ್ನು ಗಮನಿಸಿ ಪರಂಪರಾಗತ ಧಾಟಿಯಲ್ಲಿ ಹಾಡುವದನ್ನು) ಪ್ರಚಲಿತ ಹಿಂದುಸ್ತಾನಿ ದಕ್ಷಿಣಾದಿ ಪದ್ಧತಿಗಳಿಂದ ಬೇರ್ಪಡಿಸಿ ಅದರ ಪುನರುಜ್ಜೀವನಕ್ಕಾಗಿ ಯತ್ನಿಸುತ್ತಿರುವದನ್ನು ಎಲ್ಲರೂ ಒಪ್ಪಲೇಬೇಕು.

ವಿಜಯನಗರ ಕಾಲೀನ ಸಂಗೀತವೇ ನಿಜವಾದ ಕರ್ನಾಟಕ ಸಂಗೀತ ಶೈಲಿ

---

56. ಕರ್ನಾಟಕ ಸಂಗೀತವೂ ದಾಸಕೂಟವೂ ಪು. ೧೦೮, ೧೦೯, ೧೧೫. ಯಕ್ಷಗಾನ ಕವಿಗಳು ಸಾಮಾನ್ಯವಾಗಿ ತಮ್ಮ ಕೃತಿಗಳನ್ನು ಯಕ್ಷಗಾನದಲ್ಲಿ ರಚಿಸಿರುವದಾಗಿ ಹೇಳಿರುವರು. ಕಾರಂತರ ಯ. ಗಾ. ಬ. ದಲ್ಲಿ 'ರುಕ್ಮಿಣಿ ಸ್ವಯಂವರ' ಪ್ರಬಂಧದ ಕರ್ತನು ಅದನ್ನು ಗಂಧರ್ವಗಾನದಲ್ಲಿ ರಚಿಸಿರುವದಾಗಿ ಹೇಳಿಕೊಂಡಿರುವದರ ಉಲ್ಲೇಖವಿದೆ. ನಮ್ಮಲ್ಲಿ ರಾಗಕಾವ್ಯವೆಂಬ ಜಾತಿ ಇದ್ದಿತು. ಸಮಗ್ರ ಕಾವ್ಯವು ಒಂದೇ ರಾಗದಲ್ಲಿ ಅಥವಾ ಹಲವು ರಾಗಗಳಲ್ಲಿ ಇದ್ದಿತು (ಭಾ. ಸಂ. ಸಾ. ಇ. ಪು. ೨೩೭). ಹಾಡುಗಾರಿಕೆ ಕಥಕ ಶೈಲಿಯಲ್ಲಿ ಆದರೆ ಒಲವು ಗಂಧರ್ವಗಾನದತ್ತ. ಹಾಡುಗಳು ಯಕ್ಷಗಾನಗಳಂತೆ ನರ್ತನಕ್ಕೆ ಅನುಗುಣವಾಗಿರುವದಿಲ್ಲ. ಮಹಾರಾಷ್ಟ್ರದಲ್ಲಿ ಇಂದು ಲೋಕಪ್ರಿಯವಿರುವ 'ಗೀತ ರಾಮಾಯಣವು' ಈ ಬಗೆಯ ಕಾವ್ಯಗಳ ಜೀವಂತ ಉದಾಹರಣೆ ಎನ್ನಬಹುದು. ಉಪರೋಕ್ತ ರುಕ್ಮಿಣಿ ಸ್ವಯಂವರವಾದರೂ ಈ ಬಗೆಯ ಕೃತಿ ಇರಬಹುದಾಗಿದೆ.

ಎಂದಿಟ್ಟುಕೊಂಡರೆ, ವಿಜಯನಗರದ ನಂತರ ಅನ್ಯಪ್ರಾಂತೀಯ ಪಂಡಿತರ ಕೈವಾಡ ವಿಲ್ಲದೆ ಬದುಕಿ ಉಳಿದಿರುವ, ಕಾರಂತರು ವಿವರಿಸಿದ, ಯಕ್ಷಗಾನ ಶೈಲಿಯಲ್ಲಿಯೇ ಅದರ ಕುರುಹುಗಳನ್ನು ಕಾಣಬಹುದಾಗಿದೆ. ಇಂದು ಕರ್ನಾಟಕದಲ್ಲಿ ಹಿಂದುಸ್ತಾನಿ ದಕ್ಷಿಣಾದಿ ಎರಡೂ ಪದ್ಧತಿಗಳು ಪ್ರಚಾರದಲ್ಲಿವೆ. ದಕ್ಷಿಣಾದಿಗೆ ಕರ್ನಾಟಕ ಎನ್ನುವುದರಿಂದ ಅದೇ ನಮ್ಮದೆಂದು ಅಭಿಮಾನಪಡುತ್ತಿದ್ದೇವೆ. ಭಾರತೀಯ ಸಂಗೀತದ ಪಿತೃಸ್ಥಾನದಲ್ಲಿ ಸಾಮಸಂಗೀತ, ಮಾತೃಸ್ಥಾನದಲ್ಲಿ ಕರ್ನಾಟಕ ಸಂಗೀತ, ಇವೆರಡರ ಸಂಯೋಗದಿಂದ ಹುಟ್ಟಿದ ಸಂಗೀತವೇ ಭಾರತೀಯ ಸಂಗೀತ, ಹಿಂದುಸ್ಥಾನಿ ದಕ್ಷಿಣಾದಿ ಇದರ ಎರಡು ಶಾಖೆಗಳು ಎನ್ನುವದುಂಟು.[57] ಇವೆರಡೂ ಪದ್ಧತಿಗಳು ವಿಜಯನಗರದ ನಂತರ ಹೊರನಾಡುಗಳಲ್ಲಿ ಬೆಳೆದು ಬಲಿತು ಅಲ್ಲಿಯ ವೈಶಿಷ್ಟ್ಯಗಳೊಡನೆ ಕರ್ನಾಟಕವನ್ನು ಸೇರಿರುವುದರಿಂದ, ಇವುಗಳಲ್ಲಿ ನಿಜವಾದ ಕರ್ನಾಟಕ ಶೈಲಿಯನ್ನು ಗುರುತಿಸುವದು ಸುಲಭವಿಲ್ಲ. ಒಂದೊಮ್ಮೆ ನಿಜವಾದ ಕರ್ನಾಟಕ ಶೈಲಿಯನ್ನು ಗುರುತಿಸಿ, ಅಭಿವೃದ್ಧಿಗೊಳಿಸಿ, ನಮ್ಮದಾಗಿಸಿಕೊಳ್ಳ ಬೇಕೆಂಬ ಎತ್ತುಗಡೆ ನಡೆದರೆ, ಅನ್ಯಸಂಕರವಿಲ್ಲದೆ ಬದುಕಿಕೊಂಡಿದ್ದ ಯಕ್ಷಗಾನ ಧಾಟಿಗಳು ಈ ದಿಸೆಯಲ್ಲಿ ಮಾರ್ಗದರ್ಶಕವಾಗಬಲ್ಲವು.

ನೃತ್ಯ ವೇಷ-ಭೂಷಣಾದಿಗಳು

ನೃತ್ಯ, ವೇಷ-ಭೂಷಣಾದಿಗಳ ವಿಷಯದಲ್ಲೂ ಯಕ್ಷಗಾನ ಆಟವು ಪ್ರಾಚೀನ ಲಾಕ್ಷಣಿಕರು ಹಾಕಿಕೊಟ್ಟ ರೀತಿ ನೀತಿಗಳನ್ನೇ ಅನುಸರಿಸಿದೆ. ನೃತ್ಯದಮಟ್ಟಿಗೆ ಭರತನಾಟ್ಯವು ಆಯಾ ಪ್ರದೇಶಗಳ ನೆಲ ನೀರುಗಳ ಪ್ರಭಾವದೊಂದಿಗೆ ಆಂಧ್ರದ ಕೂಚಿಪುಡಿ, ಕೇರಳದ ಕಥಕ್ಕಳಿ, ತಮಿಳಿನ ಭಾಗವತರಾಟ, ಕನ್ನಡದ ಯಕ್ಷಗಾನ ಆಟಗಳಲ್ಲಿ ವ್ಯಕ್ತವಾಗಿದೆಂಬ ಮಾತಾದರೂ ಇದನ್ನೇ ಸೂಚಿಸುತ್ತದೆ[58] ನೃತ್ಯದ ವಿಷಯದಲ್ಲಿ ಯಕ್ಷಗಾನ ಕಲಾವಿದರು ಜಾನಪದ ಅದರಲ್ಲೂ ಕುಂದಾಪುರ ಸೀಮೆಯ ನಾಗಾರಾಧಕರ ನೃತ್ಯದಿಂದ ಸ್ಫೂರ್ತಿಪಡೆದಿರಬೇಕೆಂಬ ಅಭಿಪ್ರಾಯವಿದೆ.[59]

ಇದು ಸರಿಯೆಂದಿಟ್ಟುಕೊಂಡರೂ ಇಷ್ಟು ಮಾತ್ರಕ್ಕೆ ಯಕ್ಷಗಾನ ಆಟವು ಜಾನಪದವಾಗದು. ಭರತಾದಿಗಳು ಉಲ್ಲೇಖಿಸಿದ ಲಕ್ಷಣಗಳು ವ್ಯಾಪಕವಿದ್ದು ಸಮಗ್ರ ಭಾರತಕ್ಕೆ ಅನ್ವಯಿಸುವಂತಿವೆ. ಅವರು ಮುಖ್ಯ ಲಕ್ಷಣಗಳನ್ನಿಷ್ಟು ನಿರೂಪಿಸಿ ಮಿಕ್ಕುದನ್ನು ಕಲಾವಿದನ ಅಭಿರುಚಿ, ಸೌಂದರ್ಯ ದೃಷ್ಟಿ, ಪ್ರತಿಭೆ, ಪ್ರದರ್ಶನ ಕೌಶಲ್ಯಗಳಿಗೆ ಬಿಟ್ಟುಕೊಟ್ಟಿರುವರು. ಶಾಸ್ತ್ರ ಒಂದೇ ಇದ್ದರೂ ಪ್ರಾದೇ

57. ಕರ್ನಾಟಕ ಸಂಗೀತವೂ ದಾಸಕೂಟವೂ, ಪು. ೨.

58. ಕುಮಾರ ವೆಂಕಣ್ಣ : ಭಾರತೀಯ ಜಾನಪದ ನೃತ್ಯಗಳು, ಪು. ೧೯.

59. ಯಕ್ಷಗಾನ ಬಯಲಾಟ, ಪು. ೧೦೨.

ಶಿಕ ವೈಶಿಷ್ಟ್ಯಗಳುಂಟಾಗುವುದು ಈ ರೀತಿಯಿಂದ. ಇದರಲ್ಲಿ ನಾಗಾರಾಧಕರ ನೃತ್ಯವೂ ಬರುವುದು. ಈ ನೃತ್ಯವು ಶಾಸ್ತ್ರದಲ್ಲಿ ಗಾರುಡಿ ಕಟ್ಟರ (ಕಟ್ಟಡ) ಎಂದು ಉಲ್ಲೇಖಿಸಲ್ಪಟ್ಟದೆ.[60] ಕಟ್ಟಡವೆಂದರೆ ಥೀಮ್ ಡಾನ್ಸ ಅಥವಾ ಸನ್ನಿವೇಶನೃತ್ಯ. ನರ್ತಿಸುವಾಗ ಆ ನಾಗನು ಬಾಜಿಸುವ ಡಮರು (ಢಕ್ಕೆ) ಮತ್ತು ಅದರ ಗತ್ತುಗಳ ವಿವರಣೆಯೂ ಇವೆ. ಆನೆ, ನವಿಲು, ಸರ್ಪ, ಮೊದಲಾದ ಪ್ರಾಣಿಗಳ ನಡಿಗೆ ಇತ್ಯಾದಿಗಳನ್ನು ಸೂಚಿಸುವ ಡಮರಿನ ಗತ್ತುಗಳ ಉಲ್ಲೇಖವಿದೆ.[61] ಭೂತಾರಾಧಕರ ಕೋಲ, ಉತ್ತರ ಕರ್ನಾಟಕದ ಪರ್ವಂತರ ಕುಣಿತ, ದಶಾವತಾರ ನೃತ್ಯ, ಕೊರವಂಜಿ ನೃತ್ಯ, ಮೊದಲಾದವುಗಳ ಉಲ್ಲೇಖವಿದೆ.[62] ವಿಶೇಷ ಮೆಚ್ಚಿಗೆಯಿಂದ 'ಯಕ್ಷಗಾನ ಬಯಲಾಟ' ಗ್ರಂಥದಲ್ಲಿ ಮುದ್ರಿಸಿದ, ಬಿಲ್ಲನ್ನು ಆಧಾರವಾಗಿಟ್ಟುಕೊಂಡು ಒಂದು ಕಾಲಮೇಲೆ ರಾಜಠೀವಿಯಲ್ಲಿ ನಿಂತ ಯಕ್ಷಗಾನ ಕಲಾವಿದ ಹಾರಾಡಿ ರಾಮುನ ಈ ಭಂಗಿಯೂ ಇದೆ. ಇದಕ್ಕೆ ಸಂಸ್ಕೃತದಲ್ಲಿ ಏಕಪಾದ ಸ್ಥಾನಕ ಎಂದಿರುವರು. ಇದು ಹೀಗೆ—

ಸಮುಸ್ಥ್ಯಾಂಘ್ರೀಸ್ತು ಜಾನೂರ್ಧ್ವ ಬಾಹ್ಯಪಾರ್ಶ್ವೇಯದೀತರಃ ।
ಬಾಹ್ಯಪಾರ್ಶ್ವೇನ ಲಗ್ನೋಽಂಘ್ರೇರೇಕಪಾದಂ ತದೋಚ್ಯತೇ ॥ [63]

ಎಂದರೆ ಸಮಸ್ಥಿತಿಯಲ್ಲಿ ನಿಂತು, ಒಂದು ಕಾಲನ್ನು ಎತ್ತರಿಸಿ ಮಡಚಿ, ಅದರ ಹೊರ ಮೈಯನ್ನು ಇನ್ನೊಂದು ಕಾಲಿನ ಹೊರಮೈಗೆ ಮಳಕಾಲ ಮೇಲೆ ತಾಗಿಸಿ ನಿಲ್ಲುವದು ಏಕ ಪಾದಸ್ಥಾನಕ ಭಂಗಿ. ಹೀಗೆ ನಿಲ್ಲುವಾಗ ಆಧಾರಕ್ಕೆಂದು ಇಟ್ಟುಕೊಳ್ಳುವ ವಸ್ತುವನ್ನು ನಿರ್ದೇಶಿಸಿಲ್ಲ. ಸನ್ನಿವೇಶಕ್ಕನುಸರಿಸಿ ಯುಕ್ತವಸ್ತುವನ್ನು ಅಧಾರವಾಗಿಟ್ಟುಕೊಳ್ಳುವದು ನರ್ತಕನಿಗೆ ಸೇರಿದೆ. ಹಾರಾಡಿ ರಾಮುನು ಅರ್ಜುನನ ವೇಷದಲ್ಲಿರುವುದರಿಂದ ಬಿಲ್ಲನ್ನು ಆಧಾರವಾಗಿಟ್ಟುಕೊಂಡಿರುವನು. ಅರ್ಜುನ ಧನುರ್ಧಾರಿ. ಆದ್ದರಿಂದ ಆತ ಬಿಲ್ಲನ್ನು ಅದಕ್ಕಾಗಿ ಬಳಸಿಕೊಂಡಿರುವದು ಔಚಿತ್ಯಪೂರ್ಣವಿದೆ.

ಸೀನ್–ಸೀನರಿ, ಪರದೆ, ವೇಷಭೂಷಣಗಳ ವಿವರಗಳಾದರೂ ದೊರೆಯುತ್ತವೆ. ಇವೆಲ್ಲವುಗಳಿಗೆ ಸಮುಚ್ಚಯಾರ್ಥದಲ್ಲಿ 'ಪುಸ್ತ' ಎನ್ನುತ್ತಿದ್ದರು. ಯಕ್ಷಗಾನದವರು 'ಮುಸ್ತೈದೆ' ಎನ್ನುವರು.[64] ಈ ಶಬ್ದ ಪುಸ್ತ-ಪುಸ್ತಾದಿ-ಮುಸ್ತಾದಿ-ಮುಸ್ತೈದೆ ಹೀಗೆ ರೂಪಗೊಂಡಿರಲಿಕ್ಕೆ ಸಾಕು. ಸೀನ್–ಸೀನರಿಗಳಲ್ಲಿ ಸಂಧಿಮ, ವ್ಯಾಜಿಮ, ಚೇಷ್ಟಿಮ ಎಂಬ ಭೇದಗಳಿದ್ದವು. ಒಂದಕ್ಕೊಂದು ಜೋಡಿಸಿ ನಿರ್ಮಿಸುವ ಸೀನರಿಗಳಿಗೆ ಸಂಧಿಮ ಎನ್ನುತ್ತಿದ್ದರು. ಇವುಗಳನ್ನು ಚಿಗರೆಯ ಚರ್ಮ ಅಥವಾ ಬಟ್ಟೆ

60. ಭರತಕೋಶ ಕಟ್ಟರ.
61. ಡಾ. ವಿ. ರಾಘವನ್: ಶಾಮಣ್ಣಸೂರಿಯ ಸಂಗೀತ ಗ್ರಂಥಗಳು, ಡಮರುವಾದನ ಪ್ರಕರಣ. ಪು. ೧೩೮.
62. ಭರತಕೋಶ ಕಟ್ಟರ.
63. ವೇದಸೂರಿ: ಸಂಗೀತ ಮಕರಂದ, ನರ್ತನಾಧ್ಯಾಯ ೧೧೭.
64. ಯಕ್ಷಗಾನ ಬಯಲಾಟ, ಪು. ೧೮.

ಗಳಿಂದ ತಯಾರಿಸುತ್ತಿದ್ದರು. ಹಗ್ಗಗಳಿಂದ ಎಳೆಯುವ ಪರದೆ ಮೊದಲಾದವುಗಳಿಗೆ ವ್ಯಾಜಿಮ ಎನ್ನುತ್ತಿದ್ದರು. ಅದ್ಭುತ ದೃಶ್ಯಗಳಿಗಾಗಿ ಅರಗು ಮೊದಲಾದ ಜ್ವಾಲಾಗ್ರಾಹಿ ಪದಾರ್ಥಗಳ ಬಳಕೆಗೆ ಅನುಕೂಲವಿರುವ ಸೀನರಿಗಳಿಗೆ ಚೇಷ್ಟಿಮ ಎನ್ನುತ್ತಿದ್ದರು.

ಆಭರಣ ಅಲಂಕಾರಗಳಲ್ಲಿ ಆವೇಧ್ಯ, ಬಂಧನೀಯ, ಕ್ಷೇಪ್ಯ, ಆರೋಪ್ಯ ಎಂಬ ಭೇದಗಳಿದ್ದವು. ಹೆಚ್ಚಾಗಿ ಇವುಗಳನ್ನು ಅರಗು ಮೊದಲಾದವುಗಳಿಂದ ತಯಾರಿಸುತ್ತಿದ್ದರು. ರಂಧ್ರದಲ್ಲಿ ಸಿಕ್ಕಿಸುವ ಅಂದರೆ ಕರ್ಣ, ಕುಂಡಲ, ಮೂಗುತಿ ಮೊದಲಾದವು ಆವೇಧ್ಯ ಆಭರಣಗಳು. ಭುಜ ಕಿರೀಟಾದಿಗಳು ಬಂಧನೀಯ; ನೂಪುರಾದಿಗಳು ಕ್ಷೇಪ್ಯ; ಹಾರಾದಿಗಳು ಆರೋಪ್ಯವರ್ಗದಲ್ಲಿ ಬರುತ್ತಿದ್ದವು. ಪಾತ್ರಧಾರಿಗಳು ತಮ್ಮ ಮೂಲ ಬಣ್ಣಕ್ಕನುಸರಿಸಿ ಬಿಳಿ, ಕೆಂಪು, ನೀಲಿ ಮತ್ತು ಇವುಗಳ ಮಿಶ್ರವಿರುವ ಬಣ್ಣಗಳನ್ನು ಹಚ್ಚಿಕೊಳ್ಳುತ್ತಿದ್ದರು.[65] ಈ ನಿರೂಪಣೆಗನುಸರಿಸಿ ಲಭ್ಯವಿರುವ ಸಾಧನ ಸಾಮಗ್ರಿಗಳಿಂದ ವೇಷಭೂಷಣ, ಸೀನ್-ಸೀನರಿ ಮೊದಲಾದುವನ್ನು ತಯಾರಿಸಿಕೊಳ್ಳುತ್ತಿದ್ದರು. ಯಕ್ಷಗಾನ ಆಟಗಳಲ್ಲಿರುವದಾದರೂ ಇಷ್ಟೇ.

ಪೂರ್ವರಂಗ ಪದ್ಧತಿಗಳು

ಪೂರ್ವರಂಗ ಪದ್ಧತಿಯಲ್ಲಿ ಶುದ್ಧ, ಗೋಂಡಲಿ ಮತ್ತು ಪೇರಣಿ ಎಂಬ ಮೂರು ಮುಖ್ಯ ಭೇದಗಳಿದ್ದವೆಂದು ತೋರುತ್ತದೆ. ರಂಗಸ್ಥಳದ ಆಯ್ಕೆ, ರಂಗನಿರ್ಮಾಣ, ರಂಗಪೂಜೆ, ಗಣಪತಿ, ಇಷ್ಟದೇವತೆಯ ಮತ್ತು ಇತರ ದೇವತೆಗಳ ಪ್ರಾರ್ಥನೆ, ಸಭಾಪತಿಯ ಲಕ್ಷಣ, ಸಭಿಕರ ಲಕ್ಷಣ, ಮೊದಲಾದವು ಮೂರೂ ಪದ್ಧತಿಗಳಿಗೆ ಸಾಮಾನ್ಯವಾಗಿವೆ. ಇಂದು ಯಕ್ಷಗಾನಗಳಲ್ಲಿ ಕಂಡುಬರುವ ಸುಬ್ರಹ್ಮಣ್ಯನ ಸ್ತುತಿ, ಬಾಲಗೋಪಾಲರ ನೃತ್ಯ ಸ್ಥಳಿಕ ಸಂಪ್ರದಾಯಗಳೆನ್ನಬಹುದು. ಉತ್ತರ ಕರ್ನಾಟಕದ ದೊಡ್ಡಾಟಗಳಲ್ಲಿ ಇವಿಲ್ಲ. ಗೋಪಾಲ ಕಟ್ಟಡವೆಂಬ ಥೀಮ್ ಡಾನ್ಸ್ ಇದ್ದಿತು.[66] ಭಾಗವತ ಸಂಪ್ರದಾಯದಲ್ಲಿ ಕೃಷ್ಣಭಕ್ತಿಗೆ ಹೆಚ್ಚು ಪ್ರಾಶಸ್ತ್ಯವಿರುವದರಿಂದ ಪೂರ್ವರಂಗದ ಅಂಗವಾಗಿ ಈ ನರ್ತನವು ಇಲ್ಲಿ ಸೇರಿಕೊಂಡಿರಬಹುದಾಗಿದೆ.

ಶುದ್ಧಪದ್ಧತಿಯಲ್ಲಿ ಪರದೆ ಸರಿದ ನಂತರ ಅದರ ಹಿಂದೆ ಆಕರ್ಷಕ ಭಂಗಿಯಲ್ಲಿ ಸಿದ್ಧರಾಗಿ ನಿಂತ 'ಸಭಾಜನ ಮನೋಹಾರಿ'ಗಳಾದ ನರ್ತಕಿಯರು ಗೀತವಾದ್ಯಗಳ ಹಿನ್ನೆಲೆಯೊಂದಿಗೆ ರಂಗಸ್ಥಳದ ಮಧ್ಯದಲ್ಲಿ ಬಂದು ಪುಷ್ಪಾಂಜಲಿಯನ್ನರ್ಪಿಸುತ್ತಿದ್ದರು. 'ಯವನಿಕಾಂತರಿತಂ ಸಕುಸುಮಾಂಜಲಿತಂ ಪಾತ್ರಂ ಸೌಷ್ಠವಾಶ್ರಿತ ಸ್ಥಾನಕಮಾಲಂಬ್ಯ, ಯವನಿಕಾಪಸರಣಾನಂತರಂ, ರಂಗಭುವಂಪ್ರವಿಶ್ಯ, ವಾದಕೇ ಪ್ರಬಂಧೈ

65. ತುಳಜಾಜಿ ಮಹಾರಾಜ: ಸಂಗೀತ ಸಾರಾಮೃತ (ನಾಟ್ಯ ರತ್ನಾವಳಿ) ಪು. ೨೪.
66. ಭರತಕೋಶ.

ವಾದ್ಯಮಾನೇ, ರಂಗಪೀಠಮಧ್ಯೇ ಪುಷ್ಪಾಂಜಲಿಂ ವಿಕಿರೇತ್', ಎಂದು ವಿವರಿಸಿರುವನು, ಶಾರ್ಙ್ಗದೇವ.[67]

ಗೋಂಡಲಿ ಪದ್ಧತಿ

ಗೋಂಡಲಿ ನೃತ್ಯವು ಚಾಲುಕ್ಯ ಸೋಮೇಶ್ವರನಿಂದ ನಿರ್ಮಿಸಲ್ಪಟ್ಟು ನರ್ತನದ ಪೂರ್ವರಂಗದಲ್ಲಿ ಆತನಿಂದ ಸೇರಿಸಲಾಯಿತೆಂದು ಈ ಹಿಂದೆ ಉಲ್ಲೇಖಿಸಲಾಗಿದೆ. ಗೋಂಡಲಿ ಮತ್ತು ಪೇರಣಿ ಪದ್ಧತಿಗಳು ಪ್ರಚಾರದಲ್ಲಿ ಬಂದ ನಂತರ ಆ ಮೊದಲು ಪ್ರಚಾರದಲ್ಲಿದ್ದ ಪದ್ಧತಿಗೆ ಶುದ್ಧಪದ್ಧತಿ ಎಂಬ ಹೆಸರು ಬಂದಿರಲಿಕ್ಕೆ ಸಾಕು. ಪೇರಣಿ ಪದ್ಧತಿಯು ಎಂದು ಮತ್ತು ಯಾರಿಂದ ಪ್ರಾರಂಭಿಸಲ್ಪಟ್ಟಿತೆಂಬುದು ತಿಳಿದಿಲ್ಲ. ಶುದ್ಧ ಪದ್ಧತಿಯಲ್ಲಿಯ ಗೀತಗಳ ಹಾಡುಗಾರಿಕೆ ಸುಲಭವಿದ್ದಿಲ್ಲೆಂದು ತೋರುತ್ತದೆ. ಸೋಮೇಶ್ವರ ಅವುಗಳನ್ನು ತ್ಯಜಿಸಿ ಇಂದು ಪ್ರಚಾರದಲ್ಲಿರುವ ಧ್ರುವಪದ (ಪಲ್ಲವಿ) ಮತ್ತು ನುಡಿಗಳಿರುವ ಗೀತಗಳನ್ನು ಸೇರಿಸಿದನೆಂಬುದು ಶಾರ್ಙ್ಗದೇವನ ಈ ಕೆಳಗಣ ಉಕ್ತಿಯಿಂದ ವ್ಯಕ್ತವಾಗುವದು—

> ವಾದ್ಯಪ್ರಬಂಧೈಃ ಕರಿಣಸೈಸ್ತ್ಯಕ್ತ ಮೇಲಾದಿಭಿಸ್ತಥಾ ।
> ಗೀತೈಃಸಾಲಗಸೂಡಸ್ಥೈಃ ಪ್ರಬಂಧೈರ್ಯದ್ ಧ್ರುವಾದಿಭಿಃ ।
> ಲಾಸ್ಯಾಂಗೈಃ ಕೇವಲೈರಂಗೈಃ ಕೋಮಲಶ್ಚೈವ ನೃತ್ಯತೆ ॥[68]

ಇದು ಗೋಂಡಲಿ ನರ್ತನದ ವರ್ಣನೆ. ರತ್ನಾಕರವರ್ಣಿಯ—'ಬಳಿಕ ತೆರೆಯು ನಡುಪರಿಯಂತ ಕುಸಿಯಿಸೆ, ಜಲಜಗಂಧಿಯರು ತೋರಿದರು... ನಡುಮುಟ್ಟೆ ತೆರೆಯಿದ್ದುದಾಗ ತೋಳ್ಗಳನೆತ್ತಿ, ಕಡೆಗಣ್ಣೊಳರಸನ ನೋಡಿ... ಬೆಡಗಿಂದ ಪುಷ್ಪಾಂಜಲಿ ಮಾಡಿದರು' ಬಣ್ಣನೆಯು ಶುದ್ಧಪದ್ಧತಿಯನ್ನು ಹೋಲುತ್ತದೆ.[69] ಗೋಂಡಲಿ ಪದ್ಧತಿಯಲ್ಲಿ ಪುಷ್ಪಾಂಜಲಿ ಇದ್ದಿಲ್ಲವೆಂದು ತೋರುತ್ತದೆ. ಇದನ್ನೇ ಅನುಸರಿಸಿದ ಯಕ್ಷಗಾನ ವಿಷಯದಲ್ಲಿ ಶ್ರೀ ಕೃಷ್ಣ ಭಂಡಾರಿ—'ಪುಷ್ಪಾಂಜಲಿ ಕ್ರಮವು ಯಕ್ಷಗಾನದಲ್ಲಿ ಈವರೆಗೆ ನಡೆದು ಬಂದಿದ್ದಿಲ್ಲ. ಆದರೆ ಭರತಶಾಸ್ತ್ರದಲ್ಲಿ ಪುಷ್ಪಾಂಜಲಿ ವಿನಾನಾಟ್ಯಂ ಮಹಾಪಾತಕ ಸಂಭವಂ ಎಂದು ಕೊಟ್ಟಿರುವ ಕಾರಣ ಈ ಕ್ರಮವನ್ನು ಇಟ್ಟಿದ್ದೇವೆ,' ಎಂದಿರುವರು.[70] ಪ್ರಾರಂಭಿಕ ಸ್ತುತಿ ಸ್ತೋತ್ರ, ಬಾಲಗೋಪಾಲ ನೃತ್ಯ ಮತ್ತು 'ಚಂದಭಾಮಾ' ಪದದ ನಂತರ ಸ್ತ್ರೀವೇಷ ಬರುತ್ತದೆ. ಶಾರ್ಙ್ಗ ದೇವನಾದರೂ ಗೋಂಡಲಿ ನರ್ತಕಿಗೆ ಪುಷ್ಪಾಂಜಲಿಯನ್ನು ಹೇಳಿಲ್ಲ. ಶಾರ್ಙ್ಗದೇವನ ಸಮಯದಲ್ಲಿ ಈ ಪಾತ್ರವು ತ್ರಿವಳಿ (ಹೆಗಲಿಗೆ ಹಾಕಿಕೊಂಡು ಬಾರಿಸುವ ಡಮರಿನ

67. ಸಂಗೀತ ರತ್ನಾಕರ, ೭/೧೨೬೦–೧೨೬೪ ಮತ್ತು ಸಿಂಹಭೂಪಾಲನ ಟೀಕೆ.
68. ಸಂಗೀತ ರತ್ನಾಕರ, ೭/೧೨೭೩–೧೨೭೭ ಮತ್ತು ವ್ಯಾಖ್ಯೆ.
69. ಭರತೇಶ ವೈಭವ, ಉ. ನಾ. ಸಂಧಿ, ೪೧–೪೨.
70. ಕೃಷ್ಣಭಂಡಾರಿ: ಯಕ್ಷಗಾನ ಕೈಪಿಡಿ, ಪು. ೪೯, ಟಿಪ್ಪಣಿ.

ಆಕಾರದ ವಾದ್ಯ) ಯೊಂದಿಗೆ ಹಾಡುತ್ತ ಅಥವಾ ಕೇವಲ ಹಾವಭಾವಗಳೊಂದಿಗೆ ನರ್ತಿಸುತ್ತಿತ್ತು. ಕೇವಲ ಹಾವಭಾವಗಳೊಂದಿಗಿನ ನರ್ತನಕ್ಕೆ ಮೂಕ ಗೋಂಡಲಿ ಎನ್ನುತ್ತಿದ್ದರು. ಗಾನ ನರ್ತನಗಳು ಶೃಂಗಾರ ಭೂಯಿಷ್ಟ ಮತ್ತು ಗ್ರಾಮ್ಯತ್ವದಿಂದ ಕೂಡಿರುತ್ತಿದ್ದವು. ಶಾರ್ಙ್ಗದೇವ—

ಲಾಸ್ಯಾಂಗೈಃ ನೃತ್ಯತಿ ಸ್ವಯಂಗಾಯತಿ, ವಾದ್ಯಂ ಚ ತ್ರಿವಲೀಂ
ವಾದಯೇತ್ಸ್ವಯಂ, ತ್ರಿವಲೀಂ ಧಾರಣಂ ಸ್ಕಂಧೇ ಗ್ರಾಮ್ಯತ್ವಂ
ಕುರುತೇ ಸ್ತ್ರಿಯಾಃ ; ಅಗಾಯಂತೀತ್ವ ಶಾರೀರಾಸ್ಯೈವಸ್ಯಾನ್ಮೂಕ ಗೋಂಡಲೀ...

ಎಂದು ಗೋಂಡಲಿ ನೃತ್ಯವನ್ನು ವಿವರಿಸಿ, ಇದು 'ಕರ್ಣಾಟ ದೇಶಜಂ' ಎಂದಿರುವನು.

ಇಂದು ಯಕ್ಷಗಾನ ಆಟದ ಪೂರ್ವರಂಗದಲ್ಲಿ ಕುಣಿಯುವ ಸ್ತ್ರೀಪಾತ್ರಗಳು ಈ ಗೋಂಡಲಿ ನರ್ತಕಿಯರ ವಾರಸದಾರರೆಂಬಲ್ಲಿ ಸಂದೇಹವಿಲ್ಲ. ಇವರಿಗೆ ಈಗ ಆಟದ ಸೂಳೆಯರೆನ್ನುವದುಂಟು. ಶಾರ್ಙ್ಗದೇವನ 'ಗ್ರಾಮ್ಯತ್ವಂ ಕುರುತೇ' ಮಾತು ಮತ್ತು ಇಂದು ಈ ಪಾತ್ರಗಳ ಹಾಡಿನಲ್ಲಿ ಬರುವ 'ಬಾಯೊಳು ಬಾಯನಿಟ್ಟು ಮುದ್ದಿಸುತೆನ್ನ ಕಾಯದೊಳಳವಟ್ಟು' [71] ಶಬ್ದಗಳು ಇವರಿಗೆ ಈ ಹೆಸರು ಬಂದಿರುವದಕ್ಕೆ ಸಂವಾದಿಯಾಗಿವೆ. ಇವರಿಗೆ ಆಟದ ಸೂಳೆಯರೆಂಬುದು ಸರಿಯಾಗದು. ನಿಜಕ್ಕೂ ಇವರ ಕೆಲಸ ರಂಗಪೂಜೆ ಎಂಬ ಅಭಿಪ್ರಾಯವಿದೆ. ಶಾರ್ಙ್ಗದೇವನ ಗೋಂಡಲಿ ನರ್ತಕಿಯರ ವರ್ಣನೆಯಿಂದ ಅವರು ಆಟದ ಸೂಳೆಯರಿರದಿದ್ದರೂ ಅವರ ಕಾರ್ಯ ರಂಗಪೂಜೆ ಇದ್ದಿಲ್ಲವೆಂಬುದು ಸ್ಪಷ್ಟವಿದೆ. ಆದರೆ ಇದೇ ಪದ್ಧತಿಯಲ್ಲಿ ಒಬ್ಬಳೇ ನರ್ತಕಿಯನ್ನಿರಿಸಿ ಅವಳನ್ನು ಸಾಕ್ಷಾತ್ ರಂಗದೇವತೆಯೆಂದು ಭಾವಿಸಿರುವದೂ ಉಂಟು. ಸಂಗೀತ ಸಾರಾಮೃತಕಾರ ತಂಜಾವರದ ತುಳಜಾಜಿ ಮಹಾರಾಜ—

ಶಕ್ತಿಃ ಕುಂಡಲಿನೀ ವಿಚಿತ್ರ ವಿಭವಾ ಸದ್ರತ್ನ ತಾಟಂಕಿನೀ
ಶೃಂಗಾರಾಮೃತ ವರ್ಷಿಣೀ ಸುಖಮಯೀ ಲಾವಣ್ಯಕಲ್ಲೋಲಿನೀ ‖
ಆಧಾರಾಂಬುಜ ಕಂದರೋದ್ಗತ ಲಾಸ್ಯ ಸ್ವರೂಪಾಭಿದೇ
ನೃತ್ಯಂತೇ ಸಕಲೇಶ್ವರೀ ವಿಲಸಿತೈಃ ಸಮ್ಮೋಹಯಂತೀಜಗತ್ ‖

ಎಂದು ಸ್ತುತಿಸಿ 'ಏತಾದೃಶಗುಣವತೀ ಗೌಂಡಲೀಮತಾ' ಎಂದು ವರ್ಣಿಸಿರುವನು [72]

ತ್ಯಾಗಹಾಕುವದು

ಪೂರ್ವರಂಗದ ಅಂಗವಾಗಿ ಗೋಂಡಲಿ ನರ್ತಕಿಯರು ತ್ಯಾಗಹಾಕುವ ಅಂದರೆ ಗಣ್ಯಸಭಿಕರ ಪರಾಕು ಹೇಳಿ ವಂದಿಸುವ ಪರಂಪರೆ ಇದ್ದಿತು. ಶಾರ್ಙ್ಗದೇವ 'ನರ್ತಿ

71. ಕೃಷ್ಣ ಭಂಡಾರಿ: ಯಕ್ಷಗಾನ ಕೈಪಿಡಿ, ಪು. ೫೨, ಟಿಪ್ಪಣಿ.
72. ಸಂಗೀತ ಸಾರಾಮೃತ, ನರ್ತನ ಅನುಬಂಧ, ಪು. ೪೬.

ತ್ಸಾಕ್ರಿಯತೇ ತ್ಯಾಗೋಯತ್ರಾಸಾ ಗೋಂಡಲೀ ವಿಧಿಃ'[73] ಎಂದಿರುವನು, ಚಾಲುಕ್ಯ ಸೋಮೇಶ್ವರಹೀಗೆ. ನರ್ತಕರು ಬಂದು 'ತ್ಯಾಗ' ಹಾಕಿದಾಗ ಅರಸನು ಅವರನ್ನು ಯುಕ್ತರೀತಿಯಿಂದ ಪುರಸ್ಕರಿಸಬೇಕೆಂದು ಹೇಳಿ ಇದಕ್ಕೆ 'ತೇಷಾಂ ದಾನಾರ್ಥಮಾಲೋಕಃ ತ್ಯಾಗಮಿತ್ಯಭಿದೀಯತೇ,' ಎಂದು ತ್ಯಾಗದ ಅರ್ಥವನ್ನು ಹೇಳಿರುವನು.[74] ಯಕ್ಷಗಾನ ಆಟದಲ್ಲೂ ಈ ಪದ್ದತಿ ನಡೆದು ಬಂದಿದ್ದು ಕೃಷ್ಣ ಭಂಡಾರಿ ಗ್ರಂಥದಲ್ಲಿ ಇದು 'ದೌಲತ್ ತ್ಯಾಗ' ಆಗಿದೆ. ಇಲ್ಲಿ 'ದೌಲತ್' ಪದವು ಹೇಗೆ ಸೇರಿಕೊಂಡಿತೊ ತಿಳಿಯದು. ಕೆಲವು ವರ್ಷಗಳ ಮೊದಲು ನರ್ತನ ಕಾರ್ಯಕ್ರಮಗಳಲ್ಲಿ ಹೀಗೆ ಪರಾಕು ಹೇಳಿ ಸಲಾಮು ಹಾಕುವದಕ್ಕೆ 'ದೌಲತ್ ಜಾದಾ' ಅಂದರೆ 'ದೌಲತ್ತು ಹೆಚ್ಚಲಿ' ಎನ್ನುತ್ತಿದ್ದರಂತೆ.[75] ಇದರಲ್ಲಿಯ ದೌಲತ್ ಪದವು ಯಕ್ಷಗಾನದಲ್ಲಿಯ 'ತ್ಯಾಗ'ದೊಡನೆ ಸೇರಿ 'ದೌಲತ್ ತ್ಯಾಗ' ಆದಂತಿದೆ.

ಪೇರಣೀ ಪದ್ಧತಿ

ಗೋಂಡಲಿ ಪದ್ಧತಿಯಲ್ಲಿ ಭಾಗವತನಿಗೆ ಪ್ರಾಶಸ್ತ್ಯವಿರುವಂತೆ ಪೇರಣಿ ಪದ್ದತಿಯಲ್ಲಿ ಪೇರಣಿಗೆ ಅಂದರೆ ಹಾಸ್ಯಗಾರನಿಗೆ ಪ್ರಾಶಸ್ತ್ಯವಿದೆ. ಶಾರ್ಙ್ಗದೇವ—

ಭಸ್ಮಾದಿಶ್ವೇತ ಲಿಪ್ತಾಂಗೋ ಬಿಭ್ರಮುಂಡಂ ಶಿರಃಶಿಖಾಂ।
ಭ್ರಾಜದ್ಘರ್ಘರಿಕಾ ಜಾಲಜಂಘಾ ಶಾರೀರಪೇಶಲಃ ॥
ಪಂಚಾಂಗ ಕುಶಲಸ್ತಾಲ ಕಲಾಲಯ ವಿಚಕ್ಷಣಂ।
ಸಭಾಜನ ಮನೋಹಾರೀಯೋ ನೃತ್ಯತಿ ಸಪೇರಣೀ ॥

ಮೈಗೆ ಬಿಳಿಬಣ್ಣ ಅಥವಾ ಭಸ್ಮವನ್ನು ಬಳೆದುಕೊಂಡಿರುವ, ಸುಂದರ ಶರೀರವುಳ್ಳ, ತಲೆಗೂದಲುಗಳನ್ನು ನೆತ್ತಿಗೆಳೆದು ಗಂಟುಕಟ್ಟಿಕೊಂಡಿರುವ, ಕಾಲುಗಳಿಗೆ ಗೆಜ್ಜೆ (ಘರ್ಘರಿ)ಗಳನ್ನು ಕಟ್ಟಿಕೊಂಡು ಪಂಚಾಂಗ ಅಂದರೆ ಘರ್ಘ, ಭಾವಾಶ್ರಯ, ಕವಿಚಾರ, ಮೊದಲಾದ ಐದು ಗೆಜ್ಜೆಯ ಗತ್ತುಗಳಿಗನುಸರಿಸಿ ಹಾಡಿ ಕುಣಿದು ಸಭಿಕರನ್ನು ರಂಜಿಸುವವನೆಂದು ವರ್ಣಿಸಿರುವನು. ಮುಂದರಿದು ವಿಪರೀತಾರ್ಥ ಹಚ್ಚಿ ಸಭಿಕರನ್ನು ನಗಿಸುವುದು, ನಾಯಕಾದಿ ಪಾತ್ರಗಳ ಪರಿಚಯ ಮಾಡಿಕೊಡುವದು (ಸಾಮಾಜಿಕಾನಾಂ ಹಾಸ್ಯೋತ್ಪಾದನಾಯ ಕ್ರಿಯಮಾಣಂ ಉತ್ತಮನಾಯಕ ವರ್ಣನಂ) ಇವೇ ಮೊದಲಾದವು ಪೇರಣಿಯ ಕೆಲಸಗಳೊಂದಿರುವನು ಮತ್ತು ಗೋಂಡಲಿಯಂತೆ ಇದಾದರೂ ಒಂದು ಪೂರ್ವರಂಗ ಪದ್ಧತಿ (ಗೋಂಡಲೀ ವಿಧಿವಚ್ಚಾತ್ರ ರಂಗಸ್ಥಃ ಸಂಪ್ರದಾಯಿಕಾಃ) ಎಂದಿರುವನು.[76] ಈತನಿಗೆ ವಿಕಟ

73. ಸಂಗೀತ ರತ್ನಾಕರ ೭-೧೩೦೦.
74. ಮಾನಸೋಲ್ಲಾಸ, ನೃತ್ಯ ವಿನೋದ ೯೫೬.
75. ಯಕ್ಷಗಾನ ಕೈಪಿಡಿ, ಪು. ೭೪, ಯಕ್ಷಗಾನ ಬಯಲಾಟ, ಪು. ೪೩.
76. ಸಂಗೀತ ರತ್ನಾಕರ ೭/೧೩೦೧-೧೩೧೬.

ವೇಷ ಭೂಷಣಗಳನ್ನು ಧರಿಸಿದ ಬೋಳುತಲೆಯ ಸಹಾಯಕನಿದ್ದನು. ಆತನಿಗೆ ಅಟ್ಟಬೋಡಕ ಎನ್ನುತ್ತಿದ್ದರು.

ಮೂಡಲಪಾಯ

ಪಶ್ಚಿಮ ಕರಾವಳಿಯಲ್ಲಿ ಯಕ್ಷಗಾನ ಹೇಗೊ ಹಾಗೆ ಉತ್ತರ ಕರ್ನಾಟಕ ಮತ್ತು ಮೈಸೂರಿನ ಕೆಲವು ಭಾಗಗಳಲ್ಲಿ ದೊಡ್ಡಾಟ ಅಥವಾ ಮೂಡಲಪಾಯ ದಾಟವು ಲೋಕಪ್ರಿಯವಿದೆ. ಇದಕ್ಕೂ ಯಕ್ಷಗಾನಕ್ಕೂ ಇರುವ ಒಂದೇ ಒಂದು ಭೇದವೆಂದರೆ, ಯಕ್ಷಗಾನದಲ್ಲಿ ಭಾಗವತನಿಗಿರುವ ಸ್ಥಾನಮಾನಗಳೆಲ್ಲ ಹಾಸ್ಯ ಗಾರನಿಗಿರುವವು. ಇಲ್ಲಿ ಭಾಗವತ ಹಿಮ್ಮೇಳದ ಹಿರಿಯ. ಹಾಸ್ಯಗಾರನಿಗೆ ಸಾರಥಿ ಯೆನ್ನುವರು. ಈ ಸಾರಥಿಗೂ ಶಾರ್ಙ್ಗದೇವನ ಪೇರಣಿಗೂ ವ್ಯತ್ಯಾಸವಿಲ್ಲೆಂದು ಬೇರೆ ಹೇಳಬೇಕಿಲ್ಲ. ಯಕ್ಷಗಾನ ಮತ್ತು ಮೂಡಲ ಪಾಯಗಳಲ್ಲಿಯ ಈ ವ್ಯತ್ಯಾಸ ವನ್ನೂ ಇವುಗಳ ಪ್ರದರ್ಶನದಲ್ಲಿ ಇಂದು ಕಂಡುಬರುತ್ತಿರುವ ಕೆಲವು ಚಿಕ್ಕಪುಟ್ಟ ವ್ಯತ್ಯಾಸಗಳನ್ನೂ ಎತ್ತಿ ತೋರಿಸಿ ಅದು ಬೇರೆ ಇದು ಬೇರೆ ಎನ್ನುವದುಂಟು.[77] ನರ್ತನ ಕಾರ್ಯಕ್ರಮದ ಪೂರ್ವರಂಗ ವಿಧಿಯಲ್ಲಿರುವ ಶುದ್ಧ ಗೋಂಡಲಿ ಮತ್ತು ಪೇರಣಿ ಈ ಮೂರು ಮುಖ್ಯ ಭೇಧಗಳಲ್ಲಿ ಯಕ್ಷಗಾನ ಆಟವು ಗೋಂಡಲಿ ಪದ್ಧತಿ ಯನ್ನು ಸ್ವೀಕರಿಸಿದ್ದರೆ ಮೂಡಲಪಾಯವು ಪೇರಣಿ ಪದ್ಧತಿಯನ್ನು ಸ್ವೀಕರಿಸಿ ದೆಂಬುದು ಅಂಗೈ ನೆಲ್ಲೀಕಾಯಿಯಷ್ಟು ಸ್ಪಷ್ಟವಿದೆ. ಉಳಿದ ವ್ಯತ್ಯಾಸಗಳನ್ನು ತಣ್ಣೀರು—ಬಿಸಿನೀರುಗಳಲ್ಲಿರುವ ವ್ಯತ್ಯಾಸಕ್ಕೆ ಹೋಲಿಸಬಹುದು.

ಮೂಡಲಪಾಯವೆಂಬ ಹೆಸರೇ ಇದು ಪೂರ್ವದಿಕ್ಕಿನ ಅಂದರೆ ಇಂದಿನ ಉತ್ತರ ಕರ್ನಾಟಕ ಪ್ರದೇಶಗಳ ಪೂರ್ವಕಿದ್ದ ವಿಜಯನಗರ ಕಾಲೀನ ಕಲಾವಿದರು ಪುರಸ್ಕರಿಸಿ ಪೋಷಿಸಿದ ಸಂಪ್ರದಾಯವೆಂಬುದನ್ನು ಸೂಚಿಸುತ್ತದೆ. ಯಕ್ಷಗಾನ ಆಟದ ಜನ್ಮ ವಾದರೂ ಇಲ್ಲಿಯೇ. ತಿರುಪತಿ ವೆಂಕಟೇಶ್ವರನ ಬೆಟ್ಟಕ್ಕೆ 'ಮೂಡಲಗಿರಿ' ಎನ್ನುತ್ತಿ ದ್ದರು. 'ಬೇಡಿದ ವರಗಳನಿಪ್ಪ, ನಮ್ಮ ಮೂಡಲಗಿರಿ ತಿಮ್ಮಪ್ಪ' ಎಂದು ಹಾಡಿರುವರು ಪುರಂದರದಾಸರು. ಈ ದಿಕ್ಕಿನಿಂದ ನಮ್ಮತ್ತ ಅಂದರೆ ಧಾರವಾಡ-ಹುಬ್ಬಳ್ಳಿ ಭಾಗದತ್ತ ಕೊಂಡುತರುವ ಜಾನುವಾರಗಳಿಗೆ ಮೂಡಲ ಎತ್ತು, ಮೂಡಲ ಹೋರಿ ಎನ್ನುವರು.

ಸಮಸ್ಯೆ—ಸಮಾಧಾನ

ಮೂಡಲಪಾಯವು ಉತ್ತರ ಕರ್ನಾಟಕಕ್ಕೆ ಹೊಂದಿಕೊಂಡಿದ್ದ ಮೈಸೂರು ಕರ್ನಾಟಕದಲ್ಲೂ ಪ್ರಚಾರದಲ್ಲಿದೆ.[78] ಇದೇನೊ, ಸರಿ. ಆದರೆ ಇವೆರಡು ಪ್ರದೇಶಗಳ

---

77. ಚಂದ್ರಶೇಖರ ಕಂಬಾರ: ಉತ್ತರ ಕರ್ನಾಟಕದ ಜಾನಪದ ರಂಗಭೂಮಿ, (ಮನ್ವಂತರ, ೧೯೬೫).

78. ಕರ್ನಾಟಕ ರಂಗಭೂಮಿ, ಪು. ೬೫.

ಬೆಂಗಡೆಯಲ್ಲಿರುವ ಪಶ್ಚಿಮ ಕರಾವಳಿ ಭಾಗದಲ್ಲಿ ಬೆಳೆದು ಬಾಳಿದ ಯಕ್ಷಗಾನದಲ್ಲಿ ಗೋಂಡಲಿ ಪದ್ಧತಿ ಹೇಗೆ ಸೇರಿಕೊಂಡಿತು? ಸದ್ಯ ಇದಕ್ಕೆ ಊಹೆ ಒಂದೇ ಸಮಾಧಾನ. ವಿಜಯನಗರವು ಅಳಿದ ನಂತರ ಅತ್ತ ತಂಜಾವರದ ಅರಸರು ಇತ್ತ ಕೆಳದಿಯ ಅರಸರು ಪ್ರಸಿದ್ಧಿಗೆ ಬಂದರು. ವಿಜಯನಗರವು ಆಂಧ್ರ ಕರ್ನಾಟಕಗಳಿಗೆ ಮಧ್ಯವರ್ತಿಯಾಗಿದ್ದಿತು. ಯಕ್ಷಗಾನವೆಂಬ ಪಂಡಿತದತ್ತ ಹೆಸರಾದರೂ ಆ ಕಾಲದಲ್ಲಿಯೇ ಹುಟ್ಟಿಕೊಂಡಿರಬೇಕು. ಅಂತೆಯೆ ತಂಜಾವರದ ಅರಸರು ಇದೇ ಹೆಸರನ್ನು ಬಳಸಿರುವರು. ವಿಜಯನಗರದ ನಂತರ ಅವರ ಆಶ್ರಯದಲ್ಲಿದ್ದ ಕೆಲವು ಕನ್ನಡ ಕವಿಗಳೂ ಕಲಾವಿದರೂ ಕೆಳದಿಯ ಅರಸರ ಆಶ್ರಯವನ್ನು ಪಡೆದಿರಲಿಕ್ಕೆ ಸಾಕು. ಕೆಳದಿಯ ಹಿರಿಬಸವಪ್ಪ ನಾಯಕನು (ಪ್ರ. ೧೬೯೭–೧೭೧೪) ಚಾಲುಕ್ಯ ಸೋಮೇಶ್ವರನಷ್ಟೇ ಬಹುಜ್ಞನೂ ರಸಿಕನೂ ಇದ್ದನು. ಅವನು ಸಹ ಚಾಲುಕ್ಯ ಸೋಮೇಶ್ವರನ ಮಾನಸೋಲ್ಲಾಸ ಮಾದರಿಯ 'ಶಿವತತ್ತ್ವ ರತ್ನಾಕರ' ಎಂಬ ವಿಶ್ವಕೋಶ ರೂಪಿ ಗ್ರಂಥವನ್ನು ಬರೆದಿರುವನು. ಇದು ಅಚ್ಚಾಗಿದೆ. ಸುಪ್ರಸಿದ್ಧ ಯಕ್ಷಗಾನ ಕವಿ ವೆಂಕಯ್ಯಾತ್ಮಜ ಸುಬ್ಬ (ಈ ಮೊದಲು ಪಾರ್ತಿಸುಬ್ಬ) ಈತನ ಆಶ್ರಿತನಿದ್ದು, ಈತ ಮತ್ತು ಇನ್ನಿತರರು, ಇವರ ಪೂರ್ವಿಕರು, ನಂತರದವರು, ಗೋಂಡಲೀ ಪದ್ಧತಿಯನ್ನು ಪುರಸ್ಕರಿಸಿರಬೇಕು. ರಾಜಾಶ್ರಿತರೂ, ಅಭಿಜಾತ ಕವಿಗಳೂ, ಕಲಾವಿದರೂ ಇದ್ದ ಇವರು ಯಕ್ಷಗಾನವೆಂಬ ಪಂಡಿತದತ್ತ ಸಂಸ್ಕೃತ ಹೆಸರಿನೊಂದಿಗೆ ಮತ್ತು ಅದನ್ನು ಪ್ರದರ್ಶಿಸುವ ಪರಂಪರಾಗತ ರೀತಿ-ನೀತಿಗಳೊಂದಿಗೆ ಪಶ್ಚಿಮ ಕರಾವಳಿ ಪ್ರದೇಶದಲ್ಲಿ ಅದನ್ನು ಬೆಳೆಸಿ ಹಬ್ಬಿಸಿರಬೇಕು.

ಉತ್ತರ ಕರ್ನಾಟಕ ಮತ್ತು ಮೈಸೂರು ಭಾಗಗಳಲ್ಲಿ ಈ ಬಗೆಯ ಲಲಿತ ಕಲೆಗಳ ಅಭಿವೃದ್ಧಿಗೆ ಅನುಕೂಲ ವಾತಾವರಣವಿದ್ದಿಲ್ಲ. ವಿಜಯನಗರ ಸಾಮ್ರಾಜ್ಯ ಊರ್ಜಿತ ಸ್ಥಿತಿಯಲ್ಲಿದ್ದಾಗ ಸಹ ಕೃಷ್ಣೆಯ ಮೇಲ್ಭಾಗದ ಕರ್ನಾಟಕವು ಮುಸಲ್ಮಾನರ ವಶದಲ್ಲಿದ್ದಿತು. ನಂತರ ಮರಾಟರು, ಅವರ ಪ್ರತಿನಿಧಿಗಳೆಂದು ಆಳಿದ ಪೇಶ್ವೆಯರು ಬಂದರು. ಅತ್ತ ನಿಜಾಮ, ಹೈದರಲ್ಲಿ, ಟೀಪುಸುಲ್ತಾನರು ಪ್ರಬಲರಾಗಿದ್ದರು. ಇವರೊಂದಿಗೆ ಬ್ರಿಟಿಶರು ಸೇರಿಕೊಂಡರು. ವಿಜಯನಗರದ ನಂತರ ಈ ಭಾಗಗಳ ಇತಿಹಾಸವೆಂದರೆ ಇವರಲ್ಲಿಯ ಕಾದಾಟ ತಿಕ್ಕಾಟಗಳ ಕಂತೆಯೆನ್ನಬಹುದು. ಈ ರಾಜಕೀಯ ಏರಿಳಿತಗಳಿಂದ ಈ ಭಾಗಗಳಿಗೆ ಸಾಂಸ್ಕೃತಿಕ ಮತ್ತು ತತ್ಸಮ ಕ್ಷೇತ್ರಗಳಲ್ಲಿ ತಟ್ಟಿದಷ್ಟು ಹಾನಿ ಪಶ್ಚಿಮ ಕರಾವಳಿ ಭಾಗಕ್ಕೆ ತಟ್ಟಲಿಲ್ಲ. ಇದಕ್ಕೆ ಅದರ ಭೌಗೋಲಿಕ ಪರಿಸ್ಥಿತಿ ಮತ್ತು ಸಾರಿಗೆ ಸಂಪರ್ಕಗಳ ಕೊರತೆ ಮುಖ್ಯ ಕಾರಣಗಳೆನ್ನಬಹುದು. ಇವುಗಳಿಂದ ಸುಬ್ಬಾದಿಗಳಿಂದ ಬೆಳೆದು ಬಂದ ಯಕ್ಷಗಾನ ಕಲೆಯು ಹೆಚ್ಚು ವಿಕೃತಗೊಳ್ಳದೆ ಇಂದಿಗೂ ಅಲ್ಲಿ ಬದುಕಿ ಉಳಿದಿದೆಂಬಲ್ಲಿ ಸಂದೇಹವಿಲ್ಲ.

ಉಗಮ—ವಿಕಾಸಗಳ ಹಿನ್ನೆಲೆ

ಯಕ್ಷಗಾನ ಮೂಡಲಪಾಯ ಆಟಗಳಲ್ಲಿ ಸೇರಿರುವ ಪೂರ್ವರಂಗ ಮತ್ತು

ಗೀತ, ನರ್ತನ, ವಾದ್ಯಗಳಲ್ಲಿ ಕೆಲವನ್ನು ನಾಟ್ಯಶಾಸ್ತ್ರಕಾರ ಭರತನ ವರೆಗೆ ಎಳೆಯು ಬಹುದಾಗಿದ್ದರೂ, ಗಾನಗಳು ರಾಗನಿರ್ದಿಷ್ಟವಿರುವದರಿಂದ ಅವುಗಳ ಕೆಳಗಣ ಗಡು ವನ್ನು ಹೆಚ್ಚೆಂದರೆ ಮತಂಗನವರೆಗೆ ಅಂದರೆ ೯ನೆಯ ಶತಮಾನದ ವರೆಗೆ ಒಯ್ಯ ಬಹುದಾಗಿದೆ. ಆ ಮೊದಲು ಸಂಗೀತದಲ್ಲಿ ರಾಗವೆಂಬ ಹೆಸರು ಸಹ ಅಸ್ತಿತ್ವದಲ್ಲಿ ದ್ದಿಲ್ಲ. ತಾಳಗಳ ದೃಷ್ಟಿಯಿಂದ ಈ ಗಡುವು ೧೫ನೆಯ ಶತಮಾನದ ಕೆಳಗೆ ಸರಿಯು ವಂತಿಲ್ಲ. ಯಾಕಂದರೆ ಇವುಗಳಿಗೆ ಹೇಳಿದ ಧ್ರುವ, ಮಠ್ಯ, ಝಂಪಾದಿ ತಾಳಗಳು ಪುಂಡರೀಕ ವಿಠಲ (ಕ್ರಿ. ೧೫೬೫–೧೫೯೦)ನೆಂಬ ಸಂಗೀತ ಲಾಕ್ಷಣಿಕನಿಂದ ಪ್ರಚಾರ ದಲ್ಲಿ ತರಲ್ಪಟ್ಟವು ಮತ್ತು ಇವೇ ಇಂದಿಗೂ ಸಮಗ್ರ ಭಾರತದಲ್ಲಿ ಬಳಕೆಯಲ್ಲಿವೆ.[79]

ಚಾಲುಕ್ಯ ಸೋಮೇಶ್ವರನ ಸಮಯದಲ್ಲಿ, ಆ ಮೊದಲು ಸಹ, ಆಗ ಅಸ್ತಿತ್ವ ದಲ್ಲಿದ್ದ ತಾಳಗಳಿಗನುಸರಿಸಿ ರಚಿಸಿದ ಯಕ್ಷಗಾನಗಳಿದ್ದವು, ನೃತ್ಯಗಳಿದ್ದವು. ಈಗ ಬಳಕೆಯಲ್ಲಿರುವ ಕೆಲವು ವಾದ್ಯಗಳೂ ಇದ್ದವು. ಆದರೆ ಯಕ್ಷಗಾನ ಆಟವಿದ್ದಿಲ್ಲ. ಆದರೆ ಆತನ ಕಾಲದಲ್ಲಿ ಪುರಾಣ, ಕಥಾಕಾಲಕ್ಷೇಪ ಮತ್ತು ತತ್ಸಮ ಮನರಂಜನೆಯ ಸಾಧನಗಳಿದ್ದುವು. ತನ್ನ ಮಾನಸೋಲ್ಲಾಸದಲ್ಲಿ ಆತ ಇವುಗಳಿಗೆ 'ಕಥಾವಿನೋದ' ಎಂಬ ಪ್ರತ್ಯೇಕ ಅಧ್ಯಾಯವನ್ನು ಮೀಸಲಾಗಿರಿಸಿರುವನು. ಇದರಲ್ಲಿ ಪುರಾಣಿಕನನ್ನು ಪ್ರತ್ಯೇಕವಾಗಿ ವರ್ಣಿಸಿರುವನು. ಕಥಕರಲ್ಲಿ ನಾಲ್ಕು ವರ್ಗಗಳನ್ನು ಹೇಳಿರುವನು. ಸಂಗೀತದಲ್ಲಿಯ ಯಕ್ಕಲಗಾಣನಂತೆ ಅನ್ಯರ ನೆರವಿಲ್ಲದೆ ಒಬ್ಬನೇ ಕಥೆ ಹೇಳುತ್ತಿದ್ದರೆ ಆತನಿಗೆ 'ಏಕವಕ್ತೃ' ಎನ್ನುತ್ತಿದ್ದರು. ಇಬ್ಬರಿದ್ದರೆ 'ದ್ವಿವಕ್ತೃರು.' ನಾಲ್ವರಿಗೆ 'ಚತುರ್ಮುಖರು' ಎನ್ನುತ್ತಿದ್ದರು. ನಾಲ್ವರಿಗಿಂತ ಹೆಚ್ಚು ಜನರಿದ್ದರೆ ಅದಕ್ಕೆ ಬಹು ಪುರುಷಾ ಎನ್ನುತ್ತಿದ್ದರು. ಇವರಲ್ಲಿಯ ಪ್ರಮುಖ ಕಥೆಗಾರನಿಗೆ ಸೂತ್ರಧಾರನೆನ್ನುತ್ತಿ ದ್ದರು. ಕಥಾನಿರೂಪಣೆ ಪ್ರಾಕೃತ ಅಂದರೆ ದೇಶೀ ಭಾಷೆಗಳಲ್ಲಿರುತ್ತಿತ್ತು. ಹಿಮ್ಮೇಳವಿ ರುತ್ತಿತ್ತು. ನಡುನಡುವೆ ಹಾಡುವುದಕ್ಕೆ ಗಾಯಕಿಯರಿರುತ್ತಿದ್ದರು. ಕಥೆ ಕನ್ನಡದಲ್ಲಿ ದ್ದರೆ ಅದು ಹೆಚ್ಚಾಗಿ ಷಟ್ಪದಿಗಳಲ್ಲಿರಬೇಕೆಂದಿರುವನು. ಕಥೆಯು ರಸಪೂರ್ಣ ಅಂದರೆ ಶೌರ್ಯ, ಔದಾರ್ಯ, ಅದ್ಭುತ, ಬೀಭತ್ಸ, ಹಾಸ್ಯ, ಕರುಣ, ಶೃಂಗಾರ, ವಿಪ್ರಲಂಭ ಗಳಿಂದ ಕೂಡಿರಬೇಕೆಂದಿರುವನು. ಈರ್ಷ್ಯಾ, ದರ್ಪ, ಮದ, ಮೋಹಾದಿ ಗುಣಗಳ ಅಭಿವ್ಯಕ್ತಿಗೆ ಎಡೆ ಇರಬೇಕೆಂದಿರುವನು. ರಾಮಾಯಣ, ಮಹಾಭಾರತ, ಬೃಹತ್ಕಥಾ ದಿಗಳಲ್ಲಿಯ ಪ್ರಸಂಗಗಳು ಪ್ರಸಿದ್ಧ ನಾಟಕ ಮಹಾಕಾವ್ಯ ವಸ್ತುಗಳು, ಲೋಕ ವೃತ್ತಾಂತ ನಿಪುಣರಿಂದ ರಚಿಸಲ್ಪಟ್ಟ ವೀರರ ಚರಿತ್ರೆಗಳು ಕಥಾ ವಿಷಯಗಳಿರ ಬೇಕೆಂದಿರುವನು. ಕಥೆಯೆಂದ ಬಳಿಕ ಅದರಲ್ಲಿ ಅಲಿಖಿತ ಸಂಭಾಷಣೆಯೂ ಇರಲಿಕ್ಕೆ ಸಾಕು. ಇದಕ್ಕೆ ನರ್ತನದ ಪೂರ್ವರಂಗವನ್ನು ಜೋಡಿಸಿದರೆ ಸಾಕು ಅದು ಯಕ್ಷಗಾನ (ಮೂಡಲಪಾಯ)ಕ್ಕೆ ಸಿದ್ಧವಾಗಿತ್ತು.

---

79. ಕರ್ನಾಟಕ ಸಂಗೀತವೂ ದಾಸಕೂಟವೂ.

ಚಾಲುಕ್ಯ ಸೋಮೇಶ್ವರನ ನಂತರ ಪರಕೀಯರ ದಾಳಿಯಿಂದುಂಟಾದ ಕತ್ತಲೆ ಕಳೆದು ಬೆಳಗು ಮೂಡಿದಾಗ ವಿಜಯನಗರ ಸಾಮ್ರಾಜ್ಯವು ತಲೆಯೆತ್ತಿ ನಿಂತಿತ್ತು. ಭಕ್ತಿಮಾರ್ಗ ಮತ್ತು ಅದರ ಅಂಗವಾದ ಭಾಗವತ ಧರ್ಮಗಳು ಬೆಳೆದು ಬೇರೂರಿದ್ದವು. ಭಾಗವತ ಸಂಪ್ರದಾಯದಲ್ಲಿ ಭಾಗವತನಿಗೆ ಅಗ್ರಸ್ಥಾನವಿದೆ. 'ಭಕಾರೋ ಭಕ್ತಿ ಪೂರ್ವೇಣ, ಗಕಾರೋ ಗರ್ವವರ್ಜಿತಃ, ವಕಾರೋ ವಾಕ್ಯಪಾಠೀಚ, ತಕಾರೋ ತತ್ವ ನಿರ್ಣಯಂ' ಎಂದಿರುವರು ಪೂರ್ವಾಚಾರ್ಯರು.[80] ಆತನು ಭಕ್ತಿಯ ಪ್ರತೀಕನೆಂದು ತಿಳಿಯಲ್ಪಟ್ಟಿದ್ದನು. ಅಂತೆಯೇ ಪುರಂದರದಾಸರು 'ಪೋಗದಿರೆಲೊ ರಂಗ ಬಾಗಿಲಿಂದಾಚೆಗೆ ಭಾಗವತರು ಕಂಡರೆತ್ತಿಕೊಂಡೊಯ್ವರೊ' ಎಂದು ಯಶೋದೆಯಿಂದ ನುಡಿಸಿರುವರು. ದಾಸ ಸಾಹಿತ್ಯವು ಗೀತ, ನರ್ತನ, ತಾಲಪ್ರಧಾನವೆಂಬುದು ಅರಿತ ವಿಷಯ. ದಾಸಕೂಟವು ಭಕ್ತಿ ಮಾರ್ಗದ ಪ್ರಚಾರಾರ್ಥವಾಗಿ ವಿವಿಧ ಮಾಧ್ಯಮಗಳನ್ನು ಬಳಸಿಕೊಂಡಿತು. ಕೊರಳಿಗೆ ತಂಬೂರಿ, ಎಡಗೈಯಲ್ಲಿ ಚಿಪ್ಪಳಿ, ಕಾಲಲ್ಲಿ ಗಜ್ಜೆಗಳನ್ನು ಧರಿಸಿ, ಏಕಕಾಲಕ್ಕೆ ಶ್ರುತಿ, ತಾಲಗಳನ್ನು ಒದಗಿಸಿಕೊಂಡು ಯಕ್ಷಲಗಾಣನಂತೆ ಅನ್ಯರ ಸಹಾಯವಿಲ್ಲದೆ ಅವರು ಹಾಡಿದರು. ಅವನಿಗಿಂತ ಒಂದುಹೆಜ್ಜೆ ಮುಂದೆ ಹೋಗಿ ನರ್ತಿಸಿದರು. ತೌರ್ಯತ್ರಯ ಅಂದರೆ ಗೀತ, ವಾದ್ಯ, ನರ್ತನಗಳಿರುವ ಸಂಗೀತವೇ ಪೂರ್ಣಸಂಗೀತ,[81] ಎಂದು ಬಗೆದ ಅವರು ಒಬ್ಬರೇ ಇವೆಲ್ಲವುಗಳನ್ನು ಒದಗಿಸಿಕೊಂಡು ಮನೆಯಲ್ಲಿ, ಮಠದಲ್ಲಿ, ಬೀದಿಯಲ್ಲಿ ಹಾಡಿ, ಕುಣಿದು, ಪರಮಾತ್ಮನನ್ನು ತಣಿಸಿ ಒಲಿಸಿಕೊಂಡರು. ಸ್ವತಃ ಪುರಂದರದಾಸರು ಅವರ ಮಗ ಮಧ್ವಪತಿದಾಸರು ಗಂಧರ್ವ/ಯಕ್ಷಗಾನ ಪ್ರಬಂಧಗಳನ್ನು ರಚಿಸಿರುವ ಸಂಭಾವ್ಯತೆಯನ್ನು ಈ ಮೊದಲೆ ಸೂಚಿಸಲಾಗಿದೆ. ನರ್ತನದ ಪೂರ್ವರಂಗವನ್ನು ಕಥಾತ್ಮಕವಿರುವ ತಮ್ಮ ಈ ಪ್ರಬಂಧಗಳಿಗೆ ಜೋಡಿಸಿ ಈ ದಾಸ ಕೂಟದವರೇ ಇಂದಿನ ಯಕ್ಷಗಾನವನ್ನು ರೂಪಿಸಿರಬಹುದಾಗಿದೆ. ಇಲ್ಲವಾದರೆ ಇದರಲ್ಲಿಯು ಸೂತ್ರಧಾರನ ಪಟ್ಟ ಭಾಗವತನಿಗೆ ದೊರೆತ ಬಗೆಗೆ ಸಮಂಜಸ ಉತ್ತರ ದೊರೆಯುವಂತಿಲ್ಲ.

ಪೇರಣೀ ಪದ್ಧತಿಯಲ್ಲಿ ಸ್ವತಃ ಶ್ರೀಕೃಷ್ಣನೇ ಸಾರಥಿಯ ರೂಪದಲ್ಲಿ ಸೂತ್ರಧಾರನ ಪಾತ್ರವನ್ನು ವಹಿಸಿದಂತಿದೆ. ಶ್ರೀಕೃಷ್ಣನು ವಿನೋದಮೂರ್ತಿ, ವ್ಯವಹಾರ ಕುಶಲ. ಸಾರಥಿಯಾಗಿ ಪಾರ್ಥನಿಗೆ ಮಾರ್ಗದರ್ಶನ ನೀಡಿದವನೆಂಬುದು ಸರ್ವವಿದಿತವಿದೆ. ಶಾರ್ಙ್ಗದೇವನ ಉಪರೋಕ್ತ ಪೇರಣಿಯ ವರ್ಣನೆಯಿಂದ ಅವನೊಬ್ಬ ವ್ಯವಹಾರ ಕುಶಲ ಕಲಾವಿದನೆಂಬುದು ಕಂಡುಬರದಿರಲಾರದು. ಇಂದಿನ ಮೂಡಲಪಾಯದಲ್ಲಿಯು ಸಾರಥಿಯಂತ ಹಾಸ್ಯದವಿಕಟ ಮೂರ್ತಿ ಇದ್ದಿಲ್ಲ ಆತ. ಈ ಬಗೆಯ ಹಾಸ್ಯಕ್ಕಾಗಿ ಆತನಿಗೆ ಅಟ್ಟಬೋಡಕನೆಂಬ ಸಹಾಯಕನಿದ್ದನು.

---

80. ಕೃಷ್ಣಭಂಡಾರಿ: ಯಕ್ಷಗಾನ ಕೈಪಿಡಿ, ಪು. ೪೫.

81. ಗೋವಿಂದಾಚಾರ್ಯ: ಸಂಗ್ರಹ ಚೂಡಾಮಣಿ, ಮುನ್ನುಡಿ.

ಬಯಲಾಟಗಳ ಉದ್ದೇಶ

ಬಯಲಾಟಗಳೆಲ್ಲ ಒಂದಿಲ್ಲೊಂದು ಧಾರ್ಮಿಕ ಆಂದೋಲನವನ್ನು ಆಧರಿಸಿ ಹುಟ್ಟಿಕೊಂಡವೆಂಬ ಅಭಿಪ್ರಾಯವಿದೆ.[೮೨] ಉತ್ತರ ಕರ್ನಾಟಕದ ಬಯಲಾಟಗಳನ್ನು ಕುರಿತು ಈ ಅಭಿಪ್ರಾಯ ವ್ಯಕ್ತವಾಗಿದೆ. ಇದು ಆಧುನಿಕ ಪ್ರಚಾರಕಲೆಯ ದೃಷ್ಟಿಯಿಂದ, ಎನ್ನಬಹುದು. ಆಂದೋಲಕರ ತತ್ವಪ್ರಣಾಲಿಯ ಪ್ರಚಾರಕ್ಕಾಗಿ ಅವರ ಪ್ರಚಾರ (ಪಬ್ಲಿಸಿಟಿ) ಸಿಬ್ಬಂದಿಯು ತಾನೇ ಆಗಲಿ ಅನ್ಯರ ನೆರವಿನಿಂದಾಗಲಿ ಇಂಥ ಬಯಲಾಟಗಳ ಕಥಾನಕಗಳನ್ನು ರಚಿಸಿ ರಂಗಭೂಮಿಗೆ ತಂದಿರಬೇಕೆಂಬ ಧ್ವನಿ ಈ ಅಭಿಪ್ರಾಯದಲ್ಲಿ ಹೊರಡುವಂತಿದೆ. ಭಾವಜೀವಿಯಾದ ಕಲಾವಿದ ಬೇರೆ, ಪ್ರಚಾರಕ ಬೇರೆ, ಎಂದಿಟ್ಟುಕೊಂಡಾಗ ಇವುಗಳ ನಿಜವಾದ ಜನ್ಮದಾತನಾರೆಂಬುದು ಗೊತ್ತಾಗದಿರದು. ಭಕ್ತಿ ಮಾರ್ಗದ ನೇತಾರರು, ಅವರು ದಾಸಕೂಟದವರೇ ಇರಲಿ ಯಾರೇ ಇರಲಿ ಮೂಲತಃ ಭಾವಜೀವಿಗಳು, ಕಲಾವಿದರು. ಅವರ ಭಾವಾಭಿವ್ಯಕ್ತಿಗೆ ಭಕ್ತಿಯು ಸಾಧನವಿದ್ದಿತು. ನವವಿಧ ಭಕ್ತಿಗಳಲ್ಲಿ ಭಗವತ್ಕೀರ್ತನವೂ ಒಂದು. 'ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಂ, ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮ ನಿವೇದನಂ' ಎಂದು ಭಕ್ತಿಯ ಒಂಬತ್ತು ರೂಪಗಳನ್ನು ವಿವರಿಸಿರುವವನು ಭಕ್ತರಾಜ ಪ್ರಲ್ಹಾದ.[೮೩] ಭಕ್ತರ ಕಲಾಕೃತಿಗಳಲ್ಲಿ ಭಕ್ತಿಯ ಈ ರೂಪಗಳು ಒಂದಿಲ್ಲೊಂದು ರೀತಿಯಿಂದ ಅಭಿವ್ಯಕ್ತಿಯನ್ನು ಪಡೆದಿವೆ. ಪಶ್ಚಿಮ ಕರಾವಳಿಯ ಯಕ್ಷಗಾನ ಆಟಗಳಾಗಲಿ, ಉತ್ತರ ಕರ್ನಾಟಕದ ಮೂಡಲಪಾಯ ಆಟಗಳಾಗಲಿ, ಇವುಗಳನ್ನು ಹೋಲುವ ಭಾರತದ ಇತರೆಡೆಗಳಲ್ಲಿಯ ಆಟಗಳಾಗಲಿ, ಈ ರೀತಿ ಹುಟ್ಟಿಕೊಂಡಿರುವವು. ಅವುಗಳನ್ನು ರಚಿಸಿದವರು, ಪ್ರಯೋಗಿಸಿದವರು, ಶ್ರೋತೃಗಳು, ಪ್ರೇಕ್ಷಕರು, ತಾವು ಮಾಡುತ್ತಿರುವದು ಪರಮಾತ್ಮನ ಸೇವೆ, ಅದರಲ್ಲಿ ಸ್ವಾರ್ಥ ಪರಾರ್ಥ ಎರಡೂ ಇವೆ, ಎಂದು ದೃಢವಾಗಿ ನಂಬಿದ್ದರು. ಇಂದಾದರೂ ಅನೇಕರು ಈ ರೀತಿ ನಂಬಿರುವರು. ಧಾರ್ಮಿಕ ಆಂದೋಲಕರು ತಮ್ಮ ಮತ ಪ್ರಚಾರಕ್ಕಾಗಿ ಈ ಮಾಧ್ಯಮವನ್ನು ಬಳಸಿಕೊಂಡಿರಬಹುದು. ಸಾರ್ವಜನಿಕ ಸಂಪರ್ಕ (ಪಬ್ಲಿಕ್-ರಿಲೇಶನ್ಸ್) ಶಾಸ್ತ್ರದಲ್ಲಿ ನಾಟಕ ಮಾಧ್ಯಮಕ್ಕೆ ಇಂದು ಸಹ ಗಣ್ಯಸ್ಥಾನವಿದೆ. ಆದರೆ ಮತಪ್ರಚಾರದ ಅಂಗವಾಗಿ ಇವುಗಳ ಜನ್ಮವಾಯಿತೆಂಬುದು ಸಮಂಜಸವಾಗದು.

ಯಕ್ಷಗಾನ ಆಟ ಮತ್ತು ತತ್ಸಮ ಮನರಂಜನೆಯ ರೂಪಕಗಳ ಗೊತ್ತು-ಗುರಿಗಳನ್ನು ಭಾರತೀಯ ದರ್ಶನ, ಶೈವ, ವೈಷ್ಣವ ಶಾಕ್ತಾದಿ ಮತ ಸಂಪ್ರದಾಯ, ಜನರಲ್ಲಿ ನೆಲೆಸಿದ ವಿವಿಧ ಬಗೆಯ ಶ್ರದ್ಧೆ ಸಂಪ್ರದಾಯಗಳನ್ನು ಸಹಕರಿಸಿ ಆಧುನಿಕ ವಿಮರ್ಶಾ ರೀತಿಯಲ್ಲಿ ನಿರೂಪಿಸುವದುಂಟು.[೮೪] ಆದರೆ ಭರತಾದಿ ಲಾಕ್ಷಣಿಕರ ನಿರೂಪಣೆಯ

---

82. ಚಂದ್ರಶೇಖರ ಕಂಬಾರ: ಉತ್ತರ ಕರ್ನಾಟಕದ ಜಾನಪದ ರಂಗಭೂಮಿ, ಪು. ೧೨.
83. ಭಾಗವತ, ಸ್ಕಂದ ೭.
84. ಉತ್ತರ ಕರ್ನಾಟಕದ ಜಾನಪದ ರಂಗಭೂಮಿ, ಪು. ೧೧-೨೦.

ನೇರೆಗೆ ಬೆಳೆದು ಬಂದ ನಾಟಕ ಮತ್ತು ಇತರ ರೂಪಕಗಳ ವಿಷಯದಲ್ಲಿ ಈ ಬಗೆಯ ಜೊಂಜಾಟವಿಲ್ಲ. ಭರತ—

ದುಃಖಾರ್ತಾನಾಂ ಶ್ರಮಾರ್ತಾನಾಂ ಶೋಕಾರ್ತಾನಾಂ ತಪಸ್ವಿನಾಂ ।
ವಿಶ್ರಾಂತಿ ಜನನಂ ಕಾಲೇ ನಾಟ್ಯಮೇತನ್ಮಯಾ ಕೃತಂ ॥
ಧರ್ಮ್ಯಂ ಯಶಸ್ಯಮಾಯುಷ್ಯಂಹಿತಂ ಬುದ್ಧಿ ವಿವರ್ಧನಂ ।
ಲೋಕೋಪದೇಶ ಜನನಂ ನಾಟ್ಯ ಮೇತದ್ಭವಿಷ್ಯತಿ ॥

ದಶಾವತಾರ ಆಟ

ಯಕ್ಷಗಾನ ಬಯಲಾಟಕ್ಕೆ ದಶಾವತಾರ ಆಟವೆನ್ನುವುದಕ್ಕೆ ಸರಿಯಾದ ವಿವರಣೆ ದೊರೆತಿಲ್ಲ. ಇದರ ಕಥಾನಕಗಳು ಹೆಚ್ಚಾಗಿ ವಿಷ್ಣುವಿನ ಒಂದಿಲ್ಲೊಂದು ಅವತಾರಕ್ಕೆ ಸಂಬಂಧಿಸಿರುವದರಿಂದ ಈ ಹೆಸರು ಬಂದಿರಬಹುದೆಂಬ ತಿಳಿವಳಿಕೆ ಇದೆ. ಯಕ್ಷಗಾನ ಪ್ರಬಂಧಗಳ ಪಟ್ಟಿಯನ್ನು ನೋಡಿದರೆ ಅವುಗಳನ್ನು ರಾಮಾಯಣ, ಭಾರತ, ಭಾಗವತದಲ್ಲಿಯ ಕಥೆಗಳೆಂದು ವಿಂಗಡಿಸಬಹುದು. ಅನೇಕ ಕಥೆಗಳಲ್ಲಿ ಉದಾಹರಣೆಗಾಗಿ ನಳಚರಿತ್ರೆಯಲ್ಲಿ ವಿಷ್ಣುವಿನ ಯಾವುದೊಂದು ಅವತಾರದ ನೇರವಾದ ಸಂಬಂಧವಿಲ್ಲ. ಅಲ್ಲದೆ ಶಿವ-ಗೌರಿಯರಿಗೆ ಸಂಬಂಧಿಸಿದ ಗಿರಿಜಾಕಲ್ಯಾಣ. ತ್ರಿಪುರ ದಹನ, ದಕ್ಷಾಧ್ವರ ಕಥೆ, ಮೊದಲಾದ ಶೈವ ಪ್ರಬಂಧಗಳೂ ಇವೆ. ವಿಷ್ಣುವಿನ ಅನೇಕ ಅವತಾರಗಳಿದ್ದರೂ ದಶಾವತಾರವೆಂಬ ಈ ಹೆಸರಿನಲ್ಲಿ ಆತನ ಪ್ರಸಿದ್ಧ ಮತ್ಸ್ಯ ಕೂರ್ಮಾದಿ ಹತ್ತು ಅವತಾರಗಳನ್ನಿಷ್ಟೇ ನಿರ್ದೇಶಿಸಲಾಗಿದೆ. ಒಂದೇ ಆಟದಲ್ಲಿ ಈ ಹತ್ತು ಅವತಾರಗಳನ್ನು ಪ್ರದರ್ಶಿಸುತ್ತಿದ್ದರೆ ಮಾತ್ರ ಈ ಹೆಸರು ಒಪ್ಪುತ್ತದೆ. ಕನ್ನಡದಲ್ಲಿ ವಿಷ್ಣುವಿನ ಈ ದಶಾವತಾರಗಳನ್ನು ಕುರಿತಿರುವ ಪ್ರಬಂಧಗಳು ದೊರೆತಂತಿಲ್ಲ. ಆದರೆ ಯಕ್ಷಗಾನ ಆಟಕ್ಕೆ ಈ ಹೆಸರಿರುವದರಿಂದ ಒಂದೊಮ್ಮೆ ಇಂಥ ಪ್ರಬಂಧಗಳು ಇರಲಿಕ್ಕೆ ಸಾಕು. ಮಹಾರಾಷ್ಟ್ರದಲ್ಲಿ ಈ ಬಗೆಯ ಆಟವಿತ್ತು. ಶಾಮಜಿ ನಾಯಕ ಕಾಳೆ ಎಂಬಾತನು ಈ ಆಟವನ್ನು ಕರ್ನಾಟಕದಿಂದ ಮಹಾರಾಷ್ಟ್ರಕ್ಕೆ ತಂದನೆಂಬ ಉಲ್ಲೇಖವಿದೆ. ರತ್ನಾಗಿರಿ ಜಿಲ್ಲೆಯ ಆಡಿವರೆ ಎಂಬಲ್ಲಿಯ ಮಹಾಕಾಳಿ ದೇವಸ್ಥಾನದಲ್ಲಿ ಈ ಆಟವು ಪ್ರದರ್ಶಿಸಲ್ಪಡುತ್ತಿತ್ತು. ಸರದಾರ ಆಂಗ್ರೆ ಕ್ರಿ. ೧೭೩೬ ರಲ್ಲಿ ತನ್ನ ಮಗ ಫಕೀರಜಿಯ ಲಗ್ನ ಸಮಯದಲ್ಲಿ ಶಾಮಜಿ ಕಾಳೆಯ ಈ ಮೇಳವನ್ನು ಆಮಂತ್ರಿಸಿದ್ದನಂತೆ.[೮೫] ಆಂಧ್ರದ ಬ್ರಾಹ್ಮಣರು ಮೇಳಗಳನ್ನು ಕಟ್ಟಿಕೊಂಡು ಅಲ್ಲಲ್ಲಿ ದಶಾವತಾರದ ಆಟಗಳನ್ನು ಆಡಿ ತೋರಿಸುತ್ತಿದ್ದರೆಂಬುದನ್ನು ಈ ಕೆಳಗಣ ಶ್ಲೋಕಗಳಲ್ಲಿ ಕಾಣಬಹುದು—

ದಶಾವತಾರ ನಾಮ್ನಾ ಪ್ಯೈ ಕಟ್ಟರಾಣಿ ಭವಂತಿ ಹಿ ।
ದಶಸಂಖ್ಯಾ ಪ್ರಯುಕ್ತಾನಿ ಪುರಾಣ ವಿಧಿನಾಬ್ರುವೇ ॥

85. ವಿ. ಕೃ. ಜೋಷಿ : ಲೋಕನಾಟ್ಯಾಚೀ ಪರಂಪರಾ, ಪು. ೧೫.

ಮತ್ಸ್ಯಕೂರ್ಮ ವರಾಹಾಶ್ಚ ನೃಸಿಂಹೋ ವಾಮನಸ್ತತಃ ।
ರಾಮೋರಾಮಶ್ಚ ಬೌದ್ಧಾಃ ಕಲ್ಕೀ ಭವಂತ್ಯಮೀ ॥
ದಶಾವತಾರ ವಿಜ್ಞೈಶ್ಚ ವಿಪ್ರರಾಂಧ್ರೈಃ ಕೃತಶ್ರಮೈಃ ।
ನೃತ್ಯಂ ತೆ ಸಹ ಪೇರಿಣ್ಯಾ ದೃಗ್ಭಿಥಾ ಕೋವಿದೈರ್ಭುವನಮ್ ॥ 86

ಪೇರಿಣಿ (ಹಾಸ್ಯಗಾರ) ಮತ್ತು ಗೀತ ನೃತ್ಯಗಳೊಂದಿಗೆ ಆಂಧ್ರದ ಬ್ರಾಹ್ಮಣರು ಮತ್ಸ್ಯಕೂರ್ಮಾದಿ ವಿಷ್ಣುವಿನ ಹತ್ತು ಅವತಾರಗಳನ್ನು ಕ್ರಮದಿಂದ ಪ್ರದರ್ಶಿಸುತ್ತಿದ್ದರೆಂಬುದು ಈ ಶ್ಲೋಕಗಳ ಸಂಕ್ಷಿಪ್ತಾರ್ಥ. ಕರ್ನಾಟಕದಲ್ಲೂ ಈ ಬಗೆಯ ಆಟಗಳಿದ್ದವೆಂಬುದಕ್ಕೆ ಈ ಉಲ್ಲೇಖಗಳು ಸಾಕು

ಆಂಧ್ರ, ಕರ್ನಾಟಕ, ಮಹಾರಾಷ್ಟ್ರಗಳಲ್ಲಿ ಇಂದು ದಶಾವತಾರ ಆಟವು ನಾಮಶೇಷವಾಗಿದ್ದರೂ ಆಸಾಮದಲ್ಲಿ ಅಸ್ತಿತ್ವದಲ್ಲಿದೆ. ನಮ್ಮಲ್ಲಿಯ ಯಕ್ಷಗಾನ ಮೂಡಲಪಾಯ ಆಟಗಳಂತೆ ಇದಾದರೂ ಅಲ್ಲಿಯ ನೆಲ ನೀರುಗಳ ಗುಣಗಳಿಂದ ರಂಜಿತವಾಗಿದೆ. ಆದರೂ ಪ್ರದರ್ಶನ ತಂತ್ರದಲ್ಲಿ ವಿಶೇಷ ವ್ಯತ್ಯಾಸವಿಲ್ಲ. ಅಲ್ಲಿ ಇದಕ್ಕೆ ಆಂಖಿಯಾ ನಾಟಕವೆನ್ನುವರು. ಮೇಳದ ನೇತಾರನಿಗೆ ಓಝಾ ಎನ್ನುವರು. ಓಝಾ ಎಂದರೆ ಗುರು ಅಥವಾ ಉಪಾಧ್ಯಾಯ. ಈತನ ಪ್ರಮುಖ ಸಹಾಯಕನಿಗೆ ದೈನಾ ಎನ್ನುವರು. ಆರಂಭದ ಸ್ತುತಿ ಸ್ತೋತ್ರಗಳಾದ ಬಳಿಕ ಓಝಾ ಮುಂದೆ ಬಂದು ಮತ್ಸ್ಯಾವತಾರವನ್ನು ವರ್ಣಿಸಿರುವ ಗೀತವನ್ನು ಹೇಳಿ ಅರ್ಥ ಹೇಳುವನು. ಅನಂತರ ಹಿಮ್ಮೇಳದಲ್ಲಿರುವ ದೈನಾ ಮತ್ತು ಸಂಗಡಿಗರು ಆ ಗೀತವನ್ನೆತ್ತಿಕೊಂಡು ಹಾಡತೊಡಗುವರು. ಆಗ ಓಝಾ ಯುಕ್ತಹಾವಭಾವಗಳೊಡನೆ ನರ್ತಿಸಿ ಮತ್ಸ್ಯಾವತಾರವನ್ನು ಪ್ರದರ್ಶಿಸುವನು. ಇದಾದ ಬಳಿಕ ಹಿಂದೆ ಸರಿದು ಆತ ಮೇಳದಲ್ಲಿ ಸೇರಿಕೊಳ್ಳುವನು ಮತ್ತು ಎಲ್ಲರೂ ಪುನಃ ಆ ಗೀತವನ್ನು ಹೇಳುವರು. ಗೀತ ಮುಗಿದ ಬಳಿಕ ಓಝಾ ಮುಂದೆ ಬಂದು ಕೂರ್ಮಾವತಾರದ ಗೀತವನ್ನು ಪ್ರಾರಂಭಿಸುವನು. ಈ ರೀತಿ ಹತ್ತು ಅವತಾರಗಳ ಪ್ರದರ್ಶನ ಮುಗಿದ ಬಳಿಕ ಮಂಗಲದೊಂದಿಗೆ ಆಟ ಕೊನೆಗೊಳ್ಳುವದು.[87] ಈ ವಿವರಣೆ ಮತ್ತು ಉಪರೋಕ್ತ ಶ್ಲೋಕಗಳಿಂದ ನಮ್ಮ ದಶಾವತಾರ ಆಟದ ಪ್ರದರ್ಶನ ಎಂತಿರಬಹುದು ಎಂಬುದನ್ನು ಊಹಿಸಬಹುದಾಗಿದೆ. ಮಹಾರಾಷ್ಟ್ರದಲ್ಲಿ ಪ್ರದರ್ಶನದ ರೀತಿ ತುಸು ಭಿನ್ನವಿದ್ದಿತು. ಮತ್ಸ್ಯಾವತಾರದಲ್ಲಿ ವಿಷ್ಣು ಮತ್ತು ಆತ ವಧಿಸಿದ, ವೇದಗಳನ್ನು ಕದ್ದೊಯ್ದ ಶಂಬಾಸುರನ ಪಾತ್ರಗಳಿರುತ್ತಿದ್ದವು. ಇತರ ಅವತಾರಗಳಲ್ಲೂ ಸಂದರ್ಭೋಚಿತ ಪಾತ್ರಗಳಿರುತ್ತಿದ್ದವು. ಕೂರ್ಮ, ವರಾಹ, ಪರಶುರಾಮ ಅವತಾರಗಳ ಮೂಕ ದೃಶ್ಯಗಳನ್ನಷ್ಟೇ ತೋರಿಸುತ್ತಿದ್ದರು. ಬೌದ್ಧ ಕಲ್ಕಿ ಅವತಾರಗಳ ನಿರೂಪಣೆ ಮಾತ್ರ ಬರುತ್ತಿತ್ತು. ಗಾನ,

---

86. ರಾಮಕೃಷ್ಣಕವಿ: ಭರತಕೋಶ.

87. ಕೆ. ಎನ್. ದಾಸ; ಆಸಾಮ ಪ್ರಾದೇಶಿಕ ಸಂಗೀತ, ಪು. ೧೬೨–೧೬೪.

ನರ್ತನ, ಸಂಭಾಷಣ ಮೂರೂ ಇದ್ದವು.[88]

ಉಪಸಂಹಾರ

ಒಟ್ಟಿನಲ್ಲಿ ಯಕ್ಷಗಾನ ಆಟವು ಭರತಾದಿ ಲಾಕ್ಷಣಿಕರು ನಿರ್ದೇಶಿಸಿದ ರೀತಿಯಲ್ಲಿ ಬೆಳೆದು ಬಂದ ಕಲೆ, ಲೋಕಪ್ರಿಯ ಕಲೆ. ಹಳ್ಳಿಯಲ್ಲಿ ಹುಟ್ಟಿ, ಬೆಳೆದು, ಅಲ್ಲಿಯೆ ಸ್ಥಾಯಿಯಾದ ಕಲೆ ಅದಲ್ಲ. ಬಹಳ ಪ್ರಾಚೀನವಿರದಿದ್ದರೂ ೪೦೦-೫೦೦ ವರ್ಷಗಳ ಇತಿಹಾಸ ಅದಕ್ಕಿದೆ. ಅದರಲ್ಲಿಯ ಗೀತ, ನೃತ್ಯ, ವಾದ್ಯ, ಇವುಗಳನ್ನಿಷ್ಟೇ ತೆಗೆದುಕೊಂಡರೆ ಇನ್ನೂ ಕೆಳಗೆ ಸರಿಯಬಹುದು. ಇಂದಿನ ಅದರ ಪೂರ್ವರಂಗವನ್ನೂ ಹಾಡುಗಳ ಸ್ವರೂಪವನ್ನೂ ರೂಪಿಸಿದವನು ಚಾಲುಕ್ಯ ಸೋಮೇಶ್ವರ. ಆತನ ಸಮಯದಲ್ಲಿ ಮತ್ತು ಆ ಮೊದಲು ಸಹ ಅಸ್ತಿತ್ವದಲ್ಲಿದ್ದ ಕಥಾಕಾಲಕ್ಷೇಪದ ಪರಂಪರೆಯನ್ನು ವಿಜಯನಗರ ಕಾಲೀನ ಭಕ್ತಿ ಸಂಪ್ರದಾಯದ ಭಾಗವತರು ಸೋಮೇಶ್ವರನ ಪೂರ್ವರಂಗಕ್ಕೆ ಜೋಡಿಸಿ ಇಂದಿನ ಯಕ್ಷಗಾನ ಆಟವನ್ನು ನಿರ್ಮಿಸಿದರೆನ್ನಬಹುದು. ವಿಜಯನಗರದ ಆಸ್ಥಾನದಲ್ಲಿ ಕವಿಗಳಿಗೂ, ಸಂಗೀತಜ್ಞರಿಗೂ, ನಟ ನರ್ತಕಾದಿ ಕಲಾವಿದರಿಗೂ ಕೊರತೆ ಇದ್ದಿಲ್ಲ. ತಮ್ಮಲ್ಲಿಯ ಸಂಗೀತ (ಗಾನ, ನರ್ತನ, ವಾದ್ಯ) ಕಲೆಯನ್ನು ಕ್ರಮಗೊಳಿಸಿ ಶಾಸ್ತ್ರೀಯವಾಗಿಸಲು ಉತ್ತರ ಭಾರತದ ಅರಸರು ಇವರನ್ನು ಎರವಲಾಗಿ ಪಡೆದು ಕರೆದುಕೊಂಡು ಹೋಗುತ್ತಿದ್ದರು. ಹೀಗೆ ಹೋದವರಲ್ಲಿ ಆ ಕಾಲದ ಪುಂಡರೀಕ ವಿಠಲ ಮತ್ತು ಸಂಗೀತ ದರ್ಪಣಕಾರ ಚತುರ ದಾಮೋದರ ಪ್ರಸಿದ್ಧರಿರುವರು. ದಾಮೋದರ ನರ್ತನದಲ್ಲಿ ಇಂದಿಗೂ ಪ್ರಮಾಣಭೂತನಿರುವನು. ಇಂಥವರು ಸೇರಿ ಯಕ್ಷಗಾನ ಆಟಕ್ಕೆ ಶಾಸ್ತ್ರೀಯ ರೂಪವನ್ನು ಕೊಟ್ಟರು. ಅದನ್ನು ಲೋಕಪ್ರಿಯವಾಗಿಸಿದರು. ಯಕ್ಷಗಾನ ಹಾಡುಗಾರಿಕೆ ಗಂಧರ್ವಗಾನ ಹಾಡುಗಾರಿಕೆಯಿಂದ ಭಿನ್ನವೆಂಬಲ್ಲಿ ಮತಭೇದವಿಲ್ಲ. ಇರಕೂಡದು. ಗಂಧರ್ವಗಾನ ರಾಗಾಶ್ರಯವಿದ್ದರೆ ಯಕ್ಷಗಾನ ತಾಲ ಮತ್ತು ಭಾವಾಶ್ರಯವಿದೆ. ಇದಿಷ್ಟೇ ವ್ಯತ್ಯಾಸ—ಯಕ್ಷಗಾನದಲ್ಲಿಯ ಯಕ್ಷವು ತಾಲ ಸೂಚಕ ಶಬ್ದ ಕನ್ನಡ ‘ ಜಕ್ಕ ’ ದ ಸಂಸ್ಕೃತೀಕರಣ.

ವಿಜಯನಗರ, ಅನಂತರ ಆಳಿದ ತಂಜಾವರ ಮತ್ತು ಕೆಳದಿಯ ಅರಸರ ಕಾಲಖಂಡವು ಯಕ್ಷಗಾನ ಕಲೆಯ ಉತ್ತರೋತ್ತರ ಅಭಿವೃದ್ಧಿಯ ಕಾಲವೆನ್ನಬಹುದು. ಬರಬರುತ್ತ ಅದರಲ್ಲಿ ಸಂಸ್ಕೃತ ನಾಟಕದ ಲಕ್ಷಣಗಳು ಹೆಚ್ಚೆಚ್ಚು ಪ್ರಮಾಣದಲ್ಲಿ ಸೇರಿಕೊಂಡವು ಮತ್ತು ಲೋಕಾಭಿರುಚಿಯು ಈ ಬಗೆಯ ನಾಟಕ ಪ್ರಬಂಧ, ನಾಟಕಗಳತ್ತ ಹೊರಳಿತು. ತತ್ಪರಿಣಾಮವಾಗಿ ಯಕ್ಷಗಾನ ಹಿಂದೆ ಬಿದ್ದಿತು. ಹಳ್ಳಿಗಳೇ ಅದರ ನೆಲೆವೀಡಾದವು. ಯೋಗ್ಯ ಮಾರ್ಗದರ್ಶನವಿಲ್ಲದೆ ಹಳ್ಳಿಗರು ತಮಗೆ ಸರಿದೋರಿದ

---

88. ಲೋಕನಾಟ್ಯಾಚೀ ಪರಂಪರಾ, ಪು. ೧೦-೧೨.

ರೀತಿಯಲ್ಲಿ, ಆದರೆ ಪರಂಪರೆಗಳನ್ನು ಉಲ್ಲಂಘಿಸದೆ, ಅದನ್ನು ಪೋಷಿಸಿಕೊಂಡು ಬಂದರು. ಇಂದಾದರೂ ಅದಕ್ಕೆ ಅವರೇ ಆಧಾರ. ಅದು ಜಾನಪದವಾದದ್ದು ಹೀಗೆ ಮತ್ತು ಅದನ್ನು ಹೀಗಾಗಿಸಿದವರು ಶಿಷ್ಟರು, ನಾಗರಿಕರು, ಎನಿಸಿಕೊಳ್ಳುತ್ತಿರುವ ನಾವು. ಅದನ್ನು ಪುನರುಜ್ಜೀವಿಸುವ ಎತ್ತುಗಡೆಯಾದರೂ ಈ ಹಿನ್ನೆಲೆಯಿಂದ ನಡೆಯ ಬೇಕು.

ಯಕ್ಷಗಾನ ಕಲೆಯ ಪುನರುದ್ಧಾರವಾಗಬೇಕು ಎನ್ನುವವರ ಸಂಖ್ಯೆಗೆ ಕೊರತೆ ಯಿಲ್ಲ. ಆದರೆ ಇದಕ್ಕಾಗಿ ದುಡಿದವರು ಕಾರಂತರಂಥ ಒಬ್ಬಿಬ್ಬರು. ತಮಗೆ ಯುಕ್ತವೆ ನಿಸಿದ, ಆದರೆ ಸಂಪ್ರದಾಯಕ್ಕೆ ವಿರುದ್ಧವಿಲ್ಲದ, ಸುಧಾರಣೆಗಳನ್ನು ಮಾಡಿ ಕಾರಂತರು ಮುಂಬಯಿಯಂಥ ಹೊರನಾಡ ಪಟ್ಟಣದಲ್ಲಿ ಈ ಕಲೆಯನ್ನು ಪ್ರದರ್ಶಿಸಿ ಜನಮೆಚ್ಚಿಗೆ ಯನ್ನು ಪಡೆದಿರುವರು. ಯಕ್ಷಗಾನ ಆಟದ ಮೂಲ ಮತ್ತು ಸ್ವರೂಪಗಳ ವಿಷಯ ದಲ್ಲಿ ಅವರ ಅಭಿಪ್ರಾಯಗಳನ್ನು ಎದುರಿಸುವದು ಇಲ್ಲಿ ಅನಿವಾರ್ಯವಿದ್ದರೂ, ಅದರ ಪುನರುಜ್ಜೀವನಕ್ಕಾಗಿ ಅವರು ಪಡುತ್ತಿರುವ ಪರಿಶ್ರಮಕ್ಕಾಗಿ ಗೌರವಾದರಗಳಿಂದ ತಲೆ ಬಾಗಿಸಬೇಕು. ಹೀಗೆ ತಲೆ ಬಾಗಿಸುವವರಲ್ಲಿ ನಾನೂ ಒಬ್ಬ.

ಪ್ರಾಚೀನ ಕಾವ್ಯಗಳಲ್ಲಿ ಪದ್ಯಗಳ ಪುನರಾವೃತ್ತಿ*

ಯಾವನೊಬ್ಬ ಕವಿಯ ಒಂದು ಗ್ರಂಥದಲ್ಲಿಯ ಪದ್ಯಗಳು ಆತನ ಇನ್ನೊಂದು ಗ್ರಂಥದಲ್ಲಿ ಪುನರಾವೃತ್ತವಾಗಿರುವದು ಕನ್ನಡ ಪ್ರಾಚೀನ ಕಾವ್ಯ ಪ್ರಪಂಚದಲ್ಲಿ ಒಂದು ಒಗಟವಾಗಿದೆ. ಸಾಮಾನ್ಯವಾಗಿ ಈ ಪದ್ಯಗಳು ಪೀಠಿಕೆ, ನಗರಾರ್ಣವಾದಿ ಅಷ್ಟಾದಶ ವರ್ಣನ, ಉಪಸಂಹಾರ ಸಂದರ್ಭಗಳಲ್ಲಿ ಕಾಣಸಿಗುತ್ತವೆ. ಕವಿಯೇ ಇದ್ದಕ್ಕಿದ್ದಂತೆ ಇಲ್ಲವೆ ಉಚಿತ ಮಾರ್ಪಾಟನೊಂದಿಗೆ ತನ್ನದೊಂದು ಕೃತಿಯಲ್ಲಿಯ ಈ ಬಗೆಯ ಪದ್ಯಗಳನ್ನು ಸಂದರ್ಭಾನುಸಾರ ಇನ್ನೊಂದರಲ್ಲಿ ಉದ್ದೇಶ ಪೂರ್ವಕವಾಗಿ ಸೇರಿಸಿರುವನೊ ಅಥವಾ ಅನ್ಯರು ಹೀಗೆ ಮಾಡಿರುವರೊ ಎಂಬುದೊಂದು ಸಂಶೋಧಕರ ಎದುರಿಗಿರುವ ಸಮಸ್ಯೆ.

ನಾಗಚಂದ್ರ (ಅಭಿನವಪಂಪ)ನ ' ಮಲ್ಲಿನಾಥ ಪುರಾಣ 'ದಿಂದ ಆತನ ' ರಾಮಚಂದ್ರ ಚರಿತ ಪುರಾಣ 'ದಲ್ಲಿ ಪುನರಾವೃತ್ತವಾದ ಸುಮಾರು ೭೦ ಪದ್ಯಗಳನ್ನು ಬೇಂದ್ರೆ ಒಂದೆಡೆ ಎತ್ತಿ ತೋರಿಸಿರುವರು. ಮಲ್ಲಿನಾಥ ಪುರಾಣ ಚರಿತ ಪುರಾಣಕ್ಕಿಂತ ಮೊದಲಿನದೆಂದು ಬಗೆಯಲಾಗಿದೆ. ರಾಘವಾಂಕನ ' ಹರಿಶ್ಚಂದ್ರ ಕಾವ್ಯ ' ದಲ್ಲಿಯ ೭೫ ಪದ್ಯಗಳು (ಪರಿಶಿಷ್ಟದಲ್ಲಿಯ ಪದ್ಯಗಳನ್ನು ಬಿಟ್ಟು) ಆತನ ಸೋಮನಾಥ ಚಾರಿತ್ರ 'ದಲ್ಲಿ ಹರಿದು ಬಂದಿವೆ. ರಾಘವಾಂಕನ ವಿಷಯದಲ್ಲಿ ಆತನ ಚರಿತ್ರಕಾರ ಸಿದ್ಧನಂಜೇಶ–' ಹರಿಶ್ಚಂದ್ರ ಕಾವ್ಯವ ಮುರಿದು ಸೋಮನಾಥನ ಕಾವ್ಯವ ಪೇಳ್ದು ', ' ಹರಿಶ್ಚಂದ್ರ ಕಾವ್ಯದ ಪದಗಳಂ ತೆಗೆದು ಜಗಪೊಗಳಲು ಕ್ಷೋಣಿಯೊಳು ಸೋಮನಾಥನ ಕಾವ್ಯಮಂ ಪೇಳ್ದು ' ಎಂದು ಒಂದಲ್ಲ ಎರಡು ಸಲ ಹೇಳಿರುವನು.[1] ಸಿದ್ಧನಂಜೇಶನ ಈ ಮಾತುಗಳು ಕವಿಯೇ ಉದ್ದೇಶ ಪುರ್ವಕವಾಗಿ ತನ್ನ ಒಂದು ಗ್ರಂಥದಲ್ಲಿಯ ಪದ್ಯಗಳನ್ನು ಇನ್ನೊಂದರಲ್ಲಿ ಸಂದರ್ಭಾನುಸಾರ ಸೇರಿಸಿಕೊಳ್ಳುತ್ತಿದ್ದನು ಎಂಬುದಕ್ಕೆ ಪೋಷಕವಾಗಿವೆ. ನಾಗಚಂದ್ರನ ವಿಷಯದಲ್ಲಿ ಈ ಬಗೆಯ ಮಾತುಗಳಿಲ್ಲವಾದರೂ ಅವನಾಗಲಿ ರಾಘವಾಂಕನಾಗಲಿ ಇತರರಾಗಲಿ ಬಹಳ ಹಿಂದಿನಿಂದ ಬೆಳೆದು ಬಂದ ಪರಂಪರೆಗನುಸರಿಸಿ ಹೀಗೆ ಮಾಡಿರಬೇಕು, ಅಥವಾ ಅನ್ಯರು ಇವುಗಳನ್ನು ಸೇರಿಸಿರಬೇಕು ಎಂದು ವಿದ್ವಾಂಸರು ಬಗೆದಿರುವರು.[2] ಸಂಶೋಧನೆಯ ಸದ್ಯದ ಮಟ್ಟದಲ್ಲಿ ಎರಡೂ ಸಂಭವನೀಯ.

---

* ಪ್ರಬುದ್ಧ ಕರ್ಣಾಟಕ, ಸಂ. ೫೨, ಸಂ. ೧.

1. ಕ. ಚ., ಸಂ. ೧, ಪು. ೨೪೬ ; ಸೋ. ಚಾ., ಮುನ್ನುಡಿ, ಪು. ೭೨.
2. ಕನ್ನಡ ನುಡಿ, ಸಂ. ೨೫/೪, ಪು. ೮೯.

ನಾಗಚಂದ್ರ ರಾಘವಾಂಕರ ಕೃತಿಗಳಲ್ಲಿ ಪುನರಾವೃತ್ತವಾದ ಪದ್ಯಗಳ ವಿವರಗಳಿವು—

ನಾಗಚಂದ್ರ

ಮಲ್ಲಿನಾಥ ಪುರಾಣ (ಆಶ್ವಾಸ/ಪದ್ಯ)	ಸಂದರ್ಭ	ರಾಮಚಂದ್ರ ಚರಿತ ಪುರಾಣ (ಆಶ್ವಾಸ/ಪದ್ಯ)
೧/೧೦–೧೯, ೨೦, ೨೧, ೧೦/೧೩೩	ಪೀಠಿಕೆ—ಗುರುಸ್ತುತಿ	೧/೭–೧೯
೪/೧೦೨, ೧೦೬–೧೧೦	ಗರ್ಭಿಣಿ ಸ್ತ್ರೀವರ್ಣನೆ	೩/೧೦೨, ೧೦೪–೧೦೮
೮/೭೬–೭೮, ೮೨–೯೨, ೯೪–೧೦೧, ೧೦೩–೧೦೮	ಋತುವರ್ಣನ—ವರ್ಷಾ, ಶರತ್	೭/೧೩೯–೧೫೯ ; ೧೬೪, ೧೬೫
೯/೮೯, ೯೨	ವೈರಾಗ್ಯ ತಾಳಿದ ವೈಶ್ರವಣನು ರಾಜ್ಯವನ್ನು ಸ್ವೀಕರಿಸಲು ಮಗನಿಗಿತ್ತ ಆದೇಶ ಮತ್ತು ಮಗನ ಉತ್ತರ	೬/೮೧, ೮೫ ದಶರಥನು ರಾಮನಿಗಿತ್ತ ಇದೇ ಬಗೆಯ ಆದೇಶ ಮತ್ತು ರಾಮನ ಉತ್ತರ
೧೧/೧೩, ೫೪	ದೀಕ್ಷೆ ಪಡೆದು ವ್ರತಸ್ಥನಾದ ವೈಶ್ರವಣನ ವರ್ಣನೆ	೧೯/೫೯, ೬೧ ಇದೇ ಸಂದರ್ಭದಲ್ಲಿ ರಾಮನ ವರ್ಣನೆ
೧೨/೧೭೫–೧೭೮	ಜಿನಸ್ತುತಿ (ಸೌಧರ್ಮೇಂದ್ರನಿಂದ)	೫/೭–೧೦ (ಇದೇ—ಜನಕನಿಂದ)
೧೪/೧೧, ೨೫೫–೨೬೩, ೨೬೬–೨೮೧	ಪುಷ್ಪವೃಷ್ಟಿ—ಮಲ್ಲಿನಾಥನ ಮೇಲೆ ; ನಿರ್ವಾಣ ಪೂಜೆ	೧೬/೬೬, ೭೮–೮೨, ೮೩–೯೬ (ಇದೇ—ರಾಮನಿಗೆ)

ರಾಘವಾಂಕ

ಹರಿಶ್ಚಂದ್ರ ಕಾವ್ಯ (ಸ್ಥಲ/ಪದ್ಯ)	ಸಂದರ್ಭ	ಸೋಮನಾಥ ಚಾರಿತ್ರ (ಸ್ಥಲ/ಪದ್ಯ)
೧/೩--೫, ೧೧, ೧೨, ೧೪, ೨೧-೨೮, ೩೦-೩೧	ಪೀಠಿಕೆ (ದೇವತಾಸ್ತುತಿ, ಗುರುಸ್ತುತಿ, ಸಜ್ಜನಪ್ರಶಂಸೆ, ದುರ್ಜನನಿಂದೆ, ಕವಿಯ ಮೇಲ್ಮೆ, ಇತ್ಯಾದಿ	೧/೩, ೫, ೪, ೯, ೧೦, ೧೧, ೨೩, ೧೩, ೧೪, ೧೬, ೧೯, ೨೪, ೨೫. ೧೫, ೧೨, ೧೮
೩/೨೭, ೩೩-೩೭	ವನವರ್ಣನ	೨/೨೪, ೭೫, ೭೭, ೭೮, ೮೦, ೮೧
೩/೭೪, ೭೬, ೭೭, ೮೨, ೮೩, ೯೦	ಸೂರ್ಯಾಸ್ತ, ನಿಶಾಗಮನ, ಬೆಳದಿಂಗಳು	೨/೬, ೭, ೧೦, ೧೧, ೧೨, ೧೪
೩/೪೨	ಸರೋವರ	೩/೨೩
೩/೪೬	ಪುರವರ್ಣನ	೧/೧೧೦
೪/೫, ೭, ೯, ೧೦, ೧೫, ೧೮, ೨೨, ೨೪, ೨೫, ೨೬, ೨೮, ೩೩, ೪೨, ೪೩	ವೇಶ್ಯಾವಾಟ	೨/೩೧, ೫೦, ೪೫, ೨೯, ೪೪, ೩೦, ೪೧, ೪೩, ೪೦, ೩೬, ೨೭, ೨೬, ೧೧೨, ೩೨
೪/೩೯	ಹ.ಕಾ.—ವೇಶ್ಯಾವಾಟ	೨/೪೬
	ಸೋ.ಚಾ.—ಪದ್ಮಾವತಿಯ ವರ್ಣನೆ	
೫/೧೫, ೨೧, ೨೩, ೨೬, ೨೯, ೪೮, ೫೬, ೬/೧೭	ಬೇಟೆ	೩/೨, ೩, ೧೦, ೫, ೮, ೧೯, ೧೫,೩
೫/೫೫, ೫೭	ಆಶ್ರಮವರ್ಣನೆ	೩/೨೨, ೨೬
೫/೨೮, ೬೭	ಮುನಿವರ್ಣನೆ	೩/೨೩, ೩೦

ಇಂದಿನವರ ದೃಷ್ಟಿಯಲ್ಲಿ ಪದ್ಯಗಳ ಈ ಬಗೆಯ ಪುನರಾವೃತ್ತಿಯು ವಿಚಿತ್ರವೇ ಸೈ. ನಾಗಚಂದ್ರ ' ಭಾರತೀಕರ್ಣಪೂರ ', ರಾಘವಾಂಕ ' ಉಭಯಕವಿ ಭೇರುಂಡ.' ಇಂಥವರು ತಮ್ಮ ಆಯಾ ಕೃತಿಗಳಿಗಾಗಿ ಪ್ರತ್ಯೇಕ ಪದ್ಯಗಳನ್ನು ರಚಿಸದೆ ಹಿಂದಣ ಕೃತಿಗಳಲ್ಲಿಯ ಪದ್ಯಗಳನ್ನೇಕೆ ಬಳಸಿಕೊಂಡಿರಬಹುದು ? ಚರ್ವಿತ-ಚರ್ವಣವಾದರೂ ಅದನ್ನೇ ಇನ್ನೊಮ್ಮೆ ಹೇಳುವಾಗ ಬೇರೊಂದು ರೀತಿಯಲ್ಲಿ ಹೇಳುವದುಂಟು. ಅನೇಕರು ಹೀಗೆ ಹೇಳಿರುವರು, ಇಂದಿಗೂ ಹೇಳುತ್ತಿರುವರು-ಹೊಸ ಕುಪ್ಪಿಯಲ್ಲಿ ಹಳೆಯ ಮದ್ಯ (old wine in a new bottle) ಎಂಬಂತೆ. ಕಾವ್ಯಮೀಮಾಂಸೆಯ ರಾಜಶೇಖರ ಅನ್ಯರ ಪದ್ಯಗಳನ್ನು ತಮಗಾಗಿ ಬಳಸಿಕೊಳ್ಳಲು ' ಹರಣ-ಸ್ವೀಕರಣ 'ದ ಅನೇಕ ವಿಧಾನಗಳನ್ನು ಹೇಳಿರುವನು.[1] ನಾಗಚಂದ್ರ ರಾಘವಾಂಕರಿಗೆ ಈ ವಿಷಯ ಗೊತ್ತಿರಲಿಲ್ಲವೆಂದು ಭಾವಿಸುವದು ತಪ್ಪಾಗುವದು. ಪದ್ಯಗಳು ತಮ್ಮವೇ ಇದ್ದರೂ ಪುನರಾವೃತ್ತಿಯ ದೋಷವನ್ನು ತಪ್ಪಿಸಲು ಅವರಿಗೆ ಹೀಗೆ ಮಾಡುವದು ದುಸ್ತರವಿದ್ದಿಲ್ಲ. ಮನಸ್ಸು ಮಾಡಿದ್ದರೆ ಹೊಸ ಪದ್ಯಗಳನ್ನು ರಚಿಸುವ ಪ್ರತಿಭೆ ಸಾಮರ್ಥ್ಯಗಳಿದ್ದವು ಅವರಲ್ಲಿ. ಅದರೂ ಅವರಾಗಲಿ ಇತರರಾಗಲಿ ಇದಾವುದನ್ನೂ ಮಾಡದೆ, ಪುನರಾವೃತ್ತಿಯ ದೋಷವನ್ನು ಪತ್ಕರಿಸಿ ತಮ್ಮದೊಂದು ಗ್ರಂಥದಲ್ಲಿಯ ಪದ್ಯಗಳನ್ನು ಇನ್ನೊಂದರಲ್ಲಿ ನೇರವಾಗಿ ಇಲ್ಲವೆ ತುಸು ಮಾರ್ಪಡಿಸಿ ಬಳಸಿಕೊಂಡಿರುವದು ಪೂರ್ವದಿಂದ ನಡೆದುಬಂದ ಇಂಥದೊಂದು ಪರಂಪರೆಯನ್ನು ಸೂಚಿಸುವದು.

ಪರಂಪರೆಯ ಮೂಲ

ಈ ಪರಂಪರೆಯ ಮೂಲವು ಪ್ರಾಕೃತದಲ್ಲಿರುವ ಜೈನಾಗಮ ಸಾಹಿತ್ಯದಲ್ಲಿ ಕಾಣಸಿಗುವದು. ಕನ್ನಡ ಸಾಹಿತ್ಯದ ಉಗಮ ಮತ್ತು ಪ್ರಾರಂಭಿಕ ವಿಕಾಸಗಳು ಜೈನರ ಕೊಡುಗೆ ಎಂಬುದನ್ನು ನೆನೆದಾಗ, ಈ ಪರಂಪರೆಯೆ ಕನ್ನಡ ಸಾಹಿತ್ಯದಲ್ಲಿ ಹರಿದು ಬಂದಂತೆ ತೋರುವದು. ಜೈನಾಗಮ ಸಾಹಿತ್ಯವು ಅಂಗ, ಉಪಾಂಗ, ಪ್ರಕೀರ್ಣ ಮತ್ತು ಸೂತ್ರಗಳಲ್ಲಿ ಗ್ರಥಿತವಾಗಿದೆ. ಅಂಗಗಳು ೧೨. ಅವುಗಳಲ್ಲಿ ಎಂಟನೆಯ ' ಅಂತಕ ದೃಶ ' ಮತ್ತು ಒಂಬತ್ತನೆಯ ' ಅನುತ್ತರೌಪಪಾತಿಕದಶ ' ಅಂಗಗಳ ವಿಚಾರದಲ್ಲಿ ನಗರಾರ್ಣವಾದಿ ಅಷ್ಟಾದಶ ವರ್ಣನೆಗಳಿಗೆ ಸಂಬಂಧಿಸಿದ ಪದ್ಯ ಮೊದಲಾದವುಗಳ ಸಂದರ್ಭಾನುಸಾರ ಪುನರಾವೃತ್ತಿಯ ಉಲ್ಲೇಖವಿದೆ, ಎಂದಿರುವನು ವಿಂಟರನಿಟ್ಜ ತನ್ನ ಭಾರತೀಯ ಸಾಹಿತ್ಯ ಚರಿತ್ರೆಯಲ್ಲಿ. ಈ ಅಂಗಗಳಲ್ಲಿ ಬರುವ ಕಥೆಗಳು ತೀರ ಸಂಕ್ಷಿಪ್ತವಿದ್ದು ಇವುಗಳಿಗೆ ಹೊಂದಿಕೊಳ್ಳುವ ವರ್ಣನೀಯಾಂಶಗಳನ್ನು ಇವಿರುವ ಇನ್ನೊಂದು ಗ್ರಂಥದಿಂದ ತೆಗೆದುಕೊಳ್ಳಬೇಕೆಂಬ ನಿವೇದಕರಿಗಿರುವ ನಿರ್ದೇಶವನ್ನು ಎತ್ತಿ ತೋರಿಸಿರುವನು ಆತ. ಇವು ಆತನ ಮಾತುಗಳು—

1. ಕಾ. ಮೀಂ., ಅಧ್ಯಾಯ, ೧೧-೧೩.

They (legends) often present a mere skeleton, which the reciter is to fill in with set words in phrases like cleches. For instance one passage reads : "There was once a city named Champa; a shrine Punnabhadda ; a forest ;—description." What is meant is, that a complele description of the city, the shrine and the forest is to be inserted here, as it stands in the first Upanga. Another instance about the Thera Suhamma, one of Mahavira's desciples, where there is a mere indication that a detailed description of the holy man is to be given, which can be found in the sixth Anga. In those cases where they are given in full, these descriptions (vanna, varnaka) are composed in an ornate style characterised by the conglomeration of long compound words. In all probability they belong to the earliar poetical portions of the Canon.[1]

ಕನ್ನಡ ಕಾವ್ಯಗಳಲ್ಲಿ ಪುನರಾವೃತ್ತವಾದ ಪದ್ಯಗಳಾದರೂ ಹೆಚ್ಚಾಗಿ ವರ್ಣಕಗಳೇ. ಕವಿಗಳೇ ಅವುಗಳನ್ನು ಇದ್ದಕ್ಕಿದ್ದಂತೆ ಅಥವಾ ವ್ಯತ್ಯಾಸ ಮಾಡಿ ಬಳಸಿರುವದಕ್ಕೆ ಸಿದ್ಧನಂಜೇಶನ ಉಪರೋಕ್ತ 'ಆಪ್ತವಾಕ್ಯ' ಗಳಿವೆ. ಪರಂಪರೆಯ ಬೆಂಬಲವಿದ್ದುದರಿಂದ ಆ ಕಾವ್ಯಗಳನ್ನು ಪಠಿಸುತ್ತಿದ್ದ ಗಮಕಿ ಮೊದಲಾದವರು ಸಹ ತಮ್ಮ ಒಲವು ಅಭಿರುಚಿಗಳಿಗೆ ಅನುಸರಿಸಿ ಆಯಾ ಕವಿಗಳ ಪೂರ್ವರಚಿತ ಪದ್ಯಗಳನ್ನು ಸೇರಿಸಿ ಹೇಳುತ್ತಿರುವದಾದರೂ ಅಸಂಭವವಿಲ್ಲ.

ಸಂಭಾವ್ಯ ಉದಾಹರಣೆಗಳು

ಮಲ್ಲಿನಾಥ ಪುರಾಣದ ೪ ನೆಯ ಆಶ್ವಾಸ ೯೮-೧೧೦ ಪದ್ಯಗಳಲ್ಲಿ ಗರ್ಭಿಣಿಯಿದ್ದ ವೈಶ್ರವಣನ ಪಟ್ಟಮಹಿಷಿ ಧನಶ್ರೀಯ ವರ್ಣನವಿದೆ. ಈ ಪದ್ಯಗಳ ೧೦೨ (ಬಸಿರಮುಗಂಗಿಲ್ಲಿವರಂ) ಇಂದ ೧೧೦ (ಸೋರ್ಮುಡಿ ಮಾಲೆಯಿಂ ಕದಪುಗಳ್) ವರೆಗಿನ ಪದ್ಯಗಳು ಚರಿತ ಪುರಾಣದಲ್ಲಿ ಗರ್ಭವತಿಯಿದ್ದ ದಶರಥ ಮಹಾರಾಜನ ಪಟ್ಟಮಹಿಷಿ ಅಪರಾಜಿತ ಮಹಾದೇವಿಯ ವರ್ಣನೆಗಾಗಿ ಪೂರಕವೆಂದು ಬಂದಿವೆ.(ರಾ.ಪು ೩/೧೦೨-೧೦೮). ಮಲ್ಲಿನಾಥಪುರಾಣದಲ್ಲಿ ೧೧೦ನೆಯ ಪದ್ಯದ ಕೊನೆಯಲ್ಲಿರುವ 'ಅಂತು ವಿವಿಧ ವಿಳಾಸಂ .. ಸುಖ ಪ್ರಸವ ಸಮಯದೊಳ್' ಎಂಬ ಚಿಕ್ಕ ಗದ್ಯವಾಕ್ಯ ಸಹ ಇಲ್ಲಿ ಇದ್ದಕ್ಕಿದ್ದಂತೆ ಬಂದಿದೆ. ಅಪರಾಜಿತ ಮಹಾದೇವಿಯ ಈ ವರ್ಣನೆ ೯೭ ನೆಯ 'ಉದರದೊಳಿರ್ಪ ಬಾಲಕನ' ಪದ್ಯದಿಂದ ತೊಡಗುತ್ತದೆ. ಇಲ್ಲಿಂದ ೧೦೧ ವರೆಗಿನ ಪದ್ಯಗಳನ್ನಿಷ್ಟೇ

1. ಹಿ. ಇಂ. ಲಿ., ಪು. ೪೫೦-೫೧.

ತೆಗೆದುಕೊಂಡರೆ ವರ್ಣನೆ ಹರಿಗಡಿಯುತ್ತದೆ. ಆದ್ದರಿಂದ ಮಲ್ಲಿನಾಥ ಪುರಾಣದಿಂದ ಈ ಪದ್ಯಗಳನ್ನು ನಾಗಚಂದ್ರನು ಪೂರಕವೆಂದು ಇಲ್ಲಿ ಉದ್ದೇಶ ಪೂರ್ವಕವಾಗಿ ಬಳಸಿರುವನೆಂದು ಭಾವಿಸಬಹುದಾಗಿದೆ. ಇಷ್ಟೇ ಅಲ್ಲ, ಮಲ್ಲಿನಾಥ ಪುರಾಣದ ಪದ್ಯಗಳಲ್ಲಿ ೧೦೩ನೆಯದರೆಡೆ 'ಆಗಳವನೀಶ್ವರನನೇಕ ಮಂಗಳಾನಕರವಂಗಳೊದವೆ' ಎಂಬ ಗದ್ಯ ವಾಕ್ಯವಿದೆ. ೧೦೪ನೆಯ 'ರನ್ನದ ಬಾಯಿನಕ್ಕೆ ಪಲವಂದದ ಚಂದದ' ಪದ್ಯದಲ್ಲಿ ಧನಶ್ರೀಗೆ ವೈಶ್ರವಣನು ಪುಂಸವನಾದಿ ಕಾರ್ಯಗಳನ್ನು ಜರುಗಿಸುತ್ತಾನೆ. ಚರಿತ ಪುರಾಣದಲ್ಲಿ ಇವೆರಡರ ಭಾವವನ್ನು 'ಅವನೀಶ್ವರ ನಾಗಳ್ ಪುಂಸವನಂ ಮೊದಲಾಗೆ (೩/೧೦೩)' ಎಂದು ಒಂದು ಕಂದ ಪದ್ಯದಲ್ಲಿ ಸಂಗ್ರಹಿಸಲಾಗಿದೆ. ಪೀಠಿಕೆ ಮತ್ತು ಕೊನೆಯ ಅಂದರೆ ೧೬ ನೆಯ ಅಶ್ವಾಸಗಳಲ್ಲಿ ಪುನರಾವೃತ್ತವಾದ ಪದ್ಯಗಳಾದರೂ ಹೀಗೆಯೆ ಬಂದಂತಿವೆ.

ಇನ್ನೊಂದು ಉದಾಹರಣೆ. ಚರಿತಪುರಾಣ, ೭ನೆಯ ಆಶ್ವಾಸ ೧೪೫–೧೫೫ ಪದ್ಯಗಳಲ್ಲಿ ವರ್ಷಾಕಾಲ ಮತ್ತು ಶರದಾಗಮವ ಸುಂದರ ವರ್ಣನೆಯಿದೆ. ಇವುಗಳಲ್ಲಿ ನಾಲ್ಕು (೧೬೦-೧೬೩) ಪದ್ಯಗಳನ್ನು ಬಿಟ್ಟು ಮಿಕ್ಕವು (ಗದ್ಯ ಭಾಗ ಸಹ) ಮಲ್ಲಿನಾಥ ಪುರಾಣದಲ್ಲಿಯವು. ಚರಿತ ಪುರಾಣದಲ್ಲಿ ಪುನರಾವೃತ್ತವಾದ ಪದ್ಯಗಳನ್ನು ಕುರಿತು ಬೇಂದ್ರೆ 'ಈ ಪದ್ಯಗಳ ಭಾವ ಸೌಂದರ್ಯವನ್ನು ಮೀರುವ ಪದ್ಯಗಳನ್ನು ಬರೆಯುವದು ತನಗೆ ಅಸಾಧ್ಯವೆಂಬಂತೆ ಅತ್ಯಂತ ಮಹತ್ವವುಳ್ಳ ನೂರಾರು ಪದ್ಯಗಳನ್ನು ಇದ್ದಕ್ಕಿದ್ದಂತೆ ಚರಿತ ಪುರಾಣದಲ್ಲಿ ಎತ್ತಿಕೊಂಡಿದ್ದಾನೆ ನಾಗಚಂದ್ರ; ಹೀಗೆ ಎತ್ತಿಕೊಂಡಿರುವದು ಮೈಗಳ್ಳ—ಕವಿಯ ಮೌನವಲ್ಲ; ಆವನ ಅದ್ಭುತ ಪ್ರತಿಭೆಯು ಅವನಿಂದ ಪಡೆದ ಆದರದ ಕಾಣಿಕೆ' ಎಂದಿರುವರು.[1] ಅವರ ಈ ಮಾತುಗಳು ವಿಶೇಷವಾಗಿ ಋತು ವರ್ಣನೆಯ ಈ ಪದ್ಯಗಳನ್ನು ಅನುಲಕ್ಷಿಸಿ ಎನ್ನಬಹುದಾಗಿದೆ. ಇವುಗಳ ಜೊತೆಗೆ ಅನ್ಯರು ಸಹ ಕೆಲವು ಪದ್ಯಗಳನ್ನು ಸೇರಿಸಿದಂತಿದೆ. ಚರಿತಪುರಾಣ ಪಂಚಮಾಶ್ವಾಸ, ೨-೧೦ ಪದ್ಯಗಳಲ್ಲಿ ಜಿನಸ್ತುತಿ ಇದೆ. ಇವುಗಳಲ್ಲಿ ೬-೧೦ ಪದ್ಯಗಳು ಮಲ್ಲಿನಾಥ ಪುರಾಣದಲ್ಲಿಯವು. ಇವಿಲ್ಲದಿದ್ದರೂ ಸ್ತುತಿಗೆ ಭಂಗ ಬರುವಂತಿಲ್ಲ. ಕಥೆ ಮೊಟಕುವುದಿಲ್ಲ. ಆದ್ದರಿಂದ ಬಹುಶಃ ಭಾವಿಕ ಗಮಕಿ ಇಲ್ಲವೆ ಅನ್ಯನೊಬ್ಬನು ಇವುಗಳನ್ನು ಇಲ್ಲಿ ಸೇರಿಸಿದಂತೆ ತೋರುವದು.

ಹರಿಶ್ಚಂದ್ರಕಾವ್ಯ–ಸೋಮನಾಥ ಚಾರಿತ್ರ

ಹರಿಶ್ಚಂದ್ರ ಕಾವ್ಯದಲ್ಲಿಯ ಪದ್ಯಗಳ ಕೂಡಿಕೆಯಿಂದ ಸೋಮನಾಥ ಚಾರಿತ್ರವು ಗ್ರಥಿತವಾಗಿರುವುದನ್ನು ಸಿದ್ಧನಂಜೇಶನೇ ಹೇಳಿರುವದರಿಂದ ಈ ವಿಷಯದಲ್ಲಿ ಹೆಚ್ಚು ಊಹಾಪೋಹಕ್ಕೆ ಅವಕಾಶವಿಲ್ಲ. ಆದರೂ ರಾಘವಾಂಕನ ನಂತರದವರು ತಮ್ಮ ಅಭಿ

1. ಸಾ. ಸಂ., ಪು. ೪-೫.

ರುಚಿಗೆ ತಕ್ಕಂತೆ ಉಭಯ ಕಾವ್ಯಗಳಲ್ಲಿ ಇಲ್ಲಿಂದಲ್ಲಿಗೆ ಅಲ್ಲಿಂದಿಲ್ಲಿಗೆ ಪದ್ಯಗಳನ್ನು ಸಾಗಿಸಿರಬೇಕೆಂಬ ಅಭಿಪ್ರಾಯವಿದೆ.[1] ಇಲ್ಲಿ ಇಂಥ ಒಂದೆರಡು ಪದ್ಯಗಳ ವಿಷಯದಲ್ಲಿ ಊಹಾಶ್ವಗಳನ್ನು ಓಡಿಸಬಹುದಾಗಿದೆ. ಸೋಮನಾಥ ಚಾರಿತ್ರದಲ್ಲಿ ಆದಯ್ಯನು ಪುಲಿಗೆರೆಯ ಬೀದಿಗಳನ್ನು ಸುತ್ತುತ್ತಿರುವಾಗ ಪದ್ಮಾವತಿಯು ಆತನ ಕಣ್ಣಿಗೆ ಬೀಳುವಳು. ಒಬ್ಬರೊಬ್ಬರ ದೃಷ್ಟಿ ಒಂದಾಗಲು, ಇಬ್ಬರೂ ಮೋಹಿತರಾಗಿ, ಆ ಮೋಹವು ಪ್ರೇಮವಾಗಿ, ಮದುವೆಯಾಗುವರು. ಇವು ಈ ಸಂದರ್ಭದಲ್ಲಿಯ ಪದ್ಯಗಳು. ಎರಡನೆಯ ಸ್ಥಲದಲ್ಲಿವೆ. ಈ ಸ್ಥಲದ ೪೬ನೆಯ 'ಹಡಪದನುಲೇಪನದ ಕುಸುಮಮಾಲೆ' ಪದ್ಯದಲ್ಲಿ 'ಪದ್ಮಾವತಿ ವಿರಾಜಿಸಿದಳು' ಮಾತುಗಳಲ್ಲಿ ಮೊದಲು ಸಲ ಆಕೆ ಪ್ರತ್ಯಕ್ಷ ಪ್ರಕಟವಾಗುವಳು. ಈ ಪದ್ಯ ಹರಿಶ್ಚಂದ್ರನು ವೇಶ್ಯಾವಾಟವನ್ನು ಸುತ್ತುತ್ತಿರುವಾಗ, 'ಪದ್ಮಾವತಿ ವಿರಾಜಿಸಿದಳು' ಪದಗಳ ಬದಲು 'ನಾಯಕಸ್ತ್ರೀಯರನ್ನೀಕ್ಷಿಸುತ ಭೂಮಿಪಂನಡೆತಂದನು' ಪದಗಳೊಂದಿಗೆ ಹರಿಶ್ಚಂದ್ರ ಕಾವ್ಯದಲ್ಲಿ (೪/೩೯) ಕಾಣಸಿಗುತ್ತದೆ. ಇಲ್ಲಿ ಈ ಪದ್ಯ ವೇಶ್ಯಾವಾಟದ ವರ್ಣನೆಯ ಹಲವು ಪದ್ಯಗಳಲ್ಲಿ ಒಂದು. ಅಲ್ಲದೆ ಹರಿಶ್ಚಂದ್ರ ಕಾವ್ಯದ ಸಂಪಾದನೆಗಾಗಿ ಇಟ್ಟುಕೊಂಡ ಹಸ್ತಪ್ರತಿಗಳಲ್ಲಿ ಎರಡು ಪ್ರತಿಗಳಲ್ಲಿ ಇದಿಲ್ಲ. ಸೋಮನಾಥ ಚಾರಿತ್ರದಲ್ಲಾದರೊ ಇದಿರಲೇ ಬೇಕಾದ ಪದ್ಯ. ಎಲ್ಲ ಹಸ್ತಪ್ರತಿಗಳಲ್ಲಿದೆ. ಆದ್ದರಿಂದ ಈ ಪದ್ಯ ಹರಿಶ್ಚಂದ್ರಕಾವ್ಯದಿಂದ ಇಲ್ಲಿಗೆ ಬಂದಿರದೆ ಇಲ್ಲಿಂದ ಅಲ್ಲಿಗೆ ಹೋದಂತೆ ತೋರುವದು. ವೇಶ್ಯಾವಾಟಕ್ಕೆ ಸಂಬಂಧಿಸಿ ಹರಿಶ್ಚಂದ್ರ ಕಾವ್ಯದಲ್ಲಿ 'ಗಡಣದುಪ್ಪರಿಗೆಗಳು (೪/೯),' 'ತೆಳುಗಾಳಿಗೊಲೆವ ಮೇಲುದು (೪/೭)' ಪದ್ಯಗಳಿವೆ. ಇವುಗಳ ಕೊನೆಯ ಪಾದಗಳನ್ನು 'ಮಡದಿಯರ ನೀಕ್ಷಿಸುತಾದಯ್ಯನೈತ್ತಿರುತ್ತಿರಲೇವೊಗಳ್ವೆನೊ' ಮತ್ತು 'ಬಪ್ಪಾದಿಮಯ್ಯನನಿದಿರ್ಗೊಳಲು ಬಂದಳೆಂಬಂತೆಸೆದಳು' ಎಂದು ಮಾರ್ಪಡಿಸಿ ಸೋಮನಾಥ ಚಾರಿತ್ರದಲ್ಲಿ ಅಳವಡಿಸಿಕೊಳ್ಳಲಾಗಿದೆ. (೨/೪೫, ೫೦). ಎರಡನೆಯ ಅಂದರೆ 'ತೆಳುಗಾಳಿಗೊಲೆವ' ಪದ್ಯ ಪದ್ಮಾವತಿಗೆ ಸಂಬಂಧಿಸಿದೆ. ಇವೆರಡು ಪದ್ಯಗಳ ಮಧ್ಯದಲ್ಲಿ ಪೂರ್ವೋಕ್ತ 'ಹಡಪದನುಲೇಪನ ಕುಸುಮ ಮಾಲೆ(೨/೪೬) ಪದ್ಯ ಮತ್ತು ಪದ್ಮಾವತಿಯ ಸೌಂದರ್ಯವನ್ನು ಬಣ್ಣಿಸುವ ಮೂರು ಪದ್ಯಗಳಿವೆ (೨/೪೭, ೪೮, ೪೯). ಮೂರನೆಯ ಅಂದರೆ ೨/೪೯ ನೆಯ ಪದ್ಯ 'ಆದಿಮಯ್ಯನ ಕಣ್ಗೆ ವಿಪುಳ ಫಳಭರವಾಗಲಿರ್ದಸುರಲತೆಯಂತೆ ಮೆರೆದಳ ಬಲಾರತ್ನ ಪದ್ಮಾವತಿ' ಎಂದು ಕೊನೆಗೊಳ್ಳುತ್ತದೆ. ಇದರ ನಂತರ 'ತೆಳುಗಾಳಿಗೊಲೆವ (೨/೫೦)' ಮತ್ತು ಪದ್ಮಾವತಿ ಆದಿಮಯ್ಯರ ಪರಸ್ಪರ ದೃಷ್ಟಿ ಮಿಲನದ 'ಕಡಗಿಕವಿದೆಡೆವಯಲೊಳು ಭಯದೃಷ್ಟಿಗಳಡಿಸಿ (೨/೫೧)' ಪದ್ಯಗಳಿವೆ. ಇವೆಲ್ಲ ಪದ್ಯಗಳನ್ನು ಒಟ್ಟಾರೆ ನಿರುಕಿಸಿದಾಗ ೨/೫೦ನೆಯ 'ತೆಳುಗಾಳಿಗೊಲೆವ' ಪದ್ಯ ಅನವಶ್ಯವಿದ್ದು, ಇದನ್ನು ಸೇರಿಸಿದವ ರಾಘವಾಂಕನಿರದೆ ಅನ್ಯನೊಬ್ಬನಿರಬೇಕೆಂದು ತೋರುವದು.

---

1. ಸೊ. ಚಾ. ಮುನ್ನುಡಿ, ಪು. ೭೨.

ಒಟ್ಟಿನಲ್ಲಿ ಕನ್ನಡ ಪ್ರಾಚೀನ ಕಾವ್ಯಗಳಲ್ಲಿ ಕಂಡುಬರುವ ಕವಿಯಿಂದಾದ ಪದ್ಯಗಳ ಪುನರಾವೃತ್ತಿಗೆ ಅವನ ' ವೈಗಳ್ಳತನ ' ಅಥವಾ ಅನ್ಯ ಯಾವುದೆ ಕಾರಣವಿರದೆ ಅದೊಂದು ಪರಂಪರೆಯ ಮೂಲಕ ಎನ್ನಬಹುದು. ಆ ಪರಂಪರೆಯು ಕುರುಹನ್ನು ಶತಕಾನುಶತಕ ಮೊದಲು ಅಸ್ತಿತ್ವದಲ್ಲಿದ್ದ ಜೈನಾಗಮ ಸಾಹಿತ್ಯದಲ್ಲಿ ಕಾಣಬಹುದಾಗಿದೆ. ಕನ್ನಡ ಸಾಹಿತ್ಯದ ಉದಯ ವಿಕಾಸಗಳಿಗೆ ಜೈನರೇ ಆದ್ಯರಿರುವದರಿಂದ ಅವರ ಆಗಮ ಗ್ರಂಥಗಳಲ್ಲಿಯ ಈ ಪರಂಪರೆಯು ಸಾಹಿತ್ಯದಲ್ಲಿ ಸಹ ಹರಿದು ಬಂದಿದ್ದು ಜೈನರ ನಂತರ ಸಾಹಿತ್ಯ ಕ್ಷೇತ್ರದಲ್ಲಿ ಬೆಳಗಿದ ವೀರಶೈವ ಕವಿಗಳ ಕೃತಿಗಳಲ್ಲೂ ಮುಂದರಿದಂತೆ ತೋರುವದು. ಜೈನ, ವೀರಶೈವ, ಬ್ರಾಹ್ಮಣ, ಯಾರೆ ಇರಲಿ, ನಮ್ಮ ಪ್ರಾಚೀನ ಸಾಹಿತ್ಯವೆಲ್ಲ ಹೆಚ್ಚಾಗಿ ಧರ್ಮ, ಧರ್ಮಕಥೆಗಳಿಗೆ ಮೀಸಲಾಗಿರುವದು ಈ ಸಂದರ್ಭದಲ್ಲಿ ಗಮನಾರ್ಹವಿದೆ. ಬಹುಶಃ ಆ ಕಾಲದಲ್ಲಿ ಕವಿ, ಸಹೃದಯ, ವಿಮರ್ಶಕ, ಎಲ್ಲರಿಗೂ ಈ ಪರಂಪರೆಯ ಅರಿವಿದ್ದಿರಬೇಕು. ಅಂತೆಯೆ ನಾಗಚಂದ್ರ, ರಾಘವಾಂಕ ಮತ್ತು ಇತರರ ಕೃತಿಗಳಲ್ಲಿ ಕಂಡುಬರುವ ಪದ್ಯಗಳ ಪುನರಾವೃತ್ತಿಯನ್ನು ಕುರಿತು ಪ್ರಾಚೀನರಲ್ಲಿ ಒಬ್ಬನಾದರೂ ಆಕ್ಷೇಪಿಸಿದಂತಿಲ್ಲ. ಇಂದಿನವರಾದ ನಮಗೆ ವಿಚಿತ್ರವೆನಿಸುತ್ತದೆ, ಇಷ್ಟೆ.

ಶ್ರೀ ಮಧ್ವಾಚಾರ್ಯರು ಮತ್ತು ಅವರ ಶಿಷ್ಯರು

ಸಂಸ್ಕೃತ ಛಂದಸ್ಸಿಗಿತ್ತ ಕನ್ನಡದ ಕಾಣಿಕೆ

ನವವಿಧ ಭಕ್ತಿಗಳಲ್ಲಿ ಭಗವನ್ನಾಮ ಕೀರ್ತನವೂ ಒಂದು. ಭಕ್ತಿಯೇ ನಿಜವಾದ ಮುಕ್ತಿಗೆ ಸಾಧನವೆಂದು ಸಾರಿ ಶ್ರೀ ಮಧ್ವಾಚಾರ್ಯರು ತೌರ್ಯತ್ರಯ ಅಂದರೆ ಸಂಗೀತದ ಮೂರು ಅಂಗಗಳಾದ ಗಾನ, ವಾದನ, ನರ್ತನಗಳೊಂದಿಗೆ ವಿವಿಧ ಬಗೆಗಳಿಂದ ಭಗವಂತನನ್ನು ತಣಿಸುವ ಪರಂಪರೆಗೆ ಆದ್ಯ ಪ್ರವರ್ತಕರಾದರು. ಮುಂದೆ ಹೆಮ್ಮರವಾಗಿ ಬೆಳೆದು ಫಲಿಸಿದ ಕರ್ನಾಟಕದ ಹರಿದಾಸ ಪರಂಪರೆಗೆ ಅವರ ಈ ಪರಂಪರೆಯೆ ಆದಿ-ಬೀಜವಾಯಿತು. ಆಚಾರ್ಯರ ಕಾಲ ಕ್ರಿ. ೧೨೩೮-೧೩೧೭. ಜನ್ಮ ಉಡುಪಿಯ ಬಳಿ ಪಾಜಕ ಕ್ಷೇತ್ರದಲ್ಲಿ. ವೇದಾಂತ ದರ್ಶನವನ್ನಾಧರಿಸಿ ಬೆಳೆದು ಬಂದ ಅದ್ವೈತ, ವಿಶಿಷ್ಟಾದ್ವೈತ, ದ್ವೈತ, ಈ ಮತತ್ರಯಗಳಲ್ಲಿ ದ್ವೈತ ಮತ ಪ್ರವರ್ತಕರು. ಹರಿಯು ಪರಮಾತ್ಮನು, ಸರ್ವೋತ್ತಮನು; ಜಗತ್ತು ಸತ್ಯ; ಜೀವಗಳು ಪರಮಾತ್ಮನಿಂದ ಭಿನ್ನ; ಆತನ ವಶವರ್ತಿಗಳು; ನೈಜ ಸುಖದ ಅನುಭೂತಿಯೇ ಮುಕ್ತಿ; ಅದು ದೊರಕುವದು ಆತನ ಪ್ರಸಾದದಿಂದ; ಆ ಪ್ರಸಾದಕ್ಕೆ ಸರ್ವಾರ್ಪಣಯುಕ್ತ ಭಕ್ತಿಯೇ ಪರಮಸಾಧನ; ಎಲ್ಲವೂ ಶ್ರೀಹರಿಯ ಸೇವೆಯೆಂದು ಕರ್ತವ್ಯ ಕರ್ಮಗಳನ್ನು ನಿರ್ವಹಿಸಿ ಅವುಗಳ ಫಲಗಳನ್ನು ಭೋಗಿಸಬೇಕೆಂಬುದು ಅವರು ಮಾನವ ಕೋಟಿಗಿತ್ತ ಸಂದೇಶ. ತಮ್ಮ ಮತ ಪ್ರತಿಪಾದನೆಯ ಅಂಗವಾಗಿ ಅವರು ಪ್ರಸ್ಥಾನತ್ರಯ ಅಂದರೆ ಬ್ರಹ್ಮಸೂತ್ರ, ಉಪನಿಷತ್ತು ಮತ್ತು ಭಗವದ್ಗೀತೆಗಳಿಗೆ ಭಾಷ್ಯ ಮತ್ತು ಇತರ ಗ್ರಂಥಗಳನ್ನು ರಚಿಸಿರುವರಲ್ಲದೆ ದ್ವಾದಶಸ್ತೋತ್ರ, ಯಮಕ ಭಾರತ, ಕೃಷ್ಣಾಮೃತ ಮಹಾರ್ಣವ ಮೊದಲಾದ ಸ್ತೋತ್ರ ಮತ್ತು ಕಾವ್ಯ ಗ್ರಂಥಗಳನ್ನೂ ರಚಿಸಿರುವರು. ಇವೆಲ್ಲ ಸಂಸ್ಕೃತದಲ್ಲಿವೆ.

ದ್ವಾದಶಸ್ತೋತ್ರ

ಛಂದಸ್ಸು ಮತ್ತು ಸಂಗೀತದ ದೃಷ್ಟಿಯಿಂದ ಶ್ರೀ ಮಧ್ವಾಚಾರ್ಯರ ದ್ವಾದಶ ಸ್ತೋತ್ರ ಒಂದು ಅಪೂರ್ವ ಕೃತಿ. ಅರ್ಥದಲ್ಲೂ ಅಷ್ಟೇ. ಒಟ್ಟು ೧೨ ಸ್ತೋತ್ರಗಳಿರುವದರಿಂದ ಇದಕ್ಕೆ ದ್ವಾದಶಸ್ತೋತ್ರವೆಂಬ ಹೆಸರು ಬಂದಿದೆ. ಸ್ತೋತ್ರಗಳ ವಸ್ತು: ನಾನಾ ಬಗೆಯ ವಿಷ್ಣು ಸ್ತುತಿ. ಸಂದರ್ಭ: ಉಡುಪಿಗೆ ದ್ವಾರಕೆಯಿಂದ ಶ್ರೀಕೃಷ್ಣನ ಆಗಮನ. ಒಂದು ದಿನ ಬೆಳಗಿನಲ್ಲಿ ನಿತ್ಯದಂತೆ ಆಚಾರ್ಯರು ಶಿಷ್ಯರೊಂದಿಗೆ ಸಮುದ್ರ ಸ್ನಾನಕ್ಕೆ ಹೋಗಿದ್ದರು. ಅಂದೇಕೋ ಅವರಿಗೆ ವಿಲಕ್ಷಣ ಸ್ಫೂರ್ತಿ, ಉತ್ಸಾಹ. ಭಕ್ತಿರಸ ಉಕ್ಕಿ 'ವಂದೇವಂದ್ಯಂ ಸದಾನಂದಂ' ಎಂದು ವಿಷ್ಣು ಪರಮಾ

ತ್ಮನ ಸ್ತೋತ್ರವಾಗಿ ಅಭಿವ್ಯಕ್ತಿಪಡೆಯಿತು. ಹೀಗೆ ಅಲ್ಪ ಸಮಯದಲ್ಲಿ ಐದು ಸ್ತೋತ್ರಗಳು ರಚಿತವಾದವು. ಸ್ನಾನಾಹ್ನಿಕಗಳನ್ನು ಮುಗಿಸಿ ಧ್ಯಾನಸ್ಥರಾಗಿ ಕುಳಿತಿದ್ದ ಅವರು ಕಣ್ದೆರೆದು ನೋಡಿದಾಗ ಹಡಗವೊಂದು ರೇವಿನಲ್ಲಿ ಹುದುಗಿಕೊಂಡಿರುವದೂ ನಾವಿಕರು ಅದನ್ನು ಮತ್ತೆ ನೀರಿಗೆ ತಳ್ಳಲು ಶಕ್ತಿ ಸಾಲದೆ ಒದ್ದಾಡುತ್ತಿರುವದೂ ಕಂಡಿತು. ಕನಿಕರಗೊಂಡು ಆಚಾರ್ಯರು ಕೈಯೆತ್ತಿ ಕರೆಯುವಂತೆ ಮೈಮೇಲಿನ ಶಾಟಿಯನ್ನು ಬೀಸಲು ಅನುಕೂಲ ಗಾಳಿ ಬೀಸಿ ಹಡಗವು ಸುರಕ್ಷಿತವಾಗಿ ದಂಡೆಗೆ ತಲುಪಿತು. ಅದೊಂದು ವ್ಯಾಪಾರಿ ಹಡಗ. ದ್ವಾರಕೆಯಿಂದ ಬಂದಿತ್ತು. ಕೃತಜ್ಞತೆಯಿಂದ ಅದರ ಒಡೆಯನು ಏನಾದರೂ ಕಾಣಿಕೆಯನ್ನು ಸ್ವೀಕರಿಸಿ ಅನುಗ್ರಹಿಸಬೇಕೆಂದು ಒತ್ತಾಯಪಡಿಸಲು ತೂಕ ಸರಿಯಿರಲೆಂದು ಹಡಗದ ತಳದಲ್ಲಿ ಹೇರಿದ ಗೋಪೀಚಂದನದ ಬಂಡೆಗಳಲ್ಲಿ ಒಂದನ್ನು ಕೊಟ್ಟರೆ ಸಾಕೆಂದರು, ಆಚಾರ್ಯರು. ನಾವಿಕರು ತಂದಿರಿಸಿದ ಗೋಪೀಚಂದನದ ಬಂಡೆಗಳಲ್ಲಿ ಭಾರವಿದ್ದ ಒಂದನ್ನು ಆರಿಸಿಕೊಂಡು ಉಡುಪಿಗೆ ಮರಳಿದಾಗ ಮಾರ್ಗದಲ್ಲಿ ಒಡೆದ ಅದರಲ್ಲಿ ಕಡೆಗೋಲು-ಕಡೆದಾರ ಧರಿಸಿದ ಬಾಲಕೃಷ್ಣನ ಮೂರ್ತಿ ಕಂಗೊಳಿಸಿತು. ಭಕ್ತಿರಸ ಪುನಃ ಉಮ್ಮಳಿಸಿ 'ದೇವಕಿನಂದನ ಸುಂದರ ರೂಪ' ಎಂದು ಛಂದೋಬದ್ಧ ಆನಂದೋದ್ಗಾರದೊಡನೆ ಆರನೆಯ ಸ್ತೋತ್ರ ಮತ್ತು ಅದರೊಂದಿಗೆ ಮುಂದಣ ಆರು ಸ್ತೋತ್ರಗಳು ಹುಟ್ಟಿ ಬಂದವು. ಮೊದಲಿನ ಆರು ಸ್ತೋತ್ರಗಳಲ್ಲಿ ಹೆಚ್ಚಾಗಿ ಭಗವನ್ಮಹಿಮೆಯ ಪರೋಕ್ಷ ವರ್ಣನೆಯಿದೆ. ನಂತರದ ಆರರಲ್ಲಿ ಭಕ್ತಿರಸ ಎಲ್ಲೆ ಮೀರಿ ಹರಿದಿದೆ. ಪದ್ಯಗಳು ಗಾನಾರ್ಹವಿದ್ದು ತಾಳನರ್ತನಗಳಿಗೆ ಒಗ್ಗುವಂತಿವೆ, ಮತ್ತು ಹೀಗೆ ಒಗ್ಗಿಸಿಕೊಂಡಿರುವದೂ ಉಂಟು. ಪದ್ಯಗಳು ಸಂಬೋಧನಭೂಯಿಷ್ಠ ಮತ್ತು ಪಲ್ಲವಿಯಿಂದ ಕೂಡಿರುವದರಿಂದ ಸಮೂಹ ಗಾನಕ್ಕೆ ಒಳ್ಳೇ ಸಲೀಸಾಗಿ ಹೊಂದುತ್ತವೆ.

ಸ್ತೋತ್ರಗಳ ಛಂದಸ್ಸು

ಮೊದಲಿನ ಎರಡು ಸ್ತೋತ್ರಗಳು ಅನುಷ್ಟುಪ್ ಶ್ಲೋಕಗಳಲ್ಲಿವೆ.* ಇವುಗಳಲ್ಲಿ ಆಚಾರ್ಯರು ವಿಷ್ಣು ಪರಮಾತ್ಮನ ಅಂಗಾಗ ಸೌಂದರ್ಯವನ್ನು ಬಣ್ಣಿಸಿ ಅನುಗ್ರಹವನ್ನು ಯಾಚಿಸಿರುವರು.

ಮೂರು ನಾಲ್ಕನೆಯ ಸ್ತೋತ್ರಗಳಲ್ಲಿ ಪ್ರವೃತ್ತಿ ಮಾರ್ಗ ಪರಿತ್ಯಾಗ, ನಿವೃತ್ತ ಕರ್ಮಾನುಷ್ಠಾನ, ಭಗವನ್ನಾಮಸಂಕೀರ್ತನ, ಹರಿಸರ್ವೋತ್ತಮತ್ವ ಮೊದಲಾದ ವಿಷಯಗಳಿವೆ. ಇವು ತೋಟಕ ವೃತ್ತದಲ್ಲಿವೆ. ತೋಟಕ ಉಭಯ ಅಂದರೆ ವರ್ಣ ಮತ್ತು ಮಾತ್ರಾವೃತ್ತ. ವರ್ಣವೃತ್ತಗಳಲ್ಲಿ ಇದರ ಲಕ್ಷಣ : ಪ್ರತಿಪಾದದಲ್ಲಿ ೪ ಸಗಣ

* ಸ್ತೋತ್ರಗಳ ಕ್ರಮ ಕುಂಭಕೋಣಂ, ಬೆಳಗಾವಿ ಮತ್ತು ಬಹುಸಂಖ್ಯೆಯಲ್ಲಿ ಪ್ರಚಾರದಲ್ಲಿರುವ ಇತರ ಪ್ರತಿಗಳನ್ನು ಅನುಸರಿಸಿದೆ.

ಗಳು (ᴗᴗ–); ೧೨ ಅಕ್ಷರಗಳು. ಮಾತ್ರಾ ವೃತ್ತಗಳಲ್ಲಿ ಛಿತ್ತಕವೆಂದು ಪ್ರಸಿದ್ಧವಿದ್ದು ಚತುರ್ಮಾತ್ರಾ ಗಣಗಳೆಂದು ಇವೇ ೪ ಗಣಗಳಿವೆ.

ಐದನೆಯ ಸ್ತೋತ್ರದಲ್ಲಿ ವಾಸುದೇವ ಮತ್ತು ಆತನಿಂದ ಅಭಿನ್ನವಿರುವ ಕೇಶವಾದಿ ದ್ವಾದಶ ಮೂರ್ತಿಗಳ ಸ್ತುತಿಯಿದೆ. ಆಚಾರ್ಯರು ಇದಕ್ಕೆ 'ಹರಿಗೀತಿ' ಎಂದಿರುವರು. ಗೀತಿ, ಗಾಥಾ ಎರಡೂ ಸಮಾನಾರ್ಥಕ ಪದಗಳು. ಇಚ್ಛಾನುಸಾರ ಅಥವಾ ಯಾವುದೊಂದು ಲೋಕ ಪ್ರಸಿದ್ಧ ಧಾಟಿಯಲ್ಲಿ ಹಾಡಬಹುದಿದ್ದರೂ ರಚನೆಯಲ್ಲಿ ಇವು ಛಂದಃಶಾಸ್ತ್ರದ ಕಟ್ಟುನಿಟ್ಟುಗಳಿಗೆ ಸಂಪೂರ್ಣ ಹೊಂದುವದಿಲ್ಲ. ಅಲ್ಲಲ್ಲಿ ಪಾದಾಕ್ಷರ, ಪಾದಮಾತ್ರೆ, ಪಾದ, ಇತ್ಯಾದಿಗಳಲ್ಲಿ ವ್ಯತ್ಯಾಸ ಬರುತ್ತದೆ. ಛಂದಃಶಾಸ್ತ್ರದ ಅನಂತತ್ವವನ್ನು ನೆನೆದು ಲಾಕ್ಷಣಿಕರು ಇವುಗಳನ್ನು ಗಾಥಾ ಅಥವಾ ಗೇಯ ಬಂಧಗಳೆಂದು ಗಣಿಸಬೇಕಾಗಿ ನಿರ್ದೇಶಿಸಿರುವರು. ಆಚಾರ್ಯರು ಇದು 'ಹರಿಗೀತಿ' ಎಂದು ಸ್ಪಷ್ಟವಾಗಿ ಹೇಳಿರುವದರಿಂದ ಇಲ್ಲಿರುವ ಪದ್ಯಗಳ ಛಂದಸ್ಸನ್ನು ಕುರಿತು ಸಂಶೋಧನೆಯ ಊಹಾಶ್ವಗಳನ್ನು ಓಡಿಸುವ ಅಗತ್ಯವಿಲ್ಲ. ಇದು ಈ ಸ್ತೋತ್ರದ ಮೊದಲನೆಯ ಪದ್ಯ—

> ವಾಸುದೇವಾಪರಿಮೇಯ ಸುಧಾಮನ್
> ಶುದ್ಧಸದೋದಿತ ಸುಂದರೀಕಾಂತ ।
> ಧರಾಧರ ಧಾರಣ ವೇಧುರ ಧರ್ತಃ
> ಸೌಧೃತಿ–ದೀಧಿತಿ–ವೇಧೃ ವಿಧಾತಃ ॥

—ಇಲ್ಲಿ ಮೊದಲಿನ ಎರಡು ಮತ್ತು ೪ ನೆಯ ಪಾದಗಳಲ್ಲಿ ೧೧ ಅಕ್ಷರಗಳಿದ್ದರೆ ೩ ನೆಯದರಲ್ಲಿ ೧೨ ಇವೆ. ಮಾತ್ರೆಗಳ ಲೆಕ್ಕದಿಂದ ಮೊದಲಿನ ೩ ಪಾದಗಳಲ್ಲಿ ೧೭ ಮಾತ್ರೆಗಳಿದ್ದರೆ ಕೊನೆಯದರಲ್ಲಿ ೧೬. ಮೊದಲಿನ ಪಾದದ ಮೊದಲನೆಯ, ೨ನೆಯದರ ೩ ನೆಯ ಮತ್ತು ೩ ನೆಯದರ ೪ ನೆಯ ಗಣಗಳು ೫ ಮಾತ್ರೆಯವಿದ್ದರೆ ಮಿಕ್ಕವು ೪ ಮಾತ್ರೆಯವಿವೆ. ಉಳಿದ ಪದ್ಯಗಳಲ್ಲಿ ಸಹ ತುಸು ಹೆಚ್ಚುಕಡಿಮೆ ಇದೇ ಬಗೆಯ ವ್ಯತ್ಯಾಸವಿದೆ. ೮ನೆಯ ಪದ್ಯದಲ್ಲಿ ಎರಡೇ ಪಾದಗಳಿವೆ. ಆದರೂ ಪದ್ಯಗಳಲ್ಲಿ ಒಂದು ಬಗೆಯ ಸಾಮ್ಯವಿದೆ, ಧಾಟಿ ಕೂಡುತ್ತದೆ. ಇದೇ ಗಾಥೆಯ ವೈಶಿಷ್ಟ್ಯ. ಪ್ರತಿ ಪದ್ಯದಲ್ಲಿ ಚತುರ್ಮಾತ್ರಾಗಣಗಳು ಹೆಚ್ಚು ಸಂಖ್ಯೆಯಲ್ಲಿದ್ದು ಕನಿಷ್ಟ ಒಂದಾದರೂ ದೋಧಕದ ಪಾದವಿದೆ. ಮೇಲಿನ ಉಧೃತಿಯಲ್ಲಿ ಕೊನೆಯ ಪಾದ ಇಂಥದು. ಪದ್ಯಗಳ ಧಾಟಿಗೆ ಇದೇ ಮಾರ್ಗದರ್ಶಕ. ತೋಟಕದಂತೆ ದೋಧಕವಾದರೂ ಉಭಯ ವೃತ್ತ. ಅಕ್ಷರ ವೃತ್ತಗಳ ಮೇರೆಗೆ ಇದರ ಪ್ರತಿ ಪಾದದಲ್ಲಿ ೧೧ ಅಕ್ಷರಗಳು. ೩ ಭಗಣ (–ᴗᴗ) ಮತ್ತು ಕೊನೆಯಲ್ಲಿ ೨ ಗುರು (- -). ಮಾತ್ರಾ ವೃತ್ತಗಳಮೇರೆಗೆ ಇದು ಛಿತ್ತಕ. ಗಣ ವಿಭಾಗ - - ಭ - - ಗಣದಂಥ ೩ ಚತುರ್ಮಾತ್ರಾಗಣಗಳು ಮತ್ತು ೨ ಗುರು, ಒಟ್ಟು ೧೬ ಮಾತ್ರೆಗಳು. ೯ ನೆಯ ಪದ್ಯವಾದರೂ ಗಾಥೆಯೇ. ಆದರೆ ಧಾಟಿಯಲ್ಲಿ ತೋಟಕಕ್ಕೆ ಹೊಂದುತ್ತದೆ. ಗಣ ಮಾತ್ರೆಗಳ ಈ ವ್ಯತ್ಯಾಸದ ಮೂಲಕ

ಧಾಟಿ, ಅರ್ಥ, ಲಯ ಕೆಡದಂತೆ ಗಾನ ಸಮಯದಲ್ಲಿ ಮಾತ್ರೆಗಳು ಕಡಿಮೆ ಇದ್ದರೆ ಎಳೆದು ಅಥವಾ ಅಷ್ಟು ಕಾಲ ಮೌನದಿಂದಿದ್ದು, ಹೆಚ್ಚಿದ್ದರೆ ತ್ವರಿತದಿಂದ ಅಕ್ಷರಗಳನ್ನು ಉಚ್ಚರಿಸಿ ಪದ್ಯಗಳನ್ನು ಹೇಳಬೇಕಾಗುವದು. ಈ ಬಗೆಯ ಮಾರ್ಪಾಟಿಗೆ ಲಾಕ್ಷಣಿಕರ ಅನುಮತಿ ಇದೆ. "ಭಾಷಾವಿಷಯೇಽನ್ಯಥಾ ಜಗದ್ವಾಣ್ಯೇದೋದೌತು ಗುರೂ ಲಘೂ ಚ ದೃಷ್ಟೌ" ಎಂದಿರುವನು ಜಯಕೀರ್ತಿ (ಕ್ರಿ. ೧೦೦೦) ತನ್ನ ಛಂದೋನುಶಾಸನದಲ್ಲಿ. ಆದರೆ ಈ ರಿಯಾಯಿತಿ ಗಾಯಕರಿಗೆ ಮಾತ್ರ. ಕವಿಗಳಿಗಲ್ಲ. ಅವರ ಪದ ಪ್ರಯೋಗ ಶುದ್ಧರೂಪದಲ್ಲಿಯೇ ಇರುತ್ತಿತ್ತು. ಗೀತಿಯ ಲಯ ಪದಶುದ್ಧಿ ಎರಡರಲ್ಲಿ ವಿದ್ಯಾವಂತ ಕವಿಗಳು ಪದಶುದ್ಧಿಗೇನೆ ಪ್ರಾಶಸ್ತ್ಯವನ್ನು ಕೊಡುತ್ತಿದ್ದರು; ಈ ಪ್ರಾಶಸ್ತ್ಯದ ಮೂಲಕ ಮಹಾರಾಷ್ಟ್ರದ ಸುಪ್ರಸಿದ್ಧ ಸಂತಕವಿ ಜ್ಞಾನೇಶ್ವರ ಮಹಾರಾಜರ ಓವಿಗಳ ರೂಪವೇ ಬದಲಿಸಿದೆ ಎಂಬ ಪ್ರಖ್ಯಾತ ಛಂದಃಶಾಸ್ತ್ರ ವಿದ್ವಾನ್ ವೇಲಣಕರರ ಮಾತನ್ನು ಈ ಸಂದರ್ಭದಲ್ಲಿ ಗಮನಿಸುವಂತಿದೆ.

ಆರನೆಯ ಸ್ತೋತ್ರದಲ್ಲಿ ಗೋಪೀಚಂದನದ ಬಂಡೆಯಲ್ಲಿ ವ್ಯಕ್ತಿದೋರಿದ ಶ್ರೀ ಕೃಷ್ಣನ ಮತ್ತು ಆನುಷಂಗಿಕವಾಗಿ ವಿಷ್ಣುವಿನ ದಶಾವತಾರಗಳ ಸ್ತವನವಿದೆ. ಇದನ್ನಾದರೂ ಆಚಾರ್ಯರು "ಹರಿಗಾಥಾ" ಎಂದು ಹೆಸರಿಸಿರುವರು. ಇದರಲ್ಲಿ ಸಹ ೫ನೆಯ ಸ್ತೋತ್ರದಂದದಲ್ಲಿ ಗಣ ಮಾತ್ರಾ ವ್ಯತ್ಯಾಸಗಳಿವೆ. ಕೆಲವು ಪದ್ಯಗಳು ಪೂರ್ಣ ದೋಧಕದಲ್ಲಿವೆ. ಉಳಿದವುಗಳಲ್ಲಿ ದೋಧಕ ಇಲ್ಲವೆ ತತ್ಸದೃಶ ಪಾದಗಳಿವೆ.

ಪಲ್ಲವಿಯ ವೈಶಿಷ್ಟ್ಯ

ಏಳನೆಯ ಸ್ತೋತ್ರ ವಸಂತತಿಲಕದಲ್ಲಿದೆ. ಇದರಲ್ಲಿ ಸರ್ವಾಭೀಷ್ಟಪ್ರದಳಾದ ಲಕ್ಷ್ಮಿಯನ್ನು ಮತ್ತು ಆವಳಿಗೆ ಈ ಶಕ್ತಿಯನ್ನು ದಯಪಾಲಿಸಿದ ವಿಷ್ಣುವನ್ನು ಸ್ತುತಿಸಿರುವರು ಆಚಾರ್ಯರು. "ಶ್ರೀರ್ಯತ್ ಕಟಾಕ್ಷ ಬಲವತ್ಯಜಿತಂ ನಮಾಮಿ" ಪದಗಳು ಪಲ್ಲವಿ ರೂಪದಲ್ಲಿ ಪ್ರತಿ ಪದ್ಯದ ಕೊನೆಯ ಪಾದವಾಗಿ ಬಂದಿವೆ. ಪದ್ಯದ ಕೊನೆಯ ಪಾದವನ್ನು ಪಲ್ಲವಿಯಾಗಿಸುವ ಈ ತಂತ್ರದಿಂದ ವಸ್ತುತಃ ಮುಕ್ತಕಗಳಂತಿರುವ ಪದ್ಯಗಳು ಒಂದಕ್ಕೊಂದು ಜೋಡಿಸಲ್ಪಟ್ಟು ಅದೊಂದು ಸುಸಂಬದ್ಧ ಗೀತವಾಗುತ್ತದೆ. ಗೀತದ ಮಾತು ಮರ ಮರಳಿ ಎದೆಯಲ್ಲಿ ಹೊಗುವಂತಾಗುತ್ತದೆ.

ಪದ್ಯದ ಕೊನೆಯ ಪಾದವನ್ನು ಪಲ್ಲವಿಯಾಗಿಸುವ ಸಂಪ್ರದಾಯವು ವೇದ ಕಾಲದಿಂದ ನಡೆದುಬಂದಿದೆ. ಋಗ್ವೇದ ೧೦ನೆಯ ಮಂಡಲದಲ್ಲಿಯ "ಯ ಆತ್ಮದಾ ಬಲದಾ ಯಸ್ಯ ವಿಶ್ವ ಉಪಾಸತೇ" ಮಂತ್ರದ ಕೊನೆಯ ಪಾದ "ಕಸ್ಮೈ ದೇವಾಯ ಹವಿಷೇಮಹೇ" ಪಲ್ಲವಿಯಂತೆ ಈ ಮಂತ್ರಗಳ ಕೊನೆಗೆ ಪುನರುಕ್ತವಾಗಿದೆ. ಆದ್ಯ ಶ್ರೀ ಶಂಕರಾಚಾರ್ಯರು (ಕ್ರಿ. ೮ ಶತಮಾನ) ತಮ್ಮ ಕೆಲವು ಸ್ತೋತ್ರಗಳಲ್ಲಿ ಈ ತಂತ್ರವನ್ನು ಬಳಸಿರುವರು. ಸುವಿಖ್ಯಾತ ಜಯದೇವ ಕವಿಯು (ಕ್ರಿ. ೧೧೧೬) ಗೀತಗೋವಿಂದದಲ್ಲಿ ಇದು ಕಾಣಸಿಗುವದು. ಶಂಕರಾಚಾರ್ಯರು ದಾಕ್ಷಿಣಾತ್ಯರು, ಕೇರಳ

ದವರು. ಜಯದೇವ ಬಂಗಾಲದಲ್ಲಿ ನೆಲೆಸಿ ರಾಜ್ಯವಾಳಿದ ಕರ್ನಾಟಕದ ಸೇನ ಮನೆತನದ ಪ್ರಖ್ಯಾತ ಲಕ್ಷ್ಮಣಸೇನನ ಆಶ್ರಿತ. ಗೇಯ ಕೃತಿಗಳಿಗೆ ಪಲ್ಲವಿ ಊಟಕ್ಕೆ ಮೊದಲು ಉಪ್ಪಿನಕಾಯಿ ಎಂಬ ಮಾತಿನಂತಿದೆ. ಈ ಅಂಶ ಮತ್ತು ಭಾರತೀಯ ಸಂಗೀತದ ಬಹುಭಾಗ ಕರ್ನಾಟಕದ ಕಾಣಿಕೆ ಎಂಬುದನ್ನು ಗಮನಿಸಿದಾಗ ಮಧ್ವಾಚಾರ್ಯರು ದ್ವಾದಶಸ್ತೋತ್ರಗಳ ದ್ವಿತೀಯ ಷಟ್ಕದ ಪ್ರತಿಯೊಂದು ಸ್ತೋತ್ರದಲ್ಲಿ ಈ ತಂತ್ರವನ್ನು ಬಳಸಿರುವದು ಸಂಸ್ಕೃತ ಪದ್ಯರಚನೆಗೊಂದು ಅವರಿತ್ತ ಆದರೆ ಪರಂಪರಾಗತವಾಗಿ ಬಂದ ಕಾಣಿಕೆ ಎನ್ನುವಂತಿದೆ.

ಅಪೂರ್ವ ಕೊಡುಗೆ

ಎಂಟನೆಯ ಸ್ತೋತ್ರವು ಶ್ರೀಮದಾಚಾರ್ಯರು ಸಂಸ್ಕೃತ ಛಂದಸ್ಸಿಗಿತ್ತ ಕನ್ನಡದ ಅಪೂರ್ವ ಕೊಡುಗೆ. ಸಂಸ್ಕೃತದಲ್ಲಿದ್ದರೂ ಕನ್ನಡ ಛಂದಸ್ಸಿಗೊಂದು ನಷ್ಟ ನಿಧಿಯನ್ನು ದೊರಕಿಸಿ ಕೊಟ್ಟಂತಿದೆ. ಇದರಲ್ಲಿ ಒಟ್ಟು ೧೨ ಪದ್ಯಗಳಿದ್ದು ಪ್ರತಿ ಪದ್ಯದ ಕೊನೆಗೆ ಪಲ್ಲವಿಯು ಪ್ರತ್ಯೇಕವಾಗಿ ಬಂದಿದೆ. ಇದು ಮೊದಲನೆಯ ಪದ್ಯ—

ವಂದಿತಾ ಶೇಷವಂದ್ಯೋರು ಬೃಂದಾರಕಂ
ಚಂದನಾ ಚರ್ಚಿತೋದಾರ ಪೀನಾಂಸಕಂ ।
ಇಂದಿರಾ ಚಂಚಲಾಪಾಂಗನೀರಾಜಿತಂ
ಮಂದರೋದ್ಧಾರಿ ವೃತ್ತೋದ್ಭುಜಾ ಭೋಗಿನಂ ॥ ಪದ್ಯ
ಪ್ರೀಣಯಾಮೋ ವಾಸುದೇವಂ । ದೇವತಾಮಂಡಲಾ ಖಂಡ ಮಂಡನಂ ॥ ಪಲ್ಲವಿ

—ಅಕ್ಷರ ವೃತ್ತವೆಂದು ಪ್ರಸ್ತರಿಸಿದಾಗ ಪ್ರತಿಪಾದದಲ್ಲಿ ೪ ರ–ಗಣಗಳು (–∪–) ಹೊರಡುತ್ತಿದ್ದು ಪದ್ಯವು ೧೨ ಅಕ್ಷರಗಳ ಜಗತೀ ಛಂದಸ್ಸಿನ ಸ್ರಗ್ವಿಣೀ ವೃತ್ತಕ್ಕೆ ಸರಿಹೋಗುತ್ತದೆ. ಸ್ರಗ್ವಿಣೀ ಪ್ರಾಚೀನ ವೃತ್ತ. ಭರತ ಪಿಂಗಲರಿಂದ ಉಕ್ತವಾಗಿದೆ. ಕನ್ನಡ ಲಾಕ್ಷಣಿಕರಿಂದಲೂ ಲಕ್ಷಿಸಲ್ಪಟ್ಟಿದೆ. ಮಾತ್ರಾವೃತ್ತವೆಂದು ಗ್ರಹಿಸಿದಾಗ ಈ ಗಣ ವಿಭಾಗ ಕಾಮಿನೀ ಮೋಹನ ವೃತ್ತಕ್ಕೆ ಹೊಂದುತ್ತದೆ. ಪಲ್ಲವಿಯು ಯಾವುದೊ ಒಂದು ಅರ್ಧ ಸಮವಿಷಮ ವೃತ್ತದ ಅರ್ಧದಂತೆ ತೋರುತ್ತಿದ್ದರೂ ಗ್ರಂಥೋಕ್ತವಿಲ್ಲ. ಈ ಸ್ತೋತ್ರವಾದರೂ ಒಂದು ಬಗೆಯ ಹರಿಗೀತವೆಂದು ಬಗೆಯಬೇಕೆಂದರೆ ೫ ಮತ್ತು ೬ನೆಯ ಸ್ತೋತ್ರಗಳಲ್ಲಿಯಂತೆ ಆಚಾರ್ಯರು ಇಲ್ಲಿ ಹೀಗೆ ನಿರ್ದೇಶಿಸಿಲ್ಲ.

ಕವಿಗಳು ಒಮ್ಮೊಮ್ಮೆ ಪದ್ಯದಲ್ಲಿ ಪರ್ಯಾಯದಿಂದ ಅದರ ಛಂದಸ್ಸನ್ನು ಸೂಚಿಸುವದುಂಟು. ರೂಪಗೋಸ್ವಾಮಿ (ಕ್ರಿ. ೧೪೮೫-೧೫೫೦) ರಚಿತ ಒಂದು ಕೃಷ್ಣಸ್ತುತಿ ಅನಂಗಶೇಖರ ಎಂಬ ದಂಡಕದಲ್ಲಿದೆ. ಅದರಲ್ಲಿ ಒಂದೆಡೆ ಅವರು "ಖಲಪ್ರಮರ್ದನೇ ಖರಃ ಶ್ರಿಯಾಹ್ಯನಂಗಶೇಖರಃ" ಎಂದು ಪರ್ಯಾಯದಿಂದ ಆ ದಂಡಕದ ಹೆಸರನ್ನು ಸೂಚಿಸಿರುವರಲ್ಲದೆ "ಪ್ಲುತಃ ಫಣಾವತೀಗಣ್ಯೈಃಸ್ತುತಃ" ಪದಗಳಲ್ಲಿ ಅದರ ಲಕ್ಷಣ ಪ್ಲುತ (∪–) ಗಣಗಳು ಎಂದು ಸಹ ಸೂಚಿಸಿರುವರು. ಸ್ತೋತ್ರದಲ್ಲಿ

ಈ ಪದಗಳ ಅರ್ಥವೇ ಬೇರೆ. ರೂಪಗೋಸ್ವಾಮಿ ಮಾಧ್ವ ಪರಂಪರೆಗೆ ಸೇರಿದ ಚೈತನ್ಯ ಸಂಪ್ರದಾಯದ ಗುರುಗಳು. ಮಂತ್ರಾಲಯದ ದೊರೆ ಶ್ರೀ ರಾಘವೇಂದ್ರಸ್ವಾಮಿಗಳಿಂದ ಆರನೆಯವರಾದ ವಾದೀಂದ್ರತೀರ್ಥರು (ಕಿ. ೧೭೪೩) ಸ್ರಗ್ಧರೆಯಲ್ಲಿ ರಚಿಸಿದ ಗುರುಗುಣಸ್ತವನದಲ್ಲಿ ಪರ್ಯಾಯದಿಂದ ಒಂದೆಡೆ "ಧೀರ ಶ್ರೀ ರಾಘವೇಂದ್ರಕೃತ ನಿಜವಿಜಯಾಸ್ರಗ್ಧರಾರ್ಥ ಪ್ರಕಾಶಂ" ಎಂದು ಅದರ ಛಂದಸ್ಸಿನ ಹೆಸರನ್ನು ಸೂಚಿಸಿರುವರು. *

ಶ್ರೀ ಮಧ್ವಾಚಾರ್ಯರಾದರೂ ಈ ಸ್ತೋತ್ರದ ೧೧ ನೆಯ ಪದ್ಯ ೩ ನೆಯ "ಅಕ್ಷರೋ ಯೋऽಜರಃಸ್ಸರ್ವದೈವಾಮೃತಃ" ಪಾದದಲ್ಲಿಯ 'ಅಕ್ಷರ' ಪದದಿಂದ ಈ ಪದ್ಯಗಳ ಛಂದಸ್ಸಾಗುವುದೆಂಬುದನ್ನು ಸೂಚಿಸಿದಂತಿದೆ. ಕರ್ನಾಟಕ ವಿಷಯ ಜಾತಿ ಛಂದಸ್ಸುಗಳಲ್ಲಿ ಪಿರಿಯಕ್ಕರ, ದೊರೆಯಕ್ಕರ, ನಡುವಣಕ್ಕರ, ಎಡೆಯಕ್ಕರ, ಕಿರಿಯಕ್ಕರ ಎಂಬ ೫ ಅಕ್ಕರ ಪ್ರಭೇದಗಳು ಉಕ್ತವಾಗಿವೆ. ಜಯಕೀರ್ತಿ ಇವನ್ನು ಕ್ರಮದಿಂದ ಮಹಾಕ್ಷರ, ಸಮಾಸಾಕ್ಷರ, ಮಧ್ಯಮಾಕ್ಷರ, ಅಂತರಾಕ್ಷರ, ಅಲ್ಪಾಕ್ಷರ, ಎಂದು ವಿವರಿಸಿರುವನು. ಇವಲ್ಲದೆ ತ್ರಿಪದಿ, ಏಳೆ, ಗೀತಿಕೆ, ಅಕ್ಕರಿಕೆ (ಜಯಕೀರ್ತಿ–ಅಕ್ಷರಿಕಾ) ಉತ್ಸಾಹ, ಮೊದಲಾದ ಬೇರೆ ಕೆಲವು ಜಾತಿಗಳಿವೆ.§ ಮೂಲ ಯಾವುದೇ ಪ್ರದೇಶದಲ್ಲಿದ್ದರೂ ಕೆಲವು ಛಂದಸ್ಸುಗಳು ಕೆಲವು ಭಾಷೆಗಳಲ್ಲಿ ಹೆಚ್ಚು ಬಳಸಲ್ಪಟ್ಟು

---

* ಪಂಪ ರನ್ನರು ಮತ್ತೇಭವಿಕ್ರೀಡಿತದಲ್ಲಿರುವ ತಮ್ಮೆರಡು ಪದ್ಯಗಳಲ್ಲಿ 'ಮತ್ತೇಭವಿಕ್ರೀಡಿತಂ' ಪದವನ್ನು ಬಳಸಿ ಅವುಗಳ ಛಂದಸ್ಸನ್ನು ಸೂಚಿಸಿರುವರು (ಪಂಪಭಾರತ, ೮/೩೭; ಗದಾಯುದ್ಧ, ೧/೨೭). ಆಲಂಕಾರ ಶಾಸ್ತ್ರದಲ್ಲಿ ಈ ಬಗೆಯ ಪ್ರಯೋಗಕ್ಕೆ ಮುದ್ರಾಲಂಕಾರ ಎನ್ನುವದುಂಟು.

§ ಕರ್ನಾಟಕ ವಿಷಯ ಜಾತಿಗಳ ಗಣರಚನೆ ರೂಢಿಯಲ್ಲಿರುವ ವರ್ಣ/ಮಾತ್ರಾ ಗಣಗಳಿಂದ ಭಿನ್ನವಿದೆ. ಸಂಸ್ಕೃತದ ಅತ್ಯುಕ್ತಾ (೨ಅಕ್ಷರ. ೪ ಭೇದ), ಮಧ್ಯಾ (೩ ಅಕ್ಷರ, ೮ ಭೇದ) ಪ್ರತಿಷ್ಠಾ (೪ ಅಕ್ಷರ, ೧೬ ಭೇದ) ಛಂದಸ್ಸುಗಳನ್ನು ಪ್ರಸ್ತಾರಿಸಿ, ಇವುಗಳಲ್ಲಿ ಲಘುವಿನಿಂದ ಪ್ರಾರಂಭವಾಗುವ ಗಣಕ್ಕೆ ಆ ಲಘುವಿಗೆ ಹೊಂದಿ ಇನ್ನೊಂದು ಲಘುವನ್ನು ಸೇರಿಸಿ ಈ ಗಣಗಳನ್ನು ನಿರ್ಮಿಸಿಕೊಂಡಿರುವರು. ಹೀಗೆ ಸಿದ್ಧವಾದ ಗಣಗಳಿಗೆ ಕನ್ನಡದಲ್ಲಿ ತ್ರಿಮೂರ್ತಿ-ಬ್ರಹ್ಮ (ಅತ್ಯುಕ್ತಾಜನ್ಯ), ವಿಷ್ಣು (ಮಧ್ಯಾಜನ್ಯ), ರುದ್ರ (ಪ್ರತಿಷ್ಠಾಜನ್ಯ) ಗಣಗಳೆಂದು ಹೆಸರಿಸಿರುವರು. ಬ್ರಹ್ಮ-೪, ವಿಷ್ಣು-೮, ರುದ್ರ-೧೬, ಹೀಗೆ ಒಟ್ಟು ೨೮ ಗಣಗಳಿವೆ. ಸಂಸ್ಕೃತದಲ್ಲಿ ಇವಕ್ಕೆ ರತಿ, ಮದನ, ಶರ ಎಂಬ ಹೆಸರುಗಳಿವೆ. ಜಯಕೀರ್ತಿ ಒಬ್ಬನನ್ನು ಬಿಟ್ಟು ಉಳಿದ ಸಂಸ್ಕೃತ ಲಾಕ್ಷಣಿಕರು ಇವುಗಳ ಮೂಲವನ್ನು ಹೀಗೆಯೆ ವಿವರಿಸಿರುವರು. ಅಕ್ಷರ ಛಂದೋಜನ್ಯವಿದ್ದರೂ ಮಾತ್ರಾಗಣಗಳ ಒಂದು ಪ್ರಕಾರ ಎಂದು ಗಣಿಸಲ್ಪಟ್ಟಿವೆ. ನಾಗವರ್ಮ ಜಯಕೀರ್ತಿಯರ ಲಕ್ಷಣದಲ್ಲಿ ಮೂಲದ ಅನುಸರಣೆ ಇಲ್ಲ. ಆವರ ಲಕ್ಷಣವು ಈ ಛಂದಸ್ಸುಗಳ ಪ್ರಸ್ತಾರವಿಧಿಯನ್ನು ಆಶ್ರಯಿಸಿದೆ, ಇಷ್ಟೇ ಭೇದ. ಪರಿಸ್ಥಿತಿ ಇಂತಿರುವಾಗ ಇವು ದ್ರಾವಿಡ ಗಣಗಳೆಂದು ಭಾವಿಸುವದೆಂತು? ದ್ರಾವಿಡಜನ್ಯವೆಂದು ಭಾವಿಸುವ ಮೊದಲು ಇವುಗಳ ಸಂಖ್ಯೆ ೨೮ಕ್ಕೆ (ಬ್ರ-೪, ವಿ-೮, ರು-೧೬) ಮಿತವಾಗಿರುವದಕ್ಕೆ ಕಾರಣವನ್ನು ಶೋಧಿಸಬೇಕಾಗುವದು. ಪ್ರಸ್ತಾರ ಕ್ರಮದಲ್ಲಿ ಇಲ್ಲಿ ಸಹ ಗುರುವೇ ಮೂಲಾಂಶವಿದೆ. ಈ ವಿಷಯ ವಿಚಾರಾರ್ಹ.

ಕಾಲಾಂತರದಲ್ಲಿ ಆ ಭಾಷೆಗಳ ವಿಶಿಷ್ಟ ಛಂದಸ್ಸುಗಳೆಂದು ಪ್ರಸಿದ್ಧವಾಗುತ್ತವೆ. ಇದನ್ನು ಮನದಂದು ಜಯಕೀರ್ತಿ—

ಸಂಸ್ಕೃತವಾಚ್ಯಾಯಾರ್ಯಾದ್ಯಾಃ ಪ್ರಾಕೃತ ವಿಷಯೇತು ಗಲಿತಕಾದ್ಯಾಬಹುಧಾ ॥
ಕರ್ಣಾಟಕೇಽಕ್ಷರಾದ್ಯಾ ವಿಷಯೇ XX ಶೀರ್ಷಕಾದಿಜಾತಯ ಉದಿತಾಃ ॥

ಸಂಸ್ಕೃತದಲ್ಲಿ ಆರ್ಯಾದಿಗಳು, ಪ್ರಾಕೃತದಲ್ಲಿ ಗಲಿತಕಾದಿಗಳು, ಕರ್ಣಾಟಕದಲ್ಲಿ ಅಕ್ಷರ ಶೀರ್ಷಕಾದಿಗಳು ಹೆಚ್ಚು ಬಳಸಲ್ಪಟ್ಟಿವೆ, ಎಂದಿರುವನು. ಇವೆಲ್ಲ ಮಾತ್ರಾಬಂಧಗಳು. ಸಂಸ್ಕೃತ ಅಕ್ಷರ ಕನ್ನಡದಲ್ಲಿ ಅಕ್ಕರವಾಗಿರುವಂತೆ ಶೀರ್ಷಕ ಸೀಸಕ, ಸೀಸ, ಆಗಿದೆ. ಪ್ರಾಕೃತದಲ್ಲಿ ಸೀಸಅ ಎಂದಿದೆ. ಶೀರ್ಷಕ ಎಂದರೆ ಕಿರೀಟ. ಕವಿ ರನ್ನನ ಗದಾಯುದ್ಧದಲ್ಲಿಯ 'ಗುರುಕವಚಂಕರ್ಣಂ' ಪದ್ಯದಲ್ಲಿಯ 'ಸುರಸಿಂಧು ನಂದನಂ ಸೀಸಕಮಾಗಿರೆ' ಪದಗಳನ್ನು ಗಮನಿಸಬಹುದು. ಕಿರೀಟದಂತೆ ಒಂದು ಅಕ್ಕರ ಕೆಳಗೆ ಒಂದು ಗೀತಿಕೆ ಈ ಕ್ರಮದಲ್ಲಿ ರಚಿತವಾದ ಪದ್ಯಗಳು ಶೀರ್ಷಕಗಳು. ಪ್ರಾಕೃತದಲ್ಲಿ ಅಧಿಕಾಕ್ಷರ ಎಂಬ ಛಂದೋ ವಿಶೇಷವಿದ್ದು ಅದಕ್ಕೆ ಒಂದು ಗೀತಿಕೆಯನ್ನು ಸೇರಿಸಿ ಸೀಸಕಗಳನ್ನು ರಚಿಸುತ್ತಿದ್ದರು. ಅಧಿಕಾಕ್ಷರ ಪಾದಗಳಿಗೆ ಒಂದೊಂದು ಗಣವನ್ನು ಸೇರಿಸಿ ಲಲಿತ, ಸುಭದ್ರ, ಮೊದಲಾದ ಏಳು ಬಗೆಗಳನ್ನು ಮಾಡಿಕೊಂಡಿದ್ದರು. ಹೆಸರು ಮತ್ತು ಸ್ವರೂಪ ಎರಡನ್ನು ಬಿಟ್ಟರೆ ಪ್ರಾಕೃತ ಸೀಸಗಳಿಗೂ ಕನ್ನಡ ಸೀಸಗಳಿಗೂ ಹೊಂದಿಕೆಯಿಲ್ಲ. ಕನ್ನಡದಲ್ಲಿ ಸಹ ಹಲವು ಬಗೆಯ ಸೀಸಗಳಿದ್ದವೆಂಬುದಕ್ಕೆ ಜಯಕೀರ್ತಿಯ ಉಪರೋಕ್ತ ಉಧೃತಿ ಸಾಕು. ಕಿಟೆಲ್ ಸಂಪಾದಿತ ನಾಗವರ್ಮನ ಛಂದೋಂಬುಧಿಯಲ್ಲಿ ಅರ್ವಾಚೀನ ಅತಏವ ಪ್ರಕ್ಷಿಪ್ತ ಎಂದು ಗಣಿಸಲ್ಪಟ್ಟ—

ತಿಂಗಳಂ ತಳೆದಿತ್ತ ರಂಗಮುಂಗಳ ಕರ್ತ ತುಂಗ ಸೂರ್ಯರ್ ಸುಭರ್ತ ತನುಸನಾಶ।

ಎಂಬುದೊಂದು ಸೀಸ ಪದ್ಯವಿದೆ. ಇದಕ್ಕೆ ಆಟಗೀತಿ ತೇಟಗೀತಿ ಎಂಬ ಗೀತಿ ವಿಶೇಷವನ್ನು ಸೇರಿಸಿ ಹಾಡುತ್ತಿದ್ದರು. ಸೀಸದ ಈ ಲಕ್ಷ್ಯದಲ್ಲಿ ೫ ಮಾತ್ರೆಯ ೬ ವಿಷ್ಣು ನಂತರ ೩ ಮಾತ್ರೆಯ ೧ ಬ್ರಹ್ಮ, ಅದರ ಮುಂದೆ ೪ ಮಾತ್ರೆಯ ಇನ್ನೊಂದು ಗುರ್ವಂತ ಬ್ರಹ್ಮ ಗಣಗಳು ಅಥವಾ ಒಟ್ಟು ೩೭ ಮಾತ್ರೆಗಳಿವೆ. ಈ ಲಕ್ಷಣವನ್ನು ೫ ಮಾತ್ರೆಯ ೭ ವಿಷ್ಣು ೧ ಗುರು ಎಂದು ಸಹ ಹೇಳಬಹುದು.

ಬರ ಬರುತ್ತ ಕೆಳಗಿನ ಗೀತಿ ಬಿದ್ದುಹೋಗಿ ಮಾತ್ರಾಗಣಕ್ಕೆ ತಿರುಗಿದ ಮೇಲಿನ ಪದ್ಯ ಪ್ರಕಾರವೊಂದೇ ಸೀಸವೆಂದು ಉಳಿಯಿತು. ಇದರ ಲಕ್ಷಣ ೭ ಪಂಚಮಾತ್ರಾ ಗಣಗಳು ೧ ಗುರು. ಇದೊಂದು ಇಂಥ ಪದ್ಯದ ಮೊದಲನೆಯ ಪಾದ. ಕೃಷ್ಣಪಾರಿಜಾತದಲ್ಲಿಯದು. ಧೋಂಡೋ ನರಸಿಂಹ ಮುಳಬಾಗಲರ ಛಂದಸ್ಸಾರದಲ್ಲಿ ಉದ್ಧೃತವಾಗಿದೆ—

ನಗೆಗೇಡು ಮಾಡಿದಲ್ಲವೋ ನೀನು ನನ್ನನ್ನು ಜಗದೊಳಗೆ ದಿಗ್ಭ್ರಸ್ತನಾಗು ಕೃಷ್ಣಾ।

ಇವೆರಡೂ ಉದಾಹರಣೆಗಳು ಮೂಲದಲ್ಲಿ ಪಿರಿಯಕ್ಕರಗಳೆಂಬಲ್ಲಿ ಸಂದೇಹವಿಲ್ಲ.

ಪಿರಿಯಕ್ಕರದ ಲಕ್ಷಣವನ್ನು ನಾಗವರ್ಮ : ೧ ಬ್ರ, ೫ ವಿ, ೧ ರು ಎಂದು ಹೇಳಿದ್ದರೆ, ಜಯಕೀರ್ತಿ ಇದರ ಹೊರ್ತಾಗಿ ೨ ಬ್ರ, ೧ ವಿ, ೧ ಬ್ರ, ೨ ವಿ, ೧ ರು, ಅಥವಾ ೬ ವಿ, ೧ ರುದ್ರ ಎಂದು ಹೇಳಿರುವನು. ೬ವಿ, ೧ ರುದ್ರ ಎಂಬುದನ್ನು ೭ ವಿ, ೧ ಗುರು ಎಂದು ಸಹ ಹೇಳಬಹುದು. ಅಕ್ಕರಿಕೆಯ ಕೊನೆಯ ಗಣವನ್ನು ನಾಗವರ್ಮ ೧ ರುದ್ರ ಎಂದಿದ್ದರೆ ಜಯಕೀರ್ತಿ ೧ ವಿ, ೧ ಗುರು ಎಂದು ಹೇಳಿರುವುದನ್ನು ಇಲ್ಲಿ ಗಮನಿಸ ಬಹುದು. ಜಯಕೀರ್ತಿಯ ಈ ಗ್ರಂಥವನ್ನು ಸಂಪಾದಿಸಿದ ವೇಲಣಕರ ಗೇಯತೆಯ ದೃಷ್ಟಿಯಿಂದ ಹೀಗೆ ಹೇಳುವುದೇ ಸರಿಯಾದ ನಿರೂಪಣೆ ಎಂದಿರುವರು.

ನಾಗವರ್ಮನ ಗೀತಿಕೆಯ ಲಕ್ಷಣ ಸ್ಪಷ್ಟವಿಲ್ಲ. ಜಯಕೀರ್ತಿಯ ಗೀತಿಕೆಯ ಲಕ್ಷಣದೊಡನೆ ತಾಳೆ ಹಾಕಿದಾಗ ಗೀತಿಕೆಯಾದರೂ ಕರ್ನಾಟಕ ವಿಷಯ ಜಾತಿಗೆ ಸೇರಿದ ಒಂದು ಅರ್ಧ ಸಮವೃತ್ತ ಎಂಬುದು ಕಂಡುಬರುವುದು. ೧ ಮತ್ತು ೩ನೆಯ ಪಾದಗಳಲ್ಲಿ ಮೂರು ಗಣಗಳು, ೨ ನೆಯದು ಬ್ರಹ್ಮ, ಉಳಿದವು ಐಚ್ಛಿಕ ಅಂದರೆ ಬ್ರ, ವಿ, ರು—ಗಳಲ್ಲಿ ಯಾವವೇ ಇರಬಹುದು. ೨ ಮತ್ತು ೪ ನೆಯ ಪಾದಗಳಲ್ಲಿ ೪ ಗಣ ಗಳು. ಇವುಗಳಲ್ಲಿ ೩ ನೆಯದು ಅಥವಾ ಪ್ರಾರಂಭದಿಂದ ೬ನೆಯದು ಬ್ರಹ್ಮ ಮಿಕ್ಕವು ಐಚ್ಛಿಕ.

ಶ್ರೀಮದಾಚಾರ್ಯರ ಈ ಸ್ತೋತ್ರದಲ್ಲಿಯ ಪದ್ಯಗಳನ್ನು ಪಲ್ಲವಿ ಸೇರಿ ಎಡೆ ಯಕ್ಕರ (ಜಯಕೀರ್ತಿಯ ಅಂತರಾಕ್ಷರ) ಮತ್ತು ಗೀತಿಕೆಯ ಅರ್ಧದಿಂದ ಕೂಡಿದ ಶೀರ್ಷಕ ಅಥವಾ ಸೀಸಗಳೆಂದು ಗುರುತಿಸಬಹುದಾಗಿದೆ. ಅದು ಹೀಗೆ—

ಸೃಷ್ಟಿ | ಸಂಹಾರ | ಲೀಲಾವಿ | ಲಾಸಾತತಂ
ಪುಷ್ಟ | ಷಾಡ್ಗುಣ್ಯ | ಸದ್ವಿಗ್ರ | ಹೋಲ್ಲಾಸಿನಂ |
ದುಷ್ಟ | ನಿಃಶೇಷ | ಸಂಹಾರ | ಕರ್ಮೋದ್ಯತಂ
ಹೃಷ್ಟ | ಪುಷ್ಟಾನು | ಶಿಷ್ಟಪ್ರ | ಜಾಸಂಶ್ರಯಂ ||
ಬ್ರ | ವಿ | ವಿ | ರು —(ನಾಲ್ಕೂ ಪಾದಗಳಲ್ಲಿ)
ಪ್ರೀಣ | ಯಾಮೋ | ವಾಸುದೇವಂ || ದೇವತಾ | ಮಂಡಲಾ | ಖಂಡ | ಮಂಡನಂ ||ಪ||
ಬ್ರ | ಬ್ರ | ರು || ವಿ | ವಿ | ಬ್ರ | ವಿ

—ಎಡೆಯಕ್ಕರದ ಲಕ್ಷಣ- ೧ ಬ್ರ, ೨ ವಿ, ೧ ರು. ಇಲ್ಲಿ ಸಹ ಹೀಗೆಯೇ ಇದೆ. ಪಲ್ಲವಿ ಗೀತಿಕೆಯರ್ಧಕ್ಕೆ ಸರಿಯಾಗಿ ಹೊಂದುತ್ತದೆ. ಧಾಟಿಯಲ್ಲಿಯೂ ತಡೆ ಉಂಟಾಗುವುದಿಲ್ಲ. ಸ್ರಗ್ವಿಣಿಗೆ ಲಾಕ್ಷಣಿಕರು ಯತಿಯನ್ನು ಹೇಳಿಲ್ಲ. ಅಕ್ಕರಗಳ ವಿಷಯದಲ್ಲಿ ಜಯಕೀರ್ತಿ ಗಣಗಣಕ್ಕೆ ಯತಿ ಎಂದಿರುವನು. ಹೀಗೆ ಪದ್ಯವನ್ನು ಹೇಳಿದಾಗ ಧಾಟಿ ಹೆಚ್ಚು ಸಲೀಸಾಗಿ ಕೂಡುವುದು. ಇಲ್ಲಿರುವ ಗಣಗಳು ಒಂದೇ ಬಗೆಯವು ; ೪ ರ ಗಣಗಳು ; ಪ್ರತಿಯೊಂದು ತ್ರಿಮೂರ್ತಿ ಗಣದಲ್ಲಿ ಒಂದಕ್ಕಿಂತ ಹೆಚ್ಚು ಗಣಗಳಿವೆ, ಅವುಗಳಲ್ಲಿ ಯಾವುದೇ ಒಂದು ಬರಬಹುದಾಗಿದೆ ; ಅತಏವ ಇದು ಕ್ರಮ ಬದ್ಧ ಅಕ್ಷರ ವೃತ್ತ ; ಪಲ್ಲವಿಯಾದರೂ ಇಂಥದೊಂದು ಅನುಕ್ತ ಛಂದೋಬಂಧವಿರ

ಬೇಕು, ಎಂದು ವಾದಿಸಬಹುದು. ಇದಕ್ಕೆ ಉತ್ತರ: ಛಂದೋಂಬುಧಿಯಲ್ಲಿಯ (ಕಿಟೆಲ್ ಪ್ರತಿ) ಅಕ್ಕರಿಕೆಯ ಲಕ್ಷ್ಯ-ಲಕ್ಷಣ ಪದ್ಯವನ್ನೂ ಕೈಪಿಡಿಯಲ್ಲಿ ಅಕ್ಕರಿಕೆಯ ಲಕ್ಷ್ಯವೆಂದು ಕೊಟ್ಟಿರುವ ಷಡಕ್ಷರಿಯ ರಾಜಶೇಖರವಿಳಾಸದಲ್ಲಿಯ 'ಸುರನುತ ಚರಣೇ ವರಗುಣ ಭರಣೇ' ಪದ್ಯವನ್ನೂ ನೋಡಬಹುದು. ಇಲ್ಲಿ ಎಲ್ಲ ಗಣಗಳು ಒಂದೇ ಬಗೆಯವಿವೆ. ಪಲ್ಲವಿಯನ್ನು ಅನುಕ್ತ ಛಂದೋಬಂಧವೆಂದು ತಿಳಿಯು ವಂತಿಲ್ಲ. ಹಾಗಿದ್ದರೆ ಅದು ಗಾಥೆಯಾಗುವುದು. ಆದಗೆ ಆಚಾರ್ಯರು ಹರಿಗಾಥೆ ಅಥವಾ ಹರಿಗೀತೆಯೆಂದು ಇದನ್ನು ಹೆಸರಿಸಿಲ್ಲ.

ಪ್ರಾಸ ವೈಶಿಷ್ಟ್ಯ

ಪದ್ಯಗಳಲ್ಲಿ ಕನ್ನಡ ವಿಶಿಷ್ಟ ಆದಿ ಪ್ರಾಸವಿರುವುದು ಈ ಸ್ತೋತ್ರದ ಇನ್ನೊಂದು ವೈಶಿಷ್ಟ್ಯ. ಪಲ್ಲವಿಯಲ್ಲಿ ಅಂತ ಪ್ರಾಸವಿದ್ದರೂ ಅದು ಪದ್ಯದಿಂದ ಪ್ರತ್ಯೇಕವಾಗಿ ಬಂದಿದೆ. "ಕನ್ನಡ ಕವಿತೆಯೆಂಬ ಪೆಣ್ಗೆ ಪ್ರಾಸವೆ ಪ್ರಾಣಂ; ಆ ಪ್ರಾಸಂ ಶಬ್ದಾ ಳಂಕಾರದೊಳತಿಶಯಂ" ಎಂಬುದೊಂದು ಪ್ರಾಚೀನೋಕ್ತಿ. ಕವಿರಾಜಮಾರ್ಗದಲ್ಲಿ "ನುತ ಶಬ್ದಾಲಂಕಾರದೊಳತಿಶಯಮೀ ಕನ್ನಡಕ್ಕೆ ಸತತಂ ಪ್ರಾಸಂ" ಎಂದು ನೃಪ ತುಂಗನಾದರೂ ಇದೇ ಮಾತನ್ನು ಹೇಳಿರುವನು. ಕನ್ನಡ ವಿಶಿಷ್ಟವಿರುವ ಈ ಅಲಂಕಾರ ವನ್ನು ಶ್ರೀಮದಾಚಾರ್ಯರು ಮತ್ತು ಅವರ ಶಿಷ್ಯಂದಿರು ಸಂಸ್ಕೃತ ಕಾವ್ಯದೇವಿಗೆ ಜೋಡಿಸಿ ಆ ಮೂಲಕ ಸಂಸ್ಕೃತ ಕಾವ್ಯ ಸಂಪತ್ತಿಗೆ ಕನ್ನಡದ್ದೊಂದು ಕಾಣಿಕೆಯನ್ನು ಸಲ್ಲಿಸಿರುವರೆಂದರೆ ಅತಿಶಯೋಕ್ತಿಯಾಗದು.

ಆದಿ ಪ್ರಾಸ ಕನ್ನಡದ ವೈಶಿಷ್ಟ್ಯ ಎಂದಿದ್ದರೂ ವೈಷ್ಣವ ಭಕ್ತಿ ಸಂಪ್ರದಾಯದ ಅಡಿಗಲ್ಲಾದ ಭಾಗವತದಲ್ಲಿ ಅದರ ಮುಂಗುರುತನ್ನು ಕಾಣಬಹುದಾಗಿದೆ—ಲೋಕ ಪ್ರಿಯವಿರುವ ಗೋಪೀಗೀತದಲ್ಲಿ. ಭಕ್ತಿಯ ಜನ್ಮ ದಕ್ಷಿಣದಲ್ಲಿ, ಅಭಿವೃದ್ಧಿ ಕರ್ನಾ ಟಕದಲ್ಲಿ (ವೃದ್ಧಿಂ ಕರ್ಣಾಟಕೇ ಗತಾ) ಎಂಬ ಮಾತನ್ನು ನೆನೆದಾಗ ಆಗ ಸಹ ಆದಿ ಪ್ರಾಸ ಕನ್ನಡದ ವೈಶಿಷ್ಟ್ಯವಿದ್ದಿತು ಎಂದು ಭಾವಿಸುವಂತಿದೆ. ಈ ಮಾತಾದರೂ ಭಾಗವತದಲ್ಲಿಯದು. ಭಾಗವತ ಮಹಾತ್ಮ್ಯೆಯಲ್ಲಿದೆ. ಇದು ಗೋಪಿಗೀತದ ಮೊದಲ ನೆಯ ಪದ್ಯ—

ಜಯತಿ ತೇऽಧಿಕಂ ಜನ್ಮನಾವ್ರಜಃ
ಶ್ರಯತ ಇಂದಿರಾ ಸಾಧು ತತ್ರಹಿ ।
ದಯಿತ ದೃಶ್ಯತಾಂ ತ್ವಾದಿದೃಕ್ಷತಾಂ
ತ್ವಯಿ ಧೃತಾಸವಸ್ತ್ವಾಂ ವಿಚಿನ್ವತೇ ॥

—ಪ್ರತಿ ಪಾದದಲ್ಲಿ ನ–ರ–ಲ–ಗ ಗಣ ವಿಭಾಗವಿರುವ ಈ ಪದ್ಯ ರಾಜಹಂಸೀ ಎಂಬ ವೃತ್ತದಲ್ಲಿದೆ. ಇದನ್ನು ಲಕ್ಷಿಸಿದವರು ಇಬ್ಬರೇ—ವಿರಹಾಂಕ (ವೃತ್ತಜಾತಿ-ಸಮುಚ್ಚಯ), ಕೃಷ್ಣಕವಿ (ಮಂದಾರಮರಂದ ಚಂಪೂ). ವಿರಹಾಂಕನ ಕಾಲ ಕ್ರಿ. ೭

ನೆಯ ಶತಮಾನ. ಈ ವೃತ್ತಕ್ಕೆ ವಿಭೂಷಣ ಎಂದಿರುವನು. ಕೃಷ್ಣಕವಿಯ ಕಾಲ ೧೬ ನೆಯ ಶತಮಾನ ಅಥವಾ ನಂತರ. ಈತನ ಮಂದಾರಮರಂದ ಚಂಪೂ ಛಂದಸ್ಸು, ಅಲಂಕಾರಾದಿಗಳನ್ನು ಕುರಿತಿರುವ ಲಕ್ಷಣ ಗ್ರಂಥ. ಉಡುಪಿಯ ಶ್ರೀಕೃಷ್ಣನನ್ನು ನಾಯಕನನ್ನಾಗಿಸಿ ಅಲಂಕಾರಾದಿಗಳ ನೆವದಲ್ಲಿ ಬಗೆ ಬಗೆಯಿಂದ ಸ್ತುತಿಸಿರುವನು. ಪ್ರಾರಂಭದಲ್ಲಿ ಉಡುಪಿಯ ಇತಿಹಾಸ, ಉಡುಪಿಗೆ ಶ್ರೀಕೃಷ್ಣನ ಆಗಮನ, ಮಧ್ವಾಚಾರ್ಯರ ಸಂಕ್ಷಿಪ್ತ ಚರಿತ್ರೆ, ಇತ್ಯಾದಿ ವಿವರಗಳನ್ನು ಕೊಟ್ಟು ವಿಷಯ ನಿರೂಪಣೆಗೆ ತೊಡಗಿರುವನು. ಭರತ ಪಿಂಗಲಾದಿಗಳಿಂದ ನಡೆದುಬಂದ ಪ್ರಸಿದ್ಧ ಛಂದೋಬಂಧಗಳೊಂದಿಗೆ ತಮ್ಮ ಪ್ರದೇಶದಲ್ಲಿ ಪ್ರಚಾರದಲ್ಲಿರುವ ಛಂದೋಬಂಧಗಳನ್ನು ಲಕ್ಷಿಸುವದು ಲಾಕ್ಷಣಿಕರ ಸಾಮಾನ್ಯ ಪ್ರವೃತ್ತಿ. ಈ ದೃಷ್ಟಿಯಿಂದ ವಿರಹಾಂಕನಾದರೂ ದಾಕ್ಷಿಣಾತ್ಯನಿರಬಹುದಾಗಿದೆ. ಪ್ರಸಿದ್ಧ ಲಾಕ್ಷಣಿಕರಾದ ಜನಾಶ್ರಯಿಕಾರ, ರತ್ನಮಂಜೂಷಾಕಾರ, ಸ್ವಯಂಭೂ, ಜಯಕೀರ್ತಿ, ಪಿಂಗಲನ ಛಂದಃಸೂತ್ರಗಳಿಗೆ ಭಾಷ್ಯವನ್ನು ಬರೆದ ಹಲಾಯುಧ, ವೃತ್ತರತ್ನಾಕರದ ಕರ್ತ ಕೇದಾರಭಟ್ಟ, ಇವರೆಲ್ಲರೂ ದಾಕ್ಷಿಣಾತ್ಯರು. ಜಯಕೀರ್ತಿ ಕನ್ನಡಿಗ. ಸ್ವಯಂಭೂ ಹಲಾಯುಧ ರಾಷ್ಟ್ರಕೂಟರ ಆಶ್ರಿತರು.

ಆದ್ಯಂತಪ್ರಾಸ ಮತ್ತು ಆದಿಪ್ರಾಸದಲ್ಲಿ ನಾವೀನ್ಯವಿರುವ ಪದ್ಯಗಳನ್ನು ರಚಿಸಿರುವದುಂಟು. ಇದೊಂದು ಉದಾಹರಣೆ—

ತರುಣಾರುಣ ಕರುಣಾಮಯ ವಿಪುಲಾಯತನಯನಂ
ಕಮಲಾಕುಚ ಕಲಶೀಭರ ವಿಪುಲೀಕೃತ ಪುಲಕಂ ।
ಮುರಳೀಧರ ತರಳೀಕೃತ ಮುನಿಮಾನಸನಲಿನಂ
ಮಮಖೇಲತಿ ಮದಚೇತಸಿ ಮಧುರಾಧರಮಮೃತಂ ॥

ಇದು ೧೮ ಅಕ್ಷರ ಪಾದಗಳ ಸುರಭಿ ಎಂಬ ವೃತ್ತ. ಗಣವಿನ್ಯಾಸ ಸ–ನ–ಜ–ನ–ಭ–ಸ, ಯತಿ ೩, ೫, ೫. ಆದ್ಯಂತ ಪ್ರಾಸಗಳಿವೆ. ವಿಷಮ ಪಾದಗಳಲ್ಲಿ ಒಂದು ಬಗೆಯ ಮತ್ತು ಸಮಪಾದಗಳಲ್ಲಿ ಇನ್ನೊಂದು ಬಗೆಯ ಪ್ರಾಸವನ್ನಿಟ್ಟು ಆದಿ ಪ್ರಾಸದಲ್ಲಿ ನಾವೀನ್ಯವನ್ನು ತರಲಾಗಿದೆ. ಪದ್ಯವನ್ನು ಜೋಗುಳದ ಧಾಟಿಯಲ್ಲಿ ಹೇಳಬಹುದು.

ಸುರಭಿವೃತ್ತವನ್ನು ಲಕ್ಷಿಸಿದವರು ಜಯಕೀರ್ತಿ, ಹೇಮಚಂದ್ರ ಇಬ್ಬರೇ. ಜಯಕೀರ್ತಿ ಕನ್ನಡಿಗ. ಹೇಮಚಂದ್ರ ಕುಶಲ ಸಂಗ್ರಾಹಕ. ಜಯಕೀರ್ತಿಯ ನಂತರದವ. ಲಭ್ಯವಿರುವ ಎಲ್ಲ ಛಂದೋಗ್ರಂಥಗಳನ್ನು ಕಲೆಹಾಕಿ ಅವುಗಳಲ್ಲಿ ಉಕ್ತವಾದ ಛಂದೋಬಂಧಗಳನ್ನು ತನ್ನ ಗ್ರಂಥದಲ್ಲಿ ಸೇರಿಸಿಕೊಂಡಿರುವನು. ಈ ಪದ್ಯವನ್ನು ರಚಿಸಿದ ಕವಿ ಲೀಲಾಶುಕ. ಬಿಲ್ವಮಂಗಲ ಯತಿ ಎಂಬ ಹೆಸರಿನಿಂದ ಸಹ ಪ್ರಸಿದ್ಧನಿರುವನು. ಈತನ ಕೃಷ್ಣಕರ್ಣಾಮೃತ ಗ್ರಂಥ ಲೋಕಪ್ರಿಯವಿದೆ. ಈ ಪದ್ಯ ಅದರಲ್ಲಿಯದು. ಲೀಲಾಶುಕ ದಾಕ್ಷಿಣಾತ್ಯ. ನಿಸ್ಸೀಮ ಕೃಷ್ಣಭಕ್ತ. ಬಂಗಾಲ, ಓಡಿಸಾ

ಆಂಧ್ರ, ಕೇರಳದವರು ತಮ್ಮವನೆಂದು ವಾದಿಸುತ್ತಿರುವರು. ಈತನ ಕಾಲವಾದರೂ ಅಷ್ಟೇ ವಾದಗ್ರಸ್ತವಿದೆ. ಮಧ್ವಾಚಾರ್ಯರು ತಮ್ಮದೊಂದು ಗ್ರಂಥದಲ್ಲಿ ಈತನನ್ನು ಹೆಸರಿಸಿ ಪರ್ಯಾಯದಿಂದ ಗೌರವಿಸಿರುವರೆಂದು ಎನ್ನುವದುಂಟು. ಬಂಗಾಲದ ಶ್ರೀ ಚೈತನ್ಯಪ್ರಭುವಿಗೆ (ಕ್ರಿ. ೧೪೮೫-೧೫೩೩) ಲೀಲಾಶುಕನ ಈ ಗ್ರಂಥ ಸ್ಫೂರ್ತಿಯ ಸೆಲೆ, ಆಂಗ್ಲ ಪರಿಭಾಷೆಯಲ್ಲಿ 'ಬೈಬಲ್' ಆಗಿದ್ದಿತೆಂದು ಹೇಳುವದುಂಟು.

ತೃತೀಯಾಕ್ಷರ ಪ್ರಾಸ

ಕನ್ನಡದಲ್ಲಿ ದ್ವಿತೀಯಾಕ್ಷರ ಪ್ರಾಸ ಸರ್ವೇಸಾಮಾನ್ಯ. ಜೊತೆಗೆ ದ್ವ್ಯಕ್ಷರ (ಎರಡು ಮೂರನೆಯ), ತ್ರ್ಯಕ್ಷರ (ಎರಡು, ಮೂರು, ನಾಲ್ಕನೆಯ) ಪ್ರಾಸಗಳ ಯೋಜನೆ ಇದ್ದಿತು. ಸಂಸ್ಕೃತದಲ್ಲಿಯೂ ಈ ವೈಶಿಷ್ಟ್ಯಗಳಿರುವ ಇದೊಂದು ಉದಾಹರಣೆ—

ಸ್ವಃಸುಂದರೀ ಭುಜಲತಾ ಪರಿರಂಭಣೀಧೂಃ
ಪೌರಂದರೀ ಭರತಿ ಯಂ ಭಜತಾಂ ಭುಜಿಷ್ಯಾ ।
ಆನಂದತೀರ್ಥ ಭಗವತ್ಪದ ಪದ್ಮರೇಣುಃ
ಸ್ವಾನಂದದೋ ಭವತು ತೇ ಜಯಸಿಂಹಭೂಪ ॥

—ವಸಂತ ತಿಲಕ,–ತ-ಭ-ಜ-ಜ-ಗಗ. ಮಧುರಸಂಯುಕ್ತ ತೃತೀಯಾಕ್ಷರ ಪ್ರಾಸ (ನ್ದ). ದ್ವಿತಿಯಾಕ್ಷರವು ಸವರ್ಣವಾಗಿದ್ದರೆ ಇದು ಅಪ್ಪಟ ಮಧುರಸಂಯುಕ್ತ ದ್ವ್ಯಕ್ಷರ ಪ್ರಾಸವಾಗುತ್ತಿತ್ತು. ಇಲ್ಲಿ ಸವರ್ಣದ ಬದಲು ಶ್ರುತ್ಯನು ಪ್ರಾಸ (ಸಮಾನ ಇಲ್ಲವೆ ಸಮೀಪಸ್ಥಾನದಲ್ಲಿ ಉಚ್ಚರಿಸಲ್ಪಡುವ) ಅಕ್ಷರಗಳ ಯೋಜನೆ ಇದೆ. ಕನ್ನಡದಲ್ಲಿ ಈ ಬಗೆಯ ಅಂದರೆ ಸಜಾತೀಯ ಬದಲು ಶ್ರುತ್ಯನುಪ್ರಾಸಾಕ್ಷರ ಇರುವ ಉದಾಹರಣೆಗಳಿದ್ದರೂ (ಉದಾ. ವನು-ಪ್ರಾಸ, ಕವಿರಾಜಮಾರ್ಗ, ೩/೧೬೯) ಗ್ರಂಥೋಕ್ತವಿಲ್ಲದ್ದರಿಂದ ಇಲ್ಲಿ ಇದನ್ನು ತೃತೀಯಾಕ್ಷರ ಪ್ರಾಸವೆಂದು ಹೆಸರಿಸಲಾಗಿದೆ. ಈ ಪದ್ಯವನ್ನು ರಚಿಸಿದವರು ಶ್ರೀ ಮಧ್ವಾಚಾರ್ಯರ ಸಾಕ್ಷಾತ್ ಶಿಷ್ಯರಿದ್ದ ಅದ್ವೈತ ವಿದ್ವಾಂಸಾಗ್ರೇಸರ ತ್ರಿವಿಕ್ರಮಪಂಡಿತರು. ತತ್ವಾರ್ಥದಲ್ಲಿ ಆಚಾರ್ಯರೊಡನೆ ವಾದಿಸಿ ದ್ವೈತಮತವನ್ನು ಸ್ವೀಕರಿಸಿ ಅವರ ಶಿಷ್ಯರಾಗಿದ್ದರು. ಈ ವಾದವು ಜಯಸಿಂಹನೆಂಬ ತುಳುರಾಜ್ಯದ ಅರಸನ ಆಸ್ಥಾನದಲ್ಲಿ ನಡೆಯಿತು. ಇದು ಆ ಸಂದರ್ಭದಲ್ಲಿ ತ್ರಿವಿಕ್ರಮರು ಜಯಸಿಂಹನನ್ನು ಆಶೀರ್ವದಿಸಲು ರಚಿಸಿದ ಆಶು ಪದ್ಯ.

ಖಂಡಪ್ರಾಸ-ಯತಿ

ಖಂಡಪ್ರಾಸದಲ್ಲಿ ಆದಿಪ್ರಾಸಾಕ್ಷರವು ಯತಿ ಅಕ್ಷರದ ನಂತರ ಎರಡನೆಯ ಸ್ಥಾನದಲ್ಲಿ ಪುನರಾವೃತ್ತವಾಗುವದು. ಪಾದ ಮಧ್ಯದಲ್ಲಿ ಬರುವದರಿಂದ ಸಂಸ್ಕೃತದಲ್ಲಿ ಇದು ಮಧ್ಯಪ್ರಾಸವೆಂದು ಪ್ರಸಿದ್ಧವಿದೆ. ಕನ್ನಡದಲ್ಲಿ ಖಂಡಪ್ರಾಸದ ಸ್ವರೂಪ

ಇನ್ನೂ ಅನಿಶ್ಚಿತವಾಗಿ ಉಳಿದಿದೆ. ವಿಸ್ತಾರ ಭಯದಿಂದ ಈ ವಿಷಯವನ್ನು ಇಲ್ಲಿ ಚರ್ಚಿಸಿಲ್ಲ.* ಯತಿ ಮತ್ತು ಖಂಡಪ್ರಾಸ ಎರಡರಲ್ಲಿ ಒಂದನ್ನು ಆಯ್ದುಕೊಳ್ಳುವ ಪ್ರಸಂಗದಲ್ಲಿ ಪ್ರಾಚೀನರು ಖಂಡಪ್ರಾಸಕ್ಕೆ ಪ್ರಾಶಸ್ತ್ಯವನ್ನು ಕೊಟ್ಟು ಯತಿಯನ್ನು ಮೀರುತ್ತಿದ್ದರು, ಎಂದಿರುವನು ನೃಪತುಂಗ ಕವಿರಾಜಮಾರ್ಗದಲ್ಲಿ. ನೃಪತುಂಗನ ಈ ಮಾತು ಕನ್ನಡ ಕವಿಗಳನ್ನು ಕುರಿತು. ದಾಕ್ಷಿಣಾತ್ಯ ಕವಿರಚಿತ ಪ್ರಾಸಯುಕ್ತ ಸಂಸ್ಕೃತ ಪದ್ಯಗಳಲ್ಲಿ ಸಹ ಹೀಗಾಗಿರುವದನ್ನು ಈ ಪದ್ಯದಲ್ಲಿ ನೋಡಬಹುದು—

> ಶ್ರೀಶಪದ ಪೇಶಲ ಕುಶೇಶಯ ಮರಂದಂ
> ಪ್ರಾಶನ ಘುತೇತರ ರಸಾಶಯ ಮಿಲಿಂದಂ ।
> ಧೀಶ ಕಲಿತಾನ್ಯಮತ ಪಾಶಮಿಹ ವಿದ್ಯಾ
> ಧೀಶ ಯತಿವರ್ಯ ಮಘನಾಶ ಮಹಮೀಡೇ ॥

—ಭ-ಜ-ಸ-ನ-ಗಗ. ನಾಗವರ್ಮ ಜಯಕೀರ್ತಿ ಇದನ್ನು ವನಮಯೂರ ಎಂದು ಹೆಸರಿಸಿರುವರು. ಇಂದುವದನಾ, ವಿಲಾಸಿನಿ, ಕಾಂತಾ, ವನಸುಂದರಿ, ಸ್ಖಲಿತ, ಎಂದು ಸಹ ಪ್ರಸಿದ್ಧವಿದೆ. ನಾಗವರ್ಮ ಇದರ ಯತಿ ಪದಾರ್ಥಕ್ಕೆ (೭ಕ್ಕೆ) ಎಂದಿರುವನು. ಇಲ್ಲಿ ಆದಿ ಮತ್ತು ಖಂಡಪ್ರಾಸಗಳಿದ್ದು ಕೊನೆಯ ಎರಡು ಪಾದಗಳಲ್ಲಿ ಖಂಡಪ್ರಾಸಕ್ಕಾಗಿ ಯತಿ ಉಲ್ಲಂಘನೆಯಾಗಿದೆ. ಈ ಪದ್ಯ ಜನಾರ್ದನ ಸೂರಿಕೃತ ವಿದ್ಯಾಧೀಶ ವಿಜಯದಲ್ಲಿಯದು. ವಿದ್ಯಾಧೀಶರ ಕಾಲ ಕ್ರಿ. ೧೫೪೧. ಉತ್ತರಾದಿಮಠದ ಪೀಠಾಧಿಪ ಮತ್ತು ಮಹಾಪಂಡಿತರಿದ್ದರು.

ಪದ್ಯ, ಪಲ್ಲವಿ, ಪ್ರಾಸಾನುಪ್ರಾಸಗಳಿಂದ ಕೂಡಿರುವ ಮತ್ತು ಸಂಸ್ಕೃತ ಕನ್ನಡ ಛಂದಸ್ಸುಗಳಿಗೆ ಮೌಲಿಕ ಕಾಣಿಕೆಯಂತಿರುವ ೮ನೆಯ ಈ ಸ್ತೋತ್ರದಲ್ಲಿ ಮಧ್ವಾಚಾರ್ಯರು ಭಕ್ತವೃಂದವನ್ನು,—ಬನ್ನಿರಿ, ಪ್ರತಿಷ್ಠಾಪನ, ಪೂಜಾದಿಗಳಿಂದ ಶ್ರೀ ಕೃಷ್ಣನನ್ನು ತಣಿಸೋಣ, ಎಂದು ಆಹ್ವಾನಿಸಿರುವರು.

ಜಯಕೀರ್ತಿ ಪ್ರಣೀತ ದಂಡಕಗಳು

ಒಂಬತ್ತನೆಯ ಸ್ತೋತ್ರ ಆರ್ತಭಾವದ ಆಗರ. ಪ್ರತಿಪದ್ಯದಲ್ಲಿ "ರಾಮ ರಮಾರಮಣ—ಭವಮಮಶರಣಂ" ಪದಗಳೊಂದಿಗೆ ಭಗವಂತನನ್ನು ವಿವಿಧ ಬಗೆಗಳಲ್ಲಿ ಸಂಬೋಧಿಸಿ ಶರಣಾಗತಿಯ ಸ್ಥಾನನಾಗೆಂದು ಪ್ರಾರ್ಥಿಸಿರುವರು, ಆಚಾರ್ಯರು. ಈ ಪದ್ಯಗಳನ್ನು ಚತುರ್ಮಾತ್ರಾಲಯಕ್ಕೆ ಹೊಂದಿಸಿ ಹಾಡುವದುಂಟು. ಆದರೆ ಪ್ರತಿಪಾದದಲ್ಲಿ ಕ್ಲಪ್ತವಾಗಿ ೪ ಮಾತ್ರೆಯ ಗಣಗಳು ಹೊರಡುವದಿಲ್ಲ. ಕೆಲವೆಡೆ

---

* ಲೇಖಕನ ಕವಿರಾಜಮಾರ್ಗ ಪ್ರಶಸ್ತಿಯಲ್ಲಿ (ಮನ್ವಂತರ ಪ್ರಕಾಶನ) ಈ ವಿಷಯ ಬಂದಿದೆ.

ಲೆಕ್ಕ ತಪ್ಪುತ್ತದೆ. ಆದ್ದರಿಂದ ಅಕ್ಷರಗಳ ಉಚ್ಚಾರವನ್ನು ಎಳೆದು ಇಲ್ಲವೆ ಸಂಕುಚಿಸಿ ಲಯವನ್ನು ತೂಗಿಸಿಕೊಳ್ಳಬೇಕಾಗುವದು. ಗಾಥೆಯೆಂದು ತಿಳಿಯಬೇಕೆಂದರೆ ಆಚಾರ್ಯರು ಹೀಗೆ ನಿರ್ದೇಶಿಸಿಲ್ಲ. ಅತಏವ ಇಲ್ಲಿಯ ಪದ್ಯಗಳ ಛಂದಸ್ಸನ್ನು ಗುರುತಿಸುವದು ಕ್ರಮಪ್ರಾಪ್ತವಿದೆ. ಪಾದಾದಿ ಅಕ್ಷರಗಳ ಸ್ವರೂಪ ಮತ್ತು ಪಾದಾಕ್ಷರಗಳ ಸಂಖ್ಯೆಯನ್ನು ನಿರುಕಿಸಿದಾಗ ಇವು ದಂಡಕಗಳೆಂದು ತೋರುತ್ತದೆ.

ದಂಡಕ ಅಕ್ಷರ ವೃತ್ತ. ಪಾದವೊಂದಕ್ಕೆ ೨೭ ರಿಂದ ೯೯೯ ಅಕ್ಷರಗಳಿರಬಹುದು. ಇಂತಿಷ್ಟೆ ಪಾದಗಳೆಂಬ ನಿಯಮವಿಲ್ಲ. ಸಂಸ್ಕೃತದಲ್ಲಿ ಅರ್ಣ, ಅರ್ಣವ, ಚಂಡವೃಷ್ಟಿ ಪ್ರಪಾತ, ಮೊದಲಾದ ೩೭ ಬಗೆಯ ದಂಡಕಗಳಿವೆ. ಬಹುಸಂಖ್ಯೆ ದಂಡಕಗಳಿಗೆ ಪ್ರಾರಂಭದಲ್ಲಿ ಇಂತಿಷ್ಟು ಲಘು ಅಕ್ಷರಗಳು ಮುಂದೆ ಇಂಥಿಂಥ ತ್ರಿಕಗಳು (ಪಿಂಗಲನ ಮ, ಯ, ರ, ಸ, ಮೊದಲಾದ ಮೂರಕ್ಷರ ಗಣಗಳು) ಮೊದಲಾದ ನಿಯಮಗಳಿವೆ. ಇವುಗಳಲ್ಲಿ ಕನ್ನಡಿಗನಾದ ಜಯಕೀರ್ತಿ ಒಬ್ಬನೇ ವಿವರಿಸಿದ ಚಂಡ, ಅಬ್ಬ, ಸಿಂಹ ಎಂಬ ಮೂರು ಬಗೆಗಳಿವೆ. ಚಂಡದಲ್ಲಿ ಮೊದಲು ೫ ಲಘು ಅಕ್ಷರಗಳು, ನಂತರ ಯಥೇಷ್ಟ ತ್ರಿಕಗಳು. ಇಂಥವೇ ತ್ರಿಕಗಳೆಂಬ ನಿರ್ಬಂಧವಿಲ್ಲ. ಅಬ್ಬ ೪ ಸಿಂಹ ೩ ಲಘು ಅಕ್ಷರಗಳಿಂದ ಪ್ರಾರಂಭವಾಗುತ್ತದೆ. ನಂತರದ ರಚನೆ ಚಂಡದಂತೆ, ದಂಡಕದ ಉಳಿದ ಭೇದಗಳನ್ನು ಬಿಟ್ಟು ಆಚಾರ್ಯರು ಕನ್ನಡಿಗನಾದ ಜಯಕೀರ್ತಿ ವಿವರಿಸಿದ ಈ ಮೂರೇ ಭೇದಗಳನ್ನು ಆಯ್ದುಕೊಂಡಿರುವದು ಈ ಸ್ತೋತ್ರದ ವೈಶಿಷ್ಟ್ಯ. ಇದು ಪ್ರಾರಂಭದ ದಂಡಕ. ಮೂರು ಪಾದಗಳಿವೆ. ಚಂಡಭೇದ. ಗಳು (ಪ್ರತಿಯೊಂದು ಪಾದದಲ್ಲಿ ೨೯ ಅಕ್ಷರ–೫ ಲಘು ಮತ್ತು ೮ ತ್ರಿಕಗಳು)—

ಅತಿಮತ ತಮೋಗಿರಿ ಸಮಿತಿ ವಿಭೇದನ ಪಿತಾಮಹ ಭೂತಿದಗುಣಗಣನಿಲಯ।
ಶುಭತಮಕಥಾಶಯ ಪರಮ ಸದೋದಿತ ಜಗದೇಕ ಕಾರಣ ರಾಮರಮಾರಮಣ।
ವಿಧಿಭವ ಮುಖಸುರ ಸತತಸುವಂದಿತ ರಮಾಮನೋವಲ್ಲಭ ಭವಮಮ ಶರಣಂ॥

ಮುಂದಿನವು ಯುಗ್ಮದಲ್ಲಿವೆ. ಪ್ರತಿಯೊಂದು ಯುಗ್ಮದಲ್ಲಿ ಮೊದಲನೆಯ ಪಾದವು ಉಪರೋಕ್ತ ೩ನೆಯ ಪಾದದಲ್ಲಿಯ 'ಭವಮಮ ಶರಣಂ' ಪದಗಳಿಂದ ಕೊನೆಗೊಳ್ಳುತ್ತದೆ ಮತ್ತು ಅದಕ್ಕೆ ಹೊಂದಿ ೨ನೆಯ 'ಶುಭತಮ ಕಥಾಶಯ' ದಂಡಕ ಪಾದವು ಪಲ್ಲವಿರೂಪದಲ್ಲಿ ಪುನರಾವೃತ್ತವಾಗಿದೆ. ಗಣಗಳ ಸಂಖ್ಯೆ ಮತ್ತು ಸ್ವರೂಪ ಐಚ್ಛಿಕವಿದ್ದರೂ ಅವೆಲ್ಲ ಒಂದು ಧಾಟಿಗೆ ಹೊಂದುತ್ತವೆ. ಇಲ್ಲಿಯ ಪದಯೋಜನೆ ಹೆಚ್ಚಾಗಿ ಚತುರ್ಮಾತ್ರಾಲಯಕ್ಕೆ ಹೊಂದುವದನ್ನು ಗಮನಿಸಿ ಐದು ಆರನೆಯ ಸ್ತೋತ್ರಗಳಂದದಲ್ಲಿ ಆ ಲಯಕ್ಕೆ ಹೊಂದಿಸಿಕೊಂಡು ಹಾಡಲಾಗುತ್ತಿದೆ. ಈ ಸ್ತೋತ್ರದಲ್ಲಿ ಒಟ್ಟು ೨೫ ಚಂಡ, ೨ಅಬ್ಬ, ೪ ಸಿಂಹ ದಂಡಕ ಪಾದಗಳಿವೆ.

ವೃತ್ತ ಪರಿವರ್ತನೆ

ಛಂದಸ್ಸಿನ ದೃಷ್ಟಿಯಿಂದ ೧೦ನೆಯ ಸ್ತೋತ್ರ ಮಾತ್ರಾಬಂಧವನ್ನು ಅಕ್ಷರ ಬಂಧಕ್ಕೆ ಹೊಂದಿಸಿ ಪದ್ಯಗಳನ್ನು ಉಭಯ ಛಂದಸ್ಸಿಗೆ ಪರಿವರ್ತಿಸಿದ ಪ್ರಯೋಗ ದಂತಿದೆ. ಈ ಸ್ತೋತ್ರದಲ್ಲಿ ಆಚಾರ್ಯರು ವಿಷ್ಣು ಸರ್ವೋತ್ತಮನನ್ನು ಪರಿಪರಿ ಯಿಂದ ಸಂಬೋಧಿಸಿ, ನಿನ್ನ ಮಹಿಮಾತಿಶಯಗಳ ತಿಳಿವನ್ನು ಕರುಣಿಸೆಂದು ಕೋರಿ ರುವರು. ಸ್ತೋತ್ರದ ಕೊನೆಗೆ ಇದನ್ನು ಹರಿಗಾಥಾ ಎಂದಿರುವರಾದರೂ ೧೨ನೆಯ ಪದ್ಯದಲ್ಲಿರುವ 'ಅಸನೋತ್ಪುಲ್ಲ ಸಪುಷ್ಪಕ ಸಮವರ್ಣಾ' ಪದಗಳಲ್ಲಿ ಪರ್ಯಾಯದಿಂದ ಈ ಪ್ರಯೋಗದ ಸೂಚನೆಯಿದೆ. ಮಾತ್ರಾ ಬಂಧಗಳಲ್ಲಿ ಉತ್ಫುಲ್ಲಕವೆಂಬ ಸಮದ್ವಿಪದಿ ಇದೆ. ಪ್ರಾಚೀನರಲ್ಲಿ ವಿರಹಾಂಕನೊಬ್ಬನೇ ಇದನ್ನು ಲಕ್ಷಿಸಿರುವನು. ಇದರ ಪ್ರತಿ ಪಾದದಲ್ಲಿ ೫ ಚತುರ್ಮಾತ್ರಾಗಣಗಳು ಮತ್ತು ೨ ಗುರು, ಒಟ್ಟು ೨೪ ಮಾತ್ರೆಗಳು. ಅಕ್ಷರ ಛಂದಸ್ಸುಗಳಲ್ಲಿ ಅಕ್ಷರ, ಮಾತ್ರಾ ಛಂದಸ್ಸುಗಳಲ್ಲಿ ಮಾತ್ರೆ ಮೂಲ ಘಟಕ ಇರುವದರಿಂದ ಮೊದಲಿನದರಲ್ಲಿ ಮಾತ್ರೆಗಳ ಲೆಕ್ಕ, ಎರಡನೆಯದರಲ್ಲಿ ಅಕ್ಷರಗಳ ಲೆಕ್ಕ ಸರಿಹೋಗುವದಿಲ್ಲ. ಉದಾಹರಣೆಗಾಗಿ 'ರಾಮ' ಶಬ್ದದಲ್ಲಿ ೨ ಅಕ್ಷರಗಳಿದ್ದರೆ ಮಾತ್ರೆಗಳು ೩. ಉತ್ಫುಲ್ಲಕ ಮಾತ್ರಾಬಂಧದಲ್ಲಿ ಆಚಾರ್ಯರು ಕ್ಲಪ್ತ ಸ್ಥಾನಗಳಲ್ಲಿ ಕ್ಲಪ್ತ ಗಣಗಳನ್ನು ಬಳಸಿ ಅದನ್ನು ಉಭಯ ಅಥವಾ ಮಾತ್ರಾಕ್ಷರ ಸಮದ್ವಿಪದಿಯಲ್ಲಿ ಪರಿವರ್ತಿಸಿರುವರು. ಪರಾಂಬರಿಸಿರಿ—

> ಅವನ ಶ್ರೀಪತಿ ರಪ್ರತಿರಥಕೇಶಾಧಿ ಭವಾದೇ
> ಕರುಣಾಪೂರ್ಣವರ ಪ್ರದಚರಿತಂ ಜ್ಞಾಪಯ ಮೇತೇ ||

—ಇಲ್ಲಿಯ ೨ನೆಯ ಪಾದ ಮುಂದಣ ಪ್ರತಿ ದ್ವಿಪದಿಯಲ್ಲಿ ಪಲ್ಲವಿಯಾಗಿ ಬಂದಿದೆ. ಅಕ್ಷರಗಳ ಲೆಕ್ಕದಿಂದ ಇಲ್ಲಿ ಎರಡೂ ಪಾದಗಳಲ್ಲಿ ೧೭ ಅಕ್ಷರಗಳಿವೆ. ಮಾತ್ರೆ ಗಳ ಲೆಕ್ಕದಿಂದ ೨೪ ಮಾತ್ರೆಗಳು–೫ ಚತುರ್ಮಾತ್ರಾಗಣಗಳು ಮತ್ತು ೨ ಗುರು. ಉಳಿದ ದ್ವಿಪದಿಗಳಾದರೂ ಹೀಗೆಯೆ ಇವೆ. ಲಕ್ಷಣ ಗ್ರಂಥಗಳಲ್ಲಿ ಉತ್ಫುಲ್ಲಕ ಉಭಯ ಬಂಧವೆಂದು ಉಕ್ತವಾಗಿಲ್ಲ. ಬಹುಶಃ ಇದನ್ನು ಗಮನಿಸಿ ಆಚಾರ್ಯರು ಇದಕ್ಕೆ ಗಾಥಾ ಎಂದಂತಿದೆ. ಆಚಾರ್ಯರ ಈ ಪ್ರಯೋಗ ಮುಂದೆ ಕೃಷ್ಣಾವಧೂತರ (ಕ್ರಿ. ೧೮೫೫–೧೯೧೯) ರಾಘವೇಂದ್ರ ತಂತ್ರದಲ್ಲಿ ಪುನರಾವೃತ್ತವಾಗಿದೆ.

ಹನ್ನೊಂದನೆಯ ಸ್ತೋತ್ರದಲ್ಲಿ ಆಚಾರ್ಯರು ದೇವಾಧಿದೇವತೆಗಳಿಂದ ವಂದಿತ ಮತ್ತು ಮೋಕ್ಷಪ್ರದವಾದ ವಿಷ್ಣು ಪರಮಾತ್ಮನ ಪಾದಗಳಿಗೆ ಮರಮರಳಿ ವಂದಿಸಿರು ವರು. ಈ ಸ್ತೋತ್ರ ಅನುಷ್ಟುಪ್ ಶ್ಲೋಕಗಳಲ್ಲಿದೆ. ಮೊದಲಿನ ಶ್ಲೋಕದಲ್ಲಿಯ "ಆನಂದಸ್ಯಪದಂ ವಂದೇ ಬ್ರಹ್ಮೇಂದ್ರಾದ್ಯಭಿವಂದಿತಂ" ಪಾದ ಮುಂದಣ ಶ್ಲೋಕ ಗಳಲ್ಲಿ ಪಲ್ಲವಿಯಾಗಿ ಬಂದಿದೆ.

ಭಾವ ಸಮಾಧಿ

"ಆನಂದ ಮುಕುಂದ ಅರವಿಂದ ನಯನ | ಆನಂದ ತೀರ್ಥಪರಾನಂದವರದ" ಎಂಬ ದ್ವಿಪದಿಯಿಂದ ಪ್ರಾರಂಭವಾಗುವ ೧೨ನೆಯ ಸ್ತೋತ್ರದಲ್ಲಿ ಆಚಾರ್ಯರು ಪರಮಾತ್ಮನನ್ನು: ಹೇ ಆನಂದ, ಹೇ ಮುಕುಂದ, ಹೇ ಅರವಿಂದನಯನ ಎಂದು ಬಗೆಬಗೆಯಿಂದ ಸಂಬೋಧಿಸಿ, ಆನಂದತೀರ್ಥನೆಂಬ ನನಗೆ ಪರಮಾನಂದವನ್ನು ಕರುಣಿಸಿದ ನಿನ್ನನ್ನು ನಮಿಸುವೆನು, ಎಂದು ಸ್ತುತಿಸಿರುವರು. "ಆನಂದತೀರ್ಥಪರಾನಂದವರದ" ಪಾದ ಮುಂದಣ ದ್ವಿಪದಿಗಳಲ್ಲಿ ಪಲ್ಲವಿಯಾಗಿ ಬಂದಿದೆ. ಸಾಮಾನ್ಯ ಪರಿಸ್ಥಿತಿಯಲ್ಲಿ ಆಚಾರ್ಯರು ಇಂಥ ದ್ವಿಪದಿಗಳನ್ನು ಕೊನೆಯಿಲ್ಲದಷ್ಟು ಹೇಳಬಹುದಿತ್ತು. ಆದರೆ ಇಲ್ಲಿ ಹೀಗಿಲ್ಲ. ಒಂಬತ್ತು ದ್ವಿಪದಿಗಳ ನಂತರ ಭಾವಾಧಿಕ್ಯದಿಂದ ಶಬ್ದಗಳು ಹೊರಡದಂತಾಗಿ ಅವರು ಅದರಲ್ಲಿಯೆ ಸಮರಸರಾಗಿ ಮೌನರಾದಂತಿದೆ. ಬಾಲಕೃಷ್ಣನು ಉಡುಪಿಗೆ ಆಗಮಿಸಿದ ಸಂದರ್ಭದಲ್ಲಿ ಮೂಡಿಬಂದ ಆಚಾರ್ಯರ ಈ ಸ್ತೋತ್ರಗಳಿಗೆ ಇದಕ್ಕಿಂತ ಸುಂದರ ಮತ್ತು ಔಚಿತ್ಯಪೂರ್ಣ ಮುಕ್ತಾಯ ಬೇರೆ ಯಾವುದಿದೆ? ಮಿಕ್ಕೆಲ್ಲ ಸ್ತೋತ್ರಗಳಿಗೆ ಉಪಸಂಹಾರಾತ್ಮಕ ಪದ್ಯಗಳಿವೆ. ಈ ಸ್ತೋತ್ರಕ್ಕೆ ಮಾತ್ರ ಇಲ್ಲದಿರುವದು ಈ ಅನುಮಾನಕ್ಕೆ ಪೂರಕವಾಗಿದೆ, ಎಂದರೆ ತಪ್ಪಾಗದು. ಇಷ್ಟೊಂದು ಭಾವಾದಿಕ್ಯದಿಂದ ತುಳುಕುವ ಇಲ್ಲಿಯ ಪದ್ಯಗಳ ಛಂದಸ್ಸನ್ನು, ಹಾಡುಗಾರಿಕೆಯನ್ನು ಇವುಗಳ ಸಾಮಾನ್ಯ ನೀತಿ ನಿಯಮಗಳಿಂದ ನಿರುಕಿಸುವದು ಧಾರ್ಷ್ಟ್ಯವೇ ಸೈ. ಬದಲಾಗಿ ಭಾವಕ್ಕೆ ಬಾಧೆ ಬರದಂತೆ ಛಂದಸ್ಸು ಮತ್ತು ಹಾಡುಗಾರಿಕೆಯ ರೀತಿನೀತಿಗಳನ್ನು ತಕ್ಕ ಮಾರ್ಪಾಟುಗಳೊಂದಿಗೆ ಅನ್ವಯಿಸಿಕೊಂಡು ಆ ರೀತಿ ಈ ಸ್ತೋತ್ರವನ್ನು ಹಾಡುವದೇ ಸೂಕ್ತ ಮತ್ತು ಶ್ರೇಯಸ್ಕರ ಮಾರ್ಗ ಎನ್ನಬಹುದು.

ಕಂದ-ಆರ್ಯಾಗೀತಿ

ಯಮಕಭಾರತ ಶ್ರೀಮದಾಚಾರ್ಯರ ಇನ್ನೊಂದು ಚಿಕ್ಕ ಕೃತಿ. ಕೃಷ್ಣಕಥೆ. ಪ್ರಾಸದಂತೆ ಯಮಕವಾದರೂ ಶಬ್ದಾಲಂಕಾರ. ಯಮಕ, ಗೋಮೂತ್ರಿಕೆ, ಏಕಾಕ್ಷರಬಂಧ, ಚಕ್ರಬಂಧ, ಮೊದಲಾದವನ್ನು ಚಿತ್ರಕಾವ್ಯಗಳಲ್ಲಿ ಸೇರಿಸಿ 'ಇವು ದುಷ್ಕರ ಕಾವ್ಯಂಗಳ್' ಎಂದಿರುವನು ನೃಪತುಂಗ. ಸಂಸ್ಕೃತ ಲಾಕ್ಷಣಿಕ ಭೋಜನಾದರೂ ಹೀಗೆಯೆ ಹೇಳಿರುವನು. ಯಾವುದೊಂದು ಪದ ಇಲ್ಲವೆ ಪದಭಾಗ ಪಾದದ ಆದಿ, ಮಧ್ಯ, ಅಂತಗಳಲ್ಲಿ ನಿಯತವಾಗಿ ಪುನರಾವೃತ್ತವಾಗುವದು ಯಮಕ. ಈ ಮೂರು ಮುಖ್ಯ ಭೇದಗಳಲ್ಲದೆ ಆದಿಮಧ್ಯ, ಆದ್ಯಂತ, ಮಧ್ಯಾಂತ ಮೊದಲಾದ ಉಪಭೇದಗಳಿವೆ. ಪುನಃ ಏಕಪಾದ, ದ್ವಿಪಾದ, ಎಂದು ಮುಂತಾಗಿ ಇವುಗಳ ವರ್ಗೀಕರಣವಿದೆ. ತಮ್ಮ ಈ ಕೃತಿಯಲ್ಲಿ ಆಚಾರ್ಯರು ಬಗೆಬಗೆಯ ಯಮಕಗಳನ್ನು ರಚಿಸಿರುವರು. ಜೊತೆಗೆ ಒಂದು 'ಭಾಭಾಭಾಭಾ....' ಎಂಬ ಏಕಾಕ್ಷರ ಪದ್ಯವಿದೆ.

ಬಹುಸಂಖ್ಯೆ ಪದ್ಯಗಳು ಆರ್ಯಾಗೀತಿಯಲ್ಲಿವೆ. ಆರ್ಯಾಗೀತಿ ಆರ್ಯೆಯ ಒಂದು ಭೇದ. ಸಂಸ್ಕೃತ ಪ್ರಾಕೃತಗಳಲ್ಲಿ ಇವು ದ್ವಿಪದಿಗಳು. ಆರ್ಯಾಗೀತಿಯ ಎರಡೂ ಪಾದಗಳಲ್ಲಿ ೮ ಚತುರ್ಮಾತ್ರಾ ಗಣಗಳು; ವಿಷಮ ಸ್ಥಾನದಲ್ಲಿ ಜ-ಗಣ (U–U) ಬರಕೂಡದು ; ೬ ನೆಯ ಚತುರ್ಮಾತ್ರಾ ಜ-ಗಣ ಇಲ್ಲವೆ ಸರ್ವ ಲಘು ಇರಲೇಬೇಕು. ಸಂಸ್ಕೃತದ ಆರ್ಯಾಗೀತಿಯೆ ಕನ್ನಡದ ಕಂದ. "ಕರ್ಣಾಟಾದಿ ಪದ್ಯೈಃ ಆರ್ಯಾಗೀತೌ ಕಂದಃ ಸ್ಯಾತ್" ಎಂದಿರುವನು ಶಾರ್ಙ್ಗದೇವ, ಸಂಗೀತ ರತ್ನಾಕರದಲ್ಲಿ. ಟೀಕೆಯಲ್ಲಿ ಸಿಂಹಭೂಪಾಲ : ಕರ್ಣಾಟಾದಿ ಭಾಷಾಪದ್ಯೈಃ ಆರ್ಯಾಗೀತಿ ಸಂಜ್ಞಕೇ ಛಂದಸಿ ಯೋ ವಿರಚ್ಯತೇ ಸಕಂದ ಇತ್ಯುಚ್ಯತೇ, ಅಂದರೆ ಕನ್ನಡ ಮೊದಲಾದ ಭಾಷೆಗಳಲ್ಲಿ ರಚಿತವಾದ ಆರ್ಯಾಗೀತಿಯೇ ಕಂದ, ಎಂದು ಶಾರ್ಙ್ಗದೇವನ ಈ ಉಕ್ತಿಯನ್ನು ಸ್ಪಷ್ಟೀಕರಿಸಿರುವನು. ಆದರೆ ಕನ್ನಡದಲ್ಲಿ ಇದು ಅರ್ಧಸಮ ಚತುಷ್ಪದಿ. ವಿಷಮ ಪಾದಗಳಲ್ಲಿ ೩ ಮತ್ತು ಸಮಪಾದಗಳಲ್ಲಿ ೫ ಚತುರ್ಮಾತ್ರಾ ಗಣಗಳು. ಉಳಿದ ಲಕ್ಷಣಗಳು ಸಂಸ್ಕೃತದಲ್ಲಿರುವಂತೆಯೆ. ಸಂಸ್ಕೃತದಲ್ಲಿ ಮತ್ತು ಸಂಸ್ಕೃತ ಪದ್ಯ ರಚನೆಗಾಗಿದ್ದರೂ ಈ ಮೊದಲು ಉಲ್ಲೇಖಿಸಿದ ಮಂದಾರ ಮರಂದ ಚಂಪುವಿನ ಕರ್ತ ಕೃಷ್ಣಕವಿ ಆರ್ಯಾಗೀತಿ ಮತ್ತು ಆರ್ಯಾಜಾತಿಯ ಇತರ ಭೇದಗಳನ್ನು ಹೀಗೆಯೆ ಅಂದರೆ ಅರ್ಧಸಮ ಚತುಷ್ಪದಿಗಳೆಂದೇ ವಿವರಿಸಿರುವನು. ಇದೊಂದು ಆಚಾರ್ಯರ ಯಮಕ ಭಾರತದಲ್ಲಿಯ ಆರ್ಯಾಗೀತಿ. ಕನ್ನಡದಲ್ಲಿ ಇದ್ದಿದ್ದರೆ ಯಮಕಯುಕ್ತ ಕಂದವಾಗುತ್ತಿತ್ತು—

ನೀತೋ ವಸುದೇವೇನ
ಸ್ವತತೇನ ಸಗೋಕುಲಸ್ಸುವಸುದೇವೇನ ।
ತತ್ರ ಯಶೋದಾ ತನಯಂ
ಮೇನೇ ಕೃಷ್ಣಂ ಸ್ವಕೀಯ ಮವದಾತನಯಂ ॥

—ಅಂತಯಮಕ. ಪ್ರಥಮಾರ್ಧದಲ್ಲಿ 'ವಸುದೇವೇನ' ಮತ್ತು ದ್ವಿತೀಯಾರ್ಧದಲ್ಲಿ 'ತನಯಂ' ಪದ ಪುನರಾವೃತ್ತವಾಗಿದೆ.

ತಾಲಾನುಗ ಅರ್ಧಸಮ ಅಕ್ಷರ ವೃತ್ತ

ಆಚಾರ್ಯರು ರಚಿಸಿದ 'ಕಂದುಕಸ್ತುತಿ' ಇನ್ನೊಂದು ಚಿಕ್ಕ ಕೃತಿ. ಬಾಲ್ಯದಲ್ಲಿ ರಚಿಸಿದ್ದು. ಕೃಷ್ಣಸ್ತುತಿ. ಎರಡೇ ಪದ್ಯಗಳಿವೆ. ಇದರ ಗತ್ತಿಗನುಸರಿಸಿ ಚಂಡು ಕುಣಿಸುತ್ತಿದ್ದರಂತೆ. ಇದು ಮೊದಲನೆಯ ಪದ್ಯ—

ಅಂಬರ ಗಂಗಾ ವಂದಿತ ಪಾದಃ
ಪದತಲ ವಿದಲಿತ ಗುರುತರ ಶಕಟಃ ।
ಕಾಲಿಯನಾಗಕ್ಷ್ವೇಡ ನಿಹಂತಾ ।
ಸರಸಿಜನವದಲ ವಿಕಸಿತ ನಯನಃ ॥

—ಎರಡನೆಯ ಪದ್ಯವಾದರೂ ಹೀಗೆಯೆ ರಚಿತವಾಗಿದೆ. ಪ್ರತಿಪಾದದಲ್ಲಿ ೪ ಚತುರ್ಮಾತ್ರ ಗಣಗಳು ಇರುವದರಿಂದ ಮತ್ತು ತಾಲದ ಗಣನೆಗೆ ಹೊಂದುವದರಿಂದ ಇದೊಂದು ಮಂದಾನಿಲ ರಗಳೆಗೆ ಬಳಸುವ ಷೋಡಶ ಮಾತ್ರಾಬಂಧವೆಂದು ಬಗೆಯು ವಂತಿದೆ. ಆದರೆ ಇದು ೪ ಚತುರ್ಮಾತ್ರಾ ಓಟಕ್ಕೆ ಹೊಂದುವ ಅರ್ಧಸಮ ವರ್ಣ ವೃತ್ತ. ೧ ಮತ್ತು ೩ ನೆಯ ಪಾದಗಳು ರುಕ್ಮವತೀ (ಭ-ಮ-ಸ-ಗ, ಪಾದಾಂತಯತಿ) ೨ ಮತ್ತು ೪ ನೆಯ ಪಾದಗಳು ರುಚಿರಾ (ನ-ನ-ನ-ನ-ಸ, ಯತಿ ೪, ೪). ಧಾಟಿ, ಲಯ, ಒಂದೇ ಇದ್ದರೂ ಈ ಕೂಡಿಕೆಯಿಂದ ಉಂಟಾಗುವ ಗತಿ ವೈಚಿತ್ರ್ಯ ಗಮ ನಾರ್ಹವಿದೆ. ರುಕ್ಮವತಿ ಪ್ರಸಿದ್ಧ ಪ್ರಾಚೀನ ವೃತ್ತಗಳಲ್ಲಿ ಒಂದು. ನಾಗವರ್ಮ ಗುಣಚಂದ್ರರು ಇದನ್ನು ಮಂದಾನಿಲ ಎಂದಿರುವರು. ಮಂದಾನಿಲ ರಗಳೆಗೆ ಇದೇ ಹೆಸರಿರುವುದು ವಿಚಾರಿಸಬೇಕಾದ ಅಂಶ. ರುಚಿರಾ ವೃತ್ತವನ್ನು ಜಯಕೀರ್ತಿ ಒಬ್ಬನೇ ವಿವರಿಸಿರುವನು. ಇವೇ ಗಣಗಳು, ಆದರೆ ಯತಿ ಭೇದದಿಂದ ಬೇರೆ ೩ ವೃತ್ತಗಳಾ ಗಿವೆ. ಇವುಗಳಲ್ಲಿ ಮಣಿಗಣನಿಕರ ಒಂದು. ಇದರಲ್ಲಿ ಯತಿ ೮ ಕ್ಕೆ. ನಾಗವರ್ಮ ಜಯಕೀರ್ತಿಯರಿಂದ ಲಕ್ಷಿಸಲ್ಪಟ್ಟಿದೆ. ಯತಿ ೬ ಕ್ಕಿರುವಾಗ ಸ್ರಕ್ ಮತ್ತು ೭ ಕ್ಕಿರು ವಾಗ ಶಶಿಕಲಾ. ಜಯಕೀರ್ತಿ ಗುಣಚಂದ್ರರಿಂದ ಲಕ್ಷಿತವಾಗಿದೆ.

ಕೇವಲ ಲಯವನ್ನಾಧರಿಸಿ ಪ್ರಾಚೀನ ಛಂದೋಬಂಧಗಳನ್ನು ಗುರುತಿಸುವುದು ಅದೆಂತು ತಪ್ಪುದಾರಿಗೆ ಎಳಸುವುದೆಂಬುದಕ್ಕೆ ಇದೊಂದು ಉದಾಹರಣೆ.

ನಾರಾಯಣ ಪಂಡಿತರು

ಅನುಪ್ರಾಸ, ಪಲ್ಲವಿ ಮತ್ತು ರಸೋಚಿತ ಪದಯೋಜನೆಯ ದೃಷ್ಟಿಯಿಂದ ನಾರಾಯಣ ಪಂಡಿತರ ನೃಸಿಂಹ ಸ್ತುತಿ ಉಲ್ಲೇಖನೀಯವಿದೆ. ನಾರಾಯಣ ಪಂಡಿ ತರು ಆಚಾರ್ಯರ ಸಾಕ್ಷಾತ್ ಶಿಷ್ಯರಿದ್ದ ತ್ರಿವಿಕ್ರಮ ಪಂಡಿತರ ಮಕ್ಕಳು. ಸುಮಧ್ವ ವಿಜಯವೆಂಬ ಶ್ರೀಮದಾಚಾರ್ಯರ ಚರಿತ್ರ ಕಾವ್ಯವನ್ನು ರಚಿಸಿ ಅಮರರಾಗಿರುವರು. ರೌದ್ರರಸ ಪ್ರಧಾನವಿರುವ ಅವರ ನೃಸಿಂಹ ಸ್ತುತಿ ಮಾಲಿನೀ (ನ-ನ-ಮ-ಯ-ಯ, ಯತಿ ೮) ವೃತ್ತದಲ್ಲಿದೆ. ಇದೊಂದು ಉದಾಹರಣೆ—

ಹಠಲುಠದಲಧಿಸ್ತೋಮ, ತ್ಕಂಠದಷ್ಟೋಷ್ಠವಿದ್ಯುತ್
ಸಠಶಠಕಠಿನೋರಃ, ಪೀಠಭಿತ್ಸುಷ್ಠು ನಿಷ್ಠಾ ।
ಪಠತಿನುತವಕಂಠಾ, ಧಿಷ್ಠಘೋರಾಂತ್ರಮಾಲಾ
ದಹ ದಹ ನರಸಿಂಹಾ, ಸಹ್ಯವೀರ್ಯಾಹಿತಂಮೇ ॥

ಕೊನೆಯ ಪಾದ ಪಲ್ಲವಿಯಾಗಿ ಉಳಿದ ಎಲ್ಲ ಪದ್ಯಗಳಲ್ಲಿ ಬಂದಿದೆ. ಹಿರಣ್ಯ ಕಶ್ಯಪನ ಹೊಟ್ಟೆಯನ್ನು ಬಗೆದು ಕರಳುಗಳ ಮಾಲೆಯನ್ನು ಧರಿಸಿದ ಕ್ರೋಧಾವಿಷ್ಟ ನರಸಿಂಹಸ್ವಾಮಿಯ ಬಣ್ಣನೆ. ಬೆಂಕಿಯ ಕಿಡಿಗಳಂತೆ ಸಿಡಿದು ಬರುವ ಟ-ಠ ಪದಾಕ್ಷರ ಗಳ ಪುನರಾವೃತ್ತಿಯನ್ನು ಪರಾಂಬರಿಸಬೇಕು. ಪ್ರತಿಪಾದವು ಆದಿ ಮಧ್ಯ ಪ್ರಾಸ

ಗಳಿಂದ (ಇಲ್ಲಿ ೨ ಮತ್ತು ೧೦) ಯುಕ್ತವಾಗಿದೆ. ಕೊನೆಯ ಪಾದ ಪಲ್ಲವಿ ಇರುವವ ರಿಂದ ಅಲ್ಲಿ ಪ್ರಾಸಾಕ್ಷರ ಬೇರೆಯಾಗಿದೆ. ಆದರೆ ಈ ವ್ಯವಸ್ಥೆ ಎಲ್ಲೆಡೆ ಏಕ ರೂಪದಲ್ಲಿ ಬಂದಿಲ್ಲ. ಸಂಸ್ಕೃತದಲ್ಲಿ ಆದಿ ಮಧ್ಯ ಅಂತ ಎಂಬ ನಿಯತ ಪ್ರಾಸಗಳಿಗಿಂತ ಅನು ಪ್ರಾಸಕ್ಕೆ ಪ್ರಾಶಸ್ತ್ಯ ಇರುವದರಿಂದ ಹೀಗಾದಂತೆ ತೋರುತ್ತದೆ.

ವಾದಿರಾಜರು

ವಾದಿರಾಜರು (ಕ್ರಿ. ಶ. ೧೪೮೦-೧೬೦೦) ಉಡುಪಿಯ ಅಷ್ಟ ಮಠಗಳಲ್ಲಿ ಒಂದಿರುವ ಸೋದೆ ಮಠದ ಪೀಠಾಧಿಪರು. ವಿಭೂತಿಪುರುಷರು. ಕುಶಲ ಸಂಘಟ ಕರು. ಉಡುಪಿ ಶ್ರೀಕೃಷ್ಣನ ಪೂಜೆಗಾಗಿ ಪೀಠಾಧಿಪರ ಸದ್ಯ ಪ್ರಚಾರದಲ್ಲಿರುವ ದ್ವಿ ವಾರ್ಷಿಕ ಪರ್ಯಾಯ ಸಂಪ್ರದಾಯವನ್ನು ಅವರೇ ಪ್ರಾರಂಭಿಸಿದರೆಂಬ ಐತಿಹ್ಯ ವಿದೆ. ದಾರ್ಶನಿಕರು, ಸರಸಕವಿಗಳು. ಸಂಸ್ಕೃತ ಕನ್ನಡ ಎರಡರಲ್ಲೂ ಅನೇಕ ಗ್ರಂಥ ಗಳನ್ನು ರಚಿಸಿರುವರು. ತುಳು ಭಾಷೆಯಲ್ಲಿ ಸಹ ಕೆಲವು ದೇವರನಾಮುಗಳನ್ನು ರಚಿ ಸಿರುವರು. ಸಂಸ್ಕೃತದಲ್ಲಿರುವ ಅವರ ರೌಪ್ಯಪೀಠ ಕೃಷ್ಣಸ್ತುತಿ ಮತ್ತು ದಶಾವತಾರ ಸ್ತೋತ್ರ ಲೋಕಪ್ರಿಯವಿದ್ದು ಕನ್ನಡದ ಮೆರಗಿನಿಂದ ಮಿಂಚುತ್ತವೆ. ಇವು ರೌಪ್ಯ ಪೀಠ ಕೃಷ್ಣಸ್ತುತಿಯಲ್ಲಿಯ ಪಲ್ಲವಿ ಮತ್ತು ಪದ್ಯ—

ಪಾಲಯಾಚ್ಯುತ ಪಾಲಯಾಜಿತ ಪಾಲಯಾಕಮಲಾಲಯ।
ಲೀಲಯಾಧೃತ ಭೂಧರಾಂಬು ರುಹೋದರ ಸ್ವಜನೋದರ ॥ಪ॥
ಮಧ್ವಮಾನಸ ಪದ್ಮಭಾನು ಸಮಂಸ್ಮರ ಪ್ರತಿ ಸಂಸ್ಮರ
ಸ್ನಿಗ್ಧನಿರ್ಮಲ ಶೀತಕಾಂತಿಲಸನ್ಮುಖಂ ಕರುಣೋನ್ಮುಖಂ।
ಹೃದ್ಯಕಂಬು ಸಮಾನ ಕಂಧರ ಮಕ್ಷಯಂ ದುರಿತಕ್ಷಯಂ
ಸ್ನಿಗ್ಧಸಂಸ್ತುತ ರೌಪ್ಯಪೀಠ ಕೃತಾಲಯಂ ಹರಿಮಾಲಯಂ ॥ಪದ್ಯ॥

—ಆದಿ ಪ್ರಾಸ, ಪಲ್ಲವಿ, ಯಮಕಗಳಿಂದ ಕೂಡಿದ ಇದು ಮಲ್ಲಿಕಾಮಾಲೆ (ರ-ಸ-ಜ-ಜ-ಭ-ರ, ಯತಿ ೫, ೮). ಕನ್ನಡ ಕವಿಗಳ ಪ್ರೀತಿಯ ಛಂದಸ್ಸು. ವಾದಿ ರಾಜರ ತರುವಾಯ ಆಗಿಹೋದ ಆಚಾರ್ಯರ ಒಬ್ಬಿಬ್ಬ ಶಿಷ್ಯರನ್ನು ಬಿಟ್ಟರೆ ಸಂಸ್ಕೃತ ದಲ್ಲಿ ಇದು ವಿರಳ. ಪಿಂಗಲ ಛಂದಃಶಾಸ್ತ್ರದಲ್ಲಿ ವಿಬುಧಪ್ರಿಯಾ ಎಂದು ಹೆಸರಿಸಲ್ಪಟ್ಟಿ ದ್ದರೂ ಅದು 'ಅನುಕ್ತಂ ಗಾಥಾ' ಸೂತ್ರದ ಕೆಳಗೆ ಕುಡ್ಮಲದಂತಿ ಮೊದಲಾದ ೧೬ ವೃತ್ತಗಳಲ್ಲಿ ಬಂದಿರುವದರಿಂದ ನಂತರ ಅನ್ಯರಿಂದ ಸೇರಿಸಲ್ಪಟ್ಟಿದೆಯೆಂಬ ಅಭಿಪ್ರಾ ಯವಿದೆ. ನಾಗವರ್ಮ ಇದನ್ನು ತಾನೇ ನಿರ್ಮಿಸಿರುವೆನೆಂದು ಹೇಳಿಕೊಂಡಿರುವನು.*

* ಛಾಟಯಲ್ಲಿ ಇದಕ್ಕೆ ಹೊಂದಿಕೊಂಡಿರುವ ತರಳ ವೃತ್ತದ ವಿಷಯದಲ್ಲೂ ಹೀಗೆಯೇ ಹೇಳಿಕೊಂಡಿರುವನು. ಕಾಲಕ್ರಮದಲ್ಲಿ ಇವನಿಗಿಂತ ಮೊದಲಿಗನಾದ ಪಂಪನ ವಿಕ್ರಮಾರ್ಜುನ ವಿಜಯದಲ್ಲಿ ಇವೆರಡೂ ವೃತ್ತಗಳ ಪ್ರಯೋಗವಿರುವದರಿಂದ ಇದು ವಿಚಾರಣೀಯ.

ಇದನ್ನು ಲಕ್ಷಿಸಿದ ಸಂಸ್ಕೃತ ಲಾಕ್ಷಣಿಕರಲ್ಲಿ ಜಯಕೀರ್ತಿ ಮೊದಲಿಗ. ಜಯಕೀರ್ತಿ ನಾಗವರ್ಮನ ಸಮಕಾಲೀನ ಅಥವಾ ಸ್ವಲ್ಪ ಈಚಿನವ. ಆತ ಇದಕ್ಕೆ ಮಲ್ಲಿಕೋತ್ತರ ಮಾಲಿಕಾ ಎಂದಿರುವನು. ಇದನ್ನು ಲಕ್ಷಿಸಿದ ಇನ್ನೊಬ್ಬ ದಾಕ್ಷಿಣಾತ್ಯ ಲಾಕ್ಷಣಿಕ ವೃತ್ತರತ್ನಾಕರದ ಕೇದಾರಭಟ್ಟ. ಹರನರ್ತನ ಎಂದಿರುವನು ಆತ ಇದಕ್ಕೆ. ಉಳಿದ ಇಬ್ಬರು, ಹೇಮಚಂದ್ರ ಮತ್ತು ಪ್ರಾಕೃತ ಪೈಂಗಲದ ಕರ್ತ, ಇವನ ನಂತರದವರು.

ಪ್ರಾರಂಭದಲ್ಲಿ ಪಲ್ಲವಿಯನ್ನು ಹೇಳುವದು ವಾದಿರಾಜರ ಸಮಯದಲ್ಲಿ ಸರ್ವತ್ರ ರೂಢವಾಗಿತ್ತೆಂದು ತೋರುತ್ತದೆ. ವೇದಕಾಲದಿಂದ ಪದ್ಯದ ಕೊನೆಯ ಪಾದವು ಪಲ್ಲವಿಯಂತೆ ಬಳಸಲ್ಪಡುತ್ತಿತ್ತು. ಮುಖ್ಯ ಪದ್ಯವನ್ನು ಶೀರ್ಷಕವಾಗಿಸಿ ಪಲ್ಲವಿಯನ್ನು ಪ್ರತ್ಯೇಕವಾಗಿಸಿದ ಉದಾಹರಣೆ ಆಚಾರ್ಯರ ದ್ವಾದಶಸ್ತೋತ್ರಗಳಲ್ಲಿಯ ೮ನೆಯ 'ಪ್ರೀಣಯಾಮೋ ವಾಸುದೇವಂ' ಸ್ತೋತ್ರದಲ್ಲಿದೆ. ಪಲ್ಲವಿಯನ್ನು ಪ್ರಾರಂಭದಲ್ಲಿಯೇ ಹೇಳುವ ಉಪಕ್ರಮವನ್ನು ಪಶ್ಚಿಮ ಚಾಲುಕ್ಯದೊರೆ ಸೋಮೇಶ್ವರ (ಕ್ರಿ. ೧೧೩೨) ಪ್ರಚಾರದಲ್ಲಿ ತಂದನು. ರೌಪ್ಯಪೀಠ ಕೃಷ್ಣ ಸ್ತುತಿಯಲ್ಲಿ ವಾದಿರಾಜರು ಸೋಮೇಶ್ವರನ ಈ ಪದ್ಧತಿಯನ್ನು ಅನುಸರಿಸಿರುವರು. ಪದ್ಯದ ಕೊನೆಯ ಪಾದವನ್ನು ಪಲ್ಲವಿಯನ್ನಾಗಿಸಿದ ಉದಾಹರಣೆಗಳು ಅಲ್ಲಲ್ಲಿ ಕಾಣಸಿಗುತ್ತಿದ್ದರೂ ಹೆಚ್ಚಾಗಿ, ಇಂದಿಗೂ ಸಹ, ಸೋಮೇಶ್ವರನ ಪದ್ಧತಿಯೇ ನಡೆದುಬಂದಿದೆ. ಉತ್ತರ ಭಾರತದ ಧ್ರುವಪದ (ಧ್ರುಪದ)ಗಳಾದರೂ ಇದೇ ಬಗೆಯವು. ಪಲ್ಲವಿ ಧ್ರುವಪದ ಸಮಾನಾರ್ಥಕ ಪದಗಳು. ಧ್ರುವಪದಗಳು ಸಹ ಭಾರತೀಯ ಸಂಗೀತಕ್ಕಿರುವ ಕರ್ನಾಟಕದ ಕೊಡುಗೆ. ಕರ್ನಾಟಕದ ಸುಪ್ರಸಿದ್ಧ ವಾಗ್ಗೇಯಕಾರ ಗೋಪಾಲ ನಾಯಕ (ಕ್ರಿ. ೧೨ ಶ.) ಇವನ್ನು ಅಲ್ಲಿ ಪ್ರಚಾರದಲ್ಲಿ ತಂದನು.

ವೃತ್ತವಿನ್ಯಾಸ–ಅಶ್ವಧಾಟಿ

ವಾದಿರಾಜರ ದಶಾವತಾರ ಸ್ತೋತ್ರ ಮತ್ತೇಭ (ತ-ಭ-ಯ-ಜ-ಸ-ರ-ನ-ಗ, ಯತಿ ೭) ವೃತ್ತದಲ್ಲಿದೆ. ಖ್ಯಾತ ಕರ್ನಾಟಕಗಳಲ್ಲಿಯ ಮತ್ತೇಭಕ್ಕೂ ಇದಕ್ಕೂ ವ್ಯತ್ಯಾಸವಿದೆ. ಅದು ಮತ್ತೇಭವಿಕ್ರೀಡಿತ. ಈ ಮತ್ತೇಭ ಕೃಷ್ಣಕವಿಯ ಮಂದಾರಮರಂದ ಚಂಪೂವಲ್ಲಿ ಮಾತ್ರ ಉಕ್ತವಾಗಿದೆ. ಮತ್ತೇಭಕ್ಕೆ ಆದಿ ಮತ್ತು ಖಂಡ ಪ್ರಾಸಗಳನ್ನಿಟ್ಟರೆ ಅಶ್ವಧಾಟಿಯಾಗುವದು. ಇದಕ್ಕೆ ಅಮೃತಧ್ವನಿಯೆಂಬ ಇನ್ನೊಂದು ಹೆಸರಿದೆ. ಕುದುರೆಯ ತಾಲಬದ್ಧ ಹೆಜ್ಜೆಗಳಂತೆ ಗತಿ ಸಾಗುವದು. ಅಶ್ವಧಾಟಿಯ ಪ್ರಾಚೀನ ಉದಾಹರಣೆ ರಾಮಾನುಜೀಯ ಪಂಥದ ಸುಪ್ರಸಿದ್ಧ ವೇದಾಂತದೇಶಿಕರ (ಕ್ರಿ. ೧೨೬೮–೧೩೬೯) ಯಾದವಾಭ್ಯುದಯ ಕಾವ್ಯದಲ್ಲಿದೆ. ವಾದಿರಾಜರು ಹಯಗ್ರೀವ ರೂಪಿ ವಿಷ್ಣು ಪರಮಾತ್ಮನ ಪರಮೋಪಾಸಕರು. ವಿಷ್ಣುವಿನ ದಶಾವತಾರಗಳ ಮತ್ತು ತಮ್ಮ ಉಪಾಸ್ಯ ದೇವತೆಯ ಬಣ್ಣನೆ ಇರುವ

ಈ ಸ್ತೋತ್ರವನ್ನು ಅವರು ಅಶ್ವಧಾಟಿಯಲ್ಲಿ ರಚಿಸಿರುವದು ಔಚಿತ್ಯಪೂರ್ಣವಿದೆ. ಇದೊಂದು ಅದರಲ್ಲಿಯ ಪದ್ಯ ಕೃಷ್ಣಾವತಾರಕ್ಕೆ ಸಂಬಂಧಿಸಿದೆ—

ವೃಂದಾವನಸ್ಥಪಶು, ವೃಂದಾವನಂ ವಿನುತ, ವೃಂದಾರಕೈಕ ಶರಣಂ
ನಂದಾತ್ಮಜಂನಿಹಿತ, ನಿಂದಾಕೃದಾಸುರಜ, ನಂದಾಮುಬದ್ಧಜಠರಂ।
ವೃಂದಾಮಹೇವಯಮು, ಮಂದಾವದಾತರುಚಿ, ಮಂದಾರಕಾಕ್ಷವದನಂ
ಕುಂದಾಲಿದಂತಮುತ, ಕುಂದಾಸಿತಪ್ರಭತ, ನುಂದಾವರಾಕ್ಷಸಹರಂ॥

ವಾದಿರಾಜರ ನಂತರ ಅಶ್ವಧಾಟಿಯ ಪ್ರಯೋಗವು ಸತ್ಯಪರಾಕ್ರಮ (ಕ್ರಿ. ೧೮೮೦) ಸ್ತೋತ್ರ ಮತ್ತು ಕೃಷ್ಣಾವಧೂತರ ರಾಘವೇಂದ್ರ ತಂತ್ರದಲ್ಲಿ ಕಾಣಸಿಗುತ್ತದೆ. ವಾದಿರಾಜರ ಅಶ್ವಧಾಟಿ ನಡಿಗೆ ಕುದುರೆಯ ಲಯ. ಅದರ ನಾಗಾಲೋಟದ ಲಯವೇ ಬೇರೆ. ಅದು ಕೃಷ್ಣಾವಧೂತರ ರಾಘವೇಂದ್ರ ತಂತ್ರದಲ್ಲಿ ಕಾಣಸಿಗುತ್ತದೆ. ಪರಾಂಬರಿಸಿರಿ—

ಚಂಡೀಶ ಕಾಂಡೇಶ ಪಾಖಂಡ ವಾಕ್ಕಾಂಡ ತಾಮಿಶ್ರಮಾರ್ತಾಂಡ ಪಾಷಂಡ ಭೋ।
ಶ್ರೀರಾಘವೆಂದ್ರಾರ್ಯ ಶ್ರೀರಾಘವೇಂದ್ರಾರ್ಯ ಪಾಹಿಪ್ರಭೋ॥

ಈ ಅಶ್ವಧಾಟಿಯ ಲಕ್ಷಣ ಪ್ರತಿ ಪಾದದಲ್ಲಿ ೭ ತ-ಗಣಗಳು ಕೊನೆಯಲ್ಲಿ ೧ ಗುರು. ವೃತ್ತದ ಹೆಸರು, ಅಕ್ಷರ ಸಂಖ್ಯೆ, ಗಣಗಳ ಸಂಖ್ಯೆ, ಪ್ರಾರಂಭದ ಗಣ ಮತ್ತು ಕೊನೆಯ ಮಾತ್ರೆ, ಇವುಗಳನ್ನು ಗಮನಿಸಿದಾಗ ಇದಾದರೂ ಮತ್ತೇಭದಿಂದ ರೂಪಗೊಂಡ ವೃತ್ತವೆಂದು ತೋರುತ್ತದೆ. ಕೃಷ್ಣಾವಧೂತರು ಇದನ್ನು ದ್ವಿಪದಿಯಾಗಿಸಿರುವರು. ಮೊದಲನೆಯ ಪಾದ ಪೂರ್ಣ (೭ ತ ೧ ಗ), ಎರಡನೆಯದು ಪಲ್ಲವಿಯಾಗಿದ್ದು ಅದರಲ್ಲಿ ೨ ಗಣಗಳು ಕಡಿಮೆ ಇವೆ. ಎರಡನೆಯ ಪಾದದಲ್ಲಿ ೨ ಗಣಗಳನ್ನು ಕಡಿಮೆ ಮಾಡಿ ಕುದುರೆಯ ನಾಗಾಲೋಟದ ಗತಿಗೆ ಅನುಗುಣವಾದ ಪಾದಾಂತ ಸ್ವರ ನ್ಯಾಸಕ್ಕೆ ಇಂಬು ಮಾಡಿಕೊಟ್ಟಿರುವರು.

ಚುರಮುರಿ ಶೇಷಗಿರಿರಾಯರ ಶಾಕುಂತಲದಲ್ಲಿ ಈ ವೃತ್ತ ಪೂರ್ಣ ರೂಪದಲ್ಲಿ ಬಂದಿದೆ. ಕನ್ನಡದಲ್ಲಿದ್ದರೂ ಸಂದರ್ಭೋಚಿತ ಇರುವದರಿಂದ ಇಲ್ಲಿ ಉಲ್ಲೇಖನೀಯವಿದೆ. ಚುರಮುರಿಯವರು ಮಾಧ್ವರು. ಮಾಧ್ವ ಸಂಸ್ಕೃತ ಕವಿಗಳಿಂದ ಪುರಸ್ಕರಿಸಲ್ಪಟ್ಟ ಈ ವೃತ್ತದಲ್ಲಿ ಕನ್ನಡ ಪದ್ಯವನ್ನು ರಚಿಸಿ ಕನ್ನಡ ಛಂದೋ ವೈವಿಧ್ಯವನ್ನು ಹೆಚ್ಚಿಸಿರುವರು. ಕಣ್ವಾಶ್ರಮದಲ್ಲಿ ಶಕುಂತಲೆಯನ್ನು ಕಾಣುವ ಮೊದಲು ದುಷ್ಯಂತ ಚಿಗರೆಯನ್ನು ಬೆನ್ನಟ್ಟಿ ಸಾಗಿದ ಸನ್ನಿವೇಶ. ದುಷ್ಯಂತನ ರಥದ ಕುದುರೆಗಳ ನಾಗಾಲೋಟದ ಬಣ್ಣನೆ—

ಸೈಲ್ಬಿಟ್ಟಿರಲ್ ರಶ್ಮಿಗಳ್ ಕರ್ಣಗಳ್ ನಿಚ್ಚಳಂಗೈದು ಪುಚ್ಛಂನಿಗರ್ಚುತ್ತೆ ಮೇಣ್
ಜೋಲ್ವಿದ್ದ ಗೋಣಲ್ಲಾದಲಂ ಗಾಳಿಗೇಳುತ್ತೆ ಬೀಳ್ದಂತಿರಲ್ ಮಾರುಪೇರ್ಜಾಪಿನಂ।

ಕಾಲ್ಬಿಟ್ಟ ಹೆಗ್ಗುರಂಗಳ್ ಬೀಸಲಾ ಪೆಟ್ಟನಿಂದೇಳ್ವಧೂಳ್ ತಮ್ಮನಂ ಮುಟ್ಟದಂ
ತೋಲ್ಬಿದ್ದಿರಲ್ ಸಾಗರಂ ತಾಳ್ವವೇನೀರ್ಪೆಸಾರಂಗದೋಳೀ ತುರಂಗಂಗಳು ॥

—ಚುರಮುರಿಯವರು ಇದಕ್ಕೆ ಅಶ್ವಧಾಟಿ ಎಂದಿರುವರು. ಪ್ರತಿಪಾದದಲ್ಲಿ ೭ ತ ೧ ಗ. ಮೂರನೆಯ ಪಾದದಲ್ಲಿಯ ೨ನೆಯ ಗಣ 'ತ' ಬದಲು 'ರ' ಆಗಿದೆ. ಕರ್ನಾಟಕ ವಿಷಯ ಜಾತಿಗಳ ದೃಷ್ಟಿಯಿಂದ ಪಿರಿಯಕ್ಕರಕ್ಕೆ ಹೊಂದುವಂತಿದೆ. ಪ್ರತಿಪಾದದಲ್ಲಿ ೬ ವಿಷ್ಣು ೧ ರುದ್ರ ಪಿರಿಯಕ್ಕರದ ಒಂದು ಲಕ್ಷಣ, ಜಯಕೀರ್ತಿಯ ಮೇರೆಗೆ. ಇದನ್ನು ೭ ವಿಷ್ಣು ೧ ಗುರು ಎಂದು ಸಹ ಹೇಳಬಹುದು. ಜಯಕೀರ್ತಿ ಕರ್ನಾಟಕ ವಿಷಯ ಜಾತಿ ಅಕ್ಕರಗಳಿಗೆ ಗಣಗಣಕ್ಕೆ ಯತಿ ಎಂದಿರುವನು. ಹೀಗೆ ಹೇಳಿದಾಗ ಲಯ ಹೆಚ್ಚು ಪರಿಣಾಮಕಾರಿ ಆಗುವಂತೆ ತೋರುತ್ತದೆ. ಬಲ್ಲವರು ಪರೀಕ್ಷಿಸಿ ನೋಡಬಹುದು.

ಗೀತಿಯೂ ಕಂದ ?

ಲಕ್ಷ್ಮೀ ಆರ್ಯಾಸ್ತೋತ್ರ ವಾದಿರಾಜರ ಇನ್ನೊಂದು ಕೃತಿ. ಆರ್ಯಾ ಎಂದಿದ್ದರೂ ಪದ್ಯಗಳೆಲ್ಲ ಗೀತಿಗಳು. ಕೆಲವುಗಳಲ್ಲಿ ಆದಿ ಪ್ರಾಸವಿದೆ. ಗೀತಿ ಆರ್ಯೆಯ ಒಂದು ಭೇದ. ಆರ್ಯೆಯ ಪ್ರಥಮಾರ್ಧವು ದ್ವಿತೀಯಾರ್ಧದಲ್ಲಿಯೂ ಬಂದಿದ್ದರೆ ಅದು ಗೀತಿ. ಕಂದ ಅಥವಾ ಆರ್ಯಾಗೀತಿಗೂ ಇದಕ್ಕೂ ವ್ಯತ್ಯಾಸವೆಂದರೆ ಅದರಲ್ಲಿ ೮ ಚತುರ್ಮಾತ್ರಾ ಗಣಗಳಿದ್ದರೆ ಇದರಲ್ಲಿ ೭ ಚತುರ್ಮಾತ್ರಾ ಗಣಗಳು ೧ ಗುರು. ಇದೊಂದು ವಾದಿರಾಜರ ಲಕ್ಷ್ಮೀ ಆರ್ಯಾಸ್ತೋತ್ರದಲ್ಲಿಯ ಪದ್ಯ—

ಸಂಗೀತ ಸಾಂಗವೇದಾ
ಮಂಗಲದೇವೀಮನೋಜ್ಞ ಸರ್ವಾಂಗೀ।
ಭಂಗಾಧಿ ದೋಷರಹಿತಾ
ತಂಗುಣರಾಶಿಂಮಮೋಷಯೇತ್ಸ್ವಪಿತಂ ॥

—ಕಂದದ ವಿಷಯದಲ್ಲಿ ಗೀತಿ ಆರ್ಯಾಗೀತಿಗಳಲ್ಲಿ ಭೇದವೆಣಿಸದ ಒಂದು ಅಭಿಪ್ರಾಯ ಇದ್ದಿತೆಂದು ತೋರುತ್ತದೆ. ಶಾರ್ಙ್ಗದೇವನ ಸಂಗೀತರತ್ನಾಕರಕ್ಕೆ ಟೀಕೆಯನ್ನು ಬರೆದ ಚತುರ ಕಲ್ಲಿನಾಥ ಇವರಲ್ಲೊಬ್ಬ. ಕನ್ನಡದಲ್ಲಿ ರಚಿತವಾದ ಆರ್ಯಾಗೀತಿಯೆ ಕಂದವೆಂಬ ಶಾರ್ಙ್ಗದೇವನ ಉಕ್ತಿಗಿರುವ ಟೀಕೆಯಲ್ಲಿ ಕಲ್ಲಿನಾಥ : ಗೀತಿಯೇ ಆರ್ಯಾಗೀತಿ ; ಅದೇ ಕನ್ನಡದಲ್ಲಿದ್ದರೆ ಕಂದ ಎಂದಿರುವನು. ತನ್ನ ಈ ವಿವರಣೆಗೆ ಪೋಷಕವೆಂದು 'ಛಂದೋವಿಚಿತಿ' ಎಂಬ ಗ್ರಂಥದಲ್ಲಿಯ 'ಪ್ರಥಮಾರ್ಧಸಮಾ ಗೀತಿ' ಸೂತ್ರವನ್ನು ಉಲ್ಲೇಖಿಸಿ, ಅರ್ಥವಿಸಿ, ಗೀತಿಯ ಒಂದು ಉದಾಹರಣೆಯನ್ನು ಸಹ ಕೊಟ್ಟಿರುವನು. ಕಲ್ಲಿನಾಥನ ಅಭಿಪ್ರಾಯದಲ್ಲಿ ವಾದಿರಾಜರ ಈ ಪದ್ಯಗಳು ಸಂಸ್ಕೃತದಲ್ಲಿ ಇರುವುದರಿಂದ ಗೀತಿಗಳು ; ಕನ್ನಡದಲ್ಲಿ ಇದ್ದಿದ್ದರೆ ಕಂದಗಳು ಎಂದು

ಭಾವಿಸಬೇಕಾಗುವುದು. ಆದರೆ ಇದು ತೀರ ಅಪ್ರಸಿದ್ಧ ಅಭಿಪ್ರಾಯ. ಕಂದಕ್ಕೆ ಸಂಬಂಧಿಸಿ ಬಂದಿರುವುದರಿಂದ ಉಲ್ಲೇಖಿಸಲಾಗಿದೆ, ಇಷ್ಟೇ.

ನೃಪತುಂಗೋಕ್ತಿಗೊಂದು ಅಪವಾದ

ಯತಿ ಉಲ್ಲಂಘನೆ ದೋಷವಿದ್ದರೂ ಕನ್ನಡದ ಪೂರ್ವಾಚಾರ್ಯರು ಖಂಡ (ಮಧ್ಯ) ಪ್ರಾಸಕ್ಕೆ ಪ್ರಾಶಸ್ತ್ಯವನ್ನಿತ್ತು ಯತಿಯನ್ನು ಮೀರಿರುವರು, ಹೀಗೆ ಮಾಡುವುದು ದೂಷಣವಲ್ಲ, ಭೂಷಣ ಎಂದು ಬಗೆದಿರುವರು, ಎಂದಿರುವನು ನೃಪತುಂಗ. ಪ್ರಾಸಮೋಹ ಕನ್ನಡ ವಿಶಿಷ್ಟ, ದಾಕ್ಷಿಣಾತ್ಯ ವಿಶಿಷ್ಟ, ಎಂದು ತಿಳಿದರೆ ನೃಪತುಂಗನ ಈ ಮಾತು ದ್ರಾವಿಡ ಭಾಷೆ ಮಾತೃಭಾಷೆ ಇದ್ದ ಕವಿಗಳ ಪ್ರಾಸಯುಕ್ತ ಸಂಸ್ಕೃತ ಪದ್ಯಗಳಿಗೆ ಸಹ ಅನ್ವಯಿಸುವಂತಿದೆ. ಖಂಡಪ್ರಾಸಕ್ಕಾಗಿ ಯತಿಯಲ್ಲಿ ವ್ಯತ್ಯಾಸವಾಗಿರುವ ಒಂದು ಲಕ್ಷ್ಯವನ್ನು ಈ ಮೊದಲು ಉದಾಹರಿಸಿದೆ. ಆದರೆ ಖಂಡಪ್ರಾಸವನ್ನಿರಿಸಿ ಜೊತೆಗೆ ಯತಿಯನ್ನು ಪಾಲಿಸಿದ ಉದಾಹರಣೆಗಳು ವಿರಳ. ಮೇಲೆ ವಿವರಿಸಿದ ವಾದಿರಾಜರ ದಶಾವತಾರ ಸ್ತೋತ್ರ ಮತ್ತು ಜಯತೀರ್ಥ ಸ್ತುತಿ ಇವುಗಳಲ್ಲಿ ಎರಡು. ಜಯತೀರ್ಥ ಸ್ತುತಿಯನ್ನು ರಚಿಸಿದವರು ಉತ್ತರಾದಿ ಮಠದ ಶ್ರೀ ಸತ್ಯಪ್ರಿಯತೀರ್ಥರು (ಕ್ರಿ. ೧೭೩೭). ಜಯತೀರ್ಥರು (ಕ್ರಿ.೧೩೮೦) ದ್ವೈತ ವೇದಾಂತ ಪ್ರಪಂಚದಲ್ಲಿ ವಿಶ್ವಮಾನ್ಯರಿದ್ದ ಮಧ್ವಾಚಾರ್ಯರು, ಜಯತೀರ್ಥರು, ಚಂದ್ರಿಕಾಚಾರ್ಯರು (ವ್ಯಾಸರಾಯರು ಕ್ರಿ. ೧೪೭೮-೧೫೩೯), ಈ ಮುನಿತ್ರಯರಲ್ಲಿ ಒಬ್ಬರು. ಆಚಾರ್ಯರ ಬಹು ಸಂಖ್ಯೆ ಗ್ರಂಥಗಳಿಗೆ ಟೀಕೆಯನ್ನು ಬರೆದಿರುವದರಿಂದ ಟೀಕಾಚಾರ್ಯರೆಂದು ಪ್ರಸಿದ್ಧರಿರುವರು. ಕೆಲವು ಸ್ವತಂತ್ರ ಗ್ರಂಥಗಳನ್ನು ಸಹ ಬರೆದಿರುವರು. ಜಯತೀರ್ಥ ಸ್ತುತಿ ಶಾರ್ದೂಲ ವಿಕ್ರೀಡಿತದಲ್ಲಿ (ಮ-ಸ-ಜ-ಸ-ತ-ತ-ಗ) ಇದೆ. ಶಾರ್ದೂಲವೆಂದರೆ ಹುಲಿ. ಸಿಂಹವೆಂಬ ಅರ್ಥದಲ್ಲಿ ಸಹ ಬಳಸುವರು. ಒಳ್ಳೇ ಕಸುವಿನ ಹುಲಿಗೆ ೧೨ ಮಾರುಗಳ ಅಂದರೆ ಒಂದೊಂದು ನೆಗೆತಕ್ಕೆ ೧೨ ಮಾರುಗಳಷ್ಟು ಹಾರುವ ಹುಲಿ ಎನ್ನುವರು. ಶಾರ್ದೂಲ ವಿಕ್ರೀಡಿತದಲ್ಲಿ ಸಹ ೧೨ ನೆಯ ಅಕ್ಷರಕ್ಕೆ ಯತಿ ಇದೆ. ಜಯತೀರ್ಥಸ್ತುತಿಯಲ್ಲಿ ಯತಿಪಾಲನೆಯೊಂದಿಗೆ ಆದಿ, ಮಧ್ಯ (ಖಂಡ) ಪ್ರಾಸಗಳಿವೆ. ಇದೊಂದು ಉದಾಹರಣೆ—

> ಟೀಕಾಕೃಜ್ಜಯವರ್ಯ ಸಂಸದಿಭವ, ತ್ಯೈಕಾಂತತೋರಾಜತಿ
> ಪ್ರಾಕಾಮ್ಯಂ ದಧತೇ ಪಲಾಯನ ವಿಧೌ, ಸ್ತೋಕಾನ್ಯ ಶಂಕಾದ್ವಿಷಃ।
> ಲೋಕಾಂಧೀಕರಣಕ್ಷಮಸ್ಯ ತಮಸಃ, ಸಾಕಾಲಪೀಮಾಯದಾ।
> ಪ್ರಾಕಾರಾತಿದಿಶಿ ಪ್ರರೋಹತಿನಚೇ, ದ್ರಾ ಕಾನಿಶಾಕಾಮುಕಃ॥

ಬಂಗಾಲ ವೈಷ್ಣವರು–ರೂಪಗೋಸ್ವಾಮಿ

ಉತ್ತರ ಭಾರತದಲ್ಲಿ ಅದರಲ್ಲೂ ಬಂಗಾಲದಲ್ಲಿ ವೈಷ್ಣವ ಮತವನ್ನು ಪ್ರಸರಿಸಿ

ದವರು ಚೈತನ್ಯ ಪ್ರಭುಗಳು (ಕ್ರಿ. ೧೪೮೫-೧೫೩೩). ಮತಪ್ರತಿಪಾದನೆಯಲ್ಲಿ ಕೆಲವು ವ್ಯತ್ಯಾಸಗಳು ಕಂಡುಬರುತ್ತಿದ್ದರೂ ಚೈತನ್ಯರು ಮಧ್ವಾಚಾರ್ಯರ ಶಿಷ್ಯಪರಂಪರೆಗೆ ಸೇರಿದವರು. ಅವರ ಗುರುಪರಂಪರೆ ಶ್ರೀಮದಾಚಾರ್ಯರಿಂದಲೇ ಪ್ರಾರಂಭವಾಗುತ್ತದೆ. ಚೈತನ್ಯರ ಹೆಸರಾಂತ ಶಿಷ್ಯಪ್ರಶಿಷ್ಯರಲ್ಲಿ ರೂಪಗೋಸ್ವಾಮಿ (ಕ್ರಿ. ೧೪೯೫-೧೫೫೦) ಒಬ್ಬರು. ಮಹಾಪಂಡಿತರು. ಸಂಸ್ಕೃತದಲ್ಲಿ ಅನೇಕ ಮತೀಯ, ಸಾಹಿತ್ಯಿಕ ಮತ್ತು ಲಕ್ಷಣ ಗ್ರಂಥಗಳನ್ನು ಬರೆದಿರುವರು. ಇವುಗಳಲ್ಲಿ ಕೃಷ್ಣಭಕ್ತಿಪರ ಸ್ತೋತ್ರಗಳಿರುವ ಸ್ತವಮಾಲಾ ಒಂದು. ಕೆಲವು ಸ್ತೋತ್ರಗಳು ಕಾವ್ಯಛಂದಸ್ಸುಗಳಲ್ಲಿ ಕೆಲವು ರಾಗ-ತಾಳಗಳಲ್ಲಿವೆ. ಈ ಗ್ರಂಥಕ್ಕೆ ಅವರ ಸಹೋದರ ಪುತ್ರ ಜೀವಗೋಸ್ವಾಮಿ ಟೀಕೆಯನ್ನು ಬರೆದಿರುವರು ಆದರಲ್ಲಿ ಗೋವಿಂದ ಬಿರುದಾವಲಿ ಎಂಬುದೊಂದು ಅಧ್ಯಾಯವಿದೆ. ಬಗೆಬಗೆಯ ರಗಳೆ, ದಂಡಕ, ಗದ್ಯ ಮೊದಲಾದವುಗಳ ಖಣಿ ಈ ಅಧ್ಯಾಯ. ಗದ್ಯ, ಪದ್ಯ, ಚಂಪೂ ಮೊದಲಾದ ಕಾವ್ಯಪ್ರಕಾರಗಳಲ್ಲಿ ಪ್ರಶಸ್ತಿ ಎಂಬುದೊಂದು ಪ್ರಕಾರವಿದೆ. ಪ್ರಶಸ್ತಿಗಳು ಚಾಟುಪ್ರಬಂಧಗಳೆಂದು ಸಹ ಪ್ರಸಿದ್ಧವಿವೆ. ಇವುಗಳಲ್ಲಿ ಬಿರುದಾವಲಿ, ಭೋಗಾವಲಿ, ಚಕ್ರವಾಲ, ಉದಾಹರಣ, ಅಡ್ಡಲಿ, ತ್ಯಾಗಘೋಷ, ರಗಲಾ ಮೊದಲಾದ ಉಪಭೇದಗಳಿವೆ.

ಇವೆಲ್ಲ ತಾಲಾನುಗ ಬಂಧಗಳು. ತಾಲಕ್ಕೆ ಒಗ್ಗುವ ಎಲ್ಲ ಬಗೆಯ ಅಕ್ಷರ ಮಾತ್ರಾಬಂಧಗಳಲ್ಲಿ ಇವುಗಳ ರಚನೆ ಇದೆ. ಇಂಥದೇ ಭಾಷೆಯಲ್ಲಿ ಇರಬೇಕೆಂಬ ನಿರ್ಬಂಧವಿಲ್ಲ. ದಿವ್ಯ, ದಿವ್ಯಮಾನುಷ, ಮನುಷ್ಯ ಅಂದರೆ ವಿಷ್ಣು ಶಿವ ಮೊದಲಾದ ದೇವತೆಗಳ, ರಾಮಕೃಷ್ಣಾದಿ ದೇವಮನುಷ್ಯರ ಮತ್ತು ಗುರು, ಆಶ್ರಯದಾತ ಮೊದಲಾದವರ ಗುಣಕೀರ್ತನ ಇವುಗಳ ವಸ್ತು. ರಗಲಾ ಕನ್ನಡದ ರಗಳೆ. ಅಲಂಕಾರ ಸಂಗ್ರಹದ ಕರ್ತ ಅಮೃತಾನಂದಿಯ ಮೇರೆಗೆ ಸಂಸ್ಕೃತದಲ್ಲಿ ಇದು ಹಲವು ಭಾಷೆಗಳಲ್ಲಿರುವ ಪದ್ಯಗಳಿಂದ ಕೂಡಿದ ಕೃತಿ. ಹರಿಹರಾದಿಗಳ ಕೆಲವು ಕೃತಿಗಳಿಗೆ ಇರುವ ರಗಳೆಗಳೆಂಬ ಹೆಸರು ಪ್ರಾಸಯುಕ್ತ ತಾಲಾನುಗ ದ್ವಿಪದಿಗಳಲ್ಲಿರುವ ಪ್ರಶಸ್ತಿ ಎಂಬ ಅರ್ಥದಲ್ಲಿ. ಇವುಗಳಲ್ಲಿ ಬಳಸಿದ ಛಂದೋಬಂಧಗಳಿಗೂ ಪಂಪಾದಿಗಳ ಕೃತಿಗಳಲ್ಲಿ ಪ್ರಾಸಂಗಿಕವಾಗಿ ಬಂದಿರುವ ಈ ಬಗೆಯ ಛಂದೋಬಂಧಗಳಿಗೂ ವ್ಯತ್ಯಾಸವಿಲ್ಲದರಿಂದ ಇವುಗಳಿಗೂ ರಗಳೆಗಳೆಂಬ ಹೆಸರು ಬಂದಿದೆ, ಇಷ್ಟೇ. ದಕ್ಷಿಣದಲ್ಲಿ ಚಾಟುಪ್ರಬಂಧ ಸಾಹಿತ್ಯ ವಿಪುಲವಾಗಿ ಬೆಳೆದಿತ್ತೆಂದು ತೋರುತ್ತದೆ. ರಸರತ್ನಾಕರದ ಸಾಳ್ವನಿಂದ ಸ್ಮ[illegible]ಸಲ್ಪಟ್ಟ ಅಮೃತಾನಂದ ಯೋಗಿಯ ಅಲಂಕಾರ ಸಂಗ್ರಹದಲ್ಲಿ ಚಾಟುಪ್ರಬಂಧಗಳಿಗೆ ಒಂದು ಅಧ್ಯಾಯ ಮೀಸಲಿದೆ. ಅಮೃತಾನಂದಯೋಗಿದಾ ಕ್ಷಿಣಾತ್ಯ. ಕೃಷ್ಣಕವಿಯ ಮಂದಾರ ಮರಂದ ಚಂಪುವಿನಲ್ಲಿಯೂ ಇವುಗಳ ಕೆಲವು ಪ್ರಕಾರಗಳು ಉಕ್ತವಾಗಿವೆ.

ರೂಪಗೋಸ್ವಾಮಿಗಳಿಗೆ ದಕ್ಷಿಣದಲ್ಲಿ ವಿಶೇಷ ಪ್ರಚಾರದಲ್ಲಿದ್ದ ಬಿರುದಾವಳಿಗಳಿಂದ ಶ್ರೀಕೃಷ್ಣನನ್ನು ಸ್ತುತಿಸಬೇಕೆಂಬ ಆಸೆ[illegible]ಾಯಿತು. ಮೂಲದಲ್ಲಿ ಕರ್ನಾಟಕ

ದವರಿದ್ದರೂ ಸಂಬಂಧ ತಪ್ಪಿದ್ದರಿಂದ ಈ ಕಾರ್ಯ ತಮ್ಮಿಂದಾದೀತೆಂಬ ಭರವಸೆ ಅವರಿಗಿರಲಿಲ್ಲ. ಸ್ವಪ್ನದಲ್ಲಿ ಪರಮಾತ್ಮ ಬಂದು 'ಚಿಂತಿಸಬೇಡ, ರಚಿಸು, ನನ್ನ ಅನುಗ್ರಹವಿದೆ,' ಎಂದು ಅಭಯವನ್ನಿತ್ತನಂತೆ. ಗೋವಿಂದ ಬಿರುದಾವಲಿಗಳು ಪರಮಾತ್ಮನ ಈ ಬಗೆಯ ಅನುಗ್ರಹದ ಬಲದಿಂದ ರಚಿತವಾಗಿವೆ, ಎಂದಿರುವರು ಜೀವಗೋಸ್ವಾಮಿ ಟೀಕೆಯಲ್ಲಿ.

ಬಿರುದಾವಳಿ ಮೊದಲಾದ ಚಾಟು ಪ್ರಬಂಧಗಳಲ್ಲಿ ಭಾವಸೌಂದರ್ಯಕ್ಕಿಂತ ರಚನೆಯ ವೈವಿಧ್ಯಕ್ಕೆ ಹೆಚ್ಚು ಇಂಬಿದೆ. ಶ್ರೀಹರಿಗೆ ಪ್ರಿಯವಿರುವ ಸತ್ಕಾವ್ಯಸೌಧವು ಶಬ್ದಾರ್ಥಗಳೆಂಬ ರತ್ನಗಳ ವಿವಿಧ ಬಗೆಯ ಶಿಲ್ಪಕ್ರಿಯೆಗಳಿಂದ ಶೋಭಿಸುವದು. ಕವಿಯೇ ಈ ಸೌಧದ ನಿರ್ಮಾತ,—ವಿಶ್ವಕರ್ಮ (ಶಿಲ್ಪಕ್ರಿಯಾಂ ಬಹು ವಿಧ್ಯಾಂ ಕವಿ ವಿಶ್ವಕರ್ಮಾ) ಎಂಬ ಪೀಠಿಕೆಯೊಡನೆ ಕೃತಿ ರಚನೆಗೆ ತೊಡಗಿರುವರು ರೂಪ ಗೋಸ್ವಾಮಿ.

ಸ್ವರೂಪದಲ್ಲಿ ಕನ್ನಡ ರಗಳೆಗಳಿಗೂ ರೂಪಗೋಸ್ವಾಮಿಗಳ ರಚನೆಗಳಿಗೂ ವ್ಯತ್ಯಾಸವಿಲ್ಲ. ರಗಳೆಗಳಂತೆ ಇವಕ್ಕೂ ಪಾದಮಿತಿಯಿಲ್ಲ. ಆದರೆ ಪಾದಸ್ಥ ಮಾತ್ರೆಗಳಿಗೆ ಮಿತಿ ಇದೆ. ಈ ಮಿತಿ ಕನಿಷ್ಟ ೧೨ ಪರಮಾವಧಿ ೬೪ ಮಾತ್ರೆಗಳು ಎಂದಿದೆ. ಕನ್ನಡದ ಎಲ್ಲ ರಗಳೆಗಳು ಈ ಮಿತಿಯಲ್ಲಿ ಬರುತ್ತವೆ. ಎರಡೆರಡು ಪಾದಗಳಿಗೆ ಅಂತ ಪ್ರಾಸ ವಿದೆ. ಅಲ್ಲಲ್ಲಿ ಆದಿಪ್ರಾಸ ಕಂಡುಬಂದರೂ ಅದು ನಿಯತವಿಲ್ಲ. ಆದರೆ ನಿರ್ದಿಷ್ಟ ಸ್ಥಾನಗಳಲ್ಲಿ ನಿರ್ದಿಷ್ಟ ಅಂದರೆ ಮಧುರ, ಶ್ಲಿಷ್ಟ, ವಿಶ್ಲಿಷ್ಟ, ಶಿಥಿಲ, ಹ್ರಸ್ವ, ದೀರ್ಘ ಸಂಯುಕ್ತಾಕ್ಷರಗಳ ಯೋಜನೆ ಇದೆ. ಬಿರುದಾವಳಿಗಳಲ್ಲಿ ಕೊನೆಯ ಪಾದದ, ಕೊನೆಗೆ ವೀರ, ಧೀರ ಮೊದಲಾದ ಪದಗಳಿರುತ್ತವೆ. ಇವು ಬಿಡಿಪದಗಳು. ಛಂದ ಸ್ಸಿನ ಲೆಕ್ಕದಲ್ಲಿ ಬರುವುದಿಲ್ಲ. ತಾಳ: ೮ (೪-೪), ೧೨ (೬-೬), ೨೦ (೧೦-೧೦) ಮಾತ್ರೆಗಳ ಘಟಕಗಳು (ದ್ವಿಚತುಃ ಷಡ್ದಶಕಲಿಕಾಃ). ಕಲೆ (ಮಾತ್ರೆ)ಗಳಿಂದ ಕೂಡಿರುವದು ಕಲಿಕಾ. ಲಯಾನುಸಾರ ಗಣ ವಿಭಾಗ ಬೇರೆಯಾದರೂ ತಾಲಾ ನುಗ ಗೀತಗಳಲ್ಲಿ ತಾಲವೇ ಮುಖ್ಯ. ಅರ್ಥ ಧಾಟಿ ಎರಡನ್ನೂ ತಾಳಕ್ಕೆ ತೂಗಿಸಿ ಕೊಂಡು ಹೋಗಬೇಕು. ಇವು ಕೆಲವು ಉದಾಹರಣೆಗಳು—

ಅಭ್ರಮು ಪತಿಮುದ ಮರ್ದಿಪದಕ್ರಮು ।
ವಿಭ್ರಮು ಪರಿಮುಲ ಲುಬ್ಧ ಸುಹೃಚ್ಛಮು ॥
ದುಷ್ಟದನುಜಬಲ ಸರ್ಪವಿಮರ್ದನ ।
ತುಷ್ಟಹೃದಯ ಸುರಪಕ್ಷ ವಿವರ್ಧನ ॥

ಪ್ರತಿ ಪಾದದಲ್ಲಿ ಅಕ್ಷರ ೧೩, ಮಾತ್ರೆ ೧೬, ಆದ್ಯಂತ ಪ್ರಾಸವಿದ್ದರೂ ಆದಿ ಪ್ರಾಸ ನಿಯತವಾಗಿ ಬಂದಿಲ್ಲ. ಒಟ್ಟು ಇಂಥ ೭ ಯುಗ್ಮಗಳಿವೆ. ರಚನೆ ೪-೩-೪-೪-೧. ಮೂಲದಲ್ಲಿ ಇದು ಪ್ರಾಕೃತ ಪೈಂಗಲದಲ್ಲಿ ಪಂಕಾವಲಿ (ಭ-ನ-ಜ-ಜ-ಲ) ಎಂಬ ವರ್ಣ ಸಮಚತುಷ್ಪದಿ. ಚತುರ್ಮಾತ್ರಾ ಗಣ ಲೆಕ್ಕದಿಂದ ಕನ್ನಡ ಮಂದಾ

ನಿಲ ರಗಳೆಗೂ ಇದಕ್ಕೂ ವ್ಯತ್ಯಾಸವಿಲ್ಲ.

ಇದು ಲಲಿತ ರಗಳೆಗಳಿಗೆ ಸರಿಹೋಗುವ ಒಂದು ಯುಗ್ಮ—

ಜಯಜಲದ ಮಂಡಲೀ ದ್ಯುತಿನವಹ ಸುಂದರ।
ಸ್ಫುರದಮಲ ಕೌಮುದೀ ಮೃದು ಹಸಿತ ಬಂಧುರ॥

ಪ್ರತಿ ಪಾದದಲ್ಲಿ ಅಕ್ಷರ ೧೬, ಮಾತ್ರೆ ೨೦, ಅಂತ ಪ್ರಾಸ.

ಉತ್ಸಾಹ ರಗಳೆಗೆ—

ಕುಸುಮನಿಕರ ರಚಿತ ಚಿಕುರ।
ನಖರ ವಿಜಿತ ಮಣಿಜ ಮುಕುರ॥

ಪ್ರತಿ ಪಾದದಲ್ಲಿ ೪ ತ್ರಿಮಾತ್ರಾ ಗಣಗಳು, ಅಂತಪ್ರಾಸ.

ಇವು ನಿರ್ದಿಷ್ಟ ಸ್ಥಾನಗಳಲ್ಲಿ ನಿರ್ದಿಷ್ಟ ಅಕ್ಷರ ಯೋಜನೆ ಇರುವ ಯುಗ್ಮಗಳು—

ಜಯಗತಶಂಕ ಪ್ರಣಯವಿಟಂಕ।
ಪ್ರಿಯಜನವಂಕ ಸ್ಮಿತಜನ ಶಂಖ॥
ಮುದಿತಕುರಂಗೀ ದೃಗುದಿತರಂಗೀ।
ಮೃದಮುಭಿರಂಗೀ ಕೃತವನಸಂಗೀ॥

ಇಲ್ಲಿ ಪ್ರತಿಪಾದದ ೬ನೆಯ ಅಕ್ಷರ ಕ ವರ್ಗ ಮಧುರ ಸಂಯುಕ್ತ (ಙ್ಕ, ಙ್ಗ,) ಇದೆ. ಪ್ರತಿ ಯುಗ್ಮದಲ್ಲಿ ೧೨ ಅಕ್ಷರ/೧೬ ಮಾತ್ರೆಗಳಿವೆ. ಹೀಗೆಯೇ ಬೇರೆ ಬೇರೆ ವರ್ಗಾಕ್ಷರಗಳ ಅವರ್ಗೀಯಗಳ ಬೇರೆ ಬೇರೆ ಬಗೆಯ ಬಂಧಗಳಿವೆ.

ಈ ಬಗೆಯ ಛಂದೋಬಂಧಗಳು ಸಂಸ್ಕೃತದಲ್ಲಿ ವಿರಳ. ಹೊಸವೆಂದರೂ ಸಲ್ಲುವದು. ರಗಳೆ ಜಾತಿಯ ಪದ್ಯಗಳ ವಿಪುಲ ಬಳಕೆ ಇರುವದು ರಾಷ್ಟ್ರಕೂಟರ ಆಶ್ರಿತರಿದ್ದ ಸ್ವಯಂಭೂ ಮೊದಲಾದ ಅಪಭ್ರಂಶ ಕವಿಗಳ ಮತ್ತು ಕನ್ನಡ ತೆಲುಗು ಕವಿಗಳ ಕೃತಿಗಳಲ್ಲಿ. ರೂಪಗೋಸ್ವಾಮಿ ಮೂಲದಲ್ಲಿ ಕರ್ನಾಟಕದವರು. ಮಾಧ್ವ ಪರಂಪರೆಯವರು. ಟೀಕೆಯಲ್ಲಿ ಜೀವಗೋಸ್ವಾಮಿ 'ದಾಕ್ಷಿಣಾತ್ಯೇನ ಕವಿನಾ ಪಾಠಿತಯಾ' ಎಂದಿದ್ದರೂ ಈ ದಾಕ್ಷಿಣಾತ್ಯ ಕವಿಗಳು ಬಹುಶಃ ಕನ್ನಡಿಗರೆಂದು ಭಾವಿಸುವಂತಿದೆ. ಈಚೆಯವರಾದ ಸುಮತೀಂದ್ರ ತೀರ್ಥರು (ಕ್ರಿ. ೧೬೯೨-೧೭೨೫) ಬಿರುದಾವಳಿ, ಜಯಘೋಷಣ, ಚಕ್ರವಾಲ ಮೊದಲಾದ ಚಾಟು ಪ್ರಬಂಧಗಳನ್ನು ರಚಿಸಿರುವದು ಈ ಮಾತಿಗೆ ಪೋಷಕವಿದೆ ಎನ್ನಬಹುದು. ಸುಮತೀಂದ್ರರು ಮಂತ್ರಾಲಯ ಪ್ರಭು ರಾಘವೇಂದ್ರಸ್ವಾಮಿಗಳಿಂದ ಮೂರನೆಯವರು. ಮುದ್ದುಕೃಷ್ಣಾಚಾರ್ಯ ಎಂಬುದು ಇವರ ಪೂರ್ವಾಶ್ರಮದ ಹೆಸರು. ಅವರ ಈ ಕೃತಿಗಳು ಆ ಸಮಯದಲ್ಲಿ ರಚಿತವಾದುವು ಎನ್ನುವರು.

ರೂಪಗೋಸ್ವಾಮಿಗಳ ರಗಳಾ ವರ್ಗದಲ್ಲಿ ಬರುವ ಉಪರೋಕ್ತ ಬಿರುದಾವಳಿಗಳು ತಾಲಕ್ಕೆ ಒಗ್ಗುವ ಮಾತ್ರಾ ಮತ್ತು ಅಕ್ಷರ ಎರಡೂ ಬಗೆಯ ಛಂದಸ್ಸುಗಳಲ್ಲಿವೆ.

ಜಯಕೀರ್ತಿ ರಗಳೆಯ (ರಘಟಾ) ಲಕ್ಷಣವನ್ನು—

ಸ್ವಚ್ಛಂದಃ ಸಂಜ್ಞಾ ರಘಟಾ ಮಾತ್ರಾಕ್ಷರ ಸಮೋದಿತಾ ।
ಪಾದದ್ವಂದ್ವ ಸಮಾಕೀರ್ಣಾ ಸುಶ್ರಾವ್ಯಾ ಸೈವ ಪದ್ಧತಿಃ ॥

ನಾಗವರ್ಮ ಗಣನಿಯಮ ವಿಪರ್ಯಾಸದಿಂದ ತಾಳದ ಗಣನೆಗೆ ಹೊಂದುವದು ರಗಳೆ ಎಂದಿಷ್ಟೇ ಹೇಳಿದ್ದರೆ ಜಯಕೀರ್ತಿ; ರಗಳೆ ಎರಡೆರಡು ಪಾದಗಳ ಯುಗ್ಮಗಳಿಂದ ಕೂಡಿರುವದು; ಸ್ವಚ್ಛಂದ ಅಂದರೆ ಇಂತಿಷ್ಟೇ ಯುಗ್ಮಗಳೆಂಬ ನಿರ್ಬಂಧವಿಲ್ಲ; ಮಾತ್ರಾಕ್ಷರ ಸಮೋದಿತ; ಸುಶ್ರಾವ್ಯ (ತಾಳಬದ್ಧ ?) ಅದು ಪದ್ಧತಿ ಎಂದು ವಿವರಿಸಿರುವನು. 'ಮಾತ್ರಾಕ್ಷರ ಸಮೋದಿತಾ' ಆಂದರೆ ತಾಲದ ಗಣನೆಗೆ ಹೊಂದುವ ಮಾತ್ರಾ ಬಂಧಗಳು ಅಕ್ಷರ ಬಂಧಗಳು—ಎರಡೂ. ಪದ್ಧತಿ ಎಂದರೆ ತಾಲಕ್ಕೆ ಒಡಂಬಡುವ ಪ್ರಾಸಬದ್ಧ ದ್ವಿಪದಿಗಳ ಮಾಲಿಕೆ. ಪದ್ಧತಿ ಹೆಸರನ್ನು ವರ್ಗವಾಚಕ ಅಂದರೆ ಎಲ್ಲ ಬಗೆಯ ರಗಳಾ ಬಂಧಗಳಿಗೆ ಅನ್ವಯಿಸಿರುವದನ್ನು ಪಶ್ಚಿಮ ಚಾಲುಕ್ಯ ದೊರೆ ಸೋಮೇಶ್ವರನ ಮಾನಸೋಲ್ಲಾಸದಲ್ಲಿಯ ಪದ್ಧತಿಯ ಲಕ್ಷ್ಯ ಲಕ್ಷಣಗಳಿಂದ ಕಾಣಬಹುದು. ಜಯಕೀರ್ತಿಯ 'ಸೈವಪದ್ಧತಿಃ' ಯಲ್ಲಿಯಾದರೂ ಅದು ಇದೇ ಅರ್ಥದಲ್ಲಿ ಬಳಸಲ್ಪಟ್ಟದೆ. ಪದ್ಧತಿಯೆಂಬ ೧೬ ಮಾತ್ರೆಗಳ ವಿಶಿಷ್ಟ ಛಂದಸ್ಸಿದೆ. ಮೂಲದಲ್ಲಿ ಇದು ಚತುಷ್ಪದಿ. ತಾಲಕ್ಕೆ ಒಗ್ಗುವದರಿಂದ ಪ್ರಾಸಬದ್ಧವಿರುವ ಇದರ ದ್ವಿಪದಿಗಳಾದರೂ ಜಯಕೀರ್ತಿ ವಿವರಿಸಿದ ಪದ್ಧತಿಯ ಅಳವಿನಲ್ಲಿ ಬರುವವು. ಕನ್ನಡದಲ್ಲಿ ಮಂದಾನಿಲ ರಗಳೆಗಾಗಿ ಈ ಬಗೆಯ ದ್ವಿಪದಿಗಳ ಬಳಕೆಯಾಗಿದೆ.

ರಗಳೆ ಅಪ್ಪಟ ತಾಲ ಬಂಧ. ತಾಲವು ಮಾತ್ರೆಗಳ ಲೆಕ್ಕದಿಂದ ನಡೆಯುವದರಿಂದ ರಗಳೆಗಳಿಗಾಗಿ ಬಳಸಿದ ತಾಲಕ್ಕೆ ಒಗ್ಗುವ ಅಥವಾ ಒಗ್ಗಿಸಿಕೊಂಡ ಅಕ್ಷರ ಬಂಧಗಳೆಲ್ಲ ಮಾತ್ರಾ ಬಂಧಗಳೆಂದು ಪರಿಗಣಿಸಲ್ಪಟ್ಟವೆ.*

ಚಕ್ರವಾಲ

ಇದೊಂದು ಯಮಕ ಜಾತಿಗೆ ಸೇರಬಹುದಾಗ ಶಬ್ದಾಲಂಕಾರ ವಿಶಿಷ್ಟ ಪ್ರಶಸ್ತಿ ಪದ್ಯ. ಗದ್ಯದಲ್ಲಿ ಸಹ ಇರಬಹುದು. ಹಿಂದಣ ಪದವು ಅದಕ್ಕೆ ಹೊಂದಿ ಮುಂದಣ ಪದವಾಗಿ ಪುನರಾವೃತ್ತವಾಗುವದು (ವಿಮುಕ್ತಪುನರಾಕೃಷ್ಟಶಬ್ದಂ) ಇದರ ಮುಖ್ಯ ಲಕ್ಷಣ.† ಇದೊಂದು ರೂಪಗೋಸ್ವಾಮಿಕೃತ ಕೃಷ್ಣ ಸ್ತುತಿಯಲ್ಲಿಯ ಒಂದು ಯುಗ್ಮ–

---

* ಹೆಚ್ಚಿನ ವಿವರಗಳಿಗಾಗಿ ಲೇಖಕನ 'ವಾಗ್ದೇವಿಯ ಭಂಡಾರ ಒಡೆದ ಕನ್ನಡ ಕವಿಗಳು' (ದ್ವೈಪಾಯನಟ್ರಸ್ಟ ಪ್ರಕಾಶನ) ಗ್ರಂಥವನ್ನು ನೋಡಬಹುದು.

† ವಿವರಗಳಿಗಾಗಿ ಈ ಮೊದಲು ಬಂದಿರುವ 'ಶಾಂತಿನಾಥನ ಪದ್ಧಳಿ' ಲೇಖವನ್ನು ನೋಡಬಹುದು.

ತ್ವಂ ಜಯಕೇಶವ ಕೇಶವ ಲಸ್ತುತ ।
ವೀರ್ಯವಿಲಕ್ಷಣ ಲಕ್ಷಣ ಬೋಧಿತ ॥

—ಅಕ್ಷರ ೧೨ (೪ ಭ-ಗಣಗಳು) ಮಾತ್ರೆ, ೧೬ (೪ ಚತುರ್ಮಾತ್ರಾ ಗಣಗಳು). ಅಂತಪ್ರಾಸ, ಕನ್ನಡದಲ್ಲಿ ಮಂದಾನಿಲ ರಗಳೆ. ಮೊದಲನೆಯ ಪಾದದಲ್ಲಿ ಕೇಶವ, ಎರಡನೆಯದರಲ್ಲಿ ಲಕ್ಷಣ ಪದಗಳು ಪುನರಾವೃತ್ತವಾಗಿವೆ. ಭಾಮಿನೀ ಅಕ್ಷರ ವೃತ್ತ. ಈ ವೃತ್ತ ಮೋದಕ, ದೋಧಕ ಎಂದು ಸಹ ಉಕ್ತವಾಗಿದೆ.

ಗಣಧಾ

ದಂಡಕಗಳ ವಿವರಣೆಯಲ್ಲಿ ಜಯಕೀರ್ತಿ 'ಗಣಧಾ' ಎಂಬ ಒಂದು ವರ್ಗವನ್ನು ಉಲ್ಲೇಖಿಸಿರುವನು. ಇವು ದಂಡಕಗಳಿದ್ದರೂ ದಂಡಕದ ನಿಯಮಗಳಿಗೆ ಸಂಪೂರ್ಣ ಹೊಂದುವದಿಲ್ಲ. ಸಾಮಾನ್ಯವಾಗಿ ಪ್ರಾರಂಭ ಮತ್ತು ನಂತರದಲ್ಲಿರಬೇಕಿದ್ದ ನಿರ್ದಿಷ್ಟ ಬಗೆಯ ಅಕ್ಷರ ಮತ್ತು ಗಣಗಳು ಇವುಗಳಲ್ಲಿ ಇರುವದಿಲ್ಲ. ಕೆಲವು ಪದ್ಯಗಳಂದದಲ್ಲಿ ಕ್ಲಪ್ತ ಗಣಸಂಖ್ಯೆ ಮತ್ತು ಪ್ರಾಸಯುಕ್ತ ಪಾದಗಳಲ್ಲಿ ಮುಂದರಿಯುತ್ತವೆ. ವೃತ್ತಗಂಧಿಯಂತೆ ಗದ್ಯ ಪದ್ಯ ಮಿಶ್ರವಿರುವ ದಂಡಕಗಳು ಸಹ ಈ ವರ್ಗದಲ್ಲಿ ಬರುತ್ತವೆ. ಇದೊಂದು ರೂಪಗೋಸ್ವಾಮಿ ರಚಿತ ಪದ್ಯ—ಗಣಧಾದಲ್ಲಿಯ ಯುಗ್ಮ—

ಭಕ್ತ್ಯೋಗ್ರಸೇನಾರ್ಪಿತಸ್ಫೀತ ಸಪ್ತಾಂಗ ।
ಮಾಂರಕ್ಷ ಕುಬ್ಜಾಂಗ ರಾಗೇಣ ಲಿಪ್ತಾಂಗ ॥

—ಪ್ರತಿಪಾದದಲ್ಲಿ ೪ ತ-ಗಣಗಳು (– –⏑), ಅಂತಪ್ರಾಸ, ೧೮ ಯುಗ್ಮಗಳಲ್ಲಿ ಮುಂದರಿದಿದೆ. ಕನ್ನಡದಲ್ಲಿ ಲಲಿತ ರಗಳೆ. ವಾಸ್ತವದಲ್ಲಿ ಇದು ಕಾಮಬಾಣವೆಂಬ ದಂಡಕ. ಇದರಲ್ಲಿ ಯಥೇಷ್ಟ ತ ಗಣಗಳು ಕೊನೆಯಲ್ಲಿ ೨ ಗುರು ಇರುತ್ತವೆ. ಇಲ್ಲಿ ಕೊನೆಯ ಗುರುಗಳಿಲ್ಲ. ನಾಲ್ಕು ಗಣಗಳ ಪಾದಗಳಲ್ಲಿ ಒಡೆದು ಅಂತಪ್ರಾಸವನ್ನು ಸೇರಿಸಲಾಗಿದೆ. ತಾಲಕ್ಕೆ ಒಗ್ಗುವ ಅಕ್ಷರ ವೃತ್ತಜನ್ಯ ಬಂಧ ಎಂದು ಬಗೆದರೆ ಇದರ ಮೂಲವನ್ನು ಮದನಾಕುಲ (೪ ತ ಗಣಗಳು) ಎಂಬ ಅಕ್ಷರ ವೃತ್ತದಲ್ಲಿ ಗುರುತಿಸಬಹುದು. ಜಯಕೀರ್ತಿ ಈ ವೃತ್ತವನ್ನು ಹೆಸರಿಸಿದ ಪ್ರಾಚೀನತಮ ಲಾಕ್ಷಣಿಕ. ಕಾಮಾವತಾರ, ಸಾರಂಗರೂಪಕ ಎಂಬ ಹೆಸರುಗಳಿಂದ ಸಹ ಇದು ಪ್ರಸಿದ್ಧವಿದೆ.

ಇದಿಷ್ಟು ಶ್ರೀ ಮಧ್ವಾಚಾರ್ಯರ ಮತ್ತು ಅವರ ಶಿಷ್ಯಂದಿರ ಸಂಸ್ಕೃತ ಪದ್ಯ ರಚನೆಯಲ್ಲಿ ಕಂಡುಬರುವ ಕನ್ನಡ ಪದ್ಯರಚನಾ ವೈಶಿಷ್ಟ್ಯಗಳ ಅಲ್ಪ ಪರಿಚಯ. ಶಾಸ್ತ್ರವಿರಲಿ ಸಾಹಿತ್ಯವಿರಲಿ ತಮ್ಮ ಭಾಷೆಯಲ್ಲಿಯ ಸ್ವಾರಸ್ಯಪೂರ್ಣ ಅಂಶಗಳನ್ನು ಬೇರೆ ಭಾಷೆಗಳಲ್ಲಿ ಮತ್ತು ಆ ಭಾಷೆಗಳಲ್ಲಿಯ ಇಂಥ ಅಂಶಗಳನ್ನು ತಮ್ಮ ಭಾಷೆಯಲ್ಲಿ ಸೇರಿಸಿ ಜಿಜ್ಞಾಸುಗಳನ್ನು ತಣಿಸುವದು ಭಾಷಾಕೋವಿದ ವಿದ್ವಾಂಸರ ಸಹಜ ಪ್ರವೃತ್ತಿ. ಭಾಷೆಗಳ ಸಿರಿವಂತಿಕೆ ಬೆಳೆಯುವದು ಈ ಬಗೆಯ ಕೊಡುಕೊಳೆಯಿಂದ

ಎಂದರೆ ತಪ್ಪಾಗದು. ಕನ್ನಡ ಮೊದಲಾದ ಭಾಷೆಗಳಾದರೂ ಇದಕ್ಕೆ ಅಪವಾದ ವಾಗವು. ಆದರೆ ಇಲ್ಲಿ ಕೊಟ್ಟಿರುವದಕ್ಕಿಂತ ಕೊಂಡಿರುವದೇ ಹೆಚ್ಚು. ಇದಕ್ಕೆ ಕಾರಣವಿಲ್ಲದಿಲ್ಲ. ಅಂದು ಸಂಸ್ಕೃತವು ಜ್ಞಾನಾರ್ಜನೆ ಜ್ಞಾನಪ್ರಸಾರಗಳಿಗೆ ಏಕಮೇವ ಸಾಧನವಿದ್ದಿತು. ಪಂಡಿತರಿಂದ ಪುರಸ್ಕಾರ ಮತ್ತು ವಿಸ್ತರಿತ ಪ್ರಸಾರಕ್ಕಾಗಿ ಸಂಸ್ಕೃತ ವನ್ನು ಆಶ್ರಯಿಸುವದು ಅನಿವಾರ್ಯವಿತ್ತು. ಸಂಸ್ಕೃತವನ್ನು ಪ್ರತಿಭಟಿಸಿ ಲೋಕ ಭಾಷೆಯನ್ನು ಆಶ್ರಯಿಸಿದ ಬೌದ್ಧ ಮತ್ತು ಜೈನಮತಾಚಾರ್ಯರು ವಿದ್ವಾಂಸರು ಇದನ್ನು ಮನಗಂಡು ಹಿಂದಿನಿಂದ ತಮ್ಮ ಮತೀಯ ಮತ್ತು ಇತರ ಬಗೆಯ ಸಾಹಿತ್ಯ ವನ್ನು ಹೆಚ್ಚಾಗಿ ಸಂಸ್ಕೃತದಲ್ಲಿ ನಿರ್ಮಿಸಿದರು.

ಸಂಸ್ಕೃತವಾದರೂ ಪರಕೀಯ ಭಾಷೆಯಲ್ಲ, ಭಾರತದ್ದು. ದೇವಭಾಷೆಯೆಂದು ಖ್ಯಾತಿವೆತ್ತಿದ್ದು. ಸಂಸ್ಕೃತವನ್ನು ರಕ್ತಗತವಾಗಿಸಿಕೊಂಡು ಅದರಲ್ಲಿಯೇ ಧಾರ್ಮಿಕ ಮತ್ತು ಅದಕ್ಕೆ ಅಡಿಗಲ್ಲಿನಂತಿರುವ ಭಕ್ತಿಯ ಅಂಗವಾಗಿ ಬಗೆಬಗೆಯ ಸ್ತುತಿ ಸ್ತೋತ್ರಗಳನ್ನು ರಚಿಸಿದ ಶ್ರೀ ಮಧ್ವಾಚಾರ್ಯರು, ಅವರ ಶಿಷ್ಯಂದಿರು ಇತರರು (ಅನ್ಯಮತೀಯರು ಸಹ, ಉದಾ: ರನ್ನ–ಅಜಿತಪುರಾಣ ಕೆಲವು ಪದ್ಯಗಳು, ಪಾಲ್ಕುರಿಕೆ ಸೋಮನಾಥ – ಬಸವೋದಾಹರಣ *) ತಾಯಿನುಡಿಯ ಸೌಂದರ್ಯಾಂಶಗಳನ್ನು ಮರೆಯಲಿಲ್ಲ. ಗುಣ ಮತ್ತು ಗಾತ್ರಗಳಲ್ಲಿ ಮೌಲಿಕವಿರುವ ನಾನಾ ಬಗೆಯ ಸಾಹಿತ್ಯ ನಿರ್ಮಿತಿಯೊಂದಿಗೆ ಅವರು ತಮ್ಮ ಕೃತಿಗಳಲ್ಲಿ ಬಳಸಿದ ಸಂಸ್ಕೃತ ಛಂದೋಬಂಧಗಳಿಗೆ ತಾಯಿನುಡಿಯ ವೈಶಿಷ್ಟ್ಯಗಳನ್ನು ತೊಡಿಸಿ ಸಂಸ್ಕೃತ ಛಂದಸ್ಸಿನ ಸಿರಿವಂತಿಕೆಯನ್ನು ಮತ್ತಿಷ್ಟು ಹೆಚ್ಚಿಸಿದರು. ಸಂಸ್ಕೃತ ವಾಙ್ಮಯ ವೈಭವದ ಸರ್ವಾಂಗೀಣ ದೃಷ್ಟಿಯಿಂದ ಅವರ ಈ ಕಾಣಿಕೆ ಅಲ್ಪವೆನಿಸಿದರೂ ಅವರೂ ಅವರ ತಾಯಿನುಡಿಯೂ ಸಂಸ್ಕೃತದಿಂದ ಪಡೆದ ಪ್ರಯೋಜನಕ್ಕಾಗಿ ಸಲ್ಲಿಸಬೇಕಿದ್ದ ಕೃತಜ್ಞತೆಯ ಕುರುಹಾಗಿದೆ. ಶಬರಿಯ ಬೋರೆ ಹಣ್ಣಿಗೂ ಸುದಾಮನ ಹಿಡಿ ಅವಲಕ್ಕಿಗೂ ಇರುವ ಬೆಲೆ ಇದಕ್ಕಿದೆ.

* ಇವು ಸಂಸ್ಕೃತದಲ್ಲಿವೆ.

ಅನುಬಂಧ

ವಡ್ಡಾರಾಧನೆಯು ವಿಚಾರ

'ವಡ್ಡರಾಧನೆಯು ವಿಚಾರ'ವು (ಪುಟ ೮-೧೯) ಪ್ರಕಟವಾದ ಬಳಿಕ ವಡ್ಡಾರಾಧನೆಯು ದ್ವಿತೀಯ ಮುದ್ರಣವು ಹೊರಬಂದಿತು (ಅಕ್ಟೋಬರ್ ೧೯೫೦). ಅದಕ್ಕಿರುವ ಮುನ್ನುಡಿಯಲ್ಲಿ ಮುದ್ರಿತ ಗ್ರಂಥಕ್ಕಿತ್ತ 'ವಡ್ಡಾರಾಧನೆ' ಹೆಸರು ಮತ್ತು ಗ್ರಂಥಕರ್ತೃತ್ವದ ವಿಷಯದಲ್ಲಿ ಈ ಲೇಖದಲ್ಲಿ ಎತ್ತಿದ ಸಮಸ್ಯೆಗಳ ಪ್ರಸ್ತಾಪವಿದ್ದು ಸಂಪಾದಕರು–

(೧) ಭಗವತೀ ಆರಾಧನಾ ವಡ್ಡಾರಾಧನಾ ಎಂದು ಸಹ ಪ್ರಸಿದ್ಧವಿತ್ತೆನ್ನಲು ಆಧಾರವಿಲ್ಲ;

(೨) ಗ್ರಂಥಕಾರ ಶಿವಕೋಟಿ. ಈತ ಮತ್ತು ಭಗವತೀ ಆರಾಧನಾದ ಶಿವಕೋಟಿ ಭಿನ್ನವ್ಯಕ್ತಿಗಳು. ಸಮಾಪ್ತಿ ವಾಕ್ಯದಲ್ಲಿಯ 'ಪೇಳ್ದ', 'ಪೇಳ್ದಾ [ರ್]' ಶಬ್ದಗಳು ಗಮನಾರ್ಹ. 'ಇಗೊ ಹೇಳಿದ, ಈಗ ಹೇಳಿದ ಹತ್ತೊಂಬತ್ತು ಕಥೆಗಳನ್ನು ಶಿವಕೋಟ್ಯಾಚಾರ್ಯರು ರಚಿಸಿದರು' ಎಂದು ಈ ವಾಕ್ಯದ ಅರ್ಥವಾಗುವದರಿಂದ ಕನ್ನಡ ಗ್ರಂಥಕರ್ತನ ಹೆಸರು ಶಿವಕೋಟಿ ಎಂದು ನಿಷ್ಪನ್ನವಾಗುವದು;

(೩) ಕನ್ನಡ ಗ್ರಂಥಕ್ಕೆ 'ವಡ್ಡಾರಾಧನೆ' ಎಂದಿರುವದು ಗ್ರಂಥಕಾರನಿತ್ತ ಹೆಸರು;

—ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು (ಪು. ೩೭-೩೮).

ಭಗವತೀ ಆರಾಧನಾ ಕಥೆಗಳನ್ನು ಒಳಗೊಂಡಿರುವ ಹರಿಷೇಣನ ಬೃಹತ್ ಕಥಾಕೋಶಕ್ಕೆ ಬೃಹದಾರಾಧನಾ ಕಥಾಕೋಶ ಎಂಬ ಇನ್ನೊಂದು ಹೆಸರಿದ್ದಿತೆಂಬುದನ್ನು ಈ ಮೊದಲು ಪ್ರಸ್ತುತ ಲೇಖದಲ್ಲಿ ಎತ್ತಿ ತೋರಿಸಿದೆ. ಬಹುಶಃ ಈ ಅಂಶ ಸಂಪಾದಕರ ಗಮನಕ್ಕೆ ಬಂದಂತಿಲ್ಲ. ಈ ಅಂಶವು ಭಗವತೀ ಆರಾಧನಾ ಬೃಹದಾರಾಧನಾ ಎಂದು ಸಹ ಪ್ರಸಿದ್ಧವಿದ್ದು ಅದೇ ಕನ್ನಡದಲ್ಲಿ ವಡ್ಡಾರಾಧನಾ ಆಗಿರುವದಕ್ಕೆ ಸಬಲ ಮತ್ತು ಪ್ರಾಚೀನ ಆಧಾರವಾಗಿದೆ.

ಕನ್ನಡ ಗ್ರಂಥಕ್ಕಿರುವ ಕವಿದತ್ತ ಹೆಸರು 'ವಡ್ಡಾರಾಧನೆ' ಮತ್ತು ಅದನ್ನು ರಚಿಸಿದವ ಒಬ್ಬ ಶಿವಕೋಟಿ ಎಂಬುದರ ಗ್ರಾಹ್ಯಾಗ್ರಾಹ್ಯತೆಗೆ ಸಮಾಪ್ತಿ ವಾಕ್ಯವನ್ನು ಬಿಟ್ಟು ಬೇರೊಂದು ಆಧಾರವಿಲ್ಲ. ಇದರ ಸ್ವೀಕೃತ ಪಾಠ ಇಂತಿದೆ—

ಈ ಪೇಳ್ದ ಪತ್ತೊಂ [ಬ] ತ್ತು ಕಥೆಗ [ಳಂ]

ಶಿವಕೋಟ್ಯಾಚಾರ್ಯರ್ ಪೇಳ್ದಾ [ರ್] —ವಡ್ಡಾರಾಧನೆ ಸಂಪೂರ್ಣಂ

—ಇಲ್ಲಿ 'ಪೇಳ್ದಾ [ರ್]' ಬದಲು 'ಪೇಳ್ದ', 'ಶಿವಕೋಟ್ಯಾಚಾರ್ಯರ್' ಬದಲು 'ರೇವಾ [ವ] ಕೋಟ್ಯಾಚಾರ್ಯರ್', 'ವಡ್ಡಾರಾಧನೆ ಸಂಪೂರ್ಣಂ' ಬದಲು 'ವಡ್ಡಾರಾಧನೆಯ ಕವಚವು', 'ವಡ್ಡಾರಾಧನೆಯ ಕವಚವೆಂಬಧಿಕಾರಉ' ಪಾಠಾಂತರಗಳಿವೆ. ಆದ್ದರಿಂದ ಇವುಗಳಲ್ಲಿ ಯಾವುದು ಗ್ರಾಹ್ಯ, ಯಾವುದು ತ್ಯಾಜ್ಯ

ಎಂಬುದರ ಪುನರ್ವಿಮರ್ಶೆ ಅಗತ್ಯವಾಗುವದು. ಇದಕ್ಕಾಗಿ ಅನುಸರಿಸಬೇಕಾದ ಮಾರ್ಗವನ್ನು ತೋರಿಸಿರುವದು ವಡ್ಡಾರಾಧನೆಯ ದ್ವಿತೀಯ ಮುದ್ರಣದ ಮಹತ್ವದ ಅಂಶಗಳಲ್ಲಿ ಒಂದು (ಪು. ೩-೧೧ ಮುನ್ನುಡಿ).

ಈ ಮುದ್ರಣಕ್ಕಾಗಿ ಏಳು ಹಸ್ತ ಪ್ರತಿಗಳನ್ನು (ಕ ಖ ಗ ಘ ಚ ಛ ಜ) ಬಳಸಿ ಕೊಳ್ಳಲಾಗಿದೆ. ಇವುಗಳಲ್ಲಿ ಗ–ಪ್ರತಿ ಕ–ದ ನೇರವಾದ ನಕಲು. ಖ–ಪ್ರತಿ ಕ–ದ ಗುಂಪಿಗೆ ಸೇರಿದ್ದರೂ ಅದರ ನೇರವಾದ ನಕಲಲ್ಲ. ಇವೆರಡಕ್ಕೆ ಒಂದು ಸಮಾನ ಮೂಲವಿದ್ದು ಅದು ಸಹ ಇನ್ನೊಂದರಿಂದ ಹುಟ್ಟಿಕೊಂಡಂತಿದೆ. ಸಮಾನ ಮೂಲ 'ರ', ಇನ್ನೊಂದು 'ಯ' ಎಂದಿಟ್ಟುಕೊಂಡರೆ, 'ಯ' ಆದಿಮೂಲ, ಅದರಿಂದ 'ರ' ಮತ್ತು 'ರ'ದಿಂದ ಕ ಖ ಗ--ಪ್ರತಿಗಳ ಜನ್ಯಜನಕ ಸಂಬಂಧವು ವ್ಯಕ್ತವಾಗುವದು.

ಇದೇ ರೀತಿ ಘ ಚ ಛ ಜ ಪ್ರತಿಗಳಿಗೂ 'ಯ' ಆದಿಮೂಲ. ಇವುಗಳ ಜನ್ಯ ಜನಕ ಸಂಬಂಧ ಇಂತಾಗುವದು. 'ಯ' ಆದಿಮೂಲ. ಇದರಿಂದ 'ಲ'. 'ಲ' ದಿಂದ 'ವ', 'ವ' ದಿಂದ ಘ ಚ ಛ ಜ ಪ್ರತಿಗಳು ಹುಟ್ಟಿದಂತಿದೆ.

ಹಸ್ತಪ್ರತಿಗಳ ಈ ಪರಸ್ಪರ ಸಂಬಂಧವನ್ನು ಗಮನಿಸಿ ಅವುಗಳನ್ನು ಕ ಖ ಗ ಮತ್ತು ಘ ಚ ಛ ಜ ಎಂದು ಎರಡು ಗುಂಪುಗಳಲ್ಲಿ ವಿಂಗಡಿಸಬಹುದಾಗಿದೆ. ಗ-ಪ್ರತಿ ಕ-ದ ನೇರವಾದ ನಕಲಿದ್ದರೂ ಕ-ದಲ್ಲಿಯ ಸಂದಿಗ್ಧ ಪಾಠಗಳನ್ನು ನಿರ್ಣಯಿಸಲು ಉಪಯುಕ್ತವಾಗಿದೆ.

ಇವೆರಡು ಗುಂಪುಗಳಲ್ಲಿ ಐಕ್ಯತೆ ಇದ್ದಾಗ ಮೂಲ ಅಂದರೆ ಕವಿ ಪ್ರತಿಯ (ಯ-ಪ್ರತಿಯ) ಪಾಠಲಬ್ಧವಾಗುವದು, ಮೊದಲನೆಯ ಗುಂಪಿನ ಯಾವುದಾದರೂ ಒಂದು ಪ್ರತಿಯ ಪಾಠಕ್ಕೆ ಎರಡನೆಯ ಗುಂಪಿನ ಯಾವುದಾದರೂ ಒಂದು ಪ್ರತಿಯ ಪಾಠವು ಸಮಾನವಾಗಿದ್ದರೆ ಆಗ ಅದೇ ಮೂಲ ಪಾಠವೆಂದು ನಿರ್ಣಿತವಾಗುವದು. ಇವೆರಡರಲ್ಲಿ ಮೊದಲನೆಯ ಅಂದರೆ ಕ ಖ ಗ ಗುಂಪು ಪ್ರಾಚೀನತಮ. ಎರಡನೆಯ ಘ ಚ ಛ ಜ ಗುಂಪು ಪ್ರಾಚೀನವಿದ್ದರೂ ಸ್ವಲ್ಪ ದೂರವಾಗಿದೆ.

ಸಂಪಾದಕರ ಈ ವಿವರಣೆಯ ಮೇರೆಗೆ ಸಮಾಪ್ತಿ ವಾಕ್ಯವನ್ನು ಪೃಥಕ್ಕರಿಸಿ ದಾಗ ಹೊರಡುವ ಚಿತ್ರವನ್ನು ಮುಂದಿನ ಪುಟದಲ್ಲಿ ಕೆಳಗೆ ಕೊಟ್ಟಿದೆ.

ಚ-ಛ-ಪ್ರತಿಗಳು ಅಪೂರ್ಣವಿರುವದರಿಂದ ಸಮಾಪ್ತಿವಾಕ್ಯದ ಮಟ್ಟಿಗೆ ಇವು ಅನುಪಯುಕ್ತ. ಗಖ–ಗಳಲ್ಲಿ ಶಿವಕೋಟ್ಯಾಚಾರ್ಯರ್ ಎಂದಿದ್ದರೆ ಘಜ–ಗಳಲ್ಲಿ ರೇವಾ (ವ) ಕೋಟ್ಯಾಚಾರ್ಯರ್ ಎಂದಿದೆ. ಖ–ಪ್ರತಿ–ಪ್ರಾಚೀನತಮವಿದ್ದು ರೇ–ಯನ್ನು ಶಿ– ಎಂದು ಓದಬಹುದಾಗಿದೆ. ಈ ರೀತಿ ಎರಡೂ ಗುಂಪುಗಳಲ್ಲಿ ಐಕ್ಯತೆ–ಉಂಟಾಗುವದ ರಿಂದ ಶಿವಕೋಟ್ಯಾಚಾರ್ಯರ್ ಪಾಠವನ್ನು ಸ್ವೀಕರಿಸಿದಂತಿದೆ. ಘ–ದಲ್ಲಿ 'ವ' ಇದ್ದ ದ್ದನ್ನು 'ವಾ' ಮಾಡಿದ್ದರೂ ಜ-ದಲ್ಲಿ 'ವ' ಇರುವದರಿಂದ ಇದನ್ನು ಉಪೇಕ್ಷಿಸಿದಂತಿದೆ.

'ಪೇಟ್ಬಾ' ಪಾಠ ಕ ಮತ್ತು ಅದರ ನಕಲು ಗ ಎರಡರಲ್ಲಿಯೇ ಇದೆ. 'ಪೇಟ್ಬ' ಪಾಠ ಇದೇ ಗುಂಪಿಗೆ ಸೇರಿದ ಖ–ದಲ್ಲಿ ಮತ್ತು ಎರಡನೆಯ ಗುಂಪಿನ ಘಜ–ಎರಡೂ

ಪ್ರತಿಗಳಲ್ಲಿ ಇರುವದರಿಂದ ಪಾಠೈಕ್ಯ ಉಂಟಾಗಿ ಇದೇ ಸ್ವೀಕಾರಾರ್ಹವಾಗುವದು.

'ವಡ್ಡಾರಾಧಣಂ ಸಂಪೂರ್ಣ್ಣಂ' ಪಾಠ ಕ ಮತ್ತು ಅದರ ನಕಲು ಗ ಎರಡರಲ್ಲಿ ಮಾತ್ರ ದೊರೆಯುವದು. 'ವಡ್ಡಾರಾಧನೆಯ ಕವಚವು' ಪಾಠ ಇದೇ ಗುಂಪಿನ ಖ-ದಲ್ಲಿ ಮತ್ತು ಎರಡನೆಯ ಗುಂಪಿನ ಘಜ ಎರಡೂ ಪ್ರತಿಗಳಲ್ಲಿದೆ. ಜ-ದಲ್ಲಿ 'ಅಧಿಕಾರಲು' ಪಾಠ ಹೆಚ್ಚಿಗೆ ಸೇರಿದ್ದರೂ 'ವಡ್ಡಾರಾಧನೆಯ ಕವಚವು' ಪಾಠದ ಮಟ್ಟಿಗೆ ಐಕ್ಯತೆ ಇರುವದರಿಂದ ಮತ್ತು ಖ-ಪ್ರತಿ-ಪ್ರಾಚೀನತಮ ಇರುವದರಿಂದ ಈ ಪಾಠವೇ ಸ್ವೀಕಾರಾರ್ಹವಾಗುವದು.

ಸ್ವೀಕಾರಾರ್ಹವೆನಿಸುವ ಈ ಪಾಠಗಳನ್ನು ಸೇರಿಸಿ ಪುನರ್ರಚಿಸಿದ ಸಮಾಪ್ತಿ ವಾಕ್ಯವು ಇಂತಾಗುವದು—

ಈ ಪೇೞ್ದ ಪತ್ತೊಂ[ಬ]ತ್ತು ಕಥೆಗ [ಳಂ] ಶಿವಕೋಟ್ಯಾರ್ಯರ್ ಪೇೞ್ದ ವಡ್ಡಾರಾಧನೆಯ ಕವಚವು.

—ಇದಕ್ಕೂ ಪ್ರಸ್ತುತ ಲೇಖದಲ್ಲಿ ಚರ್ಚೆಗಾಗಿ ಇಟ್ಟುಕೊಂಡ ಸಮಾಪ್ತಿ ವಾಕ್ಯಕ್ಕೂ ವ್ಯತ್ಯಸವಿಲ್ಲದಂತಾಗಿ ಕನ್ನಡ ಗ್ರಂಥಕ್ಕೆ 'ವಡ್ಡಾರಾಧನೆ' ಎಂದಿರುವದು ಕವಿದತ್ತಹೆಸರು, ಗ್ರಂಥಕಾರ ಅನ್ಯನಿದ್ದರೂ ಆತನ ಹೆಸರು ಶಿವಕೋಟಿ ಎಂಬುದು ಸಂದಿಗ್ಧವಾಗಿಯೇ ಉಳಿಯುವದು.

* * * *

ಸಮಾಪ್ತಿ ವಾಕ್ಯದ ಪ್ರಥಕ್ಕರಣ

ಸ್ವೀಕೃತ ಪಾಠ	ಗುಂಪು-೧		ಗುಂಪು-೨	
	ಕ ಗ	ಖ	ಘ	ಜ
(೧) ಶಿವಕೋಟ್ಯಾಚಾರರ್	ತ್ರುಟಿತ (ಗ-ದಲ್ಲಿ ಶಿವಕೋಟ್ಯಾಚಾರ್ಯರ್)	ಶಿವಕೋಟ್ಯಾ-ಚಾರ್ಯರ್	ರೇವಾಕೊಟ್ಯಾಚಾರ್ಯರ್ (ಮೊದಲು 'ವ' ಬರೆದು ನಂತರ ಅದಕ್ಕೆ 'ಾ' ಸೇರಿಸಲಾಗಿದೆ)	ರೇವಕೋಟ್ಯಾಚಾರ್ಯರರ್
(೨) ಪೇೞ್ದಾ (ರ್)	ಪೇೞ್ದಾ (ಕ ಗ-ಎರಡ-ರಲ್ಲೂ)	ಪೇೞ್ದ	ಪೇೞ್ದ	ಪೇೞ್ದ
(೩) ವದ್ಡಾರಾಧನೆ ಸಂಪೂರ್ಣಂ	ವಡ್ಡಾರಾಧಣಂ ಸಂಪೂರ್ಣ್ಣಂ (ಕ ಗ-ಎರಡರಲ್ಲೂ)	ವಡ್ಡಾರಾಧನೆಯ: ಕವಚವು	ವಡ್ಡಾರಾಧನೆಯ ಕವಚವೆಂಬಧಿಕಾರಲು (ಘಜ ಎರಡರಲ್ಲೂ)	

ಆಧಾರ ಸಾಹಿತ್ಯ

ಸಸ್ಕೃತ **ಸಂಕೇತ**

೧. ನಾಟ್ಯಶಾಸ್ತ್ರ, ಭರತಮುನಿ, ನಿರ್ಣಯ ಸಾಗರ ಮತ್ತು ಗಾಯಕವಾಡ ಸಂಸ್ಕರಣಗಳು — ನಾ. ಶಾ.

೨. ಛಂದಃಶಾಸ್ತ್ರ—ಪಿಂಗಲ, ನಿರ್ಣಯಸಾಗರ, ಹಲಾಯುಧಟೀಕೆ — ಪಿಂ. ಛಂ

೩. ಜನಾಶ್ರಯಿಛಂದೋವಿಚಿತಿ–ತ್ರಾವಣಕೋರ ವಿ.ವಿ., ೧೯೧೯ — ಜನನಾಶ್ರಯಿ

೪. ಸಭಾಷ್ಯಾರತ್ನಮಂಜೂಷಾ, ಸಂ.ಹ.ದಾ. ವೇಲಣಕರ, ಭಾರತೀಯ ಜ್ಞಾನಪೀಠ, ಕಾಶೀ, ೧೯೪೪ — ರ. ಮಂ.

೫. ಜಯದಾಮನ್ (ಜಯದೇವಚ್ಛಂದ, ಜಯಕೀರ್ತಿ–ಛಂದೋನುಶಾಸನ, ಕೇದಾರಭಟ್ಟ–ವೃತ್ತರತ್ನಾಕರ, ಹೇಮಚಂದ್ರ--ಛಂದೋನುಶಾಸನ), ಸಂ.ಹ.ದಾ. ವೇಲಣಕರ — ಜಯದಾಮನ್

೬. ಸ್ವಯಂಭೂಛಂದ (ಅಪಭ್ರಂಶ), ಸಂ.ಹ.ದಾ. ವೇಲಣಕರ, ರಾಜಸ್ಥಾನ ಪ್ರಾಚ್ಯ ವಿದ್ಯಾ ಪ್ರತಿಷ್ಠಾನ, ೧೯೬೨ — ಸ್ವಯಂಭೂ

೭. ಛಂದೋನುಶಾಸನ,—ಹೇಮಚಂದ್ರ, ಸಂ.ಹ.ದಾ. ವೇಲಣಕರ, ಸಿಂಘೀ ಜೈನಗ್ರಂಥಮಾಲಾ, ಮುಂಬಯಿ, ೧೯೬೧ — ಹೇ. ಛಂ

೮. ಕಾವ್ಯಾಲಂಕಾರ—ಭಾಮಹ, ಸಂ. ದೇವೇಂದ್ರನಾಥಶರ್ಮಾ, ಬಿಹಾರ ರಾಷ್ಟ್ರಭಾಷಾ ಪರಿಷದ್, ೧೯೬೨ — ಕಾ. ಲಂ.

೯. ಕಾವ್ಯಾದರ್ಶ ದಂಡಿ —ಸಂ. ಎಸ್. ಕೆ. ಬೆಳವಲಕರ ಮತ್ತು ರಂಗಾಚಾರ್ಯರೆಡ್ಡಿ, ಮುಂಬಯಿ, ೧೯೧೯ — ಕಾ. ದ.

೧೦. ಕಾವ್ಯಮೀಮಾಂಸಾ-ರಾಜಶೇಖರ, ಸಂ. ಗಂಗಾಸಾಗರರಾಯ, ಚೌಖಾಂಬಾವಿದ್ಯಾಭವನ, ವಾರಣಾಸಿ, ೧೯೬೪ — ಕಾ. ಮೀಂ.

೧೧. ಕಾವ್ಯಾನುಶಾಸನ, ಹೇಮಚಂದ್ರ,–ಸಂ. ರಸಿಕಲಾಲ ಪಾರೀಖ ಮತ್ತು ಎ.ಎಂ. ಕುಲಕರ್ಣಿ, ಸಂ. ೧–೨, ಶ್ರೀ ಮಹಾವೀರ ಜೈನವಿದ್ಯಾಲಯ, ಮುಂಬಯಿ — ಹೇ. ಕಾ.

೧೨. ಅಲಂಕಾರ ಸಂಗ್ರಹ, ಅಮೃತಾನಂದಯೋಗಿನ್, ಅಡ್ಯಾರ ಲೈಬ್ರರಿ, ಮದ್ರಾಸ

೧೩. ಮಂದಾರ ಮರಂದ ಚಂಪೂ–ಕೃಷ್ಣಕವಿ, ನಿರ್ಣಯಸಾಗರ

೧೪. ಸಂಗೀತರತ್ನಾಕರ--ಶಾರ್ಙ್ಗದೇವ, ಅಡ್ಯಾರ ಲೈಬ್ರರಿ, ಮದ್ರಾಸ — ಸಂ. ರ.

ಸಂಸ್ಕೃತ	ಸಂಕೇತ
೧೫. ಮಾನಸೋಲ್ಲಾಸ ಅಥವಾ ಅಭಿಲಷಿತಾರ್ಥ ಚಿಂತಾಮಣಿ, —ಪಶ್ಚಿಮ ಚಾಲುಕ್ಯಸೋಮೇಶ್ವರ-ಗಾಯಕವಾಡ ಸಂಸ್ಕರಣ	ಮಾನಸೋಲ್ಲಾಸ
೧೬. ಸಂಗೀತಚೂಡಾಮಣಿ, —ಪಶ್ಚಿಮ ಚಾಲುಕ್ಯ ಜಗದೇಕಮಲ್ಲ	
೧೭. ಸಂಗೀತ ಸಮಯಸಾರ,—ಪಾರ್ಶ್ವದೇವ, ಸಂ. ಟಿ. ಗಣಪತಿಶಾಸ್ತ್ರಿ, ತ್ರಿವಾಂದ್ರಮ್ ಸಂಸ್ಕೃತ ಗ್ರಂಥಮಾಲೆ, ೧೯೨೫	
೧೮. ಸಂಗೀತ ಸುಧಾ—ತಂಜಾವರ ಅರಸು ರಘುನಾಥ ನಾಯಕ	ಸಂ. ಸುಧಾ.
೧೯. ಸಂಗೀತರಾಜ—ಚಿತ್ತೋಡ ಮಹಾರಾಣಾಕುಂಭಕರ್ಣ, ಕಾಶೀ ಹಿಂದೂ ವಿಶ್ವವಿದ್ಯಾಲಯ, ೧೯೬೩	ಸಂ. ರಾಜ.
೨೦. ಸಂಗೀತ ದರ್ಪಣ—ಚತುರ ದಾಮೋದರ, ಮದ್ರಾಸ ಸರಕಾರ ಪ್ರಾಚ್ಯ ಗ್ರಂಥಮಾಲೆ, ೧೯೫೨	ಸಂ. ದರ್ಪಣ
೨೧. ಸಂಗೀತ ಸಾರಾಮೃತ—ತಂಜಾವರ ಅರಸು ತುಳಜಾಜಿ ಮಹಾರಾಜ	ಸಂ. ಸಾರಾಮೃತ
೨೨. ಸಂಗ್ರಹ ಚೂಡಾಮಣಿ, ಗೋವಿಂದಾಚಾರ್ಯ, ಅಡ್ಯಾರ್ ಲೈಬ್ರರಿ, ಮದ್ರಾಸ, ೧೯೩೮	
೨೩. ದಶರೂಪಕ-ಧನಂಜಯ,—ಸಂ.ಕೆ.ವಿ. ಸುಬ್ಬಣ್ಣ, ಶಿವಮೊಗ್ಗ, ೧೯೫೮	
೨೪. ಭಾವಪ್ರಕಾಶನ,—ಶಾರದಾತನಯ, ಗಾಯಕವಾಡ ಸಂಸ್ಕರಣ	
೨೫. ನಾಟ್ಯಶಾಸ್ತ್ರ ಸಂಗ್ರಹ (ಸಂ. ೨), ಸಂ.ಕೆ. ವಾಸುದೇವ ಶಾಸ್ತ್ರೀ, ತಂಜಾವರ ಸರಸ್ವತಿ ಮಹಾಲ ಗ್ರಂಥಮಾಲೆ ೧೯೬೧	
೨೬. ಬೃಹದ್ದೇಶೀ-ಮತಂಗಮುನಿ ಪ್ರಣೀತ, ಸಂ. ಕೆ. ಸಾಂಬಶಿವ ಶಾಸ್ತ್ರೀ, ತ್ರಿವಾಂದ್ರಮ್ ಸಂಸ್ಕೃತ ಗ್ರಂಥಮಾಲೆ ೧೯೨೮	
೨೭. ದ್ವಾದಶ ಸ್ತೋತ್ರ, ಯಮಕ ಭಾರತ, ಕಂದುಕಸ್ತೋತ್ರ, ಇತ್ಯಾದಿ.—ಶ್ರೀ ಮಧ್ವಾಚಾರ್ಯಕೃತ.	
೨೮. ಸ್ತೋತ್ರಮಹೋದಧಿ (ದ್ವಾದಶಸ್ತೋತ್ರ ಮತ್ತು ಇತರ ಸ್ತೋತ್ರಗಳು), ಸಂ. ಉದ್ಧವಾಚಾರ್ಯ ಐನಾಪುರೆ, ರಾಮತತ್ವ ಪ್ರಕಾಶನ, ಬೆಳಗಾವಿ, ೧೯೨೩	

ಸಂಸ್ಕೃತ **ಸಂಕೇತ**

೨೯. ಶ್ರೀ ರಾಘವೇಂದ್ರ ತಂತ್ರ, ಕೃಷ್ಣಾವಧೂತಕೃತ, ೧೯೩೭

೩೦. ಸ್ತವಮಾಲಾ—ರೂಪಗೋಸ್ವಾಮಿ, ಜೀವಗೋಸ್ವಾಮಿ ವ್ಯಾಖ್ಯಾ, ನಿರ್ಣಯಸಾಗರ ಮುದ್ರಣ, ಮುಂಬಯಿ, ೧೮೭೩

೩೧. ಕೃಷ್ಣಕರ್ಣಾಮೃತ—ಲೀಲಾಶುಕ

೩೨. ಮಹಾಭಾರತ—(ಸಂಬಂಧಿತ ಪರ್ವಗಳು,-ನೀಲಕಂಠೀಯ, ಸಂ.ಚಿ.ವಿ. ವೈದ್ಯ ಮತ್ತು ಭಾಂಡಾರಕರ ಸಂಸ್ಥೆಯ ಸಂಸ್ಕರಣ) ಮ.ಭಾ.

೩೩. ಮಹಾಪುರಾಣ—ಜಿನಸೇನಕೃತ, ಸಂ. ಪನ್ನಾಲಾಲಜೈನ, ಭಾರತೀಯ ಜ್ಞಾನಪೀಠ, ಕಾಶೀ ೧೯೫೧ ಮ. ಪು.

೩೪. ಸಂಗೀತ ಮಕರಂದ, ವೇದಸೂರಿಕೃತ, ಸಂ.ಕೆ. ವಾಸುದೇವಶಾಸ್ತ್ರೀ, ತಂಜಾವರ ಸರಸ್ವತಿಮಹಾಲ ಲೈಬ್ರರಿ ಪತ್ರಿಕೆ, (ಸಂ. ೧೧, ಸಂ. ೧, ೧೯೪೬) ಸಂ. ಮಕರಂದ

೩೫. ಭಗವತೀ ಆರಾಧನಾ (ಪ್ರಾಕೃತ)–ಶಿವಾರ್ಯ ವಿರಚಿತ, –ಮುನಿ ಅನಂತಕೀರ್ತಿ ದಿಗಂಬರ ಜೈನಗ್ರಂಥಮಾಲಾ, ಮುಂಬಯಿ ಭ.ಆ.

೩೬. ಲಲಿತ ವಿಸ್ತರ,—ಸಂ.ಪಿ.ಎಲ್. ವೈದ್ಯ, ಮಿಥಿಲಾ ವಿದ್ಯಾಪೀಠ, ದರ್ಭಾಂಗಾ, ೧೯೫೮

೩೭. ಬೃಹತ್ ಕಥಾಕೋಷ—ಹರಿಷೇಣ, ಸಂ. ಎ.ಎನ್. ಉಪಾಧ್ಯೆ, ಸಿಂಘೀ ಜೈನಗ್ರಂಥಮಾಲಾ, ಮುಂಬಯಿ, ೧೯೪೩ ಬೃ. ಕೋ.

೩೮. ವಿಕ್ರಮಾಂಕಾಭ್ಯುದಯ,—ಪಶ್ಚಿಮ ಚಾಲುಕ್ಯ-ಸೋಮೇಶ್ವರ, ಗಾಯಕವಾಡ ಮುದ್ರಣ, ೧೯೬೬

೩೯. ರಘುನಾಥಾಭ್ಯುದಯ—ರಾಮಭದ್ರಾಂಬಾ, ಸಂ.ಟಿ.ಆರ್. ಚಿಂತಾಮಣಿ, ಮದ್ರಾಸ ವಿ.ವಿ. ೧೯೩೮

೪೦. ಅಭಿಜ್ಞಾನ ಶಾಕುಂತಲ ಕಾಲಿದಾಸ, ರಾಘವಭಟ್ಟಟೀಕಾ, ಸಂ. ಎಂ.ಆರ್. ಕಾಳೆ, ೧೯೬೧

೪೧. ವೇಣೀಸಂಹಾರ,—ಭಟ್ಟನಾರಾಯಣ-ಜಗದ್ಧರಟೀಕಾ, ಸಂ. ಎಂ.ಆರ್. ಕಾಳೆ, ೧೯೩೬

೪೨. ಮುದ್ರಾರಾಕ್ಷಸ—ವಿಶಾಖದತ್ತ–ಧುಂಡಿರಾಜೀಯಟೀಕಾ, ಸಂ. ಕೆ.ಟಿ. ತೆಲಂಗ, ಮುಂಬಯಿ, ೧೮೮೪

ಸಂಕೇತ

ಹಿಂದಿ

೧. ವೈದಿಕ ಛಂದೋಮೀಮಾಂಸಾ–ಯುಧಿಷ್ಠಿರ ಮೀಮಾಂಸಕ.
ರಾಮಲಾಲಕಪೂರ ಟ್ರಸ್ಟ್, ೧೯೫೯ ವೈ. ಛಂ. ಮೀ.
೨. ರಾಧಾ ಗೋವಿಂದ ಸಂಗೀತಸಾರ—ಜಯಪುರ ಸವಾಯಿ
ಪ್ರತಾಪದೇವಕೃತ, ಪೂನಾ ಗಾಯನ ಸವಾಜ, ೧೯೫೦ ರಾ. ಸಂ. ಸಾರ
೩. ಪ್ರಾಕೃತ ಸಾಹಿತ್ಯಕಾ ಇತಿಹಾಸ್--ಜಗದೀಶಚಂದ್ರ ಜೈನ,
ಚೌಖಾಂಬಾ ವಿದ್ಯಾಭವನ, ವಾರಣಾಸಿ, ೧೯೬೦ ಪ್ರಾ. ಸಾ. ಇ.
೪. ಜೈನ ಸಾಹಿತ್ಯ ಔರ ಇತಿಹಾಸ್—ನಾಥುರಾಮಪ್ರೇಮೀ,
ಹಿಂದೀ ಗ್ರಂಥ ರತ್ನಾಕರ, ಮುಂಬಯಿ, ೧೯೫೬ ಜೈ. ಸಾ. ಇ.

ಮರಾಠಿ

೧. ಭರತಮುನೀಚೇ ನಾಟ್ಯಶಾಸ್ತ್ರ—ಗೋದಾವರಿ ಕೇತಕರ,
ಪೊಪ್ಯುಲರ ಪ್ರಕಾಶನ, ಮುಂಬಯಿ, ೧೯೬೩
೨. ಲೋಕನಾಟ್ಯಾಚಿ ಪರಂಪರಾ—ವಿ. ಕೆ. ಜೋಶಿ

ಕನ್ನಡ

೧. ಕವಿರಾಜಮಾರ್ಗ—ಸಂ. ಎಂ. ವಿ. ಸೀತಾರಾಮಯ್ಯ,
ಬೆಂಗಳೂರು, ೧೯೬೮ ಕ. ಮಾ.
೨. ವಡ್ಡಾರಾಧನೆ—ಶಿವಕೋಟ್ಯಾಚಾರ್ಯ ವಿರಚಿತ,
ಸಂ.ಡಿ.ಎಲ್. ನರಸಿಂಹಾಚಾರ್ಯ, ಶಾರದಾ ಮಂದಿರ,
ಮೈಸೂರು, ೧೯೫೫
,, —ದ್ವಿತೀಯ ಸಂಸ್ಕರಣ ೧೯೭೦ ವಡ್ಡಾ.
೩. ಪಂಪಭಾರತ–ಭಾಗ ೧-೨, ಮೈಸೂರು ವಿ. ವಿ. ಪಂ. ಭಾ.
೪. ಶಾಂತಿಪುರಾಣ—ಪೊನ್ನ-ಸಂ.ಎ. ವೆಂಕಟರಾವ ಮತ್ತು
ಎಚ್. ಶೇಷ ಅಯ್ಯಂಗಾರ್, ಮದ್ರಾಸ ವಿ.ವಿ. ೧೯೨೯ ಶಾಂ. ಪು.
೫. ಗದಾಯುದ್ಧ—ರನ್ನ,–ಸಂ. ಎಸ್.ಜಿ. ನರಸಿಂಹಾಚಾರ್
ಮತ್ತು ಎಂ.ಎ. ರಾಮಾನುಜಯ್ಯಂಗಾರ್, ಕಾವ್ಯಮಂಜರಿ,
೧೮೯೫ ಗ. ಯು. (೧)
,,—ಸಂ. ಎಂ.ಎ. ರಾಮಾನುಜಯ್ಯಂಗಾರ್, ೧೯೩೫ ಗ.ಯು. (೨)
,,—ಸಂ. ಕೆ.ವಿ. ಕೃಷ್ಣಭಟ್ಟ ಗ. ಯು. (ಕೃ)
ಗದಾಯುದ್ಧ ಸಂಗ್ರಹ—ಭಾಗ ೧,–ತೀ.ನಂ.ಶ್ರೀ.,
ಕಾವ್ಯಾಲಯ, ಮೈಸೂರು ೧೯೬೩ ಗ. ಯು. (ಸಂ)

ಸಂಕೇತ

೬. ಅಜಿತ ತೀರ್ಥಂಕರ ಪುರಾಣ ತಿಲಕಂ–ರನ್ನ,–
ಸಂ. ಹೆಚ್. ದೇವೀರಪ್ಪ ಮತ್ತು ಡಿ. ಜವರೇಗೌಡ, ೧೯೫೫ ಅ. ಪು.

೭. ಛಂದೋಂಬುಧಿ—ನಾಗವರ್ಮ, ಕಿಟೆಲ್ ಸಂಪಾದಿತ ನಾ. ಛಂ.

೮. ಮಲ್ಲಿನಾಥಪುರಾಣ—ನಾಗಚಂದ್ರ (ಅಭಿನವಪಂಪ),
ಸಂ.ಎಸ್.ಜಿ. ನರಸಿಂಹಚಾರ್ ಮತ್ತು ಎಂ.ಎ.
ರಾಮಾನುಜಯ್ಯಂಗಾರ್, ೧೮೯೫ ಮ. ಪು.

೯. ರಾಮಚಂದ್ರ ಚರಿತ ಪುರಾಣ (ಪಂಪ ರಾಮಾಯಣ)-
ನಾಗಚಂದ್ರ–ಸಂ.ಬಿ. ಲೀವಿಸ್ ರೈಸ್, ಬಿಬ್ಲಿಯೋಥಿಕಾ
ಕರ್ನಾಟಿಕಾ, ಬೆಂಗಳೂರು, ೧೮೯೨ ರಾ. ಪು.

೧೦. ಕರ್ಣಾಟಕ ಭಾಷಾ ಭೂಷಣ–(ಇಮ್ಮಡಿ) ನಾಗವರ್ಮ,
(ಸಂಸ್ಕೃತ), ಸಂ. ಎಲ್. ರೈಸ, ೧೮೮೪ ಭಾ.ಭೂ. ರೈಸ

೧೧. ಕಾವ್ಯಾವಲೋಕನ ಮತ್ತು ಕರ್ಣಾಟಕ ಭಾಷಾಭೂಷಣ
(ಇಮ್ಮಡಿ) ನಾಗವರ್ಮ–ಸಂ. ಆರ್. ನರಸಿಂಹಾಚಾರ್,
೧೯೦೩ ಕಾ. ಲೋ. (೧)
ಕಾವ್ಯಾವಲೋಕನ -(ಇಮ್ಮಡಿ) ನಾಗವರ್ಮ,
ಸಂ. ಶಿ. ಶಿ. ಬಸವನಾಳ ಮತ್ತು ಕೇಪು
ಶಂಕರನಾರಾಯಣ, ೧೯೩೯ ಕಾ. ಲೋ. (೨)

೧೨. ಅಭಿಧಾನ ವಸ್ತುಕೋಶ—(ಇಮ್ಮಡಿ) ನಾಗವರ್ಮ,
ಸಂ. ಎ. ವೆಂಕಟರಾವ ಮತ್ತು ಎಚ್. ಶೇಷಯ್ಯಂಗಾರ್
ಮದ್ರಾಸ ವಿ. ವಿ., ೧೯೩೩ ಅ. ವ. ಕೋ.

೧೩. ಅನಂತನಾಥಪುರಾಣ—ಜನ್ನಕವಿ

೧೪. ಯಶೋಧರ ಚರಿತ—ಜನ್ನಕವಿ, ಸಂ. ಕೆ. ವಿ. ರಾಘವಾಚಾರ್

೧೫. ಕಬ್ಬಿಗರಕಾವ—ಆಂಡಯ್ಯ, ಸಂ. ದೇ. ಜವರೇಗೌಡ,
ಶಾರದಾ ಮಂದಿರ, ಮೈಸೂರು, ೧೯೬೯ ಕ.ಕಾ.

೧೬. ಕಾವ್ಯಸಾರ, ಅಭಿನವವಾದಿ ವಿದ್ಯಾನಂದ ಸಂಕಲಿತ

೧೭. ಸೂಕ್ತಿಸುಧಾರ್ಣವ—ಮಲ್ಲಿಕಾರ್ಜುನ ಸಂಕಲಿತ

೧೮. ಗಿರಿಜಾ ಕಲ್ಯಾಣ—ಹರಿಹರ, ನಂದೀಮಠ ಸಂಪಾದಿತ

೧೯. ಮೋಹನ ತರಂಗಿಣಿ—ಕನಕದಾಸ ರಚಿತ

೨೦. ಶಬ್ದಮಣಿದರ್ಪಣ—ಕೇಶಿರಾಜ,–ಸಂ. ಕಿಟೆಲ್–ಪಂಜೆ, ೧೯೨೦ ಶ. ದ.

೨೧. ಹರಿಶ್ಚಂದ್ರಕಾವ್ಯ—ರಾಘವಾಂಕ, ಸಂ. ಎನ್.
ಬಸವಾರಾಧ್ಯ ಮತ್ತು ಎನ್. ಬಸಪ್ಪ, ೧೯೫೫ ಹ. ಕಾ.

ಸಂಕೇತ

೨೨. ಸೋಮನಾಥಚಾರಿತ್ರ—ರಾಘವಾಂಕ,—ಸಂ. ಆರ್. ಸಿ.
ಹಿರೇಮಠ ಮತ್ತು ಎಂ. ಎಸ್. ಸುಂಕಾಪುರ, ಕರ್ನಾಟಕ
ವಿ. ವಿ. ಧಾರವಾಡ, ೧೯೬೧ ಸೋ. ಚಾ.

೨೩. ಕವಿಜಿಹ್ವಾಬಂಧನ—ಈಶ್ವರಕವಿ.—ಸಂ. ಆರ್. ಎಸ್.
ಪಂಚಮುಖಿ, ಕರ್ನಾಟಕ ಸಂಶೋಧನ ಸಂಸ್ಥೆ,
ಧಾರವಾಡ, ೧೯೫೦ ಕ. ಜಿ.

೨೪. ಛಂದಃಸಾರ—ಗುಣಚಂದ್ರ—ಸಂ. ಎಂ. ಮರಿಯಪ್ಪಭಟ್ಟ,
ಎ. ಒ. ಆರ್. (ಮದ್ರಾಸ್), ಸಂ. ೬ ಗು. ಛಂ.

೨೫. ವಚನಶಾಸ್ತ್ರ ರಹಸ್ಯ—ಆರ್. ಆರ್. ದಿವಾಕರ

೨೬. ವಚನಧರ್ಮಸಾರ—ಎಂ. ಆರ್. ಶ್ರೀನಿವಾಸಮೂರ್ತಿ

೨೭. ಕರ್ಣಾಟಕ ಕವಿಚರಿತ್ರೆ—ಆರ್. ನರಸಿಂಹಚಾರ್ ಕ. ಕ. ಚ.

೨೮. ಕನ್ನಡ ಕೈಪಿಡಿ, ಮೈಸೂರು ವಿ. ವಿ. (ಭಾಗ ೧-೨) ಕೈಪಿಡಿ-೧, ಕೈಪಿಡಿ-೨.

೨೯. ಮೂರು ಉಪನ್ಯಾಸಗಳು—ಗೋವಿಂದ ಪೈ,
ಕರ್ನಾಟಕ ಸಂಶೋಧನ ಸಂಸ್ಥೆ, ಧಾರವಾಡ ೧೯೪೦

೩೦. ಕನ್ನಡ ಸಾಹಿತ್ಯ ಚರಿತ್ರೆ—ರಂ. ಶ್ರೀ. ಮುಗಳಿ, ೧೯೬೪ ಕ. ಸಾ. ಚ.

೩೧. ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ—ಎಂ. ಮರಿಯಪ್ಪಭಟ್ಟ,
೧೯೬೦ ಸಂ. ಕ.ಸಾ.ಚ.

೩೨. ಭಾರತೀಯ ಕಾವ್ಯಮೀಮಾಂಸೆ—ತೀ.ನಂ.ಶ್ರೀ. ೧೯೬೧ ಭಾ. ಕಾ. ಮೀ.

೩೩. ಸಮಾಲೋಕನ—ತೀ. ನಂ. ಶ್ರೀ.

೩೪. ಸಾಹಿತ್ಯ ಸಂಶೋಧನ—ದ. ರಾ. ಬೇಂದ್ರೆ, ಮನೋಹರ
ಗ್ರಂಥ ಪ್ರಕಾಶನ, ಧಾರವಾಡ, ೧೯೪೦ ಸಾ. ಸಂ.

೩೫. ಆಂಡಯ್ಯನೂ ಕನ್ನಡಮೆನಿಪ್ಪಾನಾಡೂ—ಮುಳಿಯ
ತಿಮ್ಮಪ್ಪಯ್ಯ

೩೬. ತವನಿಧಿ (ಕಬ್ಬಿಗರಕಾವ)—ರಂ. ಶ್ರೀ. ಮುಗಳಿ

೩೭. ಸಾಹಿತ್ಯ ಸಂಶೋಧನೆ ಮತ್ತು ಸಮಾಲೋಚನೆ (ಕಬ್ಬಿಗರ
ಕಾವವನ್ನು ಕುರಿತು)—ಸದಾನಂದನಾಯಕ

೩೮. ಸಂಸ್ಕೃತ ನಾಟಕ—ಎ.ಆರ್ ಕೃಷ್ಣಶಾಸ್ತ್ರೀ, ಮೈಸೂರು ವಿ.ವಿ.
೧೯೫೫

೩೯. ಕೆಲವು ಕನ್ನಡ ಕವಿಗಳ ಜೀವನ ಕಾಲ ವಿಚಾರ,—
ಎ. ವೆಂಕಟಸುಬ್ಬಯ್ಯ, ಬೆಂಗಳೂರು ೧೯೨೭ ಕೆ. ಕ. ಜೀ.

೪೦. ಕನ್ನಡ ಛಂದೋವಿಕಾಸ—ಡಿ.ಎಸ್. ಕರ್ಕಿ, ೧೯೫೬ ಕ. ಛಂ. ವಿ.

ಸಂಕೇತ

೪೧. ಕರ್ನಾಟಕ ಸಂಗೀತವೂ ದಾಸಕೂಟವೂ—ಹುಲಗೂರು ಕೃಷ್ಣಾಚಾರ್ಯ, ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ, ೧೯೫೧ ಕ. ಸಂ. ದಾ

೪೨. ಮಾಧ್ವವಾಙ್ಮಯ ತಪಸ್ವಿಗಳು-ಪಂಡರೀನಾಥಾಚಾರ್ಯ ಗಲಗಲಿ, ಗದಗ, ೧೯೬೯

೪೩. ಯಕ್ಷಗಾನ ಸಭಾಲಕ್ಷಣ, ಪಾವಂಜೆ ಪ್ರಕಾಶನ, ಉಡುಪಿ

೪೪. ಯಕ್ಷಗಾನ ಕೈಪಿಡಿ,-ಕೃಷ್ಣ ಭಂಡಾರಿ, ಸ್ವರ್ನವಲ್ಲಿ, ಸೋಂದಾ (ಶಿರ್ಶಿ) ಯ. ಗಾ. ಕೈ.

೪೫. ಯಕ್ಷಗಾನ ಬಯಲಾಟ—ಶಿವರಾಮ ಕಾರಂತ, ಹರ್ಷ ಮುದ್ರಣ, ಪುತ್ತೂರು ೧೯೫೭ ಯ.ಗಾ.ಬ

೪೬. ಯಕ್ಷಗಾನ ಸಾಹಿತ್ಯ-ಕೆ. ಎಂ. ಕೃಷ್ಣರಾವ, ಮಿಂಚಿನಬಳ್ಳಿ ಧಾರವಾಡ ಯ. ಗಾ. ಸಾ.

೪೭. ಪಾರ್ತಿಸುಬ್ಬ—ಮುಳಿಯ ತಿಮ್ಮಪ್ಪಯ್ಯ

೪೮. ಉತ್ತರ ಕರ್ನಾಟಕ ಜಾನಪದ ರಂಗಭೂಮಿ—ಚಂದ್ರಶೇಖರ ಕಂಬಾರ, ಮನ್ವಂತರ, ಧಾರವಾಡ, ೧೯೬೫

English

(1) Bhoja's Sringara Prakasa—V. Raghavan, 1963 ಭೋಜ.ಶೃಂ.ಪ್ರ.

(2) Life of Hemachandra—G. Buhler, 1936 ಹೇ.ಜಿ.ಚ

(3) History of Kannada Literature—R. Narasimhachar, Mysore University, 1940. ಕ.ಸಾ.ಇ.

(4) Mysore Government Oriental Library Catalogue (Sanskrit Manscripts).

(5) Historical Study of Indian Music—Swami Prdnyananda, Ramakrishna Vedanta Math, Calcutta, 1965

(6) Historical Development of Indian Music—Swami Pradnyananda, Calcutta, 1960

(7) The Story of Indian Music-T.O. Goswami, Asia Publishing House, Bombay, 1957

(8) Hindustani Music-Physics and Aesthetics G.H. Ranade, 1938

ಸಂಕೇತ

(9) South Indian Music-P. Sambamurthy (Part IV) 1954
(10) Ragas of Karnatak Music-N.S. Ramachandran, Madras University, 1934
(11) Indian Music-Bhavanrao Pingale, 1898
(12) Karnatak Theatre-H.K. Ranganathan, Karnatak University, Dharwar, 1960
(13) Vijayanagara Sixth Centenary Souvenir, 1936 (Sanskrit Literature during Vijayanagara Times —S. Srikanthasastri)
(14) History of Indian Literature-M. Winternitz, Vol. II, Calcutta University, 1933
(15) History of Classical Sanskrit Literature-M. Krishnamachariar, 1937
(16) Katha-Kalakshepam-R. Srinivasan, Madras, 1964
(17) Kautilya Artha-Sastra,-R.P. Kangle, Bom[illegible] [illegible]niversity, 1965 (Part 3)
(18) Sansk[illegible] [illegible]rama-A.B. Keith, Oxford University Press, 1954 ಸಂ. ಡ್ರಾ.
(19) Laws and Pra[illegible] of Sanskrit Drama—Surendra Nath Sastri, Chaukhamba Sanskrit Series, Varanasi, 1961 (Vol. I)- ಲಾ.ಸಂ. ಡ್ರಾ
(20) Veni-Samhara-A Critical Study-A. B. Gajendragadkar, 1934 ವೇಣೀ (ವಿಮರ್ಶೆ)
(21) Some Concepts of the Alankara Sastra (History of Lakshanas, pp 1-47),-V. Raghavan, Adyar Library, Madras, 1942— ಸಂ. ಕ. ಅ
(22) Kadamba Kula—O. M. Moreas, 1931
(23) Silaharas of Western India- A. S. Altekar (Reprint,-Indian Culture, Vol.II, No. 3)
(24) The Paramaras-Pratipal Bhatia, Munshiram Manoharlal, New Delhi, 1970
(25) A History of South India,—K. A. Nilakantha Sastri, Oxford University Press, 1955
(26) History of the Dvaita School of Vedanta and its Literature,—B. N. K. Sarma, Vols. I and II

ಸಂಕೇತ

(27) Indian Ephemeris—L. D. Swami Kannu Pillai, Madras

ನಿಯತ ಕಾಲಿಕ, ಸ್ಮೃತಿ ಸಂಪುಟ, ಇತ್ಯಾದಿ

(1) Indian Antiquary, Vol II, 1873 — ಇ. ಎ.
(2) Journal of Oriental Research, Madras, Vol. IX, — ಜೆ.ಓ.ಆರ್.
(3) Annals of Oriental Research, Madras, — ಎ. ಓ. ಆರ್
(4) Triveni, Madras, Vol. VII, Nos. 2 and 6
(5) Journal of the Music Academy, Madras, Vols. 21 and 22
(6) Proceedings of the Indian Congress, 1947
(೭) ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ (ಸಂಬಂಧಿತ ಸಂಚಿಕೆಗಳು) — ಕ. ಸಾ. ಪ
(೮) ಪ್ರಬುದ್ಧ ಕರ್ನಾಟಕ, ಬೆಂಗಳೂರು ” — ಪ್ರ. ಕ.
(೯) ಕರ್ನಾಟಕ ಭಾರತಿ, ಧಾರವಾಡ ” — ಕ. ಭಾ.
(೧೦) ಸಮರ್ಪಣೆ (ಧರ್ಮಸ್ಥಳದ ಶ್ರೀ ಮಂಜಯ್ಯ ಹೆಗ್ಗಡೆಯವರ ಷಷ್ಟ್ಯಬ್ದಿ ಪೂರ್ತಿ ಸ್ಮಾರಕ ಸಂಪುಟ, ೧೯೫೦)
(೧೧) ಅಭಿವಂದನೆ (ಎ. ಆರ್. ಕೃ. ಗೌರವ ಸಂಚಿಕೆ)
(೧೨) ಜೈನಸಿದ್ಧಾಂತ ಭಾಸ್ಕರ ಸಂ. ೧೩, ೧೯೪೭ — ಜೈ. ಸಿ. ಭಾ.
(೧೩) ಜಯಕರ್ನಾಟಕ, ಧಾರವಾಡ, ಸ. ೯ — ಜ. ಕ.
(೧೪) ಕನ್ನಡ ನುಡಿ (ಕ. ಸಾ. ಪ. ಪತ್ರಿಕೆ), ಸಂ. ೨೫/೩ — ಕ. ನು.
(೧೫) ಪರಿಮಳ ಮಾಸ ಪತ್ರಿಕೆ, ನಂಜನಗೂಡು (ಅಶ್ವಧಾಟಿ ವೃತ್ತ ರಚಿತ ಸ್ತೋತ್ರಗಳು—ಉಡುಪಿ ವೆಂಕಟಕೃಷ್ಣರಾಯರು) ಏಪ್ರಿಲ್ ೧೯೭೧

ಉಷಾ ಪ್ರೆಸ್, ಮೈಸೂರು–೧

(27)